



...ಕಡಲು
...ತ್ತು
...ಡ

...ದಕರು:
...ಶ್ರೀ. ನಟರಾಜ
...ಮೈಯ
...ಚಂದ್ರಿಕಾ

ಅನಂತಮುಖದ 'ಆಹಿತಾನಲ' ಕೆಲವು ನೆನಪುಗಳು

...ಡ ಸಾಹಿತ್ಯ ರಂಗ, ಅಮೆರಿಕ
...ವ, ಬೆಂಗಳೂರು



ಆಹಿತಾನಲ (ನಾಗ ಐತಾಳ)

ಹುಟ್ಟಿದ್ದು ಉಡುಪಿ ಜಿಲ್ಲೆಯ ಕೋಟ ಗ್ರಾಮದಲ್ಲಿ, ಕೋಟದಲ್ಲಿ ಪ್ರಾಥಮಿಕ ವಿದ್ಯಾಭ್ಯಾಸ. ಬೆಂಗಳೂರು (ಸೇಂಟ್ ಜೋಸೆಫ್ ಕಾಲೇಜು – ಬಿ.ಎಸ್ಸಿ), ಬನಾರಸ್ (**BHU, B.Pharm.**)ಗಳಲ್ಲಿ ಪದವಿ, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈಯನ್ಸ್‌ನಲ್ಲಿ ಎಮ್.ಎಸ್ಸಿ., ಪಿಎಚ್.ಡಿ. ಪದವಿ. ಅಮೆರಿಕದ **USC School of Medicine** ನಲ್ಲಿ ಬಯೋಕೆಮಿಸ್ಟ್ರಿಯಲ್ಲಿ ಹೆಚ್ಚಿನ ತರಬೇತಿ (ಕೆನಡಾ), **1975**ರಿಂದ **2001**ರವರೆಗೆ ಶಿಕಾಗೋ ಯೂನಿವರ್ಸಿಟಿಯಲ್ಲಿ ಸಂಶೋಧನಾ ಪ್ರಾಧ್ಯಾಪಕರಾಗಿ ಕೆಲಸ.

ಪ್ರಕಟಿತ ಕೃತಿಗಳು: ಅಮೆರಿಕನ್ನಡಿಗನೊಬ್ಬನ ದಿನಚರಿಯಿಂದ (ಅಮೆರಿಕದ ಅನುಭವಕಥನ), ಕಾದೇ ಇರುವಳು ರಾಧೆ (ಕಿರುಕಾದಂಬರಿ), ಒಂದಾನೊಂದು ಕಾಲದಲ್ಲಿ (ಕಟ್ಟುಕಥೆಗಳ ಸಂಗ್ರಹ), ಕಲಬೆರಕೆ (ಪ್ರಬಂಧ ಸಂಕಲನ), ದೂರ ತೀರದಿಂದ ಹರಿದು ಬಂದ ಕತೆಗಳು (ಕಥಾಸಂಕಲನ), ಜೀವನ ರಹಸ್ಯ (ವೈಜ್ಞಾನಿಕ ಗ್ರಂಥ), ತಲೆಮಾರ ಸೆಲೆ (ಕಾದಂಬರಿ), ಅಮೆರಿಕದಲ್ಲಿ ಕಂಡ ಕನಸು ಕಟ್ಟಿದ ನೆನಪು (ಅನುಭವಕಥನ), ಸಾಹಿತ್ಯ ಸ್ಪಂದನ (ವಿಮರ್ಶೆ), ಸ್ಮರಣೆ ಸಾಲದೆ (ಕೆಲವು ನೆನಪುಗಳು), ಕಾಲ ಉರುಳಿ; ಉಳಿದುದು ನೆನಪಷ್ಟೆ! (ನಡೆದು ಬಂದ ಹೆಜ್ಜೆಯ ಜಾಡನ್ನು ಅರಸುತ್ತಾ), ನಾನು ಕವನ ಬರೆದೆ (ಕವನ ಸಂಕಲನ).

ಸಂಪಾದಿತ ಕೃತಿಗಳು: ಕಾರಂತ ಚಿಂತನ–ಕಡಲಾಚೆಯ ಕನ್ನಡಿಗರಿಂದ, ಕುವೆಂಪು ಸಾಹಿತ್ಯ ಸಮೀಕ್ಷೆ, ಯದುಗಿರಿಯ ಬೆಳಕು– ಪುತಿನ ಸಾಹಿತ್ಯ ಸಮೀಕ್ಷೆ, ಕನ್ನಡದಮರಚೇತನ – ಮಾಸ್ತಿ ಸಾಹಿತ್ಯ ಕುರಿತು. ಗೆಲುವಿನ ಚಿಲುಮೆ ರಾಜರತ್ನಂ– ಜಿ. ಪಿ. ರಾಜರತ್ನಂ ಕುರಿತು, ಅನಂತಮುಖದ ಮೂರ್ತಿ– ಯು. ಆರ್. ಅನಂತಮೂರ್ತಿ ಜೀವನ ಸಾಹಿತ್ಯ ಕುರಿತು, ಬೇಂದ್ರೆ ಅಂದ್ರೆ... ಬೇಂದ್ರೆ ಸಾಹಿತ್ಯದ ವಿರಾಟ್ ಸ್ವರೂಪ, ಅಮೆರಿಕ ಕನ್ನಡ ಬರಹಗಾರರು (ಮಾಹಿತಿ ಕೋಶ), ನೆನಪಿನ ಓಣಿಯೊಳಗೆ ಮಿನುಗುತಾವ ದೀಪ– ಜಿ. ಎಸ್. ಶಿವರುದ್ರಪ್ಪ ಅವರ ಕುರಿತು ಮುಂತಾದವು.

ನಿಧನ: **22–10–2022.**

ಮೈ. ಶ್ರೀ. ನಟರಾಜ: ವಂಶದ ಹಿರಿಯರ ಊರು ಮೈಸೂರು. ಹುಟ್ಟಿ ಬೆಳೆದದ್ದು ಹಾಸನ. ವಿದ್ಯಾಭ್ಯಾಸ ಬೆಂಗಳೂರು, ಮುಂಬೈ ಮತ್ತು ಅಮೆರಿಕದ ಪಿಟ್ಸ್‌ಬರ್ಗ್, ಪೆನ್ಸಿಲ್ವೇನಿಯಾದಲ್ಲಿ. ವೃತ್ತಿಯಲ್ಲಿ ಸಿವಿಲ್ ಇಂಜಿನಿಯರ್. ಖಾಸಗಿ ಕಂಪನಿಗಳಲ್ಲಿ ಮತ್ತು ಅಮೆರಿಕಾ ಸರ್ಕಾರದ ಅಣುಶಕ್ತಿ ನಿಯಂತ್ರಣ ಆಯೋಗದಲ್ಲಿ ದುಡಿದು, ಈಗ ನಿವೃತ್ತ ಜೀವನ. ಅಮೆರಿಕದ ರಾಜಧಾನಿಯ ಬಳಿ, ಪೊಟೊಮೆಕ್ ಎಂಬ ಮೇರೀಲ್ಯಾಂಡ್ ಪ್ರಾಂತ್ಯದ ಊರಿನಲ್ಲಿ. ಮಡದಿ ಗೀತಾ, ಮೂರು ಮಕ್ಕಳು ಮತ್ತು ನಾಲ್ಕು ಮೊಮ್ಮಕ್ಕಳು. ಪ್ರಕಟಿತ ಪುಸ್ತಕಗಳು ಹಲವು. ನಾಲ್ಕು ಕವನ ಸಂಕಲನಗಳು, ಆರು ನಾಟಕಗಳು, ಒಂದು ಕಥಾ ಸಂಕಲನ, ಎರಡು ಅಂಕಣ ಮಾಲೆಗಳು, ಎರಡು ಪ್ರಬಂಧ ಸಂಕಲನಗಳು, ಒಂದು ಕನ್ನಡ ಕಾದಂಬರಿಯ ಆಂಗ್ಲ ಅನುವಾದ, ವಸುಧೇಂದ್ರರ ಹನ್ನೆರಡು ಸಣ್ಣ ಕಥೆಗಳ ಆಂಗ್ಲ ಅನುವಾದ, ಹಲವಾರು ಗ್ರಂಥಗಳ ಸಂಪಾದನೆ. ಹಲವು ಪ್ರಶಸ್ತಿಗಳು, ಮುಖ್ಯವಾಗಿ– ಗೊರೂರು ಪ್ರಶಸ್ತಿ (2004), ಆಳ್ವಾಸ್‌ನುಡಿಸಿರಿ ಪ್ರಶಸ್ತಿ (2018). ನ್ಯೂಕ್ಲಿಯರ್ ವೇಸ್ಟ್ ಡಿಸ್ಪೋಸಲ್ ಎಂಬ ವಿಷಯದಲ್ಲಿ ತಾಂತ್ರಿಕ ಪರಿಣತರಾಗಿ ಅಂತರರಾಷ್ಟ್ರೀಯ ತಜ್ಞರ ಸಮಿತಿಗೆ ಅಮೆರಿಕದ ಪ್ರತಿನಿಧಿಯಾಗಿ ಯೂರೋಪಿನಲ್ಲಿ ಭಾಗವಹಿಸಿದ ಗೌರವ. ಅಣುಶಕ್ತಿ ಆಯೋಗದ ಅತ್ಯುನ್ನತ ಗೌರವಗಳಲ್ಲೊಂದಾದ 'ಮೆರಿಟೋರಿಯಸ್ ಸರ್ವಿಸ್ ಅವಾರ್ಡ್'ಗೆ ಭಾಜನರಾದ ತೃಪ್ತಿ. 'ಅಮೆರಿಕದ ರಾಜಧಾನಿಯ ಕನ್ನಡ ಸಂಘ, 'ಕಾವೇರಿ'ಯ ಅಧ್ಯಕ್ಷನಾಗಿ ಹಾಗೂ ಅದರ ವಿಶ್ವಸ್ಥ ಮಂಡಲಿಯ ಛೇರ್ಮನ್ ಆಗಿ ಹಲವಾರು ವರ್ಷಗಳ ಸೇವೆ. ಕನ್ನಡ ಸಾಹಿತ್ಯಕ್ಕಾಗೇ ಮುಡಿಪಾಗಿರುವ ಅಮೆರಿಕದ ಏಕೈಕ ಸಂಸ್ಥೆಯಾದ ಕನ್ನಡ ಸಾಹಿತ್ಯ ರಂಗದ ಸಂಸ್ಥಾಪಕ ಸದಸ್ಯ, ಉಪಾಧ್ಯಕ್ಷ, ಅಧ್ಯಕ್ಷ ಮತ್ತು ಆಡಳಿತ ಮಂಡಳಿಯ ಅಧ್ಯಕ್ಷನಾಗಿ ವಿವಿಧ ಸ್ಥಾನಗಳಲ್ಲಿ ಕಳೆದ 20 ವರ್ಷಗಳಿಂದ ನಿರಂತರ ಸೇವೆ.

ನಳಿನಿ ಮೈಯ: ನಳಿನಿ ಮೈಯ ಅವರು ಡೇರಿಯನ್–ಇಲಿನಾಯ್‌ನಲ್ಲಿ ಪತಿ ಸುಬ್ರಾಯ ಮೈಯ ಅವರೊಡನೆ ನೆಲೆಸಿದ್ದಾರೆ. ವೃತ್ತಿಯಲ್ಲಿ ಆಕ್ಯುಪೇಶನಲ್ ಥೆರಪಿಸ್ಟ್ ಆಗಿದ್ದವರು. ಈಗ ನಿವೃತ್ತರಾಗಿದ್ದಾರೆ. ಮರೀಚಿಕೆ ಮತ್ತು ಇತರ ಕಥೆಗಳು' ಎಂಬ ಕಥಾ ಸಂಕಲನವನ್ನು ಪ್ರಕಟಿಸಿದ್ದಾರೆ. ಶಿಕಾಗೊ ನಗರದ ವಿದ್ಯಾರಣ್ಯ ಕನ್ನಡ ಕೂಟದ ಸಕ್ರಿಯ ಸದಸ್ಯೆ ಕೂಟದ 'ಸಂಗಮ' ಪತ್ರಿಕೆಯ ಸಂಪಾದಕಿಯಾಗಿದ್ದರು. ಕನ್ನಡ ಸಾಹಿತ್ಯ ರಂಗದ ಅನೇಕ ಪುಸ್ತಕಗಳಿಗೆ ಸಂಪಾದಕ ಸಲಹಾ ಮಂಡಳಿಯಲ್ಲಿದ್ದು ಸೇವೆ ಮಾಡಿದ್ದಾರೆ. 'ಬೇಂದ್ರೆ ಅಂದ್ರೆ' ಪುಸ್ತಕಕ್ಕೆ ನಾಗ ಐತಾಳರ ಜೊತೆ ಸಹಸಂಪಾದಕಿಯಾಗಿದ್ದರು. ಕನ್ನಡ ಸಾಹಿತ್ಯ ರಂಗದ ಕಾರ್ಯಕಾರಿ ಸಮಿತಿಯ ಉಪಾಧ್ಯಕ್ಷರಾಗಿದ್ದಾರೆ. ಕನ್ನಡ ಸಾಹಿತ್ಯ ರಂಗದ ಎಂಟನೆಯ ಪ್ರಕಟಣೆ 'ಅವರವರ ಭಕುತಿಗೆ' ಗ್ರಂಥದ ಮುಖ್ಯ ಸಂಪಾದಕಿಯಾಗಿದ್ದಾರೆ.

ಪಿ. ಚಂದ್ರಿಕಾ: ಮೂಲತಃ ಚಿತ್ರದುರ್ಗ ಜಿಲ್ಲೆ ಚಳ್ಳಕೆರೆಯವರು (1968). ಪಾಳ್ಯ, ಚಳ್ಳಕೆರೆ, ಕುವೆಂಪು ವಿಶ್ವವಿದ್ಯಾಲಯಲ್ಲಿ ವಿದ್ಯಾಭ್ಯಾಸ. 'ಕನ್ನಡ ಸಾಹಿತ್ಯ ವಿಮರ್ಶೆಯ ಐತಿಹಾಸಿಕ ಅಧ್ಯಯನ' ಬೆಂಗಳೂರು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿದ ಪಿಎಚ್.ಡಿ. ಪ್ರಬಂಧ. ಹಲವಾರು ಕಿರುತೆರೆ ಧಾರಾವಾಹಿಗಳು ಮತ್ತು ಸಿನಿಮಾಗಳಿಗೆ ಕಥಾ ವಿಸ್ತರಣೆ, ಸಂಭಾಷಣೆ. ಕಿರುಚಿತ್ರಗಳ ನಿರ್ದೇಶನ, ನಿರ್ಮಾಣ, ನಿರ್ವಹಣೆ. ರಾಜ್ಯಮಟ್ಟದ ವಿಚಾರ ಸಂಕಿರಣ, ವಿಚಾರ ಗೋಷ್ಠಿಗಳಲ್ಲಿ ಪ್ರಬಂಧ ಮಂಡನೆ, ಕವಿತಾ ವಾಚನ. ಅಭಿನವ ಚಾತುರ್ಮಾಸಿಕ ಪತ್ರಿಕೆಯ ಸಹ ಸಂಪಾದಕಿಯಾಗಿ, ಕೇಂದ್ರ ಸಾಹಿತ್ಯ ಅಕಾಡೆಮಿಯ ಕನ್ನಡ ಸಲಹಾ ಸಮಿತಿಯ ಸದಸ್ಯೆಯಾಗಿ ಕೆಲಸ ನಿರ್ವಹಣೆ. 'ಪ್ರಕಟಿತ ಪುಸ್ತಕಗಳು: 'ನಿಮ್ಮ ಚರಿತ್ರೆಯಲ್ಲಿ ನಮಗೆ ಜಾಗವಿಲ್ಲ' (ಕವಿತೆಗಳು–ಕನ್ನಡ ಸಂಘ ಕ್ರೈಸ್ಟ್ ಕಾಲೇಜು), 'ಸೂರ್ಯಗಂಧೀ ಧರಣಿ' (ಕವಿತೆಗಳು – ಅಕ್ಷರ ಪ್ರಕಾಶನ), 'ಜುಗಲ್ಬಂಧಿ ಕವಿತೆಗಳು' (ಕವಿತೆಗಳು–ಜಾಗೃತಿ ಪ್ರಿಂಟರ್ಸ್), 'ನನ್ನೊಳಗಿನ ನಿನ್ನ ಕಥೆಗಳು' (ಅತಿಸಣ್ಣ ಕತೆಗಳು – ನಾಕುತಂತಿ ಪ್ರಕಾಶನ), 'ಭಿನ್ನ ವಿಭಿನ್ನ' (ಲೇಖನಗಳ ಸಂಕಲನ –ಕನ್ನಡ ಸಾಹಿತ್ಯ ಪರಿಷತ್ತು), 'ತಾಮ್ರವರ್ಣದ ತಾಯಿ' (ಕವಿತೆಗಳು– ಅಕ್ಷರ ಪ್ರಕಾಶನ), ಚಿಟ್ಟೆ (ಕಾದಂಬರಿ– ನಾಕುತಂತಿ ಪ್ರಕಾಶನ), 'ಒಬ್ಬಳೇ ಆಡುವ ಆಟ' (ಕವಿತೆಗಳು–ಅಕ್ಷರ ಪ್ರಕಾಶನ), 'ಎಲೆಯೆಂಬುದು ಗಾಳಿಯ ಅಧೀನ' (ಕವಿತೆಗಳು– ಅಕ್ಷರ ಪ್ರಕಾಶನ), 'ಯಾರ ಜಪ್ತಿಗೂ ಸಿಗದ ನವಿಲುಗಳು' (ದೇವನೂರ ಮಹಾದೇವ ಸಾಹಿತ್ಯ ಕುರಿತು– ಅಭಿನವ), 'ಆಕಾಶದಗಲ ನಗುವಿನ ಅವಧೂತ' (ಬೆಳಗೆರೆ ಕೃಷ್ಣಶಾಸ್ತ್ರಿ ಅವರನ್ನು ಕುರಿತು– ಅಭಿನವ), 'ಗುಲಾಬಿ ಟಾಕೀಸ್' (ವೈದೇಹಿಯವರ ಕಥೆಯಾಧಾರಿತ ಸಿನಿಮಾ ಕುರಿತು – ಅಭಿನವ), 'ದೇಹದ ನಂಟಿನ ತುದಿಯ ಪ್ರೇಮದ ಹೂ' (ಶ್ರೀಮತಿ ಪ್ರೇಮಲೀಲಾ ಎಸ್. ಜಿ. ಸಿದ್ಧರಾಮಯ್ಯ ಅವರ ಕುರಿತು, 'ಸೊಪ್ಪೇ ಸಂಪತ್ತು' (ಸೊಪ್ಪುಗಳ ಕುರಿತ ಬೇಸಾಯ, ಅಡುಗೆ ಇತ್ಯಾದಿ), 'ಮನೆಯಂಗಳ' (ರಜನಿ ನರಹಳ್ಳಿ 60), ಮಹಿಳಾ ಕಾವ್ಯ (ಕನ್ನಡ ಸಾಹಿತ್ಯ ಪರಿಷತ್ತಿನ ಪ್ರಕಟಣೆ) ಸಂಪಾದಿತ ಕೃತಿಗಳು. 'ಮೋದಾಳಿ' ಮೊದಲ ನಾಟಕ. 'ಅಮ್ಮ ಪ್ರಶಸ್ತಿ (ಸೂರ್ಯಗಂಧೀ ಧರಣಿ), ಮಾತೋಶ್ರೀ ರತ್ನಮ್ಮ ಹೆಗ್ಗಡೆ ಪ್ರಶಸ್ತಿ (ನನ್ನೊಳಗಿನ ನಿನ್ನ ಕಥೆಗಳು, ತಾಮ್ರವರ್ಣದ ತಾಯಿ), ಜಿ. ಎಸ್. ಎಸ್. ಕಾವ್ಯ ಪ್ರಶಸ್ತಿ (ತಾಮ್ರವರ್ಣದ ತಾಯಿ), ನರಹಳ್ಳಿ ಪ್ರಶಸ್ತಿ (ಒಟ್ಟು ಸಾಹಿತ್ಯ ಸಾಧನೆಗೆ), ಮೈಕೋ ಕನ್ನಡ ಲಲಿತಕಲಾ ಬಳಗದ ಕುವೆಂಪು ಪ್ರಶಸ್ತಿ, ಕನ್ನಡ ಸಾಹಿತ್ಯ ಪರಿಷತ್ತಿನ ಮಲ್ಲಿಕಾ ದತ್ತಿ ಪ್ರಶಸ್ತಿ, ಮೂಡಬಿದಿರೆಯ ಶಿವರಾಮ ಕಾರಂತ ಪ್ರಶಸ್ತಿ. ಕೆ. ಪಿ. ಪೂರ್ಣಚಂದ್ರ ತೇಜಸ್ವಿ ನೈಸರ್ಗಿಕ ಕೃಷಿ ಮಹಿಳಾ ಪ್ರಶಸ್ತಿ, ತುಮಕೂರು ಜಿಲ್ಲಾ ಅತ್ಯುತ್ತಮ ರೈತ ಮಹಿಳಾ ಪ್ರಶಸ್ತಿ, ಕುಣಿಗಲ್ ತಾಲ್ಲೂಕುಮಟ್ಟದ ಶ್ರೇಷ್ಠ ರೈತ ಮಹಿಳಾ ಪ್ರಶಸ್ತಿ, ಮಂಡ್ಯ ಆರ್ಗ್ಯಾನಿಕ್ ಗೌರವ ಇತ್ಯಾದಿ ಸಂದಿವೆ.

ಕಡಲು ಮತ್ತು ದಡ

ಅನಂತಮುಖದ 'ಆಹಿತಾನಲ' ಕೆಲವು ನೆನಪುಗಳು

ಸಂಪಾದಕರು:

ಮೈ. ಶ್ರೀ. ನಟರಾಜ

ನಳಿನಿ ಮೈಯ

ಪಿ. ಚಂದ್ರಿಕಾ

ಕನ್ನಡ ಸಾಹಿತ್ಯ ರಂಗ, ಅಮೆರಿಕ

ಅಭಿನವ

17/18-2, ಮೊದಲನೆಯ ಮುಖ್ಯರಸ್ತೆ, ಮಾರೇನಹಳ್ಳಿ ವಿಜಯನಗರ, ಬೆಂಗಳೂರು.

Kadalu Mattu Dada– (Felicitation Volume on Naga Aithal (Ahitanala). Edited by **Nataraj M. S.** , **Nalini Maiya** and **P. Chandrika** Published by **Kannada Sahitha Ranga and Abhinava 17/18-2, 1st Main Marenahalli Vijayanagara, Bangalore 560040.**


First Impression : 2024 Pages: 304 Price : 300 USD 10

Paper Used: 70 GSM N.S. Maplitho Size: Demy 1/8

ಮೊದಲನೆಯ ಮುದ್ರಣ: ೨೦೨೪

ಬಳಸಿರುವ ಕಾಗದದ ಗುಣಮಟ್ಟ: ೭೦ ಜಿ.ಎಸ್.ಎಂ.
ಪುಸ್ತಕದ ಆಕಾರ: ೧/೮ ಅಷ್ಟದಳ (ಡೆಮಿ)

ಹೊದಿಕೆ ವಿನ್ಯಾಸ: ಸುಧಾಕರ್, ಬೆಂಗಳೂರು
ಪುಸ್ತಕ ವಿನ್ಯಾಸ: ಅಭಿನವ, ಬೆಂಗಳೂರು
ಮುದ್ರಣ: ಧರಣಿ ಪ್ರಿಂಟರ್ಸ್, ಬೆಂಗಳೂರು – ೫೬೦೦೧೦



ಅರ್ಪಣೆ

ನೆಂಟರಿಷ್ಟರು ಕರೆಯುವುದು 'ಪುಟ್ಟಮ್ಮನ ಗಂಡ' ಆದರೆ ಎತ್ತರದಲ್ಲಿ ಆಜಾನುಬಾಹು!
ಜೀವನ ರಹಸ್ಯವನ್ನೇ ಭೇದಿಸ ಹೊರಟ ವಿಜ್ಞಾನಿ, ಸಾಹಿತ್ಯವನ್ನು ಅರಗಿಸಿಕೊಂಡ ಸುಜ್ಞಾನಿ!
ಸಂಗೀತ ನಾಟಕಗಳ ಪ್ರೇಮಿ, ಅತಿಥಿ ಸತ್ಕಾರದಲ್ಲಿ ಎತ್ತಿದ ಕೈ, ಎಲ್ಲರಿಗೂ ಬೇಕಾದ ಸ್ನೇಹಜೀವಿ!
ಭಾರತದಲ್ಲೂ ಪಡುಗಡಲ ತೀರ, ಅಮೆರಿಕದಲ್ಲೂ ಪಡುವಣ ತೀರ, ಅಪ್ಪಟ ಕನ್ನಡ ಸೇವಕ!
ಎಲ್ಲಕ್ಕಿಂತ ನಮಗೆ ಪ್ರಿಯರಾದ 'ಆಹಿತಾನಲ' ಕಾವ್ಯನಾಮದ ನಾಗ ಐತಾಳರೇ-
ಇದೋ ಸ್ವೀಕರಿಸಿ ಕನ್ನಡ ಸಾಹಿತ್ಯ ರಂಗದ ಶ್ರದ್ಧಾಂಜಲಿ ಕಾಣಿಕೆ
'ಕಡಲು ಮತ್ತು ದಡ'

ಕಣಕಣದಲಿ ಮಿಡಿಯುತ್ತಿದೆ ಜನಗಣಮನ

– ಮೈ. ಶ್ರೀ. ನಟರಾಜ, ನಳಿನಿ ಮೈಯ, ಪಿ.ಚಂದ್ರಿಕಾ

'ತನು ಕನ್ನಡ, ಮನ ಕನ್ನಡ, ನುಡಿ ಕನ್ನಡವೆಮ್ಮವು' ಈ ಮಾತನ್ನು ಜೀವನದಲ್ಲಿ ಅನುಷ್ಠಾನಕ್ಕೆ ತಂದ ಅಪರೂಪದ ವ್ಯಕ್ತಿ ನಾಗ ಐತಾಳರು. ಕೇವಲ ಬಾಯಿಯಲ್ಲಿ ಕೂಗುವ ಘೋಷಣೆಯಾಗದೆ ಈ ಮಾತು ಜೀವನದಲ್ಲಿ ಹೆಜ್ಜೆ ಹೆಜ್ಜೆಗೂ ದಾರಿ ತೋರುವ ಮಾರ್ಗದರ್ಶಿಯಾಗಿತ್ತು ಅವರಿಗೆ. 'ಕಣ ಕಣದಲಿ ಮಿಡಿಯುತ್ತಿದೆ ಜನಗಣಮನ' ಎಂಬ ಸಾಲೊಂದು ಮನದಲ್ಲಿ ಹಾದು ಹೋಗುತ್ತಿದೆ ಅಂತ ನಮ್ಮ ಜೊತೆ ಹಂಚಿಕೊಂಡಿದ್ದರು ಕವಿ ಹೃದಯಿ ಐತಾಳರು. ಆ ಸಾಲು ಮುಂದೆ ಯಾವುದೇ ಕವನವಾಗಿ ಮೈದಾಳಲಿಲ್ಲವಾದರೂ ಬಗೆಬಗೆಯ ರೂಪದಲ್ಲಿ ಅಭಿವ್ಯಕ್ತಿ ಪಡೆಯಿತು ಅವರ ಬದುಕಿನಲ್ಲಿ. ಭಾರತದಿಂದ ಬಂದ ಸಾಹಿತಿ ಕಲಾವಿದರಿಗೆ ಎಲ್ಲ ಬಗೆಯ ನೆರವು, ಸೌಲಭ್ಯಗಳನ್ನು ಶಕ್ತಿಮೀರಿ ನೀಡುವುದರಿಂದ ಹಿಡಿದು, 'ಕನ್ನಡ ಸಾಹಿತ್ಯ ರಂಗ' (ಕಸಾರಂ) ಸಂಸ್ಥೆಯ ಸಾರಥ್ಯ ಹಿಡಿಯುವವರೆಗೆ 'ಕಣಕಣದಲಿ ಮಿಡಿಯುತ್ತಿದೆ ಜನಗಣಮನ' ಎಂಬ ಆ ಸಾಲು ತನ್ನ ಛಾಯೆಯನ್ನು ಹಾಸಿತ್ತು!

ಸ್ಥಾಪಕ ಸದಸ್ಯರಲ್ಲಿ ಒಬ್ಬರಾಗಿ, ಕಸಾರಂ ಪ್ರಕಟಿಸಿದ ಮೊದಲ ಗ್ರಂಥ 'ಕುವೆಂಪು ಸಾಹಿತ್ಯ ಸಮೀಕ್ಷೆ'ಯ ಸಂಪಾದಕರಾಗಿ, ಒಮ್ಮೆ ಕಾರ್ಯಕಾರಿ ಸಮಿತಿಯ ಉಪಾಧ್ಯಕ್ಷರಾಗಿ, ಮತ್ತೊಮ್ಮೆ ಆಡಳಿತ ಮಂಡಲಿಯ ಮುಖ್ಯಸ್ಥರಾಗಿ, ಕಡೆಯವರೆಗೂ ಪ್ರತಿಯೊಂದು

ಕಾರ್ಯಕ್ರಮದಲ್ಲೂ ಬಿಡದೆ ಭಾಗವಹಿಸಿದ ಕಟ್ಟಾ ಅಭಿಮಾನಿಯಾಗಿ ನಾಗ ಐತಾಳರ ನಂಟು ಕಸಾರಂ ಸದಸ್ಯರಿಗೆಲ್ಲ ಬಲವಾಗಿ ಅಂಟಿಕೊಂಡು ಬಂದಿದೆ. ಅವರ ಬಗ್ಗೆ ಈ ಪುಸ್ತಕವನ್ನು ಕಸಾರಂ ಅಭಿನವದ ಜತೆಗೂಡಿ ಪ್ರಕಟಿಸುತ್ತಿರುವುದು ಅತ್ಯಂತ ವಿಹಿತವಾದ ಕಾರ್ಯವೇ ಆಗಿದೆ. ಐತಾಳರಿಗೆ ತಮ್ಮ ಬಗ್ಗೆ ಹೊಗಳಿಕೊಳ್ಳುವುದು ಸ್ವಲ್ಪವೂ ಇಷ್ಟವಿರಲಿಲ್ಲ. ಇನ್ನೊಬ್ಬರು ಅವರನ್ನು ಹೊಗಳಿ ಎರಡು ಮಾತನಾಡಿದರೂ ಏನೋ ಮುಜುಗರವಾಗುತ್ತಿತ್ತು ಅವರಿಗೆ. ಬಲಗೈ ಕೊಟ್ಟಿದ್ದು ಎಡಗೈಗೆ ತಿಳಿಯಬಾರದು ಎಂದಂತೆ ತಾವು ಮಾಡಿದ ಎಲ್ಲ ಸತ್ಕಾರ್ಯಗಳನ್ನೂ ಇತರರ ಗಮನಕ್ಕೆ ಬಾರದಂತೆ, ಹೆಚ್ಚು ಪ್ರಚಾರ ಸಿಕ್ಕದಂತೆ ನೋಡಿಕೊಳ್ಳುತ್ತಿದ್ದರು. ಅವರಿಗೆ ಈ ಬಗೆಯ ಪುಸ್ತಕ ಮಾಡುತ್ತಿರುವುದು ಹಿಡಿಸೀತೆ? ಎಂಬ ಒಂದು ಸಂಶಯವೂ ಮನಸ್ಸಿನಲ್ಲಿ ಬಂದು ಹೋಯಿತು. 'ದಯವಿಟ್ಟು ನಮ್ಮ ಕೃತಜ್ಞತೆಯ ಸಂಕೇತವಾದ ಈ ಕಿರು ಸನ್ಮಾನವನ್ನು ಒಪ್ಪಿಕೊಳ್ಳಿ' ಎಂದಷ್ಟೇ ನಾವು ಅವರ ಆತ್ಮಚೈತನ್ಯದಲ್ಲಿ ಕೇಳಿಕೊಳ್ಳುತ್ತಿರುವುದು.

ಈ ನಮ್ಮ ಶ್ರದ್ಧಾಂಜಲಿ ಗ್ರಂಥಕ್ಕೆ ಲೇಖನಗಳನ್ನು ನೀಡಿದವರು ಅನೇಕರು. ಸಾಹಿತ್ಯವಲಯದಲ್ಲಿ ಅವರ ಸಹವರ್ತಿಗಳಾಗಿದ್ದ ಜನರಿಂದ ಹಿಡಿದು, ಶಿಕಾಗೊ ವಿದ್ಯಾರಣ್ಯ ಕನ್ನಡ ಕೂಟದಲ್ಲಿ ಒಡನಾಡಿದವರವರೆಗೆ, ಬಂಧುವರ್ಗದಿಂದ ಹಿಡಿದು ವೃತ್ತಿಯಲ್ಲಿ ಜೊತೆ ಜೊತೆಗೆ ಕೆಲಸ ಮಾಡಿದ ವಿಜ್ಞಾನಿಗಳವರೆಗೆ ಲೇಖಕ/ಲೇಖಕಿಯರ ಹರಹು ಹಾಸಿದೆ. ಅವರೆಲ್ಲರಿಗೂ ನಮ್ಮ ಹೃತ್ಪೂರ್ವಕ ನಮನಗಳು. ನಾಗ ಐತಾಳರ ಪತ್ನಿ ಲಕ್ಷ್ಮಿ ಅವರ ಸಂದರ್ಶನದಲ್ಲಿ ಐತಾಳರ ವ್ಯಕ್ತಿತ್ವದ ಬಗ್ಗೆ ಅನೇಕ ಆಪ್ತವಾದ, ಆತ್ಮೀಯವಾದ ಒಳನೋಟ ಸಿಕ್ಕುತ್ತದೆ. ಇಂಥ ಒಂದು ಸಂದರ್ಶನಕ್ಕೆ ಅವಕಾಶ ಕಲ್ಪಿಸಿಕೊಟ್ಟ ಲಕ್ಷ್ಮಿ ಅವರಿಗೂ ನಮ್ಮ ಧನ್ಯವಾದಗಳು.

ಹಲವಾರು ಮಂದಿ ಬರೆದ ಇಂಥ ಸ್ಮರಣ ಗ್ರಂಥದಲ್ಲಿ ಪುನರುಕ್ತಿ ಕಂಡು ಬರುವುದು ಸಾಮಾನ್ಯವೇ. ಆದಷ್ಟು ಮುತುವರ್ಜಿವಹಿಸಿ ಬೇರೆ ಬೇರೆ ವಸ್ತು, ಆಯಾಮಗಳ ಬಗ್ಗೆ ಬರೆಯುವಂತೆ ಕೇಳಿಕೊಂಡರೂ ಐತಾಳರ ಮೂಲಭೂತ ಗುಣಗಳಾದ ಸ್ನೇಹಪರತೆ, ಹಾಸ್ಯಪ್ರಜ್ಞೆ, ಪರೋಪಕಾರಿ ಮನೋಭಾವ ಮುಂತಾದವು ಮತ್ತೆ ಮತ್ತೆ ಕಾಣಿಸಿಕೊಂಡಿವೆ. ನಾವು ಕೋರಿದ್ದರಿಂದ ಬರೆದುಕೊಟ್ಟ ಪ್ರೀತಿಯ ಬರಹಗಳು ಇವು. ಆದ್ದರಿಂದ ನಾವು ಹೆಚ್ಚಾಗಿ ಯಾವುದನ್ನೂ ತಿದ್ದಲು ಹೋಗಿಲ್ಲ. ಸುಮಾರು ಅರ್ಧ ಶತಮಾನಕ್ಕೂ ಮೀರಿದ ವ್ಯಾಪ್ತಿಯ ನೆನಪುಗಳು ಇಲ್ಲಿ ಅಕ್ಷರ ರೂಪದಲ್ಲಿ ಮೈದಾಳಿವೆ. ಕಾಲ ಸಂದಂತೆ ಕೆಲವು ವಿವರಗಳು ಮನಸ್ಸಿನಲ್ಲಿ ಮಾಸಿರಬಹುದು. ಆದರೆ ಒಬ್ಬ ಹೃದಯವಂತ ವ್ಯಕ್ತಿ ಮನದಾಳದಲ್ಲಿ ಬಿಟ್ಟುಹೋದ ಆ ಬೆಚ್ಚನೆಯ ಆರ್ದ್ರ ಭಾವ ಮಾತ್ರ ಮಾಸದು.

ಅಮೆರಿಕಾದಲ್ಲಿ ಭಾರತೀಯತೆಯನ್ನು ಸ್ಥಾಪಿಸುವುದರಲ್ಲಿ ಐವತ್ತು ವರ್ಷಗಳ ಹಿಂದೆ ವಲಸೆ ಬಂದ ಭಾರತೀಯರು ವಹಿಸಿದ ಪಾತ್ರ ದೊಡ್ಡದು. ಅವರ ಆತಂಕ, ನೆನವರಿಕೆ, ಸಂಭ್ರಮ, ಸಂಘರ್ಷ, ಅನಾಥಭಾವ ಮುಂತಾದವುಗಳ ಒಂದು ಕಿರು ನೋಟ ಈ ಲೇಖನಗಳಲ್ಲಿ ಕಾಣಿಸಿಗುತ್ತದೆ. ಕಳೆದ ಶತಮಾನದ ಅರುವತ್ತರ ದಶಕದಲ್ಲಿ ವಲಸೆ ಬಂದ ಅಮೆರಿಕನ್ನಡಿಗರ ಚರಿತ್ರೆಯ ಒಂದು ಪ್ರಾತಿನಿಧಿಕ ಚಿತ್ರವನ್ನು ಐತಾಳರಂಥ ಒಬ್ಬ ಸಾಹಸಿಯ ಜೀವನವನ್ನು ಸಂದರ್ಶಿಸುವುದರ ಮೂಲಕ ನಾವಿಲ್ಲಿ ಕಂಡುಕೊಂಡಿದ್ದೇವೆ. ಭಾರತೀಯ ವಲಸೆಗಾರರ ಚರಿತ್ರೆಯನ್ನು ದಾಖಲಿಸುವುದೂ ಒಂದು ಮುಖ್ಯವಾದ ಕೆಲಸವೇ. ಇದು ಕೇವಲ ಒಬ್ಬ ವ್ಯಕ್ತಿಯ ಬಾಳ್ವೆಯ ಒಳನೋಟಗಳು ಮಾತ್ರವಲ್ಲ. ವಿಜ್ಞಾನಿಯೊಬ್ಬ ತನ್ನ ಕ್ಷೇತ್ರಕ್ಕೆ ಕೊಟ್ಟ ಕೊಡುಗೆಯಷ್ಟೇ ಕನ್ನಡ ಸಾಹಿತ್ಯಕ್ಕೂ ಕೊಟ್ಟಿರುವ ಸುಜ್ಞಾನಿಯ ಜೀವನಗಾಥೆ ಹಾಗೂ ಅವರ ಆಪ್ತರು ಅವರಿಗೆ ಕೊಟ್ಟ ಶ್ರದ್ಧಾಂಜಲಿ. ಇಂಥಾ ಗ್ರಂಥಕ್ಕೆ ಸಂಪಾದಕರಾಗುವ ಸದವಕಾಶವನ್ನು ಕಲ್ಪಿಸಿದ ಕನ್ನಡ ಸಾಹಿತ್ಯ ರಂಗಕ್ಕೆ ನಾವು ಋಣಿಗಳು. ಈ ಗ್ರಂಥ ಪ್ರಕಟಣೆಗೊಳ್ಳಲು ಸಹಕರಿಸಿದ ಐತಾಳ ಕುಟುಂಬಕ್ಕೂ, ಮುದ್ದಾದ ರಕ್ಷಾಪುಟವನ್ನು ರಚಿಸಿಕೊಟ್ಟ ಶ್ರೀ ಸುಧಾಕರ್ ಅವರಿಗೂ, ಆರಂಭದಲ್ಲಿ ಸಹಾಯಮಾಡಿದ ಶ್ರೀಮತಿ ಸಂಧ್ಯಾ ಹೆಗಡೆ ದೊಡ್ಡಹೊಂಡ ಅವರಿಗೂ, ಕರಡು ತಿದ್ದಿದ ಶ್ರೀ ಇಂದ್ರಕುಮಾರ್, ಅಂದವಾಗಿ ಮುದ್ರಿಸಿಕೊಟ್ಟ ಧರಣಿ ಪ್ರಿಂಟರ್ಸ್‌ನ ಸಿಬ್ಬಂದಿ ವರ್ಗದವರಿಗೂ, ಎಲ್ಲಕ್ಕಿಂತ ಮುಖ್ಯವಾಗಿ, ಐತಾಳರ ಪ್ರೀತಿ ವಾತ್ಸಲ್ಯದಲ್ಲಿ ಮೊದಲಿನಿಂದಲೂ ಮಿಂದಿರುವ ಅಭಿನವದ ಶ್ರೀ ನ. ರವಿಕುಮಾರ ಅವರಿಗೂ ನಮ್ಮ ಸಪ್ರೇಮ ವಂದನೆಗಳು ಸಲ್ಲುತ್ತವೆ.

ನುಡಿವ ಬೆಡಗು

– ನ. ರವಿಕುಮಾರ

ನಾಗ ಐತಾಳರನ್ನು ಪರಿಚಯಿಸಿದವರು ಪ್ರಭುಶಂಕರ. ಅದು ಬಹುಶಃ 2005ರ ಸಮಯವಿರಬೇಕು. ಆಗಷ್ಟೆ ಅಮೆರಿಕದಿಂದ ಹಿಂದಿರುಗಿದ್ದ ಪ್ರಭುಶಂಕರರು ಅಭಿನವದ ಮೇಲಿನ ವಿಶ್ವಾಸದಿಂದ ನಾಗ ಐತಾಳ ಮತ್ತು ಕೃಷ್ಣಶಾಸ್ತ್ರೀಯವರು ವೈ. ಅರ್. ಮೋಹನ್ ಅವರಿಗೆ ಅರ್ಥಿಕ ಸಹಾಯವಾಗಲೆಂದು ಬರೆದ 'ಅಮೆರಿಕಾಯಣ' ಪುಸ್ತಕವನ್ನು ಪ್ರಕಟಿಸಲು ನನ್ನ ಹೆಸರನ್ನು ಸೂಚಿಸಿದ್ದರು.

ಪುಸ್ತಕ ಬಿಡುಗಡೆಗೆ ಸ್ನೇಹಿತರ ಮೂಲಕ ಅಮೆರಿಕದಿಂದಲೇ ಎಲ್ಲ ರೀತಿಯ ಸಿದ್ಧತೆಗಳನ್ನೂ ಮಾಡಿದ್ದರು. ದಿನಾಂಕವೂ ನಿಗದಿಯಾಗಿತ್ತು. ಹಿಂದಿನ ದಿನ ಪುಸ್ತಕ ಇನ್ನೂ ಸಿದ್ಧವಾಗಿರದ ಕಾರಣದಿಂದ ಆತಂಕಕ್ಕೆ ಒಳಗಾಗಿದ್ದರು. ಅವರು ಸಹಜವಾಗಿ ಉಳಿದುಕೊಳ್ಳುತ್ತಿದ್ದ ಅವರ ತಂಗಿ ಯಶೋದ ಅವರ ಮನೆಗೆ ನಾನು ಹೋದಾಗ ರಾತ್ರಿ 10 ಗಂಟೆ. ಆ ಹೊತ್ತಿಗಾಗಲೇ ಅವರು ಪುಸ್ತಕಕ್ಕಾಗಿ ಕಾದು, ಪ್ರಯಾಣ ಸುಸ್ತಾಗಿ ಮಲಗಿಬಿಟ್ಟಿದ್ದರು. ಮಾರನೆಯ ದಿನ ಎದ್ದವರೇ ಹಿಂದಿನ ದಿನದ ಆತಂಕದ ಒಂದೇ ಒಂದು ಎಳೆಯಿಲ್ಲದೆ ತುಂಬ ಖುಷಿಯಿಂದ ಪುಸ್ತಕದ ಮುದ್ರಣ ವಿನ್ಯಾಸಗಳ ಬಗೆಗೆ ಸ್ವಲ್ಪ ಹೆಚ್ಚೇ ಹೊಗಳಿದರು.

ನಯನ ಸಭಾಂಗಣದಲ್ಲಿ ನಿಸಾರ್ ಅಹಮದ್, ಬಿ. ಸಿ. ರಾಮಚಂದ್ರಶರ್ಮ, ಯು. ಆರ್. ಅನಂತಮೂರ್ತಿ ಮುಂತಾದವರು ಭಾಗವಹಿಸಿದ್ದರು. ಅದರಲ್ಲಿ ಕೆಲವರು

‘ಅಮೆರಿಕನ್ನಡಿಗರು ಪಾಪಪ್ರಜ್ಞೆಯ ಕಾರಣಕ್ಕೆ ಕನ್ನಡದ/ಭಾರತೀಯ ಸಾಹಿತ್ಯ– ಸಂಸ್ಕೃತಿಗಳ ಬಗೆಗೆ ವ್ಯಾಮೋಹದ ರೂಪದಲ್ಲಿ ಬರೆಯುತ್ತಿದ್ದಾರೆ ಎಂಬರ್ಥದ ಮಾತುಗಳನ್ನು ಹೇಳಿದ್ದರು. ಐತಾಳರಿಗೆ ಬೇಸರವಾಗಲಿಲ್ಲ, ‘ಅವರ ಅಭಿಪ್ರಾಯ ಅವರದು ನಮ್ಮ ನಮ್ಮ ಕೆಲಸ ನಮ್ಮದು. ಅವರ ಅಭಿಪ್ರಾಯವನ್ನು ಬದಲಿಸಿಕೊಳ್ಳಿ ಎಂದು ಹೇಗೆ ಹೇಳಲಿ? ಈ ಪುಸ್ತಕದ ಗೌರವಧನ ಮತ್ತು ಬೆಂಬಲಧನವು ಪಾರ್ಕಿನ್‌ಸನ್ ಖಾಯಿಲೆಯಿಂದ ಬಳಲುತ್ತಿರುವ ಲೇಖಕ ವೈ. ಆರ್. ಮೋಹನ್ ಅವರಿಗೆ ಸಹಾಯವಾಗಲೆಂದು ಅಮೆರಿಕದಲ್ಲಿ ಜೋಳಿಗೆ ಹಾಕಿ ಪ್ರಕಟಿಸಿದ್ದೇನೆ’ ಎಂದಿದ್ದರು. ಅಲ್ಲಿಂದ ಶುರುವಾದ ನಮ್ಮ ಒಡನಾಟ ಅವರ ಕೊನೆಯ ದಿನಗಳವರೆಗೂ ಮುಂದುವರೆದಿತ್ತು.

ನಾಗ ಐತಾಳರ ಬಗೆಗೆ ಯೋಚಿಸಿದಾಗಲೆಲ್ಲ ಮೂರು ಸಂಗತಿಗಳು ನನ್ನ ಕಣ್ಣಮುಂದೆ ಬರುತ್ತದೆ. ಮೊದಲನೆಯದು ಅವರ ಅಸೀಮ ಕನ್ನಡ ಪ್ರೇಮ, ಎರಡನೆಯದು ಅವರ ಆದರ್ಶ ನಡೆ, ಮೂರನೆಯದು ಕಾಲಕ್ಕೆ ತಕ್ಕಹಾಗೆ ಬದಲಾಗಬೇಕೆಂಬ ಮನೋಧರ್ಮ.

ನಾಗ ಐತಾಳರು ಆತ್ಮಕಥೆಯಲ್ಲಿ ಒಂದು ಘಟನೆಯನ್ನು ನೆನಪಿಸಿಕೊಳ್ಳುತ್ತಾರೆ. ಒಮ್ಮೆ ಕೆನಡಾದಿಂದ ಲಾಸ್ ಎಂಜಲೀಸ್‌ಗೆ ಬರುವಾಗ ದಾರಿಯಲ್ಲಿ ಸುಂಕ ತೆರಬೇಕಾಗಬಹುದೆಂದು ತಾವು ಆಗತಾನೆ ಕೊಂಡಿದ್ದ ದುಬಾರಿ ಕ್ಯಾಮರಾದ ಪ್ಯಾಕಿಂಗ್ ತೆಗೆದು ಅದಾಗಲೇ ಹಳೆಯದೆಂದು ಕಾರಿನ ಸೀಟಿನ ಮೇಲೆ ಇಟ್ಟಿರುತ್ತಾರೆ. ಕಾರಿನಲ್ಲಿದ್ದ ಎಲ್ಲವನ್ನು ಪರಿಶೀಲಿಸಿ ಸುಂಕದವರು ಮುಂದಕ್ಕೆ ಹೋಗಲು ಸೂಚಿಸುತ್ತಾರೆ. ಇಂಥ ಸಣ್ಣಪುಟ್ಟ ತಪ್ಪುಗಳನ್ನು ಎಲ್ಲರೂ ಒಂದಲ್ಲ ಒಂದು ಸಂದರ್ಭದಲ್ಲಿ ಮಾಡಿರುತ್ತಾರೆ. ಇದು ಸ್ವಾರಸ್ಯಕರ ಸಂಗತಿಯಲ್ಲ. ಮುಂದೆ ನಾಗ ಐತಾಳರು ತಮ್ಮ ಮಕ್ಕಳಾದಿಯಾಗಿ ಎಲ್ಲರ ಮುಂದೆ ತಾನು ಸುಂಕವಂಚಿಸಲು ಮಾಡಿದ ಉಪಾಯವನ್ನು ಹೇಳಿ ಜಂಬ ಪಡುತ್ತಾರೆ. ಮುಂದೆ ವಿಶ್ರಾಂತಿಗಾಗಿ ಕಾರು ನಿಲ್ಲಿಸಿದಾಗ ಶೌಚಾಲಯಕ್ಕೆ ಹೋಗಿಬಂದ ಮಗ ಅಪ್ಪನಂತೆಯೇ ತನ್ನ ಸಾಹಸವನ್ನು ವರ್ಣಿಸುತ್ತಾನೆ. ಏನೆಂದರೆ ಪಾವತಿಮಾಡಿ ಶೌಚಾಲಯಕ್ಕೆ ಹೋಗಬೇಕಾದ ಹುಡುಗ ಬಾಗಿಲ ಸಂಧಿಯಿಂದ ಒಳಹೋಗಿ ಹಣ ಕೊಡದೆ ತನ್ನ ಕೆಲಸ ಮುಗಿಸಿ ಬಂದದ್ದೇ ದೊಡ್ಡ ಸಾಧನೆ ಎಂದು ಬೀಗುತ್ತಾನೆ. ಆಗ ಐತಾಳರಿಗೆ ತಾನು ಮಾಡಿದ ತಪ್ಪು ಮತ್ತು ‘ನಾವು ಮಾಡಿದ್ದನ್ನೆ ಮಕ್ಕಳು ಮಾಡುತ್ತಾರೆ’ ಎಂಬ ಬಗೆಗೆ ಪಶ್ಚಾತ್ತಾಪ ಉಂಟಾಗುತ್ತದೆ. ಮುಂದೆಂದೂ ಇಂಥ ತಪ್ಪುಗಳನ್ನು ಮಾಡಬಾರದೆಂದು ನಿರ್ಧರಿಸುತ್ತಾರೆ. ಇದೊಂದು ದೊಡ್ಡ ಪಾಠ.

ತೀರಾ ಸಂಪ್ರದಾಯ ಮನೆತನದಿಂದ ಬಂದ ನಾಗ ಐತಾಳರು ಮನೆಯಲ್ಲಿ ಮಕ್ಕಳಿಗೆ ಮಾಂಸಾಹಾರದ ಅಡುಗೆ ಮಾಡಬೇಕಾಗಿ ಬಂದಾಗ ಅದನ್ನು ಒಪ್ಪಿಕೊಳ್ಳುವುದಿದೆಯಲ್ಲ ದೊಡ್ಡ ಬದಲಾವಣೆಗೆ ಹೊಂದಿಕೊಳ್ಳುವ ಉದಾಹರಣೆ

ಈ ಬದಲಾವಣೆ ಸಾಧ್ಯವಾದದ್ದು ಮಡದಿ ಲಕ್ಷ್ಮೀ ಅವರ ತೆರದ ಮನಃಸ್ಥಿತಿಯಿಂದ. ತಮ್ಮ ಪುರುಷ ಅಹಂಕಾರವನ್ನು ಬಿಟ್ಟು ಸಹಜ ಸ್ಪಂದನೆಯಲ್ಲಿ ಬದಲಾವಣೆಗೆ ಹೊಂದಿಕೊಂಡ ಐತಾಳರದ್ದು ದೊಡ್ಡ ಸಾಧನೆ.

ಮೂರನೆಯ ಬಹಳ ಮುಖ್ಯ ಸಂಗತಿ ಅವರ ಕನ್ನಡ ಪ್ರೇಮ. ನನ್ನ ಅನೇಕ ಸ್ನೇಹಿತರು ಬಂಧುಗಳು ಅಮೆರಿಕ, ಆಸ್ಟ್ರೇಲಿಯಾಗಳಿಗೆ ವಲಸೆ ಹೋಗಿದ್ದಾರೆ. ಅವರೆಲ್ಲರೂ ಹೋಗುವಾಗ ಹೇಳುವ ಉತ್ಸಾಹಕ್ಕೂ ಮತ್ತೆ ಅಲ್ಲಿಗೆ ಹೋದಮೇಲೆ ಆಗುವ ಬದಲಾವಣೆಗಳಿಗೂ ವ್ಯತ್ಯಾಸವಿರುತ್ತದೆ. ಹಾಗೆ ಹೋದವರೆಲ್ಲ ನಮಗೆ ಸಹಾಯ ಮಾಡಬೇಕೆಂದೇನೂ ಇಲ್ಲ. ಆದರೆ ಅಮೆರಿಕಗೆ ಹೋದ ಮೊದಲ ತಲೆಮಾರಿನ ಜನ ಪಟ್ಟಪಾಡು ಮತ್ತು ಕನ್ನಡದ ಅಸ್ಮಿತೆಯನ್ನು ಉಳಿಸಿಕೊಳ್ಳಲು ಮಾಡಿದ ಹೋರಾಟ ಇದೆಯಲ್ಲ – ಅದು ನಿಜಕ್ಕೂ ಆಶ್ಚರ್ಯಕರವಾದದ್ದು. ಎಷ್ಟೇ ಮುಂದುವರೆದ ದೇಶವಾದರೂ ಅಲ್ಲಿಯೂ ಜನಾಂಗ, ಜಾತಿ, ಬಣ್ಣಗಳ ಕಾರಣದಿಂದ ಹಿಯಾಳಿಸುವ, ಹಿಂಸಿಸುವ ಜನರಿಗೇನೂ ಕಡಿಮೆ ಇಲ್ಲ. ಐತಾಳರು ತಮ್ಮ ತಪ್ಪಿಲ್ಲದಿದ್ದರೂ ಅವಮಾನ, ಅಸೂಯೆಗಳನ್ನೆಲ್ಲ ಸಹಿಸಿಕೊಂಡು ತನ್ನ ಪರಿಶ್ರಮದಿಂದ ದುಡಿದ ಹಣದಿಂದ ಮಾಡಿದ ಕನ್ನಡದ ಸೇವೆ ನಿಜಕ್ಕೂ ಅಪೂರ್ವವಾದುದು.

ಅಮೆರಿಕೆಗೆ ಬಂದ ಎಲ್ಲ ಸಾಹಿತಿ ಕಲಾವಿದರನ್ನು ತಮ್ಮ ಮನೆಗೆ ಕರೆದು ಸಾಹಿತ್ಯ ಸಲ್ಲಾಪ ನಡೆಸಿ ಕೈಗೊಂದಿಷ್ಟು ಹಣವನ್ನೂ ಕೊಟ್ಟು ಕಳಿಸಿದ ಉದಾಹರಣೆಗಳು ಒಂದೆರಡಲ್ಲ. ಬೆಂಗಳೂರಿಗೆ ಬಂದಾಗಲೂ ಅಷ್ಟೆ 'ನೀವು ಕನ್ನಡದ ಕೆಲಸ ಮಾಡುತ್ತಿದ್ದೀರಿ. ಮುಂದುವರೆಸಿ' ಎಂದು (ಅದು ಸಣ್ಣ ಮೊತ್ತವೇ ಆದರೂ) ಕೊಟ್ಟ ಪರಿ ದೊಡ್ಡದು. ಹೀಗೆ ಕೊಡುವಾಗಲೂ ಅವರ 'ನಾನು ಕೊಡುತ್ತಿದ್ದೇನೆಂಬ ಸಣ್ಣ ಸುಳಿವೂ ಅವರ ಕಣ್ಣುಗಳಲ್ಲಿರುತ್ತಿರಲಿಲ್ಲ. ಆಷ್ಟೆ ಅಲ್ಲ; ಹೀಗೆ ಕೊಟ್ಟಾಗಲೂ ಅವರನ್ನು ಗೌರವಿಸಬೇಕು, ಅವರ ಕೆಲಸವನ್ನು ಮಾಡಿಕೊಡಬೇಕು ಎಂಬ ಸಣ್ಣ ನಿರೀಕ್ಷೆ ಕೂಡ ಇರುತ್ತಿರಲಿಲ್ಲ. 'ಮಾಡಬೇಕು ಮಾಡಿದ್ದನ್ನು ಮರೆಯಬೇಕು' ಎನ್ನುವ ತತ್ತ್ವದವರು. ಹೀಗೆ ಐತಾಳರು ಧಾರಳವಾಗಿ ವರ್ತಿಸಲು ಬಹಳ ಮುಖ್ಯ ಕಾರಣ ಅವರ ಪತ್ನಿ ಶ್ರೀಮತಿ ಲಕ್ಷ್ಮೀ. ಅವರಿಗೆ ಹೇಳದೆ ಐತಾಳರು ಯಾವ ಕೆಲಸವನ್ನೂ ಮಾಡಿದ್ದು ನನಗೆ ನೆನಪಿಲ್ಲ. ಐತಾಳರ ಯಾವ ಆಶಯಗಳಿಗೂ ಕೊಕ್ಕೆ ಹಾಕದೆ, ಕಡಿವಾಣ ಹಾಕದೆ ದೊಡ್ಡತನ ಮೆರೆದರು ಲಕ್ಷ್ಮೀ.

ಐತಾಳರು ತಮ್ಮ 77ನೆಯ ವಯಸ್ಸಿನವರೆವಿಗೂ ಬಯೋಕೆಮಿಸ್ಟ್ರಿಯ ಪ್ರಯೋಗಶಾಲೆಯಲ್ಲಿ ಜೀನ್ಸ್‌ಗಳ ಬಗೆಗೆ ಅಧ್ಯಯನ ನಡೆಸುತ್ತಿದ್ದರು. ತಮ್ಮ ಬಲಗಣ್ಣಿಗೆ ರಕ್ತ ಪೂರೈಸುತ್ತಿದ್ದ ನರ ವಯೋಸಹಜ ಕಾರಣದಿಂದ ಕಾರ್ಯನಿರ್ವಹಣೆ ಮಾಡದಿದ್ದಾಗ ತಾವು ಮಾಡುತ್ತಿದ್ದ ಅಧ್ಯಯನವನ್ನು ಮುಂದಿನ ತಲೆಮಾರಿಗೆ ಬಿಟ್ಟು ಪೂರ್ಣಪ್ರಮಾಣದಲ್ಲಿ ಕನ್ನಡದ ಕೆಲಸಗಳಿಗೆ ತೊಡಗಿಸಿಕೊಂಡರು. ಕನ್ನಡ ಸಾಹಿತ್ಯದ ಚಟುವಟಿಕೆಗಾಗಿಯೇ

ಮೀಸಲಾದ ಏಕೈಕ ಸಂಸ್ಥೆ 'ಕನ್ನಡ ಸಾಹಿತ್ಯ ರಂಗ'ವನ್ನು ಸ್ಥಾಪಿಸಿದ ಮತ್ತು ಅದಕ್ಕೊಂದು ತಾತ್ವಿಕವಾದ ನೆಲೆಗಟ್ಟನ್ನು ಒದಗಿಸಿದ ಕೀರ್ತಿಯೂ ಐತಾಳರಿಗೆ ಸಲ್ಲುತ್ತದೆ.

ನನಗೆ ಅವರು ಪರಿಚಯವಾಗುವ ಹೊತ್ತಿಗೆ ಕಾರಂತರು ಮತ್ತು ಕುವೆಂಪು ಅವರ ಪುಸ್ತಕಗಳನ್ನು ಪ್ರಕಟಿಸಿದ್ದರು. ಮುಂದೆ ಅದು ತಮ್ಮ ಸ್ವಂತ ಪ್ರಕಾಶನದ ಪುಸ್ತಕವಿರಲಿ ಕನ್ನಡ ಸಾಹಿತ್ಯ ರಂಗದ ಪುಸ್ತಕವಿರಲಿ ಎಲ್ಲವನ್ನು ಅಭಿನವ ಪ್ರಕಟಿಸುವಂತೆ ನೋಡಿಕೊಂಡರು. ಈ ಮಧ್ಯೆ ಕೆಲವರು ಆಕ್ಷೇಪಣೆ ಸಲ್ಲಿಸಿ ಬೇರೊಂದು ಪ್ರಕಾಶನ ಸಂಸ್ಥೆಯನ್ನು ಆಶ್ರಯಿಸಿದ್ದೂ, ಅದು ಹೆಚ್ಚು ಪ್ರಚಾರವಾಗದೆ ಮತ್ತೆ ಅಭಿನವದ ಜತೆಗೇ ಮುಂದುವರೆಯುವಂತೆ ಮಾಡಲು ಪ್ರಧಾನ ಪಾತ್ರ ವಹಿಸಿದವರು ಐತಾಳರೇ. 'ಅಭಿನವದವರು ಪುಸ್ತಕ ಪ್ರಕಟಣೆ ತಡಮಾಡುತ್ತಾರೆ' ಎಂದವರಿಗೆ 'ಪುಸ್ತಕ ಪ್ರಕಟಣೆ ಎಂದರೆ ಏನು ತಿಳಿದಿದ್ದೀರಿ? ಹೊಟೇಲ್‌ಗೆ ಹೋಗಿ ಒಂದು ಮಸಾಲೆ ದೋಸೆಯನ್ನು ಆರ್ಡರ್ ಮಾಡಿ ತಿನ್ನುವಷ್ಟು ಸುಲಭವಲ್ಲ' ಎಂದು ಗದರಿದ್ದರು. 'ರವಿಕುಮಾರ್ ಎಷ್ಟು ತಡಮಾಡಿದರೂ ಅವರ ಮೇಲೆ ಎಷ್ಟೇ ಸಿಟ್ಟಾದರೂ ಬೇಸರವಾಗಿದ್ದರೂ ಅವರು ಪುಸ್ತಕವನ್ನು ನೋಡಿದ ಕೂಡಲೇ ನಮ್ಮ ಎಲ್ಲ ಕೋಪ ಅಸಹನೆ ಮರೆತು ಹೋಗುತ್ತದೆ. ಊಟ ಎಷ್ಟೇ ತಡವಾಗಿದ್ದರೂ ರುಚಿ ಇದ್ದರೆ ತಡವಾದದ್ದನ್ನು ಮರೆಯುತ್ತೇವಲ್ಲ ಹಾಗೆ' ಎಂದು ಸಮಜಾಯಿಷಿ ನೀಡುತ್ತಿದ್ದರು.

ನನಗೆ ಆಶ್ಚರ್ಯವಾಗುವುದು. ಅಮೆರಿಕಕ್ಕೆ ಹೋದ ಅವರಿಂದ ಅನೇಕ ಬಗೆಗಳಲ್ಲಿ ಸಹಾಯ ಆತಿಥ್ಯ ಪಡೆದ ಯಾರೊಬ್ಬರೂ ಅವರಿಗೆ ಸರ್ಕಾರ ಅಥವಾ ಯಾವುದೇ ಸಂಸ್ಥೆಯ ಒಂದು ಸಣ್ಣ ಪ್ರಶಸ್ತಿಯನ್ನು ಯಾಕೆ ಕೊಡಿಸಲು ಪ್ರಯತ್ನಿಸಲಿಲ್ಲ? ಕನ್ನಡ ಪುಸ್ತಕ ಪ್ರಾಧಿಕಾರ, ಕರ್ನಾಟಕ ಪ್ರಕಾಶಕರ ಸಂಘ, ಗೋಕಾಕ್ ಟ್ರಸ್ಟ್‌ಗಳ ಸಮಿತಿಗಳಲ್ಲಿ ಪ್ರಸ್ತಾಪಿಸಿದರೂ ಕೂಡ ಸಾಧ್ಯವಾಗಲಿಲ್ಲ. ಯಾಕೆಂದು ಈ ಹೊತ್ತಿಗೂ ಗೊತ್ತಾಗುತ್ತಿಲ್ಲ. ನಮ್ಮ ಮಾತು ಸೋಲುವುದು ಇಂಥ ಸನ್ನಿವೇಶಗಳಲ್ಲಿಯೇ. ಅದು ಕೇವಲ ನನ್ನ ಮಾತಲ್ಲ; ನಮ್ಮ ಕಾಲದ ಸಾಂಸ್ಕೃತಿಕ ವಾತಾವರಣದ ಸೋಲು. ಐತಾಳರಿಗೆ ಇವ್ಯಾವುದರ ನಿರೀಕ್ಷೆಗಳಿರಲಿಲ್ಲ. ಆದರೆ ತಮ್ಮ ಸಾಹಿತ್ಯವನ್ನು ವಿಶ್ವವಿದ್ಯಾಲಯಗಳ ಅಧ್ಯಾಪಕರು (ಅಮೆರಿಕ ಸೇರಿದಂತೆ) ಅಧ್ಯಾಪಕರಲ್ಲದವರ ಸಾಹಿತ್ಯದ ಬಗೆಗೆ ತೋರುವ ಅನಾದರದ ಬಗೆಗೆ ಖೇದವಿತ್ತು.

ನಾಗ ಐತಾಳರಿಗೆ ಅನಂತಮೂರ್ತಿ, ಜಿ.ಎಸ್.ಎಸ್, ಪ್ರಭುಶಂಕರ ಮುಂತಾದವರ ಜತೆಗೆ ಆತ್ಮೀಯ ಒಡನಾಟ ಇತ್ತು. ಬೆಂಗಳೂರಿಗೆ ಬಂದಾಗಲೆಲ್ಲ ತಪ್ಪದೆ ಇವರ ಮನೆಗಳಿಗೆ ಹೋಗಿ ಬರುತ್ತಿದ್ದರು. ಯಾರು ಕರೆದರೂ ಸಂಕೋಚವಿಲ್ಲದೆ ಬಂದು ಸಾಹಿತ್ಯದ ಹರಟೆ ಹೊಡೆದು ಮನೆಯವರಲ್ಲಿ ಮನೆಯವರಂತೆ ಆತ್ಮೀಯವಾಗಿ ವರ್ತಿಸುತ್ತಿದ್ದರು.

ಇಳಿ ವಯಸ್ಸಿನಲ್ಲಿಯೂ ಅವರ ಅಧ್ಯಯನಶೀಲತೆ ಕಡಿಮೆಯಾಗಿರಲಿಲ್ಲ. ಕಣ್ಣಿನ ತೊಂದರೆ ಇದ್ದರೂ ದಪ್ಪ ಮಸೂರ ಹಿಡಿದು ಕರಡು ತಿದ್ದುತ್ತಿದ್ದರು. ಕಂಪ್ಯೂಟರ್‌ನಲ್ಲಿ ಅಕ್ಷರ ದೊಡ್ಡದು ಮಾಡಿಕೊಂಡು ಬರೆಯುತ್ತಿದ್ದರು. ಸಂದೇಹಗಳಿದ್ದರೆ ಕೇಳಿ ಪರಿಹರಿಸಿ ಕೊಳ್ಳುತ್ತಿದ್ದರು. ಅವರ ಯಾವ ಬರವಣಿಗೆಯನ್ನೂ ಕಾಟಚಾರಕ್ಕೆಂಬಂತೆ ಬರೆದಿಲ್ಲ. 'ಎಲ್ಲ ಸರಿ ಅವರಿಂದ ಕನ್ನಡಕ್ಕೆ ಏನುಪಕಾರವಾಯ್ತು?' ಎಂದು ಯಾರಾದರೂ ಕೇಳಿದರೆ ನನ್ನಲ್ಲಿನ ಒಂದೇ ಉತ್ತರ – ಜಿ.ಎಸ್.ಎಸ್. ಹೇಳುವಂತೆ 'ಕನ್ನಡದ ಭೂಪಟ ಕೇವಲ ಕರ್ನಾಟಕಕ್ಕೆ ಮಾತ್ರ ಸೀಮಿತವಾಗದೆ ಅಮೆರಿಕದವರೆಗೂ ವಿಸ್ತಾರಗೊಂಡಿತು' ಅನಂತಮೂರ್ತಿಯವರು ಹೇಳುವಂತೆ 'ಜಿ. ಪಿ. ರಾಜರತ್ನಂ ಅಮೆರಿಕದಲ್ಲಿ ಉಸಿರಾಡುತ್ತಿದ್ದಾರೆ'.

ಅಭಿನವದ ಒಂದು ಸಂಚಿಕೆಯನ್ನು ಐತಾಳರಿಗೆ ಅರ್ಪಿಸಿದ್ದು ಮತ್ತು ಕನ್ನಡ ಸಾಹಿತ್ಯ ರಂಗದ ಹತ್ತನೆಯ ವರ್ಷದಲ್ಲಿ ಅಭಿನಂದಿಸಿದ್ದು ಅವರಿಗೆ ತುಂಬ ಸಂತೋಷ ಸಮಾಧಾನಕೊಟ್ಟ ಸಂಗತಿಗಳು. ಅವರು ತೀರಿಕೊಂಡ ಮೇಲೆ ಕನ್ನಡದ ಒಂದೆರಡು ಪತ್ರಿಕೆಗಳು ಸಣ್ಣ ಸುದ್ದಿ ಪ್ರಕಟಿಸಿದ್ದು ಬಿಟ್ಟರೆ ಶ್ರದ್ಧಾಂಜಲಿಯನ್ನು ಕೂಡ ಸಲ್ಲಿಸಲಿಲ್ಲ. ಆತ್ಮೀಯರ ಸಾವು ಕೂಡ ನಮ್ಮನ್ನು ತೀವ್ರವಾಗಿ ತಟ್ಟದಷ್ಟು ಸಂವೇದನಾಶೀಲತೆಯನ್ನು ಕಳೆದುಕೊಂಡುಬಿಟ್ಟೆವಾ?

ಆಶ್ಚರ್ಯವೆಂದರೆ ಐತಾಳರಿಗೆ ಯಾವ ನಿರೀಕ್ಷೆಗಳು ಇರಲಿಲ್ಲ. ಎಂದೆನಲ್ಲ– ಅವರಿಗೆ ಮನುಷ್ಯನ ವರ್ತನೆಗಳನ್ನು ಅರಿಯಲು ಸಾಹಿತ್ಯ ದೊಡ್ಡ ಸಾಧನ ಎಂಬುದನ್ನು ಅರಿತದ್ದರು. ಇದೇ ಕಾರಣಕ್ಕೂ ಏನೋ ಮನುಷ್ಯರನ್ನು ಸಹಜವಾಗಿ ಎಲ್ಲ ದೌಬಲ್ಯಗಳಾಚೆಗೂ ಒಪ್ಪಿ ಪ್ರೀತಿಸಬೇಕು ಎಂಬ ದೊಡ್ಡ ಗುಣ ಇದ್ದುದರಿಂದಲೇ ಅವರು ನಮ್ಮೆಲ್ಲರ ಬೆಳಕಾಗಿದ್ದಾರೆ.

*

ಐತಾಳರ ಜೀವಿತಾವಧಿಯಲ್ಲಿಯೇ ಇಂಥದೊಂದು ಕೃತಿಗೌರವ ಸಲ್ಲಿಸಬೇಕೆಂಬ ಅಭಿಲಾಷೆ ಅಭಿನವಕ್ಕಿತ್ತು. ಕಾರಣಾಂತರಗಳಿಂದ ಸಾಧ್ಯವಾಗಲಿಲ್ಲ. ಈಗಲಾದರೂ ಮೈ. ಶ್ರೀ. ನಟರಾಜ, ನಳಿನಿ ಮೈಯ ಮತ್ತು ಶ್ರೀಕಾಂತ ಬಾಬು, ಚಂದ್ರಿಕಾ ಅವರ ಮುತುವರ್ಜಿಯಿಂದ ಈ ಕೃತಿ ಹೊರಬರುತ್ತಿದೆ. ಅನೇಕರು ಈ ನೆಲೆಯಲ್ಲಿ ಸಹಾಯ ಮಾಡಿದ್ದಾರೆ. ಮುಖ್ಯವಾಗಿ ನಾಗ ಐತಾಳರ ಕುಟುಂಬ ವರ್ಗ, ಅಭಿನವದ ಹಿತಚಿಂತಕರಾದ ನರಹಳ್ಳಿ ಸರ್ ಮತ್ತು ಅಭಿನವ ಬಳಗಕ್ಕೆ, ಮುದ್ರಿಸುತ್ತಿರುವ ಧರಣಿ ಪ್ರಿಂಟರ್ಸ್‌ನ ಹೂವಪ್ಪ ಮತ್ತು ಸಿಬ್ಬಂದಿ ವರ್ಗಕ್ಕೆ ಧನ್ಯವಾದಗಳು.

ಈ ಸಂಪುಟದಲ್ಲಿ ನಾಗ ಐತಾಳರ ವ್ಯಕ್ತಿತ್ವ ಮತ್ತು ದರ್ಶನಗಳೆರಡನ್ನೂ ಸಾಕಷ್ಟು ವಿವರವಾಗಿ ಕಟ್ಟಿಕೊಡಲು ಪ್ರಯತ್ನಿಸಲಾಗಿದೆ. ಮೊದಲ ಭಾಗದಲ್ಲಿ ಅವರ ಜತೆಗಿನ ಒಡನಾಟದ ನೆನಪುಗಳಿದ್ದರೆ, ಎರಡನೆಯ ಭಾಗದಲ್ಲಿ ಅವರ ಕೃತಿಗಳ ಕುರಿತ ಒಳನೋಟದ

ಬರಹಗಳಿವೆ. ಮೂರನೆಯ ಭಾಗದಲ್ಲಿ ಐತಾಳರದೇ ಮೂರು ಲೇಖನಗಳಿದ್ದು ಅವು ಐತಾಳರ ಚಿಂತನ ಮಾದರಿಗಳನ್ನು ಕಟ್ಟಿಕೊಡುತ್ತವೆ. ಅವರ ಕಥೆ ಕಾದಂಬರಿಯ ಕೆಲ ಪುಟಗಳನ್ನಾದರೂ ಕೊಡಬೇಕೆಂಬ ಹಂಬಲವಿತ್ತು. ಪುಟಗಳ ಮಿತಿಯಿಂದಾಗಿ ಅದು ಸಾಧ್ಯವಾಗಿಲ್ಲ. ಆಸಕ್ತರು ಅವರ ಕೃತಿಗಳಿಗೇ ನೇರ ಪ್ರವೇಶ ಮಾಡಬಹುದಾಗಿದೆ.

ನಾಗ ಐತಾಳರ ಬಗೆಗೆ ಲೇಖನಗಳನ್ನು ಬರೆದುಕೊಟ್ಟವರಿಗೆ, ಹಿಂದೆ ಬರೆದಿದ್ದ ಲೇಖನಗಳನ್ನು ಬಳಸಿಕೊಳ್ಳಲು ಅನುಮತಿ ನೀಡಿದ ಮಹನೀಯರಿಗೆ, ಓದುವ ನಿಮಗೆ ಧನ್ಯವಾದಗಳು.

ಅನುಕ್ರಮ

ಅಲೆ

ಅಲೆ ಅಲೆ

ಅಲೆ ಅಲೆ ಅಲೆ

அலை



ಕಡಲು ಮತ್ತು ದಡ

– ಲಕ್ಷ್ಮೀಶ ತೋಳ್ಪಾಡಿ

ನಮ್ಮ ನಾಗೈತಾಳರದು ಎತ್ತರದ ನಿಲುವು, ಅವರ ಮುಂದೆ ಮುಖ ಎತ್ತಿ ನೋಡುವಂತೆ ಮಾಡಿದರು ನನ್ನನ್ನ! ನಾ ಕಂಡ ಅವರ ಹಳೆಯ ಕಣ್ಣುಗಳಲ್ಲಿ ಹೊಸ ಸ್ನೇಹ ಸೂಸುತ್ತಿತ್ತು. ನಾನು ಕರಾವಳಿಯ ಮಣ್ಣಿನವನು, ಐತಾಳರು ಆರಾಧಿಸುವ ಕೋಟ ಶಿವರಾಮ ಕಾರಂತರ ಪುತ್ತೂರಿನವನು. ಹಾಗೆ 'ಕೋಟ'ಕ್ಕೆ 'ಪುತ್ತೂರು' ದೂರವಲ್ಲ. ಹಾಗೆ ನೋಡಿದರು– ನನ್ನ ಕಡಲು ಅಲೆಯನ್ನು ನೋಡುವಂತೆ! ಅವರ ಬಾಲ್ಯದ ಕಡಲು ಅವರ ಮೈಯುದ್ದ ಮಲಗಿತ್ತು! ಕೋಟದ ಕಡಲು ಕನ್ನಡದಲ್ಲೇ ಮೊರೆಯುತ್ತಿತ್ತು! ಬದುಕೆಂದರೆ ಅದು ಒರಿಜಿನಲ್ ಎನ್ನುವರು ಹಲಕೆಲವು ಬಲ್ಲವರು. ನಾನು ವಾದಿಸ ಹೋಗುವುದಿಲ್ಲ. ಆದರೆ ಬದುಕೆಂದರೆ ಅದು ಒಂದು 'ಅನುವಾದ' ಎಂಬಂತೆ ತೋರುವುದು ನನಗೆ. ಅನುವಾದ ಎಂದರೆ ಅದು ಭಾಷಾಂತರ, ದೇಶಾಂತರ ಮತ್ತು ಕಾಲಾಂತರ ಕೂಡ ಒಟ್ಟಿನಲ್ಲಿ ಅನುವಾದವೆಂದರೆ ರೂಪಾಂತರ! ಕಡಲಿನಲ್ಲೇ ಹುಟ್ಟಿಬಂತಂತೆ ಮೊದಲ ಜೀವ! ಅದು ಹುಟ್ಟಿ ಕಡಲ ಒಡಲೊಳಗಿಂದ ಮತ್ತೆ ದಡಕ್ಕೆ ಹತ್ತಿದ್ದೇ ಒಂದು ರೂಪಾಂತರದ ನಡೆಯಂತೆ. ಅನುವಾದದ ನಡೆಯಂತೆ ಇದೆ. ಇನ್ನಷ್ಟು ರೂಪಾಂತರಗೊಳ್ಳುವುದಕ್ಕಾಗಿಯೇ ಈ ಜೀವ ದಡಕ್ಕೆ ಬಂದು ಬಿದ್ದಿರಬೇಕು! ಆದುದರಿಂದಲೇ ಭಾಷೆಯಲ್ಲಿ ಕೊನೆಗೂ ಅವನಿಗೆ ಅಥವಾ ಅವಳಿಗೆ ದಡ ಸಿಕ್ಕಿತು

ಎಂಬಂಥ, ಅಂತೂ ದಡ ಸೇರಿದ, ಹೇಗೋ ದಡ ಹತ್ತಿದ ಎಂಬಂತೆ ಪ್ರಯೋಗಗಳು. ಅಂದರೆ ಒಂದು ನೆಲೆ, ನಿಲುವು ಸಿಕ್ಕಿತು ಎಂಬರ್ಥದಲ್ಲಿ.

ನೆಲೆ ಸಿಗಬೇಕಾದರೆ ಕಡಲ ನೀರಿನಿಂದ ದಡಕ್ಕೆ ಹತ್ತಬೇಕು. ರೂಪಾಂತರಗೊಳ್ಳಬೇಕು, 'ನೆಲೆ' ಎಂದರೆ 'ನೆಲ'ವೂ ಹೌದಲ್ಲವೇ! ದಡದಲ್ಲಿ ನಿಂತವನು ತಟಸ್ಥ! ನಿಂತವಳು ತಟಸ್ಥೆ! ದಡದಲ್ಲಿ ನಿಂತು ಹಿಂತಿರುಗಿ ಕಡಲನ್ನು ನೋಡುವವರಿಗೆ ವಿಶಾಲವಾದ ಕಡಲಿನ ನೋಟ ದಕ್ಕುವುದು. ಬದುಕೆಂಬ ಕಡಲಿನ ನೋಟ ಎಂದೂ ಕಳೆದುಹೋಗದ ಭಾವಜೀವನವೆಂಬ ಕಡಲಿನ ನೋಟ ದಕ್ಕುವುದು. ಕಡಲಿನಲ್ಲೇ ಇದ್ದು ತೆರೆನೊರೆಗಳೊಡನೆ ಹೊಯ್ದಾಡುತ್ತಿದ್ದಾಗ ಸಿಕ್ಕದ ನೋಟ ಈಗ ಸಿಕ್ಕುವುದು. ತನ್ನನ್ನು ಹೀಗೆ ಕಾಣಿಸಲೆಂಬಂತೆ, ದಡದಲ್ಲಿ ನಿಂತು 'ನನ್ನ ನೋಡಿ' ಎನ್ನುವಂತೆ ಅದೊಂದು ಕರುಣೆಯಿಂದಲೇ ಕಡಲು ಜೀವಿಗಳನ್ನು ದಡಕ್ಕೆ ದೂಡುವುದಿರಬಹುದು! ಅದು ಕಡಲಿನ ಸಂಕಲ್ಪವೇ ಇರಬಹುದು! ನೋಡಿ, ಭಾಷೆಯಲ್ಲಿ ಉಂಟಾಗದ ಭಾವದ ಉತ್ಕಟತೆಯು ನಾದದ ದಿಕ್ಕಿಗೆ ಮನಸ್ಸು ಹೊರಳಿದರೆ ಉಂಟಾಗುವುದು. ಸ್ವರಗಳಿಗೆ ಕಿವಿ ಕಂಪಿಸುವಾಗಿನ ಭಾವಾವೇಗವೇ ಬೇರೆ. ಅದರಲ್ಲೂ ಶ್ರಾವ್ಯವಾಗಿ ಪಳಗಿಸಿದ ಸ್ವರಗಳಿಗಿಂತಲೂ ಹೆಚ್ಚು ನನ್ನನ್ನು ಪಳಗಿಸಬಲ್ಲೆಯಾ? ಎಂದು ಸವಾಲು ಹಾಕುವಂತಿರುವ ನೈಸರ್ಗಿಕವಾದ ಸುಪ್ತ ಸಪ್ತ ಸ್ವರ ಸಮುಚ್ಚಯದ ಸಂಭ್ರಮವೇ ಬೇರೆ!

ಉಪನಿಷತ್ತಿನ ಋಷಿಗೆ ಗುಡುಗಿನ ಮೊರೆತವನ್ನು ಕೇಳಿ, ದ – ದ – ದ ಎಂಬ ಅರ್ಥ ಸ್ಫುರಿಸಿತು! ಅಂದರೆ ದಯೆ, ದಾನ, ದಮ ಎಂಬ ಅರ್ಥ. ಪಳಗಿಸಿದ ಸಂಗೀತ ಕೇಳಿದಾಗ ಅಲ್ಲ. ಕೋಟದ ಕಿನಾರೆಯಲ್ಲಿ ರೊಯ್ಯನೆ ಬೀಸುವ ಗಾಳಿ, ಹನೆ ಮರಗಳ ಸರ್ವಾಂಗ ಕಂಪನವನ್ನು ತನ್ನಲ್ಲಿ ಹೊತ್ತು ಗೊತ್ತುಗುರಿ ಇಲ್ಲದೆ ಬೀಸುವ ಗಾಳಿ, ತನ್ನೊಳಗಿನ ಯಾವ ಕ್ಷೋಭೆಗೋ ತಿಳಿಯದು; ನಿರಂತರ ಮೊರೆಯುತ್ತಿರುವ ಕಡಲು ಲೋಕದ ಎಲ್ಲೆಡೆಯಾದರೂ ದಡಸೇರಿರಿ ಎನ್ನುತ್ತಿದೆಯೆ? ನಾನು ಎಲ್ಲೆಡೆ ಇರುವೆನೆನ್ನುತ್ತಿದೆಯೇ? ನನ್ನ ಮರೆಯದಿರಿ ಎನ್ನುತ್ತಿದೆಯೆ?

ಕಡಲೆಂದರೆ ಹಲವು ಮಕ್ಕಳ ತಾಯಿಯಲ್ಲವೆ! ಹೌದು. ನಾಗೈತಾಳರ ಕೋಟದಲ್ಲಿ 'ಹಲವು ಮಕ್ಕಳ ತಾಯಿ' ಎಂಬ ಹೆಸರಿನ ದೇವಸ್ಥಾನ ಇದೆ. ಐತಾಳರ ಕುಟುಂಬದ ಎಲ್ಲರೂ ಈ ತಾಯಿಗೆ ನಡೆದುಕೊಳ್ಳುವರು. ಈ ತಾಯಿಯ ಮಕ್ಕಳೆಲ್ಲರು ಸೇರಬಯಸುವ ದಡವೆಂದರೆ ಅದು ಅಮೆರಿಕಾ! ಐತಾಳರೂ ಸೇರಿಕೊಂಡರು. ಈ ದಡವನ್ನು ಪಡುಗಡಲೇ ಹಿಂದೆತ್ತಿ ಬಿಸುಟಂತೆ ಪಶ್ಚಿಮದ ದಡಕ್ಕೆ ಈ ಮಗುವನ್ನು – ಏನು ಹೇಳಲಿ ನಾನು, ಪಶ್ಚಿಮದ ಭೋರ್ಗರೆತ! ಎಲ್ಲ ಹೆದ್ದೆರೆಗಳೇ ಇಲ್ಲಿ. ವಿದ್ಯೆ, ವಿಜ್ಞಾನ, ಸಂಪತ್ತು, ಸಾಹಸ, ಸಂಬಂಧಗಳ ಹೊಸ ಹಾಸು, ಹೊಸ ಹೊಕ್ಕು, ಹೊಸ ಜಾಲ, ಹೊಸ ವ್ಯೂಹ, ಹೊಸ ಸುಳಿ! ಹೊಸ ಝಣತ್ಕಾರ! ಎಲ್ಲ ನಿಜ, ಎಲ್ಲ ವಸ್ತುಸ್ಥಿತಿ, ವಸ್ತುಸ್ತುತಿ! ಆದರೆ

ಐತಾರಳರೊಳಗೊಂದು ಎಳೆಜೀವ ನೆನೆಯುತ್ತಲೇ ಇತ್ತು – ಹತ್ತು ಮಕ್ಕಳ ತಾಯಿಯನ್ನು ನೆನೆದಂತೆ. ತಬ್ಬಲಿಯಾಗಿ ತಟಸ್ಥವಾಗುತ್ತಿತ್ತು! ಅವರು ಕನ್ನಡಕ್ಕಾಗಿ ಮಾಡಿದ ಎಲ್ಲ ಕೈಂಕರ್ಯವೂ ಕೋಟದ ಕಡಲ ಮೊರೆತ ಮರಳಿ ಕೇಳುವ ಹಂಬಲದಿಂದ ಮಾಡಿದವು. ನಮ್ಮನ್ನು ಅಮೆರಿಕೆಗೆ ಬರುವಂತೆ ಗದರಿಸಿ ಕರೆಸಿಕೊಂಡರು! 'ಬದುಕೆಂಬ ಮರ ಸಾವೆಂಬ ಹಣ್ಣು' ಎಂಬ ನನ್ನೊಂದು ಸಾಲನ್ನು ಹೊತ್ತಗೆಯಿಂದ ಉದ್ಧರಿಸಿ, ಈಗ ತಮಗೆ ಸಾವಿನ ಅಂಜಿಕೆ ಕಳಚಿಬಿತ್ತೆಂದು ನುಡಿದು ನನ್ನ ಕರಗಿಸಿದರು! ಈ 'ಜೀವಶಾಸ್ತ್ರ'ದ ಆಚಾರ್ಯ! ಇರಲಿ, ಕಡಲಿಂದ ದಡಕ್ಕೆ ಬಂದ ಜೀವ ಮರಳಿ ಕಡಲಿಗೆ ಸೇರಲೇಬೇಕು. ಅದು ದಡದ ಜೀವವಲ್ಲ, ಕಡಲ ಜೀವ ಕಡಲ ಅಲೆಗಳಲ್ಲಿ ಅವರನ್ನು ಮರಳಿ ಕಾಣುವ ಹೊತ್ತು ದೂರವಿಲ್ಲವೆಂದು ನನಗೆ ಅನಿಸುತ್ತಿರುವ ಈ ಹೊತ್ತಿನಲ್ಲಿ– ನಾವಿಬ್ಬರೂ ಐತಾಳರನ್ನೂ ಪುಟ್ಟಕ್ಕನನ್ನೂ ನೆನೆಯುವೆವು. ಐತಾಳರ ಜೊತೆಗೆ ಒಂದು ಹೊಳೆಯಂತೆ ಇದ್ದರು ಪುಟ್ಟಕ್ಕ. ನೆನೆಯುವೆವು ಅವರ ಆತಿಥ್ಯ, ವಾತ್ಸಲ್ಯ, ಹಾಸ್ಯ, ಪ್ರೇಮಗೀತೆಯ ಹಾಡು, ಪಾಡು, ಮುಪ್ಪಿನ ಪ್ರೇಮ ಮತ್ತು ಅಕ್ಕರೆಯನ್ನು.

*

ಅಮೆರಿಕ ಮತ್ತು ಕನ್ನಡ ನಾಡುಗಳೆರಡಕ್ಕೂ ಆದರ್ಶ

– ಬೆಳಗೋಡು ರಮೇಶ ಭಟ್

ಸುಮಾರು ಏಳೆಂಟು ವರ್ಷಗಳ ಹಿಂದೆ, ಏನೋ ಅರಸುತ್ತಿದ್ದವನಿಗೆ One India ಪತ್ರಿಕೆಯಲ್ಲಿ 'ಅಜ್ಜಿಯ ಜೊತೆ ನಡೆಯುವುದೆಂದರೆ' ಎಂಬ ಕವಿತೆ ಕಣ್ಣಿಗೆ ಬಿತ್ತು. ನಾನು ಅಜ್ಜಿ ಸಾಕಿದ್ದ ಮಗುವಾದುದರಿಂದ, ಸಹಜ ಕುತೂಹಲದಿಂದ ಆ ಕವಿತೆಯನ್ನು ಪ್ರತಿ ಮಾಡಿಟ್ಟುಕೊಂಡಿದ್ದೆ. ಈಗ ನೆನಪು ಮಾಡಿಕೊಳ್ಳುತ್ತಿರುವ ಕೆಲವು ಸಾಲುಗಳು ಹೀಗಿವೆ:

ಅಜ್ಜಿಯ ಜೊತೆ ನಡೆಯುವುದೆಂದರೆ ನನಗದು ಬಲು ಮೋಜು
ಪುಟ ಪುಟಾಣಿ ಹೆಜ್ಜೆಯ ಹಾಕುತ ಮೆಲ್ಲಗೆ ನಡೆವಳು
ನನ್ನಂತೆ ಆತುರವಿಲ್ಲ, ನನಗೂ ಅವಳಿಗು ದಿನಗೆಲಸಗಳಾ ಗೋಜು
'ಬಾ ಮಗೂ, ಬೇಗ' ಎನ್ನುವುದಿಲ್ಲ ಗಡಿಬಿಡಿ ಇಲ್ಲ ನನ್ನಂತೆ
ಅಜ್ಜಿಯ ಜೊತೆ ನಡೆಯುವುದೆಂದರೆ ಬಲು ಮೋಜೋ ಮೋಜು
ಸೃಷ್ಟಿಯ ವೈಭವ ಕಾಣುವಳವಳು/ ಮೆಲ್ಲನೆ ನಡೆಯುತ ನನ್ನಂತೆ
ಫಳಫಳ ಹೊಳೆಯುವ ಕಲ್ಲಿನ ಹರಳು ಚಿತ್ರ ವಿಚಿತ್ರ ಮೋಡದ ನೆರಳು
ಹುಲ್ಲೆಳೆ ಮೇಲೆ ಹರಡಿದ ಇಬ್ಬನಿ / ಮುತ್ತಿನ ಮಣಿ ಸರದಂತೆ.
ಏನಿದು ಆತುರ ಎಲ್ಲರ ಬದುಕು? / ಅವಸರವೆಲ್ಲಾ ಅದಕು, ಇದಕು
ನಿಂತು ನೋಡುವ ತಾಳ್ಮೆಯೆ ಇಲ್ಲ / ನಾನೂ ಅಜ್ಜಿ ಕಂಡಂತೆ.

ಇಂಥಾ ಅಜ್ಜಿಯ ಕೊಟ್ಟನು ದೇವ / ನಾನೇ ಬಲು ಪುಣ್ಯವಂತೆ
ಮೆಲುನಡಿಗೆಯಲಿ ನನ್ ಜೊತೆ ನಡೆಯುವ / ಅಜ್ಜಿಯೂ ಮಗುವೇ ನನ್ನಂತೆ

ಈ ಕವಿತೆ Walking with Grandma ಎಂಬ ಕವಿತೆಯ ಅನುವಾದವೆಂದೂ, ಇದರ ಕರ್ತೃ ಯಾರೆಂದು ತಿಳಿಯದೆಂದೂ, ಇದನ್ನು ಅನುವಾದಿಸಿರುವುದು ಆಹಿತಾನಲರೆಂದೂ ಅಲ್ಲಿ ತಿಳಿಸಲಾಗಿತ್ತು. `I like to walk with grandma, Her steps are short like mine' ಎಂದು ಆರಂಭವಾಗುವ ಈ ಕವಿತೆಯನ್ನು ನಾನು ಹಿಂದೆಲ್ಲೋ ಓದಿದ್ದೆ. ಇದರ ಕೊನೆಯ ಸಾಲುಗಳು ಯಾವತ್ತಿಗೂ ನನ್ನ ಹೃದಯವನ್ನು ಆರ್ದ್ರವಾಗಿರಿಸುತ್ತಿವೆ ಎಂಬ ಕಾರಣಕ್ಕೆ, ಮತ್ತೊಮ್ಮೆ ನೆನಪಿಸಿಕೊಳ್ಳುತ್ತಿದ್ದೇನೆ:

Most people have to hurry /They do not stop and see/ I'm glad that God made Grandma/ Unrushed and young like me.

ಆಹಿತಾನಲರ ಅನುವಾದವು ಮೂಲದ ಸ್ವಾದವನ್ನೂ ಸಡಗರವನ್ನೂ ಉಳಿಸಿಕೊಂಡಿತ್ತೆಂಬ ಕಾರಣಕ್ಕೆ, ಅವರ ಹೆಸರು ಮತ್ತು ನಗುಮೊಗವೊಂದು ನನ್ನೊಳಗೆ ಬೆಚ್ಚಗೆ ಹಾಗೇ ಬಹಳಕಾಲ ಉಳಿದುಕೊಂಡಿತ್ತು. ಕಳೆದ ವರ್ಷದ ಪ್ರಥಮಾರ್ಧದಲ್ಲಿ ಅಮೆರಿಕಾ ಪ್ರವಾಸದಲ್ಲಿದ್ದಾಗ Elizabeth Whiteಎಂಬ ಅಮೆರಿಕಾದ ಕವಿಗಳೊಬ್ಬರ @55fakingnormal ಕುರಿತ ಬರಹವೊಂದನ್ನು ಓದುವ ಭಾಗ್ಯ ಸಿಕ್ಕಿತು. ಈ ಕವಯಿತ್ರಿಯು author, entrepreneur, aging solutions advocate ಆಗಿರುವರೆಂದೂ Walking with Grandma ಕವಿತೆಯನ್ನು ಬರೆದವರೆಂದೂ ಆ ಬರಹದಲ್ಲಿ ಸೂಚಿಸಲಾಗಿತ್ತು. ಥಟ್ಟನೆ ನನಗೆ ಆಹಿತಾನಲರ ನೆನಪಾಯಿತು. ಅವರು ಆ ದಿನಗಳಲ್ಲಿ ನಾನು ಅಲೆದಾಡುತ್ತಿದ್ದ ಊರುಗಳ ಸಮೀಪದಲ್ಲೆಲ್ಲೋ ಇರುವ, ನಮ್ಮ ಕೋಟ ಮೂಲದವರೆಂದು ತಿಳಿದಿರಲಿಲ್ಲ. ಆಹಿತಾನಲರೇ ಡಾ. ನಾಗ ಐತಾಳರೆಂದೂ, ನನ್ನ ಅಧ್ಯಾಪಕರಾಗಿದ್ದ ಮಧುಸೂದನ ಐತಾಳರ ಅಣ್ಣನೆಂದೂ ತಿಳಿದದ್ದು, ನಾನು ಊರಿಗೆ ಹಿಂದಿರುಗಿದ ನಂತರವೇ.

*

ಹರ್ತಟ್ಟು ನಾಗಪ್ಪಯ್ಯ ಐತಾಳರ ಮೊಮ್ಮಗ, ಎಚ್. ಕೃಷ್ಣದೇವ ಐತಾಳ್ ಮತ್ತು ಮೀನಾಕ್ಷಿಯಮ್ಮ ದಂಪತಿಗಳ ಸುಪುತ್ರ ನಾಗಪ್ಪ ಐತಾಳರು ಅರ್ಥಾತ್ ನಾಗ ಐತಾಳರು ಅರ್ಥಾತ್ ಡಾ. ಎಚ್. ಎನ್. ಐತಾಳರು ಅರ್ಥಾತ್ ಸನ್ಮಾನ್ಯ ಆಹಿತಾನಲರು, ಹುಟ್ಟಿದ್ದು ೧೫-೧೦-೧೯೩೨ ಶನಿವಾರ. ಶಾಲಿವಾಹನ ಶಕ ೧೮೫೪, ವಿಕ್ರಮ ಸಂವತ್ಸರ, ಅಶ್ವಿನಿ ನಕ್ಷತ್ರ, ಮೇಷ ರಾಶಿ. (೧೪ನೆಯ ತಾರೀಕು ಹುಣ್ಣಿಮೆಯಾಗಿತ್ತು. ೧೫ ಹುಣ್ಣಿಮೆ ಪಾಡ್ಯ.) ಶನಿವಾರ ಒಂದು ಶುಭದಿನವಲ್ಲ ಅಂತ ಅವರೊಂದು ಕಡೆ ಬರೆದುಕೊಂಡಿದ್ದಾರೆ. ಆದರೆ ಅವರು ಜನಿಸಿದ ಶನಿವಾರ ಶುಭದಿನವಾಗಿತ್ತು ಮಾತ್ರವಲ್ಲ; ಅಕ್ಟೋಬರ್ ೧೫, ೧೯೩೨ ಭಾರತದ ಏವಿಯೇಶನ್ ಇತಿಹಾಸದಲ್ಲಿ

ಸುವರ್ಣಾಕ್ಷರಗಳಿಂದ ಬರೆದಿಡುವ ದಿನವಾಗಿತ್ತು. ಟಾಟಾ ಏರ್ ಲೈನ್ಸ್ (ಈಗ ಅದು ಏರ್ ಇಂಡಿಯಾ) ತನ್ನ ಮೊದಲ ಫ್ಲೈಟ್ ಹಾರಿಸಿದ್ದು ನಾಗ ಐತಾಳರು ಜನಿಸಿದ ದಿನವೇ. (ಗಮನಿಸಿ. ಕಾಂಗ್ರೆಸ್/ಭಾಜಪ ಸರಕಾರಗಳು ತಮ್ಮೆಲ್ಲಾ misdemeanourಗಳ ಹೊರತಾಗಿಯೂ ಏರ್ ಇಂಡಿಯಾವನ್ನು ಮುಚ್ಚುವುದು ಸಾಧ್ಯವಾಗಿಲ್ಲ.)

ನಾಗ ಐತಾಳರ ಪ್ರಾಥಮಿಕ ಶಿಕ್ಷಣ ಕೋಟದಲ್ಲಿ. ಶಂಕರನಾರಾಯಣ ತುಂಗರು ಕನ್ನಡ ಕಲಿಸಿದ್ದರು. ಹೈಸ್ಕೂಲು ಶಿಕ್ಷಣ ಬೆಂಗಳೂರಿನ ಆರ್ಯ ವಿದ್ಯಾಶಾಲೆಯಲ್ಲಿ. ಬೆಂಗಳೂರಿನ ಸೈಂಟ್ ಜೋಸೆಫ್ ಕಾಲೇಜಿನಲ್ಲಿ ಬಿ.ಎಸ್ಸಿ. ವ್ಯಾಸಂಗ. ಬನಾರಸ್‌ನಲ್ಲಿ ಬಿ.ಫಾರ್ಮ್ ಪದವಿ; ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈಯನ್ಸ್‌ನಲ್ಲಿ ಬಯೋ ಕೆಮಿಸ್ಟ್ರಿಯಲ್ಲಿ ಎಂ.ಎಸ್ಸಿ. ಮತ್ತು ಪಿಎಚ್.ಡಿ. ಪದವಿ. ಒಂದಿಷ್ಟು ಕಾಲ ಇಂಡಿಯನ್ ಕೌನ್ಸಿಲ್ ಆಫ್ ಮೆಡಿಕಲ್ ರಿಸರ್ಚ್‌ನಲ್ಲಿ ಅಸಿಸ್ಟೆಂಟ್ ರಿಸರ್ಚ್ ಆಫೀಸರ್ ಆಗಿ ದುಡಿತ. ೧೯೬೯ರಲ್ಲಿ ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಅಮೆರಿಕಾಕ್ಕೆ. ಯೂನಿವರ್ಸಿಟಿ ಆಫ್ ಸದರ್ನ್ ಕ್ಯಾಲಿಫೋರ್ನಿಯಾದಲ್ಲಿ ರಿಸರ್ಚ್ ಅಸಿಸ್ಟೆಂಟ್ ಆಗಿ ಕೆಲಸ. ಬಯೋಕೆಮಿಸ್ಟ್ರಿಯಲ್ಲಿ ಹೆಚ್ಚಿನ ಅಧ್ಯಯನ ನಡೆಸಲು ೧೯೭೧ರಲ್ಲಿ ಕೆನಡಾಕ್ಕೆ. ೧೯೭೫ರಲ್ಲಿ ಅಮೆರಿಕಾಕ್ಕೆ ಹಿಂದಿರುಗಿ, ಶಿಕಾಗೋ ವಿಶ್ವವಿದ್ಯಾಲಯದಲ್ಲಿ ಸಂಶೋಧಕ ಪ್ರಾಧ್ಯಾಪಕರಾಗಿ ೨೬ ವರ್ಷಗಳ ಕಾಲ ಎಂದರೆ ೨೦೦೧ರವರೆಗೆ ದುಡಿಮೆ. ದೇಹದಲ್ಲಿ ಶಕ್ತಿ ಉತ್ಪನ್ನ ಮಾಡುವ ಅವಯವ (organ)ಗಳ ಕುರಿತು ಕೆಲಸ. ಈ ನಡುವೆ ಇವರ ೪೨ಕ್ಕೂ ಮಿಕ್ಕಿ ವೈಜ್ಞಾನಿಕ ಸಂಶೋಧನಾ ಪ್ರಬಂಧಗಳು ವಿವಿಧ journalಗಳಲ್ಲಿ ಪ್ರಕಟ. ೨೦೦೧ನಲ್ಲಿ ನಿವೃತ್ತಿ. ೨೦೦೨ರಲ್ಲಿ ಮಗಳ ಅಪೇಕ್ಷೆಯಂತೆ ಲಾಸ್ ಎಂಜಲೀಸಿಗೆ ಪ್ರಯಾಣ. ನಿವೃತ್ತರಾದ ಮೇಲೆ ಕನ್ನಡ ಬರವಣಿಗೆಯಲ್ಲಿ ಆಸಕ್ತಿ. ೮ ಸಂಪಾದಿತ ಕೃತಿ + ೧೦ ಸ್ವತಂತ್ರ ಕೃತಿಗಳ ರಚನೆ + ೧ ಜೀವರಸಾಯನ ವಿಜ್ಞಾನದ ಕುರಿತು ಕನ್ನಡದಲ್ಲಿ ಮೊತ್ತಮೊದಲೆಂಬ ಶ್ಲಾಘನೆಗೆ ಅರ್ಹವಾದ 'ಜೀವನ ರಹಸ್ಯ' ಎಂಬ ಕೃತಿರಚನೆ. ಅಮೆರಿಕಾದ ಸಮಾನ ಮನಸ್ಕರೊಂದಿಗೆ ಸೇರಿ, ಅಲ್ಲಿ ಕನ್ನಡವನ್ನು ಬಿತ್ತಿಬೆಳೆಯುವ ಸಾಂಘಿಕ ಚಟುವಟಿಕೆಗಳಲ್ಲಿ ನಿರಂತರ ನಿರತರು ಎಂಬ ವಿಶೇಷ ಕಾರಣಕ್ಕೆ ಅಭಿನಂದನಾರ್ಹರು.

ಶ್ರೀಯುತ ನಾಗ ಐತಾಳರ ವಿವಾಹವಾದದ್ದು ೧೯೬೦ರಲ್ಲಿ. (ಅವರ ವೈವಾಹಿಕ ಸಂಭ್ರಮದ ವಜ್ರಮಹೋತ್ಸವವನ್ನು ಆಚರಿಸಲು ಅವರ ಕುಟುಂಬಸ್ಥರಿಗೆ ನೆನಪಿಸಿಕೊಡುತ್ತಿದ್ದೇನಷ್ಟೇ.) ಅವರ ಪತ್ನಿ ಲಕ್ಷ್ಮಿ(ಪುಟ್ಟಮ್ಮ) ತೀರ್ಥಹಳ್ಳಿಯ ಮೇಳಿಗೆಯವರು. ಅನಂತಮೂರ್ತಿಯವರ ತಂಗಿಯ ಸಹಪಾಠಿ. ಅನಂತಮೂರ್ತಿ ನಾಗೈತಾಳರನ್ನು ಗುರುತಿಸುತ್ತಿದ್ದುದೇ 'ಪುಟ್ಟಮ್ಮನ ಗಂಡ' ಎಂದು. ಮೇಳಿಗೆಯ ಬಂಧುಗಳೂ ತಮ್ಮನ್ನು 'ಪುಟ್ಟಮ್ಮನ ಗಂಡ' ಎಂದೇ ಗುರುತಿಸುತ್ತಿದ್ದರೆನ್ನುವುದನ್ನು ನಾಗೈತಾಳರು ತಮ್ಮ ಆತ್ಮಚರಿತ್ರೆಯಲ್ಲಿ ತಮಾಶೆಯಾಗಿ ನೆನಪಿಸಿಕೊಂಡಿದ್ದಾರೆ.

ಮದುವೆಯಾದ ಹೊಸದರಲ್ಲೊಮ್ಮೆ ಮಾವನಮನೆಗೆ ಫೋನ್ ಮಾಡಿ ತಾವು ನಾಗ ಐತಾಳರೆಂದರೆ ಗುರುತು ಹಿಡಿಯದವರು, 'ಪುಟ್ಟಮ್ಮನ ಗಂಡ' ಎಂದ ಕೂಡಲೇ ಗುರುತುಹಿಡಿದರಂತೆ. 'ಅಂದಿನಿಂದ ನನ್ನ ಪರಿಚಯವನ್ನು ಹಾಗೇ ಮಾಡಿಕೊಳ್ಳಲು ಕಲಿತೆ' ಎಂದವರು ಬರೆದುಕೊಂಡಿದ್ದಾರೆ. (ಆ ಶ್ರೀರಾಮಚಂದ್ರನಿಗೇ ಹಾಗಾಗಿದೆಯಂತೆ. ರಾಮಾಯ ರಾಮಭದ್ರಾಯ ರಾಮಚಂದ್ರಾಯ ವೇಧಸೇ, ರಘುನಾಥಾಯ ನಾಥಾಯ ಸೀತಾಯಪತಯೇ ನಮಃ ಎಂಬ ಶ್ಲೋಕವನ್ನುಲ್ಲೇಖಿಸಿ ಭದ್ರಗಿರಿಯ ಕೇಶವ ದಾಸರು ತಮ್ಮ ಹರಿಕಥೆಯಲ್ಲಿ ಹೇಳುತ್ತಿದ್ದರು. ಅಯೋಧ್ಯಾರಾಮನನ್ನು ತಂದೆಯಾದ ದಶರಥ ಮಹಾರಾಜನು ರಾಮನೆಂದೂ, ತಾಯಿ ಕೌಸಲ್ಯೆಯು ರಾಮಭದ್ರನೆಂದೂ, ಕೈಕೇಯಿಯು ರಾಮಚಂದ್ರನೆಂದೂ, ವಶಿಷ್ಠರು ವೇಧಸೇ ಎಂದೂ, ಅಯೋಧ್ಯೆಯ ಜನರು ರಘುನಾಥನೆಂದೂ, ಸೀತೆಯು ನಾಥ ಎಂದೂ ಕರೆಯುತ್ತಿದ್ದರೆ, ಮಿಥಿಲೆಯ ಜನ ಮಾತ್ರ 'ಸೀತಾಯ ಪತಿ' (ಸೀತೆಯ ಗಂಡ) ಎಂದೇ ಗುರುತಿಸುತ್ತಿದ್ದರಂತೆ. ಪತ್ನಿಯ ಹೆಸರಿನಿಂದ ಹೀಗೆ ಗುರುತಿಸಲ್ಪಡುವುದು ಪತಿಯ ಭಾಗ್ಯವೆಂಬ ನಂಬಿಕೆಯೊಂದಿದೆ. ಪುಟ್ಟಮ್ಮನ ಗಂಡ ಎಂದು ಗುರುತಿಸಲ್ಪಡುವುದೂ ಒಂದು ಭಾಗ್ಯ.)

ಇವರಿಗೆ ಇಬ್ಬರು ಮಕ್ಕಳು – ಅರವಿಂದ, ಅನುರಾಧ. ಅರವಿಂದ ಲಾ ಕಲಿತು ವಕೀಲನಾಗಿದ್ದಾರೆ. ಅನುರಾಧ ಮನಃಶಾಸ್ತ್ರದಲ್ಲಿ ಡಾಕ್ಟರೇಟ್ ಪದವಿ ಪಡೆದಿದ್ದಾರೆ.

ನಾಗ ಐತಾಳರು ಅನುವಾದಿಸಿದ ಒಂದು ಕವಿತೆಯ ಬಗ್ಗೆ ಹೇಳಿದೆನಷ್ಟೆ? ಅವರು ಸ್ವತಂತ್ರ ಕವಿತೆಗಳನ್ನೂ ಬರೆದಿದ್ದಾರೆ. ಅವರ ಎಲ್ಲ ಕವನಗಳನ್ನು ಸಂಗ್ರಹಿಸಿ 'ನಾನೂ ಕವನ ಬರೆದೆ' ಎಂಬ ಕವನ ಸಂಕಲನವನ್ನು ೨೦೧೯ರಲ್ಲಿ ಪ್ರಕಟಿಸಿದ್ದಾರೆ.

ನಾಗ ಐತಾಳರ ಸ್ಫೂರ್ತಿ ದೇವತೆ ಈ ಪುಟ್ಟಮ್ಮ. ಲಕ್ಷ್ಮಿಯಮ್ಮ. ಅಯೋವಾ ಯೂನಿವರ್ಸಿಟಿಯ ಕನ್ನಡ ಸಾಹಿತ್ಯ ಗೋಷ್ಠಿಯಲ್ಲೊಮ್ಮೆ ನಾಗೈತಾಳರು ಪತ್ನಿಯ ಕುರಿತೇ ಕವಿತೆ ಓದಿದ್ದರು. ಆ ಕವನದ ಪುಟ್ಟ ಭಾಗ ಹೀಗಿದೆ:

ಮಡದಿಯೊಬ್ಬಳು, ಭಾಗ್ಯದ ಲಕ್ಷ್ಮಿ, ಚಿನ್ನದ ಪುಟ
ಪಡೆದೆನು ಮುನ್ನಿ–ಪಾಪಣ್ಣರ ಸಂತಾನ ಸುಖ
ಬಡವಾಗದೆ ಬದುಕು ಸಾಗುತ ಬಂದರೂ
ಕಾಡುವುದೇತಕೆ ಕೊನೆಗೂ ಅರವತ್ತಾಯ್ತೆಂದು

*

ಅಮ್ಮ ಕೊಟ್ಟ ಬಿಸಿ ಹುಳಿಯನ್ನದ ಕೈತುತ್ತಿನ
ಘಮ್ಮನೆ ಪರಿಮಳವಿನ್ನೂ ಕೈಯಲ್ಲೆ ಉಳಿದಿದೆ[೧]
ಚಿನ್ನಳು ಹಾಕಿದ ವರಮಾಲೆಯ ಹೂಕಂಪಿನ
ಗಮಗಮವಿನ್ನೂ ಕೊರಳಲಿ ಸೂಸುತಿದೆ.[೨]

ಆಮೇಲೆ ಸೊಸೆಯ ಬಗ್ಗೆಯೂ ಒಂದು ಕವಿತೆಯನ್ನು ಬರೆದ ಅಪರೂಪದ ಮಾವನಾದರು. ಸೊಸೆಯ ಹೆಸರು ಸೆಪಿಡೆ. ಗೂಗಲ್ಲಿನಲ್ಲಿ ಸೆಪಿಡೆ ಪದದ ಅರ್ಥ

ಹೀಗಿದೆ: Sepideh is a female Persian name that means the break of dawn, morning twilight, or first lights in the sky appearing before sunrise..ಎಂದರೆ ಉಷೆ. ಅವರದನ್ನು ಹಾಗೆಯೇ ಅರ್ಥೈಸಿಕೊಂಡು ಈ ಕವಿತೆಯನ್ನು ಬರೆದರು.

ಎಂದೂ ನೋಡದ ಹಿಂದೂವಲ್ಲದ ಮುಗ್ಧೆ
ಹೆಸರು ಸೆಪಿಡೆ, ತಾರೆಯವಳು
ಉಷೆಯಂತೆ ಮೂಡಿಬಂದಳು
ಬೆಸೆದು ಬೆರೆತಳು ನಮ್ಮ ಕುಲಕೆ
ಕೈಕೈ ಹಿಡಿದು ಅಗ್ನಿಸಾಕ್ಷಿಯಲಿ
ಏಳುಹೆಜ್ಜೆಯ ತುಳಿದು ಶಪಥ ತೊಟ್ಟುಃ
ಬಾಳ ಹರಸಲು ಬೇಡಿಕೊಳ್ಳುವ
ಕರುಳಕುಡಿ ಕಂದ ಅರವಿಂದ
ಬಂದು ಸೇರಿದ ಸೊಸೆ ಸೆಪಿಡೆ
ಏನೆಂದು ಹರಸಲಿ ಈ ಪ್ರೇಮಿಗಳನು.

ಬದುಕಿನ ಸುಖ–ದುಃಖಗಳ, ಏಳು ಬೀಳುಗಳ ಕುರಿತೂ ಕವಿತೆ ಬರೆದರು.

ಬಾಳದಾರಿಯಲಿ ಏರು–ಪೇರುಗಳು
ಮುಳ್ಳು–ಕಲ್ಲುಗಳು ಅಲ್ಲಲ್ಲಿ
ಸಾರಿ, ಸವರಿ, ಸಮತೋಲನದ
ದಾರಿ ತುಳಿಯುವುದೇ ಬಾಳಿನ ಗೆಲವು.

*

ಕೋಟ ಬಿಟ್ಟ ಸಾಹಿತ್ಯಾಸಕ್ತರನ್ನು ನಿರಂತರವಾಗಿ ಕಾಡುವ ಶಿವರಾಮ ಕಾರಂತರು ನಾಗ ಐತಾಳರನ್ನೂ ಬಿಡಲಿಲ್ಲ. ಹಾಗೆ ನೆನಪಿಸಿಕೊಂಡರೆ, ನಾಗ ಐತಾಳರನ್ನು ನಿವೃತ್ತಿಯ ನಂತರ ಸಾಹಿತ್ಯದ ಪರಿಧಿಯೊಂದಕ್ಕೆ ಕರೆತಂದದ್ದೂ ಕಾರಂತರೇ. ನಾಗ ಐತಾಳರು ಸಂಪಾದಿಸಿದ ಮೊದಲ ಕೃತಿ – ಕಾರಂತ ಚಿಂತನ – ಕಡಲಾಚೆ ಕನ್ನಡಿಗರಿಂದ. ೨೦೦೦ರಲ್ಲಿ ಸಾಗರದ ಅಕ್ಷರ ಪ್ರಕಾಶನ ಪ್ರಕಟಿಸಿದೆ. ೧೯೯೭ರ ಡಿಸೆಂಬರ್ ೯ರಂದು ಶಿವರಾಮ ಕಾರಂತರು ನಿಧನರಾದ ಒಂದಿಷ್ಟು ಸಮಯದ ನಂತರ ಐತಾಳರ ಮನೆಯಲ್ಲಿ ಸೇರಿದ ಒಂದು ಕನ್ನಡಿಗರ ಚಿಕ್ಕ ಗುಂಪು, ಕಾರಂತರ ಸಾಹಿತ್ಯ ಮತ್ತು ಸಾಂಸ್ಕೃತಿಕ ಕೊಡುಗೆಯನ್ನು ನೆನಪು ಮಾಡಿಕೊಂಡಿತಂತೆ. ಆಗ ಅಲ್ಲಿದ್ದ ಡಿ. ಆರ್. ನಾಗರಾಜರ ಸಲಹೆಯಂತೆ, ಈ ಮಾತುಕತೆ 'ಕಾರಂತ ಚಿಂತನ' ಎಂಬ ಹೆಸರಿನಲ್ಲಿ ದಾಖಲಾಯಿತು.

ಈ ಪುಸ್ತಕದಲ್ಲಿ ಎರಡು ಭಾಗಗಳಿದ್ದು, ಮೊದಲ ಭಾಗದ ೧೩ ಲೇಖನಗಳು ಕಾರಂತರ ವ್ಯಕ್ತಿತ್ವ ಮತ್ತು ನಾಡಿನ ಮೇಲೆ ಅವರ ಪ್ರಭಾವಗಳ ಕುರಿತಿದ್ದರೆ, ಎರಡನೆಯ ಭಾಗದಲ್ಲಿ ಕಾರಂತರ 'ಮರಳಿ ಮಣ್ಣಿಗೆ', 'ಚೋಮನ ದುಡಿ', 'ಅಳಿದ ಮೇಲೆ', 'ಮೂಕಜ್ಜಿಯ ಕನಸುಗಳು', 'ಕುಡಿಯರ ಕೂಸು' ಮೊದಲಾದ ಹದಿನೈದು ಕಾದಂಬರಿಗಳ

ಅವಲೋಕನಗಳಿವೆ. ಯು. ಆರ್. ಅನಂತಮೂರ್ತಿಯವರ ಮುನ್ನುಡಿಯೂ ಇದೆ. ಪ್ರಸ್ತಾವನೆ ಬರೆದಿರುವ ನಾಗ ಐತಾಳರು 'ಕಾರಂತರು ದಕ್ಷಿಣ ಕನ್ನಡದ ಕಡಲತಡಿಯಲ್ಲಿ ನಿಂತು ನಮ್ಮ ಬದುಕಿನ ಗಹನವಾದ ಪ್ರಶ್ನೆಗಳನ್ನು ತಮ್ಮ ಕೃತಿಗಳಲ್ಲಿ ನಿರೂಪಿಸಿ ತೋರಿಸಿರುವುದು ಹೊರನಾಡ ಈ ಕನ್ನಡಿಗರನ್ನು ಬೆರಗುಗೊಳಿಸಿದೆ. ಈ ಅಚ್ಚರಿಯಲ್ಲಿ ಹುಟ್ಟಿದ ಅಭಿಮಾನವೇ ಈ ಕೃತಿಯ ರಚನೆಗೆ ನಿಜವಾದ ಕಾರಣ. ವ್ಯಕ್ತಿಯಾಗಿಯೂ ಕಾರಂತರು ನಮ್ಮನ್ನು ಪ್ರಭಾವಿಸಿದ್ದಾರೆ. ಆದ್ದರಿಂದ ಈ ಲೇಖನಗಳು ಕಾರಂತರ ವ್ಯಕ್ತಿತ್ವದ ಪರಾಮರ್ಶೆಯೂ ಆಗಿವೆ'. ಎಂದಿದ್ದಾರೆ.

'ಬೇಂದ್ರೆ ಅಂದ್ರೆ ... ಸಾಹಿತ್ಯದ ವಿರಾಟ್ ದರ್ಶನ' ಇವರು ಸಂಪಾದಿಸಿದ ಇನ್ನೊಂದು ಮುಖ್ಯ ಕೃತಿ. ಅಭಿನವ ಪ್ರಕಟಿಸಿದ ಈ ಕೃತಿಯಲ್ಲಿ ಬೇಂದ್ರೆಯವರ ಸಾಹಿತ್ಯವನ್ನು ಅರ್ಥಮಾಡಿಕೊಳ್ಳಲೆತ್ನಿಸುವ ಮತ್ತು ಅರ್ಥಮಾಡಿಕೊಡಬಲ್ಲ ಹಲವು ಲೇಖಕರ ಮಹತ್ವದ ಬರಹಗಳು- ವಿಮರ್ಶಾ ಲೇಖನಗಳಿವೆ.

ಇದೇ ಸರಣಿಯಲ್ಲಿ, ಕನ್ನಡದ ಪ್ರಮುಖ ಬರಹಗಾರರ ಕುರಿತು ಅಮೆರಿಕನ್ನಡಿಗರ ಸಂವೇದನೆಗಳ ದಾಖಲೀಕರಣದಂತಿರುವ ಮತ್ತೂ ಹಲವು ಕೃತಿಗಳನ್ನು ನಾಗ ಐತಾಳರು ಸಂಪಾದಿಸಿಕೊಟ್ಟಿದ್ದಿದೆ. 'ಕುವೆಂಪು ಸಾಹಿತ್ಯ ಸಮೀಕ್ಷೆ' (೨೦೦೪), 'ಅನಂತ ಮುಖದಮೂರ್ತಿ' (೨೦೦೯), 'ಯದುಗಿರಿಯ ಬೆಳಕು' (ಪುತಿನರನ್ನು ಕುರಿತು ೨೦೦೬), 'ಕನ್ನಡದಮರಚೇತನ (ಮಾಸ್ತಿಯವರನ್ನು ಕುರಿತು ೨೦೦೭), 'ಗೆಲುವಿನ ಚಿಲುಮೆ ರಾಜರತ್ನಂ' (೨೦೦೮). ಇವುಗಳಲ್ಲಿ ಮೊದಲ ಕೃತಿಯನ್ನು ವಸಂತ ಪ್ರಕಾಶನ ಪ್ರಕಟಿಸಿದ್ದರೆ, ಉಳಿದವುಗಳ ಪ್ರಕಾಶಕರು ಅಭಿನವ ಮತ್ತು ಕ್ಯಾಲಿಫೋರ್ನಿಯಾದ ಸಾಹಿತ್ಯಾಂಜಲಿ ಕನ್ನಡಕೂಟ. ಜಿ. ಎಸ್. ಶಿವರುದ್ರಪ್ಪನವರ ವ್ಯಕ್ತಿತ್ವದ ಕೆಲನೋಟಗಳ ದಾಖಲೀಕರಣದಂತಿರುವ 'ನೆನಪಿನ ಓಣಿಯೊಳಗೆ ಮಿನುಗುತಾವ ದೀಪ' ಮತ್ತೊಂದು ಗಮನಾರ್ಹ ಪ್ರಕಟಣೆ. ಜಿ.ಎಸ್.ಎಸ್ ಎಂದರೆ ನಾಗ ಐತಾಳರಿಗೆ ವಿಶೇಷ ಪ್ರೀತಿ ಮತ್ತು ಅಭಿಮಾನ. ನಾಗ ಐತಾಳರ 'ಕಲಬೆರಕೆ' ಎಂಬ ಪ್ರಬಂಧ ಸಂಕಲನದಲ್ಲಿ 'ಶಿವರುದ್ರಪ್ಪನವರೊಂದಿಗೆ ರಸನಿಮಿಷಗಳು' ಮತ್ತು 'ಸಾಹಿತ್ಯ ಸ್ಪಂದನ' ಎಂಬ ವಿಮರ್ಶಾ ಲೇಖನಗಳ ಸಂಕಲನದಲ್ಲಿ 'ಜಿ ಎಸ್ ಎಸ್ ಅವರನ್ನು ನೆನೆದು' ಎಂಬ ಮನಮುಟ್ಟುವ ಲೇಖನಗಳಿವೆ. ಈ ಕವಿಯ 'ಕಾಣದ ಕಡಲಿಗೆ', 'ಎದೆ ತುಂಬಿ ಹಾಡುವೆನು' ಮೊದಲಾದ ಕೆಲವು ಭಾವಗೀತೆಗಳ ಬಗ್ಗೆ ಐತಾಳರು ಬರೆದಿರುವುದು ತತ್ಸಂಬಂಧಿತ ಅತ್ಯುತ್ತಮ ಸಹೃದಯಿ ವಿಮರ್ಶೆಗಳಾಗಿವೆ. ಅಲ್ಲಿ ವ್ಯಕ್ತಿಚಿತ್ರಣಗಳು ಸಾಹಿತ್ಯಾರಾಧನೆಯ ಆಯಾಮವನ್ನು ತೊಡುತ್ತವೆ. ಜಿ.ಎಸ್.ಎಸ್ ಅವರೂ ನಾಗ ಐತಾಳರ ಕುರಿತ ತಮ್ಮ ಆದರ ವಿಶ್ವಾಸಗಳನ್ನು ಕುವೆಂಪು ಸಾಹಿತ್ಯ ಸಮೀಕ್ಷೆ (೨೦೦೪)ಯ ಮುನ್ನುಡಿಯಲ್ಲಿ ದಾಖಲಿಸಿದ್ದಿದೆ.

ನಾಗ ಐತಾಳರು ಸೃಜಿಸಿದ್ದ ವ್ಯಕ್ತಿಚಿತ್ರಣಗಳನ್ನು ಕಂಡಾಗ ಬೇರೊಂದು ಸಂದರ್ಭದಲ್ಲಿ ಅವರೇ ಹೇಳಿದ್ದ ಮಾತೊಂದು ನೆನಪಾಗುತ್ತದೆ – 'ಅಮೆರಿಕಾದ ವ್ಯವಹಾರಗಳಿಗೆ

ಹೊಂದಿಕೊಂಡು ನಮ್ಮ ಬಾಹ್ಯ ದೃಷ್ಟಿಯು ಸ್ವಲ್ಪ ಬೇರೆಯಾಗಿ ಕಂಡರೂ, ಅಂತರಂಗದಲ್ಲಿ ಇಂದಿಗೂ, ದೇಶಬಿಟ್ಟು ಎರಡು ಮೂರು ದಶಕಗಳಾದರೂ, ನಮ್ಮ ಕನ್ನಡತನವನ್ನು ಉಳಿಸಿಕೊಂಡೇ ಬಂದಿದ್ದೇವೆ'.

*

ನಾಗ ಐತಾಳರು ರಚಿಸಿದ ಸೃಜನಶೀಲ ಸಾಹಿತ್ಯಕ್ಕೆ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಮಹತ್ವವಿದೆ.

ಅವರ ಹದಿಮೂರು ಪ್ರಬಂಧಗಳ ಸಂಕಲನ 'ಕಲಬೆರಿಕೆ'. ಇದರಲ್ಲಿ ಅವರು ತಮ್ಮ ಹೆಸರು ನಾಗ ಐತಾಳ ಎನ್ನುವುದು ಆಹಿತಾನಲ ಆದ ಪ್ರಸಂಗವನ್ನೊಳಗೊಂಡ 'ಹೆಸರಿನ ಮಹಾತ್ಮೆ' ಕುರಿತ ಲೇಖನವೊಂದಿದೆ. ಗೋವಿನ ಹಾಡು, ಕೋಟದ ನೆನಪುಗಳು, ಶಿವರುದ್ರಪ್ಪನವರೊಂದಿಗಿನ ರಸನಿಮಿಷಗಳು ಮೊದಲಾದ ಲೇಖನಗಳೂ ಇವೆ. ಇವೆಲ್ಲ ಲಲಿತ ಪ್ರಬಂಧಗಳ ಧಾಟಿಯಲ್ಲಿರುವ ಬರಹಗಳು. ಸ್ವಲ್ಪ ಖೇದ, ಸ್ವಲ್ಪ ಲಘು ಹಾಸ್ಯ. ಜೀವನೋತ್ಸಾಹ ಇಲ್ಲಿನ ಬರಹಗಳ ಜೀವಧಾತು. ಮನೋಹರ ಗ್ರಂಥಮಾಲೆಯ ಪ್ರಕಟಣೆ ಇದು.

'ಒಂದಾನೊಂದು ಕಾಲದಲ್ಲಿ : ಕಟ್ಟುಕಥೆಗಳು' – ಅಜ್ಜ ಅಜ್ಜಿಯರು ತಮ್ಮ ಮೊಮ್ಮಕ್ಕಳಿಗೆ ಹೇಳಬಹುದಾದ ಕಥೆಗಳ ಸಂಕಲನ. 'ಇಲ್ಲಿನ ಕಥೆಗಳೆಲ್ಲ ತಾವು ಇನ್ನೊಬ್ಬರಿಂದ ಕೇಳಿದವು' ಎಂದಿದ್ದಾರೆ ಐತಾಳರು. ಇಲ್ಲಿ ಕೋಟದ ಸುತ್ತಮುತ್ತಲ ಹಳ್ಳಿಗಳಲ್ಲಿ ನಾವೆಲ್ಲರೂ ಬಾಲ್ಯದಲ್ಲಿ ಕೇಳಿರಬಹುದಾದ, ಈಗಲೂ ಓದಬಹುದಾದ ೭೭ ಅಜ್ಜಿ ಕಥೆಗಳಿವೆ. ವಿಶ್ವೇಶ್ವರ ಭಟ್ಟರ ಲವಲವಿಕೆಯ ಮುನ್ನುಡಿಯಿದೆ. ಇಲ್ಲಿಯ ಕಥೆಗಳು ಹೇಗಿವೆಯೆಂದರೆ – ಕೊನೆಯಲ್ಲೊಂದು 'ಮುಗಿಯದ ಗುಬ್ಬಚ್ಚಿ ಕಥೆ'ಯಿದೆಯಲ್ಲ, ಅದನ್ನು ಓದಬೇಕು.

ಅಜ್ಜಿ ಹೇಳುವ ಕಥೆಗಳೆಲ್ಲ ಚಿಕ್ಕದಾಗಿವೆ. ತನಗೆ ಉದ್ದದ ಕಥೆ ಬೇಕು ಎಂದು ಹೇಳಿದ ಮಗುವಿಗೆ ಅಜ್ಜಿ ಹೇಳುವ ದೀರ್ಘ ಕಥೆಯಿದು.'ಒಂದೂರಲ್ಲಿ ಒಂದು ಗುಬ್ಬಚ್ಚಿ ವಾಸವಾಗಿತ್ತು. ಅದು ಪ್ರತಿದಿನ ಒಬ್ಬ ಸಾಹುಕಾರನ ಮನೆಯ ಕಣಜದಲ್ಲಿ ಶೇಖರಿಸಿದ ಭತ್ತದ ಕಾಳನ್ನು ತಂದು ತಿನ್ನುತ್ತಿತ್ತು. ಒಂದು ದಿನ ಅದು ಒಂದು ಭತ್ತದ ಕಾಳನ್ನು ಕೊಕ್ಕಿನಿಂದ ಕಚ್ಚಿ ಗೂಡಿಗೆ ಹಾರಿ ಹೋಯಿತು'.

'ಸರಿ. ಮುಂದೆ?'

'ಮತ್ತೊಮ್ಮೆ ಹಾರಿಬಂದು ಕಣಜದಲ್ಲಿದ್ದ ಇನ್ನೊಂದು ಕಾಳನ್ನು ಕಚ್ಚಿ ಗೂಡಿಗೆ ಹಾರಿ ಹೋಯ್ತು'.

'ಆ ಮೇಲೆ..?'

'ಇನ್ನೊಂದು ಸಾರಿ ಬಂದು ಕಣಜದ ಇನ್ನೊಂದು ಭತ್ತದ ಕಾಳು ಕಚ್ಚಿ ಗೂಡು ಸೇರಿ ಅದನ್ನು ತಿಂದಿತು'.

'ಅದು ಸರಿ. ಮುಂದೇನಾಯ್ತು..?'

'ಮಗು ತಾಳ್ಮೆಯಿಂದಿರು. ಗುಬ್ಬಕ್ಕ ಪುನಃ ಹಾರಿ ಬಂದು ಮತ್ತೊಂದು ಕಾಳನ್ನು ಕಚ್ಚಿ ಗೂಡನ್ನು ಸೇರಿತು'.

ಹೀಗೆ ಕಥೆ ಮುಂದುವರಿಯುತ್ತಲೇ ಇತ್ತು. ಕಣಜದಲ್ಲಿ ಲೆಕ್ಕವಿಲ್ಲದಷ್ಟು ಭತ್ತದ ಕಾಳುಗಳಿದ್ದವಲ್ಲವೆ? ಅವೆಲ್ಲವನ್ನೂ ಗುಬ್ಬಕ್ಕ ಕಚ್ಚಿ ಗೂಡು ಸೇರುವುದರೊಳಗೆ ಮಗುವಿಗೂ ನಿದ್ರೆ ಬಂದಿತ್ತು. ಕತೆ ಹೇಳುವ ಅಜ್ಜಿಗೂ ನಿದ್ರೆ ಬಂದಿತ್ತು. ಆದರೆ ಕತೆ ಮಾತ್ರ ಮುಗಿದಿರಲಿಲ್ಲ. ಬೆಳಿಗ್ಗೆ ಎದ್ದಾಗ ಆ ಮಗು ಪುನಃ 'ಅಜ್ಜಿ, ಗುಬ್ಬಚ್ಚಿ ಕತೆ ಮುಂದೇನಾಯ್ತು?' ಎಂದು ಕೇಳಿತು.

ಅಜ್ಜಿ 'ಗುಬ್ಬಚ್ಚಿ ಇನ್ನೊಂದು ಕಾಳನ್ನು ಕಚ್ಚಿಕೊಂಡು ಗೂಡು ಸೇರಿತು' ಎಂದು ಮುಗಿಯದ ಕತೆಯನ್ನು ಮುಂದುವರಿಸಿದಳು. ಕತೆ ಇನ್ನೂ ಮುಗಿದಿರಲಿಲ್ಲ ....

'ಕಾದೇ ಇರುವಳು ರಾಧೆ' – ನಾಗ ಐತಾಳರ ಕಿರು ಕಾದಂಬರಿ. ಭಾಗವತದಲ್ಲಿ ಕಾಣಸಿಗದ, ಬ್ರಹ್ಮವೈವರ್ತ ಪುರಾಣದಲ್ಲಿ ಇದೆಯೆಂದು ಕೆಲವರು ಹೇಳುವ, ಸ್ನೇಹಿತರೋ ಪ್ರೇಮಿಗಳೋ ಆಗಿದ್ದ ಕೃಷ್ಣ ರಾಧೆಯರು ಜಯದೇವನ ಗೀತಗೋವಿಂದದಲ್ಲಿ ಅಸದೃಶಪ್ರೀತಿಗೆ ರೂಪಕವಾಗಿಬಿಟ್ಟರು. ಕೃಷ್ಣ ಬೆಳೆದು ದೊಡ್ಡವನಾದ ಬಳಿಕ ಗೋಕುಲವನ್ನು ತೊರೆದು ಮಥುರೆಗೆ ಹೋದನೆಂದೂ ಅಲ್ಲಿಂದ ಮುಂದೆ ಕೃಷ್ಣನ ಬದುಕಲ್ಲಿ ರಾಧೆ ಕಾಣಿಸಲಿಲ್ಲವೆಂದೂ ಕಥೆಯಿದೆ. ಪುತಿನ ಅವರ 'ಗೋಕುಲ ನಿರ್ಗಮನ' ಈ ತೊರೆಯುವಿಕೆಯ ಮನೋಹರ ಗೀತರೂಪಕ. ಗೋಕುಲ ನಿರ್ಗಮನದ ಮುನ್ನಿನ ರಾಧಾಕೃಷ್ಣರ ಸರಸ ಸಲ್ಲಾಪದ ಕಥೆ ಐತಾಳರನ್ನು ಎಷ್ಟು ಕಾಡುತ್ತಿತ್ತು ಎನ್ನುವುದರ ಕುರುಹು 'ಯದುಗಿರಿಯ ಬೆಳಕು'ದಲ್ಲಿ ಕಾಣಿಸಿದ್ದು ವಿಸ್ತಾರವಾಗಿ ಇಲ್ಲಿ ಕಿರು ಕಾದಂಬರಿಯಾಗಿದೆ. ಇಲ್ಲಿನ ಕಥೆಯಲ್ಲಿ ಕೃಷ್ಣ ರಾಧೆಯ ಹದಿಹರೆಯದ ಮುಗ್ಧ ಪ್ರೀತಿ, ವಿರಹದ ಅಳಲು ಕವಿತೆಯ ಬಂಧದಲ್ಲಿನ ಕಟ್ಟೋಣವಾಗಿದೆ.

'ದೂರ ತೀರದಿಂದ ಹರಿದು ಬಂದ ಕಥೆಗಳು' ನಾಗ ಐತಾಳರು ಬರೆದ ಒಂಬತ್ತು ಕಥೆಗಳ ಕಥಾಸಂಕಲನ. ಇವರ ಕಥೆಗಳಲ್ಲಿ ಸಾಮಾನ್ಯವಾಗಿ ವರ್ತಮಾನದೊಂದಿಗೆ ಭೂತದ ಮುಖಾಮುಖಿ ಎನ್ನುವಂತಹದು ಅಯಾಚಿತವಾಗಿ ಹಳೆಯ ಮತ್ತು ಹೊಸ ಮೌಲ್ಯಗಳ ಮುಖಾಮುಖಿಯೂ ಆಗಿರುತ್ತದೆ. ಈ ಮುಖಾಮುಖಿ ಮೌಲ್ಯಗಳದ್ದೋ, ಸಂಪ್ರದಾಯಗಳದ್ದೋ ಅಥವಾ ಬರಿದೇ ರೂಢಿಸಿಕೊಂಡು ಬಂದ ಬದುಕುವ ಕ್ರಮದ್ದೋ ಎಂದಷ್ಟೇ ಆಹಿತಾನಲರು ವಿಶ್ಲೇಷಿಸುವುದಿಲ್ಲ. ಹೇಗೆ ಬದುಕಿದರೆ, ಹೇಗೆ ಯೋಚಿಸಿದರೆ, ಬದುಕು ಚೆನ್ನಾಗಿರುತ್ತದೆ ಎನ್ನುವುದೂ ಅವರ ಬರಹದ ಗಮ್ಯವಾಗಿರುತ್ತದೆ.

ಉದಾಹರಣೆಗೆ ಗಮನಿಸಬಹುದಾದ ಕಥೆ 'ಮೆಲಿಸ್ಸಾಳ ಮನೋವೇದನೆ'. ಭಾರತೀಯ ಹುಡುಗಿಯನ್ನು ಸೊಸೆಯಾಗಿ ಸ್ವೀಕರಿಸಲಾಗದ ಅತ್ತೆ ಮೆಲಿಸ್ಸಾ ಮತ್ತು ಆಕೆಯನ್ನು ಗೌರವಿಸುವ ಭಾರತ ಮೂಲದ ಸೊಸೆ ಮೇಘನಾ – ಎರಡು ಪಾತ್ರಗಳ ಮುಖಾಮುಖಿಯಷ್ಟೇ ಇಲ್ಲಿನ ಕಥೆ ಎಂದುಕೊಂಡರೆ, ಮೆಲಿಸ್ಸಾಳ ಮರಣದ ನಂತರ ಆಕೆಯ ಡೈರಿ ಓದುಗರ ಯೋಚನಾಕ್ರಮಕ್ಕೆ ಹೊಸ ಆಯಾಮ ಕೊಡುತ್ತದೆ. ತಮ್ಮ ಪರಿಚಯದ ಕನ್ನಡಿಗರೊಬ್ಬರು ಒಬ್ಬ ಅಮೆರಿಕಾದ ತರುಣಿಯನ್ನು ಮದುವೆಯಾದ ಸಂಗತಿಯೊಂದನ್ನು ಆಧರಿಸಿ ಬರೆದ ಕಥೆಯಿದೆಂದು ಅವರು ಹೇಳಿಕೊಂಡದ್ದಿದೆ. ಇದರೊಂದಿಗೆ ಹೋಲಿಸಿ ಓದಬೇಕಾದ ಕಥೆ 'ಮಿಣ್ಣಿ, ಹಣ್ಣಿ, ನಾಗು'. ತಂದೆಯ ಇಚ್ಛೆಗೆ ವಿರುದ್ಧವಾಗಿ ಮದುವೆಯಾದ ನಾಗು ಮತ್ತು ಆಕೆಯ ಈ ತಪ್ಪನ್ನು ಕೊನೆಯತನಕ ಒಪ್ಪಿಕೊಳ್ಳದ ತಂದೆ ಮಯ್ಯರು – ಇವರು ನಂಬಿಕೊಂಡುಬಂದ ಸಂಸ್ಕಾರ ನಾವು ಊಹಿಸಿದಷ್ಟು ಸಣ್ಣದಿರಲಿಕ್ಕಿಲ್ಲ ಎಂಬಲ್ಲಿ ಕಥೆಯ ಶೃಂಗ. 'ರಮ್ಮಿ ಎಂಡ್ ಶೋ' ದಲ್ಲಿ, ಎರಡು ಸಂಪೂರ್ಣ ವಿಭಿನ್ನ ವ್ಯಕ್ತಿತ್ವಗಳನ್ನು ಹೊಂದಿದ ನಿರೂಪಕ ಮತ್ತು ವೆಂಕೋಬರಾಯರ ಸಂವಹನ ದುರ್ಲಭವಾಗುವ, ನಾಲ್ಕು ಬಾರಿ ಅವಕಾಶ ಬಂದರೂ ಭೇಟಿ ತಪ್ಪಿಹೋಗುವ ಮತ್ತು ಕೊನೆಯ ಭೇಟಿಯಲ್ಲಿ ಅಪರಿಚಿತನ ಸಾವನ್ನು ಅನಿವಾಸಿಗಳ ತಳಮಳದ ಒಂದು ಸಂಕೇತದ ಹಾಗೆ ಬಿಟ್ಟುಕೊಡುವ ಕಥೆಯಿದೆ. 'ಹಾಗಲಕಾಯಿ ಪಲ್ಯ', 'ಮೂಕವೇದನೆ', 'ಸೇತುಬಂಧನ' ಕಥೆಗಳಲ್ಲಿ ಕಳೆದುಕೊಂಡ ಸಂಬಂಧಗಳ ವಿವರಗಳಿವೆ. ಐತಾಳರು ತಮ್ಮ ತಮ್ಮ, ವಾಸುದೇವ ಕಥೆ ಬರೆಯದಿದ್ದರೂ ಕಥೆ ಹೇಳುವುದರಲ್ಲಿ ಎಕ್ಸ್‌ಪರ್ಟ್ ಎನ್ನುತ್ತಾ, ಆತ ಹೇಳಿದ್ದ ಕಥೆಯೊಂದು ತಮ್ಮ 'ಮೂಕವೇದನೆ' ಕಥೆಗೆ ಹಿನ್ನೆಲೆಯೊದಗಿಸಿದ ಕುತೂಹಲಕಾರಿ ಸಂಗತಿಯನ್ನು ಹೇಳಿಕೊಂಡಿದ್ದಾರೆ. ವಾಸುದೇವನಗೆ ಜ್ಞಾಪಕವಿರಲು ಸಾಧ್ಯವೇ ಇಲ್ಲದ ಸಂಗತಿಗಳನ್ನು ಆತ ಕಣ್ಣಿಗೆ ಕಟ್ಟುವ ವಿವರಿಸುತ್ತಿದ್ದ ದೃಶ್ಯವನ್ನು ನಾಗೈತಾಳರು ವಿವರಿಸುವುದೇ ಒಂದು Magic realismದಂತಿದೆ. ಕವಲು ದಾರಿ ಕಥೆಯ ನಿರೂಪಣೆಯೂ ಸೊಗಸಾಗಿದೆ. ಇದು ಹೆಂಡತಿಯ ಗಂಡನಾದ ನಿವೃತ್ತ ಅಧ್ಯಾಪಕನ ತೊಳಲಾಟದ ಕಥೆ. ಓ ಹೆನ್ರಿಯ ಕಥೆಯೊಂದರಿಂದ ಪ್ರೇರಿತ ಎನ್ನುವುದನ್ನು ಲೇಖಕರೇ ಹೇಳಿಕೊಳ್ಳದಿದ್ದರೆ ಓದುಗರ ಅರಿವಿಗೆ ಬರುವುದಿಲ್ಲ ಎಂಬಷ್ಟು ಸಹಜವಾದ ನಿರೂಪಣೆಯಿದೆ. ಕಥೆಹೇಳುವ ನವೀನ ತಂತ್ರಗಳಿಗೆ ಪರವಶರಾಗದಿದ್ದರೂ, ಇಲ್ಲಿ ಕಥೆಗಳನ್ನು ನಿರ್ಧಿಷ್ಟ ಚೌಕಟ್ಟಿನ ಒಳಗೆ ಬೆಳೆಸುವ ಶಿಸ್ತನ್ನು ಐತಾಳರು ದಕ್ಕಿಸಿಕೊಂಡಿದ್ದಾರೆ.

'ತಲೆಮಾರ ಸೆಲೆ' ಎಂಬ ಕಾದಂಬರಿ ಪ್ರಕಟವಾದದ್ದು ೨೦೧೨ರಲ್ಲಿ. ಕನ್ನಡದ ಬಹಳಷ್ಟು ಮಹತ್ವಾಕಾಂಕ್ಷೆಯ ಕಾದಂಬರಿಗಳ ಹಾಗೆ ಇದೂ ತಲೆಮಾರುಗಳ ಕಥೆ. ತೀರ್ಥಹಳ್ಳಿಯ ಸಮೀಪದ ಕೊಕ್ಕೋಡಿನಿಂದ ಲಾಸ್ ಎಂಜಲೀಸಿಗೆ ಬಂದು ಬದುಕು ಕಟ್ಟಿಕೊಳ್ಳುವ ಕಥೆ. ತಲೆಮಾರುಗಳ ಸ್ಥಿತ್ಯಂತರದ ನಡುವೆ ಪುನರ್ ಮೌಲ್ಯೀಕರಣವಾಗುವ

ನಂಬಿಕೆಗಳು. ಈ ಕಾದಂಬರಿಯ ಕೇಂದ್ರದಂತಿರುವ ಸುಮತಿ ಮೂರು ತಲೆಮಾರುಗಳ ನಡುವೆ ಸಂಸ್ಕೃತಿಯನ್ನು ದಾಟಿಸಿಕೊಡುವ ಸೇತುವೆಯಂತೆ, ಪರಂಪರೆಯಲ್ಲಿ ನಂಬಿಕೆ ಮತ್ತು ಹೊಸತನ್ನು ಸ್ವೀಕರಿಸುವ ಛಲದ ನಡುವೆ. ಆಕೆ ಅಮೆರಿಕಾದ ಬದುಕಿಗೆ ಸನ್ನದ್ಧಳಾಗುವ ಸುಮಾರು ಐವತ್ತು ವರ್ಷಗಳಷ್ಟು ಹಿಂದಿನ ಪರಿಶ್ರಮ ಈ ಕಥೆಯ ಕಟ್ಟೋಣಕ್ಕೆ ಹೇಗೆ ಪ್ರಸ್ತುತವೆಂದರೆ, ತನ್ಮೂಲಕ ವಲಸೆ ಬಂದ ಮೊದಲ ತಲೆಮಾರು ಹಾದುಬಂದ ಅಗ್ನಿದಿವ್ಯವೊಂದನ್ನು ಯಾವ ಕ್ಲೀಷೆಗಳ ಅಗತ್ಯವಿಲ್ಲದೇ ಚಿತ್ರಿಸುವುದು ಸಾಧ್ಯವಾಗುತ್ತದೆ. ಸುಮತಿ ಮಗಳಾಗಿ, ಹೆಂಡತಿಯಾಗಿ, ಅಮ್ಮನಾಗಿ, ಅಜ್ಜಿಯಾಗಿ ಒಂದು ಕುಟುಂಬದ ಪಯಣಕ್ಕೆ ಸಾಕ್ಷಿಯಾಗಿರುವಾಗ ಈ ವಿವರಗಳು ಕಥೆ ಹೇಳುವುದಕ್ಕಿಂತ ಹೆಚ್ಚಿನ ಕೆಲಸವನ್ನು ಮಾಡುತ್ತವೆ. ಓದಿಸಿಕೊಳ್ಳುವ ಕಥೆ ಮತ್ತು ಸರಳ ಸುಭಗ ಶೈಲಿಯ ಇಲ್ಲಿಯ ನವೋದಯದ ಸೊಗಸು ಗಮನಾರ್ಹವಾದುದು[೪].

'ಸಾಹಿತ್ಯ ಸ್ಪಂದನೆ' ನಾಗ ಐತಾಳರ ವಿಮರ್ಶಾ ಲೇಖನಗಳ ಸಂಕಲನ. ೨೦೧೫ರಲ್ಲಿ ಅಭಿನವ ಪ್ರಕಟಿಸಿದ ಈ ಹೊತ್ತಿಗೆಯಲ್ಲಿ ಕನ್ನಡ ಕಾವ್ಯಮಾರ್ಗದ ಕುರಿತು ಆಹಿತಾನಲರ ಒಲವನ್ನು ತೋರುವ ಲೇಖನಗಳಿವೆ. ರನ್ನನ ಗದಾಯುದ್ಧದಿಂದ ತೊಡಗಿ, ಗೋವಿನ ಹಾಡು ಮತ್ತು ಜಾನಪದ ಗೀತೆಗಳನ್ನೊಳಗೊಂಡು, ಬೇಂದ್ರೆ, ಪುತಿನ, ಕೆ.ಎಸ್. ನ., ಜಿ. ಎಸ್. ಎಸ್., ಜಿ. ಪಿ. ರಾಜರತ್ನಂ ಮೊದಲಾದವರ ಕಾವ್ಯದ ಸೊಬಗನ್ನು ಅನುಭವಿಸುವ ಮತ್ತು ಬಣ್ಣಿಸುವ ಸೊಗಸಿನೊಂದಿಗೆ ಪ್ರಿಯ ಉದ್ಯಾವರರ ಪರಿಕಲ್ಪನೆಯ ಗೀತ ನಾಟಕಗಳು, ಸುಬ್ಬಣ್ಣರ ನೀನಾಸಂ, ಮಾಸ್ತಿಯವರ ಪಾತ್ರಗಳು, ಅನಂತಮೂರ್ತಿಯವರ ಪಾತ್ರ ಚಿತ್ರಣ – ಹೀಗೆ ಗಂಭೀರವೂ ಅಧ್ಯಯನಾರ್ಹವೂ ಆದ ಲೇಖನಗಳನ್ನು ಪ್ರಸ್ತುತಪಡಿಸಿದ್ದಾರೆ. ಜೀವರಸಾಯನ ವಿಜ್ಞಾನಿಯೊಬ್ಬನ ಸಾಹಿತ್ಯಿಕ ಆಸಕ್ತಿ, ಓದಿನ ವ್ಯಾಪ್ತಿ, ಕಾವ್ಯದ ಬಗ್ಗೆ ಒಲವು ಮತ್ತು ಕನ್ನಡ ಭಾಷೆಯ ಮೇಲಿನ ಹಿಡಿತ ನಿಜಕ್ಕೂ ಪ್ರಶಂಸನೀಯ.

ನಾಗ ಐತಾಳರ ಇಲ್ಲಿನ ಲೇಖನಗಳ ವಿಶಿಷ್ಟ ಸೊಗಸೆಂದರೆ, ತುಂಬಾ ಗಂಭೀರವಾದ ಸಂಗತಿಗಳ ನಡುವೆ ಅವರು ಥಟ್ಟನೆ, ಕವಿತೆಯ ಒಂದು ಅನಾಘ್ರಣಿತ ಸೊಗಸನ್ನೂ ತೆರೆದುಕೊಡುತ್ತಾರೆ. ಅಷ್ಟೇ ಸಹಜವಾಗಿ ಅದನ್ನು ಪ್ರಸ್ತುತ ವರ್ತಮಾನಕ್ಕೆ ಜೋಡಿಸುತ್ತಾರೆ. ಈ ತೆರನಾದ ಬರವಣಿಗೆ ವಿಮರ್ಶೆಯ ಹೊಸ ಸಾಧ್ಯತೆಯನ್ನು ಆಗುಮಾಡಿಕೊಡುತ್ತದೆ. ಇದಕ್ಕೆ ಒಂದು ಪುಟ್ಟ ಉದಾಹರಣೆಯಾಗಿ ಗೋಕುಲ ನಿರ್ಗಮನ ಗೀತರೂಪಕದ ಕುರಿತ ಪ್ರಬಂಧದಲ್ಲಿ ಬರುವ ಟೆನಿಸನ್ ಕವಿಯ The Old order changeth, yielding place to new,/ and God fulfills him self in many ways,/Lest one good custom should corrupt the world.ಎಂಬ ಕಾವ್ಯಭಾಗದ ಉಲ್ಲೇಖದ ನಂತರ ಬರುವ 'ಕೃಷ್ಣ ಗೋಕುಲದಲ್ಲೇ ಇದ್ದಿದ್ದರೆ ಅದು ಜಡವೆಂದೆನಿಸುತ್ತದೆ. ಎಷ್ಟೇ ಒಳ್ಳೆಯದಾಗಿದ್ದರೂ ಅದು ಕರಪ್ಟ್ ಆದಂತೆಯೇ. ತನ್ನ ಮುಂದಿನ ಕರ್ತವ್ಯಗಳ

ಹೊಣೆಹೊರಲು ಕೃಷ್ಣ ಗೋಕುಲವನ್ನು ಬಿಡಲೇಬೇಕಾಯ್ತು' ಎಂಬ ವಿಶ್ಲೇಷಣೆಯನ್ನು ಮತ್ತು, ಅದರ ಹಿಂದೆಯೇ ಬರುವ 'ಕೃಷ್ಣನ ನಿರ್ಗಮನದಿಂದ ಗೋಕುಲದ ಸಂತಸ ವೈಭವಗಳೆಲ್ಲವೂ ಉಡುಗಿಹೋಯ್ತು. ಇದು ಇಂದಿನ ನಮ್ಮ ಸಾಮಾಜಿಕ ಸಮಸ್ಯೆಯನ್ನೇ ಪ್ರತಿಬಿಂಬಿಸುತ್ತದೆ. ಭಾರತದ ಬೆನ್ನೆಲುಬಿನಂತಿದ್ದ ಹಳ್ಳಿಜೀವನ ಮಾಯವಾಗುತ್ತಿದೆ. ಎಲ್ಲರೂ ಪಟ್ಟಣದ ಆಡಂಬರಜೀವನವನ್ನೇ ಬಯಸುತ್ತಿದ್ದಾರೆ' ಎಂಬ ವಿವರಣೆಯನ್ನೂ ನೆನಪಿಸಿಕೊಳ್ಳಬಹುದು.

*

ನಾಗ ಐತಾಳರ ಕೆಲವು ಬಿಡಿ ಬರಹಗಳೂ ಆಗಾಗ ನನ್ನ ಗಮನ ಸೆಳೆಯುತ್ತಾ ಬಂದಿವೆ. ಅವುಗಳಲ್ಲಿ ಮುಖ್ಯವಾದುದು, ಎರಡುವರ್ಷಗಳ ಹಿಂದೆ ವಿಶ್ವ ಕ್ಯಾನ್ಸರ್ ದಿನದಂದು ಎಂದರೆ, ಫೆಬ್ರವರಿ ೦೪, ೨೦೧೮ರಂದು, ವಿಜಯ ಕರ್ನಾಟಕದಲ್ಲಿ ಇವರು ಬರೆದಿದ್ದ 'ಕ್ಯಾನ್ಸರ್ ಗೆದ್ದ ಕಥನ'. ಆ ಲೇಖನ ಓದಿದ ಎಷ್ಟೋ ದಿನಗಳ ನಂತರ ಕೂಡಾ ಈ ಪುಟ್ಟಮ್ಮ ಮತ್ತು ಐತಾಳರು ನನ್ನ ಭಾವಕೋಶದ ಒಂದು ಭಾಗವಾಗಿ ಅಭಿವ್ಯಕ್ತಿಪಡಿಸಲಾಗದ ನೋವಿನಿಂದ ನನ್ನನ್ನು ಕಾಡಿದ್ದುಂಟು. ೧೯೭೫ರ ಡಿಸೆಂಬರಿನಲ್ಲಿ ಘಟಿಸಿದ ಒಂದು ಆಘಾತವನ್ನು ಅವರಿಬ್ಬರೂ ಎದುರಿಸಿ ಗೆದ್ದುನಂತ ಚಿತ್ರಣ ಅಲ್ಲಿದೆ. (ಅವರ ಅಮೆರಿಕನ್ನಡಿಗನೊಬ್ಬನ ದಿನಚರಿಯಿಂದ ಕೃತಿಯಲ್ಲಿನ ೧೭ನೆಯ ಅಧ್ಯಾಯ 'ಬಾಳುಬೆಳಗಿದ ಭಾಗ್ಯಲಕ್ಷ್ಮಿ' ಯಲ್ಲಿ ಈ ಹೋರಾಟದ ಸಮಗ್ರ ವಿವರವಿದೆ. ಇಲ್ಲಿ ಬರುವ ಪಾಪಚ್ಚಿಯೆಂಬ ಬಂಧುವಿನ ನೆರವನ್ನು ಐತಾಳರು ಮರೆಯದೇ ತಮ್ಮ ದಿನಚರಿಯಲ್ಲಿ ದಾಖಲಿಸಿದ್ದಾರೆ. 'ಉಪಕಾರಸ್ಮರಣೆ' ಎಂಬ ಸದ್ಗುಣವನ್ನು ಮನುಷ್ಯಕುಲ ಮರೆಯುತ್ತಿರುವ ಈ ಹೊತ್ತಿನಲ್ಲಿ ನಲವತ್ತೈದು ವರ್ಷಗಳ ಹಿಂದಿನ ಪಾಪಚ್ಚಿಯ ನೆರವನ್ನು ದಾಖಲಿಸುವಾಗ ನಾಗ ಐತಾಳರು ಮನಃಪೂರ್ವಕವಾಗಿ ಬಳಸುವ ಶಬ್ದಗಳು ಹೃದಯಸ್ಪರ್ಶಿಯಾಗಿವೆ)

ಇನ್ನೊಂದು ಬಿಡಿ ಲೇಖನ 'ನಿವೃತ್ತನೊಬ್ಬನ ದಿನಚರಿಯಿಂದ' ಎಂಬ ಪ್ರಬಂಧವು ಅಭಿನವ ಪ್ರಕಟಿಸಿದ, ತ್ರಿವೇಣಿ ಮತ್ತು ದತ್ತಾತ್ರಿಯವರು ಸಂಪಾದಿಸಿದ 'ಮಥಿಸಿದಷ್ಟೂ ಮಾತು' ಎಂಬ ಲೇಖನಗಳ ಸಂಗ್ರಹದಲ್ಲಿದೆ. ಅಂತೆಯೇ, 'ಬದಲಾವಣೆಯ ಬೆನ್ನಟ್ಟಿ' ಎಂಬ ಲೇಖನಗಳ ಸಂಕಲನದಲ್ಲಿಯೂ ಇವರದೊಂದು ಲೇಖನವಿದೆ. ನಮ್ಮ ಕುಟುಂಬ ಮಿತ್ರರಾದ ಜ್ಯೋತಿ ಮಹದೇವ್ ಜೊತೆ ಸೇರಿ ಐತಾಳರು 'ಅಮೆರಿಕನ್ನಡ ಬರಹಗಾರರ ಮಾಹಿತಿ ಕೋಶ' ಸಂಪಾದಿಸಿದ್ದರು. ಇವರು ಕನ್ನಡ ಸಾಹಿತ್ಯ ರಂಗಕ್ಕಾಗಿ ಸಹಮನಸ್ಕರೊಂದಿಗೆ ಸಂಪಾದಿಸಿಕೊಟ್ಟ 'ಆಚೀಚೆಯ ಕಥೆಗಳು' (೨೦೦೬), 'ನಗೆಗನ್ನಡಂ ಗೆಲ್ಗೆ' (೨೦೦೭) ಮತ್ತು 'ಕನ್ನಡ ಕಾದಂಬರಿ ಲೋಕದಲ್ಲಿ ಹೀಗೆ ಹಲವು' (೨೦೦೯),ಮುಂತಾದವುಗಳನ್ನು ಅಭಿನವ ಪ್ರಕಟಿಸಿದೆ.

ನಾಗ ಐತಾಳರ ಸಾಂಸ್ಕೃತಿಕ ಬದುಕಿಗೆ ಸಂಬಂಧಿಸಿದ ಮೂರು ಮುಖ್ಯ ವಿಚಾರಗಳನ್ನು ಇಲ್ಲಿ ಪ್ರಾಸಂಗಿಕವಾಗಿ ನೆನಪಿಸಿಕೊಳಬಹುದು:

೧. ನಾಗ ಐತಾಳರು ಹಲವು ಅಮೆರಿಕನ್ನಡಿಗರಿಗೆ ಮೆಂಟರ್ ಆಗಿಯೂ ಮಾರ್ಗದರ್ಶನವಿತ್ತರು. ಅವರಲ್ಲೊಬ್ಬರಾದ ಶಿಕಾರಿಪುರ ಹರಿಹರೇಶ್ವರರು ಅಮೆರಿಕನ್ನಡ ಎಂಬ ದ್ವೈಮಾಸಿಕವನ್ನು ಆರಂಭಿಸಿದಾಗ ಮಾರ್ಗದರ್ಶನವಿತ್ತದ್ದು ಮಾತ್ರವಲ್ಲ, ಚಂದಾದಾರರನ್ನು ಗಳಿಸಿಕೊಟ್ಟು, ಪತ್ರಿಕೆಯ ಲೋಕಾರ್ಪಣೆಯ ಸಂದರ್ಭದಲ್ಲಿ ತಮ್ಮ ಮನೆಯಲ್ಲೂ ಒಂದು ಸಮಾರಂಭ ಏರ್ಪಡಿಸಿದ್ದರು. ಅಮೆರಿಕನ್ನಡದ ನಂತರದ ಪ್ರಕಟಣೆಗಳಲ್ಲೂ ಐತಾಳರಿತ್ತ ನೆರವು ಗಮನಾರ್ಹವಾದುದು.

೨. ಬೆಂಗಳೂರು ವಿಶ್ವವಿದ್ಯಾಲಯವು ನಾಗ ಐತಾಳರ ಹೆಸರಿನಲ್ಲಿ ದತ್ತಿ ಉಪನ್ಯಾಸವೊಂದನ್ನು ಏರ್ಪಡಿಸುತ್ತಿರುವದರ ಬಗ್ಗೆ ನಾನು ಕೇಳಿಬಲ್ಲೆ.

೩. ನಾಗ ಐತಾಳರು ಶಿಕಾಗೋದಲ್ಲಿದ್ದಾಗ ನಾಟಕಗಳಲ್ಲಿ ಅಭಿನಯಿಸಿದ್ದರು. ಒಮ್ಮೆ ಸಂಸ್ಕೃತ ನಾಟಕ 'ಅಭಿಜ್ಞಾನ ಶಾಕುಂತಲ'. ಅಲ್ಲಿವರದ್ದು ಕಣ್ವ ಋಷಿಯ ಪಾತ್ರ. ಮತ್ತೊಮ್ಮೆ ಅನಂತಮೂರ್ತಿಯವರ ಸತ್ಕಾರ ಸಮಾರಂಭದಲ್ಲಿ 'ಪ್ರಾಣೇಶಾಚಾರ್ಯನ ಪ್ರಲಾಪ' ಎಂಬ ಏಕಪಾತ್ರಾಭಿನಯ. ಮಗದೊಮ್ಮೆ ಕೈಲಾಸಂರ 'ಅನುಕೂಲಕ್ಕೊಬ್ಬಣ್ಣ' ನಾಟಕ.

ಹೀಗೆ ಮಾದರಿ ಎನಿಸುವ ಬಹುಮುಖಿ ಬದುಕನ್ನು ತುಂಬು ಶ್ರೀಮಂತಿಕೆಯಿಂದ ಬಾಳಿದ ನಾಗ ಐತಾಳರು ಆತ್ಮ ಚರಿತ್ರೆಯನ್ನು ಬರೆದಿಲ್ಲವೆ? ಎಂದಾಗ ನೆನಪಿಸಿಕೊಳ್ಳಬೇಕಾದ ಮೂರು ಕೃತಿಗಳಿವೆ.

'ಅಮೆರಿಕನ್ನಡಿಗನೊಬ್ಬನ ದಿನಚರಿಯಿಂದ' (ಪ್ರ: ವಸಂತ ಪ್ರಕಾಶನ) – ೨೦೦೨ರಲ್ಲಿ ಪ್ರಥಮ ಮುದ್ರಣ ಕಂಡ ಈ ಕೃತಿಯು ಅಮೆರಿಕಾಕ್ಕೆ ವಲಸೆ ಹೊರಟ ಸಂದರ್ಭದಿಂದ ಇಳಿವಯಸ್ಸಿನತನಕ ಐತಾಳರು ಬದುಕು ಕಟ್ಟಿಕೊಂಡ ಹಲವು ರೋಚಕ ತಿರುವುಗಳ ನಿರೂಪಣೆ. ೧೯೬೦ರ ದಶಕದಲ್ಲಿ ವಲಸೆ ಬಂದ ಕನ್ನಡಿಗನೊಬ್ಬ ಹೊಸದೇಶಕ್ಕೆ ಹೊಂದಿಕೊಳ್ಳುವ, ಅಲ್ಲಿ ನೆಲೆಯೂರುವ ತನ್ನ ವಿವಿಧ ಅನುಭವಗಳನ್ನೇ ಮೂಲವಸ್ತುವನ್ನಾಗಿಸಿಕೊಂಡ ಇಂತಹ ಗ್ರಂಥಗಳು 'ವಿರಳ, ಇಲ್ಲವೇ ಇಲ್ಲ ' ಎಂದು ಲೇಖಕಿ ನಳಿನಿ ಮೈಯ ಮುನ್ನುಡಿಯಲ್ಲಿ ಹೇಳಿರುವುದಕ್ಕೆ ಅವರೇ ಗುರುತಿಸಿದ ಕಾರಣವೆಂದರೆ, 'ಆ ದಶಕದಲ್ಲಿ ವಲಸೆ ಬಂದ ಭಾರತೀಯರು ಅಮೆರಿಕಾದಲ್ಲಿ ಭಾರತೀಯತೆಯ ಉಪಸ್ಥಿತಿಯನ್ನು ಭದ್ರಗೊಳಿಸಿದವರು; ಅಮೆರಿಕನ್ನರಿಗೆ ಭಾರತೀಯತೆಯ ತಿಳುವಳಿಕೆ ಕೊಟ್ಟು, ಭಾರತೀಯರಾಗಿ ಅಮೆರಿಕಾದ ತಿಳುವಳಿಕೆ ಪಡೆದು, ಉಳಿದು ಬೆಳೆದವರು'. ಅಹಂಕಾರದ ಲೇಪವೂ ಇಲ್ಲದ ಆತ್ಮಚರಿತ್ರೆಯಾಗಿರುವ ಈ ದಿನಚರಿ ಒಂದು ಕಥೆಯಷ್ಟೇ ಆಹ್ಲಾದಕರ ಓದನ್ನು ಸಾಧ್ಯವಾಗಿಸುತ್ತದೆ.

'ಅಮೆರಿಕದಲ್ಲಿ ಕಂಡ ಕನಸು ಕಟ್ಟಿದ ನೆನಪು' – ಇದು ಅವರ ಬದುಕು ಕಟ್ಟಿದ ಸಾಹಸಯಾತ್ರೆಯ ದಾಖಲೀಕರಣ.

'ಸ್ಮರಣೆ ಸಾಲದೆ?' (ಚಿಕ್ಕ ನೆನಪುಗಳ ದಾಖಲೆ). ಖ್ಯಾತ ವಿಮರ್ಶಕ ನರಹಳ್ಳಿ ಬಾಲಸುಬ್ರಹ್ಮಣ್ಯ ಮುನ್ನುಡಿ ಬರೆದಿದ್ದಾರೆ.

'ಕಾಲ ಉರುಳಿ ಉಳಿದುದು ನೆನಪಷ್ಟೆ'. ಅವರ ಅಧಿಕೃತ ಆತ್ಮಚರಿತ್ರೆ. ಕೋಟದಲ್ಲೊಂದು ದೊಡ್ಡಮನೆ. ಅವರ ಹಿರಿಯರು ಕಟ್ಟಿಸಿದ್ದು. ಅವರ ತಮ್ಮಂದಿರ ಕಾಲದಲ್ಲಿ ಪಾಲಾಗಿ ವಿಭಜಿತವಾಗಿ ಹೋಗುವ ಕಥೆ. ಆ ಮನೆಗೆ ಬಂದು ಉಂಡು ಹೋದವರನ್ನೆಲ್ಲಾ ಆಹಿತಾನಲರು ನೆನಪು ಮಾಡಿಕೊಳ್ಳುತ್ತಾರೆ. ಎಲಿಮೆಂಟರಿ ತರಗತಿಗಳಲ್ಲಿ ಸಹಪಾಠಿಗಳಾಗಿದ್ದ ಹುಡುಗ – ಹುಡುಗಿಯರನ್ನು, ಅವರ ಹೆತ್ತವರನ್ನು ಕೂಡಾ. ಒಳ್ಳೆಯವರು, ಕೆಟ್ಟವರು, ಎಲ್ಲರನ್ನೂ. ನಮ್ಮೂರು ಎಂದು ನೆನಪಿಸಿಕೊಳ್ಳುವ ಕೋಟದ ವರ್ಣನೆ ಒಂದು ಸಮಾಜಶಾಸ್ತ್ರೀಯ ಅರ್ಥಶಾಸ್ತ್ರದ ಪಠ್ಯದಂತಿದೆ. ನಮ್ಮವರು ಎಂದು ಹೆತ್ತವರನ್ನು, ಬಂಧುಗಳನ್ನು, ಸ್ನೇಹಿತರನ್ನು ನೆನಪಿಸಿಕೊಳ್ಳುವಾಗ ನಿಸ್ಸಂಕೋಚವಾಗಿ ತಮ್ಮಿಂದಾಗಿ ಹೋದ ತಪ್ಪುಗಳನ್ನೂ ಒಪ್ಪಿಕೊಳ್ಳುವ ನಿರ್ಮಲಚಿತ್ತ ಅವರದ್ದು. ಅವರ ಪತ್ನಿ ಮೇಳಿಗೆ ಮಂಜಭಟ್ಟರ ಮೊಮ್ಮಗಳು ಲಕ್ಷ್ಮಿ (ಪುಟ್ಟಮ್ಮ) ಅರವತ್ತು ವರ್ಷಗಳ ದಾಂಪತ್ಯದ ಕೊನೆಯ ಮಾರ್ದವ ನೆನಪುಗಳನ್ನು ದಾಖಲಿಸಿದ ಸೊಗಸನ್ನು ಓದಿಯೇ ಸವಿಯಬೇಕು.

ಈ ಕೃತಿಯ ಕುರಿತು ಹೇಳುವಾಗ, ಇದರಲ್ಲಿ ಅಲ್ಲಲ್ಲಿ ವಿವರವಾಗಿ ಬರುವ, ನನ್ನ ಮೆದುಳಿನಷ್ಟೇ ಹೃದಯಕ್ಕೂ ಆಪ್ತವಾಗಿರುವ ಸಂಗತಿಗಳನ್ನು ನೆನಪಿಸಿಕೊಳ್ಳದೇ ಇರಲಾಗದು. ನಮ್ಮೂರು ಎಂಬ ಭಾಗದಲ್ಲಿ ಅವರು ವಿಸ್ತಾರವಾಗಿ ಬಣ್ಣಿಸುವ ಕೋಟದಲ್ಲಿ ನನ್ನ ಬಾಲ್ಯದ ಹದಿನೇಳೋ ಹದಿನೆಂಟೋ ವರ್ಷಗಳನ್ನು ಕಳೆದಿದ್ದೆ. ಅಲ್ಲಿನ ರಸ್ತೆ, ಅಂಗಡಿ, ದೇವಸ್ಥಾನ, ಶಾಲೆ, ಬಂಗಲೆ, ಮೈದಾನ, ಹೊಳೆ, ಕೆರೆ, ಮನುಷ್ಯರು, ಪರಂಪರೆ ಎಲ್ಲವನ್ನೂ ಅವರು ಕಂಡು, ನಲಿದ ಇಪ್ಪತ್ತೈದು ವರ್ಷಗಳ ನಂತರ ನಾನು ಕಂಡೆ ಎಂಬುದೊಂದೇ ವ್ಯತ್ಯಾಸ. ಅವರು ಕಲಿತ ಗಿಳಿಯಾರು ಶಾಲೆಯಲ್ಲಿ ನನ್ನ ಮೂರು ವರ್ಷಗಳ ಪ್ರಾಥಮಿಕ ಶಿಕ್ಷಣವಾಗಿತ್ತು. ಅವರು ವಿಸ್ತಾರವಾಗಿ ಬಣ್ಣಿಸುವ 'ತುಂಗರು ಮಾಷ್ಟರು' ನನಗೂ ಪ್ರೀತಿಯ ಕನ್ನಡ ಮಾಷ್ಟರಾಗಿದ್ದರು. ಅವರ ತಮ್ಮ ಮಧುಸೂದನ ಐತಾಳರು ಕೋಟ ಹೈಸ್ಕೂಲಿನಲ್ಲಿ ನನಗೆ ಮೇಷ್ಟರಾಗಿದ್ದರು. ಅವರ ಇನ್ನೊಬ್ಬ ತಮ್ಮ ಶಿವಪ್ರಸಾದ ನನ್ನ ತಮ್ಮಂದಿರಿಗೆ ಲೆಕ್ಚರರ್ ಆಗಿದ್ದರು. ಅವರ ಆತ್ಮೀಯ ಗೆಳೆಯರಲ್ಲೊಬ್ಬರಾದ ಸೂರ್ಯನಾರಾಯಣ ಕಾರಂತರು ನಮಗೆ ಪಿಟಿ ಮೇಷ್ಟರಾಗಿದ್ದರು. ಡಾ. ನಾರಾಯಣ ಶೆಟ್ಟರು ಹೋಗಿ, ನಾವಿರುವ ಕಾಲದಲ್ಲಿ ಡಾ.ಆನಂದ ಶೆಟ್ಟರು ಕೂಟ ಮಹಾಜಗತ್ತಿನ ಧನ್ವಂತರಿಗಳಾಗಿದ್ದರು. (ಈಗ ಅವರೂ ಇದ್ದಂತಿಲ್ಲ!) ....ಇತ್ಯಾದಿ.}

ವೈದೇಹಿಯವರ ಮುನ್ನುಡಿ, ನಳಿನ ಮೈಯ, ಮೈ. ಶ್ರೀ. ನಟರಾಜ್ ಮತ್ತು ಶ್ರೀಕಾಂತ ಬಾಬುರವರ ಹಿನ್ನುಡಿಗಳು ಆಹಿತಾನಲರ ಬದುಕಿಗೆ ತೆರೆದಿಟ್ಟ ಬೆಳಕಿಂಡಿಗಳಂತಿವೆ. ಮಕ್ಕಳ ಕುರಿತು, ಬಂಧುಗಳ ಕುರಿತು, ಹುಟ್ಟೂರ ಸ್ನೇಹಿತರ ಕುರಿತು ತುಂಬು ಬಾಳನ್ನು ಬಾಳಿದ ಮೇಧಾವಿಯೊಬ್ಬರ ಇಳಿವಯಸ್ಸಿನ ಕೃತಜ್ಞತಾ ಸಮರ್ಪಣೆಯಂತಿರುವ ಈ ಕೃತಿ ಜೀವನಾನುಭವವನ್ನು ಸಮೃದ್ಧಗೊಳಿಸುವಂತಹ ಪುಸ್ತಕಗಳಲ್ಲೊಂದು. ನಾನು ಗಮನಿಸಿದಂತೆ ಆಹಿತಾನಲರ ಇತ್ತೀಚಿನ ಎಲ್ಲಾ ಕೃತಿಗಳನ್ನು ಮತ್ತು ಸಾಹಿತ್ಯಾಂಜಲಿ, ಕ್ಯಾಲಿಫೋರ್ನಿಯಾದ ಪ್ರಕಟಣೆಗಳನ್ನೆಲ್ಲಾ ಪ್ರಕಟಿಸುತ್ತಿರುವ ಮತ್ತು ಈ ಕೃತಿಯನ್ನು ಸುಂದರವಾಗಿ ಪ್ರಕಟಿಸಿದ ಅಭಿನವದ ರವಿಕುಮಾರ್ ಅಭಿನಂದನಾರ್ಹ ಕೆಲಸ ಮಾಡಿದ್ದಾರೆ.

ನನಗೆ ಇವರ ಓದಿನ ವ್ಯಾಪ್ತಿಯ ಬಗ್ಗೆಯೂ ಆಸಕ್ತಿಯಿದೆ. ಈಗೀಗ ಕನ್ನಡ ಎಮ್ಮೆಗಳೂ ಕೈಗೆತ್ತಿಕೊಳ್ಳಲು ಅಂಜುವ ಜನ್ನನ 'ಯಶೋಧರ ಚರಿತೆ'ಯನ್ನು ಇವರು ಓದಿರುವುದು ಮಾತ್ರವಲ್ಲ, ಅದನ್ನು ಕೊಲರಿಜ್ ಬರೆದ Rhyme of the Ancient Mariner ಜತೆಗೆ ಹೋಲಿಸಿ ಎರಡರಲ್ಲೂ ಪಾಪಕ್ಕೆ ತಕ್ಕ ಪ್ರಾಯಃಶ್ಚಿತ್ತ ಪಡೆಯುವ ಸನ್ನಿವೇಶವಿರುವುದನ್ನು ಗುರುತಿಸಿದ್ದಾರೆ. ಕನ್ನಡ ಸಾಹಿತ್ಯ ಇಂಗ್ಲಿಷ್ ಸಾಹಿತ್ಯಕ್ಕೇನೂ ಕಮ್ಮಿಯಿಲ್ಲ ಎಂಬ ಮಾತೂ ಅವರ ಬರಹದಲ್ಲಿದೆ.

'ಜೀವನ ರಹಸ್ಯ' ೨೦೧೧ರಲ್ಲಿ ಪ್ರಕಟವಾದ ವೈಜ್ಞಾನಿಕ ಕೃತಿ. ಅಣುಜೀವ ವಿಜ್ಞಾನದ ಸ್ಥೂಲ ಪರಿಚಯ. ಯೌವನದ ಸುದೀರ್ಘ ಕಾಲವನ್ನು ಯಾವ ರಹಸ್ಯದ ಅಧ್ಯಯನ ಮತ್ತು ಸಂಶೋಧನೆಗೆಂದು ಮೀಸಲಿಟ್ಟಿದ್ದರೋ, ಆ ನಿಗೂಢವನ್ನು ಮಾತೃಭಾಷೆಯಲ್ಲಿ ಬರೆಯುವ ಅವರ ಸಾಹಸ ಪ್ರಶಂಸಾರ್ಹ. ಈ ಕೃತಿಯ ಮೊದಲ ಐದು ಅಧ್ಯಾಯಗಳು ಜೀವಕೋಶಗಳ ಭಾಗಗಳು ಮತ್ತು ಕ್ರಿಯೆಗಳು, ಡಿ.ಎನ್.ಎ ರಚನೆ, ಕ್ರಿಯೆ ಮತ್ತು ವರ್ಣತಂತುಗಳ ವ್ಯವಸ್ಥೆ ಮತ್ತು ಅಧ್ಯಯನ ತಂತ್ರಜ್ಞಾನದ ಕುರಿತಿದ್ದರೆ, ಉಳಿದ ಐದು ಅಧ್ಯಾಯಗಳು ಜೀವಕೋಶಗಳಲ್ಲಿ ನಡೆಯುವ, ಡಿ.ಎನ್.ಎಗೆ ಸಂಬಂಧಪಟ್ಟ ಉಪಯುಕ್ತ ವಿಷಯಗಳ ಮಾಹಿತಿಗಳನ್ನು ಒಳಗೊಂಡಿದೆ. ಕನ್ನಡದಲ್ಲಿ ಈ ವಿಷಯದಲ್ಲಿ ಈತನಕ ಯಾರೂ ಬರೆದಂತಿಲ್ಲ.

*

ಕೋಟದ ಒಬ್ಬ ಹುಡುಗ ವಿಶ್ವ ಬೆರಗು ಪಡುವ ಸಂಶೋಧನೆಗಳನ್ನು ಮಾಡಿ ಅಮೆರಿಕಾದಲ್ಲಿ ಬದುಕು ಕಟ್ಟಿಕೊಂಡದ್ದು ನನಗೆ ದೊಡ್ಡ ವಿಚಾರವಾಗಿ ಕಾಣಿಸುತ್ತಿಲ್ಲ; ಆದರೆ, ಹಾಗೆ ಮೇಲೆ ಏರಿದ ನಂತರ, ವಿಶ್ವದ ಭೂಪಟದಲ್ಲಿ ಒಂದು ಸೂಜಿಮೊನೆಯ ಗಾತ್ರವೂ ಇದ್ದಿರದ ಈ ಕೋಟಕ್ಕೆ ಮತ್ತೆ ಬಂದು, ಇಲ್ಲೆಲ್ಲೋ ತನ್ನ ಪಯಣದ ಆರಂಭವಿದ್ದಿತ್ತು ಎಂದದ್ದಿದೆಯಲ್ಲ, ಅದು ಈ ಊರಿನ ಮುಂದಿನ ತಲೆಮಾರಿಗೆ ಒಂದು ಅತ್ಯುನ್ನತ ಆದರ್ಶ; ಅಮೆರಿಕಾದಲ್ಲಿ ಕುಳಿತು ಕನ್ನಡದಲ್ಲಿ ಬರೆದದ್ದಿದೆಯಲ್ಲ

ಅದು ಅಲ್ಲಿ ಉಳಿದಿರುವವರಿಗೆ ಮಹೋನ್ನತ ಆದರ್ಶ; ಪ್ರಾಯ ಎಪ್ಪತ್ತು ಸನಿಹವಾದ ನಂತರ ಕನ್ನಡದಲ್ಲಿ ಬರೆಯತೊಡಗಿದ್ದಿದೆಯಲ್ಲ – ಅದು ಕನ್ನಡ ನಾಡಿಗೇ ಆದರ್ಶ.

(ಕೋಟದಲ್ಲಿ ದಿನಾಂಕ ೨೭.೧೨.೨೦೧೯ರಂದು ಆಹಿತಾನಲರಿಗೆ ಹುಟ್ಟೂರ ಸನ್ಮಾನ ಸಮಾರಂಭದಲ್ಲಿ ಮಾಡಿದ್ದ ಭಾಷಣದ ವಿಸ್ತೃತ ರೂಪ.)

ಅಡಿ ಟಿಪ್ಪಣಿ

೧. ಅಮ್ಮನ ಕೈತುತ್ತಿನ ಬಗ್ಗೆ ಇವರು ಬರೆದ ಒಂದು ಪ್ರಬಂಧ ಬಲು ಸೊಗಸಾಗಿದೆ.

೨. 'ನೀವು ಪುಟ್ಟಮ್ಮನ ವಿಷಯ ಬಂದಾಗ ಬಹಳ ಇಮೋಶನಲ್ ಆಗಿಬಿಡ್ತೀರಿ' ಎನ್ನುತ್ತಿದ್ದರು ನಾಗೈತಾಳರ ಕುಟುಂಬ ಸ್ನೇಹಿತ ಯು. ಆರ್. ಅನಂತಮೂರ್ತಿಯವರು.

೩. ಹೌದು. ಮಗನದ್ದು ಅಂತರ್ಜಾತೀಯ ವಿವಾಹವಾಗಿದ್ದರೂ ಅವರದನ್ನು ಹಿಂದೂ ಸಂಪ್ರದಾಯದಂತೆ ಮಾಡಿಸಿಕೊಂಡಿದ್ದರು. ಅಗ್ನಿಸಾಕ್ಷಿ, ಸಪ್ತಪದಿ ಇತ್ಯಾದಿ.

೪. ಸುಮತಿ ಪಾತ್ರದಲ್ಲಿ ಪುಟ್ಟಮ್ಮನ ನೆರಳು ಕಾಣಿಸುತ್ತಿದ್ದುದು ನನ್ನ ಮಿತಿಯೂ ಇದ್ದೀತು!

ಕನ್ನಡ ವಾತ್ಸಲ್ಯದ ನಾಗ ಐತಾಳರು

– ವಿಕ್ರಂ ಹತ್ವಾರ್

ಅಮೆರಿಕದಲ್ಲಿ ಕನ್ನಡ ಕಟ್ಟುವ ಕೆಲಸ ಮಾತ್ರವಲ್ಲ; ನೆಡುವ ಕೆಲಸವನ್ನೂ ಮಾಡುತ್ತಿದ್ದವರು ನಾಗ ಐತಾಳರು. ನಾನು ಮೊದಲ ಬಾರಿ ಅಮೆರಿಕಕ್ಕೆ ಹೋದಾಗ ಕನ್ನಡದ ಒಂದು ಫೋರಮ್ಮಿನಲ್ಲಿ ನನ್ನ ಕೆಲವು ಬರಹಗಳನ್ನು ಹಂಚಿಕೊಳ್ಳುತ್ತಿದ್ದೆ. ಅಲ್ಲಿನ ಕೆಲವು ಸ್ನೇಹಿತರು ಮೂಲಕ ನಾನು 'ಬರೆಯುವವ' ಎನ್ನುವುದು ತಿಳಿದು ಐತಾಳರು ನನ್ನನ್ನು ಸಂಪರ್ಕಿಸಿದ್ದರು. ಕುಂದಾಪುರದ ಕಡೆಯವನು ಎನ್ನುವುದು ಖಾತ್ರಿಯಾಗುತ್ತಿದ್ದಂತೆ ಅವರು ಆತ್ಮೀಯವಾಗಿ, ಸಲೀಸಾಗಿ ಕುಂದಗನ್ನಡದಲ್ಲಿ ಮಾತಾಡಲು ಆರಂಭಿಸಿದರು. ಆ ಮೊದಲ ಮಾತುಕತೆಯಲ್ಲಿ ನನಗೆ ಸ್ಪಷ್ಟವಾಗಿ ನೆನಪಿರುವ ಮಾತೆಂದರೆ – ಹೇಗಿದೆ ನೋಡಿ ಈ ದೇಶ! ಯಾಕೆ ಮರಳಿ ಹೋಗುತ್ತೀರಿ? ಇಲ್ಲೇ ಇದ್ದುಬಿಡಿ – ಎಂಬ ಅವರು ಸಲಹೆ ನೀಡಿದ್ದು. ನಂತರ ಅವರೊಮ್ಮೆ 'ನಾನು ಹೀಗೆ ಇಲ್ಲಿಗೆ ಬರುವ ಎಲ್ಲ ಕನ್ನಡ ಬರಹಗಾರರಿಗೆ ಹೇಳುತ್ತೇನೆ. ಇಲ್ಲಿ ನಮ್ಮವರು ಬೇಕು' ಎಂದು ಹೇಳಿದ್ದರು. ಅಲ್ಲದೆ, ಆಗಷ್ಟೆ ಅವರು ಶುರುಮಾಡಬೇಕು ಎಂದುಕೊಂಡಿದ್ದ 'ಕನ್ನಡ ಸಾಹಿತ್ಯರಂಗ' ಎನ್ನುವ ಹೊಸ ಪೋರ್ಟಲ್‌ಗೆ ಬರೆಯಿರಿ ಎಂತಲೂ ಹೇಳಿದರು. ಇದು ನನ್ನ ಒಬ್ಬನ ವಿಚಾರ ಮಾತ್ರ ಅಲ್ಲ. ನನ್ನಂಥ ಅನೇಕರಿಗೆ ಅವರು ಮುತುವರ್ಜಿಯಿಂದ

ಹುರಿದುಂಬಿಸುತ್ತಿದ್ದರು. ಸದಾ ಸಂಪರ್ಕದಲ್ಲಿರುತ್ತಿದ್ದರು. ಹೀಗೆ ಕನ್ನಡದ ಬರಹಗಾರರನ್ನು ಅಮೆರಿಕದಲ್ಲಿ ನೆಡುವ ಕಾರ್ಯದಲ್ಲಿ ಮಗ್ನರಾಗಿದ್ದರು.

ಕನ್ನಡದ ಪ್ರಮುಖ ಸಾಹಿತಿಗಳ ಕೃತಿಗಳ ಕುರಿತು ಲೇಖನಗಳನ್ನು ಅಮೆರಿಕದ ಕನ್ನಡಿಗರಿಂದ ಬರೆಯಿಸಿ, ಅದರ ಜೊತೆ ಕರ್ನಾಟಕದಲ್ಲಿರುವ ಕೆಲವು ವಿಮರ್ಶಕರಿಂದಲೂ ಬರಹಗಳನ್ನು ಕೇಳಿ ಅಥವಾ ಸಂಪಾದಿಸಿ, ಅವರು ತರುತ್ತಿದ್ದ ಪುಸ್ತಕಗಳು ಆ ಲೇಖಕರ ಬಗ್ಗೆ ಹೊಸ ಆಯಾಮವನ್ನು ತೆರೆದಿಟ್ಟಿತ್ತು. ಜೊತೆಗೆ ಅವರ ಆತ್ಮಕಥನ ಮಾದರಿಯ ಕೆಲವು ಪ್ರಸಂಗಗಳು ತುಂಬ ವಿಶಿಷ್ಟವಾದುದು. ಮೊದಮೊದಲು ಅಮೆರಿಕದಲ್ಲಿ ನೆಲೆ ನಿಂತ ಕನ್ನಡಿಗರಲ್ಲಿ ಐತಾಳರೂ ಒಬ್ಬರು. ಆ ಕಾಲದ ಬವಣೆ, ಗೊಂದಲ, ಅಚಾತುರ್ಯದ ಕಲಾಪಗಳು ತುಂಬ ನವಿರಾಗಿಯೂ ಮಜವಾಗಿಯೂ ಓದಿಸಿಕೊಳ್ಳುತ್ತ ಅದೇ ಸಮಯಕ್ಕೆ ಒಂದು ಅಥೆಂಟಿಕ್ ಆದ ವಿರಳ ಜೀವನಾನುಭವದ ನಿರೂಪಣೆಯು ಆಗುತ್ತದೆ. ಅವರ 'ಜೀವನ ರಹಸ್ಯ' ಕೃತಿಯಂತು ಕನ್ನಡಕ್ಕೊಂದು ಅಪೂರ್ವ ಕೊಡುಗೆ. ಪ್ರತಿಯೊಬ್ಬರು ಈ ಪುಸ್ತಕವನ್ನು ಓದಲೇಬೇಕು ಅನ್ನಿಸುವಷ್ಟು ಮಹತ್ವದ ಕೃತಿ ಇದು.

ಐತಾಳರು ಬೂದುಗನ್ನಡಿ ಹಿಡಿದು ಓದು ಬರವಣಿಗೆ ಮಾಡುತ್ತಿದ್ದದ್ದು, ಅವರ ಆದರ ಆತಿಥ್ಯ, ಕಾರಂತರ ಬಗೆಗಿನ ಅಭಿಮಾನ, ಹಾಸ್ಯಪ್ರಜ್ಞೆ, ಇವೆಲ್ಲ ಅವರನ್ನು ಬಲ್ಲವರಿಗೆ ತಿಳಿದೇ ಇರುತ್ತದೆ. ಉತ್ತೇಜಿಸಬೇಕೆನ್ನುವ ಕಾರಣಕ್ಕೆ ಅವರು ಯಾರನ್ನೂ ಸುಮ್ಮನೆ ಹೊಗಳುತ್ತಿರಲಿಲ್ಲ. ಒಮ್ಮೆ ಬೇಂದ್ರೆಯವರ ಕುರಿತು ನಾನು ಬರೆದ ಲೇಖನವೊಂದನ್ನು ಓದಿ 'I am stunned' ಎಂದು ನಾಲ್ಕೈದು ಬಾರಿ ಒತ್ತಿ ಹೇಳಿದಾಗ ನಾನು ಉಬ್ಬಿಹೋಗಿದ್ದೆ. ಮಾಸ್ತಿಯವರ ಬಗ್ಗೆ ಒಂದು ಲೇಖನ ಬರೆದುಕೊಡಿ ಎಂದರು. ಬರೆದುಕೊಟ್ಟೆ. ಅದನ್ನು ಓದಿ ಅಷ್ಟೇ ನಿಷ್ಠುರವಾಗಿ 'ಇದೊಂದು ಭಾಷಣದ ಹಾಗೆ ಇದೆ. ಇದು ಬರವಣಿಗೆ ಅಲ್ಲ' ಎಂದುಬಿಟ್ಟರು! ನಾನು ಮತ್ತೆ ಹೊಸದಾಗಿ ಬರೆದುಕೊಟ್ಟೆ. ನನ್ನ ಬರವಣಿಗೆಯ ಶುರುವಿನ ದಿನಗಳಲ್ಲಿ ಉತ್ತೇಜನ ನೀಡಿ, ನಾನು ಬರವಣಿಗೆಯನ್ನು ಮುಂದುವರಿಸುವುದಕ್ಕೆ ಕಾರಣಕರ್ತರಾದವರಲ್ಲಿ ಐತಾಳರೂ ಒಬ್ಬರು.

ನಮ್ಮ ಮಾತುಕತೆಗಳು ಹೆಚ್ಚಾಗಿ ಫೋನಿನಲ್ಲೆ. ನಾನು ಯಾವಾಗಲೂ ನೆನಪಿಸಿಕೊಳ್ಳುವ ಅವರ ಒಂದು ಮಾತು: 'ನಮ್ಮ ಊರಿನ ಮನೆಯ ಒಕ್ಕಲು ಜನರ ಮಾತು ಎಷ್ಟು ಚೆಂದ! ನಾನು ಭಾರತದಲ್ಲಿರುತ್ತ ವರ್ಷಕ್ಕೊಮ್ಮೆ ಊರಿಗೆ ಹೋದಾಗ – ಒಡೇರ್ರೇ ಏಗಳ್ ಬಂದ್ರಿ? – ಅಂತ ಅವರು ಕೇಳುವುದು ಎಷ್ಟು ಚಂದ. ಆ 'ಏ...ಗಳ್' ಅಂತ ರಾಗವೆಳೆದು ಕೇಳುವುದು! ಆಹ್!!'

ಈ ಮಾತಿನಲ್ಲಿ ಅವರಿಗೆ ಆ ಜನರ ಬಗ್ಗೆ ಮತ್ತು ಆ ಜನರಿಗೆ ಇವರ ಬಗ್ಗೆ ಇದ್ದ ಆಪ್ಯಾಯಮಾನತೆ, ಕುಂದಗನ್ನಡ ಭಾಷೆಯ ಸೊಗಡಿಗೆ ಅವರು ಮೈಮರೆವ ರೀತಿ, ಅವರ ಬಾಲ್ಯದ ನೆನಪು, ಊರಿನ ಸೆಳೆತ, ಎಲ್ಲವೂ ಮೇಳೈಸಿ ಅವರ ದನಿ ಅಲೆಅಲೆಯಾಗಿ

ಹೊಮ್ಮುತ್ತಿತ್ತು. ಅವರು ತಮ್ಮ ಮಡದಿಯನ್ನು 'ಪುಟ್ಟಿ...' ಎಂದು ಕರೆಯುತ್ತಿದ್ದ ರೀತಿಯೂ ಅಷ್ಟೇ ಆಪ್ಯಾಯಮಾನವಾಗಿತ್ತು. ಅವರ ಮನೆಯಲ್ಲೊಮ್ಮೆ ತಂಗಿದ್ದಾಗ ಅವರಿಬ್ಬರ ಆತಿಥ್ಯವನ್ನು ನಾವು ಮರೆಯುವುದಕ್ಕೇ ಸಾಧ್ಯವಿಲ್ಲ. ಬೆಳಗ್ಗೆ ಬೇಗ ಹೊರಡುವುದಿದೆಯೆಂದು ಅವರ ಮಡದಿ ಲಕ್ಷ್ಮಿಯವರು ಮುಂಜಾನೆಯೇ ಎದ್ದು ನಮಗೆಲ್ಲ ಚಪಾತಿ ಮಾಡಿ ಡಬ್ಬಿಗೆ ಹಾಕಿ ಕಳಿಸಿದ್ದರು. ರಾತ್ರಿ ಬರುವಾಗ ಹಾಸಿಗೆಯನ್ನೆಲ್ಲ ಹಾಸಿಟ್ಟಿದ್ದರು! ಮತ್ತೊಂದು ಕಡೆ ನಮಗೆ ಅನುಕೂಲವಾಗಲೆಂದು ಅವರ ಮಗಳು ಅನುರಾಧಾರನ್ನು ನಮ್ಮೊಂದಿಗೆ ಕಳುಹಿಸಿದ್ದರು.

ಐತಾಳರು ಬೆಂಗಳೂರಿಗೆ ಬಂದಾಗೆಲ್ಲ ಬಹುತೇಕ ಅವರನ್ನು ಭೇಟಿ ಮಾಡುತ್ತಿದ್ದೆ. ಅದೇ ನಗು, ಅದೇ ಉತ್ಸಾಹ, ಅದೇ ಕುಂದಗನ್ನಡದ ಏರಿಳಿತದ ಮಾತು. ಒಮ್ಮೆ ನಮ್ಮ ಪುಟ್ಟ ಮನೆಗೆ ಗಂಡ-ಹೆಂಡತಿ ಬಂದಿದ್ದರು. ಡೈನಿಂಗ್ ಟೇಬಲ್ ಇತ್ಯಾದಿ ಅನುಕೂಲತೆಗಳಿಲ್ಲದ ತುಂಬ ಪುಟ್ಟ ಮನೆ ಅದಾಗಿತ್ತು. ಊರು ಮನೆಗೆ ಬಂದವರ ಹಾಗೆ ಯಾವುದೇ ಬಿಗುವಿಲ್ಲದೆ ನಮ್ಮೊಡನೆ ಕಾಲ ಕಳೆದರು. ಅದು ನಮ್ಮ ಸಂಕಷ್ಟದ ಕಾಲವೂ ಆಗಿತ್ತು. ಅವರು ನನ್ನ ಕೈ ಅದುಮಿ, 'ನೋಡಿ, ನನಗೆ ಇದನ್ನೆಲ್ಲ ಮಾತಿನಲ್ಲಿ ಹೇಳುವುದಕ್ಕೆ ಸಮಾಧಾನ ಮಾಡುವುದಕ್ಕೆ ಬರುವುದಿಲ್ಲ. ಆದರೆ ನಿಮಗೆ ಹೀಗೆ ಆದದ್ದು ಕೇಳಿ ತುಂಬ ಆಘಾತವಾಗಿದೆ. I am deeply hurt' ಎಂದಿದ್ದರು. ಅವರ ಆತ್ಮೀಯತೆಯ ತೇವ ಮಾತು ಬರವಣಿಗೆಗೆ ಮೀರಿದ್ದು.

'ಮನುಷ್ಯ ಈ ಭೂಮಿಯ ಮೇಲೆ ಉಳಿಸಿ ಹೋಗಬಹುದಾದ್ದು ಕೇವಲ ಒಳ್ಳೆಯ ನೆನಪುಗಳನ್ನಷ್ಟೇ' ಎಂಬ ಶಿವರಾಮ ಕಾರಂತರ ಮಾತೊಂದಿದೆ. ಅದನ್ನು ನಂಬಿ ಆ ಕಾರ್ಯವನ್ನು ಅವರು ಸಾರ್ಥಕವಾಗಿ ನೆರವೇರಿಸಿದ್ದಾರೆ. ಅವರ ತುಂಬು ಜೀವನಕ್ಕೆ ನಮಸ್ಕಾರ!

*

ಸಾಹಿತ್ಯದ ಕಡಲಲ್ಲಿ ದೊರೆತ ಆಹಿತಾನಲ ಅಜ್ಜಯ್ಯ

– ಪೂರ್ಣಿಮಾ ಕಮಲಶಿಲೆ

ಕನ್ನಡ ಸಾಹಿತ್ಯ ಲೋಕದಲ್ಲಿ 'ಆಹಿತಾನಲ' ಎಂಬ ನಾಮಧೇಯ ನನ್ನನ್ನು ಆಕರ್ಷಿಸಿತ್ತಾದರೂ, ಅವರು ನಮ್ಮ ಕುಂದಾಪುರ ತಾಲ್ಲೂಕಿನ ಕೋಟದ ನಾಗ ಐತಾಳರೆಂದು ತಿಳಿದದ್ದು ತೀರಾ ಆರೇಳು ವರ್ಷಗಳ ಹಿಂದೆ. ನಾಗಪ್ಪೈತಾಳರು ಮತ್ತು ಪುಟ್ಟಮ್ಮನನ್ನು ಭೇಟಿಯಾದದ್ದೇ ಒಂದು ಅಪೂರ್ವ ಸಂದರ್ಭದಲ್ಲಿ, ಅವರು ಹುಟ್ಟಿ ಬೆಳೆದ ಮನೆಯಂಗಳದಲ್ಲಿಯೇ ಎಂದು ಹೇಳಲು ನನಗೆ ಅತೀವ ಖುಷಿ. ಯಾಕೆಂದರೆ ಹುಟ್ಟೂರು, ಇಲ್ಲಿನ ಜನರನ್ನು, ಸಂಬಂಧಗಳನ್ನು, ಭಾಷೆಯನ್ನು, ಅಡುಗೆಯನ್ನು ಅತಿಯಾಗಿ ಪ್ರೀತಿಸುವ ಆರಾಧಿಸುವ ನಾಗೈತಾಳರನ್ನು ಅವರ ಇಳಿ ವಯಸ್ಸಿನಲ್ಲಿ ಭೇಟಿಯಾಗಿ ಬೆರಳೆಣಿಕೆಯ ವರ್ಷಗಳ ಕಾಲ ಅವರ ಒಡನಾಡಿಯಾಗಿದ್ದು ಒಂದು ಯೋಗಾಯೋಗವೇ ಸೈ. ಎಲ್ಲಿಯ ಸಾಹಿತ್ಯಾಂಜಲಿ ಕ್ಯಾಲಿಫೋರ್ನಿಯಾ? ಎಲ್ಲಿಯ ಕುಂದಾಪುರ ತಾಲ್ಲೂಕಿನ ಕಮಲಶಿಲೆ! ಅದೆಷ್ಟು ಜ್ಞಾನ, ಜೀವನಾನುಭವದ ಕಣಜ ನಾಗೈತಾಳರನ್ನು, ಸಾಸಿವೆಯಷ್ಟು ಜೀವನ ಕಂಡುಂಡು ಬೆಳೆಯುತ್ತಿರುವ ಈ ಕುವರಿ ಸಂಧಿಸಿದ್ದೇ ಒಂದು ಸೋಜಿಗವಲ್ಲದೆ ಇನ್ನೇನು?

ಕನ್ನಡದ ಹೆಸರಾಂತ ಮಾಸ ಪತ್ರಿಕೆ ತುಷಾರದವರು ನಾಲ್ಕಾರು ವರ್ಷಗಳ

ಹಿಂದೆ, ರಾಜ್ಯದ ಆಯ್ದ ಲೇಖಕಿಯರಿಗಾಗಿ ಆಯೋಜಿಸಿದ 'ಕೇಳುಸಖಿ' ಎಂಬ ಕಾರ್ಯಕ್ರಮದಲ್ಲಿ ಒಬ್ಬ ಸಖಿಯಾಗಿ ಭಾಗವಹಿಸುವ ಸುಯೋಗ ನನಗೂ ಒದಗಿತ್ತು. ಈ ಕಾರ್ಯಕ್ರಮವನ್ನು ಸಾಹಿತ್ಯಾಂಜಲಿ ಕ್ಯಾಲಿಫೋರ್ನಿಯಾ, ಅಭಿನವ ಮತ್ತು ತುಷಾರದವರು ಜಂಟಿಯಾಗಿ ಆಯೋಜಿಸಿದ್ದು ಉಡುಪಿ ಜಿಲ್ಲೆಯ ಕುಂದಾಪುರ ತಾಲ್ಲೂಕಿನ ಬೀಜಾಡಿಯ ಸಮುದ್ರದ ದಂಡೆಯ ಮೇಲಿನ ಕಡಲಮನೆಯಲ್ಲಿ. ನಾನು ಈ ಶಿಬಿರಕ್ಕೆ ಶಿಬಿರಾರ್ಥಿಯಾಗಿ ಹೊರಟು ಗಮ್ಯ ತಲುಪಲು ರಾಷ್ಟ್ರೀಯ ಹೆದ್ದಾರಿಯವರೆಗೂ ಬಸ್ಸಿನಲ್ಲಿ ಸಾಗಿ, ಅಲ್ಲಿ ಆಯೋಜಕರ ಕಾರಿಗಾಗಿ ಕಾಯುತ್ತಾ ನಿಂತಿದ್ದೆ. 'ಅಭಿನವ'ದ ರವಿ ಸರ್ ಕಾರಿನೊಂದಿಗೆ ಬಂದರು, ನನ್ನನ್ನು ಬರಮಾಡಿಕೊಂಡವರೆ 'ಪೂರ್ಣಿಮಾ ಕೋಟಕ್ಕೆ ಹೋಗಿ ನಾಗೈತಾಳರನ್ನು ಕರೆದುಕೊಂಡು ಹೋಗೋಣ' ಎಂದರು. 'ಸರಿ' ಎಂದು ಗೋಣಾಡಿಸಿದೆ, ನನಗೆ ರವಿಕುಮಾರ್ ಸರ್ ಕೂಡ ಹೊಸ ಪರಿಚಯ, ನಾಗೈತಾಳರು ಯಾರೆಂದೇ ತಿಳಿದಿಲ್ಲ! ನಮ್ಮ ಕಾರು ನಾಗೈತಾಳರ ಮನೆಯಂಗಳ ತಲುಪಿತು. ವೃದ್ಧ ದಂಪತಿ ಕಾರಿನ ಬಳಿ ಬಂದರು. ನಾಗ ಐತಾಳರು ಕಾರೊಳಗೆ ಇಣುಕಿ 'ಕ್ಷಮಿಸಿ' ಎಂದರು ನಮ್ಮನ್ನು ನೋಡಿ. 'ಯಾಕೆ ಸರ್ ಆ ಮಾತು?' ಎಂದೆ... 'ಈ ನನ್ನ ಮಡದಿ ಲಕ್ಷ್ಮೀಗೆ ಬರೋದು ಬೇಡ ಎಂದರೂ ಬರುವೆ ಎಂದಳು, ಈಗ ನೋಡಿ ನಾಲ್ಕು ಜನ ಕಷ್ಟಪಟ್ಟು ಕಾರಿನಲ್ಲಿ ಕುಳಿತು ಕೊಳ್ಳಬೇಕಾಯಿತು' ಎಂದರು. 'ಛೆ, ಛೆ... ಇದೆಲ್ಲಾ ಕಷ್ಟವೇ?' ಎಂದೆ. ನಾನು ಆ ಹಿರಿಯ ದಂಪತಿಗಳು ಕ್ಯಾಲಿಫೋರ್ನಿಯಾದ ಸಾಹಿತ್ಯಾಂಜಲಿಯವರು! ಎಂಬತ್ತೇಳರ ಹರೆಯದ ನಾಗ ಐತಾಳರು, ಎಪ್ಪತ್ತೈದಕ್ಕೂ ಹೆಚ್ಚು ವಯಸ್ಸಿನ ಲಕ್ಷ್ಮೀ ಐತಾಳರದು ಐವತ್ತೇಳು ವರ್ಷದ ದಾಂಪತ್ಯ ಜೀವನ! ಈ ಸಾಹಿತ್ಯ ಪರಿಚಾರಕ ದಂಪತಿಯ ಜೊತೆಗೆ ನಮ್ಮ ಪಯಣ ಕಡಲಮನೆಯತ್ತ ಸಾಗಿತು.

ರವಿ ಸರ್ ಹೇಳಿದರು 'ಪೂರ್ಣಿಮಾ, ಇವರು ಯಾರಂತ ಗೊತ್ತಾಗ್ಲಿಲ್ವ? ಆಹಿತಾನಲ ಎಂದು ಬರೆಯುತ್ತಾರಲ್ಲ ಅವರೆ' ಎಂದಾಗ ನನಗೋ ಆಶ್ಚರ್ಯ! 'ಹೋ ಈ ಆಹಿತಾನಲರೇ ನಾಗ ಐತಾಳರೇ?' ಎಂದೆ ಬೆರಗಾಗಿ. ಹೆಂಡತಿ ಲಕ್ಷ್ಮೀ / ಪುಟ್ಟಮ್ಮನ ಬಗೆಗಿನ ಐತಾಳರ ಕಾಳಜಿ ಮತ್ತು ಅವರ ಜ್ಞಾನದ ನುಡಿಗೆ ಶಿರಬಾಗಿದೆ. ಕೇಳುಸಖಿ ಕಾರ್ಯಕ್ರಮದಲ್ಲಿ ಹಿರಿಯ ಲೇಖಕಿ ವೈದೇಹಿಯವರು, ಹಾಸ್ಯ ಲೇಖಕಿ ಭುವನೇಶ್ವರಿ ಹೆಗಡೆಯವರ ಜೊತೆ ನಾಗ ಐತಾಳರು ಕೂಡಿಕೊಂಡರು. ಕಾರ್ಯಕ್ರಮದ ಉದ್ಘಾಟನೆ ಮಾಡಿದವರು ನಾಗೈತಾಳರು. ಇದೊಂದು ವಿಭಿನ್ನ ಕಾರ್ಯಕ್ರಮ, ಎಲ್ಲ ಸಾಹಿತಿಗಳ ನಡುವೆ ಕುಳಿತ ಐತಾಳರು ತಮ್ಮ ತಾಯಿಯ ಕುರಿತಾಗಿ ಮಾತನಾಡಿದ್ದೇ ಉದ್ಘಾಟನೆ!.

ಐತಾಳರು ಮೊದಲೇ ಭಾವುಕ ಜೀವಿ, ಕಣ್ತುಳುಕುತ್ತಲೇ ಇರುವ ಜೀವ ಅವರದ್ದು ಅವರ ಅಮ್ಮನ ಬಗ್ಗೆ ಅದೆಷ್ಟು ನೆನಪಿಸಿಕೊಂಡು ಹೇಳಿದರು. ಅಮ್ಮನ ಅಕ್ಕರೆ,

ತಿನ್ನುಬಾಕನಾದ ತನ್ನ ಮೇಲೆ ಆಕೆಗಿದ್ದ ಮಮತೆ, ವೃದ್ಧೆ ಅಮ್ಮನನ್ನು ಏಕಾಂಗಿಯಾಗಿ ಅಮೆರಿಕಕ್ಕೆ ಕಳುಹಿಸಿದ ತಮ್ಮ! ಅಮ್ಮನ ಧೈರ್ಯ! ಅವಳಿಗಿದ್ದ ಮುಸುರೆ ಮಡಿಯ ಬಗ್ಗೆ ಮನದಣಿಯೆ ಮಾತನಾಡಿದರು. ನಾಗೈತಾಳನೆಂಬ ಮಗನನ್ನು ನೋಡಲೋಸುಗ ಅಮೆರಿಕಕ್ಕೆ ಬಂದ ಆ ಅಮ್ಮನನ್ನು ಅವಳ ಪ್ರೀತಿಯನ್ನು ನೆನೆದು ಭಾವುಕರಾದರು ಐತಾಳರು. ನೆರೆದವರೆಲ್ಲರ ಕಣ್ಣು ಮನಸ್ಸು ಒದ್ದೆಯಾಗಿತ್ತು.

ಎರಡು ದಿನದ ಈ ಕೇಳು ಸಖಿ ಶಿಬಿರದ ಸಮಾರೋಪ ಸಮಾರಂಭಕ್ಕೆ ಪುನಃ ನಾಗೈತಾಳರು ಪುಟ್ಟಮ್ಮನ ಜೊತೆ ಆಗಮಿಸಿದ್ದರು. ನಾವೆಲ್ಲ ಆಗ ನಾಗೈತಾಳರನ್ನು ನಾಗಜ್ಜಯ್ಯ ಎಂದೂ, ಪುಟ್ಟಕ್ಕನನ್ನು ಪುಟ್ಟಮ್ಮತ್ತೆ ಎಂದು ಮನಸಾರೆ ಕರೆದು ಸಂಭ್ರಮಿಸಿದೆವು. ವಯೋವೃದ್ಧ ಐತಾಳ ದಂಪತಿ ನಮಗಿವಾಗ ಸಿಕ್ತಾರೆ? ಅವಕಾಶವಾದರೂ ಎಲ್ಲಿದೆ? ಎಂದು ಯೋಚಿಸುತ್ತಲೇ ಅವರ ಫೋನ್ ನಂಬರ್ ಪಡೆದು ಶಿಬಿರದಿಂದ ಮರಳಿದ್ದೆ, ಒಂದೆರಡು ತಿಂಗಳು ಕಳೆದಿತ್ತು. ಒಂದು ದಿನ ಬೆಳ್ಳಂಬೆಳಿಗ್ಗೆ ಅಂತರರಾಷ್ಟ್ರೀಯ ಫೋನ್ ಕರೆ ಬಂತು! ಫೋನ್ ಎತ್ತಿದೆ! ಆ ಕಡೆಯಿಂದ 'ನಾನು ನಾಗೈತಾಳ ಅಮೆರಿಕಾದಿಂದ' ಎಂಬ ಧ್ವನಿ ಕೇಳಿ ಮಾತೇ ಹೊರಡದಾಯಿತು.

'ಓಹ್!! ಐತಾಳಜ್ಜಯ್ಯ ನಮಸ್ತೆ, ನೀವು ಪುಟ್ಟಮ್ಮತ್ತೆ ಹ್ಯಾಂಗಿದ್ರಿ? ಎಲ್ಲಿದ್ರಿ?' ಎಂದೆ ಅತೀವ ಸಂತಸದಲ್ಲಿ! ಯಾಕೆಂದರೆ ನನ್ನ ಜೀವಮಾನದಲ್ಲಿ ನಾನು ಮೊಟ್ಟ ಮೊದಲ ಬಾರಿಗೆ ಅಮೆರಿಕದಲ್ಲಿರುವ ಕನ್ನಡಿಗರ ಬಳಿ ಫೋನ್‌ನಲ್ಲಿ ಮಾತನಾಡಿದ್ದಿದ್ದರೆ ಅದು ನಾಗೈತಾಳರ ಬಳಿ, 'ಪೂರ್ಣಿಮಾ ನಾವಿಬ್ರೂ ಸುಮಾರಿಗಿತ್ ಹಳ್ತಾದ್ಯಾ ಹಾಳಾದ್ಯಾ ಅಂತ್ರಲೆ ಹಾಂಗೆ. ಹುಡುಗನ ತರ ದಾಪುಗಾಲಿಟ್ಟು ನಡೆ, ಒತ್ತೊತ್ತಿ ಬರುವ ಭಾವನೆಗಳನ್ನೆಲ್ಲ ಬರೆ ಎಂದು ಮನಸ್ಸು ಹೇಳತ್ ಮರಾಯ್ರೆ... ಆದರೆ ಕಾಲು ಕೈ ನಾ ಹೇಳಿದ್ ಕೇಂತಿಲ್ಲೆ. ಕಣ್ಣೂ ಕಿವಿಯೂ ಲಗಾಡಿ ಹೋಯ್ತ್ ಮರಾಯ್ರೆ. ನೀವ್ Facebookನಲ್ಲಿ ಬರದ್ದೆಲ್ಲ ಕಷ್ಟಪಟ್ಟು ಭೂತಕನ್ನಡಿ ಹಿಡ್ಕಂಡ್ ಓದ್ತೆ. ಮೊನ್ನೆ ನಿಮ್ ಟಿ.ವಿ. ಸಂದರ್ಶನ ಕಂಡೆ ಮರ್ರೆ ಅದೆಷ್ಟ್ ಚಂದ ಮಾಡಿ ಹೆಣ್ಣು ಸಂಸಾರ ನಿರ್ವಹಿಸುದರ ಬಗ್ಗೆ ಮಾತಾಡಿದ್ರಿ. ಕೇಂಡ್ ಭಾಳ ಖುಷಿ ಆಯ್ತ್ ಅದನ್ನೆ ಹೇಳುವ ಅಂದೆಳಿ ಫೋನ್ ಮಾಡಿದ್' ಎನ್ನುತ್ತಾ, 'ನೀವು ಹ್ಯಾಂಗಿದ್ರಿ? ಆಯ್ತಾ ಬೆಳಗ್ಗಿನ ತಿಂಡಿ' ಎಂದರು.

'ನಾನ್ ಹುಷಾರಿದ್ದೆ ಅಜ್ಜಯ್ಯಾ, ತಿಂಡಿ ಮಾಡ್ತಾ ಇದ್ದೆ, ಹಲಸಿನ ಹಣ್ಣಿನ ಕಡ್ಬ್. ಅಟ್ಟದೊಳಗೆ ಬೆಯ್ತಾ ಇತ್'. ಎಂದದ್ದೆ ತಡ ಐತಾಳರು ಆ ಕಡೆಯಿಂದ.. 'ಹೌದಾ ಸುಳ್ಳಾ ಹೇಳಿ, ನನ್ ಬಾಯಲ್ ನೀರ್ ಬರ್ಲಿ ಅಂದ್ಕಂಡೆ ಹೇಳ್ತಿದ್ರಿ ಅಲ್ದಾ? ನಮ್ಮನೆಯಲ್ಲಿ ಕ್ವಾಟದಲ್ಲಿ ನಾ ಸಣ್ಣದಿಪ್ಪಮೆಗೆ ಮಳೆಗಾಲದಲ್ಲಿ ಅಮ್ಮ ಹಲ್ಸಿನ ಹಣ್ಣಿನ ಕಡ್ಬ್, ಪತ್ರೊಡೆ ಎಲ್ಲಾ ಮಾಡ್ತಿದ್ಲ್, ಬಿಸಿ ಬಿಸಿ ಕಡ್ಬಿಗೆ, ಪತ್ರೊಡೆಗೆ ಬೆಣ್ಣೆ ಹಾಯ್ಕಂಡ್ ತಿಂದ್ ನೆನ್ಪ್ ಇನ್ನೂ ನನ್ನ ನಾಲಿಗೆ ಮ್ಯಾಲೆ ಇತ್ ಮರಾಯ್ರೆ. ನೀವ್ ಎಂತ ಬೆಣ್ಣೆ ಹಾಕಿ ಕಡ್ಬ್ ಕೊಡ್ತಿಯಾ? ತುಪ್ಪ ಹಾಕಿಯಾ?' ಎಂದರು. 'ಯಾವ್ದ್ ಬೇಕಾರೂ ಹಾಕಿ ಕೊಡ್ತೆ ಬನ್ನಿ

ಅಜ್ಜಯ್ಯ ನಮ್ಮನೆಗೆ' ಎಂದೆ. 'ಅಯ್ಯೋ ಮರಾಯ್ರೆ ನಂಗ್ ಮತ್ ಮತ್ ಹಲ್ಸಿನ್ ಹಣ್ಣಿನ ಕಡ್ಬ್, ಪತ್ರೊಡೆ ತಿನ್ಕ್ ಅಂದ್ ಆಸೆ ಹುಟ್ಟಿಸಬೇಡಿ, ನಮ್ ಪುಟ್ಟಮ್ಮನಿಗೆ ಕಷ್ಟ ಆತ್' ಎನ್ನುತ್ತಾ, 'ನಾವ್ ನಿಮಗೆ ಪೈಕಿ ಆಯ್ಕ್ ಮರ್ರೆ ಅದನ್ನೇ ಹೇಳುವ ಅಂತ ಫೋನ್ ಮಾಡಿದ್ದು' ಎಂದರು. ಆಮೇಲೆ ಅವರ ಹೆಂಡತಿ ಮನೆಗೂ ನಮಗೂ ನೆಂಟತನ ಹೇಗೆ ಎಂಬುದನ್ನು ತಿಳಿಸಿದರು, ಇದಲ್ಲದೆ ನನ್ನ ಸಹಪಾಠಿ ಸುಚಿತ್ರಾ ಉಪಾಧ್ಯಾಯ ಅವರ ಹತ್ತಿರದ ಸಂಬಂಧಿ ಎಂಬುದನ್ನು ನೆನಪಿಸಿಕೊಂಡು ಹೇಳುತ್ತಾ, 'ಹ್ವಾಯ್ ಮರಾಯ್ರೆ ನಿಮ್ ಫ್ರೆಂಡ್ ಸುಚಿತ್ರಾ ಮನೆಯಲ್ಲೇ ನಾನ್ ಭಾರತಕ್ಕೆ ಬಂದಾಗ ಇರೋದು' ಎಂದರು ಖುಷಿಯಲ್ಲಿ. ನಡುವೆ 'ನಮ್ಮ ಕುಂದಾಪ್ರ ಕನ್ನಡದಲ್ಲಿ ಅದೆಷ್ಟ್ ವ್ಯತ್ಯಾಸ ಕಾಣಿ ಪೂರ್ಣಿಮಾ, ನಾವ್ ಕ್ವಾಟದವ್ರ್ ಮಾತಾಡು ಹಾಂಗೆ ನೀವ್ ಕಮಲಶಿಲೆಯವ್ರ್ ಮಾತಾಡುದಿಲ್ಲೆ, ನಿಮ್ದ್ ಒನ್ನಮನಿ ಬೇರೆ ಕನ್ನಡ' ಎಂದರು.

'ಹೌದ್ ಅಜ್ಜಯ್ಯ ನಾವ್ ಮೂಡಿನವ್ರ್, ಕಡಲಬದಿಯವರ್ರ್ ಮಾತಾಡಿದಂತೆ ನಾವ್ ಮಾತಾಡುದಿಲ್ಲ, ನಮ್ದ್ ಮತ್ತೂ ದೇಸಿ ಕನ್ನಡ' ಎಂದೆ. 'ಅಜ್ಜಯ್ಯ ನೀವ್ ಅಮೆರಿಕಾಕ್ಕೆ ಹೋಯ್ ಎಷ್ಟ್ ವರ್ಷ ಆದರೂ ಹುಟ್ಟೂರ್ ಭಾಷೆ ಎಷ್ಟ್ ಲಾಯ್ಕ್ ಮಾತಾಡ್ತ್ರಿಮರ್ರೆ, ನಿಮ್ ಮಾತ್ ಕೇಂಡ್ ಭಾರಿ ಖುಷಿ ಆಯ್ತ್ ನಂಗೆ' ಎಂದು ಪ್ರತಿ ಬಾರಿ ನಾಗೈತಾಳರು ಫೋನ್ ಮಾಡಿದಾಗ ನಾನು ಹೇಳೋದು, ಅವರು ಅದಕ್ಕೆ ಪ್ರತಿಯಾಗಿ 'ನಿಮ್ ಹತ್ರ ಕ್ವಾಟ ಕನ್ನಡ ಮಾತಾಡ್ಕಂತನೆ ನಾ ಫೋನ್ ಮಾಡುದ್ ಮರಾಯ್ರೆ' ಎಂಬುದು ಮಾಮೂಲಿಯಾಗಿತ್ತು.

ನಾಗ ಐತಾಳರು ಹೋದಲ್ಲಿ ಬಂದಲ್ಲಿ ಎದುರೆದುರು ಸಿಕ್ಕಿದಾಗ 'ಹ್ವಾಯ್ ಪೂರ್ಣಿಮಾ ಒಂದ್ ಹ್ಯಾ ಹೂ ಅಂದ್ ಹಾಡ್ ಹೇಳಿ ಕಾಂಬ' ಎನ್ನುತ್ತಿದ್ದರು. ಅವರಿಗೆ ಕುಂದಾಪುರ ಕನ್ನಡದ ಜನಪದ ತ್ರಿಪದಿಗಳೆಂದರೆ ಬಹು ಇಷ್ಟ ಈ ವಿಷಯವನ್ನು ಅವರು 'ಕಾಲ ಉರುಳಿ ಉಳಿದುದು ನೆನಪಷ್ಟೇ' ಕೃತಿಯಲ್ಲೂ ಪ್ರಸ್ತಾಪಿಸುತ್ತಾ, ಅವರ ಮನೆಯ ಕೊಟ್ಟಿಗೆಯ ಜಗುಲಿಯಲ್ಲಿ ಕೆಲಸದಾಳುಗಳು ಭತ್ತ ಕುಟ್ಟುವಾಗ ಸ್ಪರ್ಧೆಗಿಳಿದವರಂತೆ ಹೇಳುತ್ತಿದ್ದ ಜನಪದ ಹಾಡುಗಳನ್ನು ನೆನಪಿಸಿಕೊಂಡು ಬರೆದಿರುವುದು ಸ್ತುತ್ಯರ್ಹ. ಒಬ್ಬ ವ್ಯಕ್ತಿ ಹುಟ್ಟೂರನ್ನು ಬಿಟ್ಟು ಸಾಗರದಾಚೆ ನೆಲೆಸಿದರೂ ತನ್ನ ಇಳಿವಯಸ್ಸಿನಲ್ಲೂ ಹುಟ್ಟೂರ ಜನಪದ ಹಾಡುಗಳನ್ನು ಇನಿತು ಮರೆಯದೆ ನೆನಪಿಸಿಕೊಳ್ಳುವುದು ಮತ್ತು ಅದೇ ದಾಟಿಯಲ್ಲಿ ಹಾಡಿ ತೋರಿಸುವುದೆಂದರೆ ಅದು ಆ ಮಣ್ಣಿನ ಮೇಲಿನ ಪ್ರೀತಿ, ತಾಯ್ನೆಲ, ಮಾತೃಭಾಷೆಯ ಮೇಲಿನ ಅಕ್ಕರೆಯಿದ್ದರಷ್ಟೇ ಸಾಧ್ಯ. ಫೋನ್ ಮಾಡಿದಾಗಲೆಲ್ಲ 'ಇಲ್ಕಾಣಿ ಪೂರ್ಣಿಮಾ ಈ ಹಾಡ್ ಒಂದ್ ಹೇಳಿ' ಎನ್ನುತ್ತಿದ್ದ ಐತಾಳರು, ನಾನೆಲ್ಲಾದರೂ ಸಾಹಿತ್ಯವನ್ನು ತಿರುಚಿದರೆ, 'ನಿಮ್ ಮೂಡ್ ಬದಿ ಹಾಂಗ್ ಹೇಳ್ತಿದ್ರೋನೊ, ನಮ್ ಕ್ವಾಟದ ಬದಿ ಹೀಂಗಿತ್ ಅದರ ಸಾಹಿತ್ಯ, ಅದನ್ ಈ ದಾಟಿಲ್ ಹಾಡ್ತಿದ್ಲ್ ನಮ್ ಅಮ್ಮ' ಎನ್ನುತ್ತಿದ್ದರು. ಜನಪದದ ಜೊತೆ

ಜೊತೆಗೆ ಸಂಪ್ರದಾಯದ ಹಾಡುಗಳೂ ಐತಾಳರಿಗೆ ಅಚ್ಚುಮೆಚ್ಚು. ಅವರು ಕೊನೆಯ ಬಾರಿ ಕರೆಮಾಡಿದಾಗ ಮದುವೆ ಮನೆಯಲ್ಲಿ ದೂರುವ ಹಾಡಿನ ಸಾಲುಗಳನ್ನು ಹಾಡಿದ್ದರು. ನಾನಾಗ 'ಐತಾಳ್ರೆ, ಉಪ್ಪು, ಉಪ್ಪಿನಕಾಯಿ ಚಟ್ನಿ, ಕುಸುಂಬ್ರಿ ಇಲ್ಲೆ... ಇದ್ಯಂತ ಜ್ವಾಗಳದ ಊಟ ಎಂದೆಲ್ಲಾ ಗಂಡಿನ ಮನೆಯವರು ದೂರುವ ಹಾಡುಗಳು, ಹೆಣ್ಣಿನ ಮನೆಯವರು ಅದಕ್ಕೆ ಉತ್ತರಿಸುವ ಹಾಡುಗಳ ಸಂಗ್ರಹವೂ ನನ್ನ ಬಳಿ ಇದೆ. ಒಮ್ಮೆ ಸಮಯ ಸಿಕ್ಕಾಗ ಅದನ್ನೆಲ್ಲ ಹಾಡಿ ರೆಕಾರ್ಡ್ ಮಾಡಿ ಕಳ್ಸತೆ' ಎಂದಿದ್ದೆ. ಆದರೆ ನಾನು ಆ ಕೆಲಸ ಮಾಡುವ ಮೊದಲೇ ಐತಾಳರು ನಮ್ಮನ್ನು ಬಿಟ್ಟುಹೋದರು. ಕೊಟ್ಟ ಮಾತಿಗೆ ತಪ್ಪಿದ ನೋವೊಂದು ನನ್ನ ಸದಾ ಕಾಡುತ್ತದೆ.

ನಾಗ ಐತಾಳರ ಬಳಿ ಮಾತನಾಡುವಾಗಲೆಲ್ಲ, ಐತಾಳರೆ 'ನಿಮ್ ಅರ್ಧದಷ್ಟು ವಯಸ್ಸು ನಂಗಾಯ್ಲಿಲ್ಲೆ, ನಿಮ್ ಮೊಮ್ಮಗಳ ಪ್ರಾಯ ನಂಗೆ, ನಂಗೆ ನೀವ್ ಮಾರಾಯ್ರೆ ಅಂಬ್ದ್ ಬ್ಯಾಡ. ಏ ಹೆಣ್ಣೇ ಅಂತ ಕರಿನಿ ಸಾಕ್' ಅಂದ್ರೂ, ನಾಗೈತಾಳರು ಪ್ರತಿ ಬಾರಿಯೂ 'ಪೂರ್ಣಿಮಾ ಅವರೆ, ಮಾರಾಯರೆ' ಎಂದೇ ಕರೆಯುತ್ತಿದ್ದರು. ಆಗೆಲ್ಲ ನನಗನಿಸುತ್ತಿತ್ತು ತುಂಬಿದ ಕೊಡ ತುಳುಕದೆಂದು ಈ ಐತಾಳರನ್ನು ನೋಡಿಯೇ ಹೇಳಿರಬೇಕೆಂದು. ಹೀಗೆ ಪ್ರತಿ ಒಂದೆರಡು ತಿಂಗಳಿಗೆ ಫೋನ್ ಮಾಡಿ ಕನಿಷ್ಠ ಹದಿನೈದು ನಿಮಿಷ ಪುಟ್ಟಮ್ಮತ್ತೆ ನಾಗಜ್ಜಯ್ಯ ಮಾತನಾಡುವಾಗಲೂ ಅವರಿಗಿರುವ ಈ ಮಣ್ಣಿನ ಮೇಲಿನ ಪ್ರೇಮ, ಸಂಬಂಧಗಳ ಬಗೆಗಿನ ಕಾಳಜಿ, ಸ್ನೇಹಿತರ ಕುರಿತ ಒಲವು, ಸಾಹಿತ್ಯದ ಬಗೆಗಿನ ಪ್ರೀತಿ, ಹಿರಿಕಿರಿಯನ್ನು ಆ ದಂಪತಿಗಳು ನಡೆಸಿಕೊಳ್ಳುವ ರೀತಿಯನ್ನು ನೋಡಿ ತಲೆದೂಗುತ್ತಿದ್ದೆ.

ಆ ವಯೋವೃದ್ಧ ಜ್ಞಾನವೃದ್ಧ ದಂಪತಿಗಳ ದೇಹವಷ್ಟೇ ಅಮೆರಿಕಾದಲ್ಲಿದೆ, ಅವರ ಮನಸ್ಸು ಅನುಕ್ಷಣವು ಹುಟ್ಟೂರು, ಇಲ್ಲಿಯ ಆಹಾರ, ಸ್ನೇಹಿತರು, ಸಂಬಂಧಿಕರನ್ನು ನೆನೆಯುತ್ತದೆ ಎಂಬ ಅರಿವಾಗಿತ್ತು. ಪ್ರತಿ ಬಾರಿ ಫೋನ್ ಮಾಡಿದಾಗಲೂ ನಾಗಜ್ಜಯ್ಯನ ಬಳಿ ಯಾವಾಗ 'ಊರಿಗೆ ಬರ್ತಿರಿ?' ಎಂದು ಕೇಳುತ್ತಿದ್ದೆ. 'ಗೊತ್ತಿಲ್ಲ ಮರಾಯ್ರೆ' ಎಂದು ಹೇಳುತ್ತಿದ್ದರು. ಆದರೆ ಒಮ್ಮೆ ಅವರೇ ಫೋನ್ ಮಾಡಿ 'ಮುಂದಿನ ತಿಂಗಳು ಊರಿಗೆ ಬತ್ತೆ. ಆಗ ಉಡುಪಿ ಜಿಲ್ಲಾ ಸಾಹಿತ್ಯ ಪರಿಷತ್ತಿನ ಒಂದು ಕಾರ್ಯಕ್ರಮದಲ್ಲಿ ನಾಗಾಭಿನಂದನೆ ಎಂಬ ಕಾರ್ಯಕ್ರಮ ಹಮ್ಮಿಕೊಳ್ತಾರಂತೆ. ಅದಕ್ಕೆ ಬತ್ತೆ, ನೀವೂ ಬನ್ನಿ ಆ ಕಾರ್ಯಕ್ರಮಕ್ಕೆ' ಎಂದಿದ್ದರು. 'ಹೋ ನಾಗಜ್ಜಯ್ಯನನ್ನು ಪುನಃ ನೋಡುವ ಭಾಗ್ಯ ನನ್ನ ಪಾಲಿಗೆ ಒದಗಿಬಂದ ಸಂತಸದಲ್ಲಿ ನಾಗಾಭಿನಂದನೆ ಕಾರ್ಯಕ್ರಮಕ್ಕೆ ಹೋಗಿ ಐತಾಳ ದಂಪತಿಗೆ ನನ್ನ ಕಿರುಗೌರವ ಸಮರ್ಪಿಸಿ, ಬಾಯ್ತುಂಬ ಮಾತನಾಡಿ ನಮಿಸಿ ಬಂದಿದ್ದೆ.

ತದನಂತರ ಅಮೆರಿಕೆಗೆ ಮರಳಿದ ಐತಾಳ ದಂಪತಿಗಳಿಂದ ಫೋನ್ ಬರಲೇ ಇಲ್ಲ, ನಾನೇ ಒಮ್ಮೆ ಫೋನ್ ಮಾಡಿದಾಗ ತಿಳಿಯಿತು, ಐತಾಳರು ವಯೋಸಹಜ

ವೃದ್ಧಾಪ್ಯದಿಂದಾಗಿ ಆರೋಗ್ಯವಂತರಾಗಿಲ್ಲವೆಂದು ಮಾತನಾಡುವಾಗ ತೊದಲುತ್ತಾ, ಮರೆವಿನಿಂದ ಮತ್ತೆ ಮತ್ತೆ ಪ್ರಶ್ನಿಸುವವರಾಗಿದ್ದಾರೆಂದು, ಆದರೂ ಅವರ ಕನ್ನಡ ಪ್ರೇಮ, ಉತ್ಸಾಹ ಇನಿತೂ ಕುಂದಿಲ್ಲ ಎಂದು ಅವರ ಒಡನಾಡಿಗಳು ಹೇಳಿದ್ದರು. ಅದೇ ಸಮಾಧಾನದಲ್ಲಿ ಇದ್ದಿದ್ದೆ. ಆದರೆ ಒಂದೆರಡು ತಿಂಗಳ ಹಿಂದೆ ನಾಗೈತಾಳರು ಇನ್ನಿಲ್ಲ ಎಂಬ ಸುದ್ದಿ ತಿಳಿದಾಗ ಅತೀವ ದುಃಖವಾಯ್ತು.

ನಾಗೈತಾಳರು ಕೊಟ್ಟ ಪ್ರೀತಿ, ಅವರು ನೀಡಿದ, ಕಳುಹಿಸಿದ ಪುಸ್ತಕಗಳು, ಅವರೊಂದಿಗೆ ನಡೆಸಿದ ಮಾತುಕತೆ, ಅವರೊಡನಾಡಿದ ನೆನಪುಗಳು (ಪುಂಖಾನು ಪುಂಖವಾಗಿ) ನನ್ನ ಕಾಡುತ್ತವೆ. ಇಂದಿಗೂ ಕಾಡುತ್ತಲೇ ಇವೆ. ನನ್ನಂತ ಪುಟ್ಟ ಹಳ್ಳಿಯ ಸಾಮಾನ್ಯ ಗೃಹಿಣಿಗೆ ಅಷ್ಟು ಮೇರು ವ್ಯಕ್ತಿತ್ವದ ನಾಗಜ್ಜಯ್ಯನ ಪರಿಚಯವಾಗಿ, ಅವರು ಮೊಮ್ಮಗಳಿಗೆ ತೋರುವಷ್ಟು ಪ್ರೀತಿಯನ್ನು ನನಗೆ ಧಾರೆ ಎರೆದ ಪರಿಯನ್ನು ಮರೆಯಲುಂಟೆ?

ನಾಗೈತಾಳರು ಎಂದಿಗೂ ನನ್ನೆದೆಯೊಳಗೆ ಆಹಿತಾನಲರೆಂಬ ಅಜ್ಜಯ್ಯನಾಗಿ ಶಾಶ್ವತ ಬೆಳಕಾಗಿ ಇದ್ದೇ ಇರುತ್ತಾರೆ, ಐತಾಳರಿಗೆ ಭಾವಪೂರ್ಣ ನಮನಗಳು.

*

‘ನಾಪ್ಪಣಯ್ಯ ಮಾವ’ನೆಂಬೊ ಅದ್ಭುತ

– ಜ್ಯೋತಿ ಮಹಾದೇವ್

ಕರ್ನಾಟಕ ಕರಾವಳಿಯ ಮಣ್ಣು ಬಹಳವೇ ಫಲವತ್ತಾದುದು, ಜೈವಿಕ ಕೃಷಿಯಾಗಲಿ, ಬೌದ್ಧಿಕ ಕೃಷಿಯಾಗಲಿ– ಇಲ್ಲಿಯ ಮಣ್ಣು ಹುಲುಸಾದ, ರುಚಿಕಟ್ಟಾದ ಬೆಳೆಯನ್ನೇ ದೊರಕಿಸಿಕೊಡುತ್ತದೆ. ಈ ಮಣ್ಣಿನಲ್ಲಿ ಹುಟ್ಟಿ ದೂರದೂರಕ್ಕೆ ಕೊಂಬೆರೆಂಬೆ ಚಾಚಿ ಬೆಳೆವ ಮರಗಳು ಈ ನೆಲದ ಸಮೃದ್ಧಿಯ ಪ್ರತೀಕಗಳು. ಅಂತಹ ಪ್ರತೀಕಗಳಲ್ಲೊಂದು ಗ್ರಾಂಡ್ ಫಾದರ್ ಟ್ರೀ – ನಾಗೈತಾಳರು, ಊರಲ್ಲಿ ಬಂಧುಗಳ ನಡುವೆ ನಾಗಪ್ಪಣ್ಣಯ್ಯ, ನಾಪ್ಪಣ್ಣಯ್ಯ, ನಾಗಪ್ಪಯ್ಯ, ನಾಗಪ್ಪ ಮಾವ, ನಾಗಪ್ಪಣ್ಣಯ್ಯ ಮಾವ ಎಂಬಿತ್ಯಾದಿ ಹೆಸರುಗಳಿಂದ ತಮ್ಮ ನೀಳ ನಿಲುವು ಮತ್ತು ತಿಳಿಹಾಸ್ಯಗಳಿಂದ ಪ್ರಖ್ಯಾತರಾಗಿದ್ದ ನಾಗ ಐತಾಳರದು ಬಹಳ ಸರಳ ನಡೆನುಡಿಯ ನಿಸ್ಪೃಹ ವ್ಯಕ್ತಿತ್ವ. ಅವರು ತಮ್ಮ ಹುಟ್ಟಿದೂರು ‘ಕೋಟ’ದಲ್ಲಿದ್ದಷ್ಟು ಕಾಲ ಹಾಗೂ ತದನಂತರ ಪರವೂರಿಂದ ಮನೆಗೆ ಬಂದು ಹೋಗುವಾಗೆಲ್ಲ ಭೇಟಿಯಾಗುತ್ತಿದ್ದ ಬಂಧುಗಳಿಗೆ ಒಡನಾಟದ ಸವಿನೆನಪುಗಳೇ ಈಗ ಆಧಾರ. ಬಹಳಷ್ಟು ಮಂದಿಗೆ ‘ಅವರಿಲ್ಲ’ ಎನ್ನುವುದು ಅರಗಿಸಿಕೊಳ್ಳಲಾಗದ ವಿಷಯ. ‘ಪರವೂರಲ್ಲಿದ್ದಾರೆ, ಮುಂದಿನ ರಜೆಯಲ್ಲಿ ಬರ್ತಾರೆ’ ಎನ್ನುವ ಭಾವ. ಇಂತಹ ಜನಾನುರಾಗಿ ನಾಗ ಐತಾಳರನ್ನು ನಾನು ಭೇಟಿಯಾದುದು ಬಹುಶಃ ಹೊಸ ಶತಮಾನದಲ್ಲಿ, ಹ್ಯೂಸ್ಟನ್ ನಗರದಲ್ಲಿ ನಡೆದ ಮೊದಲ ಅಕ್ಕ ಸಮ್ಮೇಳನದಲ್ಲಿ. ಅನಂತರ,

2005ರ ದಶಂಬರದಲ್ಲಿ ಲಾಸ್ ಏಂಜಲಿಸ್ ನಗರದಲ್ಲಿ ಕನ್ನಡ ಸಾಹಿತ್ಯ ರಂಗ ನಡೆಸಿದ ಸಾಹಿತ್ಯೋತ್ಸವದ ಸಂದರ್ಭದಲ್ಲಿ ಇನ್ನಷ್ಟು ಆಪ್ತರಾದರು. ಅಲ್ಲಿಯೇ ಮೊದಲ ಬಾರಿಗೆ ಭೇಟಿಯಾದ ತ್ರಿವೇಣಿ ಹಾಗೂ ನಾನು ಜೊತೆಜೊತೆಯಾಗಿದ್ದರೆ ಐತಾಳರಿಗೆ ಹೇಳಲಾಗದ ಆನಂದ. ನಮ್ಮಿಬ್ಬರನ್ನು 'ಜ್ಯೋತ್ರಿ' ಎಂದೇ ಕರೆಯುತ್ತಿದ್ದರು. ನಾವಿಬ್ಬರೂ ಸೇರಿ ಅವರನ್ನು ಛೇಡಿಸುತ್ತಿದ್ದೆವು 'ನಾವಿಬ್ರೂ ಒಟ್ಟಿಗಿದ್ರೆ ನಿಮಗೇನು ಹೊಟ್ಟೆಕಿಚ್ಚು?' ಅವರಿಂದ ಬರುವ ಅದೇನೇನೋ ಹಾರಿಕೆ ಉತ್ತರಗಳು ನಗುವಿನಲೆಗಳನ್ನು ಹರಿಸುತ್ತಿದ್ದವು. ಪ್ರತಿ ಬಾರಿ ನಾವು ಮೂವರು ಭೇಟಿಯಾದಾಗಲೂ ಈ ಸಂದರ್ಭಗಳು ಪುನರಾವರ್ತನೆಯಾದರೂ ನಮ್ಮೂವರಲ್ಲಿ ಯಾರಿಗೂ ಬೇಸರವುಂಟುಮಾಡಿದ್ದಿಲ್ಲ, ಇವೆಲ್ಲಕ್ಕೂ ಸಣ್ಣ ನಗುವಿನ ಸಹಿತ ಜೊತೆಯಾಗುತ್ತಿದ್ದವರು ಆತ್ಮೀಯತೆಯ ಮೂರ್ತರೂಪದಂತಿದ್ದ ಲಕ್ಷ್ಮಿಯವರು.

2017ರ ಜೂನ್ ತಿಂಗಳಲ್ಲಿ ನಾಗೈತಾಳರ ಮನೆಯಲ್ಲಿ ಉಳಿದುಕೊಂಡಿದ್ದ ಸಂದರ್ಭ ನಮ್ಮನ್ನು ಇನ್ನಷ್ಟು ಆತ್ಮೀಯರನ್ನಾಗಿಸಿತು. ಶ್ರೀ ಲಕ್ಷ್ಮೀಶ ತೋಳ್ಪಾಡಿಯವರು, ಅವರ ಶ್ರೀಮತಿ ವಿಜಯಲಕ್ಷ್ಮಿ, ನನ್ನೊಡಲ ಸಖಿ ತ್ರಿವೇಣಿ ಹಾಗೂ ಮಹಾದೇವ್ ಮತ್ತು ನಾನು ಅಂದು ಅಲ್ಲಿದ್ದವರು. ನಮ್ಮನ್ನು ತಮ್ಮ ಮನೆಯ ಸದಸ್ಯರಂತೆಯೇ ನಡೆಸಿಕೊಂಡ ಆತ್ಮೀಯತೆ ಐತಾಳ ದಂಪತಿಯದು. ಪತಿ–ಪತ್ನಿಯಿಬ್ಬರ ಅಪಾರ ಓದು, ಅದರ ಸ್ಪಷ್ಟ ನೆನಪು, ಆ ಇಳಿವಯಸ್ಸಿನಲ್ಲೂ ಅವರ ಶುದ್ಧ ಸ್ವರದ ಗಾಯನ, ತಡರಾತ್ರಿಯವರೆಗೂ ಕೂತು ಹರಟುವ ಉತ್ಸಾಹ ಇವೆಲ್ಲವೂ ನನ್ನನ್ನು ಬಹಳ ಬೆರಗುಗೊಳಿಸಿವೆ, ಪ್ರಭಾವಿಸಿವೆ. ನಾಗೈತಾಳರ ಜೊತೆಗೆ ಕನ್ನಡ ಸಾಹಿತ್ಯ ರಂಗದ ಪ್ರಕಟಣೆಗಳಿಗಾಗಿ ಕೈಜೋಡಿಸಿದ ಸಂದರ್ಭಗಳಲ್ಲಿ ಅವರ ಸ್ನೇಹ–ವಿಶ್ವಾಸಗಳ ಜೊತೆಗೇ ಕಾರ್ಯಕ್ಷಮತೆಯ ವೈಖರಿಯನ್ನೂ ಕಂಡಿದ್ದೇನೆ. ಅತ್ಯಂತ ವಸ್ತುನಿಷ್ಠ ಶಿಸ್ತುಗಾರ ಆತ. ಇಂತಿಂಥಾದ್ದು ಹೀಗೆ ಹೀಗೇ ಆಗಬೇಕು ಅಂದರೆ ಹಾಗೇ ಆಗಬೇಕು ಎನ್ನುವ ನಿಖರ ನಿಲುವು. ಶಿಸ್ತಿನ ಜೊತೆಗೆ ಖಡಕ್ ಮಾತು, ಬೆಣ್ಣೆಯಿಂದ ಕೂದಲೆಳೆವ ವ್ಯಕ್ತಿಯಲ್ಲ, ಅವೆಲ್ಲವೂ ಅವರ ವಸ್ತುನಿಷ್ಠ ನಡೆನುಡಿಯ ಪರಿಣಾಮಗಳು. ಇವನ್ನೆಲ್ಲ ಅರ್ಥೈಸಿಕೊಂಡು ಒಪ್ಪಿಕೊಂಡರೆ ಐತಾಳರ ಜೊತೆಗೆ ಕೆಲಸ ಮಾಡುವುದು ಕಷ್ಟವೇನಲ್ಲ, 'ಕ್ಲಾರಿಟಿ' ಅವರ ಒಂದು ಕ್ವಾಲಿಟಿ.

'ಇರಬೇಕು ಇರುವಂತೆ ತೊರೆದು ಸಾವಿರ ಚಿಂತೆ, ಮಳೆ ಸುರಿಸಿ ಹಗುರಾದ ಮುಗಿಲಿನಂತೆ...' ನಲ್ಮೆಯ ಕವಿ ಎಚ್ಚೆಸ್ವಿಯವರು ಬರೆದ ಗೀತೆಯೊಂದರ ಜೀವಂತ ಸ್ವರೂಪವೆಂಬಂತೆ ಬಾಳಿದವರು ನಾಗೈತಾಳರು. ವ್ಯಕ್ತಿಯಾಗಿ, ವಿಜ್ಞಾನಿಯಾಗಿ, ಅಧ್ಯಾಪಕನಾಗಿ, ಆತಿಥೇಯನಾಗಿ, ಸಂಘಟಕನಾಗಿ, ಸಾಹಿತಿಯಾಗಿ ಏನೆಲ್ಲ ಪಾತ್ರಗಳನ್ನು ವಹಿಸಿಕೊಂಡರೋ ಅವೆಲ್ಲವನ್ನೂ ನಿಸ್ಪೃಹವಾಗಿ ನಡೆಸಿಕೊಂಡು ಆದರ್ಶ ಬದುಕಿನ ಉದಾಹರಣೆಯಾಗಿ ನಮಗೆಲ್ಲ ಮೇಲ್ಪಂಕ್ತಿಯ ಮಾದರಿಯನ್ನು ಹಾಕಿಕೊಟ್ಟ ಹಿರಿಯಣ್ಣ

ಅವರು. ‘ಕೋಟ’ ಊರಿನ ಸಾಮಾನ್ಯ ತುಂಟ ಬಾಲಕ ನಾಗಪ್ಪ, ಹುರುಪಿನ ತರುಣ ನಾಗಪ್ಪಯ್ಯ, ಪ್ರೌಢ ವಿಜ್ಞಾನಿ ನಾಗ ಐತಾಳ್ ಆಗಿ ಬೆಳೆದಂತೆ ಸಾಹಿತಿ ‘ಆಹಿತಾನಲ’ ಆಗಿ ಉಳಿದವರು, ಉಳಿಯುವವರು ‘ನಾಪ್ಪಣಯ್ಯ ಮಾವ’ (ಐತಾಳರ ದಾಯಾದಿಯೊಬ್ಬರ ಮಗಳು ಹೇಳಿದ ಹೆಸರು. ಮಿಂಚುಗಣ್ಣಲ್ಲಿ ಖುಷಿ ತುಳುಕಿಸಿ ಆಕೆ ಹೇಳುವಾಗ ತರುಣ ಐತಾಳರ ಕೈಹಿಡಿದು ಗದ್ದೆ ಹುಣಿಯಲ್ಲಿ ಹೆಜ್ಜೆ ಹಾಕುವ ಪುಟ್ಟ ಬಾಲಕಿಯ ಚಿತ್ರ ಮನಸ್ಸಿನಲ್ಲಿ ಕಟ್ಟಿಕೊಂಡಿದೆ). ಹೋಗಿ ಬನ್ನಿ ಐತಾಳರೆ, ‘ಜ್ಯೋತ್ರಿ’ ನಿಮ್ಮನ್ನು ಮತ್ತೊಮ್ಮೆ ಎದುರುಗೊಳ್ಳಲು ಸಿದ್ಧರಿರುತ್ತೇವೆ.

*

ತಾನು ಕೆಸರಲಿ ಕುಸಿಯುತಿದ್ದರೂ...

– ನಳಿನಿ ಮೈಯ

A hero is an ordinary individual who finds the strength to persevere and endure. In spite of overwhelming obstacles.

- Christopher Reeve

ಅದು ೧೯೭೫ನೆಯ ಇಸವಿ, ಆಗ ತಾನೆ ಹೊಸ ಮನೆಯೊಂದನ್ನು ಕೊಂಡಿದ್ದ, ನಮಗೆ ಹತ್ತಿರದ ಬಂಧು ಒಬ್ಬರು ಸಂಸಾರ ಸಮೇತ ನಮ್ಮ ಮನೆಗೆ ಬರುತ್ತಾರೆಂದು ತಿಳಿದು ತುಂಬ ಸಂತೋಷವಾಗಿತ್ತು! ನಮ್ಮ ಈ ಹೊಸ ಮನೆಯಲ್ಲಿ ತಂಗಲು ಬರುತ್ತಿರುವ ಮೊದಲನೆಯ ಅತಿಥಿ ಇವರಾಗಿದ್ದರು. ಅವರೇ ನಾಗ ಐತಾಳರು, ಹೆಂಡತಿ ಮಕ್ಕಳ ಸಮೇತ ನಮ್ಮ ಮನೆಗೆ ಬಂದಾಗ ಸಂಭ್ರಮ ತುಂಬಿ ಹರಿದಿತ್ತು! ಮನೆಯಲ್ಲಿ ನಗು, ಮಾತಿನ ಕಲರವ! ಹನ್ನೆರಡು ವರ್ಷದ ಅವರ ಮಗ ಅರವಿಂದ, ನಮ್ಮ ನಾಲ್ಕು ವರ್ಷದ ಮಗ ಅರುಣನನ್ನು ಕುಣಿಸಿ ತಾನೂ ಕುಣಿಯುತ್ತಿದ್ದಿದ್ದನ್ನು ನೋಡುವುದೇ ಕಣ್ಣಿಗೆ ಹಬ್ಬವಾಗಿತ್ತು. ಹದಿನಾಲ್ಕು ವರ್ಷದ ಮಗಳು ಅನು 'ಆಂಟಿ..ಆಂಟಿ' ಎನ್ನುತ್ತಾ ನನ್ನ ಹಿಂದೆ ಹಿಂದೆ ತಿರುಗುತ್ತಿದ್ದಳು.

ಅವರ ಮಡದಿ ಲಕ್ಷ್ಮಿಯಂತೂ ನನಗೆ ಸ್ವಲ್ಪವೂ ತ್ರಾಸವಾಗದಂತೆ ಅಡುಗೆ, ಪಾತ್ರೆ ತೊಳೆಯುವಂಥ ಎಲ್ಲ ಕೆಲಸಗಳನ್ನು ನನಗಿಂತ ಮುಂಚೆ ತಾವೇ ಮಾಡಿಬಿಡುತ್ತಿದ್ದರು!

ಕೆನಡಾದಿಂದ ಚಿಕಾಗೊ ವಿಶ್ವವಿದ್ಯಾಲಯದಲ್ಲಿ ವೃತ್ತಿ ಸಂದರ್ಶನಕ್ಕಾಗಿ ಬಂದಿದ್ದರು ಐತಾಳರು. ಅವರು ಇಲ್ಲಿಗೆ ಬಂದು ನೆಲೆಸಿದರೆ ಎಷ್ಟು ಚೆನ್ನಾಗಿರುತ್ತೋ! ಎಂದು ಮನಸ್ಸು ಮಂಡಿಗೆ ಮೆಲ್ಲುತ್ತಿತ್ತು... ಎಲ್ಲವೂ ಒಂದು ವರ್ಷದಲ್ಲಿ ತಲೆಕೆಳಗಾಗುತ್ತದೆಂದು ಯಾರು ತಾನೆ ಊಹಿಸಿದ್ದರು! ಅವರು ಚಿಕಾಗೊದಲ್ಲಿ ನೆಲೆಯಾದ ನಂತರ ತನಗೆ ಸ್ತನದಲ್ಲಿ ಏನೋ ಗಡ್ಡೆ ಇದೆ ಅಂತ ಲಕ್ಷ್ಮಿ ಹೇಳಿಕೊಂಡಿದ್ದರೂ ಇನ್ನೂ ಮೂವತ್ತೈದರ ಆಸುಪಾಸಿನ, ಆರೋಗ್ಯವಂತರಾಗಿ ಕಾಣುವ ಆಕೆಗೆ ಏನೂ ಆಗಿಲ್ಲವೆಂದೇ ಹೇಳುತ್ತಿತ್ತು ನನ್ನ ಮನಸ್ಸು. 'ಧಿಡೀರ್' ಎಂದು ಬರಸಿಡಿಲಿನಂತೆ ಬಂದಿತ್ತು ಆ ಸುದ್ದಿ! ಲಕ್ಷ್ಮಿಗೆ ಬ್ರೆಸ್ಟ್ ಕ್ಯಾನ್ಸರ್ ಎಂದು! ಐತಾಳರು ಫೋನ್ ಮಾಡಿ ಈ ಸುದ್ದಿ ಹೇಳಿದಾಗ ಅವರಿಗೆ ಹೇಗೆ ಸಮಾಧಾನ ಹೇಳಬೇಕೆಂದೇ ತಿಳಿಯಲಿಲ್ಲ ನಮಗೆ! ಆ ಕಾಲದಲ್ಲಿ ಕ್ಯಾನ್ಸರ್ ಟ್ರೀಟ್‌ಮೆಂಟ್ ಇಷ್ಟು ಮುಂದುವರಿದಿರಲಿಲ್ಲ. ಭಾರತದಲ್ಲಿ ನಮಗೆ ಪರಿಚಯ ಇರುವ ಎಲ್ಲ ಡಾಕ್ಟರುಗಳೂ 'ಏನೂ ಭರವಸೆ ಇಲ್ಲ' ಎಂತಲೇ ಹೇಳುತ್ತಿದ್ದರು. ತಕ್ಷಣ ಅವರನ್ನು ನೋಡಲು ಹೋಗಲಿಲ್ಲ ನಾವು. ಕೂಡಲೇ ಅವರ ಸರ್ಜರಿಗೆ ಏರ್ಪಾಡು ಆಗಿದ್ದರಿಂದ ಆಸ್ಪತ್ರೆಗೇ ಹೋಗಿ ಅವರನ್ನು ನೋಡಿದೆವು. ಆಗ ನಾನು ತುಂಬು ಗರ್ಭಿಣಿಯಾಗಿದ್ದೆ. ನಗುನಗುತ್ತಾ ಕಳೆಕಳೆಯಾಗಿದ್ದ ಲಕ್ಷ್ಮಿ ಸೊರಗಿಹೋಗಿದ್ದರು. ಮಕ್ಕಳು ತಮ್ಮ ವಯೋಸಹಜ ನಗು, ಆಟವನ್ನೆಲ್ಲ ಮರೆತು ಮಿಣ್ಣಗೆ ಅಲ್ಲಿ ಇಲ್ಲಿ ಓಡಾಡುತ್ತಿದ್ದರು. ಐತಾಳರು ಧೈರ್ಯದ ಮುಖವಾಡ ಹಾಕಿ ಅಲ್ಲಿ ನಿಂತಿದ್ದರು. ಒಮ್ಮೊಮ್ಮೆ ಇಂಥ ಮುಖವಾಡ ಹಾಕಲೇ ಬೇಕಲ್ಲವೆ? ಅಲ್ಲದಿದ್ದರೆ ಆಧಾರಸ್ತಂಭವೇ ಉರುಳಿಬಿದ್ದಂತೆ ಭಾಸವಾಗುತ್ತದೆ ಮಕ್ಕಳಿಗೆ, ಹೆಂಡತಿಗೆ ಆದರೂ... ಎಷ್ಟು ಕಾಲ ತಾನೆ ಇಂಥ ಮುಖವಾಡ ಧರಿಸಬಹುದು! ಒಮ್ಮೆ ಮಕ್ಕಳ ಜೊತೆ ದಿನಸಿ ಅಂಗಡಿಗೆ ಹೋದಾಗ ಅಲ್ಲಿ ಅಳು ಉಕ್ಕಿ ಬಂದು ಮಕ್ಕಳ ಎದುರಿಗೆ ಕಣ್ಣೀರು ಹರಿಸುತ್ತಾ ನಿಂತುಬಿಟ್ಟೆನೆಂದು ಐತಾಳರೇ ಬರೆದುಕೊಂಡಿದ್ದಾರೆ.

ಆಗ ಮಕ್ಕಳೇ ಅಪ್ಪನಿಗೆ ಸಮಾಧಾನ ಹೇಳಿ ಗ್ರೋಸರಿ ಕಾರ್ಟ್ ತಳ್ಳಿಕೊಂಡು ಹೋದರಂತೆ. ಆ ಕಾರ್ಟ್ ಎಷ್ಟು ಪ್ರತಿಮಾತ್ಮಕವಾಗಿ ನಿಂತಿದೆ ಇಲ್ಲಿ! ಒಮ್ಮೆ ಅಪ್ಪ ತಳ್ಳಿದರೆ ಅವನು ಸೋತಾಗ ಮಕ್ಕಳು ತಳ್ಳಬೇಕಲ್ಲವೆ? ಅಮ್ಮ ಆಸ್ಪತ್ರೆಯಲ್ಲಿ ಸೊರಗಿ ಮಲಗಿರಬೇಕಾದರೆ ಜೀವನ ನಡೆಯುವುದು ಹೇಗೆ? ನಮ್ಮ ಮನೆ ಅವರ ಮನೆಗೆ ದೂರವಾದದ್ದರಿಂದ ಒಮ್ಮೆ ಮಾತ್ರ ಲಕ್ಷ್ಮಿ ಆಸ್ಪತ್ರೆಯಲ್ಲಿದ್ದಾಗ ಐತಾಳರು ಮಕ್ಕಳು ಊಟಕ್ಕೆ ಬಂದಿದ್ದರು, ಮೊದಲ ಭೇಟಿಗೂ ಇದಕ್ಕೂ ಎಂಥ ವ್ಯತ್ಯಾಸ! ಗೆಲುವಿಲ್ಲದ ಮುಖಗಳು, ಮಾತಿಲ್ಲದೆ ಊಟ, ಇನ್ನೊಮ್ಮೆ ನಾವೇ ಅವರ ಮನೆಗೆ ಊಟ ಕೊಂಡು ಹೋದೆವು. ಪರಿಚಯವಾಗಿದ್ದ ಇತರ ಮಿತ್ರರೂ ಸಹಾಯ ಮಾಡಿದರು. ಆ ಪ್ರತಿಷ್ಠಿತ ಆಸ್ಪತ್ರೆಯಲ್ಲೂ ನರ್ಸುಗಳ ಸೋಗಲಾಡಿತನ! ನಮ್ಮ ಎದುರು ನಗುನಗುತ್ತಾ ಮಾತನಾಡಿ ಸೇವೆಗೆ ಸಿದ್ಧರಿರುವಂತೆ ಕಾಣುವ ನರ್ಸುಗಳು ರಾತ್ರಿ ಹೊತ್ತು ಪೇಷೆಂಟ್ ಕೈಗೆ ಕಾಲಿಂಗ್ ಬೆಲ್ ಸಿಕ್ಕದಂತೆ ದೂರ ಇಡುತ್ತಿದ್ದರಂತೆ. ಹಾಗಾಗಿ ರಾತ್ರಿ ಏನೇ ಸಮಸ್ಯೆ

ಇದ್ದರೂ ನರ್ಸುಗಳನ್ನು ಕರೆಯಲಾಗದೆ ಒದ್ದಾಡುತ್ತಿದ್ದರು ರೋಗಿಗಳು. ನರ್ಸುಗಳು ಯಾವ ಬೆಲ್ ಕೂಡಾ ತಮ್ಮನ್ನು ಕರೆಯುತ್ತಿಲ್ಲವೆಂದು ಹೇಳಿಕೊಳ್ಳುತ್ತಾ ಹಾಯಾಗಿ ಕಾಲ ಕಳೆಯುತ್ತಿದ್ದರು! ಇದನ್ನೆಲ್ಲ ನಮ್ಮ ಬಳಿ ಹೇಳಿಕೊಂಡು ತುಂಬ ಬೇಜಾರು ಮಾಡಿಕೊಂಡರು ಐತಾಳರು. ಎತ್ತರದಲ್ಲಿ ಆರಡಿ ಮೀರಿಸುವ, ಅಮಿತಾಬ್ ಬಚ್ಚನ್ ಥರ ಕಾಣುವ ಐತಾಳರ ಎದೆಯಲ್ಲಿ ಮಿಡಿಯುತ್ತಿದ್ದಿದ್ದು ಒಂದು ಹೆಣ್ಣು ಹೃದಯ! ಮಮತೆ, ಆರ್ದ್ರತೆಯನ್ನು ನಿರಂತರವಾಗಿ ಸ್ರವಿಸುವ ಹೆಂಗರುಳು!

ಬಹಳಷ್ಟು ದಿನಗಳನ್ನು ಆಸ್ಪತ್ರೆಯಲ್ಲಿ ಕಳೆದ ಮೇಲೆ ಕೊನೆಗೊಮ್ಮೆ ಲಕ್ಷ್ಮಿ ಮನೆಗೆ ಬಂದರು, ನಿರಂತರವಾಗಿ ಬಾಧಿಸುವ ನೋವು, ನಿತ್ರಾಣ, ಭವಿಷ್ಯದ ಬಗ್ಗೆ ಆತಂಕ... ಒಂದಲ್ಲ ಎರಡಲ್ಲ ಹಲವಾರು ವಿಧಗಳಲ್ಲಿ ಬದುಕು ಕಷ್ಟಕರವಾಗಿತ್ತು. ಇದೀಗ ಕೀಮೊಥೆರಪಿಯೂ ಶುರುವಾಗಿತ್ತು, ಅಂದಿನ ದಿನಗಳಲ್ಲಿ ಕೀಮೊ ಇಷ್ಟು ಸುಧಾರಿಸಿರಲಿಲ್ಲ. ಇತ್ತೀಚೆಗೆ ಸಾಧ್ಯವಾದಷ್ಟು ಕಡಿಮೆ ಸೈಡ್ ಎಫೆಕ್ಟ್ ಇರುವ ಕೀಮೊಥೆರಪಿಗಳು ಲಭ್ಯವಿವೆ. ಆ ಕಾಲದಲ್ಲಿ ಎರಡು ವಾರ ಈ ವಿಷಕರ ಮಾತ್ರೆಗಳನ್ನು ನುಂಗಬೇಕಿತ್ತು. ಅದು ವಿಪರೀತ ವಾಕರಿಕೆ, ಹೊಟ್ಟೆ ತೊಳಸುವುದು, ವಾಂತಿ ಉಂಟುಮಾಡುತ್ತಿತ್ತು. ಊಟವೇ ಸೇರುತ್ತಿರಲಿಲ್ಲ ಅಲ್ಲದೆ ಕೂದಲು ಉದುರಿ ಬಕ್ಕ ತಲೆಯಾಗುತ್ತಿತ್ತು. ಆ ಎರಡು ವಾರಗಳು ಲಕ್ಷ್ಮಿ ಏಳಲೂ ಶಕ್ತಿ ಸಾಲದೆ ಹೆಚ್ಚು ವಾಸಿ ಕುಳಿತೇ ಅಥವಾ ಮಲಗಿಯೇ ಕಾಲ ಕಳೆಯುತ್ತಿದ್ದರು. ಐತಾಳರು, ಮಕ್ಕಳು ಒಮ್ಮೊಮ್ಮೆ ಪಿಜ್ಜಾ, ಪಾಸ್ತಾ ತಿಂದು ಕೆಲವೊಮ್ಮೆ ಲಕ್ಷ್ಮಿ ಮುಂಚಿತವಾಗಿ ಮಾಡಿ ಫ್ರೀಜರ್‌ನಲ್ಲಿಟ್ಟ ಅಡುಗೆ ಊಟ ಮಾಡುತ್ತಿದ್ದರು, ಆಗಾಗ ಸ್ನೇಹಿತರು ಊಟ ಮನೆಗೆ ತಂದು ಕೊಡುತ್ತಿದ್ದರು. ಮತ್ತೆ ಎರಡು ವಾರ ರೆಸ್ಟ್. ಮಾತ್ರೆ ನಿಲ್ಲಿಸುತ್ತಿದ್ದರು. ಆಮೇಲೆ ಎರಡು ವಾರ ಮತ್ತೆ ಕೀಮೊ. ಹೀಗೆ ಒಂದು ವರ್ಷ ನಡೆಯಬೇಕಾಗಿತ್ತು! ಈ ದಂಪತಿಯ ಜೀವನೋತ್ಸಾಹ ಎಷ್ಟರಮಟ್ಟಿನದು ಅಂದರೆ ಮಧ್ಯೆ ಮಧ್ಯೆ ಮಾತ್ರೆ ನಿಲ್ಲಿಸಿದ ಎರಡು ವಾರ ಲಕ್ಷ್ಮಿ ಅವರಿಗೆ ಮೈಯಲ್ಲಿ ತುಸು ಕಸು ಬಂತು ಎನ್ನುವಾಗ ಮನೆಗೆ ಸ್ನೇಹಿತರನ್ನು ಊಟಕ್ಕೆ ಕರೆದು ಮಾತು, ನಗುವಿನಲ್ಲಿ ಕಷ್ಟ ಮರೆಯುತ್ತಿದ್ದರು. ಲಕ್ಷ್ಮಿ ಮನೆಗೆ ಬಂದ ಮೇಲೆ ಮೊದಲು ನಮ್ಮನ್ನು ಹೀಗೆ ಊಟಕ್ಕೆ ಕರೆದಾಗ ಎರಡು ವಾರದ ಕೀಮೊ ಮುಗಿದು ರೆಸ್ಟ್ ಶುರುವಾಗಿತ್ತು. ಲಕ್ಷ್ಮಿ ಅವರ ಕೂದಲೆಲ್ಲ ಉದುರಿ ಬಕ್ಕ ತಲೆಯಾಗಿತ್ತು. ನಾವು ಕಾರಿನಲ್ಲಿ ಬಂದಿದ್ದನ್ನು ಕಿಟಕಿಯಲ್ಲಿ ನೋಡಿದ ಐತಾಳರು ತಕ್ಷಣ ಹೊರಗೆ ಬಂದು ಕಾರ್ ಹತ್ತಿರವೇ ನಮ್ಮನ್ನು ಭೇಟಿಯಾದರು. 'ಅವಳಿಗೆ ಈಗ ಕೂದಲೆಲ್ಲ ಹೋಗಿದೆ', ಎಂದು ಮುಂಚಿತವಾಗಿ ನಮಗೆ ತಿಳಿಸಿದರು. ನಾವು ಒಳಗೆ ಹೋದಾಗ ಇದ್ದಕ್ಕಿದ್ದಹಾಗೆ ಲಕ್ಷ್ಮಿಯ ಸ್ಥಿತಿ ನೋಡಿ ನಮ್ಮ ಮುಖದಲ್ಲಿ ಏನು ಪ್ರತಿಕ್ರಿಯೆ ಮೂಡಬಹುದು? ಅದನ್ನು ಗಮನಿಸಿ ಲಕ್ಷ್ಮಿಗೆ ಎಷ್ಟು ಬೇಸರವಾಗಬಹುದು? ಎಂಬುದನ್ನೆಲ್ಲ ಊಹಿಸಿ ಈ ಮುಂಜಾಗ್ರತೆಯನ್ನು ಕೈಗೊಂಡ ಐತಾಳರಿಗೆ ನಿಜಕ್ಕೂ ಹ್ಯಾಟ್ಸ್ ಆಫ್! ಕೆಲವು ವಾರಗಳ ನಂತರ ನಮ್ಮ

ಮನೆಯಲ್ಲಿ ಒಂದು ಪುಟ್ಟ ಮಗುವಿನ ಅಳು ಕೇಳಿಬಂದಿತು. ನಮ್ಮ ಎರಡನೆಯ ಮಗ ಮಧು ಹುಟ್ಟಿದ್ದ. ಮಗುವಿನ ಆರೈಕೆಯಲ್ಲಿ ನಾವು ತೀರಾ ಬ್ಯುಸಿ ಆಗಿದ್ದೆವು. ಭಾರತದಿಂದ ನಮ್ಮ ನೆರವಿಗೆ (ಬಾಣಂತನಕ್ಕೆ) ಯಾರೂ ಬಂದಿರಲಿಲ್ಲ, ನಿದ್ದೆ ಇಲ್ಲದ ರಾತ್ರಿಗಳು, ದೊಡ್ಡ ಮಗನನ್ನು ನೋಡಿಕೊಳ್ಳುವುದು, ಮಗು ನೋಡಲು ಬರುವ ಸ್ನೇಹಿತರು ಹೀಗೆ ಸಮಯ ಉರುಳುತ್ತಿತ್ತು. ಒಂದು ದಿನ ಐತಾಳರ ಫೋನ್ ಬಂದಿತು. 'ಇವತ್ತು ಸಂಜೆ ಮಗು ನೋಡೋಕೆ ಬರ್ತೀವಿ. ಲಕ್ಷ್ಮಿಗೆ ಈ ಎರಡು ವಾರ ಕೀಮೊ ಇಲ್ಲ. ರೆಸ್ಟ್ ಪೀರಿಯಡ್' ಎಂದು.

ಸಂಜೆ ಬಂದ ಐತಾಳ ದಂಪತಿಗಳು ಮಗುವಿಗೆ ಉಡುಗೊರೆಯಲ್ಲದೆ 'ಘಮ್' ಎಂದು ಪರಿಮಳ ಸೂಸುವ ಹುಳಿ, ಪಲ್ಯ, ಚಟ್ನಿ, ದೋಸೆ ಹಿಟ್ಟು ಎಲ್ಲವನ್ನೂ ತಂದಿದ್ದರು. ನನಗಂತೂ ಆಶ್ಚರ್ಯ! ಈಗ ಎರಡು ವಾರದ ರೆಸ್ಟ್‌ನಲ್ಲಿ ತನ್ನ ಮನೆಯವರಿಗೆ ಬಗೆಬಗೆಯ ಅಡುಗೆ ಮಾಡಿ ಫ್ರೀಜರ್‌ನಲ್ಲಿ ಇಡುವವರು ಇವರು– ಮುಂದಿನ ಎರಡು ವಾರಗಳ ನಿತ್ರಾಣದಲ್ಲಿ ಗಂಡ, ಮಕ್ಕಳಿಗೆ ಊಟಕ್ಕೆ ಅಂತ. ಅಂಥಾದ್ದರಲ್ಲಿ ನನ್ನ ಮೇಲೂ ಇಷ್ಟು ಪ್ರೀತಿ ಕಾಳಜಿ ಇಟ್ಟುಕೊಂಡು ಇಷ್ಟೆಲ್ಲ ಅಡುಗೆ ಮಾಡಿ ಮನೆಗೆ ತಂದುಕೊಡಬೇಕಾದರೆ! ಹೃದಯ ತುಂಬಿ ಬಂದಿತ್ತು. ಕಣ್ಣು ಮಂಜಾಗಿತ್ತು.

'You gain courage, strength, and confidence by every experience in which you stop and look fear in the face. Eleanor Roosevelt'

ಆಗಬಾರದ್ದು, ಆಗಲೇಕೂಡದು ಅಂದುಕೊಂಡದ್ದು, ಆಗಿಬಿಟ್ಟರೆ! ನನಗೆ ಸಹಿಸಲು ಸಾಧ್ಯವೇ ಇಲ್ಲ ಅನಿಸುವಂಥದ್ದು ಜೀವನದಲ್ಲಿ ನಡೆದರೆ ಏನಾಗುತ್ತದೆ? ಮೊದಲಿಗೆ ಧೈರ್ಯ ಕುಸಿದು ಹತಾಶೆಯ ಪ್ರಪಾತಕ್ಕೆ ಹೋಗಬಹುದು ಮನುಷ್ಯ. ಆದರೆ ಹಾಗೆಯೇ ಇರಲು ಹೇಗೆ ತಾನೆ ಸಾಧ್ಯ? ಅದರಲ್ಲೂ ಎಷ್ಟೊಂದು ಜೀವಗಳು ನಮ್ಮನ್ನು ಅವಲಂಬಿಸಿರುವಾಗ! ಇಲ್ಲಿಯೂ ಹಾಗೇ ಆಗುತ್ತಿತ್ತು. ಕಾಲಕ್ರಮೇಣ ಮಕ್ಕಳ, ಐತಾಳರ ಮುಖದಲ್ಲಿ ಮತ್ತೆ ಗೆಲುವು, ಕಣ್ಣುಗಳಲ್ಲಿ ಹೊಳಪು ಕಾಣಿಸಿಕೊಳ್ಳಲು ಶುರುವಾಗಿತ್ತು. ಡಾಕ್ಟರು ಇಷ್ಟು ಬೇಗ ಯಾವ ಭರವಸೆಯನ್ನೂ ನೀಡಿರಲಿಲ್ಲ. 'ಕಾದು ನೋಡಬೇಕು' ಎಂದಷ್ಟೇ ಹೇಳುತ್ತಿದ್ದರು.

ತಾನು ಕೆಸರಲಿ ಕುಸಿಯುತಿದ್ದರೂ ತಾವರೆಯು
ಮರಿದುಂಬಿಗಳ ಪೊರೆವ ತೊಟ್ಟಿಲಾಗಿ
ಹೇಗೆ ತಾಯ್ತನವನ್ನು ಪ್ರೀತಿಯಲಿ ಸೂಸುವುದೋ
ಹಾಗೆ ಬಾಳಿಸು ನನ್ನ ಕರುಣೆ ಇಟ್ಟು —ಎಚ್.ಎಸ್.ವಿ.

ಆ ದಿನಗಳನ್ನು ಐತಾಳರು ಹೇಗೆ ನಿಭಾಯಿಸಿದರೋ! ಆಟೋರಿಕ್ಷಾಗಳು ಇಲ್ಲದ ಅಮೆರಿಕಾ ದೇಶ, ಟ್ಯಾಕ್ಸಿಗೆ ದುಬಾರಿ ಬೆಲೆ! ಹಾಗಾಗಿ ಲಕ್ಷ್ಮಿಗೆ ಅವರ ಡಾಕ್ಟರ್ ವಿಸಿಟ್‌ನಿಂದ ಹಿಡಿದು, ಔಷಧಿ ತರುವುದು, ವಿಗ್ ಕೊಂಡುಕೊಳ್ಳುವುದು ಎಲ್ಲದಕ್ಕೂ ಐತಾಳರೇ

ಕಾರಿನ ಸಾರಥ್ಯ ವಹಿಸಬೇಕು. ಸ್ವಭಾವತಃ ಮೆಲುಮಾತಿನ, ಮೃದು ಸ್ವಭಾವದ ಮಡದಿಯ ಪರವಾಗಿ ಅವರೇ ಮುಂದೆ ಹೋಗಿ ಮಾತನಾಡಿ ಕೆಲಸ ಪೂರೈಸಬೇಕು. ಅಲ್ಲದೆ ದೈನಂದಿನ ಚಟುವಟಿಕೆಗಳಾದ ಮನೆಗೆ ದಿನಸಿ ಸಾಮಾನು, ಹಾಲು ತರುವುದು, ಮಕ್ಕಳು ಸಮಯಕ್ಕೆ ಸರಿಯಾಗಿ ಊಟ ಮಾಡಿದರೆ? ನೋಡುವುದು, ಪಾತ್ರೆ ತೊಳೆಯುವುದು, ವಾಷಿಂಗ್ ಮೆಶಿನ್‌ಗೆ ಬಟ್ಟೆ ಹಾಕಿ ಸ್ವಚ್ಛಗೊಳಿಸುವುದು... ಒಂದೆ, ಎರಡೆ? ಕೆಲಸಕ್ಕೆ ಜನ ಸಿಕ್ಕದ ಊರು ಇದು! ತಂದೆಯಾಗಿ, ತಾಯಿಯೂ ಆಗಿ ಸಂಸಾರದ ರಥವನ್ನು ಎಳೆದ ಅವರು ಆ ಬಗ್ಗೆ ಯಾರ ಹತ್ತಿರವೂ ಮಾತಾಡಿ ಕಷ್ಟ ತೋಡಿಕೊಳ್ಳಲಿಲ್ಲ.

'ದುನಿಯಾಮೆ ಹಮಾರೆ ಹೈ ತೋ ಜೇನಾ ಹೀ ಪಡೇಗಾ
ಜೀವನ್ ಹೈ ಅಗರ್ ಜಹರ್ ತೋ ಪೀನಾ ಹೀ ಪಡೇಗಾ'

ಮದರ್ ಇಂಡಿಯಾ ಚಿತ್ರಗೀತೆಯ ಸಾಲುಗಳಿವು. ಅಂತೆಯೇ ಐತಾಳ ಕುಟುಂಬದ ನೌಕೆ ಅಲ್ಲೋಲಕಲ್ಲೋಲ ನೀರಿನಲ್ಲಿ ಭದ್ರವಾಗಿ ಚುಕ್ಕಾಣಿ ಹಿಡಿದ ಅಂಬಿಗ ಐತಾಳರ ಮುಂದಾಳತ್ವದಲ್ಲಿ ಸಾಗುತ್ತಿತ್ತು. ಈ ಒಂದು ವರ್ಷದ ಕೀಮೊ ಥೆರಪಿ ಅವಧಿಯಲ್ಲೂ ಹೊಸ ಸ್ನೇಹಿತರನ್ನು ಮಾಡಿಕೊಂಡರು. ಕನ್ನಡ ಕೂಟ ಸಮಾರಂಭಗಳಿಗೆ ಬಂದು ಹೋಗುತ್ತಿದ್ದರು, ಲಕ್ಷ್ಮಿ ಈಗ ವಿಗ್ ಹಾಕುತ್ತಿದ್ದರು.

ಒಳ್ಳೆಯ ಕಾಲ, ಕೆಟ್ಟ ಕಾಲ ಯಾವುದೂ ಸ್ಥಿರವಲ್ಲ, ಹಾಗೂ ಹೀಗೂ ಒಂದು ವರ್ಷ ಕಳೆದೇ ಹೋಯಿತು, ಕೀಮೊ ನಿಂತಿತ್ತು. ಆಗಾಗ ಟೆಸ್ಟ್ ಮಾಡಿಸಿಕೊಳ್ಳಲು ಡಾಕ್ಟರ್ ಹತ್ತಿರ ಹೋದರೆ ಸಾಕಿತ್ತು. ಸ್ವಲ್ಪ ಸ್ವಲ್ಪವಾಗಿ ಲಕ್ಷ್ಮಿಯ ಕೂದಲು ಮತ್ತೆ ಬೆಳೆದು ಮುಂಚಿನಂತೆಯೇ ಉದ್ದ ಜಡೆ ಬೆನ್ನಿನ ಮೇಲೆ ಹರಿದಾಡಿತ್ತು.

ಮುಂದಿನ ವರ್ಷಗಳಲ್ಲಿ ಎಷ್ಟೊಂದು ಹೆಣ್ಣುಗಳಿಗೆ ಗರ್ಭಿಣಿಯಾದಾಗ ಬೇಬಿ ಶವರ್ ಇಟ್ಟುಕೊಂಡರೋ! ಎಷ್ಟು ಭಾರತದಿಂದ ಬಂದ ಸಾಹಿತಿಗಳು, ಸಂಗೀತಗಾರರನ್ನು ತಮ್ಮ ಮನೆಯಲ್ಲಿ ಆತಿಥ್ಯ ನೀಡಿ ಗೌರವಿಸಿದರೋ! ಎಷ್ಟೆಲ್ಲ ದೊಡ್ಡ ಅಡಿಗೆ ಮಾಡಿ ಕನ್ನಡ ಕೂಟದ ಸಮಾರಂಭಗಳಿಗೆ ಕೊಂಡೊಯ್ದರೋ! ತಮ್ಮ ಮನೆಯಲ್ಲಿ ಅದೆಷ್ಟು ಸತ್ಯನಾರಾಯಣ ಪೂಜೆ, ಕಾರ್ಡ್ ಪಾರ್ಟಿ ಇಟ್ಟುಕೊಂಡರೋ! ಅವರ ಜೀವನೋತ್ಸಾಹ, ತಮ್ಮ ಸುಖವನ್ನು ಬದಿಗೊತ್ತಿ ಇನ್ನೊಬ್ಬರಿಗೆ ಉಪಕಾರ ಮಾಡುವ ನಿಸ್ವಾರ್ಥ ಸೇವಾ ಮನೋಭಾವ, ರಸಿಕತೆ, ಹಾಸ್ಯಪ್ರಿಯತೆ ಎಲ್ಲವೂ ಅವರ ವಲಯದಲ್ಲಿದ್ದ ಗೆಳೆಯ ಗೆಳತಿಯರ ಬದುಕನ್ನು ಶ್ರೀಮಂತಗೊಳಿಸಿದ್ದವು. 'ನನಗೆ ಬೇಕಾದವರು ಇಲ್ಲಿಲ್ಲ' ಎಂದು ಹಲುಬುವ ಬದಲು 'ಎಲ್ಲರೂ ನನಗೆ ಬೇಕಾದವರು' ಎಂಬ ಮಂತ್ರವನ್ನು ಜೀವನದಲ್ಲಿ ರೂಢಿಸಿಕೊಂಡವರು ಅವರು, ಬಹುಶಃ ಪರದೇಶಿಗಳಾದ ಅನಿವಾರ್ಯತೆಯೇ ಈ ಪಾಠವನ್ನು ಕಲಿಸುತ್ತದೇನೋ.

ಲಕ್ಷ್ಮಿ ಮತ್ತು ಐತಾಳರ ದಾಂಪತ್ಯದ ಬಗ್ಗೆ ಇಲ್ಲಿ ಹೇಳಲೇ ಬೇಕು. ಮಾತು ಮಾತಿಗೆ ಜೋಕುಗಳನ್ನು ಹಾರಿಸುವ ಐತಾಳರು ತಮ್ಮ ಮಡದಿಯನ್ನು, ಮಲೆನಾಡಿನ ಅವರ ಜೀವನ ಶೈಲಿಯನ್ನು ತಮ್ಮ ಜೋಕುಗಳಲ್ಲಿ ಧಾರಾಳವಾಗಿ ಬಳಸುತ್ತಿದ್ದರು.

ಒಮ್ಮೆ ಅವರು ಹೆಂಡತಿಯ ತವರುಮನೆಗೆ ಫೋನ್ ಮಾಡಿ 'ನಾನು ನಾಗಪ್ಪ ಐತಾಳ ಮಾತಾಡೋದು' ಅಂದರಂತೆ. ಆ ಬದಿಯಲ್ಲಿ ಫೋನ್ ಎತ್ತಿದವರಿಗೆ ಯಾರು? ಅಂತ ಗೊತ್ತಾಗಲಿಲ್ಲವಂತೆ. ನಾನು ಇಂಥವರ ಮಗ, ಬೆಂಗಳೂರಿನ ವಾಸ... ಮೂಲತಃ ಕೋಟ... ತಮ್ಮ ಡಿಗ್ರಿ, ವೃತ್ತಿ ಏನು ಹೇಳಿದರೂ ಅವರಿಗೆ ಯಾರು ಅಂತ ಗೊತ್ತಾಗಲಿಲ್ಲವಂತೆ. ಕೊನೆಗೆ 'ನಾನು ಪುಟ್ಟಮ್ಮನ ಗಂಡ' ಅಂದಾಗ ತಕ್ಷಣ ಗೊತ್ತಾಯಿತಂತೆ. (ಲಕ್ಷ್ಮಿಯ ತವರಿನಲ್ಲಿ ಅವರನ್ನು ಪುಟ್ಟಮ್ಮ ಅಂತ ಕರೆಯುತ್ತಿದ್ದರು) ಹೀಗೆ ಹೇಳಿ ತಾವೂ ನಕ್ಕು ಎಲ್ಲರನ್ನೂ ನಗಿಸುತ್ತಿದ್ದ ಐತಾಳರಿಗೆ ಯಾವುದೇ ಪ್ರತಿಕ್ರಿಯೆ ತೋರದೆ ಸುಮ್ಮನೆ ಇದ್ದುಬಿಡುತ್ತಿದ್ದರು ಲಕ್ಷ್ಮಿ, ಆದರೂ ಐತಾಳರಿಗೆ ತಾನು 'ಪುಟ್ಟಮ್ಮನ ಗಂಡ' ಎಂಬ ಬಗ್ಗೆ ಹೆಮ್ಮೆ, ಅಭಿಮಾನ ಇತ್ತು. ಮಡದಿಯ ತಾಳ್ಮೆ, ವಿವೇಕ, ಸಾಹಿತ್ಯ ಪ್ರೇಮ ಮುಂತಾದವನ್ನು ಅವರು ಹಲವು ಲೇಖನಗಳಲ್ಲಿ ಬರೆದು ಮೆಚ್ಚಿಗೆ ಸೂಸಿದ್ದಾರೆ.

ಇತ್ತೀಚೆಗೆ ಐತಾಳರ ಆರೋಗ್ಯದಲ್ಲಿ ಏರುಪೇರಾಗಿ ಅವರ ಶಕ್ತಿ, ಬ್ಯಾಲೆನ್ಸ್, ಎಲ್ಲವೂ ಕುಂದಿದಾಗ ಅವರ ಬೆನ್ನೆಲುಬಾಗಿ ನಿಂತವರು ಲಕ್ಷ್ಮಿ, ಕಾಣುವ ಶಕ್ತಿ ಕಡಿಮೆಯಾದಾಗ ಅವರ ಕಣ್ಣಾದವರು ಲಕ್ಷ್ಮಿ. ಕಡೆಯವರೆಗೂ ಗಂಡನನ್ನು ಜೋಪಾನವಾಗಿ ನೋಡಿಕೊಂಡವರು. ಅದೊಂದು ಅನುರೂಪದ ದಾಂಪತ್ಯ!

ಆ ದಿನಗಳು ಕಳೆದೇ ಹೋದವು, ಈಗ ಐತಾಳರು ನಮ್ಮೊಂದಿಗಿಲ್ಲ, ಮತ್ತೆ ಭಾವಗೀತೆಯಾಗಿ ಹೊಮ್ಮಿದ ಎಚ್.ಎಸ್.ವಿ. ಅವರ ಕವನದ ಸಾಲುಗಳು ನೆನಪಾಗುತ್ತಿವೆ–

'ದಾರಿಯುದ್ದಕು ಹರಿದು ಪೈರಿಗೆ ನೀರುಣಿಸಿ
ಹಾಲು ತೆನೆಯಲಿ ಅಮೃತ ತುಂಬಿ ನದಿಯು
ಹೇಗೆ ಕೊನೆಗೊಳ್ಳುವುದೋ ದೂರದಾ ನೀಲಿಯಲಿ
ಹಾಗೆ ಕೊನೆಗಾಣಿಸು ಕೃಪೆಯನಿಟ್ಟು'..

ಹಾಡು ಮುಗಿದರೇನಂತೆ? ಮನದ ಮೂಲೆ ಮೂಲೆಯಲ್ಲೂ ಆ ಮಾಧುರ್ಯ ಮರುಧ್ವನಿಸುತ್ತಿದೆ.

*

'ನಾಗ ಐತಾಳ' ಎಂಬ ಚೈತನ್ಯ ಚಿಲುಮೆ

– ನಳಿನಿ ಮೈಯ

ನಾಗ ಐತಾಳರು ಅಮೆರಿಕೆಗೆ ಬಂದಿದ್ದು ಒಬ್ಬ ವಿಜ್ಞಾನಿಯಾಗಿ, ಜೀವಶಾಸ್ತ್ರ ಸಂಶೋಧಕನಾಗಿ ವೃತ್ತಿಯನ್ನು ಮಾಡಲೆಂದು. ಆ ಕ್ಷೇತ್ರದಲ್ಲಿ ಅವರು ಸಾಕಷ್ಟು ಸಾಧನೆಗಳನ್ನು ಮಾಡಿದವರು. ಅಲ್ಲದೆ ಆ ಬಗ್ಗೆ ಕನ್ನಡದಲ್ಲಿ 'ಜೀವನ ರಹಸ್ಯ' ಎಂಬ ಒಂದು ಪುಸ್ತಕವನ್ನೂ ಹೊರತಂದರು. ಆದರೆ ಅವರ ಅದಮ್ಯ ಉತ್ಸಾಹ, ಚೈತನ್ಯಶೀಲ ವ್ಯಕ್ತಿತ್ವ ಅವರ ವೃತ್ತಿ ಕ್ಷೇತ್ರದ ಪರಿಧಿಯನ್ನು ದಾಟಿತ್ತು. ಒಬ್ಬ ಕನ್ನಡಿಗನಾಗಿ, ಭಾರತೀಯನಾಗಿ, ಹೃದಯವಂತಿಕೆಯುಳ್ಳ ಮನುಷ್ಯನಾಗಿ ಅವರ ಕಾರ್ಯಕ್ಷೇತ್ರದ ವಿಸ್ತಾರವನ್ನು ನೋಡಿದರೆ ಬೆರಗು ಮೂಡುತ್ತದೆ! ಎಪ್ಪತ್ತರ ದಶಕ ಅಮೆರಿಕಾದಲ್ಲಿ ಭಾರತೀಯತೆ ಆಗ ತಾನೆ ಕಣ್ಣು ಬಿಡುತ್ತಿದ್ದ ಕಾಲ, ಮೊದಲ ತಂಡದ ವಲಸೆಗಾರರು ಬಂದಿದ್ದರಷ್ಟೆ. ಯಾವುದೇ ಬಗೆಯ ಭಾರತೀಯ ಸಾಂಸ್ಕೃತಿಕ ಅಥವಾ ಧಾರ್ಮಿಕ ಸಂಘ ಸಂಸ್ಥೆಗಳು, ದೇವಸ್ಥಾನಗಳು ಇರಲಿಲ್ಲ. ಅಂದು ಬಂದಿದ್ದ ವಲಸೆಗಾರರ ಭದ್ರವಾದ ಸಾಂಸ್ಕೃತಿಕ ತಳಹದಿ, ಅಮೆರಿಕಾದಲ್ಲೂ ತಮ್ಮ ಸಾಂಸ್ಕೃತಿಕ ವಾತಾವರಣವನ್ನು ಸ್ಥಾಪಿಸಬೇಕೆಂಬ ಬಯಕೆ ವಿವಿಧ ಸಂಸ್ಥೆಗಳು ಹುಟ್ಟಿಕೊಳ್ಳಲು ಕಾರಣವಾಗಿತ್ತು. ಆ ಕೆಲಸ ಅದಮ್ಯ ಉತ್ಸಾಹ, ಚೈತನ್ಯವನ್ನು ಬೇಡುತ್ತಿತ್ತು. ಹೆಜ್ಜೆ ಇಟ್ಟಲೆಲ್ಲ ಹೊಸ ಚೈತನ್ಯ ಚಿಮ್ಮಿಸುವ ಅಪ್ರತಿಮ ಚೈತನ್ಯ ಚಿಲುಮೆ ನಾಗ ಐತಾಳರು! ಒಮ್ಮೆ ಸಂಗೀತಪ್ರಿಯರಾಗಿ, ಮತ್ತೊಮ್ಮೆ ಸಾಹಿತ್ಯ

ಪ್ರಿಯರಾಗಿ ವಿವಿಧ ಚಟುವಟಿಕೆಗಳನ್ನು ಹಮ್ಮಿಕೊಂಡು ಪ್ರೋತ್ಸಾಹಿಸಿದ್ದೇ ಅಲ್ಲದೆ ಅದಕ್ಕೆ ಬೇಕಾದ ಸಂಘ ಸಂಸ್ಥೆಗಳನ್ನು ಕಟ್ಟಲು ಎಲ್ಲ ಬಗೆಯ ಸಹಕಾರ, ಸೇವೆಗಳನ್ನು ನಿರ್ವಂಚನೆಯಿಂದ ನೀಡಿದವರು.

ಚಿಕಾಗೊದಲ್ಲಿ ಅವರು ನೀರೆರೆದು ಪೋಷಿಸಿದ ಸಂಸ್ಥೆಗಳು, ಮಾಡಿದ ಕೆಲಸಗಳು ಒಂದೆರಡಲ್ಲ. ಚಿಕಾಗೊ ವಲಯದಲ್ಲಿ ಲೆಮಾಂಟ್ ಬಡಾವಣೆಯಲ್ಲಿ ಸ್ಥಾಪಿಸಿದ ಮೊಟ್ಟ ಮೊದಲ ಹಿಂದೂ ದೇವಾಲಯ 'ದಿ ಹಿಂದೂ ಟೆಂಪಲ್ ಅಫ್ ಗ್ರೇಟರ್ ಚಿಕಾಗೊ'. ಅದನ್ನು ಕಟ್ಟಲು ನಿಧಿ ಸಂಗ್ರಹಕ್ಕಾಗಿ ಬಹಳಷ್ಟು ಶ್ರಮಿಸಿದರು. ಸ್ವತಃ ಈ ಶುಭ ಕಾರ್ಯಕ್ಕೆ ಉದಾರವಾಗಿ ಧನಸಹಾಯ ನೀಡಿದರು. ವಿದ್ಯಾರಣ್ಯ ಕನ್ನಡ ಕೂಟದ ಶೈಶವದ ದಿನಗಳಲ್ಲಿ ಅದಕ್ಕೆ ಸುಭದ್ರವಾದ ಬುನಾದಿ ಹಾಕಿದವರೂ ಐತಾಳರೇ. ಅನೇಕ ವರ್ಷಗಳ ಕಾಲ ಕಾರ್ಯಕಾರಿ ಸಮಿತಿಯ ಸದಸ್ಯರಾಗಿ, ಎರಡು ವರ್ಷ ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸಿದರು. ಶುರುವಿನ ಆ ದಿನಗಳಲ್ಲಿ ಕಾರ್ಯಕಾರಿ ಸಮಿತಿಯ ಅಧ್ಯಕ್ಷನಾಗಲು ಜನ ಹಿಂದೇಟು ಹಾಕುತ್ತಿದ್ದರು. ಅಂಥಾ ಸಮಯದಲ್ಲಿ ತಮ್ಮ ವರ್ಚಸ್ಸು, ಜನಪ್ರಿಯತೆಯನ್ನು ಸದುಪಯೋಗಪಡಿಸಿಕೊಂಡು ಯಾರನ್ನಾದರೂ ಹುರಿದುಂಬಿಸಿ ಅಧ್ಯಕ್ಷನಾಗಲು ಒಪ್ಪಿಸುತ್ತಿದ್ದರು. ಕೂಟದ 'ಸಂಗಮ' ಪತ್ರಿಕೆಯಲ್ಲಿ ಅವರ ಲೇಖನ ಇದ್ದೇ ಇರುತ್ತಿತ್ತಲ್ಲದೆ ಪತ್ರಿಕೆಯಲ್ಲಿ ಪ್ರಕಟವಾದ ಲೇಖನಗಳ ಇತರ ಬರಹಗಾರರಿಗೂ ಫೋನ್ ಮಾಡಿ ತಮ್ಮ ಮೆಚ್ಚುಗೆಯನ್ನು ಸೂಚಿಸುತ್ತಿದ್ದರು. ಲಕ್ಷ್ಮಿ ಐತಾಳರಂಥ ಅನೇಕ ಮಹಿಳೆಯರ ಬಗೆ ಬಗೆಯ ರುಚಿಕಟ್ಟಾದ ಅಡುಗೆಯೂ ಕನ್ನಡ ಕೂಟದ ಸಮಾರಂಭಗಳನ್ನು ತಪ್ಪಿಸಿಕೊಳ್ಳದೆ ಹೋಗುವಂತೆ ಮಾಡುವ ಪ್ರಮುಖ ಆಕರ್ಷಣೆಯಾಗಿತ್ತು. ಚಿಕಾಗೊ ನಗರಕ್ಕೆ ಆ ಕಾಲದಲ್ಲಿ ಭೇಟಿ ಕೊಟ್ಟ ಎಲ್ಲ ಸಾಹಿತಿಗಳಿಗೂ ಐತಾಳರ ಮನೆಯಲ್ಲಿ ಸ್ವಾಗತ, ಆತಿಥ್ಯ ಖಚಿತವಾಗಿತ್ತು. ಅವರ ಮನೆಯಲ್ಲಿ ತಂಗಿದ್ದ ಸಾಹಿತಿಗಳ ಪಟ್ಟಿದೊಡ್ಡದು ಶಿವರಾಮ ಕಾರಂತರು, ಯು. ಆರ್. ಅನಂತಮೂರ್ತಿ, ಎ. ಕೆ. ರಾಮಾನುಜಂ, ಎಸ್. ಎಲ್. ಭೈರಪ್ಪ, ಜಿ. ಎಸ್. ಶಿವರುದ್ರಪ್ಪ, ಎನ್. ಎಸ್. ಲಕ್ಷ್ಮೀನಾರಾಯಣ ಭಟ್ಟ, ಪ್ರಭುಶಂಕರ, ಲಕ್ಷ್ಮೀಶ ತೋಳ್ಪಾಡಿ, ಡಿ. ಆರ್. ನಾಗರಾಜ... ಹೀಗೇ ಬಂದ ಎಲ್ಲ ಅತಿಥಿಗಳಿಗೂ ಪ್ರೀತಿಯ ಅಮೃತ ಸಿಂಚನ, ಲಕ್ಷ್ಮಿಯವರ ಕೈಯ ಅಡುಗೆಯ ರಸ ಭೋಜನ! ಅಲ್ಲದೆ ಇತರ ಆಸಕ್ತ ಕನ್ನಡಿಗರನ್ನು ಮನೆಗೆ ಕರೆದು ಸಾಹಿತಿಗಳ ಒಂದು ಉಪನ್ಯಾಸವನ್ನೂ ಏರ್ಪಡಿಸುತ್ತಿದ್ದರು. ಸಾಹಿತ್ಯಪ್ರಿಯರಾದ ಐತಾಳರು ಚಿಕಾಗೋದಲ್ಲಿ 'ಮಂಥನ' ಎಂಬ ಸಾಹಿತ್ಯಪರವಾದ ಚರ್ಚೆ ನಡೆಸಲು ಒಂದು ಆಸಕ್ತರ ಕೂಟವನ್ನು ಹುಟ್ಟು ಹಾಕಿದ್ದರು.

ಇವೆಲ್ಲ ಚಟುವಟಿಕೆಗಳಿಂದ ಪ್ರೇರಿತರಾಗಿ ನಾಗ ಐತಾಳರು 'ಅಮೆರಿಕನ್ನಡಿಗನೊಬ್ಬನ ದಿನಚರಿ' ಎಂಬ ಸ್ವಾನುಭವದ ಗ್ರಂಥವನ್ನು ಹೊರತಂದರು. ಇದು ಮುಂದೆ ಹಲವಾರು ಗ್ರಂಥಗಳನ್ನು ಪ್ರಕಟಿಸುವುದಕ್ಕೆ ನಾಂದಿಯಾಗುತ್ತದೆ ಎಂದು ನಾವು ಯಾರೂ

ಊಹಿಸಿರಲಿಲ್ಲ. ಮುಂದೆ 'ಕಾರಂತ ಚಿಂತನ' ಎಂಬ ಕಾರಂತರ ಬಗ್ಗೆ ಅಮೆರಿಕನ್ನಡಿಗರ ಲೇಖನಗಳನ್ನು ಒಳಗೊಂಡ ಒಂದು ಸಂಪಾದಿತ ಕೃತಿಯನ್ನೂ ಪ್ರಕಟಿಸಿದರು. ಮುಂದಿನ ವರ್ಷಗಳಲ್ಲಿ ಐತಾಳರು ಬರೋಬ್ಬರಿ ಇಪ್ಪತ್ತು ಗ್ರಂಥಗಳನ್ನು ಪ್ರಕಟಿಸಿದರು. ಪ್ರಬಂಧ ಸಂಕಲನ, ಕಥಾಸಂಕಲನ, ಕಾದಂಬರಿ, ಕವನ ಸಂಕಲನ ಎಲ್ಲ ಬಗೆಯ ಪ್ರಕಾರಗಳಲ್ಲೂ ಕೈಯಾಡಿಸಿದರು.

ಐತಾಳರು ಕನ್ನಡ ಸಾಹಿತ್ಯಕ ಬರವಣಿಗೆಯನ್ನು ಕೈಗೆತ್ತಿಕೊಂಡಾಗ ಡಯಾಬಿಟಿಸ್ ಕಾರಣದಿಂದ ಕಣ್ಣಿನ ದೃಷ್ಟಿ ಆಗಲೇ ಮಂಜಾಗಿತ್ತು. ಆದರೂ ಛಲ ಬಿಡದ ತ್ರಿವಿಕ್ರಮನಂತೆ ಕಂಪ್ಯೂಟರಿನಲ್ಲಿ ಅಕ್ಷರಗಳನ್ನು ಸಾಧ್ಯವಾದಷ್ಟು ದೊಡ್ಡದು ಮಾಡಿ, ಪುಸ್ತಕ ಓದುವಾಗ ಒಂದೊಂದು ಪದದ ಮೇಲೂ ದೊಡ್ಡ ಅರ್ಧಗೋಳಾಕಾರದ ಭೂತಗನ್ನಡಿಯನ್ನು ಜರುಗಿಸುತ್ತಾ ಓದಿ ತಮ್ಮ ಸಾಹಿತ್ಯಪರ ಕೆಲಸವನ್ನು ಮುಂದುವರಿಸಿದರು ಅಂದರೆ ಅವರ ಜೀವನೋತ್ಸಾಹ, ಸಾಹಿತ್ಯ ಪ್ರೀತಿ ಎಷ್ಟು ದೊಡ್ಡದು! ಒಮ್ಮೆ ಕವಿ ಎನ್. ಎಸ್. ಲಕ್ಷ್ಮೀನಾರಾಯಣ ಭಟ್ಟರು ನಮ್ಮ ಮನೆಯಲ್ಲಿ ಇಳಿದುಕೊಂಡಿದ್ದಾಗ ಐತಾಳರಿಗೆ ಕಣ್ಣಿನ ಸರ್ಜರಿ ಆಗಿತ್ತು, ನೋವೂ ಇತ್ತು, ಸರ್ಜರಿಯಾದ ಕಣ್ಣಿಗೆ ಪ್ಯಾಚ್ ಹಾಕಿದ್ದರು ಅಷ್ಟಿದ್ದರೂ ಅದ್ಯಾವುದನ್ನೂ ಲೆಕ್ಕಿಸದೆ ಸಂಜೆ ನಮ್ಮ ಮನೆಗೆ ಬಂದು ಭಟ್ಟರ ಜೊತೆ ಸಾಹಿತ್ಯದ ಚರ್ಚೆ ನಡೆಸಿದ್ದರು. ಭಾರತದಿಂದ ಅಲ್ಪ ಕಾಲಾವಧಿಗೆ ಚಿಕಾಗೊ ವಿದ್ಯಾಲಯದಲ್ಲಿ ಎಕ್ಸ್‌ಚೇಂಜ್ ಪ್ರೊಫೆಸರ್ ಆಗಿ ಬಂದ ಸಂಸ್ಕೃತ ಪ್ರಾಧ್ಯಾಪಕ ನಾಗರಾಜ ಅವರು ಇದ್ದಷ್ಟು ಕಾಲವೂ ವಾರಾಂತ್ಯದಲ್ಲಿ ಐತಾಳರ ಮನೆಗೆ ಬಂದು ಕನ್ನಡ ವಾತಾವರಣದ ಸೊಗಡು, ತಾಯ (ಲಕ್ಷ್ಮೀಯವರ) ಕೈಯಡುಗೆಯ ರುಚಿಯನ್ನು ಸವಿದು ಹೋಗುತ್ತಿದ್ದರು. ವಿಶ್ವಪರ್ಯಟನೆಯನ್ನು ಬೈಸಿಕಲ್ಲಿನಲ್ಲಿ ಮಾಡಿದ ಕನ್ನಡಿಗರೊಬ್ಬರು ಹಲವು ವಾರಗಳ ಕಾಲ ಐತಾಳರ ಮನೆಯಲ್ಲಿ ಝುಂಡಾ ಊರಿದ್ದರು. ಭಾರತದಿಂದ ಪ್ರವಾಸಕ್ಕೆ ಬಂದ ಕನ್ನಡ ಚಿತ್ರ ನಟಿಯೊಬ್ಬರ ಪತಿ ಚಿಕಾಗೊದಲ್ಲಿ ಇದ್ದಕ್ಕಿದ್ದಂತೆ ಅನಾರೋಗ್ಯಕ್ಕೆ ತುತ್ತಾದಾಗ ಐತಾಳರು ಅವರ ಹೊಟೇಲಿಗೆ ಧಾವಿಸಿ ಅವರನ್ನು ಆಸ್ಪತ್ರೆಗೆ ಸೇರಿಸಿ, ಬೇಕಾದ ಔಷಧಿ, ಚಿಕಿತ್ಸೆಗಳನ್ನು ಏರ್ಪಡಿಸಿ ಸಹಾಯ ಮಾಡಿದ್ದರು. ಇಂಥ ತೆರೆಮರೆಯ ಹೃದಯವಂತಿಕೆಯ ಕೆಲಸಗಳನ್ನು ಅದೆಷ್ಟು ಮಾಡಿದ್ದಾರೋ! ಲೆಕ್ಕವಿಟ್ಟವರಾರು? ಬಲಗೈಯಲ್ಲಿ ದಾನ ಮಾಡಿದ್ದು ಎಡಗೈಗೂ ತಿಳಿಯಬಾರದೆಂಬ ನಾಣ್ಣುಡಿಯನ್ನು ಜೀವನದಲ್ಲಿ ಅನುಷ್ಠಾನಕ್ಕೆ ತಂದವರು ಅವರು. ದಣಿವನ್ನು ಲೆಕ್ಕಿಸದೆ 'ಸಾಕಾಯಿತು' ಎಂದು ಯಾವತ್ತೂ ಹೇಳದೆ ತುಂಬು ಹೃದಯದಿಂದ, ಪ್ರೀತಿಯಿಂದ ತಮ್ಮ ಕೈಯಲ್ಲಾದ ಎಲ್ಲ ಬಗೆಯ ನೆರವನ್ನೂ ನೀಡುತ್ತಿದ್ದರು.

'ಅಮೆರಿಕನ್ನಡ' ಪತ್ರಿಕೆಯನ್ನು ಹರಿಹರೇಶ್ವರ ದಂಪತಿ ಶುರು ಮಾಡಿದಾಗ ಅದೊಂದು ತಪಸ್ಸೇ ಆಗಿತ್ತು. ಅಮೆರಿಕಾದಲ್ಲಿ ಕನ್ನಡಿಗರ ಲೇಖನಗಳನ್ನು ಒಟ್ಟು ಮಾಡಿ ಅದನ್ನು ಭಾರತಕ್ಕೆ ಕಳಿಸಿ ಅಲ್ಲಿ ಮುದ್ರಿಸಿ ಮತ್ತೆ ಅಮೆರಿಕಾದಲ್ಲಿ ಎಲ್ಲರಿಗೂ

ಕಳಿಸುವುದಕ್ಕೆ ತನು, ಮನ ಧನವನ್ನು ಅರ್ಪಿಸಿ ಅವರು ಅದೆಷ್ಟು ಕಷ್ಟಪಟ್ಟಿದ್ದರೋ! ಇಂದಿನಂತೆ ಇಂತಹ ಕೆಲಸಗಳಿಗೆ ಕಂಪ್ಯೂಟರ್ ಸೌಲಭ್ಯ ಇಲ್ಲದ ಕಾಲ ಅದು! ಆ ಬಗ್ಗೆ ಐತಾಳರು ತುಂಬುಹೃದಯದ ಸಹಕಾರ ನೀಡಿದರು. ನನಗೂ ಮೊದಲು ಅಮೆರಿಕನ್ನಡ ಪತ್ರಿಕೆಯನ್ನು ಓದಲು ಕೊಟ್ಟು ಅದರಲ್ಲಿ ಲೇಖನಗಳನ್ನು ಪ್ರಕಟಿಸಲು ಪ್ರೋತ್ಸಾಹ ನೀಡಿದವರು ಅವರೇ! ಹಾಗೆ ನೋಡಿದರೆ ನನ್ನೊಳಗೆ ಸುಪ್ತವಾಗಿದ್ದ ಬರೆಯಬೇಕೆಂಬ ಆಕಾಂಕ್ಷೆ ಗರಿಗೆದರಿ ಕುಣಿಯಲು ಅವರೇ ಸ್ಫೂರ್ತಿ ನೀಡಿದ್ದು. ನನ್ನ ಹಾಗೇ ಇನ್ನೆಷ್ಟು ಜನರಿಗೆ ಪ್ರೋತ್ಸಾಹ ನೀಡಿದರೋ! ಅಮೆರಿಕದಾದ್ಯಂತ ಹಬ್ಬಿದ ಕನ್ನಡ ಸಾಹಿತ್ಯಾಸಕ್ತರು, ಬರಹಗಾರರು ಹೀಗೆ ಅಮೆರಿಕನ್ನಡದ ಮೂಲಕ ಬೆಳಕಿಗೆ ಬಂದ ಮೇಲೆ ಸಾಹಿತ್ಯಕ್ಕಾಗಿಯೇ ಮೀಸಲಾದ ಸಂಸ್ಥೆಯೊಂದನ್ನು ಶುರು ಮಾಡಬೇಕೆಂದು ಹಲವರಿಗೆ ಅನಿಸತೊಡಗಿತ್ತು. ನಮ್ಮ ಐತಾಳರ ಜೊತೆ ಕೈ ಜೋಡಿಸಿ ಮುಖ್ಯವಾಗಿ ಎಚ್. ವೈ. ರಾಜಗೋಪಾಲ್, ಎಚ್.ವಿ.ರಂಗಾಚಾರ್, ಗೋಪಾಲ್ ಮತ್ತು ನಳಿನಿ ಕುಕ್ಕೆ, ಡಾ. ಚಂದ್ರಶೇಖರ್ ಮತ್ತು ಶ್ರೀದೇವಿ ಮುಂತಾದವರು ಹಲವಾರು ಮೀಟಿಂಗುಗಳನ್ನು ನಡೆಸಿ ಈ ಸಂಸ್ಥೆಯ ರೂಪರೇಷೆಯನ್ನು ಯೋಜಿಸಿದರು. ಮೊದಲ ಮೀಟಿಂಗ್ ಐತಾಳರ ಮಗ ಅರವಿಂದ್ ಐತಾಳರ ಮನೆಯಲ್ಲಿ–ನ್ಯೂಜೆರ್ಸಿಯಲ್ಲೇ ನಡೆದಿತ್ತು. ಅರವಿಂದ್ ಐತಾಳರೇ ವಕೀಲರಾಗಿದ್ದರಿಂದ ಈ ಸಂಸ್ಥೆಯ ಸಂವಿಧಾನವನ್ನು ಕಾನೂನುಬದ್ಧವಾಗಿ ರೂಪಿಸಲು ಎಲ್ಲ ಬಗೆಯ ಸಹಾಯ ನೀಡಿದ್ದರು. ಈ ಸಂಸ್ಥೆಗೆ 'ಕನ್ನಡ ಸಾಹಿತ್ಯರಂಗ' ಎಂದು ಹೆಸರಿಡಬೇಕೆಂಬ ಸೂಚನೆ ಐತಾಳರೇ ಮಾಡಿದ್ದು. ಹೀಗೆ ಒಂದು ಉತ್ತಮ ಸಾಹಿತ್ಯಕ ಸಂಸ್ಥೆಯ ಸ್ಥಾಪಕ ಸದಸ್ಯರಾಗಿದ್ದಲ್ಲದೆ 'ಕನ್ನಡ ಸಾಹಿತ್ಯ ರಂಗ'ದ ಮೊದಲನೆಯ ಸಮ್ಮೇಳನದಲ್ಲಿ ಹೊರತಂದ ಅಮೆರಿಕನ್ನಡಿಗರ ಲೇಖನಗಳನ್ನು ಒಳಗೊಂಡ 'ಕುವೆಂಪು ಸಾಹಿತ್ಯ ಸಮೀಕ್ಷೆ' ಪುಸ್ತಕದ ಸಂಪಾದಕರಾಗಿದ್ದರು. ಸುಮಾರು ಹತ್ತೊಂಬತ್ತು ವರ್ಷಗಳ ಕಾಲ ಆಡಳಿತ ಮಂಡಲಿಯ ಸದಸ್ಯರಾಗಿದ್ದು ಕೊನೆಯ ಐದು ವರ್ಷ ಆಡಳಿತ ಮಂಡಲಿಯ ಮುಖ್ಯಸ್ಥರಾಗಿದ್ದರು.

'ಕನ್ನಡ ಸಾಹಿತ್ಯ ರಂಗ' ಪ್ರಕಟಿಸಿದ ಬಹುತೇಕ ಕೃತಿಗಳಿಗೆ ಪ್ರಕಾಶಕರಾದ 'ಅಭಿನವ'ದ ರವಿಕುಮಾರ್ ಅವರನ್ನು ಅಮೆರಿಕನ್ನಡಿಗರಿಗೆ ಪರಿಚಯಿಸಿದವರೇ ಐತಾಳರು. ಕನ್ನಡ ಕೆಲಸದ ಪರಿಧಿಯನ್ನು ದಾಟಿ ಒಬ್ಬ ಭಾರತೀಯನಾಗಿ ನಾಗ ಐತಾಳರು ಅಸೋಸಿಯೇಷನ್ ಅಫ್ ಇಂಡಿಯನ್ಸ್ ಇನ್ ಅಮೆರಿಕಾ ಎಂಬ ಒಂದು ಸಂಸ್ಥೆಯಲ್ಲಿಯೂ ಸೇವೆ ಸಲ್ಲಿಸಿದರು. ಈ ಸಂಸ್ಥೆ ಅಮೆರಿಕಾದಲ್ಲಿ ಭಾರತೀಯರ ಹಿತಾಸಕ್ತಿಯನ್ನು ಕಾಯುವುದು, ಇತರ ದೇಶಗಳಿಂದ ಬಂದ ವಲಸೆಗಾರರ ಜೊತೆ ಕೈ ಜೋಡಿಸಿ ರಾಜಕೀಯವಾಗಿ ಒಂದು ಗಟ್ಟಿ ನೆಲೆಯನ್ನು ಸ್ಥಾಪಿಸುವುದು, ಭಾರತದಲ್ಲಿ ಬೇಕಾದ ಅಗತ್ಯವಾದ ನೆರವು ನೀಡುವುದು ಮುಂತಾದ ಚಟುವಟಿಕೆಗಳಲ್ಲಿ ತನ್ನನ್ನು ತೊಡಗಿಸಿಕೊಂಡಿತ್ತು. ಆ ಸಂಸ್ಥೆಯ ಅಧ್ಯಕ್ಷನಾಗಿ ಒಂದು ವರ್ಷ ಸೇವೆ ಸಲ್ಲಿಸಿದರು.

ಲಾಸ್‌ಏಂಜಲೀಸ್‌ಗೆ ಹೋದ ಮೇಲೆ ಐತಾಳರು ಅಲ್ಲಿ 'ಸಾಹಿತ್ಯಾಂಜಲಿ' ಎಂಬ ಒಂದು ಸಾಹಿತ್ಯಾಸಕ್ತ ಸಂಸ್ಥೆಯನ್ನು ಶುರು ಮಾಡಿದರು. ಅದರ ಧ್ಯೇಯವೆಂದರೆ ಅಮೆರಿಕಾದಲ್ಲಿ ಮತ್ತು ಭಾರತದಲ್ಲಿ ಸಾಹಿತ್ಯಪರವಾದ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದು. ಈ 'ಸಾಹಿತ್ಯಾಂಜಲಿ'ಯ ಮೂಲಕ ತರಂಗ, ಪತ್ರಿಕೆ ನಡೆಸುವ ಕಥಾ ಸ್ಪರ್ಧೆಯಲ್ಲಿ ಕೈ ಜೋಡಿಸಿ ವಿಜೇತರಿಗೆ ಬಹುಮಾನ ನೀಡುವ ಹೊಣೆಯನ್ನು ಹೊತ್ತರು. ಅಲ್ಲದೆ ತುಷಾರ ಸೇರಿ ನಡೆಸುವ 'ಕೇಳುಸಖಿ' ಎಂಬ ಲೇಖಕಿಯರಿಗಾಗಿಯೇ ರೂಪಿಸಿದ ಸಾಹಿತ್ಯ ಕಮ್ಮಟದಲ್ಲಿಯೂ ಭಾಗವಹಿಸಿದರು. ವಿದ್ಯೆಯ ಮಹತ್ವವನ್ನು ಮನಗಂಡ ಅವರು ಹುಟ್ಟೂರಾದ ಕೋಟದ ಬಳಿ ಶಾಲೆಗೆ ಆರ್ಥಿಕ ಸಹಾಯ ನೀಡಿದರು. ಹೆಗ್ಗಡದೇವನ ಕೋಟೆಯ ಬಳಿ ಇರುವ ಆದಿವಾಸಿ ಜನಾಂಗಕ್ಕೆ ಶುಚಿತ್ವ, ವೈದ್ಯಕೀಯ ನೆರವು, ವಿದ್ಯಾಭ್ಯಾಸ ಮುಂತಾದ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಿಕೊಡುತ್ತಿರುವ ಡಾ. ಸುದರ್ಶನ್ ಅವರಿಗೆ ತುಂಬು ಸಹಕಾರ ನೀಡಿದ್ದರು. 'ಎಂಥ ಒಳ್ಳೆಯ ಕೆಲಸ ಮಾಡುತ್ತಿದ್ದಾರೆ! ಅವರ ಬಗ್ಗೆ ಒಂದು ಪುಸ್ತಕ ತರಬೇಕು, ತರುತ್ತೀನಿ' ಎಂದು ನನ್ನ ಹತ್ತಿರ ಯಾವಾಗಲೂ ಹೇಳುತ್ತಿದ್ದರು. ಆದರೆ ಕಣ್ಣಿನ ಸಮಸ್ಯೆ, ಅನಾರೋಗ್ಯ ಮುಂತಾದ ಕಾರಣಗಳಿಂದ ಆ ಕನಸು ನನಸಾಗಲಿಲ್ಲ. ಇವಿಷ್ಟು ನನಗೆ ಗೊತ್ತಿರುವ ಸಂಗತಿಗಳು, ಗೊತ್ತಿಲ್ಲದ್ದು ಇನ್ನೆಷ್ಟು ಇದೆಯೋ!

ತಾನು ಬಿಸಿಲಲಿ ನಿಂತು ತನ್ನ ಬಳಿ ಬರುವವರೆಗೆ
ತಣ್ಣಗಿನ ಆಸರೆಯ ನೆರಳನಿತ್ತು,
ಹೇಗೆ ಗೆಲುವಾಗುವುದೋ ಹಸಿರೆಲೆಯ ಹೊಂಗೆ ಮರ
ಹಾಗೆ ಬಾಳಿಸು ನನ್ನ ಕರುಣೆ ಇಟ್ಟು.

ಎಚ್.ಎಸ್.ವಿ. ಅವರ ಕವನದ ಸಾಲುಗಳು ಇವು. ಐತಾಳರಿಗಾಗಿಯೇ ಬರೆದದ್ದೇನೋ ಎನಿಸುವಂತಿವೆ. ದಕ್ಷಿಣ ಕನ್ನಡದಲ್ಲಿ ಮಾತುಮಾತಿಗೆ 'ಆ ಪುಣ್ಯಾತ್ಮ...' ಅಂತ ಹೇಳುತ್ತಾರೆ. ಐತಾಳರಮಟ್ಟಿಗೆ ಅದು ಅತ್ಯಂತ ಅನ್ವರ್ಥವಾದ ಸಂಬೋಧನೆ! ಪುಣ್ಯಾತ್ಮ! ನಿಜಕ್ಕೂ ನಿಜ!

*

ಅಮೆರಿಕನ್ನಡಿಗರ ಅಮಿತಾಭ್ ಬಚ್ಚನ್ ನಾಗ ಐತಾಳ್

– ತ್ರಿವೇಣಿ ಶ್ರೀನಿವಾಸರಾವ್

ನಾವು ನಾಗ ಐತಾಳರನ್ನು ಆತ್ಮೀಯವಾಗಿ ಕೀಟಲೆ ಮಾಡುತ್ತಿದ್ದುದು 'ಅಮೆರಿಕನ್ನಡಿಗರ ಅಮಿತಾಭ್ ಬಚ್ಚನ್' ಎಂದೇ, ನಾಗ ಐತಾಳರು ಅಮಿತಾಭರಂತೆ ಎತ್ತರವಿದ್ದರೆ ಅವರ ಪತ್ನಿ ಲಕ್ಷ್ಮೀ ಐತಾಳರು ಜಯಾ ಬಚ್ಚನ್ ಅವರಂತೆ ಪುಟ್ಟ ಗಾತ್ರದವರು. ಈ ಜೋಡಿಯನ್ನು ಕಂಡರೆ ಯಾರಿಗಾದರೂ ಅಮಿತಾಭ್-ಜಯಾ ಜೋಡಿಯೇ ಕಣ್ಣಿನ ಮುಂದೆ ಬರುತ್ತಿತ್ತು. ನಮ್ಮ ಇಂಥಾ ಹುಡುಗಾಟದ, ತಮಾಷೆಯ ಮಾತುಗಳನ್ನು ಐತಾಳರು ನಗುತ್ತಾ ಆನಂದಿಸುತ್ತಿದ್ದರು. ಬರೀ ಶರೀರದ ಎತ್ತರದಲ್ಲಿ ಮಾತ್ರವಲ್ಲದೆ, ತಮ್ಮ ಕನ್ನಡ ಪ್ರೀತಿ, ಸಾಹಿತ್ಯಾಭಿಮಾನದಲ್ಲೂ ಐತಾಳರು ನಮ್ಮ ನೆನಪಿನಲ್ಲಿ ಎಂದೂ ಬಹಳ ಎತ್ತರದಲ್ಲಿಯೇ ನಿಲ್ಲುತ್ತಾರೆ. ನನಗೆ ನಾಗ ಐತಾಳರ ಪರಿಚಯವಾಗಿದ್ದು ಇಮೈಲ್ ಮೂಲಕ. ಆಗಷ್ಟೇ ಅಮೆರಿಕದ ಕನ್ನಡ ಸಾಹಿತ್ಯ ರಂಗದ ಉಗಮವಾಗಿತ್ತು. ಎಚ್. ವೈ. ರಾಜಗೋಪಾಲ್, ನಾಗ ಐತಾಳರು ಮತ್ತು ಇನ್ನಿತರ ಹಿರಿಯರ ಕನಸಿನ ಕೂಸಾಗಿತ್ತು ಕಸಾರಂ. ಫಿಲಿಡೆಲ್ಫಿಯಾದಲ್ಲಿ ನಡೆಯಲಿದ್ದ ಮೊದಲನೆಯ ಸಮ್ಮೇಳನದಲ್ಲಿ ಬಿಡುಗಡೆಯಾಗಲಿರುವ ಪುಸ್ತಕ ಹೊರತರುವ ಕಾರ್ಯ ಪ್ರಾರಂಭವಾಗಿತ್ತು. ನಾನು ಆಗ ಎಸ್. ಕೆ. ಶಾಮಸುಂದರ್ ಸಂಪಾದಕತ್ವದಲ್ಲಿ ಹೊರಬರುತ್ತಿದ್ದ ದಟ್ಸ್ ಕನ್ನಡ ಜಾಲತಾಣದಲ್ಲಿ (ಈಗ ಒನ್ ಇಂಡಿಯಾ) ಲೇಖನಗಳನ್ನು ಬರೆಯುತ್ತಿದ್ದೆ. ನನ್ನ

ಲೇಖನದೊಂದಿಗೆ ಪ್ರಕಟವಾಗುತ್ತಿದ್ದ ಇಮೈಲ್ ವಿಳಾಸಕ್ಕೆ ನಾಗ ಐತಾಳರು ಪತ್ರ ಬರೆದು, ಸಮ್ಮೇಳನದಲ್ಲಿ ಹೊರಬರುವ 'ಕುವೆಂಪು ಸಾಹಿತ್ಯ ಸಮೀಕ್ಷೆ' ಗ್ರಂಥಕ್ಕಾಗಿ ಲೇಖನ ಕೋರಿದ್ದರು. ನಾನು ಲೇಖನ ಬರೆಯಲು ಹಿಂಜರಿದೆ. ನನ್ನಲ್ಲಿದ್ದ ಪುಸ್ತಕಗಳನ್ನೆಲ್ಲವನ್ನೂ ಭಾರತದಲ್ಲಿ ಬಿಟ್ಟು ಬಂದಿದ್ದರಿಂದ ನನ್ನಲ್ಲಿ ಆಕರ ಗ್ರಂಥಗಳಿರಲಿಲ್ಲ. ಈಗಿನಂತೆ, ಆಗ ಅಂತರ್ಜಾಲದಲ್ಲಿ ಸಾಕಷ್ಟು ಸಾಹಿತ್ಯ ಸಾಮಗ್ರಿ ದೊರಕುತ್ತಿರಲಿಲ್ಲ. ಹಾಗಾಗಿ ನಾನು ಅನುಮಾನಿಸಿದೆ. ಆಗ ಐತಾಳರು ಕುವೆಂಪು ಅವರ ಪುಸ್ತಕಗಳು ತಮ್ಮಲ್ಲಿರುವುದಾಗಿಯೂ, ನಾನು ಆಯ್ದುಕೊಳ್ಳುವ ವಿಷಯ ತಿಳಿಸಿದರೆ ಅದಕ್ಕೆ ಸಂಬಂಧಿಸಿದ ಆಕರಗಳನ್ನು ಒದಗಿಸುವುದಾಗಿ ಹೇಳಿ, ನನ್ನಲ್ಲಿ ಧೈರ್ಯ ತುಂಬಿ ಬರೆಯಲು ಒಪ್ಪಿಸಿದರು. ನಾನು 'ಕುವೆಂಪು ಕವಿತೆಗಳಲ್ಲಿ ನಿಸರ್ಗ ಪ್ರೀತಿ' ವಿಷಯದ ಬಗ್ಗೆ ಬರೆಯಲು ನಿರ್ಧರಿಸಿ, ಅವರಿಗೆ ತಿಳಿಸಿದೆ. ಐತಾಳರು ಕುವೆಂಪು ಅವರ ನಿಸರ್ಗ ಕವಿತೆಗಳನ್ನು ತಮ್ಮಲ್ಲಿರುವ ಸಂಕಲನಗಳಿಂದ ಆಯ್ದು, ಅವುಗಳನ್ನು ಸ್ಕ್ಯಾನ್ ಮಾಡಿ ಮುತುವರ್ಜಿಯಿಂದ ನನಗೆ ಅಂಚೆಯ ಮೂಲಕ ಕಳಿಸಿಕೊಟ್ಟರು. ಅಷ್ಟೇ ಅಲ್ಲ, ತಮ್ಮ ಅಮೂಲ್ಯ ಸಲಹೆ-ಸೂಚನೆಗಳನ್ನು ಕೊಟ್ಟು ನನ್ನಿಂದ ಲೇಖನವನ್ನು ಬರೆಸಿ ಅದನ್ನು 'ಕುವೆಂಪು ಸಾಹಿತ್ಯ ಸಮೀಕ್ಷೆ' ಪುಸ್ತಕದಲ್ಲಿ ಪ್ರಕಟಿಸಿದರು. ಈ ಲೇಖನದಿಂದಲೇ ನನಗೆ ಐತಾಳರೊಂದಿಗೂ, ಅವರಿಂದಾಗಿ ಕನ್ನಡ ಸಾಹಿತ್ಯ ರಂಗದೊಂದಿಗೂ ಬಾಂಧವ್ಯ ಬೆಸೆಯಿತು ಎಂದರೆ ತಪ್ಪಾಗಲಾರದು!

ಕುವೆಂಪು ಅವರ ಪ್ರಿಯ ಶಿಷ್ಯರಾಗಿದ್ದ ಪ್ರಭುಶಂಕರ್ ಅವರು ಮುಖ್ಯ ಅತಿಥಿಯಾಗಿದ್ದ, ಕನ್ನಡ ಸಾಹಿತ್ಯ ರಂಗದ ಮೊದಲನೆಯ ಸಮ್ಮೇಳನದಲ್ಲಿ ನಾನೂ ಭಾಗವಹಿಸಿದ್ದೆ. ಅದೊಂದು ಅದ್ಭುತ ಸಮ್ಮೇಳನ. ಅಲ್ಲಿಯೇ ನಾನು ಮೊದಲ ಬಾರಿ ನಾಗ ಐತಾಳರನ್ನು ಭೇಟಿಯಾಗಿದ್ದು. ಅಂದಿನ ಪರಿಚಯ ನಿರಂತರವಾಗಿ ಮುಂದುವರೆದು, ನಾಗ ಐತಾಳರು ಕುಟುಂಬದ ಹಿರಿಯರಷ್ಟೇ ಆಪ್ತರಾದರು. ಅವರನ್ನು ಕನ್ನಡ ಸಾಹಿತ್ಯ ರಂಗದ ಸಮ್ಮೇಳನಗಳಲ್ಲಲ್ಲದೆ, ಅವರ ಮನೆಯಲ್ಲಿಯೂ ಭೇಟಿಮಾಡುವ ಅವಕಾಶ ದೊರಕಿತ್ತು. ಅವರೊಂದಿಗಿನ ದೂರವಾಣಿ ಕರೆಗಳಿಗಂತೂ ಲೆಕ್ಕವೇ ಇಲ್ಲ. ಕನ್ನಡ ಸಾಹಿತ್ಯದ ಇತ್ತೀಚಿನ ಆಗುಹೋಗುಗಳ ಬಗ್ಗೆ ಐತಾಳರಿಗೆ ತೀರದ ಬೆರಗು. ಅವರು ಏನಾದರೊಂದು ಬರೆಯುತ್ತಲೇ ಇದ್ದರು.

ಪ್ರತಿ ಬಾರಿ ಮಾತನಾಡಿದಾಗಲೂ ಅವರು ಬರೆಯಲಿರುವ ಮುಂದಿನ ಪುಸ್ತಕದ ಬಗ್ಗೆ ತಮ್ಮ ವಿಚಾರಗಳನ್ನು ಹಂಚಿಕೊಳ್ಳುತ್ತಿದ್ದರು. ಅವರ ಮನದಲ್ಲಿ ಇನ್ನಾವುದೋ ಯೋಜನೆ ರೂಪುಗೊಳ್ಳುತ್ತಿರುತ್ತಿತ್ತು. ನಿಧನರಾಗುವ ಮುಂಚಿನ ಕೆಲದಿನಗಳನ್ನು ಬಿಟ್ಟರೆ ಫೇಸ್‌ಬುಕ್ಕಿನಲ್ಲಿಯೂ ಸಕ್ರಿಯರಾಗಿದ್ದರು. ತಮ್ಮ ಊರಿನ, ಬಾಲ್ಯದ ನೆನಪುಗಳನ್ನು ಪುಟ್ಟ ಬರಹಗಳಾಗಿ ಬರೆದು ಹಂಚಿಕೊಳ್ಳುತ್ತಿದ್ದರು. ಐತಾಳರ ಮಾತುಗಳು ನೇರ-ನಿಷ್ಠುರ. ಒಳಗೊಂದು ಹೊರಗೊಂದು ಅವರ ಸ್ವಭಾವವಲ್ಲ. ತಮಗೆ ಸರಿಬಾರದ

ಯಾವುದೇ ವಿಷಯವಾದರೂ ಅದನ್ನು ಅವರು ಮುಜುಗರವಿಲ್ಲದೆ ವ್ಯಕ್ತಪಡಿಸುತ್ತಿದ್ದರು. ಅವರ ವಿರೋಧ ವಿಷಯಕ್ಕೆ ಸಂಬಂಧಿಸಿದ್ದಾಗಿತ್ತೇ ಹೊರತು ವ್ಯಕ್ತಿಗತ ನಂಜು ಅಲ್ಲಿರುತ್ತಿರಲಿಲ್ಲ. ಹಾಗಾಗಿ ಐತಾಳರ ಮಾತುಗಳನ್ನು ಯಾರೂ ತಪ್ಪಾಗಿ ಭಾವಿಸುತ್ತಿರಲಿಲ್ಲ. ಅವರ ಮಾತಿನಲ್ಲಿ ಇಣುಕುತ್ತಿದ್ದ ಕರಾವಳಿಯ ಸೊಗಡು ಕೇಳಲು ಚೆನ್ನವೆನ್ನಿಸುತ್ತಿತ್ತು. ಒಂದು ಪುಟ್ಟ ವಿನೋದ, ಹಾಸ್ಯದ ಕಿರುಲೇಪ ಅವರ ಮಾತಿನಲ್ಲಿರುತ್ತಿತ್ತು. ಕಂಪ್ಯೂಟರಿನಲ್ಲಿ ಕನ್ನಡ ಬರೆಯಲು ಅವರಿಗೆ ಆಗೀಗ ಸಮಸ್ಯೆಯಾಗುತ್ತಿತ್ತು. ಆಗೆಲ್ಲಾ ನನಗೆ ಕರೆ ಮಾಡಿ ಆ ಬಗ್ಗೆ ಸಹಾಯ ಕೇಳುತ್ತಿದ್ದರು. ಗಣಕವನ್ನು ಬಳಸುವಲ್ಲಿ ಅವರಿಗಿದ್ದ ಚಿಕ್ಕಪುಟ್ಟ ಸಮಸ್ಯೆ ಪರಿಹಾರವಾದ ನಂತರ ಒಂದಿಷ್ಟು ಮಾತು, ಸ್ವಲ್ಪ ತಮಾಷೆ, ಇನ್ನಾವುದೋ ಅನುಭವ, ಮತ್ತಾವುದೋ ನೆನಪುಗಳೊಂದಿಗೆ ಮಾತು ಮುಂದುವರೆಯುತ್ತಿತ್ತು. ಪ್ರತಿ ಬಾರಿಯೂ ಅವರೊಂದಿಗಿನ ಮಾತು ಮುಗಿಸಿದ ನಂತರ ಏನಾದರೊಂದು ಹೊಸ ವಿಷಯ ಮೆದುಳಿಗೆ ಇಳಿದಿರುತ್ತಿತ್ತು.

ಅಮೆರಿಕದ ಚಿಕಾಗೋ ವಿಶ್ವವಿದ್ಯಾಲಯದಲ್ಲಿ ಜೀವವಿಜ್ಞಾನ ಸಂಶೋಧಕ ಪ್ರಾಧ್ಯಾಪಕರಾಗಿದ್ದ ಐತಾಳರು ೨೦೦೧ರಲ್ಲಿ ನಿವೃತ್ತರಾಗಿ ಲಾಸ್ ಏಂಜಲಿಸ್ ನಗರಕ್ಕೆ ಹೋಗಿ ನೆಲೆಸಿದರು. ಆದರೂ ಅವರಿಗೆ ಚಿಕಾಗೋ ಎಂದರೆ ಬಹಳ ಅಭಿಮಾನವಿತ್ತು. ವೃತ್ತಿಯಿಂದ ನಿವೃತ್ತರಾದ ನಂತರ ಐತಾಳರು ಸಾಹಿತ್ಯ ಕೃಷಿ ಆರಂಭಿಸಿದರು. 'ಆಹಿತಾನಲ' ಕಾವ್ಯನಾಮದಿಂದ ಕತೆಗಳು, ಪ್ರಬಂಧ ಇತ್ಯಾದಿ ಒಂಬತ್ತು ಕೃತಿಗಳನ್ನು ರಚಿಸಿದ್ದಲ್ಲದೆ ಸಂಪಾದಕರಾಗಿಯೂ ದುಡಿದು ಕೆಲವು ಉತ್ತಮ ಹೊತ್ತಿಗೆಗಳನ್ನು ಹೊರತಂದರು. ತಾವು ಹೊರತಂದ ಪುಸ್ತಕಗಳಲ್ಲಿ ಹೊಸ ಲೇಖಕರ ಬರಹಗಳಿಗೆ ಅವಕಾಶವಿತ್ತರು. ಲೇಖಕಿ ಜ್ಯೋತಿ ಮಹಾದೇವರ ಸಹಸಂಪಾದನೆಯಲ್ಲಿ ಅಮೆರಿಕನ್ನಡಿಗ ಬರಹಗಾರರ ಮಾಹಿತಿಕೋಶ ರಚಿಸಿದರು. ಐತಾಳರಿಗೆ ವಯಸ್ಸಿನ ಕಾರಣದಿಂದಾಗಿ ಕಣ್ಣಿನ ದೃಷ್ಟಿ ಮಂದವಾಗಿತ್ತು. ತಮ್ಮೆಲ್ಲಾ ಸಾಹಿತ್ಯ ಚಟುವಟಿಕೆಗಳನ್ನು ಭೂತಕನ್ನಡಿಯ ಸಹಾಯದಿಂದ ನಿರ್ವಹಿಸುತ್ತಿದ್ದರು. ಐತಾಳರ ಮಾತಿನಂತೆ ಜೀವನವೂ ತೆರೆದ ಪುಸ್ತಕವೇ. 'ಅಮೆರಿಕನ್ನಡಿಗನ ದಿನಚರಿ'ಯ ಮೂಲಕ ತಮ್ಮ ಬದುಕಿನ ವಿವರಗಳನ್ನು ತೆರೆದಿಟ್ಟರು. ತಮ್ಮ ಹುಟ್ಟೂರು, ಓದು, ಉದ್ಯೋಗವರಸಿ ಅಮೆರಿಕಕ್ಕೆ ಬಂದಿದ್ದು, ಅಮೆರಿಕನ್ ಪೌರತ್ವ ಪಡೆದಾಗ ಹೃದಯ ಭಾರವಾಗಿದ್ದು, 'ಪುಟ್ಟಮ್ಮ' ಎಂದು ಅಕ್ಕರೆಯಿಂದ ಕರೆಯುತ್ತಿದ್ದ ತಮ್ಮ ಪ್ರೀತಿಯ ಪತ್ನಿ ಲಕ್ಷ್ಮೀಯವರು ಕ್ಯಾನ್ಸರಿನಿಂದ ನರಳಿ, ಅದರ ಕಬಂಧ ಹಸ್ತಗಳಿಂದ ಪಾರಾಗಿದ್ದು. ಮಕ್ಕಳ ಮದುವೆ, ಮೊಮ್ಮಕ್ಕಳು ತಂದ ನಲಿವು, ಬಾಳಿನ ಏಳುಬೀಳುಗಳು ಎಲ್ಲವೂ ಅದರಲ್ಲಿ ಅಕ್ಷರ ರೂಪ ಪಡೆದಿವೆ. ಐವತ್ತು ವರ್ಷಗಳ ಹಿಂದೆ ಅಮೆರಿಕಕ್ಕೆ ಬಂದಿಳಿದ ಭಾರತೀಯರ ಬದುಕು ಹೇಗಿತ್ತೆಂಬುದರ ಬಗ್ಗೆ ಈ ಪುಸ್ತಕ ಬೆಳಕು ಚೆಲ್ಲುತ್ತದೆ. ದಕ್ಷಿಣ ಕ್ಯಾಲಿಫೋರ್ನಿಯಾದ 'ಆರ್ಕೇಡಿಯಾ' ಐತಾಳರ ಹೆಸರಿನೊಂದಿಗೆ ಬೆಸೆದುಕೊಂಡ ಊರು. ಕ್ಯಾಲಿಫೋರ್ನಿಯಾ ರಾಜ್ಯಕ್ಕೆ ಆಗಮಿಸುವ ಕವಿಗಳು, ಕಲಾವಿದರು,

ಹಾಡುಗಾರರಿಗೆ ಐತಾಳರ ಮನೆಯೊಂದು ಸಾಂಸ್ಕೃತಿಕ ಕೇಂದ್ರವೇ ಆಗಿತ್ತು. ಕನ್ನಡ ಸಾಹಿತ್ಯ ರಂಗವು 'ಬಾಸ್ಟನ್' ನಗರದಲ್ಲಿ ನಡೆಸಿದ ಸಮ್ಮೇಳನದ ಅತಿಥಿಯಾಗಿ ಶ್ರೀ ಲಕ್ಷ್ಮೀಶ ತೋಳ್ಪಾಡಿಯವರು ಪತ್ನಿ ವಿಜಯಾರೊಂದಿಗೆ ಆಗಮಿಸಿದ್ದರು. ಸಮ್ಮೇಳನದ ನಂತರ, ತೋಳ್ಪಾಡಿ ದಂಪತಿ ಅಮೆರಿಕದ ವಿವಿಧ ನಗರಗಳಿಗೆ ಭೇಟಿ ಇತ್ತು, ಕೆಲದಿನಗಳ ಮಟ್ಟಿಗೆ ಐತಾಳರ ಅತಿಥಿಗಳಾಗಿದ್ದರು. ತೋಳ್ಪಾಡಿ ಮತ್ತು ವಿಜಯಾ ಅವರಿಗೆ ವಿಶ್ವವಿಖ್ಯಾತ ಗ್ರಾಂಡ್ ಕ್ಯಾನ್ಯನ್ ಮತ್ತು 'ಪಾಪ ನಗರಿ' ಎಂದೇ ಪ್ರಖ್ಯಾತವಾದ ಲಾಸ್ ವೇಗಸ್‌ಗಳನ್ನು ತೋರಿಸಬೇಕೆಂಬ ಬಯಕೆ ಐತಾಳರದು. ಆದರೆ ಅದಾಗಲೇ ವಯಸ್ಸಿನ ಭಾರದಿಂದ ಸೋತಿದ್ದ ತಾವು ಅವರ ಜೊತೆಗಾರರಾಗಿ ಹೋಗಲಾಗದ ಅಸಹಾಯಕತೆ. ತೋಳ್ಪಾಡಿ ದಂಪತಿಗಳನ್ನೇ ಅವರಷ್ಟಕ್ಕೆ ಕಳಿಸಲು ಮನಸ್ಸಿಲ್ಲ. ಐತಾಳರು ನನಗೆ ಕರೆ ಮಾಡಿ ನನಗೆ ಈ ವಿಚಾರವನ್ನು ತಿಳಿಸಿದರು. 'ಚಿಕಾಗೊದಿಂದ ಹೊರಟು ಬಂದು ತೋಳ್ಪಾಡಿ ದಂಪತಿಯ ಜೊತೆಯಾಗಿ ಲಾಸ್ ವೇಗಸ್, ಗ್ರಾಂಡ್ ಕ್ಯಾನ್ಯನ್‌ಗಳಿಗೆ ಹೋಗಿಬರಲು ಸಾಧ್ಯವೇ?' ಎಂದು ಕೇಳಿದರು. ನಮ್ಮ ಮನೆಯಲ್ಲಿ ಆ ಸಮಯಕ್ಕೆ ಸರಿಯಾಗಿ ನಾವೊಂದು ಸ್ನೇಹಕೂಟವನ್ನು ಆಯೋಜಿಸಿಕೊಂಡಿದ್ದೆವು. ಅತಿಥಿಗಳಿಗೆ ಅದಾಗಲೇ ಆಹ್ವಾನ ಹೋಗಿದ್ದಾಗಿತ್ತು. ಆದರೆ ಐತಾಳರ ಮನವಿಯನ್ನು ನಿರಾಕರಿಸಲು ಮನಸ್ಸಿಲ್ಲದೆ ಒಪ್ಪಿದೆ. ನಮ್ಮ ಮನೆಯ ಸ್ನೇಹಕೂಟದೊಂದಿಗೆ ಪ್ರಯಾಣದ ವ್ಯವಸ್ಥೆಯನ್ನೂ ಗಡಿಬಿಡಿಯಲ್ಲಿಯೇ ಮಾಡಿಕೊಂಡೆ. ಶನಿವಾರ ರಾತ್ರಿ ನಮ್ಮ ಮನೆಯ ಕಾರ್ಯಕ್ರಮ ಮುಗಿಯಿತು.

ಮರುದಿನದ ವಿಮಾನದಲ್ಲಿ ಲಾಸ್ ಏಂಜಲೀಸ್ ತಲುಪಿದೆ, ಐತಾಳರೇ ಒಂದು ಪ್ಯಾಕೆಜ್ ಟ್ರಿಪ್ಪನ್ನು ಬುಕ್ ಮಾಡಿ, ಎಲ್ಲಾ ವ್ಯವಸ್ಥೆ ಮಾಡಿದ್ದರು. ಈ ನೆಪದಿಂದಾಗಿ ನನಗೆ ತೋಳ್ಪಾಡಿ ಮತ್ತು ವಿಜಯಕ್ಕರೊಂದಿಗೆ ಆತ್ಮೀಯವಾಗಿ ಒಡನಾಡುವ, ಅವರೊಂದಿಗೆ ಪ್ರವಾಸ ಮಾಡುವ ಸದವಕಾಶ ದೊರೆಯಿತು. ಅದೇ ಸಮಯಕ್ಕೆ ಭಾರತದಿಂದ ಬಂದಿದ್ದ ಜ್ಯೋತಿ ಮತ್ತು ಮಹಾದೇವ್ ಅವರು ತೋಳ್ಪಾಡಿಯವರನ್ನು ಯೋಸಿಮಿಟಿ, ಸಿಕೋಯಾ ರಾಷ್ಟ್ರೀಯ ಉದ್ಯಾನಗಳಿಗೆ ಕರೆದೊಯ್ಯಲು ನಾಗ ಐತಾಳರ ಮನೆಯಲ್ಲಿ ಸಿದ್ಧರಾಗಿ ಕಾಯುತ್ತಿದ್ದರು. ವೇಗಸ್ ನಂತರ ನಮ್ಮ ಪ್ರಯಾಣ ಯೋಸಿಮಿಟಿಯತ್ತ ಹೊರಟಿತು. ಈ ಪಯಣದುದ್ದಕ್ಕೂ ನಮ್ಮ ಮಾತುಕತೆ, ನಗು, ಕೀಟಲೆಗಳಂತೂ ಲೆಕ್ಕವೇ ಇಲ್ಲ. ತೋಳ್ಪಾಡಿಯವರು ಕಣ್ಮನ ತಣಿಸುವ ಪ್ರಕೃತಿ ದೃಶ್ಯಗಳ ಮುಂದೆ ತನ್ಮಯರಾಗಿ ನಿಲ್ಲುತ್ತಿದ್ದರು. ಕೆಲವೊಮ್ಮೆ ಅವರು ಮಾಡುವ ಹಾಸ್ಯಕ್ಕೆ ನಾವು ಮನಸಾರೆ ನಗುತ್ತಿದ್ದೆವು. ಹೆಚ್ಚು ಮಾತಿಲ್ಲದೆ ಮೌನವಾಗಿರುತ್ತಿದ್ದ ತೋಳ್ಪಾಡಿಯವರನ್ನು ನಾನು ಮತ್ತು ಜ್ಯೋತಿ ವಿಜಯಕ್ಕರೊಂದಿಗೆ ಸೇರಿ ಕೀಟಲೆ ಮಾಡುತ್ತಿದ್ದೆವು. ತೋಳ್ಪಾಡಿಯವರು ಮಂದಹಾಸದಿಂದ ನಮ್ಮ ತಮಾಷೆಯನ್ನು ಆನಂದಿಸುತ್ತಿದ್ದರು. ಪ್ರವಾಸ ಮುಗಿಸಿ ಐತಾಳರಮನೆಯಲ್ಲಿ ಮತ್ತೆ ಒಟ್ಟಾದ ನಾವೆಲ್ಲರ ನಮ್ಮ ಅನುಭವಗಳನ್ನು

ಐತಾಳರು ಮತ್ತು ಲಕ್ಷ್ಮಿಯವರೊಂದಿಗೆ ಹಂಚಿಕೊಂಡೆವು. ನಮ್ಮ ಮಾತಗಳಿಗೆ ಅಲ್ಲಲ್ಲಿ ಐತಾಳರು ತಮ್ಮ ಹಾಸ್ಯದ ಒಗ್ಗರಣೆಯನ್ನೂ ಸೇರಿಸಿ ಪ್ರವಾಸದ ಅನುಭವವನ್ನು ಮತ್ತಷ್ಟು ರುಚಿಕಟ್ಟಾಗಿಸುತ್ತಿದ್ದರು. ಐತಾಳರ ಕಾರಣದಿಂದ ಸಾಧ್ಯವಾದ ಈ ಪ್ರವಾಸ ನನ್ನ ಬದುಕಿನಲ್ಲಿ ಒಂದು ಅವಿಸ್ಮರಣೀಯ ಅನುಭವವಾಗಿ ಉಳಿದಿದೆ. ನಾಗ ಐತಾಳರು ನನ್ನ ಬದುಕಿನಲ್ಲಿ ಪರಿಚಯವಾದ ಅದ್ಭುತ ವ್ಯಕ್ತಿ. ಅವರ ಅಪಾರ ಓದು, ಅನುಭವ, ಅಧ್ಯಯನಗಳು ಮಾತಿನಲ್ಲಿ ವ್ಯಕ್ತವಾಗುತ್ತಿದ್ದವು. ಅಮೆರಿಕದಲ್ಲಿ ಕನ್ನಡವನ್ನು ಹೇಗೆ ಉಳಿಸಬೇಕು, ಕನ್ನಡ ಸಾಹಿತ್ಯವನ್ನು ಇಲ್ಲಿ ಪ್ರಚುರಪಡಿಸುವುದು ಹೇಗೆ? ಅದಕ್ಕೆ ತಾವು ಏನು ಮಾಡಬಹುದು ಎಂಬಂಥದು ಅವರ ಮಾತಿನಲ್ಲಿ ಸದಾ ಕಾಣುತ್ತಿತ್ತು. ನಡೆನುಡಿಯಲ್ಲಿ ಅಚ್ಚ ಕನ್ನಡಿಗರಾಗಿ ಬದುಕಿದ್ದ ಐತಾಳರು ಪ್ರಚಾರಪ್ರಿಯರಲ್ಲ. ಅವರ ಬಗ್ಗೆ ಏನಾದರೂ ಪ್ರಶಂಸೆಯ ಮಾತಾಡಿದರೆ ಅದನ್ನು ಅವರು ಮುಂದುವರೆಯಲು ಬಿಡುತ್ತಿರಲಿಲ್ಲ. ಮುಖಸ್ತುತಿಯನ್ನಂತೂ ಕಿಂಚಿತ್ತೂ ಇಷ್ಟಪಡುತ್ತಿರಲಿಲ್ಲ. ಸಾಹಿತ್ಯದ ಪಾಠಶಾಲೆಯಲ್ಲಿ ತಾವೆಂದೂ ನಿರಂತರ ಕಲಿಯುವ ವಿದ್ಯಾರ್ಥಿಯೇ ಎಂಬ ವಿನಯ ಅವರಲ್ಲಿತ್ತು! ನಾಗ ಐತಾಳರು ಈಗ ನಮ್ಮೊಂದಿಗಿಲ್ಲ. ಅಕ್ಟೋಬರ್, ೨೮, ೨೦೨೨ರಂದು ತಮ್ಮ ತೊಂಬತ್ತನೆಯ ವಯಸ್ಸಿನಲ್ಲಿ, ತುಂಬುಜೀವನ ನಡೆಸಿ, ವಯೋಸಹಜ ಅನಾರೋಗ್ಯದಿಂದಾಗಿ ಇಹಲೋಕ ತ್ಯಜಿಸಿದ್ದಾರೆ. ಅವರಿಲ್ಲದ 'ಆರ್ಕೇಡಿಯಾ' ಶೂನ್ಯವೆನ್ನಿಸುತ್ತಿದೆ. ಭೌತಿಕವಾಗಿ ನಮ್ಮೊಂದಿಗಿಲ್ಲವಾದರೂ ಅವರು ತೋರಿದ ದಾರಿ ಕಣ್ಣ ಮುಂದಿದೆ. ಸಾರ್ಥಕ ಬದುಕು ಹೇಗಿರಬೇಕೆಂದು ಬಾಳಿ ತೋರಿಸಿದ್ದಾರೆ. ಐತಾಳರೇ, ಹೋಗಿ ಬನ್ನಿ. ನೀವೆಂದೂ ನಮ್ಮ ನೆನಪಿನ ಭಾಗವಾಗಿ ಉಳಿಯಲಿದ್ದೀರಿ.

ನಿಮಗೆ ಕಂಬನಿಪೂರ್ವಕ ನಮನಗಳು.

*

ನಿನ್ನೊಲುಮೆಯಿಂದಲೇ...

ಲಕ್ಷ್ಮೀ ನಾಗಐತಾಳರೊಡನೆ ಸಂದರ್ಶನ

– ನಳಿನಿ ಮೈಯ

'ನಿನ್ನೊಲುಮೆಯಿಂದಲೇ ಬಾಳು ಬೆಳಕಾಗಿರಲು ಚಂದ್ರಮುಖಿ ನೀನೆನಲು ತಪ್ಪೇನೇ
ನಿನ್ನ ಸೌಜನ್ಯವೇ ದಾರಿ ನೆರಳಾಗಿರಲು ನಿತ್ಯಸುಖಿ ನೀನೆನಲು ಒಪ್ಪೇನೇ'

ನಾಗ ಐತಾಳ ಮತ್ತು ಲಕ್ಷ್ಮಿಯವರ ದಾಂಪತ್ಯ ನೋಡುವಾಗೆಲ್ಲ ಈ ಸಾಲುಗಳು ನೆನಪಾಗುತ್ತವೆ. ಕೆ.ಎಸ್.ನ. ಅವರು ಈ ಸಾಲುಗಳನ್ನು ಈ ಜೋಡಿಗಾಗಿಯೇ ಬರೆದರೇನೋ ಅನ್ನಿಸುತ್ತದೆ. ಹಿನ್ನೆಲೆಯಲ್ಲಿದ್ದುಕೊಂಡೇ ನಾಗ ಐತಾಳರ ಬಾಳಿನ ಸಾರಥ್ಯ ವಹಿಸಿ ಮುನ್ನಡೆಸಿದವರು ಮೆಲು ಮಾತಿನ ಮೃದು ಸ್ವಭಾವದ ಪತ್ನಿ ಲಕ್ಷ್ಮಿ ಅವರು. ಬನ್ನಿ ಲಕ್ಷ್ಮಿ ಅವರ ಜೊತೆ ಮಾತುಕಥೆ ನಡೆಸಿ ಅವರ ರಸಪೂರ್ಣ ಬಾಳಿನ ಪರಿಚಯ ಪಡೆಯೋಣ ನಾವು.

1. ಅತಿಥಿ ಸತ್ಕಾರಕ್ಕೆ ಹೆಸರಾದ ದಂಪತಿ ನೀವು, ಐತಾಳರು ಉಪಚಾರ ಮಾಡುತ್ತಾ ಬಡಿಸುತ್ತಿದ್ದ ರಸಗವಳದ ಹಿಂದೆ ನಿಮ್ಮ ಕೈಗುಣವಿತ್ತು, ನಿಮ್ಮ ಕೈವಾಡವಿತ್ತು. ನಿಮ್ಮ ಮನೆಗೆ ಬಂದಿದ್ದ ಕೆಲವು ಅತಿಥಿಗಳ ಬಗ್ಗೆ, ಅವರ ಜೊತೆ ನಿಮ್ಮ ಒಡನಾಟದ ಬಗ್ಗೆ ಹೇಳಿ.

ಎಷ್ಟೋ ಜನ ಹೆಸರಾಂತ ಸಾಹಿತಿಗಳು, ಕವಿಗಳು ನಮ್ಮ ಮನೆಗೆ ಬಂದು ನಮ್ಮ ಜೊತೆ ಕುಳಿತು ಆತ್ಮೀಯವಾಗಿ ಮಾತನಾಡುತ್ತಾ ಮನೆಯವರ ಥರ ನಮ್ಮ ಜೊತೆ ಬೆರೆತು ಒಡನಾಡಿದ್ದರು. ಅದು ನನಗೆ ತುಂಬ ಸಂತೋಷ, ತೃಪ್ತಿ ಕೊಡುವ ವಿಚಾರ.

ಉದಾಹರಣೆಗೆ ಶಿವರುದ್ರಪ್ಪನವರು ತಮ್ಮ 'ಎದೆ ತುಂಬಿ ಹಾಡಿದೆನು' ಕವನವನ್ನು ತಮ್ಮ ಗುರುಗಳಿಗೆ ಮೊದಲು ತೋರಿಸಿದ್ದನ್ನು, ಅವರ ತುಂಬು ಹೃದಯದ ಪ್ರತಿಕ್ರಿಯೆಯನ್ನು ನಮ್ಮ ಜೊತೆ ಮಾತನಾಡುತ್ತಾ ಆಪ್ತವಾಗಿ ಹಂಚಿಕೊಂಡಿದ್ದರು. ಅನಂತಮೂರ್ತಿಯವರಂತೂ ಮಲೆನಾಡಿನವರೇ ಆದ್ದರಿಂದ ನಮಗೆ ಮುಂಚಿನಿಂದಲೂ ಪರಿಚಯವಿತ್ತು. ಅವರ 'ಸಂಸ್ಕಾರ' ಕಾದಂಬರಿಯ ಪ್ರಾಣೇಶಾಚಾರ್ಯರ ಕಥೆ ಮುಂದೆ ಏನಾಗಿರಬಹುದು?– ಅಂದರೆ ಕಾದಂಬರಿಯ ಮುಕ್ತಾಯದ ನಂತರ ಹೇಗೆ ಸಾಗಿರಬಹುದು ಅಂತ ಊಹಿಸಿ ಐತಾಳರು ಏಕಪಾತ್ರಾಭಿನಯ ಮಾಡಿದ್ದರು– ಕನ್ನಡ ಕೂಟದ ಸಮಾರಂಭದಲ್ಲಿ. ಆ ದಿನ ಅನಂತಮೂರ್ತಿಯವರೂ ಅಲ್ಲಿದ್ದರು. ಅವರು ಅದನ್ನು ನೋಡಿ ನಗುತ್ತ 'ಏನು ಐತಾಳರೆ? ನನ್ನ ಜೊತೆಗೆ ಪೈಪೋಟಿನಾ?' ಎಂದು ಬೆನ್ನು ತಟ್ಟಿದ್ದರು. ಮತ್ತೂರು ಕೃಷ್ಣಮೂರ್ತಿಯವರು ಮಹಾಭಾರತದ ಅನೇಕ ಉಪಕಥೆಗಳನ್ನು ರಸವತ್ತಾಗಿ ವರ್ಣಿಸಿ ಹೇಳಿದ್ದರು. ನಮ್ಮ ಮನೆಯಲ್ಲಿ ಇವರು ಅವನ್ನು ನೆನಪಿನಲ್ಲಿ ಇಟ್ಟುಕೊಂಡು ಆಮೇಲೆ ಸ್ನೇಹಿತರಿಗೆ ಮತ್ತೆ ಆ ಕಥೆಗಳನ್ನು ಹೇಳಿದ್ದರು. ಶಿವರಾಮ ಕಾರಂತರು ಸಮಯ ಪರಿಪಾಲನೆಯ ಬಗ್ಗೆ ತುಂಬ ಕಟ್ಟುನಿಟ್ಟು ಅವರಿಗೆ ಎಲ್ಲವೂ ಸಮಯಕ್ಕೆ ಸರಿಯಾಗಿ ಆಗಬೇಕು. ನಮ್ಮ ಮನೆಯಲ್ಲಿ ಆ ಬಗ್ಗೆ ಅವರಿಗೆ ಏನೂ ತೊಂದರೆಯಾಗದಂತೆ ಜಾಗ್ರತೆವಹಿಸಿದ್ದೆವು.

2. ಐತಾಳರು ಲೇಖನ ಬರೆಯುತ್ತಿರುವಾಗ ಎಷ್ಟೋ ಸಾರಿ ನಿಮ್ಮ ಸಲಹೆ, ಸೂಚನೆ ಪಡೆಯುತ್ತಿದ್ದರು. ಇಲ್ಲಿಯೂ ಸಹಭಾಗಿತ್ವ ನಿಮ್ಮದು. ಆ ಬಗ್ಗೆ ಹೇಳಿ.

ಎಷ್ಟೋ ಸಾರಿ ಲೇಖನ ಬರೆಯುತ್ತಿರುವಾಗ ಯಾವುದಾದರೂ ಪದ ಹೊಳೆಯದಿದ್ದರೆ ನನ್ನನ್ನು ಕರೆದು ಆ ಪದವನ್ನು ಇಂಗ್ಲಿಷಿನಲ್ಲಿ ಹೇಳಿ 'ಕನ್ನಡದಲ್ಲಿ ಏನು?' ಎಂದು ಕೇಳುತ್ತಿದ್ದರು. ಯಾವುದಾದರೂ ವಾಕ್ಯ ಅವರಿಗೆ ತೃಪ್ತಿಕರವಾಗಿಲ್ಲ ಅನ್ನಿಸಿದರೆ 'ಹೇಗೆ ಬರೆದರೆ ಚೆನ್ನಾಗಿರುತ್ತೆ' ಅಂತ ಕೇಳುತ್ತಿದ್ದರು. ನಾನು ಬೇರೆ ಥರ ಬರೆಯುವಂತೆ ಏನಾದರೂ ಸಲಹೆ, ಸೂಚನೆ ಕೊಟ್ಟರೆ ಅದನ್ನು ಒಪ್ಪಿ ಬರೆದಿದ್ದನ್ನು ಬದಲಾಯಿಸುತ್ತಿದ್ದರು. ನಾನು ಬರವಣಿಗೆ ಮಾಡಿಲ್ಲದಿರಬಹುದು. ಆದರೆ ಬೇರೆಯವರ ಬರವಣಿಗೆಯಲ್ಲಿ ಗಟ್ಟಿ ಯಾವುದು? ಜೊಳ್ಳು ಯಾವುದು ಅಂತ ಹೇಳಬಲ್ಲೆ. ಅವರು ನನ್ನ ಸಹಕಾರವನ್ನು ಪ್ರಶಂಸಿಸಿ ಅನೇಕ ಪುಸ್ತಕಗಳಲ್ಲಿ ಕೃತಜ್ಞತೆಯನ್ನು ಹೇಳಿದ್ದಾರೆ.

3. ನಿಮಗೆ ಕ್ಯಾನ್ಸರ್ ಅಂತ ಗೊತ್ತಾದಾಗ ಅವರ ಪ್ರತಿಕ್ರಿಯೆ ಹೇಗಿತ್ತು?

ನನಗೆ ಬಯಾಪ್ಸಿ ಮಾಡುವಾಗಲೇ ಅದೇನಾದರೂ ಕ್ಯಾನ್ಸರ್ ಆಗಿದ್ದರೆ ಶಸ್ತ್ರ ಚಿಕಿತ್ಸೆ ಮಾಡುವುದಾಗಿ ಹೇಳಿ ನನ್ನಿಂದ ಒಪ್ಪಿಗೆಯ ಸಹಿಯನ್ನು ಕಾಗದ ಪತ್ರಗಳಿಗೆ ಹಾಕಿಸಿಕೊಂಡಿದ್ದರು. ಹಾಗಾಗಿ ನಾನಿನ್ನೂ ಅರಿವಳಿಕೆಯ ಮಬ್ಬಿನಲ್ಲಿ ಇರುವಾಗಲೇ ಇವರಿಗೆ ವಿಷಯ ಗೊತ್ತಾಗಿ ಜಂಘಾಬಲವೇ ಉಡುಗಿದಂತಾಗಿತ್ತು. ನಮ್ಮ ಸ್ನೇಹಿತರಾದ ಕೃಷ್ಣಯ್ಯನವರು ಸುದ್ದಿ ತಿಳಿದಾಗಿನಿಂದಲೂ ಐತಾಳರನ್ನು ಈ ಪರಿಸ್ಥಿತಿಯಲ್ಲಿ ಒಬ್ಬರನ್ನೇ

ಬಿಡಬಾರದು ಅಂತ ಜೊತೆಗೇ ಇದ್ದರು. ಮೊದಲ ಎರಡು ದಿನ ಇವರಿಗೆ ಊಟ ಸೇರದು, ನಿದ್ದೆ ಬಾರದು ಅನ್ನೋ ಹಾಗೆ ಆಗಿತ್ತಂತೆ. ಮೂರನೆಯ ದಿನ ಇವರು ಆಸ್ಪತ್ರೆಯಲ್ಲಿ ನನ್ನ ಜೊತೆ ಇದ್ದಾಗ ಒಬ್ಬ ಅಮೆರಿಕದ ಕಪ್ಪು ಹೆಂಗಸು ಬಂದರು. ಆಕೆ ಆಸ್ಪತ್ರೆ ಸಿಬ್ಬಂದಿಯಲ್ಲ ಅಂತ ನೋಡಿದರೆ ಗೊತ್ತಾಗುತ್ತಿತ್ತು. ಇವರಿಗೆ ಒಳಗೊಳಗೆ ಸಿಡಿಮಿಡಿ– ನಮ್ಮ ಪ್ರೈವೇಟ್ ಟೈಮಿನಲ್ಲೆ ಇವರು ಬರಬೇಕಾ? ಎಂದು. ಆಕೆ ಬಂದವರೇ ಸ್ನೇಹಪೂರ್ವಕ ನಗೆ ನಗುತ್ತಾ ತಮ್ಮ ಪರಿಚಯ ಹೇಳಿಕೊಂಡು, 'ನಾನೂ ಕೆಲವು ವರ್ಷಗಳ ಹಿಂದೆ ನಿಮ್ಮ ಹಾಗೇ ಕ್ಯಾನ್ಸರ್ ಪೇಶೆಂಟ್ ಆಗಿ ಇಲ್ಲಿದ್ದೆ. ಈಗ ಪೂರ್ತಿ ಗುಣಮುಖಳಾಗಿದ್ದೀನಿ. ನಾರ್ಮಲ್ ಲೈಫ್ ನಡೆಸುತ್ತಾ ಇದ್ದೀನಿ. ಅದಕ್ಕೇ ಹತಾಶೆಯ ಪಾತಾಳದಲ್ಲಿರುವ ನಿಮ್ಮಂಥವರಿಗೆ ಭರವಸೆ ನೀಡುವ ಈ ಕೆಲಸವನ್ನು ವಾಲಂಟೀರ್ ಆಗಿ ಮಾಡ್ತಾ ಇದ್ದೀನಿ' ಎಂದರು. ಆರೋಗ್ಯವಾಗಿ, ಕಳೆಕಳೆಯಾಗಿ ಇರುವ ಆಕೆಯನ್ನು ನೋಡುತ್ತಿರುವಾಗ ನಮಗೂ ಮುಂದೆ ಒಳ್ಳೆಯ ದಿನಗಳು ಬರಬಹುದು ಎಂಬ ಆಶಾಕಿರಣವೊಂದು ಕತ್ತಲನ್ನು ಹೊಡೆದೋಡಿಸಿತ್ತು. ಮನಸ್ಸು ಹಗುರಾಗಿತ್ತು. ಆ ದಿನ ಇವರು ಕೃಷ್ಣಯ್ಯನವರ ಜೊತೆ ಮನೆಗೆ ಹೋದಾಗ ಚೆನ್ನಾಗಿ ಊಟ ಮಾಡಿದರಂತೆ, ನಿದ್ದೆಯೂ ಚೆನ್ನಾಗಿ ಬಂತಂತೆ. ಹಾಗಂತ ಕೃಷ್ಣಯ್ಯನವರೇ ಮರುದಿನ ನನ್ನ ಹತ್ತಿರ ಹೇಳಿದರು.

4. ತಾಯ್ನಾಡು, ತಾಯ್ನುಡಿಯ ಬಗ್ಗೆ ಅವರ ಅಭಿಮಾನದ ವಿಷಯ ಹೇಳಿ.

ಅವರ ಕಣಕಣದಲ್ಲೂ ಕನ್ನಡ ಭಾಷೆ, ಸಂಸ್ಕೃತಿಯ ಅಭಿಮಾನ ಮಿಡಿಯುತ್ತಿತ್ತು. ಇಳಿ ವಯಸ್ಸಿನಲ್ಲಿ ಲೇಖನಗಳನ್ನು ಬರೆಯಲು ಶುರು ಮಾಡಿದ ಅವರು ಕಣ್ಣಿನ ದೃಷ್ಟಿ ಮಂಜಾದ ಮೇಲೂ ಬಿಡದೆ ತಮ್ಮ ಬರವಣಿಗೆಯನ್ನು ಮುಂದುವರಿಸಿದರು. ಗಂಟೆಗಟ್ಟಲೆ ಕಂಪ್ಯೂಟರ್ ಎದುರು ಕುಳಿತು ಟೈಪಿಸುತ್ತಿದ್ದರು. ಎಷ್ಟೊಂದು ಪುಸ್ತಕಗಳನ್ನು ಪ್ರಕಟಿಸಿದರು. ಅಮೆರಿಕದಲ್ಲಿ ಕನ್ನಡಪರವಾದ ಸಂಸ್ಥೆ, ಕಾರ್ಯಕ್ರಮಗಳಿಗೆ ತುಂಬು ಹೃದಯದ ಬೆಂಬಲ ನೀಡಿದರು. ಅಮೆರಿಕನ್ನಡ ಪತ್ರಿಕೆ, ಕನ್ನಡ ಕೂಟ, ಕನ್ನಡ ಸಾಹಿತ್ಯ ರಂಗ... ಹೀಗೇ ಎಲ್ಲೂ ಹೆಸರಿಗಾಗಿ ಕೆಲಸ ಮಾಡಲಿಲ್ಲ, ಪ್ರೀತಿಗಾಗಿ ದುಡಿದರು. ಇಂಡಿಯಾದಲ್ಲೂ 'ಕೇಳು ಸಖಿ' ಶಿಬಿರ, ತರಂಗ ಕಥಾ ಸ್ಪರ್ಧೆ ಮುಂತಾದವಕ್ಕೆ ಎಲ್ಲ ಬಗೆಯ ಸಹಕಾರ ನೀಡಿದ್ದರು.

5. ಐತಾಳರು ಆಗಾಗ ಚಿಕ್ಕ ಪುಟ್ಟ ಕಾರಣಗಳಿಗಾಗಿ ನಿಮ್ಮ ಮೇಲೆ ರೇಗಿದ್ದರೂ ಅದನ್ನು ಮುಗುಳ್ನಗುತ್ತಾ ಸಹಿಸಿದವರು ನೀವು. ಆ ಬಗ್ಗೆ ನಿಮ್ಮ ನೆನಪುಗಳನ್ನು ಹಂಚಿಕೊಳ್ಳಿ.

ಒಮ್ಮೊಮ್ಮೆ ಅವರಿಗೆ ಯಾರ ಮೇಲೋ ಸಿಟ್ಟು ಬಂದು ಮೂಡ್ ಕೆಟ್ಟಿದ್ದರೆ ಆ ಸಿಟ್ಟನ್ನು ನನ್ನ ಮೇಲೆ ತೆಗೆಯುತ್ತಿದ್ದರು. ಅಂದರೆ ಸುಮ್ಮನೆ ಏನೋ ಚಿಕ್ಕ ವಿಷಯಕ್ಕೆ ಗೊಣಗುವುದು...ಹೀಗೇ. ಅವರಿಗೆ ಮೂಡ್ ಸರಿ ಇಲ್ಲ ಅಂತ ಗೊತ್ತಿರುವುದರಿಂದ ನಾನೂ ಅದನ್ನು ಸೀರಿಯಸ್ಸಾಗಿ ತೆಗೆದುಕೊಳ್ಳುತ್ತಿರಲಿಲ್ಲ. ಕೆಲವೊಮ್ಮೆ ಅವರಿಗೆ 'ಹೀಗಲ್ಲ

ಹಾಗೆ' ಅಂತ ಬುದ್ಧಿ ಹೇಳಿದರೆ ಸಿಟ್ಟು ಮಾಡಿಕೊಳ್ಳುತ್ತಿದ್ದರು. 'ನೀನು ಊರಿಗೆಲ್ಲ ಒಳ್ಳೆಯವಳು. ನನ್ನ ಹತ್ತಿರ ಮಾತ್ರ ಜಗಳ', ಅಂತ ಒಂಥರಾ ಹುಸಿ ಮುನಿಸು. ಮತ್ತೆ ಕೆಲವು ಸಾರಿ ಹೆಂಡತಿ ಹೇಳಿದ್ದೇ ಸರಿ ಅಂತ ಗೊತ್ತಾದರೂ ಅದನ್ನು ಒಪ್ಪಿಕೊಂಡು ರಾಜಿಯಾಗಲು ಬಿಗುಮಾನ ಅಡ್ಡ ಬರುತ್ತಿತ್ತು. ಇದೆಲ್ಲ ನನಗೆ ಅರ್ಥವಾಗುತ್ತಿತ್ತು. ಆದ್ದರಿಂದ ಒಂದು ಮುಗುಳ್ನಗೆಯಲ್ಲಿ ಎಲ್ಲವನ್ನೂ ತೇಲಿಸಿಬಿಡುತ್ತಿದ್ದೆ. ಎನ್.ಎಸ್.ಎಲ್. ಅವರು ಒಂದು ಕವನದಲ್ಲಿ ಹೇಳಿದಂತೆ 'ಅನ್ನಿಸಿಕೊಂಡು ಮನ್ನಿಸಿ ನಗುವುದು' ಹೆಣ್ಣಿನ ಶಕ್ತಿ.

6. ಅವರ ಸಂಗೀತದ ಒಲವಿನ ಬಗ್ಗೆ ಹೇಳಿ.

ಅವರಿಗೆ ಭಾವಗೀತೆ ಮತ್ತು ಹಿಂದುಸ್ಥಾನಿ ಸಂಗೀತದ ಮೇಲೆ ವಿಶೇಷ ಒಲವು. ಮನೆಯಲ್ಲಿ ಯಾವಾಗಲೂ ಏನಾದರೂ ಸಂಗೀತ ಹಾಕಿಕೊಂಡು ತಾವೂ ಜೊತೆಯಲ್ಲಿ ಹಾಡುತ್ತಾ ಸಂತೋಷಪಡುತ್ತಿದ್ದರು. 'ಘನ ಶ್ಯಾಮ ಸುಂದರ' ಅವರಿಗೆ ಅತ್ಯಂತ ಪ್ರಿಯವಾದ ಹಾಡು. ಎಷ್ಟೋ ಪಾರ್ಟಿಗಳಲ್ಲಿ ಅದನ್ನು ಹಾಡಿದ್ದಾರೆ. ಎಪ್ಪತ್ತರ ದಶಕದಲ್ಲಿ ಕನ್ನಡ ಕೂಟಗಳು ಇಷ್ಟೆಲ್ಲ ಬೆಳೆದಿರಲಿಲ್ಲ. ಭಾರತದಿಂದ ಕಲಾವಿದರನ್ನು ಕರೆಸಿಕೊಳ್ಳುವ ವಾಡಿಕೆ ಇರಲಿಲ್ಲ. ಆಗ ನಮ್ಮ ಸಾಂಸ್ಕೃತಿಕ ಹಸಿವನ್ನು ಹಿಂಗಿಸಲು ಸ್ಥಳೀಯ ಕಲಾವಿದರೇ ಮನೆಯಲ್ಲಿ ಹಾಡು, ನಾಟಕ ಮುಂತಾದವನ್ನು ಪ್ರ್ಯಾಕ್ಟಿಸ್ ಮಾಡಿ ಸಮಾರಂಭಗಳಲ್ಲಿ ಪ್ರಸ್ತುತಪಡಿಸುತ್ತಿದ್ದರು. ನಮ್ಮ ಮನೆಯಲ್ಲಿ ಇಂಥ ಪ್ರ್ಯಾಕ್ಟಿಸುಗಳು ಖಾಯಂ ಆಗಿತ್ತು. ಎಷ್ಟೋ ಸಾರಿ ಚೆನ್ನಾಗಿ ಹಾಡುವ ಗೆಳೆಯ ಗೆಳತಿಯರು ನಮ್ಮ ಮನೆಯ ಪಾರ್ಟಿಗಳಲ್ಲಿ ಊಟವಾದ ಮೇಲೆ ಹಾಡಿ ಮನ ರಂಜಿಸಿದ್ದಿದೆ. ನಮ್ಮ ಸ್ನೇಹಿತರಾದ ಪ್ರಸನ್ನ ರಾವ್ ಒಳ್ಳೆಯ ಹಾಡುಗಾರರು, ಅವರ ಹೆಂಡತಿ ಮಂಜುಳ ಪಿಟೀಲುವಾದಕಿ. ಅವರಂತೂ ನಮ್ಮ ಮನೆಗೆ ಬರುವಾಗ ಪಿಟೀಲು, ತಬಲ ಎಲ್ಲವನ್ನೂ ಹೊಂದಿಸಿಕೊಂಡೇ ಹಾಡಲು ಸಜ್ಜಾಗಿ ಬರುತ್ತಿದ್ದರು.

7. ಅವರಿಗೆ ಪ್ರಿಯವಾದ ತಿಂಡಿ, ತೀರ್ಥಗಳು ಯಾವುವು?

ಅವರಿಗೆ ಸಿಹಿ ತಿಂಡಿ ಅಂದರೆ ತುಂಬ ಇಷ್ಟ. ಡಯಾಬಿಟಿಸ್ ಶುರುವಾಗುವುದಕ್ಕೆ ಮುಂಚೆ ಒಂದು ಬೌಲ್‌ನಲ್ಲಿ ಇಲ್ಲಿ ಸಿಕ್ಕುವ ಸಿಹಿ ಸೀರಿಯಲ್ ಹಾಕಿಕೊಂಡು ಅದರ ಮೇಲೆ ಇನ್ನಷ್ಟು ಸಕ್ಕರೆ ಸುರಿದು ತಿನ್ನುತ್ತಿದ್ದರು. ಕುರುಕಲು ತಿಂಡಿ ಅಂದರೂ ಇಷ್ಟ. ಮನೆಯಲ್ಲಿ ಕೋಡುಬಳೆ, ಚಕ್ಕುಲಿ, ತೇಂಗೊಳಲು ಮಾಡಿದರೆ ಹೋಗ್ತಾ, ಬರ್ತಾ ಅದನ್ನು ಬಾಯಾಡುತ್ತಿದ್ದರು. ಖಾಲಿಯಾಗುವವರೆಗೂ ಬಿಡುತ್ತಿರಲಿಲ್ಲ. ಕೆಲವೊಮ್ಮೆ ನಾನು ಸ್ವಲ್ಪ ತಿಂಡಿಯನ್ನು ತೆಗೆದು ಬೇರೆ ಕಡೆ ಮುಚ್ಚಿ ಇಡುತ್ತಿದ್ದೆ– ಮನೆಗೆ ಯಾರಾದರೂ ಬಂದರೆ ಕೊಡುವುದಕ್ಕೆ ಬೇಕು ಅಂತ. ಅವರು ಖಾಲಿಯಾಗಿದೆ ಅಂದುಕೊಂಡ ತಿಂಡಿ ಅತಿಥಿಗಳ ಎದುರು ಪ್ರತ್ಯಕ್ಷವಾದಾಗ ಅವರಿಗೆ ಅಚ್ಚರಿಯೋ ಅಚ್ಚರಿ! ಡಯಾಬಿಟಿಸ್

ಅಂತ ಗೊತ್ತಾದ ಮೇಲೆ ಮನೆಯಲ್ಲಿ ಶುಗರ್‌ಫ್ರೀ ಪಾಯಸ, ತಿಂಡಿ ಮಾಡೋದು ಶುರುವಾಯಿತು.

8. ದಾಂಪತ್ಯದ ಈ ಸುದೀರ್ಘ ಪಯಣದಲ್ಲಿ ನಿಮ್ಮ ಹೃದಯದಲ್ಲಿ ಶಾಶ್ವತವಾಗಿ ಮನೆ ಮಾಡಿದ ನೆನಪುಗಳು ಯಾವುವು?

ನನ್ನ ಹುಟ್ಟುಹಬ್ಬದ ದಿನ ನಾನು ಕೆಲಸಕ್ಕೆ ಹೋಗಿದ್ದಾಗ ವಾಪಸಾಗುವುದಕ್ಕೆ ಮುಂಚೆ ಅಡುಗೆ ಮನೆಗೆ ಹೋಗಿ ಏನೋ ಸ್ಪೆಶಲ್ ತಿಂಡಿ ಮಾಡಿ ಇಡುತ್ತಿದ್ದರು. ಆ ಸಂಭ್ರಮದಲ್ಲಿ ಇಡೀ ಅಡುಗೆ ಮನೆ ಬುಡಮೇಲು ಆಗುತ್ತಿತ್ತಾದರೂ ಅವರ ಮುಖದ ಮೇಲೆ ಸಂತೃಪ್ತಿಯ ನಗು ಇರುತ್ತಿತ್ತು. ಒಂದು ಸಲವಂತೂ ನಾನು ಬರುವುದರೊಳಗೆ ಇಡ್ಲಿ ಮಾಡ್ತೀನಿ ಅಂತ ಒಲೆ ಮೇಲೆ ಇಡ್ಲಿ ಪಾತ್ರೆ ಇಟ್ಟು ಮರೆತೇಬಿಟ್ಟಿದ್ದರು. ನಾನು ಬರುವ ಹೊತ್ತಿಗೆ ಇಡ್ಲಿ ಕರಟಿದ್ದಲ್ಲದೆ ಪಾತ್ರೆಯೇ ಕರಗಿತ್ತು! ಇಂಡಿಯಾಗೆ ಹೋಗುವಾಗ ನಾವು ಸಾಮಾನ್ಯವಾಗಿ ಮುತ್ತು, ಹವಳ ಮುಂತಾದವನ್ನು ನೆಂಟರಿಷ್ಟರಿಗೆ ಕೊಡೋಕೆ ತಗೊಂಡು ಹೋಗ್ತಾ ಇದ್ದೆವು. ಇವರು ನನಗೆ ಗೊತ್ತಿಲ್ಲದ ಹಾಗೆ ಮುತ್ತುಗಳನ್ನು ಕೊಂಡು ಹೋಗಿ ನನಗೆ ನೆಕ್ಲೇಸ್ ಮಾಡಿಸಿದ್ದರು. ಮತ್ತೊಮ್ಮೆ ಹುಟ್ಟುಹಬ್ಬಕ್ಕೆ ವಜ್ರದುಂಗುರ ತೆಗೆಸಿಕೊಟ್ಟಿದ್ದರು. ಇವೆಲ್ಲ ಬಾಹ್ಯ ವಸ್ತುಗಳು. ತಮ್ಮ ಜೀವನದಲ್ಲಿ ನನಗೊಂದು ಪ್ರಮುಖ ಸ್ಥಾನವಿತ್ತು ಪ್ರೀತಿಯಿಂದ ನಡೆಸಿಕೊಂಡರಲ್ಲ, ಅರವತ್ತು ವರ್ಷಗಳ ಸಾರ್ಥಕ ದಾಂಪತ್ಯ ನಮ್ಮದು. ಅದಕ್ಕಿಂತ ಹೆಚ್ಚಿನ ಉಡುಗೊರೆ ಏನುಂಟು!

ಇವಿಷ್ಟು ಲಕ್ಷ್ಮಿ ಐತಾಳ ಅವರು ನನ್ನ ಜೊತೆ ಹಂಚಿಕೊಂಡ ವಿವರಗಳು. ಅವರ ವಿವಾಹ ವಾರ್ಷಿಕೋತ್ಸವಕ್ಕೆ ನಾನು ಬರೆದ ಕವನದ ಸಾಲುಗಳಿವು–

ಅನುರೂಪದ ದಾಂಪತ್ಯ
ಅಲ್ಲಿ ಪ್ರೀತಿಯ ಅಧಿಪತ್ಯ
ಸತಿಗಾಗಿ ಪತಿಯು, ಪತಿಗಾಗಿ ಸತಿಯು
ಬದುಕೆಲ್ಲ ಮಂಗಳ ವಾದ್ಯ.

*

ಪ್ರೀತಿಯ ಚಿಕ್ಕಪ್ಪ– ನಾಗ ಐತಾಳರು

– ಶಾರದಾ ರಘುರಾಮ್

ನಮ್ಮೆಲ್ಲರ ನೆಚ್ಚಿನ ನಾಗಪ್ಪ ಐತಾಳರನ್ನು ನಾನು 'ಚಿಕ್ಕಪ್ಪ' ಎಂದು ಕರೆಯುತ್ತಿದ್ದೆ. ಅವರ ಪತ್ನಿ ಪುಟ್ಟಮ್ಮ (ಲಕ್ಷ್ಮಿ) ನನ್ನ ತಾಯಿಯ ಕಸಿನ್. ಸ್ವಂತ ತಂಗಿಯ ಸಮಾನ. ಇಬ್ಬರೂ ಬಾಲ್ಯದಲ್ಲೇ ತಾಯಿಯನ್ನು ಕಳೆದುಕೊಂಡು ತಮ್ಮ ಅಜ್ಜನ ಮನೆ ಮೇಳಿಗೆಯಲ್ಲಿ ಬೆಳೆದವರು. ಚಿಕ್ಕಪ್ಪನ ಮಾತಿನಲ್ಲೇ ಹೇಳಬೇಕಾದರೆ ನಮ್ಮ ಮನೆಯವರಿಗೆಲ್ಲ ಅವರು 'ಪುಟ್ಟಮ್ಮನ ಗಂಡ' ಆಗಿದ್ದರು. ನಾನು ನಾಲ್ಕೈದು ವರ್ಷದ ಹುಡುಗಿಯಾದಾಗಿಂದಲೂ ಚಿಕ್ಕಪ್ಪನ ನೆನಪಿದೆ. ಅವರಿಗೆ ಮಕ್ಕಳೆಂದರೆ ತುಂಬಾ ಪ್ರೀತಿ, ಮಕ್ಕಳಿಗೂ ಅವರ ತಮಾಷೆ, ಆಟ ಇಷ್ಟವಾಗುತ್ತಿತ್ತು. ಸಂಬಂಧಿಕರ ಮದುವೆ, ಮುಂಜಿ ಮುಂತಾದ ಸಮಾರಂಭಗಳಲ್ಲಿ ಒಟ್ಟಾದಾಗ ಅವರು ನನ್ನನ್ನು ಚುಡಾಯಿಸಿದ್ದು, ನನ್ನನ್ನು ಆಟವಾಡಿಸಿದ್ದು ಎಲ್ಲವೂ ಅತ್ಯಂತ ಸವಿ ನೆನಪುಗಳು. ಅವರು ನನ್ನನ್ನು 'ಬಜಾರಿ ಶಾರಿ' ಎಂದು ಕರೆದು ಚುಡಾಯಿಸುತ್ತಿದ್ದರು.

ನನ್ನ ತಂದೆ–ತಾಯಿಗೂ ಪುಟ್ಟಮ್ಮ–ಚಿಕ್ಕಪ್ಪ ಅಂದರೆ ಇನ್ನಿಲ್ಲದ ಪ್ರೀತಿ, ಆತ್ಮೀಯತೆ! ಪುಟ್ಟಮ್ಮನ ಮದುವೆಯಲ್ಲಿ ನನ್ನ ಅಮ್ಮನೇ ಕನ್ನಡಿ–ಕಳಶ ಹಿಡಿದಿದ್ದಂತೆ, ಅಮ್ಮ ಮಾಡುವ ಕಣ್‌ರೊಟ್ಟಿ (ಅಕ್ಕಿ ರೊಟ್ಟಿ) ಚಿಕ್ಕಪ್ಪನಿಗೆ ತುಂಬಾ ಇಷ್ಟ! ಅದನ್ನು ತಿಂದು, ಅರಗಿ ಎಷ್ಟೋ ದಿನಗಳಾದ ಮೇಲೂ 'ನಿನ್ನ ಅಮ್ಮ ರೊಟ್ಟಿ ಎಷ್ಟು ತೆಳುವಾಗಿ, ಚೆನ್ನಾಗಿ

ಮಾಡ್ತಾಳೆ!' ಎಂದು ನೆನಪಿಸಿಕೊಂಡು ಹೇಳುತ್ತಿದ್ದರು. ನನ್ನ ತಂದೆ, ಚಿಕ್ಕಪ್ಪನ ಜೊತೆ ಕೋಟ ಭಾಷೆಯಲ್ಲಿ ಮಾತಾಡಿ ಖುಷಿಪಡುತ್ತಿದ್ದರು. ಹುಟ್ಟೂರಿನ ಆ ಬಾಂಧವ್ಯ ಎಲ್ಲಿ ಹೋದರೂ ಮರೆಯಾದೀತೆ?

ಮುಂದೆ ಚಿಕ್ಕಪ್ಪ ಬೆಂಗಳೂರಿನಿಂದ ಅಮೆರಿಕಾಗೆ ಹೋದರು. ಆಗಿನ ಕಾಲದಲ್ಲಿ ಅಮೆರಿಕಕ್ಕೆ ಹೋದವರು ಬಹಳ ಕಡಿಮೆ. ಅದೊಂದು ಹೆಮ್ಮೆಯ ವಿಷಯ ನಮಗೆಲ್ಲ. ನಮ್ಮ ಕುಟುಂಬದಲ್ಲಿ ಅಮೆರಿಕಾಗೆ ಹೋಗಿ ನೆಲೆಸಿದವರಲ್ಲಿ ಇವರೇ ಮೊದಲಿಗರು! ನಾನಂತೂ ಚಾನ್ಸ್ ಸಿಕ್ಕಿದಾಗೆಲ್ಲ 'ನಮ್ಮ ಕುಟುಂಬದವರು ಅಮೆರಿಕಾದಲ್ಲಿದ್ದಾರೆ' ಎಂದು ಹೇಳಿಕೊಂಡು ಸಂಭ್ರಮಪಡುತ್ತಿದ್ದೆ.

ಚಿಕ್ಕಪ್ಪ ಆಗಾಗ ಭಾರತಕ್ಕೆ ಬಂದಾಗೆಲ್ಲ ನಮ್ಮ ಮನೆಗೆ ತಪ್ಪದೆ ಭೇಟಿ ಕೊಡುತ್ತಿದ್ದರು. ಅವರ ಮಕ್ಕಳಾದ ಅನುರಾಧಾ, ಅರವಿಂದರ ಜೊತೆ ನಾನೂ ಆಟವಾಡುತ್ತಿದ್ದೆ. ಅವರಿಬ್ಬರ ಕನ್ನಡ ಆಕ್ಸೆಂಟ್ ಕೇಳುವುದು ನಮಗೆಲ್ಲ ಮೋಜೆನ್ನಿಸುತ್ತಿತ್ತು. ಅಮೆರಿಕಾದಲ್ಲಿದ್ದರೂ ಮಕ್ಕಳಿಗೆ ಭಾರತೀಯ ಸಂಸ್ಕೃತಿಯನ್ನು ಚೆನ್ನಾಗಿ ಕಲಿಸಿದ್ದರು ಪುಟ್ಟಮ್ಮ, ಚಿಕ್ಕಪ್ಪ. ಅನುರಾಧಾ ನನ್ನ ಹಾಗೇ ಉದ್ದನೆಯ ಲಂಗ ಹಾಕಿಕೊಂಡು ಆಟವಾಡುತ್ತಿದ್ದಿದ್ದು ನೆನಪಾಗುತ್ತಿದೆ. ಅವಳನ್ನು ನನ್ನ ಗೆಳತಿಯರ ಮನೆಗೆ ಕರೆದುಕೊಂಡು ಹೋಗಿ 'ನನ್ನ ಅಮೆರಿಕನ್ ಕಸಿನ್' ಅಂತ ಹೇಳಿಕೊಂಡು ಶೋ ಆಫ್ ಮಾಡುತ್ತಿದ್ದೆ. ಯಾವ ಜನ್ಮದ ಬಾಂಧವ್ಯವೋ ಮುಂದೆ ನಾನು ಮದುವೆಯಾದ ಮೇಲೆ ಶಿಕಾಗೋದಲ್ಲಿ ಅವರ ಮನೆಯ ಸಮೀಪದಲ್ಲೇ ನೆಲೆಸುವ ಅವಕಾಶ ದೊರೆಯಿತು. ಚಿಕ್ಕಪ್ಪ ಮದುವೆಗೆ ಮುಂಚೆ ನನ್ನವರನ್ನು ಭೇಟಿ ಮಾಡಿ, ನೋಡಿ ಮನೆಯವರ ಪರವಾಗಿ ಒಪ್ಪಿಗೆ ಕೂಡ ಕೊಟ್ಟಿದ್ದರು. ನಾನು ಚಿಕ್ಕವಳಿದ್ದಾಗ ಪುಟ್ಟಮ್ಮ ಮನೆ ಬಿಟ್ಟು ಹೊರಟರೆ ತುಂಬ ಅಳುತ್ತಿದ್ದೆನಂತೆ. ಅದಕ್ಕೆ ಅಮ್ಮ ಹೇಳುತ್ತಿದ್ದರು 'ನಿನಗೆ ಸಣ್ಣವಳಿದ್ದಾಗಿನಿಂದಲೂ ಪುಟ್ಟಮ್ಮ ಅಂದರೆ ತುಂಬ ಪ್ರೀತಿ. ಅದಕ್ಕೆ ದೇವರು ನಿನಗೆ ಅವರ ಹತ್ತಿರವೇ ಇರುವ ಅವಕಾಶ ಕೊಟ್ಟ' ಎಂದು.

ನಾನು ಚಿಕಾಗೋಗೆ ಬಂದ ತಕ್ಷಣ ಪುಟ್ಟಮ್ಮ– ಚಿಕ್ಕಪ್ಪ ನನ್ನನ್ನು ಭೇಟಿ ಮಾಡಿ ಎಲ್ಲ ವಿಷಯಗಳಿಗೂ ಸಹಾಯ ಮಾಡಿದರು. ವಾರಕ್ಕೆ ಒಮ್ಮೆಯಾದರೂ ಅವರ ಮನೆಗೆ ಬೆಳಿಗ್ಗೆ ಹೋಗಿ ಸಂಜೆ ಊಟದ ನಂತರ ವಾಪಸಾಗುತ್ತಿದ್ದೆವು. ಆಗತಾನೆ ಅಮ್ಮ ಅಪ್ಪನಿಂದ ದೂರವಾಗಿ ಯಾವುದೋ ಪರದೇಶಕ್ಕೆ ಬಂದಿದ್ದ ನನಗೆ, ಅವರ ಸಾಮೀಪ್ಯ ಒಡನಾಟ ಮನಸ್ಸಿಗೆ ತಂಪೆರೆಯುತ್ತಿತ್ತು. ಮುಂದೆ ನಮಗೆ ಮಕ್ಕಳಾದಾಗಲೂ ತುಂಬು ಹೃದಯದಿಂದ ಬೆಂಬಲ ನೀಡಿದ್ದರು. ನನ್ನ ಎರಡನೆಯ ಮಗು ಹುಟ್ಟಿದಾಗ ಮಧ್ಯರಾತ್ರಿಯಲ್ಲಿ ಆಸ್ಪತ್ರೆಗೆ ಬಂದು ದೊಡ್ಡ ಮಗುವನ್ನು ಎತ್ತಿಕೊಂಡು ಮನೆಗೆ ಕರೆದುಕೊಂಡು ಹೋಗಿದ್ದನ್ನು ಮರೆಯುವಂತೆಯೇ ಇಲ್ಲ. ನನ್ನ ಮಕ್ಕಳಿಗೂ ಐತಾಳ ಅಜ್ಜ ಅಂದರೆ ತುಂಬ ಪ್ರೀತಿ.

ಹೀಗೇ ಅದೆಷ್ಟು ವರ್ಷಗಳು ಉರುಳಿದವೋ! ಚಿಕ್ಕಪ್ಪನ ಜೊತೆ ಹಾಡು ಹೇಳುವುದು, ಜೋಕ್ ಮಾಡುವುದು, ಕಾರ್ಡ್ಸ್ ಆಡುವುದು ಇತ್ಯಾದಿಗಳಲ್ಲಿ ಕಳೆದ ರಸನಿಮಿಷಗಳನ್ನು ಮರೆಯುವಂತೆಯೇ ಇಲ್ಲ. ಅವರ ಹಾಸ್ಯಪ್ರಜ್ಞೆ ಸುತ್ತಮುತ್ತಲಿನ ಎಲ್ಲರ ಮುಖದಲ್ಲಿ ನಗು ಮಾಸದಂತೆ ಮಾಡುತ್ತಿತ್ತು. ಅತಿಥಿ ಸತ್ಕಾರದಲ್ಲಿ ಅವರದ್ದು ಎತ್ತಿದ ಕೈ. ಬಗೆಬಗೆಯ ರುಚಿಕರವಾದ ಊಟ ಮಾಡಿದ್ದೇ ಅಲ್ಲದೆ 'ಉಂಡೂ ಹೋದ, ಕೊಂಡೂ ಹೋದ' ಎಂಬ ಗಾದೆಯಂತೆ ಮನೆಗೂ ಕಟ್ಟಿಕೊಡುತ್ತಿದ್ದರು ಅಡುಗೆಯನ್ನು, ಚಿಕ್ಕಪ್ಪನ ಮನೆಯಲ್ಲಿ ಯಾವಾಗಲೂ ಕರ್ನಾಟಕದಿಂದ ಬಂದ ಕಲಾವಿದರನ್ನು, ಸಾಹಿತಿಗಳನ್ನು ಆಹ್ವಾನಿಸಿ ಸತ್ಕಾರ ಮಾಡುತ್ತಿದ್ದರು. ಹೀಗೆ ನಮಗೆಲ್ಲ ಅಂಥವರನ್ನು ನೋಡುವ, ಅವರ ಜೊತೆ ಮಾತುಕತೆ ನಡೆಸುವ ಸೌಭಾಗ್ಯ ದೊರಕುತ್ತಿತ್ತು. ಮುಂದೆ ಅವರು ಚಿಕಾಗೋ ಬಿಟ್ಟು ಲಾಸ್ ಏಂಜಲಿಸ್‌ಗೆ ಹೊರಟುಹೋದದ್ದು ಅವರ ಬಂಧು ಬಳಗ, ಸ್ನೇಹಿತ ವರ್ಗಕ್ಕೆಲ್ಲ ತುಂಬ ಬೇಸರದ ಸಂಗತಿಯಾಗಿತ್ತು. ನಾನಂತೂ ವಾರಕ್ಕೊಮ್ಮೆಯಾದರೂ ಅವರಿಗೆ ಫೋನ್ ಮಾಡುತ್ತಿದ್ದೆ. ಚಿಕ್ಕಪ್ಪ ಫೋನ್ ಎತ್ತಿದಾಗೆಲ್ಲ ಬೇರೆ ಧ್ವನಿಯಲ್ಲಿ ಮಾತನಾಡಿ ಅವರಿಗೆ ಕನ್ಫ್ಯೂಸ್ ಮಾಡಿ ಆಮೇಲೆ ನಾವಿಬ್ಬರೂ ನಗುತ್ತಿದ್ದೆವು. ಅವರೇನೂ ಕಡಿಮೆ ಇಲ್ಲ, ನನ್ನ ಮತ್ತು ಪುಟ್ಟಮ್ಮನ ಸಂಭಾಷಣೆಯನ್ನು ಮಿಮಿಕ್ ಮಾಡಿ ತಮಾಷೆ ಮಾಡುತ್ತಿದ್ದರು.

ಚಿಕ್ಕಪ್ಪನಿಗೆ ಹುಶಾರಿಲ್ಲ ಅಂತ ತಿಳಿದು ಅವರ ಜೊತೆ ಸಮಯ ಕಳೆಯಲು ನಾವು ಲಾಸ್ ಏಂಜಲೀಸ್‌ಗೆ ಹೋಗಿದ್ದೆವು. ಆ ಕೊನೆಯ ದಿನಗಳಲ್ಲಿ ಅವರ ಒಡನಾಟ ನಮಗೆ ಸಿಕ್ಕಿದ್ದು ನಮ್ಮ ಭಾಗ್ಯ! ಅಂಥ ಸಮಯದಲ್ಲೂ ಅವರ ಸಂಗೀತದ ಒಲವು ಚೂರೂ ಕಡಿಮೆಯಾಗಿರಲಿಲ್ಲ, ದಿನವಿಡೀ ಸಂಗೀತ ಕೇಳುತ್ತಿದ್ದರು– ಅದರಲ್ಲೂ ಹಿಂದೂಸ್ಥಾನಿ ಸಂಗೀತ ಅವರಿಗೆ ತುಂಬ ಇಷ್ಟ, ಕಿಶೋರಿ ಅಮ್ಮೋನ್ಕರ್ ಮತ್ತಿತರ ಸಂಗೀತಗಾರರ ಹಾಡುಗಾರಿಕೆ ಕೇಳುತ್ತಾ ಕಣ್ಣು ಮುಚ್ಚಿಕೊಂಡಿರುತ್ತಿದ್ದರು. ಜೀವನದ ಆ ಕಡೆಯ ದಿನಗಳಲ್ಲೂ ನನ್ನ ಜೊತೆಗೂಡಿ ಬೇಂದ್ರೆಯವರ ಕವನ 'ಘಮ ಘಮ ಘಮ್ಮಾಡಿಸ್ತಾವ ಮಲ್ಲಿಗಿ' ಅಂತ ಅವರು ಹಾಡಿದ್ದನ್ನು ಹೇಗೆ ತಾನೆ ಮರೆಯಲಾದೀತು! ಬದುಕಿನ ಮುಸ್ಸಂಜೆಯಲಿ, ಸಾವಿನ ಜೊತೆ ಹೋರಾಟ ನಡೆಸುವಾಗಲೂ ಅವರು ಇನ್ನೊಬ್ಬರ ಭಾವನೆಗಳಿಗೆ ಎಷ್ಟು ಬೆಲೆ ಕೊಡುತ್ತಿದ್ದರು ಎಂಬುದಕ್ಕೆ ಒಂದು ಉದಾಹರಣೆ– ನಾನು ಅವರಿಗೆ ಬೆಳಗಿನ ಉಪಾಹಾರಕ್ಕೆ ವಾಫಲ್ ತಿನ್ನಿಸುತ್ತಿದ್ದೆ. ಅವರು 'ವಾಫಲ್ ಯಾರು ಮಾಡಿದ್ದು?' ಕೇಳಿದರು. ನಾನು 'ಪುಟ್ಟಮ್ಮ' ಎಂದೆ. ಅದಕ್ಕೆ ಅವರು 'ವಾಫ್ಲ್ ಇನ್ನೂ ಗರಿಗರಿಯಾಗಿರಬೇಕು' ಎಂದರು, ಅಕಸ್ಮಾತ್ ನಾನು 'ನಾನೇ ಮಾಡಿದ್ದು' ಎಂದಿದ್ದರೆ ಅವರು ಏನೂ ಹೇಳುತ್ತಿರಲಿಲ್ಲವೇನೋ.

ಚಿಕ್ಕಪ್ಪ ಕಡೆಯ ದಿನಗಳಲ್ಲಿ ಹಾಸಿಗೆ ಹಿಡಿದಾಗ ಪುಟ್ಟಮ್ಮ, ಮಕ್ಕಳು ಅನುರಾಧಾ, ಅರವಿಂದ ಅವರನ್ನು ಮನೆಯಲ್ಲೇ ನೋಡಿಕೊಂಡ ರೀತಿಯಂತೂ ಅವರ ಘನತೆವೆತ್ತ

ಬದುಕಿಗೆ ಕಳಸವಿಟ್ಟಂತಿತ್ತು. ಚಿಕ್ಕಪ್ಪ ಮತ್ತೆ ಮತ್ತೆ ಹೆಂಡತಿಯನ್ನು ಮೆಲುವಾಗಿ 'ಪುಟ್ಟಾ' ಎಂದು ಕರೆಯುತ್ತಿದ್ದರು, ಗಂಡನ ಸೇವೆ ಮಾಡಿ ಪುಟ್ಟಮ್ಮನ ದೇಹ ಬಗ್ಗಿಹೋಗಿದ್ದರೂ ನಿಷ್ಠೆ, ಛಲ ಅವರ ಕೈ ಹಿಡಿದು ನಡೆಸುತ್ತಿತ್ತು. ಚಿಕ್ಕಪ್ಪನನ್ನು ನೋಡಲು ದಿನವಿಡೀ ಬಂಧುವರ್ಗ, ಸ್ನೇಹಿತರು ಬರುತ್ತಿದ್ದರು. ಅಂಥ ಸಮಯದಲ್ಲೂ ಪುಟ್ಟಮ್ಮ ಅತಿಥಿ ಸತ್ಕಾರ ಮಾಡಿ ಮನೆಗೂ ತಿಂಡಿ ಕಟ್ಟಿಕೊಡುತ್ತಿದ್ದರು! ಕೊನೆಯ ದಿನಗಳಲ್ಲಿ ಚಿಕ್ಕಪ್ಪನಿಗೆ ಇಷ್ಟವಾದ ಪಾಯಸವನ್ನು ಮಾಡಿ ಪುಟ್ಟಮ್ಮ ತಿನ್ನಿಸಿದ್ದು ನೆನಪಾದಾಗ ಕಣ್ಣು ತುಂಬುತ್ತದೆ. ಬಹುಶಃ ಅದೇ ಅವರ ಕೊನೆಯ ಊಟವಾಗಿತ್ತು. ಮಗಳು ಅನು (ಚಿಕ್ಕಪ್ಪನ ಪ್ರೀತಿಯ 'ಮುನ್ನಿ') ಸ್ವಲ್ಪವೂ ತಾಳ್ಮೆ ತಪ್ಪದೆ, ತಂದೆಯನ್ನು ಮಗುವಿನ ತರಹ ಮಾತನಾಡಿಸುತ್ತಾ ಎಲ್ಲ ವಿಚಾರಗಳಿಗೂ ಗಮನ ಕೊಟ್ಟಿದ್ದಳು. 'ಅಪ್ಪ, ಏನು ಬೇಕು?', 'ಅಪ್ಪಾ ಹಾಸಿಗೆ ಸರಿ ಮಾಡ್ಲಾ?', 'ಅಪ್ಪ, ಚಳಿ ಆಗುತ್ತಾ?' ಎನ್ನುತ್ತಾ ಆಗಾಗ ವಿಚಾರಿಸುತ್ತಿದ್ದಿದ್ದು ಈಗಲೂ ಕಿವಿಯಲ್ಲಿ ಗುಯ್‌ಗುಡುತ್ತಿದೆ. ಕಡೆಯ ದಿನಗಳಲ್ಲೂ ಕೂಡ ಚಿಕ್ಕಪ್ಪ ಕೇಳಿದರು ಎಂದು ದೊಡ್ಡ ದೊಡ್ಡ ಅಂಕೆಗಳಿರುವ ಗಡಿಯಾರ ತಂದಿದ್ದಳು.

ಮಗ ಅರವಿಂದ (ಚಿಕ್ಕಪ್ಪನ ಪ್ರೀತಿಯ 'ಪಾಪಣ್ಣ') ನ್ಯೂ ಜೆರ್ಸಿಯಿಂದ ಬಂದಿದ್ದ ತಂದೆಯ ಸೇವೆ ಮಾಡಲೆಂದು, ನರ್ಸ್ ಇದ್ದರೂ ಸಹ ರಾತ್ರಿ ಇಡೀ ಎಚ್ಚರವಾಗಿದ್ದು ಚಿಕ್ಕಪ್ಪನ ಹಾಸಿಗೆಯ ಪಕ್ಕದಲ್ಲೇ ಕುಳಿತಿದ್ದ. ಬೆಳಗಿನ ಜಾವ ನಾನು ಎದ್ದು ಬಂದು 'ನಾನು ಕುಳಿತಿರುತ್ತೇನೆ, ನೀನು ಮಲಕ್ಕೊ, ಹೋಗು', ಎಂದರೆ ಕೇಳುತ್ತಿರಲಿಲ್ಲ! ಅವರ ನಾಯಿ ಕೂಡ ಹಾಸಿಗೆಯ ಹತ್ತಿರವೇ ಕುಳಿತು ಅವರನ್ನು ಆಗಾಗ ನೆಕ್ಕುತ್ತಾ ವಿಚಾರಿಸುತ್ತಿತ್ತು. ಪ್ರೀತಿಯೇ ತಮ್ಮ ಉಸಿರು ಎಂಬಂತೆ ಬಾಳಿ ಬದುಕಿದವರು ಚಿಕ್ಕಪ್ಪ. ಮನೆಯವರೆಲ್ಲರ ಪ್ರೀತಿಯ ಮಹಾಪೂರದಲ್ಲಿ ತೇಲುತ್ತಾ ಪರಂಧಾಮವನ್ನೈದಿದರು. ಅವರ ದೇಹಾಂತ್ಯದ ನಂತರ ನನ್ನ ಹೃಯದಲ್ಲಿ ಒಂದು ಬಗೆಯ ಶೂನ್ಯತೆ ಆವರಿಸಿತು. ಇನ್ನು ಫೋನಿನಲ್ಲಿ ತಮಾಷೆ ಮಾಡಿ ನಗುತ್ತಾ ಮಾತಾಡಲು ಚಿಕ್ಕಪ್ಪ ಇಲ್ಲ! ಜೊತೆಯಾಗಿ ಹಾಡು ಹೇಳಲು ಚಿಕ್ಕಪ್ಪ ಇಲ್ಲ! ತುಂಬು ಪ್ರೀತಿಯಿಂದ 'ಬಾ ಶಾರಿ' ಅಂತ ಕರೆಯುವ ಚಿಕ್ಕಪ್ಪ ಇಲ್ಲ! ಅವರು ಇಲ್ಲವಾದ ಮೇಲೆ ನನ್ನ ಎದೆಯಲ್ಲಿರುವ ಈ ಖಾಲಿತನವನ್ನು ಯಾರೂ ತುಂಬಲಾರರು, ಹೇಗೆ ತಾನೆ ವಿದಾಯ ಹೇಳಬಹುದು ಅಂಥ ಚಿಕ್ಕಪ್ಪನಿಗೆ!

*

‘ಏ ನಾಪಣ್ಣಯ್ಯ ಮಾವ’

– ಅಹಲ್ಯಾ ಬಲ್ಲಾಳ್

‘ಎಂತ ಮಾರಾಯ. ಹಿಂಗೆಲ್ಲ ಬರೆಸ್ತೀಯಲ್ಲ, ಕಸ್ಬಿಲ್ಯಾ ನಿಂಗೆ!’

ನಾಪಣ್ಣಯ್ಯ ಮಾವ, ಇವನ ಬಗ್ಗೆ ಯೋಚಿಸಿದಾಗೆಲ್ಲ ಅವನೊಬ್ಬನೇ ಕಣ್ಣ ಮುಂದೆ ಬಂದದ್ದು ಕಡಿಮೆ. ಕೋಟದ ನಮ್ಮ ಅಜ್ಜಿ ತಾತನ ಮನೆಯ ಎಲ್ಲರೂ, ಅದರಲ್ಲೂ ವಿಶೇಷವಾಗಿ ನನ್ನ ಸೋದರಮಾವಂದಿರೆಲ್ಲರೂ ಜೊತೆಜೊತೆಯಲ್ಲೇ ನೆನಪಿಗೆ ಬರುವುದೇ ಹೆಚ್ಚು. ಎತ್ತರದ ತೆಂಗಿನ ಮರಗಳು, ಬೇಸಾಯ, ಕೆಂಪು ನೆಲದ ಮನೆ, ಪಡಸಾಲೆ, ಚಾವಡಿ, ಪಾತಾಳಂಕಣ, ಸಗಣಿ ಹಾಕಿ ಸಾರಿಸಲ್ಪಟ್ಟ ಅಂಗಳ, ಚಾವಡಿಯ ಪತ್ತಾಸು, ಮುಂಡಗಿ, ದಾರಂದ, ಅದರ ಚಂದದ ಗಿಳಿಗಳು, ಪಡಸಾಲೆಯ ದೇವರ ಮಂಟಪದಲ್ಲಿ ಹೊಳೆಯುವ ಅಮ್ಮನವರು, ಸ್ವಲ್ಪ ಈ ಕಡೆ, ಅದೆಷ್ಟೋ ಮಕ್ಕಳನ್ನು ತೂಗಿ ಬೆಳೆಸಿದ ತೊಟ್ಟಿಲು, ಬಾಗಿಲು ತೆರೆದ ಕೂಡಲೇ ಬೆಲ್ಲದ ಘಮ ಸೂಸುತ್ತಿದ್ದ ಚಾವಡಿ ಕೋಣೆ, ಅಕ್ಕಿಮುಡಿ, ಮೂಡುಚಾವಡಿಯ ಸಾಲುಸಾಲು ಸೌತೆ ಮತ್ತು ಗುಂಬಳಕಾಯಿ, ಹಟ್ಟಿಯ ದನ, ಕರು ಎಮ್ಮೆ, ಹೆಬ್ಬಾಗಿಲು, ಬಾಮಿಕಟ್ಟೆ, ಅದರೆದುರು ಮಾವಿನಹಣ್ಣು ಸೀಸನ್ನಿನಲ್ಲಿ ಗೋಣಿ ಹಾಸಿ ಹಣ್ಣು ಇಡುತ್ತಿದ್ದ ಕೋಣೆ, ಬಚ್ಚಲೊಲಿ, ಗದ್ದೆ ಬದಿ ಬದು, ತೆಂಗಿನ ಗರಿಯಿಂದ ಮಾಡಿದ ‘ವಾಚು’, ಮಾವಿನೆಲೆಯ ಟೂಥ್ ಬ್ರಶ್... ಇವೆಲ್ಲಾ ಈಗಲೂ ಇವೆ. ಕೆಲವು ವರ್ಷಗಳ ಹಿಂದೆ ಹೋದರೆ

ಅಂಗಳದ ಹುಲ್ಲುಕುತ್ರಿ, ಬಡಬದಿ ಹೆಬ್ಬಾಗಿಲ ಬಳಿ ಇದ್ದ ಸಾರೋಟು; ಅಭಿಷೇಕಕ್ಕೆ ನಮ್ಮನೆಯಿಂದ ಒಂದು ಸಿದ್ದೆ ಹಾಲು ಪಡೆದುಕೊಂಡು, ಕುಂಕುಮ ಪ್ರಸಾದ ಕೊಟ್ಟು ಹೋಗಲು ಅಮೃತೇಶ್ವರಿ ಅಮ್ಮನೋರ ದೇವಸ್ಥಾನದಿಂದ ಬರುತ್ತಿದ್ದ ಮಕ್ಕಳು; ಪರಿಚಿತ ಜೀವಿಗಳು ಬಚ್ಚ, ಶೇಖರ; ಮೂಡುಬದಿ ಹೆಬ್ಬಾಗಿಲ ಬಳಿ ಕೂತು ವೀಳ್ಯದೆಲೆ ಅಡಿಕೆ ಮೆಲ್ಲುತ್ತಾ ಆಗುಹೋಗುಗಳ ಮೇಲೆ ನಿಗಾ ಇಡುತ್ತಿದ್ದ ಹಿತೈಷಿ ಶೀನಪ್ಪಶೆಟ್ರು, ದೇವರ ಪೂಜೆಗೆ ಹೂವು ಕೊಯ್ಯಲೆಂದು ಬೆಳಗಾಗೆದ್ದು ಬುಟ್ಟಿ ಹಿಡಿದುಕೊಂಡು ಹೊರಟಾಗ ಪಟ್ಟಣವಾಸಿಗಳಾದ ನಮಗೆ ಪರಿಚಯವಾದ ಬಗೆಬಗೆ ದಾಸವಾಳ, ಗಂಟೆಹೂವು, ರಥದಹೂವು ಮತ್ತು ಆ ಗಿಡದ ಇರುವೆಗಳು ಹೀಗೆ ಯಾವುದೇ ನಿರ್ದಿಷ್ಟ ಕ್ರಮವಿಲ್ಲದೆ ಉದ್ದಾನುದ್ದಕ್ಕೆ ಕಾಣಿಸಿಕೊಳ್ಳುವ ಆಪ್ತ ಚಿತ್ರಗಳ ರಾಶಿ. ತೊಟ್ಟಿಲು ಎಂದಾಗ ಈ ಸಾಲುಗಳ ಜೀಕು ಕಣ್ಣ ಮುಂದೆ... 'ಮುದ್ದು ನಮ್ಮಗುವಿಗೆ ಇಬ್ರು ಮಾವಂದಿರು ಒಬ್ಬರಿಂದೊಬ್ರು ಅತಿರಥರು ಮಹಾರಥರು 'ಹಬ್ಬಕ್ ಹೋಪಾಗ ಕೊನಿ ಹಣ್ಣು...'

ಈ ತೊಟ್ಟಿಲು ತೂಗೋ ಹಾಡಿನಲ್ಲಿ ಇಬ್ರು ಮಾವಂದಿರಿದ್ದರೆ ನಮಗೆ (ಅರ್ಥಾತ್, ಚಿಕ್ಕಿಯಮ್ಮ ಎಂದೇ ಕರೆಯಲ್ಪಡುತ್ತಿದ್ದ ನಮ್ಮ ಅಜ್ಜಿ ಮೀನಾಕ್ಷಿ ಹಾಗೂ ಕೋಟದ ಗಾಂಧಿ ಎಂದು ಹೆಸರುವಾಸಿಯಾಗಿದ್ದ ನಮ್ಮ ತಾತ ಕೃಷ್ಣದೇವ ಐತಾಳರ ಹೆಣ್ಣುಮಕ್ಕಳ ಮಕ್ಕಳ ಪಾಲಿಗೆ) ಏಳು ಜನ ಸೋದರಮಾವಂದಿರು, ನಮ್ಮ ಎರಡನೆಯ ಮಾವನಿಗೆ ಆಹಿತಾನಲ ಎಂಬ ಕಾವ್ಯನಾಮ ಬಂದದ್ದು ಆಮೇಲೆ. ಅದಕ್ಕೂ ಮೊದಲು ಅವರು ಕುಟುಂಬದ ಬೇರೆ ಬೇರೆ ಜನರಿಂದ ನಾಗಪ್ಪಯ್ಯ, ನಾಪಣ್ಣಯ್ಯ, ಈಕಕ್ಕ, ನಾಪಣ್ಣಯ್ಯಮಾವ, Naps ಎಂದೂ ಆನಂತರ ನಾಗಜ್ಜ ಎಂದೂ ಕರೆಸಿಕೊಂಡವ.

ಇಂತಿಪ್ಪ ನಾಪಣ್ಣಯ್ಯ ಮಾವನ ವ್ಯಕ್ತಿತ್ವವೇ ವಿಶಿಷ್ಟ. ರಾಶಿ ಪ್ರೀತಿ, ಆತ್ಮೀಯತೆ, ಉತ್ಕಟ ಭಾವುಕತೆ ಜೊತೆಗೆ ಅದೇ ಪ್ರಮಾಣದ ನಾಸ್ಟಾಲ್ಜಿಯ ಬೆರೆತ ಕನವರಿಕೆ, ಒಂದಿಷ್ಟು ಓಲ್ಡ್ ವರ್ಲ್ಡ್ ಚಾರ್ಮ್, ಸಾಹಿತ್ಯ ಮತ್ತು ಕಲೆಗಳ ಬಗೆಗಿನ ಒಲವು ಹಾಗೂ ಅಪಾರ ಗೌರವ, ನಡುನಡುವೆ ಇಣುಕುವ ಸಣ್ಣ ಮೊಂಡತನ, ಎಲ್ಲಕ್ಕಿಂತ ಹೆಚ್ಚು ಹಾಸ್ಯಪ್ರಜ್ಞೆ–ಕುಶಾಲು. ನಾನು ಚಿಕ್ಕವಳಿದ್ದಾಗ ಎಲ್ಲ ಸೋದರಮಾವಂದಿರು ನನ್ನನ್ನು ಅಡ್ಡಹೆಸರಿಂದಲೇ ಕರೆಯುತ್ತಿದ್ದರು, ಬುದ್ಧಿ ಬಂದ ನಂತರ ನನಗದು ಇಷ್ಟವಾಗುತ್ತಿರಲಿಲ್ಲ. ಅಮ್ಮನನ್ನು ಬೆದರಿಸುತ್ತಿದ್ದೆ. ಅವಳು ಒಂದಿಷ್ಟು ರಾಯಭಾರ ನಡೆಸಿದ ನಂತರ ಉಳಿದ ಮಾವಂದಿರು ನನ್ನ ಹೆಸರಿನಿಂದಲೇ ಕರೆಯತೊಡಗಿದರು. ಇವನೊಬ್ಬ ಮಾತ್ರ ಅದಕ್ಕೆ ಅಪವಾದ. 'ನಿಂಗೆ ಸಿಟ್ಟು ಬರುತ್ತೇನೇ? ನಾನು ನಿನ್ನನ್ನ ಹಾಂಗೇ ಕರೀತೆ, ಆಗ್ದಾ' ಎಂದು ಕಳ್ಳ ಶಿಷ್ಟಾಚಾರದಿಂದ ಹೇಳಿ ಮೊದಲಿನಂತೆಯೇ ಕರೆಯುತ್ತಿದ್ದ. ಇರಿಸುಮುರಿಸಾದರೂ ನಿರ್ವಾಹವಿಲ್ಲದೆ ಸುಮ್ಮನಾಗುತ್ತಿದ್ದೆ.

ಬೆಂಗಳೂರಲ್ಲಿ ನಡೆದ ನನ್ನ ಮದುವೆಗೆ ಅವನು ಲಾಸ್ ಏಂಜಲೀಸ್‌ನಿಂದ ಬಂದಿದ್ದ, ಹಿಂದಿನ ದಿನದ ರಾತ್ರಿ ಮದುವೆ ಛತ್ರದ ದೃಶ್ಯ ನೆನಪಿಸಿಕೊಂಡರೆ ಈಗಲೂ

ನಗು. ನನಗೆ ಕೇಳಿಸುವಂತೆ, 'ನನ್ನ ಎರಡನೆಯ ಇಷ್ಟದ ಸೊಸೆ ಮದುವೆಗೆ ನಾನು ಬರದೇ ಇದ್ದರೆ ಹೇಗೆ?' ಎನ್ನುವ ಅರ್ಥದ ಮಾತುಗಳನ್ನು ಯಾರಿಗೋ ಹೇಳ್ತಾ ಇದ್ದ. ಎಲಾ! ಇದನ್ನು ಕೇಳಿಸಿಕೊಂಡು ಸುಮ್ಮನೆ ಇರಬೇಕೇ ನಾನು? ಕೂಡಲೇ ನೀನು ನನ್ನ ಏಳನೆಯ ಬೆಸ್ಟ್ ಮಾವ ಎಂದುಬಿಟ್ಟೆ, ಯಾವುದೇ ಹಿಂಜರಿಕೆ ಇಲ್ಲದೆ ಅವನಿಗೆ ನಗುವೋ ನಗು, ನಮ್ಮ ಕುಟುಂಬಕ್ಕೆ ಮಾತ್ರ ಅರ್ಥವಾಗುವ ವಿಷಯ ಇದು. ನನ್ನ ಕಸಿನ್ ಅನಸೂಯ (ಅಸ್ಸಿಮರಿ) ಎಲ್ಲರ ಅಚ್ಚುಮೆಚ್ಚು. ಮನೆ ದೇವರು ಅಂದರೂ ಸರಿ, ನನಗೂ ಅವಳು ಅಚ್ಚುಮೆಚ್ಚೇ, ಆದರೂ ನಾಪಣ್ಣಯ್ಯ ಮಾವ ಹಾಗೆಂದಾಗ ಥಟ್ಟನೆ ಉತ್ತರ ಎಲ್ಲಿಂದ ಬಂತೋ!

ಮುಂದೆ ಅವನು ಲಕ್ಷ್ಮೀಯತ್ತೆ ಜೊತೆ ಭಾರತಕ್ಕೆ ಭೇಟಿ ನೀಡಲು ಬರುತ್ತಾನೆ ಎಂದು ಗೊತ್ತಾದಾಗೆಲ್ಲ ಖುಷಿ. ಅವನ ಆಗಮನ, ವಾಸ್ತವ್ಯ ಅಂದರೆ ಒಂದು ಇವೆಂಟ್, ಅವನಿದ್ದ ಕಡೆ ಹುರುಪು, ಉತ್ಸಾಹ ಭೇಟಿ ಸಾಧ್ಯ ಅನಿಸಿದ ವರ್ಷಗಳಲ್ಲಿ ನಾವೆಲ್ಲಾ ಅವರ ಭೇಟಿಗಾಗಿ ಎದುರು ನೋಡ್ತಾ ಇದ್ದೆವು. ನಮ್ಮ ಪೀಳಿಗೆ ಬಿಡಿ, ನಮ್ಮೆಲ್ಲರ ಮಕ್ಕಳ ಬಗ್ಗೆ ಅವರಿಬ್ಬರಿಗೆ ಇದ್ದ ಅಕ್ಕರೆ ಅಷ್ಟಿಷ್ಟಲ್ಲ. ನನ್ನ ಚಿಕ್ಕಮ್ಮ ಯಶೋದನ ಮಗಳು ಅರ್ಚನಾಳ ಮಾತು, 'ನವೆಂಬರ್ ತಿಂಗಳು ಬಂತೆಂದರೆ ನಮಗೆಲ್ಲಾ ಒಂಥರಾ ಹಬ್ಬದ ಸಂಭ್ರಮ ಸಡಗರ, ಯಾಕಂದ್ರೆ ಅದು ನಾಪಣ್ಣೆ ಮಾವ ಮತ್ತು ಲಕ್ಷ್ಮೀಯತ್ತೆ ಬರುವ ಸಮಯ, ಅವ್ರು ಬಂದ್ರು ಅಂದರೆ ಮನೆಗೆ ಬಂದು ಹೋಗುವವರ ಸಂಖ್ಯೆ ಹೆಚ್ಚುತ್ತಿತ್ತು ಮತ್ತು ನಮ್ಮ ಔಟಿಂಗ್ಸ್ ಕೂಡ ಜಾಸ್ತಿಯಾಗುತ್ತಿತ್ತು. ಅವರು ಬಂದಾಗ ಕುಟುಂಬದವರನ್ನೆಲಾ ಸೇರಿಸಿ ಸಂತಸ ಪಡೆಯುವುದನ್ನು ಹೇಗೆ ಮರೆಯಲು ಸಾಧ್ಯ? ಅವರ ಪುಸ್ತಕ ಬಿಡುಗಡೆ ಕಾರ್ಯಕ್ರಮಗಳಲ್ಲಿ ಸಾಹಿತಿ ಮಿತ್ರರನ್ನು ಭೇಟಿಯಾಗುವುದೂ ನಮಗೆ ಸಂತಸದ ವಿಷಯವೇ. ಅವರೊಂದಿಗೆ ಹಳೆಯ ಕನ್ನಡ ಮೂವೀಸ್ ನೋಡುವುದು, ಹಳೆಯ ಹಾಡುಗಳನ್ನು ಹಾಡಿ ಅವುಗಳ ಸಾಹಿತ್ಯದ ಕುರಿತು ವಿಚಾರ ಮಾಡುವುದು ನಮ್ಮೆಲ್ಲರ ನೆಚ್ಚಿನ ಆಕ್ಟಿವಿಟಿಯಾಗಿತ್ತು, ಅವರ ಹಾಸ್ಯ ಪ್ರಜ್ಞೆ ಅಚ್ಚರಿ ಹುಟ್ಟಿಸುತ್ತಿತ್ತು. ಅವರೊಂದಿಗೆ ಕೋಟದಲ್ಲಿರುವ ನಮ್ಮ ಅಜ್ಜಿ ಮನೆಗೆ ಹೋಗುವುದು ನಮಗೆಲ್ಲ ತುಂಬಾ ಇಷ್ಟ, ಯಾಕಂದ್ರೆ ದಾರಿಯಲ್ಲಿ ಮತ್ತು ಕೋಟದಲ್ಲಿ ಅವರ ಬಾಲ್ಯದ ಕಥೆಗಳನ್ನು ರಸವತ್ತಾಗಿ ನಮ್ಮೊಂದಿಗೆ ಹಂಚಿಕೊಳ್ಳುತ್ತಿದ್ದರು.

ನನ್ನ ಮಗಳು ಊರ್ಜಾಳಿಗೂ ನಾಪಣ್ಣೆ ಅಜ್ಜ ಎಂದರೆ ಪ್ರಾಣ. ಒಂದು ವಾಕ್ಯದಲ್ಲಿ ಹೇಳೋದಾದ್ರೆ, He was a man for all seasons and all age groups. ಈಗ ನವೆಂಬರ್ ತಿಂಗಳು ತುಂಬಾ ಖಾಲಿ. 'ನಾಪಣ್ಣೆ ಮಾವ, ವೀ ಮಿಸ್ ಯೂ'. ಅರ್ಚನಾಳ ಈ ಮಾತು ನಮ್ಮ ಕುಟುಂಬದ ನನ್ನ ಪೀಳಿಗೆಯವರಿಂದ ನಿರೀಕ್ಷಿತವೇ. ಆದರೆ ಈ ಲೇಖನವನ್ನು ಸಿದ್ಧಪಡಿಸುವಾಗ ಅರ್ಚನಾಳ ಮಗಳು ಹದಿನೈದರ ಪ್ರಾಯದ ಊರ್ಜಾಳ ಅಭಿಪ್ರಾಯ ತಿಳಿದು ದಂಗಾಗಿಹೋದೆ. ತನ್ನಷ್ಟಕ್ಕೆ ತಾನು ಎಂಬಂತೆ ಹೆಚ್ಚು

ಮೌನವಾಗೇ ಇರುತ್ತಿದ್ದ, ಅಥವಾ ಹಾಗೆಂದು ನನಗೆ ತೋರುತ್ತಿದ್ದ ಪ್ರಬುದ್ಧ ಹುಡುಗಿ, ಈ ಊರ್ಜಾ. ಅವಳಿಂದ ಬಂದ ಸಂದೇಶದ ಕನ್ನಡ ರೂಪ ಹೀಗಿದೆ: 'ಅಹಲ್ಯ ದೊಡ್ಡ, ನಾಪಣ್ಣೆ ಅಜ್ಜನ ಜೊತೆಗಿನ ಅನುಭವಗಳನ್ನು ನೀವು ಸಂಕಲಿಸ್ತಾ ಇದ್ದೀರಂತೆ, ಅಮ್ಮ ಹೇಳಿದಳು. ಅವರು ನನ್ನ ಜೀವನದ ಒಬ್ಬ ಪ್ರಮುಖ ವ್ಯಕ್ತಿಯಾಗಿರುವುದರಿಂದ ನನಗೂ ನನ್ನ ಪಾಲಿನದನ್ನು ಸೇರಿಸಬೇಕು ಅನಿಸುತ್ತಿದೆ. ಕನ್ನಡದಲ್ಲಿ ಸರಿಯಾಗಿ ಅನುವಾದಿಸಲು ನನಗೆ ಸೂಕ್ತ ಪದಗಳು ಸಿಗದೇ ಹೋಗಬಹುದು; ನೀವು ಈ ವಿಷಯದಲ್ಲಿ ಸಹಾಯ ಮಾಡುವಿರಾ? ನಾನು ಇಂಗ್ಲಿಷ್ ಕರಡು ಕಳಿಸುವೆ'.

'ಭಾರತದಲ್ಲಿ ನಮ್ಮಲ್ಲಿಗೆ ಭೇಟಿಕೊಡಲಿ ಎಂದು ನನ್ನ ಜೀವನದುದ್ದಕ್ಕೂ ಆಶಿಸುತ್ತಿದ್ದ, ಎದುರು ನೋಡುತ್ತಿದ್ದ ಒಬ್ಬ ವ್ಯಕ್ತಿ ಎಂದರೆ ನಾಪಣ್ಣೆ ಅಜ್ಜ. ನಮ್ಮಿಬ್ಬರ ನಡುವಿನ ಮಾತುಕತೆ ಹೆಚ್ಚಾಗಿ ಇಂಗ್ಲಿಷಿನಲ್ಲಿ ನಡೆಯುತ್ತಿದ್ದು ಅಪರೂಪಕ್ಕೆ ಕನ್ನಡ ಬಳಸುತ್ತಿದ್ದೆವು. ಪಕ್ಕದಲ್ಲಿ ಕುಳಿತು ಅವರು ಹೇಳುವುದನ್ನೆಲ್ಲ ಕೇಳಿಸಿಕೊಳ್ಳೋಣ ಅನಿಸುವಷ್ಟು ಶುದ್ಧ ಚೈತನ್ಯ ಅವರಲ್ಲಿ ಯಾವಾಗಲೂ ಇರುತ್ತಿತ್ತು. ಅವರು ಲವಲವಿಕೆ ಮತ್ತು ಜ್ಞಾನದಿಂದ ತುಂಬಿರುತ್ತಿದ್ದರು, ಅವರು ನಮ್ಮಲ್ಲಿಗೆ ಬಂದಿರುತ್ತಿದ್ದಾಗ, ಮೊಕ್ಕಾಮಿನ ಅತ್ಯಂತ ಸ್ವಾರಸ್ಯಕರ ರಸಮಯ ಭಾಗಗಳಲ್ಲಿ ಒಂದೆಂದರೆ ಉತ್ತಮ ಚೈನೀಸ್ ರೆಸ್ಟಾರೆಂಟ್‌ಗಳಿಗೆ ಹೋಗುವುದು. ಅವರು ಮತ್ತು ಲಕ್ಷ್ಮೀ ದೊಡ್ಡನ ಜೊತೆ ಇರುವುದು ನನಗೆ ಯಾವಾಗಲೂ ಪ್ರಿಯ. ನನ್ನನ್ನು ಅವರು ತಮ್ಮ ಸ್ವಂತ ಮೊಮ್ಮಗುವಿನಂತೆ ಕಾಣುತ್ತಿದ್ದರು; ಅವರ ಜೊತೆ ಕಾಲ ಕಳೆಯುವುದನ್ನು ನಾನು ಎಂಜಾಯ್ ಮಾಡುತ್ತಿದ್ದೆ. ನಾವು ಅವರಿಬ್ಬರ ಜೊತೆ ಕೋಟಕ್ಕೆ ಹೋದಾಗ ಅವರು ತಮ್ಮ ಮನೆ ಮತ್ತು ಹೆತ್ತವರ ಬಗೆಗೆ ಆಡುತ್ತಿದ್ದ ಮಾತುಗಳಿಂದಲೇ ಅವರಿಗೆ ಈ ವಿಷಯದಲ್ಲಿ ಅದೆಷ್ಟು ತೀವ್ರ ಆಸಕ್ತಿ ಮತ್ತು ಅಭಿಮಾನ ಎಂದು ಸ್ಪಷ್ಟವಾಗಿ ಗೊತ್ತಾಗುತ್ತಿತ್ತು.'

'ಭಾರತದ ಭೇಟಿ ಮುಗಿಸಿ ಅವರು ಯುಎಸ್‌ಗೆ ಮರಳಿದ ನಂತರ ಕನಿಷ್ಠ ಎರಡು ತಿಂಗಳಿಗೆ ಎರಡು ಸಲ ಎಂಬಂತೆ ಫೇಸ್ ಟೈಮ್ ಕಾಲ್‌ಗಳು ನಡೆಯುತ್ತಿದ್ದವು. ನಮ್ಮನಮ್ಮ ಜೀವನದಲ್ಲಿ ಏನೇನು ನಡೆಯುತ್ತಿದೆ ಎಂಬ ಈ ವಿನಿಮಯ ನನಗೆ ಯಾವಾಗಲೂ ಸಂತೋಷದಾಯಕವೇ'.

'ನಾಪಣ್ಣೆ ಅಜ್ಜ ಯಾವತ್ತಿಗೂ ನನ್ನ ಜೀವನದ ಒಬ್ಬ ಅತ್ಯಂತ **ಮುಖ್ಯ ವ್ಯಕ್ತಿ**ಯಾಗಿ ಉಳಿಯುತ್ತಾರೆ. ಈಗಲೂ ನಾನು ಅವರ ಅಭಿಮಾನಿ; ಅವರ ಜೊತೆಗಿನ ಒಂದೊಂದು ನೆನಪನ್ನೂ ನಾನು ಹೃದಯದಲ್ಲಿ ಕಾಪಿಟ್ಟುಕೊಂಡಿರುವೆ. ನನ್ನ ಜೀವನದ ಹದಿನೈದು ವರ್ಷಗಳಿಂದ ಅವರನ್ನು ಬಲ್ಲೆ ನಾನು. ಅವರ ಜೊತೆ ಇನ್ನಷ್ಟು ಸಮಯ ಕಳೆಯಬೇಕಿತ್ತು.' 'ಪ್ರತಿ ದಿನವೂ ಅವರನ್ನು ಮಿಸ್ ಮಾಡ್ತೀನಿ. ಅವರ ಜೊತೆ ಇನ್ನೊಂದಾದರೂ ಫೇಸ್ ಟೈಮ್ ಕಾಲ್ ಇರುತ್ತಿದ್ದರೆ? ಎಂಬ ನಿತ್ಯ ಆಸೆ ನನ್ನದು.'

'ಇದನ್ನೂ ಸೇರಿಸಬೇಕು ಅನಿಸ್ತಿದೆ, ನಾಪಣ್ಣೆ ಅಜ್ಜ ಆಗಾಗ ದೊಡ್ಡನಿಗೆ (ಅಂದರೆ ಅವಳ ಅಜ್ಜಿ, ಯಶೋದಾ) ಫೋನ್ ಮಾಡುತ್ತಿದ್ದರು. ಆಗೆಲ್ಲ ಅವರಿಗೆ ನನ್ನ ಬಗ್ಗೆ ಇದ್ದ ಹೆಮ್ಮೆ ಮತ್ತು ಕಾಳಜಿಯನ್ನು ವ್ಯಕ್ತಪಡಿಸುತ್ತಿದ್ದರು, ಪ್ರತಿ ಫೋನ್‌ಕಾಲಿನಲ್ಲೂ ತಪ್ಪದೆ ನನ್ನ ಯೋಗಕ್ಷೇಮದ ಬಗ್ಗೆ ವಿಚಾರಿಸಿ, ನನ್ನ ಜವಾಬ್ದಾರಿಯುತ ವರ್ತನೆಯನ್ನು ಮೆಚ್ಚಿಕೊಳ್ಳುತ್ತಿದ್ದರು. ನನ್ನ ಪಾಲಿಗೆ ಇದು ಅತ್ಯಂತ ಅಭಿಮಾನದ ಸಂಗತಿ; ಒಂದು ಮೌಲ್ಯವೇ ಸರಿ, ನನ್ನ ಜೀವನದ ಉಳಿದ ಭಾಗದುದ್ದಕ್ಕೂ ನಾನಿದನ್ನು ನೆನಪಿಟ್ಟುಕೊಳ್ಳುವೆ.' 'ಅವರು ಬರೆದ ಪುಸ್ತಕ ಅವರ ಸಹಿಯೊಂದಿಗೆ ನಮ್ಮ ಮನೆಯಲ್ಲಿ ಇರುವುದು ಕಿರಿಯಳಾದ ನನ್ನ ಪಾಲಿಗೆ ಅಭಿಮಾನದ ವಿಷಯ, ಅವರನ್ನು ನಾನು ಬಲ್ಲೆ ಹಾಗೂ ಸಾಧ್ಯವಾದಾಗೆಲ್ಲ ಹೋಗಿ ಬರಲು ನಾನು ತುಂಬಾ ಇಷ್ಟಪಡುವ ಅವರ ಮನೆ ಇದೆ ಎಂಬ ಸಂಗತಿಗಳೂ ನನಗೆ ಹೆಮ್ಮೆಯನ್ನೇ ಕೊಡುತ್ತವೆ. ಅವರು ನನ್ನ ಪಾಲಿನ ಬಹು ದೊಡ್ಡ ಸ್ಫೂರ್ತಿ. ಅವರಿಂದಾಗಿಯೇ ನಾನು ಬರೆಯುವ ಹವ್ಯಾಸ ಬೆಳೆಸಿಕೊಂಡೆ ಮತ್ತು ಇನ್ನೂ ಮುಂದುವರೆದು ನನ್ನದೇ ಆದ ಪುಸ್ತಕವನ್ನು ಪ್ರಕಟಿಸಿದೆ.'

ಇಂದಿನ ಮಕ್ಕಳಿಗೆ ಹಿರಿಯರೆಂದರೆ ಅಷ್ಟಕ್ಕಷ್ಟೇ ಎಂಬ ಗ್ರಹಿಕೆಯೇ ಬುಡಮೇಲು ಆಯ್ತಲ್ಲ, ನಾಪ್ಪಣ್ಣಯ್ಯ ಮಾವ! ಕ್ರೆಡಿಟ್ ನಿಂಗೆ ಕೊಡೋದಾ, ಊರ್ಜಾಳಿಗಾ ಅಂತ ನಾನು ಕೇಳೋದಿಲ್ಲಪ್ಪ. ಈಗ ನಾಲ್ಕೈದು ವರ್ಷಗಳ ಹಿಂದೆ ನಾನು ಯು.ಎಸ್.ಗೆ ಬಂದಾಗ ಕೆಲವು ದಿನಗಳಮಟ್ಟಿಗೆ ಅವನ ಮನೆಗೂ ಹೋಗಿದ್ದೆ. ನಾನು ಮುಂಬೈಯಿಂದ ಹೊರಡುವ ಮೊದಲೇ ಫೋನ್ ಮಾಡಿ, 'ಒಂದಾದರೂ ಪರ್ಫಾರ್ಮೆನ್ಸ್ ತಯಾರು ಮಾಡಿಕೊಂಡು ಬಾ' ಎಂದಿದ್ದ, ಅವನ ಒತ್ತಾಸೆಯಿಂದ ನಾನು ನಿರ್ದೇಶಕ ಡಾ. ಶ್ರೀಪಾದ್ ಭಟ್ಟರ ಬಳಿ ಹೋಗಿ ಟ್ಯಾಗೋರರ ಕತೆಗಳನ್ನು ಆಧರಿಸಿದ 'ಅವಳ ಕಾಗದ' ಎಂಬ ಏಕವ್ಯಕ್ತಿ ಪ್ರಯೋಗವನ್ನು ಆಪ್ತ ರಂಗಭೂಮಿಯ ಶೈಲಿಯಲ್ಲಿ ಸಿದ್ಧಪಡಿಸಿಕೊಂಡಿದ್ದೆ, ಲಾಸ್ ಏಂಜಲೀಸ್‌ನ ಅವನ ಮನೆಯಲ್ಲಿಯೇ ಅದರ ಮೊದಲ ಪ್ರಯೋಗ ಎಂಬ ಹೆಗ್ಗಳಿಕೆ ನನ್ನ ಪಾಲಿಗೆ, ಬಂದವರ ಎದುರು ನನ್ನನ್ನು ಪರಿಚಯಿಸುವಾಗ ಹೆತ್ತವರಿಗೆ ಹೆಗ್ಗಣ ಮುದ್ದು ಅಲ್ಲ, ಸೋದರಮಾವಂಗೆ ಹೆಗ್ಗಣ ಮುದ್ದು ಎನಿಸುವಷ್ಟು ಹೆಮ್ಮೆಯಿಂದ ಮಾತಾಡಿದ ಅವನ ಔದಾರ್ಯವನ್ನು ಹೇಗೆ ಮರೆಯಲಿ? ಮುಂದೆ ಕೆಲವು ದಿನಗಳಲ್ಲಿ ನ್ಯೂ ಜೆರ್ಸಿಯಲ್ಲಿ ಪ್ರಸ್ತಾಪ. ಬಳಗದ ಮೀರಾ ರಾಜಗೋಪಾಲರ ಮನೆಯಲ್ಲೂ ಇನ್ನೊಂದು ಪ್ರಯೋಗ ನಡೆಯುವಂತೆ ಮಾಡಿದ. ಅವನ ಮನೆಯಲ್ಲಿ ನನ್ನ ವಾಸ್ತವ್ಯ ಕೆಲವೇ ದಿನಗಳದ್ದು, ನೋಡಲೇಬೇಕಾದ ಗ್ರಾಂಡ್ ಕ್ಯಾನ್ಯನ್ ಮುಂತಾದ ಪ್ರೇಕ್ಷಣೀಯ ತಾಣಗಳನ್ನು ಸಾವಧಾನವಾಗಿ ನೋಡುವ ಪ್ಲಾನಿಂಗ್ ಮಾಡಲಿಲ್ಲ ಎಂಬ ದೂರನ್ನು ಅವನ ಬಾಯಿಂದ ಬಹಳ ದಿನಗಳವರೆಗೆ ಪದೇಪದೇ ಕೇಳಬೇಕಾಯ್ತು ಅನ್ನಿ.

೨೦೨೨ರ ಅಕ್ಟೋಬರಿನಲ್ಲಿ ನನ್ನ ಮಗ ಶಂತನು ಮತ್ತು ಅವನ ಸಂಗಾತಿ ಮಾಯಾ ಅವನನ್ನು ನೋಡಲೆಂದೇ ಪೂರ್ವದ ನ್ಯೂ ಜೆರ್ಸಿಯಿಂದ ಪಶ್ಚಿಮದಲ್ಲಿದ್ದ

ಅವನ ಮನೆಗೆ ದಿಢೀರನೆ ಹೋಗಿದ್ದರು. ಆರೋಗ್ಯ ತೀರಾ ಕ್ಷೀಣಿಸಿದ್ದರೂ ಅವನಿಗೆ ಅದು ಒಂದು ಸಂಭ್ರಮವೇ, ಅದರಲ್ಲೂ ಎಲ್ಲರೂ ಜೊತೆಯಲ್ಲಿ ಕೂತು ಊಟ ಮಾಡಿದ್ದನ್ನೂ, ಮಾಯಾ ಕನ್ನಡ ಕಲಿತು ಚೂರು ಮಾತಾಡಿದ್ದನ್ನೂ ಅವನ ಹೆಸರು ಬರೆಯಲು ಪ್ರಯತ್ನಿಸಿದ್ದನ್ನೂ ಕಂಡು ಹಿಗ್ಗಿನ ಬುಗ್ಗೆಯಾಗಿದ್ದ, ಮಕ್ಕಳಿಗೆ ಸಿಹಿ ತಿನಿಸು ಇತ್ಯಾದಿ ಉಪಚಾರ ಮಾಡುವಂತೆ ಲಕ್ಷ್ಮೀಯತ್ತೆಗೆ (ಎಂದಿನಂತೆ) ಸೂಚನೆ ಕೊಟ್ಟ, ಅಲ್ಲಿಂದ ಹೊರಡುವಾಗ ಅವರಿಬ್ಬರೂ ಅವನ ಆಶೀರ್ವಾದ ಪಡೆದು ಹೊರಟರು ಎಂಬ ಸಂಗತಿ ನನಗೆ ಅತ್ಯಂತ ತೃಪ್ತಿಕರವಾದುದು, ಮುಂದೆ ಕೆಲವೇ ದಿನಗಳಲ್ಲಿ ಅವನ ಪ್ರಾಣಪಕ್ಷಿ...

ಇಷ್ಟೇ ಏನು? ಒಬ್ಬ ವ್ಯಕ್ತಿಯನ್ನು ಸಂಪೂರ್ಣವಾಗಿ ಅರಿತುಕೊಂಡೆ ಎನ್ನಲು ಸಾಧ್ಯವೇ? ಒಂದಿಡೀ ಜೀವಮಾನದ ಅನುಭವಗಳನ್ನು ಕೆಲವೇ ಪದಗಳಲ್ಲಿ ಅಥವಾ ಪುಟಗಳಲ್ಲಿ ಹಿಡಿದಿಡಲು ಆದೀತೇ? ಊಂಹೂಂ. ನಾಪಣ್ಣಯ್ಯ ಮಾವ, ಲೋಕಕ್ಕೆ ನೀನು ವಿಜ್ಞಾನಿ, ಬರಹಗಾರ, ಸಂಪಾದಕ, ಸಂಘಟಕ, ಹವ್ಯಾಸಿ ಹಾಡುಗಾರ ಹಾಗೂ ನಟ ಇತ್ಯಾದಿ ಆಗಿದ್ದಿರಬಹುದು. ಈ ಲೇಖನದಲ್ಲಿ ಬೆಳಕು ಕಾಣದ, ನಿನ್ನ ಜೊತೆಗಿನ ಅದೆಷ್ಟೋ ಒಡನಾಟಗಳು ಅನುಭವಗಳು ಕಥೆಗಳು ಇವೆ, ಇರಲಿ, ಊರ್ಜಾ ಹೇಳಿದಂತೆ ಅವುಗಳನ್ನೆಲ್ಲ ಬೆಚ್ಚಗೆ ಕಾಪಿಟ್ಟುಕೊಳ್ಳುವ ಭಾಗ್ಯ ನನ್ನದು. ನೀನೂ ನಿನ್ನ ಮನೆಯವರೂ ಮೊಗೆಮೊಗೆದು ಕೊಟ್ಟ ನಿರಪೇಕ್ಷ ನಿರ್ವ್ಯಾಜ ಪ್ರೀತಿ ದೊಡ್ಡದು.

*

ಕನ್ನಡ ಭಾಷಾಜ್ಞಾನಿ ಮಾತ್ರವಲ್ಲ – ಜೀವ ರಾಸಾಯನಿಕ ಶಾಸ್ತ್ರ ವಿಜ್ಞಾನಿ ಕೂಡ

– ಸಿ. ಕೆ. ಮಂಜುನಾಥ್

೧೯೮೦ರ ಸೆಪ್ಟೆಂಬರ್ ತಿಂಗಳಲ್ಲಿ ನಾನು ಚಿಕಾಗೊ ವಿಶ್ವವಿದ್ಯಾಲಯದ ಮೆಡಿಸಿನ್ ವಿಭಾಗದಲ್ಲಿ ಸಂಶೋಧನೆ ಮಾಡಲು ಬಂದೆ, ಆಗತಾನೆ ಭಾರತೀಯ ವಿದ್ಯಾ ಸಂಸ್ಥೆಯ ಜೀವ ರಾಸಾಯನಿಕ ವಿಭಾಗದಲ್ಲಿ ಡಾಕ್ಟೊರೇಟ್ ಥೀಸಿಸ್ ಬರೆದು 'ತೇಲಿಸೊ ಇಲ್ಲ ಮುಳುಗಿಸೊ' ಎಂದು ದೇವರ ಮೇಲೆ ಭಾರ ಹಾಕಿ ಬಂದಿದ್ದೆ. ಡಿಗ್ರಿ ಇನ್ನೂ ಬಂದಿರಲಿಲ್ಲ. ಪ್ರೊ. ಅರ್ನೆಸ್ಟ್ ಪೇಜ್ ಎಂಬ ಹೆಸರಾಂತ ಹೃದಯತಜ್ಞರ ಲ್ಯಾಬಿನಲ್ಲಿ ಪೋಸ್ಟ್ ಡಾಕ್ ಕೆಲಸ ದೊರಕಿದ ಖುಷಿಯಲ್ಲಿದ್ದೆ. ಪ್ರೊ. ಪೇಜ್ ಅವರ ಲ್ಯಾಬಿನಲ್ಲಿ ಮೊದಲ ಬಾರಿಗೆ ಕಾಲಿಟ್ಟಾಗ ನನಗೆ ಒಂದು ದೊಡ್ಡ ಅಚ್ಚರಿ ಕಾದಿತ್ತು. ತಮ್ಮ ಲ್ಯಾಬಿನ ಉದ್ಯೋಗಿಗಳನ್ನು ಪರಿಚಯ ಮಾಡಿಸಿದ ಮೇಲೆ ಪ್ರೊ. ಪೇಜ್ ನನ್ನ ಕೈಗೆ ಒಂದು ಚೀಟಿಯನ್ನಿಟ್ಟು 'ದಿಸ್ ಪರ್ಸನ್ ವಾಂಟ್ಸ್ ಟು ಮೀಟ್ ಯು. ಹಿ ವೆಂಟ್ ಟು ದಿ ಸೇಮ್ ಸ್ಕೂಲ್ ಆಸ್ ಯು' ಎಂದರು. ಚೀಟಿಯಲ್ಲಿ ಐತಾಳರ ಹೆಸರು, ಫೋನ್ ನಂಬರ್ ಇತ್ತು, ಸರಿ. ಅವರನ್ನು ಹುಡುಕಿಕೊಂಡು ಹೊರಟೆ. ಬಹಳ ಕಷ್ಟಪಟ್ಟು ಅವರ ರೂಮ್ ಪತ್ತೆ ಹಚ್ಚಿದೆ. ಅಲ್ಲಿ ಒಬ್ಬ ಹಿರಿಯ ವ್ಯಕ್ತಿ (ಐತಾಳರಿಗೆ ಆಗ 48 ವರ್ಷ ವಯಸ್ಸು) ಬಿಳಿಯ ಲ್ಯಾಬ್ ಕೋಟ್ ಧರಿಸಿ ಕೆಲಸ ಮಾಡುತ್ತಿದ್ದರು. ನನ್ನನ್ನು ಕಂಡೊಡನೆ 'ಓ ಬನ್ನಿ ಬನ್ನಿ, ರೂಮ್ ಸುಲಭವಾಗಿ ಸಿಕ್ತಾ?' ಎಂದು ಕನ್ನಡದಲ್ಲಿ ಕೇಳಿದರು. ನನಗಾದ ಸಂತೋಷ ಅಷ್ಟಿಷ್ಟಲ್ಲ! ಕಾಡಿನಲ್ಲಿ ಕಳೆದುಹೋದಾಗ ಮನೆ ಮಂದಿಯನ್ನು ಭೇಟಿಯಾದಷ್ಟೇ

ಖುಷಿಯಾಯಿತು. ಸುಮಾರು ಹೊತ್ತು ಕನ್ನಡದಲ್ಲೇ ಮಾತಾಡಿ ಪರಸ್ಪರ ಪರಿಚಯ ಮಾಡಿಕೊಂಡೆವು. ನಾನು ಪ್ರೊ. ಪೇಜ್ ಅವರ ಲ್ಯಾಬಿಗೆ ಬರುವ ವಿಚಾರ ಐತಾಳರಿಗೆ ಹೇಗೆ ಗೊತ್ತಾಯಿತು? ಎಂಬುದು ಇಂದಿಗೂ ಪ್ರಶ್ನಾರ್ಥಕವಾಗಿಯೇ ಉಳಿದಿದೆ. ಅದೇನೇ ಇರಲಿ. ಅಂದಿನಿಂದ ಶುರುವಾದ ನಮ್ಮ ಗೆಳೆತನ ಬೆಳೆಯುತ್ತಲೇ ಹೋಯಿತು.

ನಾವಿಬ್ಬರೂ ಜೀವ ರಾಸಾಯನಿಕ ವಿಜ್ಞಾನಿಗಳು, ಆದರೆ ಅವರ ಲ್ಯಾಬಿಗೆ ಹೋದಾಗ ನಾವೆಂದೂ ವಿಜ್ಞಾನದ ಬಗ್ಗೆ ಮಾತಾಡುತ್ತಿರಲಿಲ್ಲ. ನಮ್ಮ ಸಂಭಾಷಣೆ ಎಲ್ಲ ಹಳೆಯ ಜೋಕುಗಳನ್ನು ಹಂಚಿಕೊಳ್ಳುವ ಬಗ್ಗೆ ಆಗಿತ್ತು. ಸಾಲದ್ದಕ್ಕೆ ಐತಾಳರ ನಾಮಕರಣ ಕುಚೋದ್ಯ ಬೇರೆ ನಗು ತರಿಸುತ್ತಿತ್ತು– ತಂಬಾಕಯ್ಯ, ಕೋಲಣ್ಣ, ಕರತಾರ ಇತ್ಯಾದಿ ಇತ್ಯಾದಿ. ನಾನು ಕಾರು ಕೊಂಡ ಮೇಲೆ ಐತಾಳರ ಕಾರ್ಡ್ಸ್ ಗುಂಪಿನ ಪರಿಚಯವಾಯಿತು. ಇವರೆಲ್ಲರೂ ಕನ್ನಡದವರೇ, ಎಲ್ಲರೂ ತಮಾಷೆ ಸ್ವಭಾವದವರೇ. ಹೀಗಾಗಿ ಹೊಸ ದೇಶಕ್ಕೆ ಬಂದೆ ಎಂಬ ಭಾವನೆಯೇ ನನಗೆ ಬರಲಿಲ್ಲ. ಆ ದಿನಗಳ ನೆನಪು ನಲವತ್ತು ವರ್ಷ ಕಳೆದರೂ ಇಂದಿಗೂ ಹಸಿರಾಗಿದೆ.

ಕನ್ನಡ ಭಾಷೆಯ ಅಭಿಮಾನಿಗಳು ಅಮೆರಿಕಾದಲ್ಲಿ ಬಹಳ ಮಂದಿ ಇದ್ದಾರೆ, ಯಾರಿಗಾದರೂ ತಮ್ಮ ಭಾಷೆಯ ಬಗ್ಗೆ ಅಭಿಮಾನ, ಪ್ರೇಮ ಇರುವುದು ಸ್ವಾಭಾವಿಕವೇ ಆದರೆ ಕನ್ನಡ ಭಾಷೆಯನ್ನು ಆಳವಾಗಿ ಅರಿತವರು ಬಹಳ ಕಡಿಮೆ ಮಂದಿ ಇಲ್ಲಿ. ಇದಕ್ಕೆ ಕಾರಣವೂ ಇದೆ. 1960ರ ದಶಕದಲ್ಲಿ ಮೊದಲ ಬಾರಿಗೆ ಅಮೆರಿಕಾಗೆ ಕನ್ನಡಿಗರ ವಲಸೆ ಶುರುವಾದಾಗ ಬಂದವರು ವೈದ್ಯರು. ಅವರಲ್ಲಿ ನನ್ನ ಅಣ್ಣನೂ ಒಬ್ಬ. ಅಮೆರಿಕನ್ನರಿಗೆ ಇನ್ನೂ ಭಾರತೀಯರ ಭಾಷೆ ಮತ್ತು ಸಂಸ್ಕೃತಿಯ ಪರಿಚಯವಿರಲಿಲ್ಲ. ಹಾಗಾಗಿ ಕನ್ನಡಿಗರು ತಮ್ಮತನವನ್ನು ಮರೆಮಾಚಿದರು. ಅಮೆರಿಕನ್ನರಂತೆ ಆಡಲು ಹೋಗಿ ಇವರಲ್ಲಿ ಕೆಲವರು ಕನ್ನಡ ಮಾತಾಡುವುದು ತಮ್ಮ ಅಂತಸ್ತಿಗೆ ಕಡಿಮೆ ಎಂಬ ತಾತ್ಸಾರ ಮನೋಭಾವವನ್ನು ತಳೆದರು. ಪರಿಸ್ಥಿತಿ ಹೀಗಿದ್ದ ಸಮಯದಲ್ಲಿ ಅಮೆರಿಕಾಗೆ ಕಾಲಿಟ್ಟವರು ಡಾ. ಐತಾಳರು.

1970ರ ದಶಕದಲ್ಲಿ ಅಮೆರಿಕಾಗೆ ಬಂದ ಐತಾಳರು ಕನ್ನಡ ನುಡಿಯನ್ನು ದಿಟ್ಟತನದಿಂದ ನುಡಿದರು. ಕನ್ನಡದ ಹಿರಿಯ ಕವಿಗಳು, ಬರಹಗಾರರನ್ನು ತಮ್ಮ ಮನೆಗೆ ಬರಮಾಡಿಕೊಂಡು ಅವರ ಕೃತಿಗಳ ಕುರಿತು ಕಿರು ಸಾಹಿತ್ಯ ಗೋಷ್ಠಿಗಳನ್ನು ನಡೆಸಿದರು. ಇದಕ್ಕೆ ಕಾರಣ ಅವರ ಮಾತೃ ಭಾಷಾಭಿಮಾನ ಮಾತ್ರವಲ್ಲ ಕನ್ನಡ ಭಾಷೆಯಲ್ಲಿ ಅವರಿಗಿದ್ದ ಪ್ರಾವೀಣ್ಯತೆ. ಯಾವುದೇ ಭಾಷೆಯಲ್ಲಾಗಲಿ– ಕನ್ನಡದಲ್ಲಾಗಲಿ ಅಥವಾ ಇಂಗ್ಲಿಷಿನಲ್ಲಾಗಲಿ– ಪರಿಣತಿಯನ್ನು ಗಳಿಸಬೇಕಾದರೆ ಹಲವು ದಶಕಗಳೇ ಬೇಕು. ವ್ಯಾಕರಣ, ಸಾವಿರಾರು ಪದಗಳ ಬಹುತೇಕ ಅರ್ಥ ಮತ್ತು ಪ್ರಯೋಗ ಮುಂತಾದ ಹಲವಾರು ವಿಷಯಗಳನ್ನು ಪರಿಶ್ರಮದಿಂದ ಅರಿತಿರಬೇಕು. ಇಷ್ಟಿಲ್ಲದೆ ಕನ್ನಡದಲ್ಲಿ ಕಾವ್ಯವನ್ನೋ, ಲೇಖನವನ್ನೋ ಬರೆಯಹೊರಟರೆ ಮುಗ್ಗರಿಸಿ ಬಿದ್ದು

ನಗೆಪಾಟಲಾಗಬೇಕಾಗುತ್ತದೆ! ಡಾ. ಐತಾಳರು ಕನ್ನಡ ಬರಹಗಾರರಲ್ಲಿ ಉನ್ನತ ಮಟ್ಟದ ಸಾಧನೆ ಮಾಡಿದವರು ಅನೇಕ ಪುಸ್ತಕಗಳನ್ನು, ಲೇಖನಗಳನ್ನು ಲೀಲಾಜಾಲವಾಗಿ ಬರೆದು ಪ್ರಕಟಿಸಿದವರು. ಅಮೆರಿಕಾದಲ್ಲಿ ನೆಲೆಸಿರುವ ಕನ್ನಡಿಗರಿಗೆ ಇದು ಸರಳ ಕಾರ್ಯವಲ್ಲ. ಚಿಕಾಗೊ ಕನ್ನಡ ಕೂಟ ಮತ್ತು ಇತರ ರಂಗ ಮಂಟಪಗಳಲ್ಲಿ ಐತಾಳರು ಹಾಸ್ಯ ನಾಟಕಗಳನ್ನು ಆಡಿಸಿ ಅದರಲ್ಲಿ ತಾವೂ ನಟರಾಗಿ ಸಭಿಕರನ್ನು ರಂಜಿಸಿದವರು. ಜೀವನಪರ್ಯಂತ ಅಮೆರಿಕಾದ ಯಾವುದೇ ಕನ್ನಡ ಸಾಹಿತ್ಯ ಗೋಷ್ಠಿಯನ್ನು ತಪ್ಪಿಸಿಕೊಳ್ಳದಂತಹ ಛಲ, ಕನ್ನಡಾಭಿಮಾನ ಐತಾಳರದ್ದು! ಇದನ್ನು ಎಲ್ಲರೂ ಮೆಚ್ಚಲೇಬೇಕು.

ಡಾ. ಐತಾಳರ ಹಾಸ್ಯ ಸ್ವಭಾವ, ಮಗುವಿನೊಂದಿಗೆ ಮಗುವಾಗಿ ಆಡುವ ಪ್ರವೃತ್ತಿಯನ್ನು ಕಂಡವರಿಗೆ ಅವರು ಚಿಕಾಗೊ ವಿಶ್ವವಿದ್ಯಾಲಯದಂತಹ ಹೆಸರಾಂತ ಸಂಸ್ಥೆಯಲ್ಲಿ ಹಿರಿಯ ಸಂಶೋಧಕರು ಎಂಬ ವಿಷಯದ ಅರಿವಿರಲಾರದು. ಇದು ಐತಾಳರ ಬಹುಮುಖ ಪ್ರತಿಭೆಯ ಮೂಲ ಸ್ವರೂಪ, ಈ ಹಿಂದೆ ಕನ್ನಡ ಗ್ರಂಥವೊಂದನ್ನು ರಚಿಸಬೇಕಾದರೆ ಲೇಖಕನಿಗೆ ಇರಬೇಕಾದ ಪ್ರಾವೀಣ್ಯತೆ, ಅರ್ಹತೆಗಳನ್ನು ವಿವರಿಸಿದ್ದೆ. ಆದರೆ ಕನ್ನಡದಲ್ಲಿ ವೈಜ್ಞಾನಿಕ ಗ್ರಂಥವನ್ನು ರಚಿಸುವುದು ಎವರೆಸ್ಟ್ ಪರ್ವತವನ್ನು ಹತ್ತಿದಂತೆ! ಇಂತಹ ಕಾರ್ಯವನ್ನು ಮಾಡಿದ ಮಹಾ ಸಾಹಸಿ ಐತಾಳರು. 2011ನೆಯ ಇಸವಿಯಲ್ಲಿ ಇವರು ಬರೆದು ಪ್ರಕಟಿಸಿದ ಗ್ರಂಥ 'ಜೀವನ ರಹಸ್ಯ'. ಇದರ ಶೀರ್ಷಿಕೆಯನ್ನು ಓದಿ ಈ ಗ್ರಂಥ ಐತಾಳರ ತುಂಬು ಜೀವನದ ರಹಸ್ಯ ಎಂದು ತಿಳಿಯಬೇಡಿ. (ಅವರು ಅಂತರ್ಗತರಾದಾಗ ಅವರಿಗೆ 90 ತುಂಬಿತ್ತು.) ಈ ಪುಸ್ತಕ, ಮಾನವನನ್ನೂ ಒಳಗೊಂಡು, ಪ್ರಪಂಚದ ಜೀವಿಗಳ ಜನ್ಮ, ಬೆಳವಣಿಗೆ ಮತ್ತು ಮೃತ್ಯುಗಳ ಹಿಂದಿನ ರಾಸಾಯನಿಕ ವಿಧಿಗಳನ್ನು ವಿವರಿಸುವ ಒಂದು ವೈಜ್ಞಾನಿಕ ಗ್ರಂಥ.

ಇದು ಐತಾಳರ ಎರಡನೆಯ ಆತ್ಮಚರಿತ್ರೆ ಎಂದರೂ ತಪ್ಪಾಗಲಾರದು, ಈ ಮಾತನ್ನು ಇನ್ನೂ ಸ್ವಲ್ಪ ಸ್ಪಷ್ಟೀಕರಿಸುತ್ತೇನೆ 'ಜೀವನ ರಹಸ್ಯ'ವನ್ನು ಅಣು ಜೀವ ವಿಜ್ಞಾನದ ಒಂದು ಸ್ಥೂಲ ಪರಿಚಯ ಎಂದು ಐತಾಳರೇ ಹೇಳಿಕೊಂಡಿದ್ದಾರೆ. ಇದನ್ನು ಓದಿ ಅರ್ಥ ಮಾಡಿಕೊಳ್ಳಲು ಜೀವ ವಿಜ್ಞಾನ ಶಾಸ್ತ್ರದ ಜ್ಞಾನವಿರಬೇಕು. ಇತರ ವಿಭಾಗಗಳ ವಿಜ್ಞಾನಿಗಳು ಕೂಡಾ (ಉದಾಹರಣೆಗೆ ಭೌತಶಾಸ್ತ್ರ, ರಾಸಾಯನಿಕ ಶಾಸ್ತ್ರ, ಜೀವಶಾಸ್ತ್ರ ಇತ್ಯಾದಿ) ಸ್ವಲ್ಪ ಕಷ್ಟಪಡಬೇಕು. ಇನ್ನು ವಿಜ್ಞಾನಿಗಳಲ್ಲದ ಓದುಗರ ಪಾಡೇನು? 'ನೀರಿಳಿಯದ ಗಂಟಲೊಳ್ ಕಡುಬಂ ತುರುಕಿದಂತೆ' ಎಂದು ಮುದ್ದಣ-ಮನೋರಮೆಯರ ಸಲ್ಲಾಪದಲ್ಲಿ ಮನೋರಮೆ ವಿಲಾಪಿಸಿದ್ದು ನೆನಪಿಗೆ ಬರುತ್ತದೆ. ಆದರೆ ವಿಜ್ಞಾನದ ಅರಿವನ್ನು ಬದಿಗಿಟ್ಟರೂ ಐತಾಳರ 'ನಿರಂತರ ವಿದ್ಯಾರ್ಥಿ' ವ್ಯಕ್ತಿತ್ವ ಈ ಗ್ರಂಥ ರಚನೆಯಲ್ಲಿ ಕಂಡುಬರುತ್ತದೆ.

ನನ್ನ ಮತ್ತು ಐತಾಳರ ನಿಕಟ ಸಂಪರ್ಕವಿದ್ದದ್ದು 1985ರವರೆಗೆ ಮಾತ್ರ ಆಗ ಅವರಿಗೆ 53 ವರ್ಷ ವಯಸ್ಸು, ಅಲ್ಲಿಯವರೆಗೆ ಅವರು ಮಾಡಿದ ಸಂಶೋಧನೆ 'ಜೀವನ ರಹಸ್ಯ' ಪುಸ್ತಕದ ಹತ್ತನೆಯ ಅಧ್ಯಾಯದವರೆಗೆ ಸಾಗುತ್ತದೆ. ಮುಂದಿನ ಹದಿನೈದು ಅಧ್ಯಾಯಗಳಲ್ಲಿ ಐತಾಳರು ಅಣುಜೀವ ವಿಜ್ಞಾನದ ಅತ್ಯಾಧುನಿಕ ಮತ್ತು ಅತಿ ಸೂಕ್ಷ್ಮ ವಿವರಗಳನ್ನು ನೀಡುತ್ತಾರೆ. ಈ ಪುಸ್ತಕದ ಮುನ್ನುಡಿ ಬರೆದವರು ನನ್ನ ಸನ್ಮಿತ್ರ ಡಾ. ಸಿ. ಚಂದ್ರಶೇಖರಪ್ಪ. ತಮ್ಮ ಇಡೀ ಜೀವನವನ್ನು ಅಣು ಜೀವ ವಿಜ್ಞಾನಕ್ಕೆ ಮುಡುಪಾಗಿಟ್ಟವರು. 'ಜೀವನ ರಹಸ್ಯ' ಪುಸ್ತಕದ ಹಿಂದಿನ ಪರಿಶ್ರಮ, ಪ್ರಾವೀಣ್ಯತೆಯ ಬಗ್ಗೆ ಬೆರಗನ್ನು ವ್ಯಕ್ತಪಡಿಸಿದಾರೆ. ಐತಾಳರು 2001ನೆಯ ಇಸವಿಯಲ್ಲಿ– ತಮ್ಮ 69ನೆಯ ವಯಸ್ಸಿನಲ್ಲಿ ನಿವೃತ್ತರಾದರು. ಅವರು 'ಜೀವನ ರಹಸ್ಯ'ವನ್ನು ಪ್ರಕಟಿಸಿದ್ದು 2011ರಲ್ಲಿ ಅಂದರೆ ತಮ್ಮ 79ನೆಯ ವರ್ಷ ವಯಸ್ಸಿನಲ್ಲಿ. ಅದೂ ಕನ್ನಡದ ಮೊಟ್ಟಮೊದಲ ಅಣು ಜೀವಶಾಸ್ತ್ರದ ಗ್ರಂಥಕಾರರಾಗಿ (ನನಗೆ ಅರಿವಿದ್ದಂತೆ) ಡಾ. ಐತಾಳರ ನಿರಂತರ ವಿಜ್ಞಾನದಲ್ಲಿ ಜ್ಞಾನ ಸಂಪಾದನೆಯ ಜೀವನಾದ್ಯಂತ ದೃಢ ತಪಸ್ಸಿಗೆ, ವನೋವೃತ್ತಿಗೆ ಈ ಗ್ರಂಥವೇ ಚಿರ ಸಾಕ್ಷಿ.

'ಜೀವನ ರಹಸ್ಯ' ಐತಾಳರ ಮಹಾ ಕೃತಿ, ತಮ್ಮ ಶರೀರದ ಬಗ್ಗೆ ಕುತೂಹಲವಿರುವ ಕನ್ನಡಿಗರು ಇದನ್ನು ಓದಬೇಕು. ಓದುಗರಿಗೆ ನನ್ನ ಸಲಹೆ ಇಷ್ಟೇ. ನೀವು ಓದುವ ಮುನ್ನ ನಿಮ್ಮ ಕೈಯನ್ನು ಸೂಕ್ಷ್ಮವಾಗಿ ನೋಡಿಕೊಳ್ಳಿ. ನಿಮ್ಮಲ್ಲೆ ಹಸ್ತಮುದ್ರಿಕಾ ಶಾಸ್ತ್ರದ ಜ್ಞಾನವಿರುವವರಿಗೆ ತಮ್ಮ ಕೈಯ ಪ್ರತಿ ರೇಖೆಯೂ ಗೊತ್ತಿರಬಹುದು. ಆದರೆ ನಿಮ್ಮ ಕೈಯಲ್ಲಿರುವ ಜೀವಕಣಗಳ ಬಗ್ಗೆ ಬಹುಶಃ ಏನೂ ತಿಳಿದಿರಲಾರದು. ಫೈಬ್ರೊಬ್ಲಾಸ್ಟ್ ಮುಂತಾದ ಹಲವಾರು ವಿಧದ ಜೀವ ಕಣಗಳು ನಿಮ್ಮ ಕೈಯಲ್ಲಿವೆ. ಅವು ತಮ್ಮ ಕಾರ್ಯವನ್ನು ಸರಿಯಾಗಿ ನಿರ್ವಹಿಸದಿದ್ದಲ್ಲಿ ನಿಮ್ಮ ಕೈಗೆ ಆಗುವ ಗಾಯ ವಾಸಿಯಾಗುವುದಿಲ್ಲ, ನಿಮ್ಮ ಮುಷ್ಟಿಯಲ್ಲಿ ಶಕ್ತಿ ಇರುವುದಿಲ್ಲ, ಬಿಸಿ, ತಣ್ಣಗಿನ ತಾಪದ ಅರಿವಿರುವುದಿಲ್ಲ. ಇಷ್ಟಾದರೂ ಈ ಜೀವಕಣಗಳ ಅಸ್ತಿತ್ವ ನಿಮ್ಮ ಗಮನಕ್ಕೆ ಬಂದಿರಲಾರದು. ಕೈ ಮೇಲೆ ಒಂದು ಮಚ್ಚೆಯಾದರೆ ಮಾತ್ರ 'ಕ್ಯಾನ್ಸರ್ ಇರಬಹುದೇನೋ' ಎಂದು ಬೆದರಿ ಜನ ಡಾಕ್ಟರ ಬಳಿ ಓಡುತ್ತಾರೆ. ಈ ಜೀವಕಣಗಳ ಸ್ವರೂಪವೇ 'ಜೀವನ ರಹಸ್ಯ'ದ ವಿಷಯ. ಹುಟ್ಟಿದಾಗ ಆರು ಪೌಂಡ್ ಇದ್ದ ಮಗು ಬೆಳೆದು ಯುವಕ/ ಯುವತಿಯಾಗಲು ಈ ಜೀವಕಣಗಳ ಸಂಖ್ಯೆ ಹೆಚ್ಚಾಗಬೇಕು. ಆದರೆ ಅವುಗಳ ಗಾತ್ರ, ಮತ್ತು ಶರೀರದಲ್ಲಿ ಅವು ವಹಿಸುವ ಪಾತ್ರದಲ್ಲಿ ಕೊಂಚವೂ ವ್ಯತ್ಯಾಸ ಇರಕೂಡದು. ಇಂತಹ ಕ್ರಿಯೆ ಹೇಗೆ ನಡೆಯುತ್ತದೆ ಎಂಬುದನ್ನು ಬಿಡಿಸಿ ಹೇಳಿದ್ದಾರೆ ಐತಾಳರು. ಹಾಗೆಯೇ ನಾವು ತಿಂದು ಪಚನವಾದ ಬಾಳೆ ಹಣ್ಣು, ಇಡ್ಲಿಯಿಂದ ಜೀವಕಣಗಳು 'ಶಕ್ತಿ'ಯನ್ನು ಉತ್ಪಾದಿಸುತ್ತವೆ ಎಂಬ ಮರ್ಮವನ್ನು ಓದುಗರು ತೆಂಗಿನಕಾಯಿ ತುರಿಯುವಾಗ ಜ್ಞಾಪಿಸಿಕೊಳ್ಳಬಹುದು. ಇಷ್ಟೆಲ್ಲ ರಹಸ್ಯಗಳನ್ನು ವಿಜ್ಞಾನಿಗಳು ಹೇಗೆ

ಭೇದಿಸುತ್ತಾರೆ ಎಂಬುದನ್ನು ಅಲ್ಲಲ್ಲಿ ತಿಳಿಸಿದ್ದಾರೆ. ಅಣು ಜೀವ ವಿಜ್ಞಾನಿಗಳು 'ವಿಶ್ವಾಮಿತ್ರ ಸೃಷ್ಟಿ'ಯಲ್ಲಿ ತೊಡಗಿ ಡಾಲಿಯನ್ನು ಸೃಜಿಸಿದ ಕಥೆಯೂ ಇಲ್ಲಿದೆ. ಇದು ವಿಶ್ವಕ್ಕೆ ಮೈತ್ರಿಯೋ ಕಳಂಕವೋ ಕಾದು ನೋಡಬೇಕು. ಪ್ರಸ್ತುತ ಅಣುಜೀವ ವಿಜ್ಞಾನ ಈ ಪುಸ್ತಕದ ಗಡಿಯನ್ನು ದಾಟಿ ಬಹಳ ಮುಂದುವರಿದಿದೆ. ಉದಾಹರಣೆಗೆ mRNA ವ್ಯಾಕ್ಸೀನುಗಳು 2011ರಲ್ಲಿ ಬಂದಿರಲಿಲ್ಲ. ಕೋವಿಡ್ ಎಂಬ ಪದವೇ ಗೊತ್ತಿರಲಿಲ್ಲ. ಆದರೂ ಈ ಪುಸ್ತಕ ಅಣುಜೀವ ವಿಜ್ಞಾನಕ್ಕೆ ಒಂದು ದೊಡ್ಡ ಮೆಟ್ಟಿಲು ಎಂದು ಹೇಳಬಹುದು.

ಅಣುಜೀವ ವಿಜ್ಞಾನದ ರಾಸಾಯನಿಕ ತಂತ್ರಗಳನ್ನು ಬಿಡಿಸಿ ಹೇಳಿದ ಮೇಲೆ ಡಾ. ಐತಾಳರು ತಮ್ಮ ಉಪಸಂಹಾರದಲ್ಲಿ ಜೀವ, ಆತ್ಮ ಮುಂತಾದ ಗಹನವಾದ ವಿಷಯಗಳ ಬಗ್ಗೆ ತಮ್ಮ ಅನುಭವಪೂರ್ಣ ಅನಿಸಿಕೆಗಳನ್ನು ಮಂಡಿಸುತ್ತಾರೆ. ಹೈಡ್ರೊಜನ್ನಿನಂತಹ ಸರಳ ಪರಮಾಣುವಿನಿಂದ 13 ಬಿಲಿಯನ್ ವರ್ಷಗಳ ಹಿಂದೆ ಆರಂಭವಾಗಿ ನನ್ನ ಮತ್ತು ನಿಮ್ಮ ಪ್ರಕೃತ ಶರೀರದತನಕ ಬಂದಿರುವ ಮತ್ತು ಇನ್ನೂ ನಡೆಯುತ್ತಿರುವ ಸೃಷ್ಟಿ ಕಾರ್ಯದಲ್ಲಿ 'ನಾನು' ಎಂದು ತನ್ನನ್ನೇ ಗುರುತಿಸಿಕೊಳ್ಳುವ ಆತ್ಮ ಉದ್ಭವ ಮತ್ತು ಪಾತ್ರವನ್ನು ಈ ವೇದಾಂತ ಜ್ಞಾನಿ ಚಿಂತಿಸಿದ್ದಾರೆ. ಇದಕ್ಕೆ ಉತ್ತರ ವಿಜ್ಞಾನದಲ್ಲಿಲ್ಲ. 'ತತ್ ತ್ವಂ ಅಸಿ' ಎಂದು ಶ್ರೀ ಶಂಕರಾಚಾರ್ಯರು ಪ್ರತಿಪಾದಿಸಿದ ವೇದೋಕ್ತಿಯಲ್ಲಿದೆ. ವಿಜ್ಞಾನಿಗೂ, ಕುರಿ ಕಾಯುವ ಅಜ್ಞಾನಿಗೂ ಏನೂ ವ್ಯತ್ಯಾಸವಿಲ್ಲದಿದ್ದರೆ ನಾವೇಕೆ ಜೀವನಪರ್ಯಂತ ಓದಿ ತಲೆ ಕೆಡಿಸಿಕೊಳ್ಳಬೇಕು? ಎಂಬ ಪ್ರಶ್ನೆ ಓದುಗರಲ್ಲಿ ಮೂಡಬಹುದು. ಇದಕ್ಕೆ ಉತ್ತರವನ್ನು ಪ್ರಕೃತಿಯೇ ನೀಡುತ್ತದೆ. ಒಂದೇ ಜೈಗೋಟ್‌ನಿಂದ ಉದ್ಭವವಾದ ಜೀವಕಣಗಳು ಮಿದುಳಿನಲ್ಲಿ ಹೋಗಿ ನೆಲೆಸಬಹುದು ಅಥವಾ ಗುದದ್ವಾರದಲ್ಲಿ, ಅದು ಅವುಗಳ ಪ್ರಾರಬ್ಧ ಕರ್ಮದಂತೆ, ಹಾಗೆಂದ ಮಾತ್ರಕ್ಕೆ ದೇಹದಲ್ಲಿ ಅವುಗಳ ಪಾತ್ರ, ಪ್ರಾಮುಖ್ಯತೆ ಹೆಚ್ಚು ಅಥವಾ ಕಡಿಮೆ ಎನ್ನಿಸಿಕೊಳ್ಳುವುದಿಲ್ಲ. ಮಾನವ ಮತ್ತು ಪ್ರಕೃತಿ ಬೇರೆ ಬೇರೆಯಲ್ಲ, ಮಾನವನೇ ಪ್ರಕೃತಿ, ಪ್ರಕೃತಿಯೇ ಮಾನವ, ಎಂತಹ ಹೆಸರಾಂತ ವಿಜ್ಞಾನಿಯೂ ಕೂಡಾ ಪ್ರಕೃತಿಯ ಒಂದು ಸ್ವರೂಪವೇ, ತಾನು ಬೇರೆ ಎಂದು ತಿಳಿದವನು ಮಾತ್ರ ಅಜ್ಞಾನಿ.

'ಚದುರರ್ ನಿಜದಿಂ ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತಮತಿಗಳ್.' ಎಂದು ಕವಿರಾಜಮಾರ್ಗದಲ್ಲಿ ಶ್ರೀವಿಜಯ ಹೇಳಿದ್ದು ಐತಾಳರನ್ನು ಕುರಿತಾಗಿಯೇ ಇರಬೇಕು! ಕರ್ನಾಟಕಕ್ಕೆ ಈಗ ಬೇಕಾಗಿಹುದು ಕನ್ನಡ ವಿಜ್ಞಾನ 'ಪದವನರಿದು ನುಡಿಯಲುಮ್, ನುಡಿದುದನರಿಯಲುಮಾರ್ಪ ನಾಡವರ್ಗಳ್'. ಮುಂದಾದರೂ ಇಂತಾದರೆ ಅದು ಡಾ. ಐತಾಳರಂತಹ ಕನ್ನಡ ಭಾಷಾ ಜ್ಞಾನಿ–ವಿಜ್ಞಾನಿಗಳಿಗೆ ಸಲ್ಲುವ ಮನ್ನಣೆ ಮತ್ತು ಕನ್ನಡ ಜನತೆಯ ಕೃತಜ್ಞತಾಪೂರ್ವಕ ವಂದನೆ!

*

ಐತಾಳರ ಭಾವುಕ ನೆನಪುಗಳು

ಅಂತರಾಳದ ಅನಿಸಿಕೆಗಳು!

– ಮೈ. ಶ್ರೀ. ನಟರಾಜ

ಕನ್ನಡದ ಕಾರಣದಿಂದಲೇ ಪರಿಚಿತರಾಗಿ, ಅಮೆರಿಕದ ಕನ್ನಡ ಸಾಹಿತ್ಯ ಚಟುವಟಿಕೆಗಳ ಒಡನಾಟದಲ್ಲಿ ಆಪ್ತರಾಗಿ, ಸಹಚಿಂತಕರಾಗಿ, ಸಹಸಂಘಟಕರಾಗಿ ಮತ್ತು ಸಕ್ರಿಯ ಕಾರ್ಯಕರ್ತರಾಗಿ, ಹತ್ತಿರದ ಹಿರಿಯಣ್ಣನಂತಿದ್ದ ನಾಗ ಐತಾಳರು ನನಗೆ ತುಂಬಾ ಬೇಕಾದವರಲ್ಲಿ ಪ್ರಮುಖರಾಗಿದ್ದರು. ಇದು ಕೇವಲ ಅಭಿಮಾನದ ಮಾತಲ್ಲ, ಅಂತರಂಗದ ಮಾತು. 'ಆಹಿತಾನಲ' ಎಂಬ ಕಾವ್ಯನಾಮದ ಐತಾಳರು ಸುಮಾರು ಮೂರು ದಶಕಗಳಿಂದ ಎಡಬಿಡದೆ ಬರೆಹದ ವಿವಿಧ ಪ್ರಕಾರಗಳಲ್ಲಿ ತೊಡಗಿಸಿಕೊಂಡಿದ್ದ ಅಮೆರಿಕದ ಕನ್ನಡಿಗರಲ್ಲಿ ಹಿರಿಯರು ಹಾಗು ಮುಖ್ಯರು. ವೃತ್ತಿಜೀವನದಲ್ಲಿ ವಿಜ್ಞಾನಿಯಾಗಿ ಉನ್ನತಮಟ್ಟದ ಸಾಧನೆಗಳನ್ನು ಮಾಡುತ್ತಲೇ ಕನ್ನಡ ಸಾಹಿತ್ಯವನ್ನು ಗಂಭೀರವಾಗಿ ಅಭ್ಯಸಿಸಿ ಅನೇಕ ಪುಸ್ತಕಗಳನ್ನು ಬರೆದು ಪ್ರಕಟಿಸಿರುವುದರ ಜೊತೆಗೆ ಹಲವಾರು ಗ್ರಂಥಗಳ ಮುಖ್ಯ ಸಂಪಾದಕತ್ವ ವಹಿಸಿಕೊಂಡ ಕೀರ್ತಿ ಇವರದ್ದು. ಕತೆ, ಕಾದಂಬರಿ, ಪ್ರಬಂಧ ಹೀಗೆ ಹಲವು ಸಾಹಿತ್ಯ ಪ್ರಕಾರಗಳ ಜೊತೆಗೆ ಜೀವ ರಾಸಾಯನಶಾಸ್ತ್ರವನ್ನು ಕುರಿತ ವೈಜ್ಞಾನಿಕ ಉದ್ಗ್ರಂಥವೊಂದನ್ನು ಕನ್ನಡದಲ್ಲಿ ಬರೆದ ಏಕೈಕ ವ್ಯಕ್ತಿ. ಅಮೆರಿಕದಲ್ಲಿ ಕನ್ನಡ–ಸಾಹಿತ್ಯಕ್ಕೋಸ್ಕರವಾಗಿಯೇ ಸ್ಥಾಪಿಸಲಾದ 'ಕನ್ನಡ ಸಾಹಿತ್ಯ ರಂಗ' ಎಂಬ ಸಂಸ್ಥೆಯ ಆಡಳಿತ ಮಂಡಲಿಯ ಅಧ್ಯಕ್ಷರಾಗಿ ಐತಾಳರು ನಮಗೆಲ್ಲಾ

ಮಾರ್ಗದರ್ಶಕರಾಗಿದ್ದರು. ಹತ್ತಾರು ವರ್ಷಗಳಿಂದ ಶ್ರೀಯುತರ ಸ್ನೇಹದ ಲಾಭವನ್ನು ಪಡೆದಿದ್ದ ನನಗೆ ಅವರ ಮಿತಿಯಿಲ್ಲದ ಸಾಹಿತ್ಯೋತ್ಸಾಹವನ್ನು ಹತ್ತಿರದಿಂದ ಕಂಡು ಅನುಭವಿಸಿ ಆಶ್ಚರ್ಯಪಡುವ ಮತ್ತು ಅದರಿಂದ ಉತ್ತೇಜಿತನಾಗುವ ಅವಕಾಶ ಹೇರಳವಾಗಿ ಸಿಕ್ಕಿದೆ. ಸಹಸ್ರಚಂದ್ರ ದರ್ಶನವನ್ನು ಕಂಡ ಅಮೆರಿಕದ ಕೆಲವೇ ಕನ್ನಡ ಬರಹಗಾರರಲ್ಲಿ ಒಬ್ಬರಾದ ಐತಾಳರು ತಮ್ಮ ವಯಸ್ಸಿನ ಮಿತಿಯನ್ನಾಗಲೀ, ಕಣ್ಣಿನ ತೊಂದರೆಯನ್ನಾಗಲೀ ನೆಪವನ್ನಾಗಿಸದೇ ನಿರಂತರವಾಗಿ ಗಣಕದ ಮುಂದೆ ಕುಳಿತು ತಮ್ಮ ಬರವಣಿಗೆಯ ಕೃಷಿಯನ್ನು ಮುಂದುವರಿಸಿದ್ದಾರೆ ಹಾಗು ಇತರ ಬರಹಗಾರರಿಗೆ ಆದರ್ಶಪ್ರಾಯರಾಗಿದ್ದರು. ಅವರು ನಿವೃತ್ತರಾಗಿ ಕ್ಯಾಲಿಫೋರ್ನಿಯಾದಲ್ಲಿ ನೆಲೆಸಿದ ನಂತರ 'ಸಾಹಿತ್ಯಾಂಜಲಿ' ಎಂಬ ಸಂಸ್ಥೆಯನ್ನು ಸ್ಥಾಪಿಸಿ ಸಾಹಿತ್ಯ ಸಂಕಿರಣಗಳನ್ನು ಆಗಾಗ್ಗೆ ನಡೆಸುತ್ತಿದ್ದರು. ತಾವೇ ಬರೆದ ಹಾಗು ಇತರರು ಬರೆದ ಲೇಖನಗಳನ್ನು ಒಟ್ಟುಗೂಡಿಸಿ ಸಂಕಲನರೂಪದಲ್ಲಿ ಪ್ರಕಟಿಸಿದ್ದರು. ಹೀಗೆ, ಕನ್ನಡದ ಹಲವು ಪ್ರಮುಖ ಸಾಹಿತಿಗಳ ಕುರಿತ ಪ್ರಬುದ್ಧ ಲೇಖನಗಳ ಸಂಕಲನಗಳನ್ನು ಪ್ರಕಟಿಸಿ ಪ್ರಖ್ಯಾತರಾಗಿದ್ದರು. ನನ್ನ ಅಂಕಣ ಬರಹಗಳ ಎರಡನೆಯ ಸಂಪುಟ 'ಜಾಲತರಂಗಿಣಿ' ಎಂಬ ಪುಸ್ತಕವನ್ನು ಪ್ರಕಟಿಸುವಾಗ 'ಅಭಿನವ'ದೊಂದಿಗೆ ಕೈಜೋಡಿಸಲು ತಮ್ಮ 'ಸಾಹಿತ್ಯಾಂಜಲಿ' ಸಂಸ್ಥೆಯ ಮೂಲಕ ನನಗೆ ಮಾಡಿದ ಉಪಕಾರವನ್ನು ಕೃತಜ್ಞತೆಯಿಂದ ಇಲ್ಲಿ ನೆನೆದರೆ ಅಪ್ರಸ್ತುತವಾಗಲಾರದು.

ಸ್ವರಚಿತ ಕತೆ, ಕಾದಂಬರಿ, ಪ್ರಬಂಧ ಹಾಗೂ ವಿಮರ್ಶೆಗಳನ್ನು ಪ್ರಕಟಿಸಿ, ಹಲವು ಗ್ರಂಥಗಳನ್ನು ಸಂಪಾದಿಸಿ ಖ್ಯಾತರಾದ ಐತಾಳರು, ತಾವು ಅನುಭವಿಸಿದ ಇಡೀ ಜೀವನವನ್ನು ಮುಗಿಲೆತ್ತರದಿಂದ ನೋಡುತ್ತಾ, ಪಕ್ಷಿನೋಟದ ಚಿತ್ರವನ್ನು ತಮ್ಮ ವಾರ್ಧಕ್ಯದ ದಿನಗಳಲ್ಲಿ ಸೆರೆಹಿಡಿದಿದ್ದಾರೆ. ಹೀಗೆ ಮಾಡುವಾಗ ಬಾಲ್ಯದ ನೆನಪಿನಾಳಕ್ಕಿಳಿದಿದ್ದಾರೆ! ಬಾಲ್ಯ ಮತ್ತು ಯೌವನದಿಂದ ಹಿಡಿದು ವರ್ತಮಾನದವರೆಗೆ, ತಮ್ಮ ಜೀವನವನ್ನು ಮತ್ತೊಮ್ಮೆ ಸವಿದಿದ್ದಾರೆ. ತಮ್ಮ ಮನೆ, ಊರು, ಮನೆಮಂದಿ, ಹಾಗೂ ತಮ್ಮ ವ್ಯಕ್ತಿತ್ವವನ್ನು ರೂಪಿಸಿದ ಹಲವಾರು ಪಾತ್ರಗಳನ್ನು ಕಣ್ಣಿಗೆ ಕಟ್ಟುವಂತೆ ವಿವರಿಸಿ ದಾಖಲಿಸಿ ಸುಖಿಸಿದ್ದಾರೆ. ಹೀಗೆ, ಐತಾಳರ 'ಕಾಲ ಉರುಳಿ ಉಳಿದುದು ನೆನಪಷ್ಟೇ!' ಕೃತಿಯಲ್ಲಿ ಸುಮಾರು ಏಳೆಂಟು ದಶಕಗಳ ಸಂಗತಿಗಳು ದಾಖಲೆಯಾಗಿವೆ. ಈ ಪುಸ್ತಕ ತಮ್ಮ 'ಆತ್ಮಚರಿತ್ರೆ'ಯಲ್ಲವೆಂದು ಐತಾಳರು ಮೊದಲೇ ಘೋಷಿಸಿದ್ದಾರೆಯಾದರೂ ಇದು ಅವರ ಸುತ್ತ ನಡೆದ ಸಂಗತಿಗಳ ಕಥಾನಕದ ತುಣುಕುಗಳಂತೂ ಹೌದು. ಇಂದಿನ ನೆನಪಿನಲ್ಲಿ ಹಿಂದೆ ನಡೆದದ್ದನ್ನು ದಾಖಲಿಸುವಾಗ ಆಗಬಹುದಾದ 'ಪುನರ್ನಿರ್ಮಾಣ' ('ರಿಕನ್ಸ್ಟ್ರಕ್ಷನ್') ಇಲ್ಲೂ ಆಗಿದ್ದಿರಲೂಬಹುದು. ಆದರೆ, ಈ ರೀತಿಯ 'ರಿಕನ್ಸ್ಟ್ರಕ್ಷನ್' ನಡೆದಿದ್ದರೂ 'ಇಂಟೆನ್ಷನಲಿ-ಇಂಪೋಸ್ಡ್ ಟ್ರಾನ್ಸ್‌ಫರ್ಮೇಷನ್' (ಬೇಕೆಂದೇ ಹೇರಿದ

ಪರಿವರ್ತನೆ) ನಡೆದಿಲ್ಲವೆಂದೇ ಹೇಳಬಹುದು. ಅದೇ ಕಾರಣಕ್ಕಾಗಿ ನೆನಪಿನ ಕಥನ ಪ್ರಾಮಾಣಿಕವಾಗಿಯೇ ನಡೆದಿದೆ. ಇಡೀ ಕಥಾನಕದ ಮಹತ್ವ ಇರುವುದು ಇಲ್ಲಿಯೇ!

ನಾಗ ಐತಾಳರು ತುಂಬಿದ ಕುಟುಂಬದಲ್ಲಿ ಬೆಳೆದವರು; ಮನೆಯ ತುಂಬ ಮಕ್ಕಳು, ಹಲವು ಹಿರಿಯ ತಲೆಗಳು, ಜಮೀನುದಾರ ಕುಟುಂಬದ ತಳಪಾಯವಾದ ಆಳು-ಕಾಳುಗಳು, ಜಾನುವಾರುಗಳು, ಅವಿಭಕ್ತ ಶ್ರೀಮಂತ ಕುಟುಂಬದಲ್ಲಿ ತಿಂದುತೇಗುವ ಅನೇಕ ಉಪಕೃತರು, ಆಗಂತುಕರು (ಕೆಲವು ಅವಕಾಶವಾದಿಗಳು, ಕೃತಘ್ನರು ಮತ್ತು ಸ್ವಾರ್ಥಿಗಳೂ ಸಹ) ಒಂದು ಕಡೆಯಾದರೆ, ಒಂದಿಲ್ಲ ಒಂದು ರೀತಿ ತಮ್ಮ ಮೇಲೆ ಪ್ರಭಾವ ಬೀರಿದ ಊರಿನ ಹಲವು-ಹತ್ತು ಸಮಸ್ತರು, ಅಧ್ಯಾಪಕರು, ನೆಂಟರು-ಇಷ್ಟರು, ಮದುವೆಗಳ ಮೂಲಕ ಉಂಟಾದ ಸಂಬಂಧಿಗಳು, ಹೀಗೆ ಇವರು ಪಟ್ಟಿ ಮಾಡುವ ಪಾತ್ರಗಳು ಕಣ್ಮುಂದೆ ತೆರೆದುಕೊಳ್ಳುತ್ತವೆ. ಅವರೊಡನಾಟದ ಸಂಗತಿಗಳನ್ನು ಮಾರ್ದವತೆಯಿಂದ ಮೆಲಕುಹಾಕುವಾಗ ಇವರು ಕಹಿಯನ್ನು ಕಕ್ಕಿದ್ದು ಅಪರೂಪ; ಅಮೃತಸಿಂಚನವೇ ಹೆಚ್ಚು ಪಾಲು! ಇನ್ನು ಬಾಳಿನಲ್ಲಿ ವಿಶೇಷವಾದ ಸ್ಥಾನವುಳ್ಳ, ತಾಯಿ-ತಂದೆ, ಅಣ್ಣ-ತಮ್ಮಂದಿರು, ಅಕ್ಕ-ತಂಗಿಯರು, ಅತ್ತೆ-ಮಾವಂದಿರು, ಚಿಕ್ಕಪ್ಪ-ದೊಡ್ಡಪ್ಪಂದಿರು, ಜ್ಞಾತಿಗಳು, ಹಳೆಯ-ಹೊಸ ಗೆಳೆಯರು, ಮಡದಿ-ಮಕ್ಕಳು ಎಲ್ಲರೂ ಓದುಗರ ಮುಂದೆ ಪ್ರತ್ಯಕ್ಷರಾಗುತ್ತಾರೆ. ಐತಾಳರ ಮರುಕಳಿಸಿದ ಕಕ್ಕುಲಾತಿಗೆ ಒಳಗಾಗುತ್ತಾರೆ.

ಜೀವನದಲ್ಲಿ ಉಣ್ಣಬಹುದಾದ ಕಷ್ಟ-ಸುಖ, ನೋವು-ನಲಿವು, ಕೀರ್ತಿ, ಶ್ರೇಯ ಎಲ್ಲವನ್ನೂ ಕಂಡು ಪಕ್ವವಾಗಿರುವ ವ್ಯಕ್ತಿಯೊಬ್ಬನ ಔದಾರ್ಯಶೀಲ, ಕ್ಷಮಾಪೂರ್ಣ ಸ್ಪಂದನಗಳಿಗೆ ಒಳಗಾಗುತ್ತಾರೆ. ಇವರು ಅಭಿವ್ಯಕ್ತಿಗೊಳಿಸುವ ಪ್ರೀತಿ-ವಿಶ್ವಾಸಗಳನ್ನಾಗಲೀ, ಮನಸ್ತಾಪದ ಛಾಯೆಗಳನ್ನಾಗಲೀ, ಭಕ್ತಿಭಾವ ಅಥವಾ ತಿರಸ್ಕಾರಗಳನ್ನಾಗಲೀ ಕೇಳಿ/ ಓದಿ ಸಂತಸಪಡಲು ಯಾ ಹುಬ್ಬೇರಿಸಲು ಐತಾಳರ ಪ್ರಪಂಚದ ಅನೇಕ ಪಾತ್ರಗಳು ನಮ್ಮ ನಡುವೆ ಇಲ್ಲವಲ್ಲ ಎಂಬುದು ಒಂದು ರೀತಿಯ ನಿರಾಸೆ, ಮತ್ತೊಂದು ರೀತಿಯ ಸಮಾಧಾನಕ್ಕೆ ಏಕಕಾಲದಲ್ಲಿ ಕಾರಣವಾಗುತ್ತದೆ! ಆದರೆ, ವರ್ತಮಾನ ಹಾಗಿರುವುದರಿಂದಲೇ ಐತಾಳರು ನೆಮ್ಮದಿಯ ಮನಸ್ಸಿನಿಂದ ಭೂತಕಾಲದ ಬಗ್ಗೆ ಬರೆಯಲು ಸಾಧ್ಯವಾಗಿದೆ ಎಂಬ ವಿಚಾರವೂ ಹೊಳೆಯುತ್ತದೆ! 'ನನಗಿನ್ನೇನೂ ಬೇಡ,' 'ನನ್ನವರು, ನನಗೆ ಪ್ರೀತಿ, ಪ್ರೇಮ, ಸ್ನೇಹ ನೀಡಿದ್ದಾರೆ, ಅವರಿಗೆಲ್ಲ ನಾನು ಋಣಿ' ಎಂಬುದನ್ನು ಖುದ್ದಾಗಿ, ಘಂಟಾಘೋಷವಾಗಿ ಉದ್ಘೋಷಿಸಿ, ಮನಸ್ಸಿನಲ್ಲಿ ಯಾರ ಬಗ್ಗೆಯಾಗಲೀ ಏನಾದರೂ ಕಹಿ ಉಳಿದಿದ್ದರೆ ಅದನ್ನು ವಿಸರ್ಜಿಸಿ, ನಿರ್ಮಲ ಪ್ರೇಮವನ್ನು ವ್ಯಕ್ತಪಡಿಸಿ ಸಮಾಧಾನದಿಂದಿರಬೇಕು ಎಂಬ ನಿರ್ವ್ಯಾಜಕತೆ ಮತ್ತು ಸಜ್ಜನಿಕೆ ಈ ಪುಸ್ತಕದ ಲೇಖನಗಳಲ್ಲಿ ತುಂಬಿಕೊಂಡಿವೆ. ಭಾವುಕತೆ ಇಲ್ಲಿನ ಲೇಖನಗಳ ಅವಿಭಾಜ್ಯ ಅಂಗ ಮತ್ತು ಐತಾಳರ ನೆನಪುಗಳ ಜೀವಾಳ. ಭಾವುಕತೆ ಎಂಬುದು ಎರಡಲುಗಿನ ಕತ್ತಿ; ಹೀಗಾಗಿ, ಹಲವೊಮ್ಮೆ ಅತಿಭಾವುಕತೆ ತಲೆಹಾಕಿದೆ. ಹೀಗಿದ್ದೂ ಭಾವನೆಗಳು

ಸಹಜವಾಗಿಯೇ ಅಭಿವ್ಯಕ್ತಿಗೊಂಡು ಟೀಕಾರ್ಹವೆನಿಸುವುದಿಲ್ಲ. ಇದಕ್ಕೆ ಕಾರಣ ಐತಾಳರು ತಮ್ಮ ಮನೆಯನ್ನು ವರ್ಣಿಸುವಾಗ ನಮ್ಮ ಮನಸ್ಸಿನ ಮೂಲೆಯಲ್ಲಿ ನಮ್ಮದೇ ಮನೆಯನ್ನು ಕಾಣುತ್ತೇವೆ. ಅವರು ತಮ್ಮ ಊರನ್ನು ವರ್ಣಿಸುವಾಗ ನಮ್ಮ ಊರು ಕಣ್ಮುಂದೆ ಸುಳಿಯುತ್ತದೆ, ಅವರ ತಂದೆ-ತಾಯಿಗಳು ನಮ್ಮ ತಂದೆ ತಾಯಿಗಳನ್ನೂ, ಅವರ ಉಪಾಧ್ಯಾಯರು, ನಮ್ಮ ಉಪಾಧ್ಯಾಯರನ್ನೂ ಅವರ ಮನೆಮಂದಿ ನಮ್ಮ ಮನೆಮಂದಿಯನ್ನೂ ನೆನಪಿಸುತ್ತಾರೆ. ಹಿಗಾಗಿ ಅವರ ಭಾವನೆಗಳು ನಮ್ಮವೂ ಆಗಿಬಿಡುತ್ತವೆ! ಆಗ ನಾವೂ ಭಾವುಕರಾಗುತ್ತೇವೆ, ಆ ಮನಃಸ್ಥಿತಿಯಲ್ಲಿ ಎಲ್ಲವೂ ಸಮರ್ಪಕವಾಗಿಯೇ ಕಾಣುತ್ತವೆ!

ಓದುಗರಿಗೆ ಹಿತವೆನಿಸುವ ಸಂಗತಿಗಳು ಪುಸ್ತಕದ ಉದ್ದಕ್ಕೂ ಇವೆ, ಆದರೆ, ನನಗೆ ತುಂಬಾ ಇಷ್ಟವಾದ ಮುಂದಿನ ಒಂದು ಉದಾಹರಣೆಯನ್ನು ಕೊಡದೇ ಈ ಲೇಖನವನ್ನು ಮುಗಿಸಲಾರೆ: 'ಯಾರು ಹಾಡಿದರೂ ನಮ್ಮ ತಾಯಿ ಹಾಡಿದಂತಿಲ್ಲ' ಎಂಬ ಅವರ ಉದ್ಗಾರ! ಅಲ್ಲಿ ಅಡಕವಾಗಿರುವ ಐತಾಳರ ಮಾತೃಪ್ರೇಮ, ಅವರಿಗೆ ಬಾಲ್ಯದಲ್ಲಿ ದೊರಕಿರಬಹುದಾದ ತಾಯ ಮಮತೆ, ಜೊತೆಗೆ ಬಾಲ್ಯದ ವಾತಾವರಣದಿಂದಲೇ ಸಮೃದ್ಧವಾಗಿ ಬೆಳೆದ ಅವರ ಜನಪದ ಗೀತೆಗಳ ಒಲವು ಇವೆಲ್ಲ ಹೇಗೆ ಅವರ ವ್ಯಕ್ತಿತ್ವದ ವಿಕಾಸಕ್ಕೆ ಕಾರಣವಾಗಿವೆ.

*

ಜೀವ ಜೀವನದ ಗೆಳೆಯ

– ರಮೇಶ್ ಚಕ್ರವರ್ತಿ

ನಾಗ ಐತಾಳರ ಪರಿಚಯ ಸುಮಾರು ನಾಲ್ಕು ದಶಕಗಳ ಹಿಂದೆ. ಆಗ ಸ್ಥಾಪಿಸಿದ ನಮ್ಮ ಕನ್ನಡ ಮಿತ್ರ ಕುಟುಂಬ ಇಂದಿಗೂ ಆತ್ಮೀಯವಾಗಿ, ಅನ್ಯೋನ್ಯವಾಗಿದೆ. ಯೌವನದ ಆ ಸಮೂಹದಲ್ಲಿ ಹಲವರು ಬ್ರಹ್ಮಚಾರಿಗಳಿದ್ದು ತರುವಾಯ ವಿವಾಹಿತರಾದವರು ಹಲವರು. ಆ ಅಸಂಪೂರ್ಣ ಪಟ್ಟಿ : ಐತಾಳ್, ಅಚ್ಯುತಮೂರ್ತಿ, ರಾಮಚಂದ್ರ, ಕೃಷ್ಣಮೂರ್ತಿ, ರಮೇಶ್ ಚಕ್ರವರ್ತಿ (ನಾನು), ಶ್ರೀಧರ್, ಶ್ರೀನಿವಾಸ ಭಟ್, ಮಂಜುನಾಥ್, ಕುಳ್ಳೇಗೌಡ, ಮೈಯ, ಇಂದುಶೇಖರ್, ತಿಮ್ಮಪ್ಪಯ್ಯ, ಗುಣ, ಸಾವಿತ್ರಿ, ರಘುರಾಮ್, ಅರುಣ ಶಾಸ್ತ್ರಿ, ಗೋವಿಂದರಾವ್– ಕ್ಷಮಿಸಬೇಕು, ಅವರ ಕುಟುಂಬಿಗಳ ಹೆಸರನ್ನು ನಮೂದಿಸದಿರದಕ್ಕೆ. ವಿವಿಧ ವೃತ್ತಿಗಳಲ್ಲಿ ಪರಿಣಿತರಾದ ಇವರೆಲ್ಲರೂ ಅವರವರ ಕೌಟುಂಬಿಕ ಹೊಣೆಗಾರಿಕೆಗಳನ್ನೂ ನಿಭಾಯಿಸಿ, ವಾರಾಂತ್ಯದಲ್ಲಿ ಯಾರದಾದರೂ ಮನೆಯಲ್ಲಿ ಸೇರುತ್ತಿದ್ದೆವು. ಹರಟೆ, ಹಾಡು, ಇಸ್ಪೀಟ್ ಮತ್ತು ಊಟದೊಂದಿಗೆ ನಲಿಯುತ್ತಿದ್ದೆವು.

ಐತಾಳರಿಗೆ ಸಾಹಿತ್ಯ, ಸಂಗೀತ (ಹಿಂದೂಸ್ತಾನಿ)ಗಳಲ್ಲಿ ಎಲ್ಲಿಲ್ಲದ ಉತ್ಸಾಹ ಹಾಗೂ ಆಸಕ್ತಿ, ನೆನಪುಗಳಿಂದ ಪೋಣಿಸಿದ ಅವರ ಹಳ್ಳಿಯ ಅನುಭಾವಿಕೆಗಳನ್ನು ವರ್ಣಮಯವಾಗಿ ರಾಗವಾಗಿ ವಿವರಿಸುತ್ತಿದ್ದರು. ಅವರ ಹಾಸ್ಯ, ಕುಹಕ ಬಹಳ ಸ್ವಾರಸ್ಯವಾಗಿರುತ್ತಿತ್ತು. ನನಗೆ ಚಿಕ್ಕಂದಿನಿಂದ ನಾಟಕದ ಗೀಳು ಬಹಳಿತ್ತು. ಶಾಲೆ,

ಕಾಲೇಜು, ಉದ್ಯೋಗದೆಡೆಯಲ್ಲಿ ನಾನಾ ನಾಟಕಗಳನ್ನು ನಟಿಸಿ, ನಿರ್ದೇಶಿಸಿ, ಪ್ರದರ್ಶಿಸಿದ್ದೆ. ಚಿಕಾಗೋ ನಗರಕ್ಕಾಗಮಿಸಿದ ಮೇಲೆ, ಸುಧಾ ರಾಮರಾಯರು ಹಿಂದು ಟೆಂಪಲ್ ಆಫ್ ಗ್ರೇಟರ್ ಚಿಕಾಗೊ ಕಟ್ಟಡ ನಿಧಿಸಂಗ್ರಹದನುಸಾರವಾಗಿ ಸಂಸ್ಕೃತ ನಾಟಕ ಪ್ರದರ್ಶಿಸಲು ನಮ್ಮನ್ನು ಹುರಿದುಂಬಿಸಿದರು. ಇದು ನಮ್ಮ ತಂಡದ ನಾಟಕ ಚಟದ ನಾಂದಿ ಆಯಿತು.

ನಮಗಾರಿಗೂ ಸಂಸ್ಕೃತ ಗಂಧ ಅಷ್ಟಿರಲಿಲ್ಲ. ಆದರೂ ರಾಮಚಂದ್ರರ ಮನೆಯಲ್ಲಿ ನೆಲಸಿದ್ದ ಸೀತಾರಾಮರ ವಿಗ್ರಹಕ್ಕೆ ಸ್ವಂತ ನೆಲೆ ಸ್ಥಾಪಿಸಿ (ದೇವಸ್ಥಾನ) ಸರ್ವ ಜನರಿಗೂ ಸಾಧ್ಯಮಾಡಬೇಕೆಂಬ ಧ್ಯೇಯದಿಂದ ನಮ್ಮ ಧರ್ಮದ ಮೂಲ ಭಾಷೆಯಲ್ಲೇ ಕಾಳಿದಾಸನ 'ಅಭಿಜ್ಞಾನ ಶಾಕುಂತಲ' ನಾಟಕ ಮಾಡಬೇಕೆಂದು ಒಪ್ಪಿದೆವು. ಸುಧಾ ಅವರಿಗೆ ಸಂಸ್ಕೃತ ಚೆನ್ನಾಗಿ ಬರುತ್ತಿತ್ತು. ಸತತವಾಗಿ ಅವರ ಮನೆಯಲ್ಲಿ ಎಲ್ಲರೂ ಸೇರಿ ಅಭ್ಯಸಿಸುತ್ತಿದ್ದೆವು. ಐತಾಳರಿಗೋ ಎಲ್ಲಿಲ್ಲದ ಸಡಗರ. ಚಾಚೂ ತಪ್ಪದೆ ಮಳೆಯೋ, ಛಳಿಯೋ ಸರಿಯಾದ ಹೊತ್ತಿಗೆ ಅವರ ಪಾತ್ರಾಭಿನಯಕ್ಕೆ ತೆರವಾಗುತ್ತಿದ್ದರು. ಅವರದು ಬಹಿರ್ಮುಖ (ಎಕ್ಸ್ಟ್ರೋವರ್ಟ್) ಮನೋಭಾವ. ಎಲ್ಲರನ್ನೂ ಮಾತಾಡಿಸಿ ನಗಿಸುವ ಸ್ವಭಾವ. ಅವರ ಟೀಕೆ, ಹಾಸ್ಯಗಳು ನಮ್ಮ ಕೂಟಕ್ಕೆ ಜೀವ ತುಂಬುತ್ತಿತ್ತು.

ನಾಟಕ ಯಶಸ್ವಿಯಾಗಿ ಎರಡು ದಿನ ದೊಡ್ಡ ನಾಟಕರಂಗದಲ್ಲಿ ನಡೆಯಿತು. ಮಂದಿರ ಭರ್ತಿಯಾಗಿ ಸುಮಾರು ಧನ ಸಂಗ್ರಹಿಸಿ ಹೆಮ್ಮೆಪಡುವಂತಾಯ್ತು ಅದಾದ ಮೇಲೆ ನಮ್ಮ ವಿದ್ಯಾರಣ್ಯ ಕನ್ನಡ ಕೂಟದ ಪ್ರಗತಿಗೆ ನೆರವಾದೆವು. ಪುರಂದರದಾಸ, ಕಲೀತ ಹುಡುಗಿ... ಇನ್ನೂ ಹಲವಾರು ನಾಟಕಗಳನ್ನು ವಾರ್ಷಿಕೋತ್ಸವದಲ್ಲಿ ಪ್ರದರ್ಶಿಸಿದೆವು. ನಾನು, ಐತಾಳ್, ಮಂಜುನಾಥ್, ಸುಭದ್ರ, ಸಾವಿತ್ರಿ ಹೆಚ್ಚಾಗಿ ಪಾಲ್ಗೊಳ್ಳುತ್ತಿದ್ದೆವು. ಆರಡಿ ಐತಾಳರ ಲವಲವಿಕೆಯಿಲ್ಲದೇ ನಮ್ಮ ಗುಂಪು ಹೀಗೆ ಸೇರುತ್ತಿರಲಿಲ್ಲವೇನೋ ಅನ್ನಿಸುತ್ತೆ! ಐತಾಳರ ಕನ್ನಡ ಪ್ರೇಮ ಬಹಳ ಅಗಾಧ! ಕಥಾ ರಚನೆ, ನಿರೂಪಣೆಯನ್ನು ಮನದಟ್ಟುವಂತೆ ಮಾಡುತ್ತಿದ್ದರು. ಕನ್ನಡ ಭಾಷೆಯನ್ನು ಅಮೆರಿಕದ ವಿಶ್ವವಿದ್ಯಾಲಯಗಳಲ್ಲಿ ವ್ಯಾಸಂಗ ಮಾಡಲು ಸಾಧ್ಯಗೊಳಿಸಬೇಕೆಂದು ಸಾಕಷ್ಟು ಶ್ರಮಪಟ್ಟು ಸಾಧಿಸಿದರು. ಹಲವಾರು ಪುಸ್ತಕಗಳನ್ನೂ ಪ್ರಕಟಿಸಿದರು.

ವಾರಾಂತ್ಯದಲ್ಲಿ ಯಾರದಾದರೊಬ್ಬರ ಮನೆಯಲ್ಲಿ (ಬಹಳಷ್ಟು ಸಲ ಅಚ್ಯುತಮೂರ್ತಿಗಳ ಮನೆಯಲ್ಲಿ) ಸೇರಿ ಇಸ್ಪೀಟ್ ರಮ್ಮಿ ಆಡುತ್ತಿದ್ದೆವು. ಆಟಕ್ಕಿಂತ ಹೆಚ್ಚು ಹರಟೆಯಲ್ಲೇ ಕಾಲದೂಡುತ್ತಿದ್ದೆವು. ರಾಮಚಂದ್ರ ಸೋಲುವಂತಾದಾಗ 'ಅದರಜ್ಜಿ ನಾ ಬಡಿಯ' ಐತಾಳರಿಗೂ ಸಾಮಾನ್ಯ ಬಳುವಳಿಕೆಯಾಗಿತ್ತು. ಅದರ ಉಚ್ಚಾರಣೆ, ಸಮಯ ನಿರ್ಧಾರಣೆ (ಟೈಮಿಂಗ್) ಎಲ್ಲರನ್ನೂ ನಗಿಸುತ್ತಿತ್ತು. 'ಇನ್ಮುಂದೆ ನಾನಾಡೋಲ್ಲ' ಎಂದು ಘಂಟೆಘಂಟೆಗೂ ಹೇಳುತ್ತಿದ್ದರು! ಮಧ್ಯರಾತ್ರಿಗೂ ಮೀರಿ ನಡೆಯುತ್ತಿತ್ತು ನಮ್ಮ ಕಾರ್ಡ್ ಜಾಗರಣೆ! ಇಂತಹ ಹಸನ್ಮುಖಿಯಾಗಿ, ನಗುತ ನಗಿಸುತಲಿದ್ದ, ಆತ್ಮೀಯ, ಪ್ರತಿಭಾನ್ವಿತ, ವಿಗ್ರಹಚಿತ್ರ ಐತಾಳರು ನಮ್ಮನ್ನಗಲಿದರೆಂದರೆ ನಂಬಲಾಗದು. *

ನಮ್ಮ ಹೆಮ್ಮೆಯ ವಿದ್ಯಾರಣ್ಣಿಗ ನಾಗಪ್ಪ ಐತಾಳ

– ಅಣ್ಣಾಪುರ್ ಶಿವಕುಮಾರ್

'ಶಿವಕುಮಾರ್, ಸ್ವಲ್ಪ ನನ್ನ ಜೊತೆ ಬನ್ನಿ'

'ಎಲ್ಲಿಗೆ ಸಾರ್?'

'ಬನ್ನೀಪ್ಪಾ, ನೀವು ನಾನು ಹೇಳ್ತೀನಿ'

ಹೀಗೆಂದು ಹೇಳಿ ನನ್ನನ್ನು ಕರೆದುಕೊಂಡು ಹೋದವರು ಮತ್ತಾರೂ ಅಲ್ಲ, ನಮ್ಮ ಚಿಕಾಗೋ ವಿದ್ಯಾರಣ್ಯ ಕನ್ನಡ ಕೂಟದ ಅತ್ಯಂತ ಜನಪ್ರಿಯ ಸದಸ್ಯರಾದ ಡಾಕ್ಟರ್ ನಾಗಪ್ಪ ಐತಾಳರೇ ಆಗಿದ್ದರು. ಸ್ಥಳ ಚಿಕಾಗೋದ ಉಪನಗರಗಳಲ್ಲಿ ಒಂದಾದ ಲೆಮಾಂಟ್‌ನಲ್ಲಿರುವ ಶ್ರೀರಾಮ ದೇವಾಲಯದ ಸಭಾಂಗಣದಲ್ಲಿ, ಸಂದರ್ಭ 1989ರ ದೀಪಾವಳಿ ಸಮಾರಂಭದ ಸಂಜೆ ಸಮಯ! ನಾನು ನನ್ನ ಪತ್ನಿ ಅನುಸೂಯ ಮತ್ತು ಮಕ್ಕಳೊಂದಿಗೆ ಸಭಾಂಗಣದ ಹಿಂಭಾಗದಲ್ಲೆಲ್ಲೋ ಸ್ನೇಹಿತರಾದ ರಮಾ ಮತ್ತು ತಿಮ್ಮಪ್ಪಯ್ಯ ಇವರೊಡನೆ ಕುಳಿತು ಆಗಾಗ ಹರಟೆ ಹೊಡೆಯುತ್ತಲೇ ವೇದಿಕೆಯ ಮೇಲಿನ ಆಗುಹೋಗುಗಳನ್ನು ವೀಕ್ಷಿಸುತ್ತಿದ್ದೆವು. ಐತಾಳರು ಇದ್ದಕ್ಕಿದ್ದಂತೆ ಬಂದು ಪಕ್ಕಕ್ಕೆ ನಿಂತು ನನ್ನ ಕೈ ಹಿಡಿದುಕೊಂಡು ಸೀದಾ ವೇದಿಕೆಯ ಮೇಲೆ ಕರೆದು (ಎಳೆದು)ಕೊಂಡು ಹೋದವರು, ಮೈಕ್ ಕೈಗೆ ತೆಗೆದುಕೊಂಡು 'ನೋಡಿ ಇಲ್ಲಿ, ಇವರೇ ನಮ್ಮ ಮುಂದಿನ ವರ್ಷಕ್ಕೆ ವಿದ್ಯಾರಣ್ಯ ಕನ್ನಡ ಕೂಟದ ಅಧ್ಯಕ್ಷರು. ಮನಸಾರೆ

ಒಪ್ಪಿಕೊಂಡಿದ್ದಾರೆ. ಒಳ್ಳೆಯ ವಿಜ್ಞಾನಿ. ದಕ್ಷತೆಯಿಂದ ನಮ್ಮ ಕನ್ನಡ ಕೂಟವನ್ನು ಮುನ್ನಡೆಸಿಕೊಂಡು ಹೋಗುವುದರಲ್ಲಿ ಅನುಮಾನವೇ ಇಲ್ಲ. ಎಲ್ಲರೂ ಒಮ್ಮೆ ಕೈ ತಟ್ಟಿ' ಎಂದು ಅನೌನ್ಸ್ ಮಾಡಿಬಿಡಬೇಕೆ! ನನಗೋ ಒಳ್ಳೆ ಶಾಕ್ ಹೊಡೆದಂತಾಯಿತು. 'ಐತಾಳರೇ, ಸ್ವಲ್ಪ ನಿಧಾನ, ಏನು ಹೇಳ್ತಾ ಇದೀರಾ ನೀವು? ನಾನು ಯಾವಾಗ ಒಪ್ಪಿಕೊಂಡೆ? ನನ್ನ ಪಾಡಿಗೆ ನಾನು ಹಿಂದೆ ಕುಳಿತಿದ್ದವನನ್ನು ಎಳಕೊಂಡು ಬಂದು ಅಧ್ಯಕ್ಷ ಎಂದು ಹೇಳ್ತಿದ್ದೀರಲ್ಲ!' ಎಂದೆ. 'ಇರಲಿ ಬಿಡಿ ಸಾರ್, ನೀವೇನೂ ಯೋಚನೆ ಮಾಡ್ಬೇಡಿ. ಸುಮ್ಮನೆ ಒಪ್ಪಿಕೊಳ್ಳಿ. ಯು ವಿಲ್ ಡು ಎ ವಂಡರಫುಲ್ ಜಾಬ್. ನಾವೆಲ್ಲಾ ನಿಮ್ಮ ಹಿಂದೇ ಇರ್ತೀವಿ' ಎಂದು ನನ್ನ ಬಾಯಿ ಕಟ್ಟಿಹಾಕಿದರು. ಅವರ ಒತ್ತಾಯಕ್ಕೆ ನನಗೆ ಏನೂ ಹೇಳಲು ತೋಚಲಿಲ್ಲ, ಅವರು ಹೇಳುತ್ತಿದ್ದ ಹಾಗೆಯೇ ಸಭೆಯಲ್ಲಿದ್ದವರೆಲ್ಲರೂ ಕೈ ತಟ್ಟಿಬಿಟ್ಟರು. ಅನಾಯಾಸದಿಂದ ಒದಗಿಬಂತು ಅಧ್ಯಕ್ಷನ ಪಟ್ಟ. ಈಗಿನ ದಿನಗಳಲ್ಲಿ ಪರಿಸ್ಥಿತಿ ಎಷ್ಟು ಬದಲಾಗಿದೆ ಅಲ್ಲವೇ? ಅಂತೂ ಇಂತೂ ಬಂತು ನನಗೂ ಒಂದು ಕಂತು! ಐತಾಳರ ಸ್ವಭಾವವೇ ಹಾಗಿತ್ತು. ಅವರ ಮಾತಿಗೆ ಬೆಲೆ ಕೊಡದಿದ್ದವರು ಹೆಚ್ಚು ಇರಲಿಕ್ಕಿಲ್ಲ. ಸದಾ ನಗೆಮುಖದ, ಹುಡುಗಾಟದ ಮಾತುಗಳಲ್ಲಿಯೂ ಒಂದು ರೀತಿಯ ಗಂಭೀರತೆ ಎದ್ದು ಕಾಣಿಸುತ್ತಿತ್ತು. ಅವರು ನನಗೆ ಅಧ್ಯಕ್ಷನಾಗಲು ಪ್ರೇರೇಪಣೆ ನೀಡಿ, ಕೊಟ್ಟ ಮಾತಿನಂತೆ ಸದಾ ನನ್ನ ಬೆಂಗಾವಲಿಗರಾಗಿದ್ದರು ಎಂದರೆ ಉತ್ಪ್ರೇಕ್ಷೆಯಲ್ಲ! ಅವರ ಸಲಹೆಯಂತೆ ನಮ್ಮ ಆರಂಭದ ಯುಗಾದಿ ಸಮಾರಂಭಕ್ಕೆ ಅಮೆರಿಕನ್ನಡ ಸಂಪಾದಕರಾದ ಹರಿಹರೇಶ್ವರ ಅವರು ಆಗಮಿಸಿ 'ವಿದೇಶದಲ್ಲಿ ಕನ್ನಡವನ್ನು ಉಳಿಸಿ ಬೆಳೆಸಿಕೊಂಡು ಹೋಗುವುದು ಹೇಗೆ' ಎನ್ನುವ ವಿಷಯದ ಬಗ್ಗೆ ಮಾತನಾಡಿದ್ದು ಎಲ್ಲರಿಗೂ ಮೆಚ್ಚುಗೆಯಾಯಿತು. ಐತಾಳರ ಬೆಂಬಲದಿಂದ ನನ್ನ ಅಧ್ಯಕ್ಷತೆಯಲ್ಲಿ ಕನ್ನಡ ಕೂಟ ಚೆನ್ನಾಗಿಯೇ ಮುನ್ನಡೆಯಿಟ್ಟಿತು ಎನ್ನುವ ಸಮಾಧಾನ ನನಗಂತೂ ಇದೆ! ಅವರಿಗೂ ಇತ್ತು ಎಂದು ನನ್ನ ನಂಬಿಕೆ!

ಐತಾಳರ ಪರಿಚಯ ನನಗಾದದ್ದು 1982ರಲ್ಲಿ ನನ್ನ ಐ.ಐ.ಎಸ್.ಸಿ. ಗೆಳೆಯರಾದ ಬಾಯಾರ್ ತಿಮ್ಮಪ್ಪಯ್ಯ ಮತ್ತು ಅವರ ಪತ್ನಿ ರಮಾ ಅವರ ಮನೆಯ ಔತಣಕೂಟವೊಂದರಲ್ಲಿ ಎಂದು ನನ್ನ ನೆನಪು. ನನಗಿಂತ ಸುಮಾರು ವರ್ಷದ ಹಿಂದೆಯೇ ಐ.ಐ.ಎಸ್.ಸಿ.ಯಲ್ಲಿನ ಬಯೋಕೆಮಿಸ್ಟ್ರಿ Biochemistry ವಿಭಾಗದ ಪ್ರೊಫೆಸರ್ ರಾಮಶರ್ಮ ಅವರ ಬಳಿ ಅವರು ಸಂಶೋಧನೆ ನಡೆಸಿ ಪಿಎಚ್.ಡಿ. ಪಡೆದು ಅಮೆರಿಕದಲ್ಲಿ ನೆಲಸಿದ್ದಾರೆ ಎನ್ನುವ ಮಾಹಿತಿ ನಾನು ಬೆಂಗಳೂರಿನಲ್ಲಿದ್ದಾಗಲೇ ದೊರಕಿತ್ತು. ಪ್ರಥಮ ಬಾರಿಗೆ ಪ್ರತ್ಯಕ್ಷವಾಗಿ ಅವರನ್ನು ಮತ್ತು ಲಕ್ಷ್ಮಿಯವರನ್ನು ನೋಡಿದಾಗಲೇ ನಾನು ಮತ್ತು ಅನುಸೂಯ ಇಬ್ಬರಿಗೂ ಅವರ ಬಗ್ಗೆ ಅಪಾರ ಗೌರವ ಮತ್ತು ಅಭಿಮಾನ ಮೂಡಿ ಬಂದಿತ್ತು. ವಿದ್ಯಾರಣ್ಯ ಕನ್ನಡ ಕೂಟಕ್ಕೆ ಸದಸ್ಯರಾಗಲು ಸೂಚಿಸಿ ಆಹ್ವಾನಿಸಿ, ನಂತರ ಕೂಟದ ಆಗುಹೋಗುಗಳಲ್ಲಿ ಸಕ್ರಿಯವಾಗಿ ಭಾಗವಹಿಸುವಂತೆ ಮಾಡಿದ್ದೂ

ಅವರೇ. ಐ.ಐ.ಎಸ್.ಸಿ. ನಂಟು ಮುಂದೆ ಇಲ್ಲಿ ನಾವು ಅವರ ಆತ್ಮೀಯರಾಗಲು ತಡವೇನೂ ಆಗಲಿಲ್ಲ. ಅಂದಿನ ದಿನಗಳಲ್ಲಿ ನಮ್ಮ ಕನ್ನಡ ಕೂಟದಲ್ಲಿ ಈಗಿನ ಅಗಾಧತೆಯಿರಲಿಲ್ಲ. ಕನ್ನಡ ಕೂಟದ ಸಮಾರಂಭಗಳಿಗೆಲ್ಲಾ ಊಟದ ವ್ಯವಸ್ಥೆ ಕೆಲವು ಸದಸ್ಯರುಗಳು ತಮ್ಮ ತಮ್ಮ ಮನೆಗಳಿಂದ ಮಾಡಿಕೊಂಡು ಬರುವ ರೂಢಿಯಿತ್ತು. ಸಾಮಾನ್ಯವಾಗಿ ಯಾರು ಅಧ್ಯಕ್ಷರುಗಳಾಗಿರುತ್ತಿದ್ದರೋ ಅವರು ಮತ್ತು ಅವರು ಆರಿಸಿಕೊಂಡ ಅವರ ಕಾರ್ಯಕಾರಿ ಸಮಿತಿಯವರಿಂದ ಹೆಚ್ಚಾಗಿ ಊಟದ ವ್ಯವಸ್ಥೆಯಾಗುತ್ತಿತ್ತು. ಇದರ ಜೊತೆ ನಮ್ಮ ಕನ್ನಡ ಕೂಟದಲ್ಲಿ ಕೆಲವಷ್ಟು ಮಹಿಳೆಯರು ಎಲ್ಲಾ ಕಾರ್ಯಕ್ರಮಗಳಿಗೂ ಅಡುಗೆ ಮಾಡಿಕೊಡುತ್ತಿದ್ದರು. ಐತಾಳರು ಇವರನ್ನು ಕನ್ನಡ ಕೂಟದ ಅನ್ನಪೂರ್ಣೆಯರೆಂದು ಹೆಸರಿಟ್ಟಿದ್ದರು. ಈ ಗುಂಪಿನಲ್ಲಿ ಐತಾಳರ ಪತ್ನಿ ಲಕ್ಷ್ಮಿ, ನನ್ನ ಅರ್ಧಾಂಗಿ ಅನುಸೂಯ, ಸುಭದ್ರ ರಾಮಚಂದ್ರ, ನಳಿನಿ ಮೈಯ, ರೋಹಿಣಿ ಉಡುಪ, ನಾರಾಯಣಮ್ಮ, ಜಯಮ್ಮ ಇವರುಗಳೂ ಇದ್ದರು. ಐತಾಳರು ಬಹಳ ಬುದ್ಧಿವಂತರು, ಐತಾಳರು ನನ್ನನ್ನು ಅಧ್ಯಕ್ಷನಾಗಲು ಒತ್ತಾಯಿಸಿದ್ದು ನನ್ನನ್ನು ನೋಡಿಯೋ ಅಥವಾ ನನ್ನ ಅರ್ಧಾಂಗಿಯ ಪಾಕ ಪಾರಂಗತ್ಯವನ್ನು ನೋಡಿಯೋ ಎನ್ನುವ ಅನುಮಾನ ನನಗಿನ್ನೂ ಇದೆ!

ಸ್ವಭಾವತಃ ಸ್ನೇಹಮಯಿಯಾದ ಐತಾಳರ ಮನೆಗೆ ಬಂದು ಹೋಗುವವರ ಬಳಗ ಹೆಚ್ಚಾಗಿಯೇ ಇತ್ತು. ಕರ್ನಾಟಕದಿಂದ ಬರುವ ನೃತ್ಯ, ಸಂಗೀತ ಕಲಾವಿದರಾಗಲೀ, ಸಾಹಿತಿಗಳಾಗಲೀ, ಇವರ ಮನೆಯ ಆತಿಥ್ಯ ಸ್ವೀಕರಿಸದೆ ಹೋಗಿದ್ದೇ ವಿರಳ. ನಾವು ಐ.ಐ.ಎಸ್.ಸಿ.ಯಿಂದ ಬಂದು ಇಲ್ಲಿ ವೃತ್ತಿಯಲ್ಲಿ ವಿಜ್ಞಾನಿಗಳೇ ಆಗಿದ್ದರೂ, ನಮ್ಮ ಭೇಟಿಯಾದಾಗ ನಮ್ಮ ಮಾತು ಕಥೆ ವಿಜ್ಞಾನಕ್ಕಿಂತಲೂ ಹೆಚ್ಚಾಗಿ ಸಾಹಿತ್ಯ, ನಾಟಕ, ಸಿನಿಮಾ, ಕ್ರಿಕೆಟ್, ಟೆನಿಸ್ ಮತ್ತಿತರ ಲೌಕಿಕ ವಿಷಯಗಳ ಬಗ್ಗೆಯೇ ಹೆಚ್ಚಾಗಿರುತ್ತಿತ್ತು. ಸುಮಾರಾಗಿ ಕನ್ನಡದ ಎಲ್ಲಾ ಹೆಸರಾಂತ ಕವಿಗಳೂ, ಸಾಹಿತಿಗಳೂ ನಮ್ಮ ಐತಾಳರ ಮನೆಯಲ್ಲಿ ಒಂದು ಸಾಹಿತ್ಯ ಸಂವಾದದಲ್ಲಿ ಭಾಗಿಯಾಗದೆ ಹೋದದ್ದೇ ಅಪರೂಪ. ಶಿವರಾಮ ಕಾರಂತ, ಯು.ಆರ್.ಅನಂತಮೂರ್ತಿ, ಲಕ್ಷ್ಮೀನಾರಾಯಣ ಭಟ್ಟರು, ಎಸ್. ಎಲ್. ಭೈರಪ್ಪ, ಡಿ. ಆರ್. ನಾಗರಾಜ್, ಜಿ. ಎಸ್. ಎಸ್., ಮತ್ತಿತರರ ಜೊತೆಗೆ ಅವರ ಮನೆಯಲ್ಲಿ ಬೆರೆಯುವ ಅವಕಾಶ ನನಗೂ ಸಿಕ್ಕಿದ್ದು ಅದೃಷ್ಟವೆಂದೇ ಹೇಳಬೇಕು. ಇಷ್ಟಿಟು ಬಳಗವೂ ಆಗಾಗ ಸೇರಿ ಸವಿಯುತ್ತಿದ್ದ ಸವಿನೆನಪುಗಳೂ ಹಲವಾರು.

ನಾನು ಮರೆಯುವುದಕ್ಕೆ ಮುಂಚೆಯೇ (ವಯಸ್ಸಾಯ್ತು ನೋಡಿ!) ಮತ್ತೊಂದು ಬಹಳ ಮುಖ್ಯವಾದ ವಿಷಯವನ್ನು ಇಲ್ಲಿ ಬರೆಯಲೇ ಬೇಕು. ಯಾವ ದಿನ ನನ್ನನ್ನು ಐತಾಳರು ಕನ್ನಡ ಕೂಟದ ಬಲೆಗೆಳೆದರೋ, ಅದೇ ಸಮಾರಂಭಕ್ಕೆ ಡಾಕ್ಟರ್ ಶೆಲ್ಡನ್ ಪಾಲಕ್ ಅವರೂ ಆಹ್ವಾನಿತರಾಗಿ ಬಂದಿದ್ದರು. (University of Chicago Dean of Sanskrit and Asian Cultural Studies) ಆಗಿದ್ದರು. ನಮ್ಮ ಯು. ಆರ್.

ಅನಂತಮೂರ್ತಿಯವರ ಪ್ರೇರೇಪಣೆಯಿಂದ ಕರ್ನಾಟಕದ ಭಾಷೆ, ಸಂಸ್ಕೃತಿಗಳನ್ನು ಅಲ್ಲಿಗೇ ಹೋಗಿ ಅನುಭವಿಸಿ, ಆನಂದಿಸಿ ನಮ್ಮ ಭಾಷೆ ಹಾಗೂ ಸಂಸ್ಕೃತಿಯನ್ನು ಅಮೆರಿಕಾದಲ್ಲಿಯೂ ಪಸರಿಸುವ ಆಸೆಯನ್ನು ಹೊತ್ತು ಬಂದಿದ್ದರು. ಇವರ ಈ ಅಭಿಲಾಷೆಗೆ ಒತ್ತು ಕೊಟ್ಟವರು ಅದೇ ಯೂನಿವರ್ಸಿಟಿಯಲ್ಲಿ (South Asian Languages and Civilizations) ಪ್ರೊಫೆಸರ್ ಆಗಿದ್ದ ಎ. ಕೆ. ರಾಮಾನುಜನ್ ಅವರು. ಇವರುಗಳ ಸತತ ಪ್ರಯತ್ನಗಳಿಂದ ಅಯೋವಾ ವಿಶ್ವವಿದ್ಯಾಲಯದಲ್ಲಿ ಕನ್ನಡ ಪೀಠ (Kannada Chair) ವನ್ನು ಸ್ಥಾಪಿಸುವ ತಯಾರಿ ಭರದಿಂದ ಸಾಗಿತ್ತು. ಇದೇ ಪ್ರಯತ್ನಕ್ಕೆ ಅಮೆರಿಕಾದ ಸ್ಥಳೀಯ ಕನ್ನಡಿಗರ ಬೇಡಿಕೆಗಳನ್ನು ಋಜುವಾತು ಮೂಲಕ ಸಲ್ಲಿಸಲು, ಹಾಗೂ ಇದರ ಖರ್ಚು ವೆಚ್ಚಕ್ಕೆ ಬೇಕಾಗಿದ್ದ ಧನಸಂಗ್ರಹಕ್ಕೆ ಅನುವಾಗಲು ನಮ್ಮ ಐತಾಳರು ಅವರನ್ನು ನಮ್ಮ ಕನ್ನಡ ಕೂಟಕ್ಕೆ ಕರೆತಂದಿದ್ದರು. ಅಂದು ಬೇರೂರಿದ ಅಮೆರಿಕದಲ್ಲಿ ಕನ್ನಡ ಕಲಿಯುವ ಕಲಿಸುವ ಅವಕಾಶ ಇಂದು ಪಸರಿಸಿ ನಿಂತಿದೆ ಎನ್ನುವುದು ಸಂತೋಷದ ವಿಷಯವೇ ಸರಿ. ಅಯೋವಾ ಕನ್ನಡ ಪೀಠವನ್ನು ಸ್ಥಾಪಿಸುವ ಭರದಲ್ಲಿ ರಾಮಾನುಜನ್ ಅವರೊಡನೆ ಚಿಗುರಿದ ಐತಾಳರ ಗೆಳೆತನ ಮುಂದಿನ ಎರಡು ಮೂರು ವರ್ಷಗಳಲ್ಲಿ ಅಧಿಕವಾಯಿತು. ಅಯೋವಾದ ಕನ್ನಡ ಪೀಠದ ಸ್ಥಾಪನೆಗೆ ಅನುವಾಗಲೆಂದೋ ಏನೋ ಐತಾಳರು ಕೊನೆಗೂ ವಿದ್ಯಾರಣ್ಯ ಕನ್ನಡ ಕೂಟದ ಉಪಾಧ್ಯಕ್ಷ ಸ್ಥಾನವನ್ನು ಒಪ್ಪಿಕೊಳ್ಳಲು ಕಾರಣವಾಯಿತು. ಏಕೆಂದರೆ ಅವರು ಕನ್ನಡ ಕೂಟದಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದರೂ ಸಹ ಅದೇಕೋ ಅದರ ಅಧ್ಯಕ್ಷ ಸ್ಥಾನವನ್ನು ಒಪ್ಪಿಕೊಳ್ಳಲು ಸಿದ್ಧರಿರಲಿಲ್ಲ. ಅವರು ಒಮ್ಮೆಯೂ ವಿದ್ಯಾರಣ್ಯ ಕನ್ನಡ ಕೂಟದ ಅಧ್ಯಕ್ಷರಾಗಲಿಲ್ಲವಲ್ಲ ಎನ್ನುವ ಕೊರತೆ ಅವರಿಗಿರಲಿಲ್ಲದಿದ್ದರೂ ನನಗಂತೂ ಇದೆ. ಇರಲಿ ಉಪಾಧ್ಯಕ್ಷರಾಗಿ ಅವರು 1991ರ ಗಣೇಶ ಚತುರ್ಥಿ ಸಮಾರಂಭದಲ್ಲಿ ಪ್ರಪ್ರಥಮವಾಗಿ ಕನ್ನಡ ಕವಿಗೋಷ್ಠಿಯೊಂದನ್ನು ನಡೆಸಿಕೊಟ್ಟರು. ಎ. ಕೆ. ರಾಮಾನುಜನ್ ಅವರೂ ಸಹ ಈ ಗೋಷ್ಠಿಯಲ್ಲಿ ಭಾಗವಹಿಸಿ ಅವರ 'ಕುಂಟೋ ಬಿಲ್ಲೆ' ಕೃತಿಯಿಂದ ಆಯ್ದ ಕೆಲವು ಕವನಗಳನ್ನು ಓದಿದ್ದರು. ಅಂತಹ ಒಂದು ಸಮರ್ಥ ಕವಿಗಳ ಸಮ್ಮಿಳನದಲ್ಲಿಯೂ ನನ್ನದೊಂದು 'ಕನ್ನಡಮ್ಮನ ಹಿತೋಪದೇಶ' ಎಂಬ ಕವನವನ್ನು ಬಲವಂತದಿಂದ ಒದಲು ಅವಕಾಶ ಮಾಡಿಕೊಟ್ಟದ್ದು ಜ್ಞಾಪಕದಲ್ಲಿದೆ. ಆ ಗೋಷ್ಠಿಯಲ್ಲಿಯೇ ಐತಾಳರು ಓದಿದ ತಮ್ಮ 'ಹಣತೆ ಮಿಡತೆ' ಎನ್ನುವ ಕವನ ಬಹಳ ಸೊಗಸಾಗಿತ್ತು. ಅದನ್ನು ಮತ್ತೆ ಜ್ಞಾಪಿಸಿಕೊಂಡು ನಿಮ್ಮೆಲ್ಲರಿಗೂ ಪರಿಚಯಿಸುವ ಅವಕಾಶವಿಂದು ಒದಗಿ ಬಂದಿದೆ.

ಹಣತೆ ಮಿಡತೆ

ಇರುಳು ಚಳಿ ಕೊರೆಯುತಿರೆ
ದೂರದಿ ಹಣತೆಯೊಂದು ಕುದಿಯುತ್ತಿತ್ತು
ಹಾರುತಿಹ ಮಿಡತೆಯೊಂದರ ಮನವ

ಆ ಮೀನು ಬೆಳಕು ಸೆಳೆಯುತ್ತಿತ್ತು.
ಬೆಚ್ಚನಪ್ಪುಗೆಯ ಬಯಸಿ
ಮನಸೋತು ಮಿಡತೆ ತಾ
ಗುನುಗುನುತ ಹಣತೆಯೆಡೆ
ಓಡೋಡಿ ಹಾರಿ ಬರುತ್ತಿತ್ತು.
ರೆಕ್ಕೆ ಬಡಿತಕೆ ಆದೊಂದಿ
ಆಚೀಚೆ ಮೈ ಹೊಂದಿ
ಮಿಡತೆಯಪ್ಪುಗೆಯಿಂದ
ತಪ್ಪಿಕೊಳ್ಳಲೆಂದು ಬಯಸುತ್ತಿತ್ತೇ
ಆದರೇನು?
ಕುರುಡು ಪ್ರೇಮದಿ ಮಿಡುಕುತ
ಬಿಡದೆ ಆ ಮಿಡತೆ ಸಡಗರದಿ
ಮರಮರಳಿ ಹಾರುತ ಬಂದು
ಕಡೆಗೊಮ್ಮೆ ಆ ಬೆಳಕನಾಲಂಗಿಸಿ
ಬೆಚ್ಚನೆಯ ಬಿಸಿಸುಖವ
ಕಿರುಕಾಲ ಅನುಭವಿಸಿ
ಚಣದಲೇ ಚರಚುರನೆ ಬೆಂದು
ದೀಪದ ಕೆಳಗಿನ ನೆರಳ
ಕತ್ತಲೆಯಲಿ ಬಿದ್ದು ಮರೆಯಾಯ್ತು .
ಹಣತೆಯೋ ಕ್ಷಣಕಾಲ ಕಿಣಕಿ
ಮರಳಿ ತನ್ನ ಪಾಡಿಗೆ ತಾ ಬೆಳಗುತ್ತಿತ್ತು
ಉರಿಯುತಿಹ ದೀಪವನಪ್ಪಿ
ಬೆಂಕಿ ಶಾಖಕೆ ತಾ ಬೆಂದು ಹೋಗುವೆನೆಂಬರಿವಿಲ್ಲದೇ
ಮನವೊಲಿದು ತನುವ ನೀಗಿದ ಆ ಮಿಡತೆಯ ನಡತೆಗೆ
ಮಿನುಗುತಿಹ ಆ ಹಣತೆಯದೇನು ಹೊಣೆ?

ನಾಗಪ್ಪ ಐತಾಳರ ಇನ್ನೊಂದು ವಿಶೇಷವೆಂದರೆ ಅವರಿಗೆ ಚಿಕ್ಕ ಮಕ್ಕಳ ಮೇಲಿದ್ದ ಅಪಾರ ಪ್ರೇಮ. ಅವರು ಎಲ್ಲಾ ಮಕ್ಕಳ ಪ್ರೀತಿಯ 'ತಾತ ಐತಾಳ್' ಆಗಿದ್ದರು. ಆದರೆ ಮಕ್ಕಳ ಹೆಸರುಗಳನ್ನು ಆದಲು ಬದಲಾಗಿ ಕರೆಯುತ್ತಿದ್ದದ್ದು ಮಕ್ಕಳಿಗೆ ತುಂಬಾ ತಮಾಷೆ ಎನ್ನಿಸುತ್ತಿತ್ತು. ಕೆಲವೊಮ್ಮೆ ಬೇಕೆಂದೇ ಮಾಡಿಯೂ ಇರಬಹುದು. ಒಟ್ಟಾರೆ ಅವರಿದ್ದೆಡೆ ನಗೆಬುಗ್ಗೆಯ ಗ್ಯಾರಂಟಿಯೂ ಖಾಯಂ ಆಗಿರುತ್ತಿತ್ತು. ನಾನು ಸಂಗಮ ಸಂಚಿಕೆಯ ಸಂಪಾದಕತ್ವವನ್ನು ವಹಿಸಿಕೊಂಡಾಗ ಅವರು ಕೊಟ್ಟ ಪ್ರೋತ್ಸಾಹವನ್ನು ಯಾವತ್ತೂ ಮರೆಯಲು ಸಾಧ್ಯವಿಲ್ಲ.

ಐತಾಳರ ಅಭಿನಯದ ಪ್ರೌಢತ್ವದ ಬಗ್ಗೆ ಒಂದೆರಡು ಮಾತು, ನಮ್ಮ ವಿದ್ಯಾರಣ್ಯ ಕನ್ನಡ ಕೂಟದ ಹಲವಾರು ನಾಟಕಗಳಲ್ಲಿ ಅವರು ವಿವಿಧ ರೀತಿಯ ಪಾತ್ರಗಳನ್ನು

ತೆಗೆದುಕೊಂಡು ಅದ್ಭುತವಾಗಿ ನಿರ್ವಹಿಸಿಕೊಡುತ್ತಿದ್ದರು. ಅವುಗಳಲ್ಲಿ ನನಗೆ ಬಹಳ ಇಷ್ಟವಾದದ್ದು 1994ರ ದಾಸ ದಿನಾಚರಣೆಯ ಅಂಗವಾಗಿ ಪ್ರದರ್ಶಿಸಿದ 'ಪುರಂದರದಾಸ' ಎನ್ನುವ ಸಂಗೀತ-ನೃತ್ಯ ನಾಟಕದಲ್ಲಿ ಬ್ರಾಹ್ಮಣ ಹಾಗೂ ವ್ಯಾಸರಾಯರ ಪಾತ್ರಗಳಲ್ಲಿ ಮತ್ತು 1999ರ ಗಣೇಶ ಚತುರ್ಥಿಯ ಸಮಾರಂಭದಲ್ಲಿ ಪ್ರದರ್ಶಿಸಿದ 'ಮುದ್ದಣ ಮನೋರಮೆಯರ ಸಂವಾದ' ನಾಟಕದಲ್ಲಿ ಮುದ್ದಣ ಪಾತ್ರದಲ್ಲಿ ನೀಡಿದ ಅದ್ಭುತ ಅಭಿನಯ ಮರೆಯಲಾರದ ಸನ್ನಿವೇಶಗಳು.

ಏ. ಕೆ. ರಾಮಾನುಜನ್ ಅವರ ಪರಿಚಯ, ಅಯೋವಾ ಕನ್ನಡ ಪೀಠ, ಸೇಂಟ್ ಲೂಯಿಸ್‌ನಲ್ಲಿ ನಡೆದ ಮಧ್ಯವಲಯ ಕನ್ನಡ ಸಮ್ಮೇಳನ, ಹಾಗೂ ಅಮೆರಿಕನ್ನಡ ಪತ್ರಿಕೆಯನ್ನು ಹೊರತರುತ್ತಿದ್ದ ಶ್ರೀಯುತ ಹರಿಹರೇಶ್ವರ ಅವರ ಪ್ರೇರೇಪಣೆ ಇವೆಲ್ಲವುಗಳೂ ಸಹ ನಮ್ಮ ವಿದ್ಯಾರಣ್ಯ ಕನ್ನಡ ಕೂಟದಲ್ಲಿಯೂ ಸಹ ಒಂದು ಜಾಗೃತಿ ಮೂಡಿಸಿದವು ಎಂದರೆ ತಪ್ಪೇನಿಲ್ಲ. ಐತಾಳರ ಮನೆಯಲ್ಲಿ ಆಗಾಗ ನಡೆಯುತ್ತಿದ್ದ ಸಮ್ಮಿಲನಗಳಲ್ಲಿ ಇಸ್ಪೀಟು, ಕೇರಂ ಇವುಗಳ ಜೊತೆಗೆ ಕಾವ್ಯವಾಚನವೂ ಸೇರಿಕೊಂಡಿತು. ಭಾರತದಿಂದ ಬರುವ ಸಾಹಿತಿಗಳ ಜೊತೆ ಐತಾಳರ ಮನೆಯ ರಸದೌತಣ ನಮ್ಮ ತನುಮನಗಳನ್ನೂ ತೃಪ್ತಿಪಡಿಸುತ್ತಿತ್ತು. ಈ ಸಂದರ್ಭಗಳಲ್ಲಿ ಐತಾಳರು ತಪ್ಪದೇ ಹೇಳುತ್ತಿದ್ದ 'ಸಂಕೋಚ ಬೇಡ, ನಿಮ್ಮ ಮನೆ ಅಂತ ತಿಳ್ಕೊಂಡು ಊಟ ಮಾಡ್ಬೇಡಿ, ನಿಮ್ಮ ಮಾವನ ಮನೆ ಅಂತ ತಿಳ್ಕೊಂಡು ಊಟ ಮಾಡಿ' ಮಾತುಗಳು, ಅವರ ಆತಿಥ್ಯ ಮರೆಯಲು ಸಾಧ್ಯವೇ ಇಲ್ಲ. 1993ರ ಜೂನ್ ತಿಂಗಳ ಅಂತ್ಯದಲ್ಲಿ ಒಂದು 'ಕಿರುಕಾವ್ಯ ವಾಚನ' ವನ್ನು ಏರ್ಪಡಿಸಿಕೊಂಡಿದ್ದರು. ಬಹಳ ಆಸೆಯಿಂದ ನಾವೆಲ್ಲಾ ನಿರೀಕ್ಷಿಸುತ್ತಿದ್ದ ಏ. ಕೆ. ರಾಮಾನುಜನ್ ಅವರು ಬರಲಾಗಲಿಲ್ಲ. ಕ್ಯಾಲಿಫೋರ್ನಿಯಾದ ಮತ್ತೊಂದು ಕಾರ್ಯಕ್ರಮದಲ್ಲಿ ಭಾಗಿಯಾಗಬೇಕಾಗಿ ಬಂದಿದ್ದರಿಂದ ತಾವು ಬರಲಾಗುವುದಿಲ್ಲವೆಂದು ಐತಾಳರಿಗೆ ಬಹಳ ಕಳಕಳಿಯಿಂದ ಫೋನ್ ಮಾಡಿ ತಿಳಿಸಿದ್ದರು. ದುರದೃಷ್ಟವಶಾತ್ ಇದಾದ 8–10 ದಿನಗಳಲ್ಲಿಯೇ ಅವರು ವಿಧಿವಶರಾದ ಸುದ್ದಿ ತಿಳಿದದ್‌ಬಂದಿತು. ನಮ್ಮ ದೀಪಾವಳಿ ಸಂಗಮ ಸಂಚಿಕೆಯಲ್ಲಿ ಐತಾಳರು ರಾಮಾನುಜನ್ ಅವರ ಬಗ್ಗೆ ಬರೆದ 'ತುಂಬಿ ತುಳುಕದ ಕೊಡ' ಎಂಬ ಲೇಖನ ಸಮಯೋಚಿತವಾಗಿತ್ತು. ಅವರ ಆ ಲೇಖನದ ಕೊನೆಯ ಸಾಲುಗಳು ಅವರಿಗೂ ಅನ್ವಯವಾಗುತ್ತವೆ ಎನ್ನುವುದು ನನ್ನ ಅನಿಸಿಕೆ. ಹೆಸರು ಬದಲಿಸಿ ಆ ಸಾಲುಗಳೊಂದಿಗೇ ಈ ಲೇಖನವನ್ನು ಕೊನೆಗೊಳಿಸುತ್ತಿದ್ದೇನೆ.

'ಜೀವನದಲ್ಲಿ ಅತೀವ ಕಷ್ಟ –ಸುಖಗಳನ್ನು ಕಂಡಿದ್ದಾರೆ, ಇಂದು ನಾಗಪ್ಪ ಐತಾಳ್ ನಮ್ಮ ಮಧ್ಯೆ ಇಲ್ಲ; ಬಹುಕಾಲ ಇರಿಸಿಕೊಳ್ಳುವ ಶಕ್ತಿಯೂ ನಮ್ಮಲ್ಲಿಲ್ಲ. ವಿಧಿಯ ಮಾಟವನ್ನು ತಪ್ಪಿಸಲು ಶಕ್ತರೇ ನಾವು? ಆದರೆ, ಅವರ ಅಗಲುವಿಕೆಯಿಂದಾಗಿ ಕನ್ನಡ ಸಾಹಿತ್ಯಕ್ಕೆ ಒದಗಿದ ಕೊರತೆಯನ್ನು ನೀಗಿಸುವುದು ತುಂಬಾ ಕಷ್ಟ ಅವರ ಅಗಲುವಿಕೆಯಿಂದ

ಹೊರನಾಡಿನಲ್ಲಿ ಕನ್ನಡ ಸಾಹಿತ್ಯವನ್ನು ಪ್ರಸರಿಸುವ ರಾಯಭಾರಿಯನ್ನೇ ನಾವು ಕಳೆದುಕೊಂಡೆವು.

ನಿಮ್ಮ ನಿಗರ್ವ ಸೇವೆಯಿಂದಾಗಿ ನಾವೆಲ್ಲರೂ ಹೆಮ್ಮೆಪಡುವಂತೆ ಮಾಡಿದಿರಿ ನಿಮಗೆ ಅದಕ್ಕಾಗಿ ನಿರಂತರ ಗೌರವದ ಅಭಿನಂದನೆಗಳು ಡಾಕ್ಟರ್ ನಾಗಪ್ಪ ಐತಾಳರೇ!'.

*

ಸಿರಿಗೆರೆಯ ನೀರಲ್ಲಿ ನಿಂತ ತಾವರೆಯಲ್ಲಿ 'ನಾಗ ಐತಾಳ'ರ ಹೆಸರು

– ಶ್ರೀಕಾಂತ್ ಬಾಬು

ನನಗಂತೂ ಇದೊಂದು ಅತ್ಯಂತ ದುಃಖದಾಯಕ ದಿನ. ಐತಾಳರ ಅನಾರೋಗ್ಯದ ವಿಷಯ ತಿಳಿದಂದಿನಿಂದ ಈ ದಿನ ಬರಬಹುದೆಂದು ಊಹಿಸಿದ್ದರೂ, ಇಷ್ಟು ಬೇಗ ಅವರು ಕಣ್ಮರೆಯಾಗುತ್ತಾರೆಂದು ನೆನಸಿರಲಿಲ್ಲ. ಏಕೆಂದರೆ ಐತಾಳರು ಹೊರನಾಡ ಕನ್ನಡಿಗರಿಗೆಲ್ಲ ಒಬ್ಬ 'ಮಾದರಿ ಪುರುಷ'ರಾಗಿದ್ದು ಇಷ್ಟು ಬೇಗ ಅವರನ್ನು ಕಳೆದುಕೊಳ್ಳುತ್ತೇವೆಂಬ ಕಲ್ಪನೆ ಕೂಡ ಇರಲಿಲ್ಲ.

ನಾನು ಐತಾಳರನ್ನು ಮೊದಲು ನೋಡಿದ್ದು 2000ನೆಯ ಇಸವಿಯ ಹ್ಯೂಸ್ಟನ್ನಿನ ಅಕ್ಕ ಸಮ್ಮೇಳನದಲ್ಲಿ. ಯು. ಆರ್. ಅನಂತಮೂರ್ತಿ, ಗಿರೀಶ್ ಕಾರ್ನಾಡ್, ಲಕ್ಷ್ಮೀನಾರಾಯಣ ಭಟ್ಟ ಮತ್ತಿತರ ಸಾಹಿತಿಗಳ ನಡುವೆ ಎಪ್ಪತ್ತರ ಆಸುಪಾಸಿನಲ್ಲಿದ್ದ, ಎತ್ತರದ, ಸ್ಫುರದ್ರೂಪಿ ಐತಾಳರನ್ನು ಅಲ್ಲಿ ಕಾಣದೇ ಇರಲು ಸಾಧ್ಯವೇ ಇರಲಿಲ್ಲ! ಕಣ್ಣಿನ ದೋಷವಿದ್ದ ಅವರು ಒಂದು ದೊಡ್ಡ ಬೂದುಗಾಜಿನ ನೆರವಿನಿಂದ ತುಂಬು ಸಭೆಯಲ್ಲಿ ಮಾತನಾಡಿದ್ದು ಇಂದಿಗೂ ನನ್ನ ಕಣ್ಣಿಗೆ ಕಟ್ಟಿದಂತಿದೆ.

ಆನಂತರ ಅವರನ್ನು ಮಾತನಾಡಿಸಿದಾಗ ನಮ್ಮ ಬಳಗಗಳ ಮೂಲಕ ಅವರು ಇನ್ನೂ ಸಮೀಪದವರು ಎಂದು ತಿಳಿದಾಗ ಆದ ಸಂತೋಷ ಅಷ್ಟಿಷ್ಟಲ್ಲ. ಕಳೆದೆರಡು ದಶಕಗಳಲ್ಲಿ ಅನೇಕ ಬಾರಿ ಅವರು ನಮ್ಮ ಮನೆಗೂ ಮತ್ತು ನಾವು ಅವರ ಮನೆಗೂ

ಹೋಗಿ ಬರುತ್ತಾ ನಮ್ಮ ಸ್ನೇಹ–ಸಂಬಂಧ ಹಲವಾರು ಸ್ತರಗಳಲ್ಲಿ ಅತ್ಯಂತ ನಿಕಟವಾಯಿತು. 'ಆಹಿತಾನಲ' ಎಂದೇ ಪರಿಚಯಿಸಿಕೊಳ್ಳುತ್ತಿದ್ದ ಐತಾಳರು ಅನೇಕ ರೀತಿಯಲ್ಲಿ ನಮಗೆ ವಿಶೇಷವೆನಿಸುತ್ತಾರೆ. ಹಲವಾರು ಆಸಕ್ತಿಗಳನ್ನು ಬೆಳೆಸಿಕೊಂಡಿದ್ದ ಅವರು ತಮ್ಮ ಮಾತುಕಥೆಗಳಿಂದ ಎಲ್ಲ ಸಂದರ್ಭಗಳಲ್ಲೂ ಯಾವುದೇ ಸಭೆಯನ್ನು ಕಳೆಗಟ್ಟಿಸುತ್ತಿದ್ದರು. ಕನ್ನಡ ಸಾಹಿತ್ಯದ ಒಲವನ್ನು ಹೆಚ್ಚಿಸಲು ಮತ್ತು ಕನ್ನಡದಲ್ಲಿ ಬರೆಯುವ ಆಸಕ್ತಿಯನ್ನು ಅಮೆರಿಕನ್ನಡಿಗರಲ್ಲಿ ಮೂಡಿಸಲು ಉದಯಿಸಿದ ಸಂಸ್ಥೆ 'ಕನ್ನಡ ಸಾಹಿತ್ಯ ರಂಗ'. ಐತಾಳರು ಮತ್ತು ರಾಜಗೋಪಾಲ್ ಇದರ ಮೂಲ ಸಂಸ್ಥಾಪಕರು. ಕಳೆದೆರಡು ದಶಕಗಳಲ್ಲಿ ಅಮೆರಿಕದ ವಿವಿಧ ಪ್ರಾಂತ್ಯಗಳಲ್ಲಿ 10 ಸಮ್ಮೇಳನಗಳನ್ನು ನಡೆಸಿದ್ದು ಕಸಾರಂ ಇಂದು ಒಂದು ಗೌರವಾನ್ವಿತ ಸಂಸ್ಥೆಯಾಗಿ ಗುರುತಿಸಲ್ಪಟ್ಟಿದೆ. ಕಳೆದ ಸಮ್ಮೇಳನವನ್ನು ಹೊರತುಪಡಿಸಿದರೆ ಉಳಿದ ಒಂಬತ್ತು ಸಮ್ಮೇಳನಗಳಿಗೂ ಐತಾಳರು ರೂವಾರಿಯಾಗಿದ್ದರು. 2015–2022ರಲ್ಲಿ ಕಸಾರಂ ಆಡಳಿತ ಮಂಡಳಿಯ ಅಧ್ಯಕ್ಷರಾಗಿ ಸಂಸ್ಥೆಯ ಪ್ರಗತಿಗೆ ಮಾರ್ಗದರ್ಶಕರಾಗಿದ್ದರು.

ಇದಲ್ಲದೆ ತಮ್ಮದೇ ಆದ 'ಸಾಹಿತ್ಯಾಂಜಲಿ' ಎನ್ನುವ ಪ್ರಕಾಶನದ ಅಡಿಯಲ್ಲಿ ಹಲವಾರು ಪ್ರಸ್ತಕಗಳನ್ನು ಪ್ರತಿ ವರ್ಷವೂ ಪ್ರಕಟಿಸಿದ್ದಾರೆ. ಅವುಗಳಿಗೆ ನನ್ನಂಥ ಬಿಡಿ ಲೇಖಕರಿಂದ ಬರಹಗಳನ್ನು ಒತ್ತಾಸೆಮಾಡಿ ಬರೆಯಿಸಿಕೊಳ್ಳುತ್ತಿದ್ದರು. ಕನ್ನಡ ಅವರ ಉಸಿರಾಗಿತ್ತು. ಯಾವಾಗ ಅವರೊಡನೆ ಮಾತನಾಡಿದರೂ ಒಂದೆರಡು ಕ್ರಿಯಾಶೀಲ ಚಟುವಟಿಕೆಗಳು ಮತ್ತು ನೂರಾರು ಸೃಜನಶೀಲ ಆಲೋಚನೆ ಮತ್ತು ಕಾರ್ಯ ಯೋಜನೆಗಳನ್ನು ಹಮ್ಮಿಕೊಳ್ಳುತ್ತಲೇ ಇರುತ್ತಿದ್ದರು. ಅರವತ್ತರ ನಂತರ ಬರೆಯಲು ಆರಂಭಿಸಿದ ಐತಾಳರು ನನ್ನಂತಹ ಅನೇಕ ಚಿಕ್ಕ ಬರಹಗಾರರಿಗೆ ಮಾರ್ಗದರ್ಶಿಗಳಾಗಿದ್ದರೆಂದರೆ ಅತಿಶಯೋಕ್ತಿಯಲ್ಲ.

ಐತಾಳರ ಮೊದಲ ಪುಸ್ತಕ 'ಅಮೆರಿಕನ್ನಡಿಗನ ದಿನಚರಿ' ಕೆಲವು ವೈಯಕ್ತಿಕ ಅನುಭವಗಳನ್ನು ಹೊರತುಪಡಿಸಿದರೆ ಒಂದು ರೀತಿಯಲ್ಲಿ ಕಳೆದ ಶತಮಾನದಲ್ಲಿ ಅಮೆರಿಕೆಗೆ ಬಂದ ಎಲ್ಲ ಅಮೆರಿಕನ್ನಡಿಗರ ಅನುಭವದ ಕೈಗನ್ನಡಿ. ಆ ಪುಸ್ತಕವನ್ನು ಓದುವಾಗ ನಮ್ಮ ಹಿಂದಿನ ನೆನಪೂ ಸಹ ಕಾಡುತ್ತದೆ. ನನಗೆ ಮೊದಲ ಬಾರಿಗೆ ಅದನ್ನು ಓದಿದಾಗ ಹಲವಾರು ದಿನ ಅದರದೇ ಗುಂಗಿನಲ್ಲಿದ್ದೆ. ನಾಗ ಐತಾಳರಿಗೆ ಕನ್ನಡ ಸಾಹಿತ್ಯ ವಲಯದಲ್ಲಿ ಒಳ್ಳೆಯ ಹೆಸರಿತ್ತು. ಬಹುತೇಕ ಎಲ್ಲ ಸಾಹಿತಿಗಳ ನಿಕಟ ಸಂಪರ್ಕವಿತ್ತು. ಜಿ. ಎಸ್. ಶಿವರುದ್ರಪ್ಪನವರು ತೀರಿಕೊಳ್ಳುವವರೆವಿಗೂ ಪ್ರತಿ ವರ್ಷ ಫೆಬ್ರವರಿಯಲ್ಲಿ ಅವರ ಹುಟ್ಟುಹಬ್ಬದ ಸಮಯದಲ್ಲಿ ಅವರೊಡನೆ ಇದ್ದೇ ಇರುತ್ತಿದ್ದರು. ಪ್ರತಿ ವರ್ಷ ನವೆಂಬರ್‌ನಿಂದ ಫೆಬ್ರವರಿಯವರೆಗೆ ಅವರ ಭಾರತ ಪ್ರವಾಸ ಇರುತ್ತಿತ್ತು. ಅದು ಅವರಿಗೊಂದು ಚೈತ್ರೋತ್ಸವ ಇದ್ದಂತೆ. ತುಂಬು ಕಾತರದಿಂದ ಅದನ್ನು ನಿರೀಕ್ಷಿಸುತ್ತಿದ್ದರು. ಅದೆಷ್ಟು ಜನರೊಡನೆ ಸೇರುವುದು? ಸನ್ಮಾನ, ಭಾಷಣ, ಬಂಧು–

ಮಿತ್ರರ ಸತ್ಕಾರ, ಪುಸ್ತಕ ಪ್ರಕಟಣೆ, ಪುಸ್ತಕ ಬಿಡುಗಡೆ, ಹುಟ್ಟೂರಿಗೆ ಭೇಟಿ ಇತ್ಯಾದಿಗಳಿಂದ ಒಂದು ಘಳಿಗೆ ಅವರಿಗೆ ಪುರುಸೊತ್ತಿರುತ್ತಿರಲಿಲ್ಲ. ಅದೊಂದು ರೀತಿಯಲ್ಲಿ ಅವರ ವಾರ್ಷಿಕ ಪ್ರಕ್ರಿಯೆ ಅವರ ಉತ್ಸಾಹೀ ಜೀವನಕ್ಕೆ ಅವಶ್ಯವಾಗಿತ್ತೆಂದು ತೋರುತ್ತದೆ.

ಐತಾಳರು ತಮ್ಮ ಸಂಸಾರದ ಅನೇಕ ವೈಯಕ್ತಿಕ ವಿಷಯಗಳನ್ನು ನಿಸ್ಸಂಕೋಚವಾಗಿ ತಮ್ಮ ಪುಸ್ತಕದಲ್ಲಿ ಬರೆದುಕೊಂಡಿದ್ದಾರೆ. ಪತ್ನಿ ಲಕ್ಷ್ಮಿ (ಅವರಿಗೆ ಪುಟ್ಟಮ್ಮ) ಅವರ ಮೇಲೆ ಅಪಾರ ಪ್ರೀತಿ, ಗೌರವ ಮತ್ತು ಅಭಿಮಾನ. ಅವರ ಎಲ್ಲ ಬರವಣಿಗೆಗಳನ್ನು ಲಕ್ಷ್ಮಿಯವರು ಮೊದಲು ಪರಿಶೀಲಿಸಿ ಸೈ ಎಂದ ಮೇಲೆ ಮುಂದುವರಿಯುತ್ತಿತ್ತು ಎಂದು ಅವರೇ ಹೇಳಿಕೊಂಡು ಪುಟ್ಟಮ್ಮನವರ ಬಗ್ಗೆ ಮೆಚ್ಚುಗೆ ಸೂಚಿಸುತ್ತಿದ್ದರು. 'ನಾಗ ಐತಾಳ'ರೆಂಬ ಗುರುತಿನಿಂದ 'ಪುಟ್ಟಮ್ಮನ ಗಂಡ' ಆದ ಕಥೆ ಅವರನ್ನು ಬಲ್ಲವರೆಲ್ಲರಿಗೂ ತಿಳಿದಿರುವಂಥದು. ಹಲವಾರು ಬಾರಿ ಲಕ್ಷ್ಮಿಯವರಿಗೆ ಐತಾಳರ ಈ ಬಹಿರಂಗ ಪ್ರಶಂಸೆ ಅಷ್ಟಾಗಿ ಇಷ್ಟವಾಗದಿದ್ದರೂ ಅದನ್ನು ಲೆಕ್ಕಿಸದೆ ಆದರಿಸುತ್ತಿದ್ದರು. ಐತಾಳರನ್ನು ಮತ್ತು ಅವರ ಸಾಧನೆಗಳನ್ನು ಅವರೆದುರು ಪ್ರಶಂಸಿಸಿದರೆ ಬಹಳ ಸಂಕೋಚಪಡುತ್ತಿದ್ದರು. ಅವರು ಎಂದಿಗೂ ಪ್ರಶಸ್ತಿ, ಪುರಸ್ಕಾರ, ಸನ್ಮಾನಗಳನ್ನು ಒಮ್ಮೆಯೂ ಎಲ್ಲಿಯೂ ಪ್ರಸ್ತಾಪಿಸಿದ ನೆನಪಿಲ್ಲ. ಆದರೆ ಅವರಿಗೆ ಇತರರನ್ನು ಪ್ರಶಂಸಿಸುವುದರಲ್ಲಿ ಯಾವ ಹಿಂಜರಿಕೆಯೂ ಇರಲಿಲ್ಲ. ಅವರಿಗೆ ನಾನು ಯಾವಾಗ ಫೋನ್ ಮಾಡಿದರೂ ಅನೇಕ ವಿಷಯಗಳನ್ನು ಕುರಿತು ಚರ್ಚಿಸಲು ಸಿದ್ಧರಾಗಿರುತ್ತಿದ್ದರು. ಕಸಾರಂ ವಿಷಯದಲ್ಲಿ ನನಗೂ ಅವರಿಗೂ ಸದಾಕಾಲವೂ ವಿಚಾರ ವಿನಿಮಯ ನಡೆಯುತ್ತಲೇ ಇರುತ್ತಿತ್ತು. ಕಸಾರಂ ಕುರಿತಾಗಿ ಅವರಿಗೆ ಅಪಾರ ಪ್ರೇಮ ಮತ್ತು ಶ್ರದ್ಧೆ! ಕಸಾರಂನ ಸಂವಿಧಾನವನ್ನು ರೂಪಿಸುವುದರಲ್ಲಿ ಅವರ ಪಾತ್ರವನ್ನು ನೆನೆಯಲೇಬೇಕು. ಐತಾಳರು ಕಸಾರಂ ಪುಸ್ತಕಗಳಿಗೆ ಬರುವ ಲೇಖನಗಳನ್ನು ಓದಿ ಅದರ ಗುಣಮಟ್ಟವನ್ನು ಪರಾಮರ್ಶಿಸುತ್ತಿದ್ದರು. 'ಅವರವರ ಭಕುತಿಗೆ' ಪುಸ್ತಕಕ್ಕೆ ಬರೆದ ನನ್ನ ಲೇಖನದ ಮೊದಲು ಕರಡಿನಲ್ಲಿ ಭಕ್ತಿಯ ಕುರಿತಾಗಿ ನನ್ನ ಅಭಿಪ್ರಾಯಗಳು ಅವರಿಗೆ ತುಂಬಾ ತೀಕ್ಷ್ಣವೆಂದೆನಿಸಿತ್ತು. ಅದನ್ನು ಅವರು ನಿರ್ದಾಕ್ಷಿಣ್ಯವಾಗಿ ಮತ್ತು ನಿಸ್ಸಂಕೋಚವಾಗಿ ತಿಳಿಸಿದಾಗ, ನಾನು ಆ ಲೇಖನವನ್ನು ತಿದ್ದಿ ಅದರ ತೀವ್ರತೆಯನ್ನು ಮಂದವಾಗಿಸಬೇಕಾಯಿತು!

ನಾಗ ಐತಾಳರು ನನ್ನನ್ನು ಅವರ ಕೊನೆಯ ಒಂದೆರಡು ಪುಸ್ತಕಗಳನ್ನು ಪೂರ್ವ ಭಾವಿಯಾಗಿ ಓದಿ, ವಿಮರ್ಶಿಸಲು ಕೇಳಿಕೊಂಡಿದ್ದರು. ಅವರು ನನ್ನ ಸಲಹೆಗಳನ್ನು ಸ್ವೀಕರಿಸಿದ್ದಷ್ಟೇ ಅಲ್ಲದೆ ಅದನ್ನು ಪುಸ್ತಕದಲ್ಲಿ ಪ್ರಸ್ತಾಪಿಸಿ ಗೌರವಿಸಿದ್ದರು ಕೂಡ! ನನ್ನೊಡನೆ ಅವರು ಮಾತನಾಡಿದಾಗಲೆಲ್ಲಾ ನಮ್ಮ ಮನೆಯ ಪ್ರತಿ ವ್ಯಕ್ತಿಯ – ಭಾನು, ಸ್ನೇಹ, ಶರತ್, ಕರಣ್, ಮತ್ತು ಶೇನ್ ಬಗ್ಗೆ ವಿಚಾರಿಸಿಕೊಳ್ಳುತ್ತಿದ್ದರು. ಒಂದು ಆಶ್ಚರ್ಯದ ಸಂಗತಿಯೆಂದರೆ 2019ರ ಕಸಾರಂ ಸಮ್ಮೇಳನಕ್ಕೆ ನ್ಯೂ ಜೆರ್ಸಿಗೆ ಅವರು ಬಂದಾಗ ಅವರನ್ನು ನೋಡಲು ನಾವು 9 ತಿಂಗಳ ಶೇನಿಯನ್ನು ಕರೆದುಕೊಂಡು ಹೋಗಿದ್ದೆವು.

ಅವರು ನಾಯಿಯನ್ನು ನೋಡಿ ಶೇನಿ ಮೊದಲ ಬಾರಿಗೆ ಮಾತನಾಡಿ Doggy ಎಂದು ಹೇಳಿದ್ದು ನೆನಪಾಗುತ್ತದೆ! ಸಾಧಾರಣವಾಗಿ ಪ್ರತಿ ವರ್ಷ ಮೇ ತಿಂಗಳು ಮತ್ತು ನವೆಂಬರ್ ತಿಂಗಳು ಅವರು ನ್ಯೂ ಜೆರ್ಸಿಗೆ ಅವರ ಮಗನ ಮನೆಗೆ ಬರುವ ವಾಡಿಕೆ. ನನ್ನ ಮೇಲಿನ ಸಲುಗೆಯಿಂದಾಗಿ ನಾನು ಅವರ ಅಫಿಷಿಯಲ್ ಡ್ರೈವರ್ ಆಗಿರುತ್ತಿದ್ದೆ. ಹಾಗಾಗಿ ನನಗೆ ಅವರೊಡನೆ ಬಹಳ ಕಾಲ ಕಳೆಯುವ ಅವಕಾಶ ಸಿಗುತ್ತಿತ್ತು. ಅವರ ಜತೆಗಿನ ಸ್ನೇಹ ಮೋಜಿನ ವಿಷಯವಾಗಿತ್ತು. ಅನೇಕ ಪ್ರಸಂಗಗಳು, ಕಥೆಗಳು, ಅವರ ಬಂಧು-ಮಿತ್ರರೊಡನೆ ಆದ ಹಾಸ್ಯ ಪ್ರಸಂಗಗಳೂ ಪುಂಖಾನುಪುಂಖವಾಗಿ ಅವರ ಬಾಯಿಂದ ಬರುತ್ತಿದ್ದವು ಮತ್ತು ನಮ್ಮ ನಗುವಿನ ಹೊಳೆ ಹರಿಯುತ್ತಿತ್ತು. ಉದಾಹರಣೆಗೆ ಒಂದೆರಡು ಪ್ರಸಂಗಗಳನ್ನು ಹೇಳುತ್ತೇನೆ.

ಮನೆ ಆಟ:

ಚಿಕ್ಕವರಿದ್ದಾಗ ಐತಾಳರು ತಮ್ಮ ಮುಗ್ಧ ತಮ್ಮಂದಿರನ್ನು ತುಂಬಾ ಗೋಳುಹೊಯ್ದುಕೊಳ್ಳುತ್ತಿದ್ದರಂತೆ, ಶಾಲೆಯಿಂದ ಬಂದನಂತರ ಮಕ್ಕಳೆಲ್ಲರಿಗೂ ಬಾಯಾಡಿಸಲಿಕ್ಕೆ ತಿಂಡಿಯನ್ನು (ಚಕ್ಕುಲಿ, ಕೋಡುಬಳೆ, ರವೆ ಉಂಡೆ, ಇತ್ಯಾದಿ) ಅವರಮ್ಮ ಕೊಡುತ್ತಿದ್ದರಂತೆ. ಐತಾಳರು ತಮ್ಮ ಪಾಲಿನದನ್ನು ಮೊದಲು ತಿಂದು ತಮ್ಮಂದಿರು ಅವರ ಪಾಲನ್ನು ತಿನ್ನುವುದಕ್ಕೆ ಮೊದಲು ಅವರನ್ನು 'ಮನೆ ಆಟ' ಅಂತ ಒಂದು ಕೃತಕ ಆಟವನ್ನು ಸೃಷ್ಟಿಸಿ ಅದರ ವಿಧಾನವನ್ನು ಇವರೇ ಅವರಿಗೆ ವಿವರಿಸಿ ಹೇಳುತ್ತಾರೆ. ತಮ್ಮಂದಿರು ತಮ್ಮ ತಮ್ಮ ಕೃತಕ ಮನೆಯಲ್ಲಿ ತಿಂಡಿ ಇಟ್ಟುಕೊಂಡು ಇವರನ್ನು ತಮ್ಮ ಮನೆಗೆ ಕರೆದು ತಿಂಡಿ ಕೊಟ್ಟು ಉಪಚರಿಸಬೇಕು ಎಂದು! ಪಾಪದ ತಮ್ಮಂದಿರು ಇವರನ್ನು ಕರೆದು ತಮ್ಮ ಪಾಲಿನ ತಿಂಡಿಯನ್ನು ಇವರಿಗೆ ಕೊಡುತ್ತಿದ್ದರಂತೆ. ಹೀಗೆ ಇವರು ಅವರೆಲ್ಲರ ಪಾಲನ್ನೂ ತಿಂದುಹಾಕುತ್ತಿದ್ದರಂತೆ, ಅದನ್ನು ನೆನಪಿಸಿಕೊಂಡು ತಾವೆಷ್ಟು ದುಷ್ಟನಾಗಿದ್ದೆ ಮತ್ತು ತಮ್ಮನ್ನು ಅತ್ಯಂತ ಆದರಿಸುತ್ತಿದ್ದ ಮುಗ್ಧ ತಮ್ಮಂದಿರಿಗೆ ಮೋಸ ಮಾಡುತ್ತಿದ್ದೆ ಎಂದು ಪೇಚಾಡಿಕೊಳ್ಳುತ್ತಿದ್ದರು.

ಕೊತ್ತಂಬರಿ – ಕಸ

ಒಮ್ಮೆ ಐತಾಳರು ತಮ್ಮ ತಂಗಿಯ ಮನೆಗೆ ಊಟಕ್ಕೆ ಹೋದಾಗ ಅವರು ಮತ್ತು ಅವರ ಭಾವ (ತಂಗಿಯ ಗಂಡ) ಅಕ್ಕ-ಪಕ್ಕದಲ್ಲಿ ಊಟಕ್ಕೆ ಕುಳಿತಿದ್ದರು. ಐತಾಳರು ತಮ್ಮ ಭಾವ ಒಂದು ಪುಟ್ಟ ಕೊತ್ತಂಬರಿ ಕಟ್ಟನ್ನು ಪಕ್ಕದಲ್ಲಿಟ್ಟುಕೊಂಡಿದ್ದನ್ನು ಗಮನಿಸಿದರು. ಅವರ ತಂಗಿ ಸಾರು ಮತ್ತಿತರ ಅಡುಗೆಗಳನ್ನು ಬಡಿಸುತ್ತಿದ್ದಂತೆ, ಭಾವನವರು ಒಂದು ಚೂರು ಕೊತ್ತಂಬರಿ ಸೊಪ್ಪನ್ನು ಮುರಿದು ಪ್ರತಿ ತುತ್ತಿಗೆ ಸೇರಿಸಿಕೊಂಡು ತಿನ್ನುತ್ತಿದ್ದರಂತೆ. ಇದನ್ನು ನೋಡಿದ ಐತಾಳರು ಅದೇಕೆ ಹಾಗೆ ಎಂದು ಕೇಳಿದ್ದಕ್ಕೆ, ಭಾವನವರು ಹೇಳಿದರಂತೆ. 'ನಿಮ್ಮ ತಂಗಿಗೆ ಕೊತ್ತಂಬರಿ ಸೊಪ್ಪೆಂದರೆ ಆಗದು. ಅದು 'ಕಸ' ಎಂದು ಅಡುಗೆಗೆ ಹಾಕುವುದಿಲ್ಲ. ನನಗಾದರೋ ಕೊತ್ತಂಬರಿ ಎಂದರೆ ಪ್ರಾಣ, ಅದಿಲ್ಲದೆ ನನ್ನ

ಊಟ ಆಗುವುದಿಲ್ಲ. ಅದಕ್ಕೆ ಈ ಏರ್ಪಾಡು ಮಾಡಿಕೊಂಡಿದ್ದೇನೆ. ಇದರಿಂದ ಇಬ್ಬರಿಗೂ ನೆಮ್ಮದಿ' ಎಂದರಂತೆ. ಇದರಿಂದ ಐತಾಳರಿಗೆ ಬೇಜಾರಾಗಿ ಮೃದುವಾಗಿ ತಂಗಿಯ ಮೇಲೆ ಗದರಿದರಂತೆ. 'ಇದೇನೆ ಇದು? ಅವರಿಗೆ ಅದು ಅಷ್ಟು ಇಷ್ಟವೆಂದರೆ ಅಡುಗೆಗೆ ಹಾಕಲಿಕ್ಕಾಗದಾ? ಬೇಕಾದರೆ ನಿನ್ನ ಪಾಲಿನದನ್ನು ಬೇರೆ ಇಟ್ಟುಕೋ ಆದರೆ ಅವರ ಅಡುಗೆಗೆ ಕೊತ್ತಂಬರಿ ಸೊಪ್ಪು ಖಂಡಿತಾ ಹಾಕು. ಹೀಗೆ ಊಟದ ಜೊತೆಗೆ ಸೊಪ್ಪನ್ನು ಸೇರಿಸಿಕೊಂಡು ಅವರು ತಿನ್ನುವುದು ಚೆನ್ನಲ್ಲ' ಎಂದು! ಹೀಗೆ ಪ್ರತಿ ಸಂದರ್ಭಕ್ಕೂ ಅವರಿಗೆ ಹಾಸ್ಯ ಪ್ರಸಂಗಗಳು ಸುಲಭವಾಗಿ ಒದಗಿಬರುತ್ತಿದ್ದವು.

ಸಂಗೀತ ಪ್ರೀತಿ

ಐತಾಳರಿಗೆ ಸಾಹಿತ್ಯದ ಜೊತೆಗೆ ಸಂಗೀತದಲ್ಲಿ ಅಪಾರ ಒಲವಿತ್ತು, ಅಶ್ವಥ್ ಅವರು ಸಂಯೋಜಿಸಿದ ಕೆ.ಎಸ್.ನ. ಮತ್ತು ಶಿಶುನಾಳ ಷರೀಫರ ಹಾಡುಗಳನ್ನು ಹಾಡದೇ ಇರುತ್ತಿರಲಿಲ್ಲ. ಅವರಿಗೆ ಹಿಂದುಸ್ಥಾನಿ ಸಂಗೀತದ ತಿಳುವಳಿಕೆ ತುಂಬಾ ಚೆನ್ನಾಗಿತ್ತು. ನನಗಂತೂ ಅವರು ಭೂಪ್ ರಾಗದಲ್ಲಿ ಹಾಡುವ 'ಘನಶ್ಯಾಮ ಸುಂದರ ಶ್ರೀಧರ...' ಮರಾಠಿ ಹಾಡು ಅತ್ಯಂತ ಇಷ್ಟವಾಗಿತ್ತು. ಈ ಹಾಡು ಮತ್ತು ಕೆ.ಎಸ್.ನ ಅವರ 'ಸಿರಿಗೆರೆಯ ನೀರಲ್ಲಿ ನಿಂತ ತಾವರೆಯಲ್ಲಿ...' ಅದೆಷ್ಟು ಬಾರಿ ಕೇಳಿದ್ದೇನೋ ಏನೊ ಇನ್ನೂ ಅವರ ಧ್ವನಿ ನನ್ನ ಕಿವಿಗಳಲ್ಲಿ ಗುಂಯ್‌ಗುಡುತ್ತಿದೆ! ಬಹುಶಃ ಪ್ರತಿ ಬಾರಿಯೂ ಹೊಸದರಂತೆ ಕೇಳಿದ್ದೇನೆ. ಹೀಗೆ ನನಗೆ ಅವರೊಡನೆ ಕಳೆದ ಕ್ಷಣಗಳೆಲ್ಲ ಅದ್ಭುತ, ರಮ್ಯ ಮತ್ತು ಸುಂದರ. ನಿಜವಾಗಿ ಹೇಳಬೇಕೆಂದರೆ ನಾಗ ಐತಾಳರದೊಂದು ತುಂಬು, ಸಫಲ, ಪರಿಪಕ್ವ ಮತ್ತು ಸಾರ್ಥಕ ಜೀವನ. ಉದ್ಯೋಗದಲ್ಲಿದ್ದಾಗ ಅವರ ವೃತ್ತಿಯಲ್ಲಿ ಸಾಕಷ್ಟು ಹೆಸರು ಮಾಡಿ ನಿವೃತ್ತರಾದರು. ಅದರ ನಂತರ ಇನ್ನೂ ಹೆಚ್ಚು ಚುರುಕಾಗಿ ಕನ್ನಡ ಸಾಹಿತ್ಯವನ್ನು ಪ್ರವೃತ್ತಿಯಾಗಿ ಸ್ವೀಕರಿಸಿ ಅಪಾರ ಶ್ರಮದಿಂದ ಯಶಸ್ಸು ಗಳಿಸಿ ತಮ್ಮ ಜೀವನವನ್ನು ಸಾರ್ಥಕಗೊಳಿಸಿಕೊಂಡರು. ಬಹುಶಃ ಚಿಕ್ಕವರಾದ ನಮ್ಮೆಲ್ಲರಿಗೂ ಇದೊಂದು ಅತ್ಯುತ್ತಮ ಪಾಠವಲ್ಲವೆ? ಹೇಗೆ ನಮ್ಮ ವಿಶ್ರಾಂತ ಜೀವನವನ್ನು ಅರ್ಥಪೂರ್ಣ ಮಾಡಿಕೊಳ್ಳಬಹುದು ಎಂದು! ಅನಿಮಲ್ ಕಿಂಗ್‌ಡಂನ ಜಿರಾಫೆಯಂತೆ ನಮ್ಮ ಎಲ್ಲ ಗ್ರೂಪ್ ಫೋಟೋಗಳಲ್ಲೂ ಐತಾಳರ ಎತ್ತರದ ನಿಲುವು ಎದ್ದು ಕಾಣುತ್ತಿತ್ತು! ಅವರ ಎತ್ತರ ಕೇವಲ ದೈಹಿಕವಾಗಿರಲಿಲ್ಲ. ಅವರ ವ್ಯಕ್ತಿತ್ವ, ಘನತೆ ಮತ್ತು ನಡತೆ ಎಲ್ಲವೂ ಎತ್ತರವೇ ಸರಿ. ಅವರೊಡನೆ ಹಲವಾರು ವರ್ಷಗಳ ನನ್ನ ಒಡನಾಟ ಒಂದು ಸೌಭಾಗ್ಯವೆಂದೇ ಭಾವಿಸುತ್ತೇನೆ.

*

ಆರ್ಕೇಡಿಯಾದಲ್ಲಿ ಐತಾಳರ ಡಿನ್ನರ್

– ಎಚ್. ಡುಂಡಿರಾಜ್

'ಆಹಿತಾನಲ' ಎಂಬ ಹೆಸರನ್ನು ನಾನು ಮೊದಲು ಗಮನಿಸಿದ್ದು 2007ರಲ್ಲಿ ಕನ್ನಡ ಸಾಹಿತ್ಯ ರಂಗ, ನ್ಯೂ ಜೆರ್ಸಿ ಮತ್ತು ಅಭಿನವ ಬೆಂಗಳೂರು ಪ್ರಕಟಿಸಿದ 'ನಗೆ ಗನ್ನಡಂ ಗೆಲ್ಗೆ!' ಎಂಬ ಪುಸ್ತಕದಲ್ಲಿ ಅವರು ಬರೆದ 'ಗೊಬ್ಬರ ಗುಂಡಿಯಲ್ಲಿ ಕೆಂಬಾರಿ ಸೊಪ್ಪು ಹುಟ್ಟಿ' ಎಂಬ ಲೇಖನವಿದೆ. ಅದು ಪಶ್ಚಿಮ ಕರಾವಳಿಯ ಜನಪದ ಸಾಹಿತ್ಯದಲ್ಲಿ ಕಾಣಸಿಗುವ ಹಾಸ್ಯದ ಬಗೆಗಿನ ಲೇಖನ. ನಾನು ಮೂಲತಃ ಕರಾವಳಿಯ ಕುಂದಾಪುರ ತಾಲ್ಲೂಕಿನವನಾದ್ದರಿಂದ ಆಹಿತಾನಲರ ಆ ಬರಹವನ್ನು ಮೆಚ್ಚಿಕೊಂಡಿದ್ದೆ. ಲೇಖಕರ 'ಆಹಿತಾನಲ' ಎಂಬ ಅಪರೂಪದ ಹೆಸರು ಕೂಡಾ ನನ್ನಲ್ಲಿ ಕುತೂಹಲ ಮೂಡಿಸಿತ್ತು. ಪುಸ್ತಕದ ಅನುಬಂಧದಲ್ಲಿದ್ದ ಲೇಖಕರ ಪರಿಚಯವನ್ನು ಓದಿದಾಗ 'ಆಹಿತಾನಲ' ಎಂಬುದು ನಾಗ ಐತಾಳರ ಕಾವ್ಯನಾಮವೆಂದು ತಿಳಿಯಿತು. ಅವರೂ ಮೂಲತಃ ನನ್ನ ಹುಟ್ಟೂರಿನ ಹತ್ತಿರವಿರುವ ಕೋಟದವರೆಂದು ತಿಳಿದು ಮತ್ತಷ್ಟು ಸಂತೋಷವಾಯಿತು.

2012ರಲ್ಲಿ ಅಮೆರಿಕದ ಅಟ್ಲಾಂಟಾ ನಗರದಲ್ಲಿ ನಡೆದ ಏಳನೆಯ ವಿಶ್ವ ಅಕ್ಕ ಕನ್ನಡ ಸಮ್ಮೇಳನದಲ್ಲಿ ನಾಗ ಐತಾಳರನ್ನು ಭೇಟಿಯಾಗುವ ಅವಕಾಶ ಸಿಕ್ಕಿತು. ಅವರೇ ತಮ್ಮನ್ನು ಪರಿಚಯಿಸಿಕೊಂಡರು. ನಾನು ಕುಂದಾಪುರದವನೆಂಬುದು ಅವರಿಗೆ ಗೊತ್ತಿದ್ದರಿಂದ 'ಹ್ವಾಯ್ ಹ್ಯಾಂಗಿದ್ರಿ?' ಎಂದು ಕುಂದಗನ್ನಡದಲ್ಲೇ ಮಾತನಾಡಿದರು.

ಆರ್ಕೇಡಿಯಾದಲ್ಲಿರುವ ತಮ್ಮ ಮನೆಗೆ ಬನ್ನಿ ಎಂದು ಆತ್ಮೀಯವಾಗಿ ಆಹ್ವಾನಿಸಿದರು. ಅಕ್ಕ ಸಮ್ಮೇಳನ ಮುಗಿದ ನಂತರ ಪ್ರಸಿದ್ಧ ಕಿರುತೆರೆ ನಟ, ನಿರ್ದೇಶಕ ಟಿ. ಎನ್. ಸೀತಾರಾಮ್ ಮತ್ತು ನಾನು ಶಿನೊ ಹಿಲ್ಸ್ ಎಂಬ ಊರಿನಲ್ಲಿರುವ ವಲ್ಲೀಶ ಶಾಸ್ತ್ರೀಯವರ ಮನೆಯಲ್ಲಿ ಕೆಲವು ದಿನಗಳ ಕಾಲ ತಂಗಿದ್ದೆವು. ನಾಗ ಐತಾಳ ಮತ್ತು ವಲ್ಲೀಶರು ಕುಟುಂಬ ಸ್ನೇಹಿತರು. ನಾವು ಬಂದಿರುವುದನ್ನು ತಿಳಿದ ಐತಾಳರು ನಮ್ಮಿಬ್ಬರನ್ನು ಅವರ ಮನೆಗೆ ಡಿನ್ನರಿಗೆ ಕರೆದುಕೊಂಡು ಬರುವಂತೆ ವಲ್ಲೀಶರಿಗೆ ಹೇಳಿದರು. ನಾನು ಸಂತೋಷದಿಂದ ಕೂಡಲೇ ಒಪ್ಪಿಕೊಂಡೆ. ಸೀತಾರಾಮ್ ಅವರಿಗೆ ಐತಾಳರ ಪರಿಚಯ ಇಲ್ಲದ್ದರಿಂದ ಹಿಂಜರಿಕೆ ತೋರಿದರು. ಆಗ ವಲ್ಲೀಶರ ಪತ್ನಿ ವಿದ್ಯಾ, 'ಐತಾಳರ ಹೆಂಡತಿ ಲಕ್ಷ್ಮಿ ಬಹಳ ಚೆನ್ನಾಗಿ ಅಡುಗೆ ಮಾಡುತ್ತಾರೆ' ಎಂದು ಅವರ ಕೈರುಚಿಯನ್ನು ಹೊಗಳಿದರು. ಅದನ್ನು ಕೇಳಿ ಸೀತಾರಾಮ್ 'ಹಾಗಾದರೆ ಹೋಗೋಣ' ಎಂದರು.

ಒಂದು ಸಂಜೆ ನಾನು, ಸೀತಾರಾಮ್, ವಲ್ಲೀಶ ಮತ್ತು ವಿದ್ಯಾ ಐತಾಳರ ಮನೆಗೆ ಹೋದೆವು. ನಾನು ಗಮನಿಸಿದಂತೆ ಅಮೆರಿಕದಲ್ಲಿ ಡಿನ್ನರ್ ಎಂದರೆ ಅದು ಕಾಕ್ ಟೈಲ್ ಡಿನ್ನರೇ ಆಗಿರುತ್ತದೆ. ಮನೆಗೆ ಬಂದ ಅತಿಥಿಗಳಿಗೆ ಊಟಕ್ಕೆ ಮೊದಲು ಡ್ರಿಂಕ್ಸ್ ಆಫರ್ ಮಾಡುವುದು ನಮ್ಮಲ್ಲಿ ಹೆಂಗಸರಿಗೆ ಅರಶಿನ ಕುಂಕುಮ ಕೊಡುವಷ್ಟೆ ಸಾಮಾನ್ಯ ಸಂಗತಿ! ಕುಡಿಯುವ ಅಭ್ಯಾಸವಿಲ್ಲದವರೂ ಅತಿಥಿಗಳಿಗಾಗಿ ಮನೆಯಲ್ಲಿ ಉತ್ತಮ ದರ್ಜೆಯ ಪಾನೀಯಗಳನ್ನು ಇಟ್ಟುಕೊಂಡಿರುತ್ತಾರೆ. ಐತಾಳರ ಪತ್ನಿ ಊಟದ ಸಿದ್ಧತೆ ಮಾಡತೊಡಗಿದಾಗ ಐತಾಳರು ಸೀತಾರಾಮ್ ಬಳಿ ಮೆಲುದನಿಯಲ್ಲಿ 'ಕಾಕ್ ಟೈಲ್ ಡಿನ್ನರ್ ನಡೆಯುತ್ತದಲ್ಲವೆ?' ಎಂದು ಕೇಳಿದರು. ವಲ್ಲೀಶರ ಮನೆಯಲ್ಲಿ ದಿನವೂ ಕಾಕ್ ಟೈಲ್ ಡಿನ್ನರ್ ಮಾಡಿ ದಣಿದಿದ್ದರಿಂದಲೋ ಏನೋ ಸೀತಾರಾಮ್ 'ಅವೆಲ್ಲ ಬೇಡ್ರಿ, ಸಿಂಪಲ್ ಊಟ, ಅನ್ನ ಸಾರು ಮಜ್ಜಿಗೆ ಸಾಕು' ಎಂದಾಗ ಐತಾಳರು ನಿರಾಶರಾದಂತೆ ಕಂಡರು. 'ಪರವಾಗಿಲ್ಲ. ಸ್ವಲ್ಪ ತಗೊಳಿ' ಎಂದು ಒತ್ತಾಯಿಸಿದರು. ಸೀತಾರಾಮ್ ಬೇಡವೆಂದರೂ ಐತಾಳರು ಒತ್ತಾಯ ಮಾಡಿ ಚೀರ್ಸ್ ಎಂದದ್ದು ಏಕೆ ಎಂಬುದು ಆಮೇಲೆ ತಿಳಿಯಿತು. ಐತಾಳರಿಗೆ ವಯಸ್ಸಾಗಿರುವುದರಿಂದ ಆರೋಗ್ಯದ ದೃಷ್ಟಿಯಿಂದ ಅಪರೂಪಕ್ಕೆ ಯಾರಾದರೂ ಅತಿಥಿಗಳು ಬಂದಾಗ ಮಾತ್ರ ಪಾನಗೋಷ್ಠಿಗೆ ಅವಕಾಶವಂತೆ! ವಿದ್ಯಾ ಹೇಳಿದಂತೆ ಐತಾಳರ ಪತ್ನಿ ಲಕ್ಷ್ಮಿಯವರ ಅಡುಗೆ ಬಹಳ ರುಚಿಯಾಗಿತ್ತು. ಐತಾಳರೊಂದಿಗಿನ ನಮ್ಮ ಮಾತುಕತೆಯೂ ಸ್ವಾರಸ್ಯಕರವಾಗಿತ್ತು.

'ಆಹಿತಾನಲ' ಎಂಬ ಅವರ ಕಾವ್ಯನಾಮದ ಬಗ್ಗೆ ಕೇಳಿದಾಗ ನಾಗ ಐತಾಳರು 'ಅದು ಐತಾಳ ಎಂಬ ಶಬ್ದದ ಮೂಲ ರೂಪ. ಅನೇಕರು ಅದನ್ನು 'ಅಹಿತಾನಳ' ಎಂದು ತಪ್ಪಾಗಿ ಬರೆಯುತ್ತಾರೆ ಮಾರಾಯ್ರೆ' ಎಂದು ಬೇಸರ ವ್ಯಕ್ತಪಡಿಸಿದರು. ನಾನು ಹೌದ್, ಆಹಿತವನ್ನು ಅಹಿತವೆನ್ನುವುದು ವಿಹಿತವಲ್ಲ. ಆದರೆ ಅದು ನಮ್ಮ ಕೈಯಲ್ಲಿಲ್ಲ. ನನ್ನ ಡುಂಡಿರಾಜ್ ಎಂಬ ಹೆಸರನ್ನೂ ಬಹಳಷ್ಟು ಜನ ದುಂಡಿರಾಜ್ ಎಂದು ತಪ್ಪಾಗಿ

ಬರೆಯುತ್ತಾರೆ. ಈ ವಿಷಯದಲ್ಲಿ ನಾವಿಬ್ಬರೂ ಸಮಾನ ದುಃಖಿಗಳು' ಎಂದು ಸಮಾಧಾನಪಡಿಸಿದೆ.

ಆ ದಿನ ನಾನು ಐತಾಳರಿಗೆ ನನ್ನ ಒಂದು ಪುಸ್ತಕವನ್ನು ಉಡುಗೊರೆಯಾಗಿ ಕೊಟ್ಟೆ. ಅದಕ್ಕೆ ಪ್ರತಿಯಾಗಿ ಅವರು ನನಗೆ ತಮ್ಮ ನಾಲ್ಕು ಪುಸ್ತಕಗಳನ್ನು ನೀಡಿದರು. ಐತಾಳರು ಜೀವ ರಸಾಯನಶಾಸ್ತ್ರದ ವಿಜ್ಞಾನಿ. ಅರವತ್ತರ ದಶಕದಲ್ಲಿ ಅಮೆರಿಕಕ್ಕೆ ಬಂದವರು, 'ಅಮೆರಿಕನ್ನಡಿಗನೊಬ್ಬನ ದಿನಚರಿಯಿಂದ' ಎಂಬ ಕೃತಿಯಲ್ಲಿ ಅವರ ಹೋರಾಟದ ಬದುಕಿನ ಚಿತ್ರಣವಿದೆ. ನಿವೃತ್ತಿಯ ನಂತರ ಬರವಣಿಗೆ ಆರಂಭಿಸಿದರೂ ಅವರದ್ದು ಉತ್ತಮ ಬರವಣಿಗೆ. ಬೆಂಗಳೂರಿಗೆ ಬಂದಾಗಲೆಲ್ಲ ರಾಶಿ ರಾಶಿ ಕನ್ನಡ ಪುಸ್ತಕಗಳನ್ನು ಖರೀದಿಸಿ ಕೊಂಡೊಯ್ಯುತ್ತಿದ್ದರು.

ಒಮ್ಮೆ ಅವರನ್ನು ನಾನು ಬಸವನಗುಡಿಯಲ್ಲಿ ಆಕಸ್ಮಿಕವಾಗಿ ಭೇಟಿಯಾಗಿದ್ದೆ. ನಮ್ಮ ಮನೆಗೆ ಊಟಕ್ಕೆ ಬರುವಂತೆ ಆಹ್ವಾನಿಸಿದೆ. ಅಮೆರಿಕೆಗೆ ವಾಪಾಸು ಹೋಗುವ ಗಡಿಬಿಡಿಯಲ್ಲೂ ನನ್ನ ಆಹ್ವಾನವನ್ನು ಮನ್ನಿಸಿ ಐತಾಳ ದಂಪತಿ ನಮ್ಮ ಮನೆಗೆ ಬಂದಿದ್ದರು. ಮೇ, 2022ರಲ್ಲಿ ನಾನು ಸಿಯಾಟೆಲ್‌ನಲ್ಲಿರುವ ಮಗನ ಮನೆಗೆ ಹೋಗಿದ್ದಾಗ ಲೇಖಕಿ ನಳಿನಿ ಮೈಯ್ಯ ಅವರೊಂದಿಗೆ ದೂರವಾಣಿಯಲ್ಲಿ ಮಾತನಾಡಿದ್ದೆ. ಆಗ ಅವರು 'ನೀವು ಅಮೆರಿಕಕ್ಕೆ ಬಂದಿರುವುದು ಐತಾಳರಿಗೆ ಗೊತ್ತಾಗಿದೆ, ನಿಮ್ಮೊಂದಿಗೆ ಮಾತಾಡಲು ಬಯಸಿದ್ದಾರೆ ಆದರೆ ಅವರಿಗೆ ವಾಟ್ಸಾಪ್ ಕರೆ ಮಾಡಲು ಆಗುತ್ತಿಲ್ಲವಂತೆ, ನೀವೇ ಕರೆ ಮಾಡಿ' ಎಂದಿದ್ದರು. ನಾನು ಕರೆ ಮಾಡಲು ಪ್ರಯತ್ನಿಸಿದೆ, ಆದರೆ ಸಂಪರ್ಕ ಸಿಗಲಿಲ್ಲ. ಈಗ ಅವರು ಇನ್ನೆಂದೂ ಸಂಪರ್ಕಿಸಲು ಸಾಧ್ಯವಾಗದ ಲೋಕಕ್ಕೆ ಹೋಗಿದ್ದಾರೆ. ಅಗಲಿದ ಆತ್ಮೀಯ ಲೇಖಕ ಬಂಧು, ಆಹಿತಾನಲ ಕಾವ್ಯನಾಮಾಂಕಿತ ನಾಗ ಐತಾಳರಿಗೆ ನಮನಗಳು.

*

ಕಡುಚಳಿಯ ಆ ರಾತ್ರಿಯಲ್ಲಿ...

– ಚಿಟ್ಟಿ

ಅದೊಂದು ಕಡುಚಳಿಯ ಗುರುವಾರ ಸಂಜೆ ಚಿಕಾಗೋದಲ್ಲಿ, ಜನವರಿ ನಾಲ್ಕನೆಯ ತಾರೀಖು. ಇನ್ನೂ ಐದು ಗಂಟೆಯಷ್ಟೆ! ಹೊರಗೆ ಕತ್ತಲು ಆವರಿಸಿಯಾಗಿತ್ತು. ನನ್ನೊಳಗೂ ಕತ್ತಲು! ಇದೇ ನಾಲ್ಕು ದಿನಗಳ ಹಿಂದೆ ನಾನು ಯಾರ ಆಸರೆಯನ್ನು ನಂಬಿ, ಯಾರ ಕೈ ಹಿಡಿದು ಪರಿಚಿತ ಪರಿಸರವನ್ನು ಬಿಟ್ಟು ಅಮೆರಿಕಾ ಎಂಬ ಈ ಹೊಸ ದೇಶಕ್ಕೆ ಬಂದಿದ್ದೆನೋ ಆತ ನನ್ನ ಕೈ ಬಿಟ್ಟಿದ್ದ! ಒಬ್ಬಂಟಿತನ ನನ್ನನ್ನು ನುಂಗುತ್ತಿತ್ತು, ನೀರಿನಿಂದ ಹೊರತೆಗೆದ ಮೀನಿನಂತೆ ವಿಲವಿಲ ಒದ್ದಾಡುತ್ತಿದ್ದೆ ನಾನು, ನನ್ನಲ್ಲಿದ್ದ ಆತ್ಮವಿಶ್ವಾಸ ಪೂರ್ತಿಯಾಗಿ ಇಂಗಿತ್ತು. ಆತಂಕ, ಭಯ, ಹತಾಶೆ ಮುಂತಾದವು ಅಲೆಯಲೆಯಾಗಿ ಬಂದು ಮನಸ್ಸಿನಲ್ಲಿ ಅಪ್ಪಳಿಸುತ್ತಿದ್ದವು. ಒಮ್ಮೆಲೆ ಫೋನ್ ರಿಂಗ್ ಆಯಿತು. ಯಾರಿರಬಹುದು! ನನ್ನ ಫೋನ್ ನಂಬರ್ ಇತ್ತೀಚೆಗೆ ಬದಲಾಗಿತ್ತು. ಹೊಸ ಫೋನ್ ನಂಬರನ್ನು ಇನ್ನೂ ಯಾರಿಗೂ ಕೊಟ್ಟಿರಲಿಲ್ಲ. ಫೋನ್ ಎತ್ತಿದಾಗ ಆ ಕಡೆಯಿಂದ ಮಾತಾಡಿದ್ದು ಲಕ್ಷ್ಮಿ ಐತಾಳ್ ಆಂಟಿ ಆಗಿದ್ದರು. ಅವರಿಗೆ ಇನ್ನೊಬ್ಬ ಗೆಳತಿ ನಂಬರ್ ಕೊಟ್ಟಿದ್ದಂತೆ. ಆಕೆಗೆ ಅದು ಹೇಗೆ ನನ್ನ ನಂಬರ್ ಸಿಕ್ಕಿತೋ! ಆಂಟಿ ತುಂಬ ಕಳಕಳಿಯಿಂದ 'ಹೇಗಿದ್ದೀಯಾ?' ಎಂದು ವಿಚಾರಿಸಿದರು. 'ನಾಳೆ ನಿನ್ನನ್ನು ನೋಡೋಕೆ ಬರ್ತೀವಿ ನೀನು ವರ್ಕ್ ಮುಗಿಸಿ ಮನೆಗೆ ಬಂದಮೇಲೆ' ಎಂದರು. ನಾನು ಅವರಿಗೆ ನನ್ನ

ವಿಳಾಸ ಕೊಟ್ಟು, ಸಂಜೆ ಸುಮಾರು ಯಾವ ಹೊತ್ತಿಗೆ ಮನೆಗೆ ವಾಪಸಾಗುತ್ತೀನಿ ಎಂದು ಹೇಳಿದೆ.

ಮರುದಿನ ನಾನು ಮನೆಗೆ ಬಂದು ಅನ್ನಕ್ಕೆ ಇಟ್ಟಿದ್ದೆ ಅಷ್ಟೆ. ಅನ್ನ ಇನ್ನೂ ಆಗಿರಲಿಲ್ಲ, ಅಷ್ಟರಲ್ಲಿ ಐತಾಳ ಅಂಕಲ್ ಮತ್ತು ಆಂಟಿ ಬಂದೇಬಿಟ್ಟರು. ಮನೆಯಲ್ಲಿ ಇದ್ದಿದ್ದೇ ಎರಡು ಕುರ್ಚಿಗಳು. ಅವರನ್ನು ಅಲ್ಲಿ ಕುಳಿತುಕೊಳ್ಳಲು ಹೇಳಿ ನಾನು ನೆಲದ ಮೇಲೆ ಕುಳಿತೆ. ಕೂಡಲೇ ಲಕ್ಷ್ಮಿ ಆಂಟಿ ಕುರ್ಚಿಯಿಂದ ಎದ್ದು ಬಂದು ತಾವೂ ನೆಲದಲ್ಲೇ ನನ್ನ ಪಕ್ಕ ಕುಳಿತರು. ಆ ಒಂದು ನಡೆಯಲ್ಲಿ ಅವರು 'ನಾವು ನಿನ್ನವರು. ಸಂಕೋಚ ಬೇಡ. ಬೆಂಗಾವಲಾಗಿ ಇರುತ್ತೇವೆ' ಎಂದು ಮಾತಿಲ್ಲದೆ ಹೇಳಿದಂತಿತ್ತು! ನನ್ನ ಕಥೆಯನ್ನೆಲ್ಲ ಕೇಳುತ್ತಿದ್ದಂತೆ ಅವರ ಮುಖದಲ್ಲಿ ನೋವು, ಸಂತಾಪ, ಪ್ರೀತಿ, ಕಾಳಜಿ, ಕಳಕಳಿ ಎಷ್ಟೆಲ್ಲ ಭಾವನೆಗಳು ಹಾದುಹೋದವು! ಸಂಕೋಚ ಸ್ವಭಾವದವಳಾದ ನಾನು ಎಷ್ಟು ಬೇಡವೆಂದರೂ ಕೇಳದೆ 'ನಮ್ಮ ಮನೆಗೇ ಬಂದು ಊಟ ಮಾಡಬೇಕು' ಎಂದು ಬಲವಂತ ಮಾಡಿದರು. 'ಇಲ್ಲ, ಇನ್ನೂ ಲಾಂಡ್ರಿ ಕೆಲಸ ಬಾಕಿ ಇದೆ, ವೀಕೆಂಡಿನಲ್ಲಿ ಮಾಡಬೇಕಾದ್ದು ಏನೆಲ್ಲ ಇದೆ', ಎಂದು ಹೇಳುತ್ತಿದ್ದ ನನ್ನ ಸಬೂಬುಗಳನ್ನು ಲೆಕ್ಕಿಸದೆ 'ನಿನ್ನ ಲಾಂಡ್ರಿ ನಮ್ಮ ಮನೆಯಲ್ಲೇ ಮಾಡಬಹುದು', ಅಂತ ನನ್ನನ್ನು ತಮ್ಮ ಮನೆಗೆ ಎಳೆದುಕೊಂಡು ಹೋದರು. ಅಲ್ಲಿ ಪುಷ್ಕಳ ಭೋಜನವಾಯಿತು! ಶನಿವಾರವನ್ನೂ ಅಲ್ಲೇ ಕಳೆದ ಮೇಲೆ ಭಾನುವಾರ ನನ್ನನ್ನು ವಾಪಾಸು ಕರೆದುಕೊಂಡು ಬಂದು ಬಿಟ್ಟರು.

ನಿಜ ಹೇಳಬೇಕೆಂದರೆ ಐತಾಳ ದಂಪತಿ ನನಗೆ ಅಷ್ಟೇನು ಚೆನ್ನಾಗಿ ಗೊತ್ತಿರುವವರಲ್ಲ. ನನ್ನ ತಂದೆ-ತಾಯಿಯ ಪರಿಚಯ ಅವರಿಗಿತ್ತು. ನಾನು ಇಂಥವರ ಮಗಳು ಎಂಬ ಸ್ಥೂಲ ಪರಿಚಯ ಅಷ್ಟೆ. ಅವರು ಭಾರತಕ್ಕೆ ಬಂದಾಗೆಲ್ಲ ನಮ್ಮ ಮನೆಗೆ ಬರುವ ವಾಡಿಕೆ ಏನೂ ಇರಲಿಲ್ಲ. ಬಂಧು ಬಾಂಧವರ ಆತಿಥ್ಯ ಹೇರಳವಾಗಿ ನಡೆಯುತ್ತಿದ್ದ ನನ್ನ ತವರಿನಲ್ಲಿ ಅವರು ನಮ್ಮ ಮನೆಗೆ ಬಂದಿದ್ದ ನೆನಪೇ ಇಲ್ಲ ನನಗೆ ಅಮೆರಿಕಾಗೆ ಬಂದ ಮೇಲೆ ಒಮ್ಮೆ ಅವರ ಮನೆಗೆ ಊಟಕ್ಕೆ ಹೋಗಿದ್ದೆವು. ಅಷ್ಟೆ, ಆದರೂ ನನ್ನ ಸಂಕಷ್ಟದ ಸಮಯದಲ್ಲಿ ನನ್ನ ಮನೆ ಬಾಗಿಲಿನಲ್ಲಿ ಅದು ಹೇಗೆ ಪ್ರತ್ಯಕ್ಷರಾದರು! ಮಗಳೆಂಬ ಮಮತೆಯಿಂದ ನನ್ನ ಯೋಗಕ್ಷೇಮದ ಬಗ್ಗೆ ಅದೆಷ್ಟು ಮುತುವರ್ಜಿ ವಹಿಸಿದರು!

ಅದಾದ ನಂತರ ವಾರಾಂತ್ಯಗಳಲ್ಲಿ ಅವರ ಮನೆಗೆ ಹೋಗುವುದು ವಾಡಿಕೆಯಾಗಿಬಿಟ್ಟಿತು. ನನ್ನ ಹತ್ತಿರ ಕಾರ್ ಇಲ್ಲ ಎಂಬುದು ದೊಡ್ಡ ಸಮಸ್ಯೆ ಆಗಲೇ ಇಲ್ಲ. ಅವರಿಗೆ ಶುಕ್ರವಾರ ಸಂಜೆ ನಾನು ಬಸ್ ಹಿಡಿದು ಅವರ ಮನೆಗೆ ಹೋಗುತ್ತಿದ್ದೆ. ಭಾನುವಾರ ಸಂಜೆ ಐತಾಳ್ ಅಂಕಲ್ ನನ್ನನ್ನು ವಾಪಸ್ ಡ್ರಾಪ್ ಮಾಡುತ್ತಿದ್ದರು, ಈಗೊಮ್ಮೆ ಹಿಂದಿರುಗಿ ನೋಡಿದಾಗ ಐತಾಳ ಅಂಕಲ್ ಮತ್ತು

ಆಂಟಿ ನನ್ನ ಜೀವನವನ್ನು ಪ್ರವೇಶಿಸಿ ನನ್ನನ್ನು ತಮ್ಮ ಜೀವನದ ಒಂದು ಭಾಗವನ್ನಾಗಿ ಮಾಡಿಕೊಂಡಿದ್ದು, ನನ್ನ ಜೀವನದಲ್ಲಿ ಉಂಟಾದ ಒಂದು ದೊಡ್ಡ ಪವಾಡ! ಅವರ ಜೊತೆ ಕಳೆದ ಒಂದೊಂದು ಕ್ಷಣವೂ ನನ್ನ ಪಾಲಿಗೆ ಅಮೃತವಾಗಿತ್ತು! ಅವರಿಲ್ಲದೆ ಹೋಗಿದ್ದರೆ ನಾನು ಹತಾಶೆಯ ಪ್ರಪಾತದಲ್ಲಿ ಜಾರಿಹೋಗುತ್ತಿದ್ದೆ! 'ನಾನು ಬದುಕಿ ಏನು ಪ್ರಯೋಜನ? ಭೂಮಿಗೆ ಭಾರ, ಅನ್ನಕ್ಕೆ ದಂಡ' ಎಂಬ ಒಂದು ಬಗೆಯ ಖಿನ್ನತೆಯಲ್ಲಿ, ಕೀಳರಿಮೆಯಲ್ಲಿ ಕಳೆದುಹೋಗುತ್ತಿದ್ದೆ. ಅವರ ಒಡನಾಟದಲ್ಲಿ, ಸಾಂಗತ್ಯದಲ್ಲಿ ಕಳೆದ ಒಂದೊಂದು ಗಳಿಗೆಯೂ ನನ್ನ ಬದುಕನ್ನು ಶ್ರೀಮಂತವಾಗಿಸಿತು. ಅವರ ಮೂಲಕ ನಾನು ಮರುಹುಟ್ಟು ಪಡೆದೆ. ಪ್ರತಿ ಸಾರಿ ಅವರ ಮನೆಗೆ ಹೋದಾಗಲೂ ಅವರ ಮುಖದಲ್ಲಿ ಮೂಡುತ್ತಿದ್ದ ಪ್ರೀತಿಯ ನಿಸ್ಪೃಹವಾದ ಮುಗುಳ್ನಗೆಯೇ ನನ್ನ ಕೀಳರಿಮೆಯನ್ನು ಹೊಡೆದೋಡಿಸಿತ್ತು. ಹಾವು ತನ್ನ ಹಳೆಯ ಪೊರೆ ಕಳಚಿ ಹೊಸ ಚರ್ಮದಲ್ಲಿ ಶೋಭಿಸಿದಂತೆ ನನ್ನ ಹತಾಶ ಭಾವನೆಗಳನ್ನು ಕಳಚಿ ಬದುಕನ್ನು ಹೊಸ ಭರವಸೆಯಿಂದ, ಆತ್ಮವಿಶ್ವಾಸದಿಂದ ಸ್ವಾಗತಿಸುವಂತೆ ಮಾಡಿದವರು ಅವರು. ಒಂದು ವೇಳೆ ಆರ್ಥಿಕ ನೆರವು ಬೇಕಾದ ಪರಿಸ್ಥಿತಿ ಬಂದಿದ್ದರೆ ತುಂಬು ಮನಸ್ಸಿನಿಂದ ಅದನ್ನೂ ಮಾಡುತ್ತಿದ್ದರು ಎಂಬುದರಲ್ಲಿ ಸಂದೇಹವೇ ಇಲ್ಲ.

ನಾನು ಅನುಭವಿಸಿದಂಥ ಪರಿಸ್ಥಿತಿ ಇನ್ನೆಷ್ಟೋ ಹೆಣ್ಣುಗಳಿಗೆ ಉಂಟಾಗಿದೆ ಎಂದು ಬಲ್ಲೆ, ಅವರೆಲ್ಲರಿಗೂ ಐತಾಳ ದಂಪತಿಗಳಂಥ ಭರವಸೆಯ ಬೆಳಕು ಸಿಕ್ಕಿಲ್ಲ ಅಂತಲೂ ಗೊತ್ತು. ಆ ವಿಷಯದಲ್ಲಿ ನಾನು ನಿಜವಾಗಿಯೂ ಭಾಗ್ಯಶಾಲಿ. ಅವರು ಆ ಚಳಿಗಾಲದ ರಾತ್ರಿಯಲ್ಲಿ ನಮ್ಮ ಮನೆಗೆ ಕೊಟ್ಟ ಭೇಟಿ ನನ್ನ ಜೀವನದಲ್ಲಿ ಹೊಸ ತಿರುವನ್ನು ನೀಡಿತು. ಮುಂಬರುವ ನಾಳೆಗಳನ್ನು ಹೊಸ ಹುಮ್ಮಸ್ಸಿನಿಂದ ಎದುರುನೋಡುವಂತೆ ಮಾಡಿತು. ಅವರ ಮನೆಯ ಪ್ರತಿಯೊಂದು ಸಮಾರಂಭದಲ್ಲಿ, ಪಾರ್ಟಿಗಳಲ್ಲಿ ನಾನಿರುತ್ತಿದ್ದೆ. ಬೇರೆಯವರ ಮನೆಗೆ ಆಹ್ವಾನಿತರಾಗಿ ಅವರು ಹೋದಾಗ ಸ್ವಂತ ಮಗಳಂತೆ ನನ್ನನ್ನೂ ಕರೆದುಕೊಂಡು ಹೋಗುತ್ತಿದ್ದರು. ಅಕಸ್ಮಾತ್ 'ನಾನು ಬರುವುದಿಲ್ಲ, ಮನೆಯಲ್ಲೇ ಇರ್ತೀನಿ ನೀವು ಹೋಗಿ' ಎಂದರೆ 'ನೀನು ಬರದಿದ್ದರೆ ನಾವೂ ಹೋಗಲ್ಲ' ಎಂದುಬಿಡುತ್ತಿದ್ದರು! ಐತಾಳ್ ಅಂಕಲ್ ಮತ್ತು ಆಂಟಿಯಲ್ಲಿ ನಾನು ಗಮನಿಸಿದ ಒಂದು ಅಂಶವೆಂದರೆ ಅವರು ಅತಿ ಸರಳವಾಗಿ, ಸಹಜವಾಗಿ ಎಲ್ಲರ ಜೊತೆ ಬೆರೆಯುತ್ತಿದ್ದದ್ದು. ಯಾವ ತೋರಿಕೆಯ ಆಡಂಬರ ಇಲ್ಲ, ಹಮ್ಮು, ಬಿಮ್ಮು, ಬಿಂಕ, ಬಿಗುಮಾನ ಏನೂ ಇಲ್ಲ. ಅತ್ಯಂತ ಆತ್ಮೀಯವಾಗಿ ಒಡನಾಡುತ್ತಿದ್ದರು. ನಮ್ಮ ಮನೆಗೆ ಅವರು ಬಂದಾಗಲಂತೂ ಮನೆಯವರಂತೆಯೇ ಇರುತ್ತಿದ್ದರು.

ಆ ಕಡುಚಳಿಯ ಜನವರಿ ತಿಂಗಳ ರಾತ್ರಿಯನ್ನು ನಾನು ಮರೆಯುವಂತೆಯೇ ಇಲ್ಲ! ಸ್ವಭಾವತಃ ಸಂಕೋಚದವಳಾದ ನಾನು, ನಾನಾಗಿಯೇ ಮುಂದಾಗಿ ಇನ್ನೊಬ್ಬರಿಗೆ ಸ್ನೇಹಹಸ್ತ ಚಾಚುವವಳಲ್ಲ. ಅವರು ಬಗೆಬಗೆಯಾಗಿ ನನ್ನನ್ನು 'ಮನೆಗೆ ಬಾ' ಎಂದು

ಕರೆದಾಗ ನಾನು 'ಬರುವುದಿಲ್ಲ' ಎಂದು ಕೊಟ್ಟ ಸಬೂಬುಗಳೆಷ್ಟೋ! ಆಗ ಅವರು 'ಬಾರದಿದ್ದರೆ ಬಿಡಲಿ' ಎಂದು ನನ್ನನ್ನು ಹಾಗೇ ಬಿಟ್ಟುಬಿಡಬಹುದಿತ್ತು. ಮಖೇಡಿಯಂತೆ ಒಳಗೊಳಗೆ ಇದ್ದ ನನ್ನ ಜೊತೆ ಬಿಡದೆ, ನನ್ನಲ್ಲಿನ ಯಾವ ಕುಂದು ಕೊರತೆಗಳನ್ನೂ ಲೆಕ್ಕಿಸದೆ ನಿರಂತರ ಬೆಂಬಲ ನೀಡಿದ ಅವರಿಗೆ ಯಾವ ರೀತಿಯಲ್ಲಿ ತಾನೆ ಕೃತಜ್ಞತೆ ಸಲ್ಲಿಸಬಹುದು! ಕೆ. ಎಸ್. ನರಸಿಂಹಸ್ವಾಮಿ ಅವರು ಹೇಳಿದಂತೆ 'ನಿಮ್ಮ ಪ್ರೀತಿಗೆ, ಅದರ ರೀತಿಗೆ ಕಣ್ಣ ಹನಿಗಳೆ ಕಾಣಿಕೆ'.

*

ಆತ್ಮೀಯ ಐತಾಳರು

ಇಂಗ್ಲಿಷ್ ಮೂಲ : ಗುಂಡೂ ಶಂಕರ್

ಕನ್ನಡಕ್ಕೆ: ಜ್ಯೋತಿ ವೆಂಕಟಸುಬ್ರಹ್ಮಣ್ಯ

ನಮ್ಮೆಲ್ಲರ ಆತ್ಮೀಯ ಗೆಳೆಯ ಮತ್ತು ಸುದೀರ್ಘ ಕಾಲದವರೆಗೆ ಕನ್ನಡ ಸಾಹಿತ್ಯ ರಂಗದ (ಕಸಾರಂ) ಅಧ್ಯಕ್ಷತೆಯನ್ನು ವಹಿಸಿದ್ದ ಪ್ರಿಯ ನಾಗ ಐತಾಳರ ನೆನಪಿನಲ್ಲಿ ಈ ಲೇಖನವನ್ನು ನಾನು ದುಃಖದಿಂದಲೇ ಬರೆಯುತ್ತಿದ್ದೇನೆ. ನಳಿನಿ ಮೈಯ್ಯ ನನಗೆ ಕರೆ ಮಾಡಿ ಐತಾಳರ ಬಹುಮುಖಿ ಸಾಧನೆಗಳ ಬಗ್ಗೆ ಪ್ರಕಟಿಸಬೇಕೆಂದಿರುವ ಪುಸ್ತಕದ ಬಗ್ಗೆ ಹೇಳಿದರು. ಆಗ ನನಗೆ ನೆನಪಾಗಿದ್ದು ಯು. ಆರ್. ಅನಂತಮೂರ್ತಿಯವರನ್ನು ಕುರಿತಾದ ಐತಾಳರೇ ಸಂಪಾದಿಸಿದ 'ಅನಂತಮುಖದ ಮೂರ್ತಿ' ಪುಸ್ತಕ. (ಐತಾಳರು ನನ್ನನ್ನೂ ಆ ಗ್ರಂಥಕ್ಕಾಗಿ ಬರೆಯಬೇಕೆಂದು ಕೇಳಿಕೊಂಡಿದ್ದರೂ, ಬೇರೆ ಕೆಲವು ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದರಿಂದ ಸಮಯದ ಅಭಾವವಾಗಿ ನನಗೆ ಬರೆಯಲಾಗಿರಲಿಲ್ಲ. ಅದಕ್ಕಾಗಿ ನನಗೆ ಇನ್ನೂ ವಿಷಾದವಿದೆ). ನಮ್ಮ 'ಅನಂತಮುಖಿ ಐತಾಳ'ರನ್ನೂ ಅಂತಹುದೇ ಸ್ಮಾರಕ ಗ್ರಂಥದ ಮೂಲಕ ಗೌರವಪೂರ್ವಕವಾಗಿ ನೆನೆಪಿಸಿಕೊಳ್ಳುವುದು ಯೋಗ್ಯವಾಗಿಯೇ ಇದೆ.

ಈ ಲೇಖನದ ಉದ್ದೇಶ ನಮ್ಮ ಐತಾಳರು ಕಸಾರಂನ ಅಧ್ಯಕ್ಷರಾಗಿ ಸಲ್ಲಿಸಿದ ಅಪಾರ ಸೇವೆಯ ಕುರಿತು ಹೇಳುವುದು. ಕಸಾರಂನ ಪರಿಕಲ್ಪನೆ, ಗುರಿಗಳು ಹುಟ್ಟಿದ್ದು

2000ರಲ್ಲಿ. ಆಗ ಅನಂತಮೂರ್ತಿಯವರು ಯುಪೆನ್ ವಿಶ್ವವಿದ್ಯಾಲಯದಲ್ಲಿ ಒಂದು ಶೈಕ್ಷಣಿಕ ಅವಧಿಯ ಮಟ್ಟಿಗೆ ತರಗತಿಗಳನ್ನು ತೆಗೆದುಕೊಳ್ಳಲು ಅಮೇರಿಕೆಗೆ ಬಂದಿದ್ದರು. ಅನಂತಮೂರ್ತಿ, ಹೆಚ್. ವೈ. ರಾಜಗೋಪಾಲ್, ಹೆಚ್. ಕೆ. ಚಂದ್ರಶೇಖರ್, ನಾಗ ಐತಾಳ್, ಪಿ. ಶ್ರೀನಿವಾಸರಾವ್ ಮತ್ತು ಇನ್ನೂ ಕೆಲವರ ನಡುವೆ ಸಂಭಾಷಣೆಗಳು, ವಿಚಾರ ವಿನಿಮಯಗಳು ನಡೆದವು. ಈ ಪರಿಕಲ್ಪನೆ ನಿರ್ದಿಷ್ಟ ರೂಪ ಪಡೆದುಕೊಳ್ಳುವ ದಿಸೆಯಲ್ಲಿ ಸಾಗಿತು ಮತ್ತು ಕಸಾರಂನ ಕನಸನ್ನು ನನಸಾಗಿಸುವ ದಿಟ್ಟಿನಲ್ಲಿ ಕಾರ್ಯನಿರ್ವಹಣೆಗಾಗಿ ಮುಖ್ಯ ತಂಡವು ತಯಾರಾಯಿತು. ನಾನು ಐತಾಳರನ್ನು ಮೊದಲು ಭೆಟ್ಟಿ ಮಾಡಿದ್ದು 2000ರಲ್ಲಿ. ಆದರೆ ಕಸಾರಂನ ಪೂರ್ವಭಾವೀ ಕಾರ್ಯಗಳಲ್ಲಿ ಅವರ ಜೊತೆ ತೊಡಗಿಸಿಕೊಂಡಿದ್ದು ಸುಮಾರು 2003ರ ಅಕ್ಟೋಬರ್–ನವೆಂಬರ್ ಹೊತ್ತಿಗೆ. 2004ರಲ್ಲಿ ಕಸಾರಂ ಅಧಿಕೃತವಾಗಿ ಒಂದು ಲಾಭ ನಿರಪೇಕ್ಷ ಸಂಸ್ಥೆಯಾಗಿ (Non-Profit Organization) ಪ್ರಾರಂಭವಾಯಿತು ಮತ್ತು ಪ್ರಕ್ರಿಯೆ ಪೂರ್ಣವಾಗಲು ಮತ್ತು ಕಸಾರಂ501 (c) (3) ಸಂಸ್ಥೆಯೆಂದು ಅಧಿಕೃತವಾಗಿ ಗುರುತಿಸುವಂತೆ ಮಾಡಲು ಕೊಂಚ ಹೆಚ್ಚಿನ ಪ್ರಯತ್ನಪಡಬೇಕಾಯಿತು. ಆ ಸಮಯದಲ್ಲಿ ನಾನು ಐತಾಳರ ಜೊತೆಯಲ್ಲಿ ಸೇರಿ ಕೆಲಸ ಮಾಡಿದ್ದು. ಆಗ ಈ ತಂಡದಲ್ಲಿ ನಾನು, ಹೆಚ್. ವೈ. ರಾಜಗೋಪಾಲ್, ಹೆಚ್. ಕೆ. ಚಂದ್ರಶೇಖರ್, ಗೋಪಾಲ್ ಕುಕ್ಕೆ, ನಾಗ ಐತಾಳರು ಇದ್ದೆವು. ಇಂತಹ ಒಂದು ಸಂಸ್ಥೆಯನ್ನು ಹುಟ್ಟುಹಾಕಲು ಐಆರ್ಎಸ್ (IRS) ನ ಎಲ್ಲ ಕಟ್ಟಳೆಗಳು, ನಿಯಮಗಳನ್ನು ಅರ್ಥ ಮಾಡಿಕೊಂಡು ಮುಂದುವರೆಯಬೇಕಿತ್ತು. ಇದಕ್ಕಾಗಿ ನಾವು ನಡೆಸಿದ ಅನೇಕ ಸಭೆಗಳು, ಮಾತುಕತೆಗಳೆಲ್ಲ ಇನ್ನೂ ನೆನಪಿನಲ್ಲಿದೆ. ಇದು ಅನೇಕ ಭೇಟಿಗಳನ್ನು, ಕಾಗದಪತ್ರಗಳ ಕೆಲಸವನ್ನೂ ಒಳಗೊಂಡಿತ್ತು. (ಸಣ್ಣ ಸಂಸ್ಥೆಗಳಿಗೆ ಲಾಭ ನಿರಪೇಕ್ಷ ಎಂಬ ಮಾನ್ಯತೆ ಸಿಗುವುದು ಬಹಳ ಮುಖ್ಯ. ಇದರಿಂದ ನಮಗೆ ಕಾರ್ಯಕ್ರಮಗಳನ್ನು ಆಯೋಜಿಸುವುದು, ಪುಸ್ತಕಗಳನ್ನು ಪ್ರಕಟಿಸುವುದು ಮತ್ತು ಭಾರತದಿಂದ ಕಾರ್ಯಕ್ರಮಗಳಿಗೆ ಅತಿಥಿಗಳನ್ನು ಕರೆಸುವುದು ಇವೆಲ್ಲಕ್ಕಾಗಿ ದೇಣಿಗೆಗಳನ್ನು ಸಂಗ್ರಹಿಸುವುದು ಸುಗಮವಾಗುತ್ತದೆ. ಈ ದೇಣಿಗೆಗಳಿಗೆ ತೆರಿಗೆಯಿಂದ ವಿನಾಯತಿ ಇರುವುದರಿಂದ ಕಸಾರಂಗೆ ಹಣ ಕೊಡುವವರಿಗೆ ಪ್ರೋತ್ಸಾಹವೂ ದೊರಕುತ್ತದೆ). ಐತಾಳರ ಪುತ್ರ ಅರವಿಂದ್ ವಕೀಲರಾಗಿರುವುದರಿಂದ ಅವರೇ ನಮ್ಮ ಕಾನೂನು ಸಲಹಾಗಾರರಾದರು. ಅರವಿಂದರ ನ್ಯೂ ಜೆರ್ಸಿಯ ಮನೆಯಲ್ಲಿ ಕೂಡಾ ಅನೇಕ ಸಭೆಗಳನ್ನು ನಡೆಸಿದವು.

ಆ ದಿನಗಳಲ್ಲೂ ಐತಾಳರ ಜೊತೆ ಕೆಲಸ ಮಾಡುವುದೆಂದರೆ ಖುಷಿ ಕೊಡುವ ಸಂಗತಿಯಾಗಿತ್ತು. ಅವರದು ಪ್ರಸನ್ನವಾದ ತರಾತುರಿಯಿಲ್ಲದ ವೈಖರಿ. ತಮ್ಮ ಅಭಿಪ್ರಾಯ ಮಂಡಿಸುವ ಮುನ್ನ ಬೇರೆ ಎಲ್ಲರ ಮಾತನ್ನು ಕೇಳಿಕೊಳುವ ತಾಳ್ಮೆ ಅವರಲ್ಲಿತ್ತು. ಕೀಟಲೆಯಿಂದ ಕೂಡಿದ ಅವರ ಹಾಸ್ಯ ಪ್ರವೃತ್ತಿ ಸಾಮಾನ್ಯವಾಗಿ ಎದ್ದು ಕಾಣದಿದ್ದರೂ

ಸರಿಯಾದ ಸಮಯಕ್ಕೆ ಹಾಸ್ಯ ಚಟಾಕಿಯಾಗಿಯೋ, ಸಂದರ್ಭಕ್ಕೆ ತಕ್ಕಂತೆ ಪದವಿನೋದವಾಗಿಯೋ ಹೊರಬರುತ್ತಿತ್ತು. ಗೆಳೆಯರ ಜೊತೆಯಲ್ಲಿ ಒಂದೆರಡು ಡ್ರಿಂಕ್ಸ್ ತೆಗೆದುಕೊಳ್ಳುವುದಕ್ಕೆ ಅವರಿಗೆ ಅಭ್ಯಂತರವೇನೂ ಇರಲಿಲ್ಲ. ಅದರೊಂದಿಗೇ ಅದೆಷ್ಟೋ ವಿಷಯಗಳ ಬಗ್ಗೆ ನಮ್ಮ ಮಾತುಕತೆ ನಿರರ್ಗಳವಾಗಿ ಹರಿಯುತ್ತಿತ್ತು. ಇಂತಹ ಸ್ನೇಹಪೂರ್ಣ, ಆಹ್ಲಾದಕರ ವಾತಾವರಣದಲ್ಲಿ ಹುಟ್ಟಿತು ನಮ್ಮ ಕಸಾರಂ. ಇಂದಿಗೂ ಅದೇ ಮಾದರಿಯನ್ನೇ ಕಾಪಾಡಿಕೊಂಡು ಬಂದಿದೆ ಎಂದು ನನ್ನ ನಂಬಿಕೆ. ಕಸಾರಂನ ಉಪಕ್ರಮದಿಂದ ಹಿಡಿದು ಕಸಾರಂನ ಕಾರ್ಯಕ್ರಮಗಳ ರೂಪರೇಷೆ, ಆಯೋಜನೆಗಳಲ್ಲೂ ಐತಾಳರು ತಮ್ಮನ್ನು ತೊಡಗಿಸಿಕೊಳ್ಳುತ್ತಿದ್ದರು. ಇದೆಲ್ಲಾ ಚಟುವಟಿಕೆಗಳಲ್ಲಿ ಬಹಳ ಸಕ್ರಿಯವಾಗಿ ಕಾರ್ಯಶೀಲರಾಗಿದ್ದರು. ಸ್ಥಳೀಯ ಸಂಸ್ಥೆಗಳೊಂದಿಗೆ ಒಡನಾಡಿಯಾಗಿ ಕೆಲಸ ಮಾಡುವಾಗ ಅವರೆಲ್ಲರ ಗೌರವವನ್ನೂ ಸಂಪಾದಿಸಿದ್ದರು. ಕಾಲ ಕಳೆದಂತೆ ಅವರಿಗೆ ಎಲ್ಲೆಡೆ ಹೋಗಿ ಬರುವುದಕ್ಕೆ ತೊಂದರೆಯಾದರೂ ಕಸಾರಂನ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವುದನ್ನು ಬಿಟ್ಟಿರಲಿಲ್ಲ. ಕಸಾರಂನಲ್ಲಿ ಬಹು ಪ್ರಮುಖ ಪಾತ್ರಗಳನ್ನು ವಹಿಸಿ ಮಹತ್ವದ ಕಾರ್ಯಗಳನ್ನು ನಿರ್ವಹಿಸಿದ್ದರೂ ಐತಾಳರು ಎಂದೂ ಅದನ್ನು ತೋರ್ಪಡಿಸುತ್ತಿರಲಿಲ್ಲ. ಕಸಾರಂನ ಅತ್ಯಂತ ಹಿರಿಯ ಸದಸ್ಯರಲ್ಲಿ ಒಬ್ಬರಾಗಿದ್ದರಿಂದ ಅನೇಕ ಕಾರ್ಯಕ್ರಮಗಳಲ್ಲಿ ಮುಖ್ಯ ಪಾತ್ರ ವಹಿಸಬೇಕಾಗುತ್ತಿತ್ತು. ಐತಾಳರು ಅದನ್ನೆಲ್ಲಾ ಯಾವುದೇ ಆಡಂಬರವಿಲ್ಲದೆ ನಿರ್ವಹಿಸುತ್ತಿದ್ದರು. ವೇದಿಕೆಯ ಮೇಲೂ ಅವರ ಉಪಸ್ಥಿತಿ ಬಹಳ ವಿನೀತವಾಗಿ, ಸೌಜನ್ಯಪೂರ್ಣವಾಗಿರುತ್ತಿತ್ತು. ಐತಾಳರ ಮಾತು ಬಹಳ ಕಡಿಮೆ, ಮನ್ನಣೆಯ ದಾಹ ಅವರಲ್ಲಿ ಇರಲೇ ಇಲ್ಲ. ಎಲೆಮರೆ ಕಾಯಿಯಂತೆ ಇದ್ದುಬಿಡುವ ಅವರ ಈ ಸ್ವಭಾವ ಕಾರ್ಯಕ್ರಮಕ್ಕೆ ಬಂದ ಅತಿಥಿಗಳು ಮತ್ತು ಭಾಗವಹಿಸಿದವರೊಂದಿಗೆ ಮಾತನಾಡುವಾಗಲೂ ಗೋಚರಿಸುತ್ತಿತ್ತು. ಎಷ್ಟೋ ಮಂದಿಗೆ ಈ ಕಾರ್ಯಕ್ರಮಗಳನ್ನು ಆಯೋಜಿಸುವದರ ಹಿಂದೆ ಇದ್ದ ಐತಾಳರ ಅಗಾಧ ಶ್ರಮ, ಅವರ ತೊಡಗಿಸಿ ಕೊಳ್ಳುವಿಕೆಗಳ ಬಗ್ಗೆ ಅರಿವಾಗಿರಲೇ ಇಲ್ಲ ಎಂಬ ಅನುಮಾನವೂ ನನ್ನನ್ನು ಕಾಡಿದೆ. ದುರದೃಷ್ಟವಶಾತ್ ನಮ್ಮ ಇತ್ತೀಚಿನ ಸಮ್ಮೇಳನಕ್ಕೆ ಐತಾಳರಿಗೆ ಬರುವುದಕ್ಕೆ ಸಾಧ್ಯವಾಗಲಿಲ್ಲ. ಆದರೂ ತಮ್ಮ ಶುಭಾಶಯಗಳನ್ನು ನಮಗೆಲ್ಲ ತಲುಪಿಸಿದ್ದರು. ಐತಾಳರನ್ನು ಬಲ್ಲವರಿಗೆಲ್ಲ ಅವರ ಅನುಪಸ್ಥಿತಿ ಆ ಕಾರ್ಯಕ್ರಮದಲ್ಲಿ ಎದ್ದು ತೋರುತ್ತಿತ್ತು, ಕಾಡುತ್ತಿತ್ತು.

ಕೆಲವು ವರ್ಷಗಳ ಹಿಂದೆ ಕಸಾರಂನ ಟ್ರಸ್ಟಿಗಳ ಮಂಡಳಿಯು (BOT) ಕಸಾರಂನ ಸಂವಿಧಾನವನ್ನು ಪರಿಷ್ಕರಿಸುವ ಕಾರ್ಯವನ್ನು ಕೈಗೆತ್ತಿಕೊಂಡಿತು. ಕಸಾರಂನ ಸಕಲ ಜವಾಬ್ದಾರಿಗಳನ್ನು ಪುನರ್ ಪರಿಶೀಲಿಸಿ ಮಂಡಳಿಯನ್ನು ಎರಡು ಕಾರ್ಯಘಟಕಗಳಾಗಿ ವಿಂಗಡಿಸಲಾಯಿತು. ಸಂವಿಧಾನದ ಪರಿಷ್ಕರಣೆಗೆ ಸುಮಾರು ತಿಂಗಳುಗಳೇ ಹಿಡಿದವು. ಅದಕ್ಕಾಗಿ ಹಲವು ಸಭೆಗಳು ಮತ್ತು ಹಲವು ಸುದೀರ್ಘ ದೂರವಾಣಿ ಮಾತುಕತೆಗಳು

ನಡೆದವು. ಐತಾಳರು ಈ ಚರ್ಚೆಗಳಲ್ಲಿ ಅತ್ಯಂತ ಸಕ್ರಿಯವಾಗಿ ಭಾಗವಹಿಸುತ್ತಿದ್ದರು. ಐತಾಳರು ಶುರುವಿನಿಂದಲೇ ಸೂಚಿಸುತ್ತಿದ್ದ ತಿದ್ದುಪಡಿಗಳನ್ನು ಕೊನೆಗೆ ಅಳವಡಿಸಿಕೊಂಡೆವು ಎಂದು ನನ್ನ ಅಭಿಪ್ರಾಯ. ಮಂಡಳಿಯಲ್ಲಿ ಜವಾಬ್ದಾರಿಗಳನ್ನು ಅನೌಪಚಾರಿಕವಾಗಿ ಎಲ್ಲರಿಗೂ ಹಂಚುವುದರ ಬಗ್ಗೆ ಐತಾಳರ ವಿರೋಧವಿತ್ತು. ಎರಡೂ ಕಾರ್ಯವೈಖರಿಗಳು ಸಮರ್ಥವಾಗಿಯೇ ಇದ್ದವು ಎಂದು ನಾನು ಧೈರ್ಯವಾಗಿ ಹೇಳಬಲ್ಲೆ. ಎರಡೂ ವಿಧಾನಗಳಲ್ಲಿ ನಮ್ಮ ಕಾರ್ಯಕ್ರಮಗಳ ಯಶಸ್ಸಿಗೆ ಯಾವುದೇ ಧಕ್ಕೆ ಬಂದಿರಲಿಲ್ಲ. ಐತಾಳರಿಗೆ ಈ ಬಗ್ಗೆ ಖಚಿತ ನಿಲವುಗಳಿದ್ದರೂ ಬಹುಮತದ ಆಯ್ಕೆಯನ್ನು ಅಷ್ಟೇ ಗೌರವ, ಸೌಜನ್ಯಗಳಿಂದ ಸ್ವೀಕರಿಸಿದ್ದರು. ಇಲ್ಲಿ ಒಬ್ಬ ಆಡಳಿತಕಾರರಾಗಿ ಐತಾಳರ ವ್ಯಕ್ತಿತ್ವದ ಚೊಕ್ಕ ಮುದ್ರೆ ಎದ್ದು ಕಂಡಿತು.

ಈ ನಿಟ್ಟಿನಲ್ಲಿ ಐತಾಳರ ಧರ್ಮಪತ್ನಿ ಲಕ್ಷ್ಮಿಯವರ ಸಹಕಾರ, ಬೆಂಬಲಗಳನ್ನು ಪ್ರಶಂಸಾಪೂರ್ವಕವಾಗಿ ನೆನೆಯಬೇಕು, ಲಕ್ಷ್ಮಿಯವರು ಐತಾಳರಿಗೆ ಸ್ಫೂರ್ತಿಯ ಸೆಲೆಯಾಗಿದ್ದರು. ಐತಾಳರು ಭಾಗವಹಿಸುತ್ತಿದ್ದ ಎಲ್ಲಾ ಕಾರ್ಯಕ್ರಮಗಳಲ್ಲೂ ಲಕ್ಷ್ಮಿಯವರು ತಪ್ಪದೇ ಹಾಜರಿರುತ್ತಿದ್ದರು. ಅವರದು ವಿಶಿಷ್ಟ ದಾಂಪತ್ಯ. ಎಲ್ಲರೊಂದಿಗಿದ್ದಾಗ ಒಬ್ಬರೊಡನೆ ಒಬ್ಬರು ಸಂಭಾಷಿಸುತ್ತಿದ್ದುದು ಬಹಳ ಕಡಿಮೆ. ಆದರೆ ಅವರ ಬಾಂಧವ್ಯ, ಪರಸ್ಪರ ಬೆಂಬಲ ಸ್ಪಷ್ಟವಾಗಿ ತೋರುತ್ತಿತ್ತು. ಐತಾಳರು ಪದ್ಯ ಗದ್ಯಗಳಲ್ಲಿ ಪತ್ನಿಯನ್ನು ಕೊಂಡಾಡುತ್ತಿದ್ದರು. (ಈ ಅಭಿನಂದನಾ ಗ್ರಂಥದಲ್ಲಿ ಅವುಗಳಲ್ಲಿ ಕೆಲವಾದರೂ ಪ್ರಕಟವಾಗಬಹುದೆಂದು ನನ್ನ ನಿರೀಕ್ಷೆ) ಪತ್ನಿಯ ಬಗ್ಗೆ ಐತಾಳರು ತೋರುತ್ತಿದ್ದ ನಲ್ಮೆ, ಅಭಿಮಾನ ಬಹಳ ನವಿರಾದದ್ದು. ಅತ್ಯಂತ ಅನುರೂಪ ದಾಂಪತ್ಯ ಐತಾಳ ಹಾಗೂ ಲಕ್ಷ್ಮಿಯವರದು. ಕಸಾರಂನ ಚುಕ್ಕಾಣಿ ಹಿಡಿಯುವುದರೊಂದಿಗೇ ತಮ್ಮ ಸಾಹಿತ್ಯ ಕೃಷಿಯನ್ನೂ ಐತಾಳರು ಮುಂದುವರೆಸಿದರು.

ಕನ್ನಡ ಸಾಹಿತ್ಯಕ್ಕೆ ಅವರು ಕೊಟ್ಟ ಅಮೂಲ್ಯ ಕೊಡುಗೆಯ ಬಗ್ಗೆ ಅನೇಕರು ಈ ಪುಸ್ತಕದಲ್ಲಿ ಬರೆಯುತ್ತಾರೆಂದು ನಾನು ಬಲ್ಲೆ, ಆದ್ದರಿಂದ ನಾನೇನೂ ಹೆಚ್ಚಿಗೆ ಹೇಳುವುದಿಲ್ಲ. ಕನ್ನಡ ಭಾಷೆ ಮತ್ತು ಸಾಹಿತ್ಯದ ಕಡೆಗೆ ಅವರಿಗಿದ್ದ ಶ್ರದ್ಧೆ ಸರ್ವವಿದಿತ, ಆದರೆ ಅವರ ಬಗ್ಗೆ ಎಲ್ಲರಿಗೂ ಅಷ್ಟಾಗಿ ತಿಳಿಯದ ವಿಷಯವೆಂದರೆ ಸಂಗೀತದ ಬಗ್ಗೆ ಅವರಿಗಿದ್ದ ಒಲವು. ಐತಾಳರು ಹಿಂದೂಸ್ತಾನಿ ಸಂಗೀತವನ್ನು 1950ರಲ್ಲಿ ವಾರಣಾಸಿಯಲ್ಲಿದ್ದಾಗ ಪಂಡಿತ್ ಓಂಕಾರನಾಥ್ ಠಾಕೂರರ ಬಳಿ ಕಲಿತರು. ಒಮ್ಮೆ ನಮ್ಮ ಮನೆಗೆ ಬಂದಿದ್ದಾಗ ತಮ್ಮ ಇಷ್ಟದ ರಾಗಗಳನ್ನೂ, ಚಿತ್ರಗೀತೆಗಳನ್ನೂ ಹಾಡಿದ್ದರು. ನನ್ನ ಸ್ನೇಹಿತರ ಮನೆಯಲ್ಲೂ ನಾವೆಲ್ಲಾ ಕಲೆತಾಗ ಐತಾಳರ ಹಾಡುಗಾರಿಕೆಯನ್ನು ಸವಿದಿದ್ದೇನೆ. ನಮ್ಮ ಕಸಾರಂ ಸಂಸ್ಥೆ ಅನೇಕಾನೇಕ ಪ್ರತಿಭಾನ್ವಿತರ ಮತ್ತು ನಿಪುಣರ ಸಹಕಾರದಿಂದ ಶ್ರೀಮಂತವಾಗಿದೆ, ಲಾಭಗಳಿಸಿದೆ. ಯಾರಿಗೆ ಯಾರನ್ನೂ ಹೋಲಿಸುವುದು ಅಪರಾಧವಾದೀತು, ಆದರೆ ಐತಾಳರು ಇದರ ಆಧಾರ ಸ್ಥಂಭಗಳಲ್ಲಿ ಒಬ್ಬರು ಎಂದರೆ ತಪ್ಪಿಲ್ಲ. ಐತಾಳರ ಸಾಹಿತ್ಯ

ಪ್ರೀತಿಯನ್ನು, ಉಲ್ಲಾಸಭರಿತ ವ್ಯಕ್ತಿತ್ವವನ್ನು, ಬರೆಯುವವರ ಬಗ್ಗೆ ಅವರಿಗಿದ್ದ ಅಪಾರ ಔದಾರ್ಯವನ್ನು ಕಳೆದುಕೊಂಡ ನೋವು ಯಾವತ್ತಿಗೂ ಕಾಡುತ್ತದೆ. ಅವರನ್ನು ಕಳೆದುಕೊಂಡ ನೋವಿನಲ್ಲೂ ಕಸಾರಂ ಸಂಸ್ಥೆಯ 20ನೆಯ ವಾರ್ಷಿಕೋತ್ಸವ ಸಂದರ್ಭದಲ್ಲಿ ಐತಾಳರ ಅಪೂರ್ವ ಕೊಡುಗೆಯನ್ನು ಹರ್ಷದಿಂದ, ಸಂಭ್ರಮದಿಂದ ಆಚರಿಸುತ್ತಿದ್ದೇವೆ. ಅವರೀಗ ಇರುವ ಜಾಗದಲ್ಲಿ ಕಸಾರಂನ ಹಳೆಯ ಸಹವರ್ತಿಗಳನ್ನು ಕಲೆತು ಅಲ್ಲೇ ಹೊಸ ಯೋಜನೆಗಳನ್ನು ಹಾಕುತ್ತಿರಬಹುದು ಎಂದು ಆಶಿಸೋಣ!

*

ನಾನು ಮತ್ತು ನಾಗ ಐತಾಳರ 'ಜೀವನ ರಹಸ್ಯ!'

ಡಾ. ಎಸ್. ಸಿ. ಚಂದ್ರಶೇಖರಪ್ಪ

ಹರತಿಟ್ಟು ನಾಗಪ್ಪಯ್ಯ ಐತಾಳರು ತಾತ ಇಸ್ಟಿಟ್ಯೂಟ್ (ಇನ್ಸ್ಟಿಟ್ಯೂಟ್) ನಿಂದ Ph.d. ಪದವಿಯನ್ನು ಗಳಿಸಿ, ದೇಶದ ಗಡಿದಾಟಿ ಹಾರಿದ ಎಷ್ಟೋ ವರ್ಷಗಳ ನಂತರ ನಾನು IISc ಆವರಣಕ್ಕೆ ಕಾಲಿಟ್ಟವನು. ಆಗ, ಮುಂದೆ ಒಂದು ದಿನ ಈ ವ್ಯಕ್ತಿ ನನ್ನ ಬದುಕಿನ ಹಾದಿಯಲ್ಲಿ ಸಿಕ್ಕಾರೆಂಬ ಸುಳಿವೂ ನನಗಿರಲಿಲ್ಲ. ಆದರೆ ಒಂದಂತೂ ಸತ್ಯ, ಒಮ್ಮೆ ಸಿಕ್ಕ ನಂತರ ನನ್ನನ್ನು ತನ್ನವನನ್ನಾಗಿಸಿಕೊಂಡರು. ಅದು ಅವರ ವಿಶೇಷ ಒಡನಾಟದಿಂದ ಆಗಿದ್ದು, ನಾನೂ ಅವರಂತೆ, ಅವರು ಕಲಿತ ವಾತಾವರಣದಲ್ಲೇ, ಅದೇ ರೀತಿಯ ಪದವಿಯನ್ನು ಗಳಿಸಿಕೊಂಡು ಇನ್ನೊಂದೂರಿನಲ್ಲಿ ಕೆಲಕಾಲ ತಂಗಿ, ಚಿಕಾಗೋಗೆ ಬಂದು ತಳ ಊರಿದ 2–3 ವರುಷದಲ್ಲಿ ನಾಗಪ್ಪಯ್ಯ ಐತಾಳ್ರು ಸಿಕ್ಕರು. ನನಗವರು ಸಿಗುವ ವೇಳೆಗೆ 10 ಅಕ್ಷರದ (ಇಂಗ್ಲಿಷ್) ಉದ್ದುದ್ದ ಹೆಸರಿನ ನಾಗಪ್ಪಯ್ಯರಾಗಿರದೆ, 4 ಅಕ್ಷರದ ಹೆಸರಿನ ಮೊದಲ ಎರಡು ಅಕ್ಷರ 'ನಾಗ' (ನಗುವ ನಗಿಸುವ)ರಾಗಿದ್ದರು. ಸಿಗುವವರು ಸಿಕ್ಕರು. ಆದರೆ ವರುಷದ ಮೊದಲೇ ಸಿಕ್ಕಿದ್ದರೆ, ಉದ್ದದಲ್ಲಿ ಅವರಿಗಿಂತ ಅರ್ಧ ಅಡಿ ನಷ್ಟು ಕಮ್ಮಿ ಎತ್ತರ ಇದ್ದ ನಾನೂ ಅವರಂತೆ ನನ್ನ 17 ಅಕ್ಷರದ ಹೆಸರನ್ನು Green card processing time ನಲ್ಲಿ 7 ಅಕ್ಷರದ ಗಿಡ್ಡ ಹೆಸರನ್ನಾಗಿಸಿಕೊಳ್ಳಬಹುದಿತ್ತು. ನನ್ನೀ ಮಾತನ್ನು ಕೇಳಿ ಐತಾಳರು 'ನಗಾಡಿ'ದ್ದರು.

ಐತಾಳರ ಜೀವನೋತ್ಸಾಹ, ಮಾತಿನ ವೈಖರಿ, ತಿಳುವಳಿಕೆ, ವಿಷಯಗಳ ಬಗ್ಗೆ ಇರುವ ಜ್ಞಾನ ವಿಸ್ತಾರ/ಆಳ ಅವರ ನಗೆಯ ಮೂಲಕ ಹರಿದು ಒಡನಾಡಿಗಳ ವಯಸ್ಸಿನ ಅಂತರ ಮರೆಸಿ, ಗುರುತ್ವಾಕರ್ಷಣೆಯೋಪಾದಿಯಲ್ಲಿ ಅವರ ಆಪ್ತವಲಯಕ್ಕೆ ಸೆಳೆದುಕೊಳ್ಳುತ್ತಿತ್ತು. ಇದನ್ನು ನಾನು ನೆನೆಯುತ್ತಿರುವ ಕಾರಣವೆಂದರೆ, 3 ವರ್ಷಗಳ ಕಾಲ ಒಂದೇ ಯುನಿವರ್ಸಿಟಿಯಲ್ಲಿ, ಒಂದೇ ಡಿರ್ಪಾಟ್‌ಮೆಂಟಿನಲ್ಲಿ (ಬೇರೆ ಬೇರೆ ಲ್ಯಾಬ್‌ಗಳಲ್ಲಿ) ಒಂದೇ ಮಹಡಿಯಲ್ಲಿ ನಾವಿಬ್ಬರೂ ಕೆಲಸ ಮಾಡಿದ್ದು. ನಮ್ಮ ಮುಖಾಮುಖಿ ಭೇಟಿಗೆ ನಾಲ್ಕಾರು ತಿರುವುಗಳ, ಪ್ರತಿ ತಿರುವಿನಲ್ಲಿ ಹತ್ತಾರು ಹೆಜ್ಜೆಗಳ ಅಂತರವಷ್ಟೇ. ಅವರೊಟ್ಟಿಗಿನ ವಿಜ್ಞಾನೇತರ ಮಾತುಕತೆ ಚಿತೋಹಾರಿ. ಅವರ ಹಾಸ್ಯ ಪ್ರಜ್ಞೆ ಅವರ ವರ್ತುಲದಲ್ಲಿದ್ದ ಎಲ್ಲರಿಗೂ ಚಿರಪರಿಚಿತ. ನನ್ನ ಅವರ ಭೇಟಿಯ ಮೊದಲ ದಿನಗಳಲ್ಲಿ ಒಮ್ಮೆ ಐತಾಳರು 'ನನಗೂ ನಿಮಗೂ ಒಬ್ಬರೇ ತಾತ' ಎಂದರು. ನಾನು ತಬ್ಬಿಬ್ಬಾದೆ. ಅವರ ಕಣ್ಣಲ್ಲಿ ತುಂಟ ನಗೆಯ ಮಿಂಚಿತ್ತು. ಹುಟ್ಟಿನ ಮೂಲ ಅರಸಿ ವೈಜ್ಞಾನಿಕ ಸಾಧ್ಯತೆಗಳನ್ನು ನನ್ನ ಮನಸ್ಸು ಕ್ಷಣಮಾತ್ರ ತಾಳೆ ಹಾಕತೊಡಗಿತು.

ಐತಾಳರು ನಿಷ್ಕಲ್ಮಶವಾಗಿ ನಗುತ್ತಾ ನಾವಿಬ್ಬರೂ 'ತಾತ ಇಸ್ಟಿಟ್ಯೂಟ್(ಇನ್ಸಿಟ್ಯೂಟ್) ನಿಂದ ಬಂದವರು ಎಂದು ಹಲ್ಲು ಹೊಳಪಿಸುತ್ತಾ ನಕ್ಕರು. ನಾನೂ ನಕ್ಕೆ, ಆ ದಿನಗಳಲ್ಲಿ ಬೆಂಗಳೂರಿನ ಜನ IISc ಯನ್ನು ತಾತ ಇಸ್ಟಿಟ್ಯೂಟ್ ಎಂದೇ ಕರೆಯುತ್ತಿದ್ದರು ಎನ್ನುವುದು ನೆನಪಿಗೆ ಬಂತು. ನಾನು ಅವರನ್ನು ಅಷ್ಟು ಹತ್ತಿರದಿಂದ ಕಂಡಿದ್ದು 3 ವರ್ಷಗಳು ಎಂದು ಮೊದಲೇ ಹೇಳಿದ್ದೇನೆ. ಅದಾದ ನಂತರ ಹಲವಾರು ಭೇಟಿಗಳು, ವಿವಿಧ ಸಂದರ್ಭಗಳಲ್ಲಿನ ಕರೆಗಳು ಆ ಆತ್ಮೀಯತೆಯನ್ನು ಶಾಶ್ವತವಾಗಿಸಿದ್ದು ದಿಟ.

ನನ್ನ ಮಡದಿ ಶಶಿಯ ಕನ್ನಡ ಸಾಹಿತ್ಯ ರಂಗದ ಚಟುವಟಿಕೆಗಳೂ ಇದಕ್ಕೆ ಕಾರಣವಾಗಿತ್ತು. ಸ್ನೇಹಿ ಐತಾಳರು ನನ್ನ ನೆನಪಿನ ಕೋಶದಲ್ಲಿ ಮನಸ್ಸಿನ ಪದರಗಳಲ್ಲಿ ಯಾವಾಗಲೂ ಸ್ಥಾಯಿಯಾಗಿದ್ದರು. ಐತಾಳ ದಂಪತಿಗಳನ್ನು ಕಂಡರೆ ಶಶಿಗಂತೂ ಇನ್ನಿರದ ಪ್ರೀತಿ ಮತ್ತು ವಿಶ್ವಾಸ. ಅವಳು ಲಕ್ಷ್ಮೀ ಐತಾಳರ ವಾತ್ಸಲ್ಯಮಯ ನಡಾವಳಿಯನ್ನು ಹಲವು ಬಾರಿ ಉದಹರಿಸುತ್ತಿದ್ದಳು. ಆ ದಶಕದಲ್ಲಿ, ಅಂದಿನ ದಿನಗಳಲ್ಲಿ ಹೊಸದಾಗಿ ಬಂದ ನವವಿವಾಹಿತ ಜೋಡಿಗಳಿಗೆ ಐತಾಳ ದಂಪತಿಗಳ ಅಕ್ಕರೆ, ಅವರು ಚಾಚುತ್ತಿದ್ದ ಸಹಾಯಹಸ್ತ ಚಿಕಾಗೋ ಕನ್ನಡ ಕುಟುಂಬಗಳಿಗೆ ಗೊತ್ತಿದ್ದ ವಿಷಯ, ಅವರು ಮಾಡಿದ ಸೀಮಂತ ಕಾರ್ಯಗಳು ಅವರಿಗೇ ಲೆಕ್ಕವಿದೆಯೋ ಇಲ್ಲವೋ ಎನ್ನುತ್ತಾಳೆ ಶಶಿ. ತೀರ ಇತ್ತೀಚಿನ ವರ್ಷದಲ್ಲಿ ಶಶಿಯ ಗೆಳತಿಯ ಮಗಳೂ ಐತಾಳ ದಂಪತಿಗಳಿಂದ ಸೀಮಂತ ಮಾಡಿಸಿಕೊಂಡು ಆಶೀರ್ವಾದ ಪಡೆದವಳೇ, ಸತಿಪತಿಗಳು ಒಂದಾಗಿ ಪ್ರೀತಿಯನ್ನು ತೋರಿಸುವ ಪರಿ ಇದು! ಅವರ ಕೃತಿ ಅಮೆರಿಕನ್ನಡಿಗನೊಬ್ಬನ ದಿನಚರಿಯಿಂದ; ಪುಸ್ತಕ ಓದುವಾಗ, ಅವರು ಎಷ್ಟು ಹತ್ತಿರದವರಾದರೆಂದರೆ ನಾನವರನ್ನು ಹಿಂಬಾಲಿಸಿ, ಅವರು ಹಾದ ಹಾದಿಯಲ್ಲಿ ನಡೆದು, ಅವರು ತಂಗಿದಲ್ಲಿ ತಂಗಿ, ಅವರು ಅನುಭವಿಸಿದ್ದನ್ನು

ಅನುಭವಿಸಿದೆ ಎನ್ನಿಸಿ ಅವರ ಬಗ್ಗೆ ಒಂದು ವಿಧವಾದ ಆಪ್ತತೆಯನ್ನು ತಂದು ಕೊಟ್ಟಿತು. ಸಾಹಿತ್ಯ ರಂಗದ ಎಲ್ಲ ಪ್ರಕಾಶನವನ್ನು ಓದಿರುವ ನನಗೆ ಅವರ ಬರಹದಲ್ಲಿನ ಸಂವೇದನೆ, ವಿಚಾರ, ಅವರು ಪ್ರಸ್ತುತಪಡಿಸುವ ರೀತಿ ಬಹಳ ಹಿಡಿಸಿವೆ. ಶಶಿಯ ಬರಹದ ಬಗ್ಗೆ ಅವರ ಮೆಚ್ಚುಗೆ ಮತ್ತು ಅವರ ಉತ್ತೇಜನಕಾರಿ ಮಾತುಗಳಿಗೆ ನನ್ನ ಧನ್ಯವಾದ ತಿಳಿಸಿದ್ದೇನೆ. ಶಶಿ ಹೇಳುವ ಹಾಗೆ, ಐತಾಳ ದಂಪತಿಗಳು ನಮ್ಮ ಮನೆಗೆ ಬಂದು ತಂಗಿದ ದಿನ ಎಂದೂ ಮರೆಯದ ಸವಿ ಅನುಭವ, ಪ್ರೀತಿಯೇ ಮೈವೆತ್ತು ನಮ್ಮ ಮನೆಗೆ ಅಡಿ ಇಟ್ಟಿದ್ದರವರು ಎಂದು ಶಶಿ ಎಂದಿಗೂ ನೆನೆಯುತ್ತಾಳೆ. ಹೀಗಿರುವಾಗ ಒಂದು ದಿನ ಐತಾಳರು ತಮ್ಮ ಪುಸ್ತಕ ಒಂದಕ್ಕೆ ಮುನ್ನುಡಿ ಬರೆಯುವಿರಾ ಎಂದು ಕರೆ ಮಾಡಿ ಕೇಳಿದಾಗ ಆಶ್ಚರ್ಯಗೊಂಡೆ, ತುಸು ಅಂಜಿಕೆಯಿಂದ ಒಪ್ಪಿಕೊಂಡೆ. ನನಗೊದಗಿ ಬಂದ ಗೌರವ ಎಂದುಕೊಂಡೆ. ವೃತ್ತಿಯಿಂದ, ಪ್ರವೃತ್ತಿಯಿಂದ, ಆಸಕ್ತಿಯಿಂದ ನನ್ನ ಬದುಕಿನ ಅವಿಭಾಜ್ಯ ಅಂಗವೇ ಆಗಿರುವ ವಸ್ತು ವಿಷಯದ ಜೀವನ ರಹಸ್ಯ ಪುಸ್ತಕದ ಕರಡು ಪ್ರತಿಯನ್ನು ಓದಿದಾಗ ನನಗಾದ ಮೆಚ್ಚುಗೆಗೆ...ಅಚ್ಚರಿಗೆ ಎಣೆ ಇಲ್ಲವಾಗಿತ್ತು. ಕಳೆದ ಶತಮಾನದ ಉತ್ತರಾರ್ಧ ಸಮಯದಲ್ಲಿ 'ಜೀವಶಾಸ್ತ್ರ'ವು ಬೆಳವಣಿಗೆ ಹೊಂದಿದಷ್ಟು– ಏಳಿಗೆ ಮಾಡಿದಷ್ಟು ಸುದ್ದಿ–ಸದ್ದು ಮತ್ಯಾವ ವೈಜ್ಞಾನಿಕ ಶಾಖೆಯೂ ಮಾಡಿಲ್ಲವೆಂದೇ ಹೇಳಬೇಕು. ಒಂದು ಕಾಲಕ್ಕೆ ಯಾವ ಕ್ಷೇತ್ರವು ವರ್ಣನೆ ಮತ್ತು ಅವಲೋಕನಕ್ಕೆ ಸೀಮಿತವಾಗಿತ್ತೋ ಅ ಜೀವಶಾಸ್ತ್ರವು, ಈಗ ಅಣುವಿನ–ಪರಮಾಣುವಿನ (Atomic-molecular) ಸ್ತರದಲ್ಲಿ ಒಂದು ಜೀವಕೋಶದಲ್ಲಿ ನಡೆಯುವ ಕ್ರಿಯೆಯನ್ನು ವೀಕ್ಷಿಸುವ ಕ್ಷೇತ್ರವಾಗಿ ಪರಿವರ್ತಿತವಾಗಿದೆ. ಒಂದು ಜೀವಕೋಶದ ಆಗುಹೋಗುಗಳ ತಿಳಿವಳಿಕೆಯ ರಹಸ್ಯವನ್ನು ಭೇದಿಸಿ ತೆರೆದಿಡುವ ಮೂಲಕ ಇಂದಿನ ಜೀವಶಾಸ್ತ್ರವು ಮಾನವ ಜೀವಿಯ ಬಗ್ಗೆ ಅದೇ ಅರಿವನ್ನು ಮೂಡಿಸುವಲ್ಲಿ ಫಲಕಾರಿಯಾಗಿದೆ. ಈ ಹೊಸ ಆವಿಷ್ಕಾರಗಳು ವಿಜ್ಞಾನಿಗಳನ್ನು ಮಂತ್ರಮುಗ್ಧರನ್ನಾಗಿಯೂ, ಜನಸಾಮಾನ್ಯರನ್ನು ಮೂಕವಿಸ್ಮಿತರನ್ನಾಗಿಯೂ, ಮಾಡಿದೆ. ಡಿಎನ್‌ಎಯು (DNA)ಯು ಅನುವಂಶಿಕತೆಯ ಆಧಾರ ಹಾಗೂ ಅದರ ಜೋಡಿ ಎಳೆಯ ರಚನೆಯಲ್ಲಿ ಅಡಗಿರುವ.., ಜೀವನದ ನಿರಂತರತೆಯ ರಹಸ್ಯವನ್ನು ಭೇದಿಸಿದ 50 ವರ್ಷಗಳ ಒಳಗಾಗಿ ಮನುಷ್ಯನ ಪ್ರತಿಯೊಂದು ಜೀವಕೋಶದಲ್ಲಿ ಅಡಗಿರುವ 3.1 ಬಿಲಿಯನ್ (Base)ಗಳ ಕ್ರಮಾನುಗತಿ (sequence) ರಚನಾ ವ್ಯವಸ್ಥೆಯನ್ನು ತೆರೆದಿಡಲಾಗಿದೆ.

ಐತಾಳರು ಬರೆದ ಅಪೂರ್ವವಾದ ಕನ್ನಡ ವೈಜ್ಞಾನಿಕ ಪುಸ್ತಕ 'ಜೀವನ ರಹಸ್ಯ'ಕ್ಕೆ ನಾನು ಬರೆದ ಮುನ್ನುಡಿಯ ಮಾತುಗಳನ್ನೇ ಇಲ್ಲಿ ಮತ್ತೆ ನಿರೂಪಿಸಿದ್ದೇನೆ. ಇಂತಹ ಸಂಕೀರ್ಣವಾದ ವೈಜ್ಞಾನಿಕ ವಿಷಯಗಳನ್ನು ಕನ್ನಡ ವಿಚಾರ ಸಾಹಿತ್ಯ ಪ್ರಕಾರಕ್ಕೆ ನಿರಾಯಾಸವಾಗಿ, ಶ್ರದ್ಧೆ, ನಿಷ್ಠೆ ಮತ್ತು ಕನ್ನಡ ಭಾಷೆಯ ಬಗೆಗಿನ ಪ್ರೀತಿಯಿಂದ ಪರಿಚಯಿಸಿದ್ದಾರೆ. ಜೀವನ ರಹಸ್ಯ (ಅಣುಜೀವ ವಿಜ್ಞಾನದ ಒಂದು ಸ್ಥೂಲ ಪರಿಚಯ)

ಕರಡು ಪ್ರತಿಯನ್ನು ಓದಿದಾಗ ಮೇಲೆ ತಿಳಿಸಿದ ಅಂಶ ಪುಸ್ತಕದ ಹತ್ತೂ ಭಾಗಗಳಲ್ಲೂ ಎದ್ದು ಕಂಡಿತು. 10ನೇ ತರಗತಿಯವರಗೆ ಕನ್ನಡ ಮಾಧ್ಯಮದಲ್ಲಿ ಕಲಿತ ನನಗೆ ಅವರ ಪದಗಳ ಬಳಕೆ/ಪ್ರಯೋಗ/ವಾಕ್ಯ ರಚನೆ ಬೆರಗಾಗಿಸಿತು. ಜೀವನ ರಹಸ್ಯವನ್ನು ಭೇದಿಸಿ ಕನ್ನಡದಲ್ಲಿ ಬರಹದ ಮೂಲಕ ಬೋಧಿಸಿರುವ ಐತಾಳರು ನನ್ನ ಕುಲ ಬಂಧುಗಳಾದ ಸಮಸ್ತ ಕನ್ನಡಿಗರ ಮೇರು ಪ್ರೀತಿಗೆ ಭಾಜನರು. ಬದುಕಿನ ಹಾದಿಯಲ್ಲಿ ಐತಾಳರು ನನಗೂ ಮತ್ತು ಶಶಿಗೂ ಸಿಕ್ಕಿದ್ದರು ಎನ್ನುವುದೊಂದು ಮಧುರ ಅನುಭೂತಿ.

ಕುತ್ತಾಟು ಐತಾಳರಿಗು ಹಂದಟ್ಟು ಭಟ್ಟರಿಗು ಬ್ರಹ್ಮ ಬೆಸೆದ ನಂಟು !

– ಶ್ರೀನಿವಾಸ ಭಟ್ಟ

ನಾನೀಗ ನಮ್ಮ ಕುತ್ತಾಟು (ಉರುಫ್ ನಾಗ) ಐತಾಳರ ಬಗ್ಗೆ ಏನು ಬರೆದರೂ ಸ್ವತಃ ಓದಲು ಅವರಿಲ್ಲ. ಮೇಲಾಗಿ ಐತಾಳರ ಬಗ್ಗೆ ಬಹಳಷ್ಟು ಬರಹಗಾರರು ಬರೆಯದ್ದನ್ನ ನಾನು ಹೇಗೆತಾನೆ ಬರೆಯಲಿ? ನಾಲ್ಕು ದಶಕಗಳಿಗೂ ಮೀರಿದ ನಮ್ಮಿಬ್ಬರ ಒಡನಾಟದ ಕೆಲವು ಸಹಜ ಘಟನೆಗಳನ್ನು ಹೆಚ್ಚೇನು ಉಪ್ಪು ಖಾರ ಹಚ್ಚದೆ ಓದುಗರ ಮುಂದಿಡುವ ಸಣ್ಣ ಪ್ರಯತ್ನವಿದು.

ಐತಾಳರ ಹುಟ್ಟೂರಾದ ಕೋಟದಿಂದ ನಮ್ಮ ಹಂದಟ್ಟು ಮನೆಗೆ ಕೇವಲ ಒಂದು ಮೈಲಿ ದೂರ. ಆದರೂ ಅವರನ್ನು ಊರಿನಲ್ಲಿ ಒಮ್ಮೆಯೂ ನೋಡದ, ಅವರ ಬಗ್ಗೆ ಏನನ್ನೂ ಅರಿಯದ ನಾನು ಆಕಸ್ಮಿಕವಾಗಿ ಚಿಕಾಗೊ ನಗರದ ಕೂಟವೊಂದರಲ್ಲಿ ಭೇಟಿಯಾದಾಗ, ಒಂದೇ ಊರಿನವರಾದುರಿಂದ ನಾವಿಬ್ಬರೂ ಜೊತೆಯಾಗಿ ಬಹಳಷ್ಟು ಮಾತನಾಡಿದೆವು. ನನ್ನ ಪ್ರಶ್ನೆಗಳ ಸುರಿಮಳೆಯನ್ನು ಸಹಿಸಲಾರದೆ ಅಂದು ನನ್ನಿಂದ ದೂರವಾದರು ಎನಿಸಿತು. ಆದರೆ ಕಾಲಕ್ರಮೇಣ ನಾವಿಬ್ಬರೂ ಪರಸ್ಪರ ಅದೆಷ್ಟು ಆಪ್ತರಾದೆವೆಂದು ನೆನೆಯುವಾಗ ಆಶ್ಚರ್ಯವಾಗುತ್ತದೆ. ಐತಾಳರು ವಿಧಿವಶರಾಗುವ ಹಿಂದಿನ ದಿನ ಅವರನ್ನು ಅವರ ಮನೆಯ ಡೈನಿಂಗ್ ಟೇಬಲ್ಲಿನಿಂದ

ಅವರು ಮಲಗುವ ಕೋಣೆಗೆ ಕೈ ಹಿಡಿದು ಕರೆದೊಯ್ಯುತ್ತಿದ್ದೆ. ನಡುವೆ ಅವರು ತಮ್ಮ ಎರಡೂ ತೋಳುಗಳಿಂದ ನನ್ನನ್ನು ಆಲಂಗಿಸಿ, ಮಸುಕಾದ ಕಣ್ಣುಗಳಿಂದ ನನ್ನನ್ನು ನೋಡಲಾಗದಿದ್ದರೂ, 'ಭಟ್ಟರೇ, ನೀವು ನನಗೆ ನನ್ನ ತಮ್ಮನಿಗಿಂತಲೂ ಹತ್ತಿರದವರು' ಎಂದಾಗ ಅವರ ಕೆನ್ನೆಯ ಮೇಲೆ ಕಣ್ಣುಗಳಿಂದ ಹನಿಗಳು ಇಳಿದಿದ್ದವು. ಅದನ್ನು ಒರೆಸುತ್ತ ನಾನೂ ಐತಾಳರನ್ನು ಬಿಗಿಯಾಗಿ ಅಪ್ಪಿಕೊಂಡೆ. ನನ್ನ ಕಣ್ಣುಗಳೆರಡೂ ನೀರು ತುಂಬಿ ಮಸುಕಾಗಿದ್ದವು. ಈ ಘಟನೆ ಒಂದು ಅಮೂಲ್ಯ ನೆನಪಾಗಿ ಕೊನೆಯವರೆಗೂ ನನ್ನ ಹೃದಯದ ತಿಜೋರಿಯಲ್ಲಿ ಭದ್ರವಾಗಿರುತ್ತದೆ.

ಎರಡು ನಗರಗಳಲ್ಲಿ ಒಟ್ಟಾಗಿ ನಡೆದ ನಮ್ಮಿಬ್ಬರ ಈ ಪಯಣದಲ್ಲಿ (ಚಿಕಾಗೋದಿಂದ ಲಾಸೆಂಜಲೀಸ್) ನಾನೆಂದೂ ಮರೆಯಲಾಗದ, ಐತಾಳರು ಕೊಂಡು ಹೋಗಿರಬಹುದಾದ ಕೆಲವು ವೈಯಕ್ತಿಕ ಸನ್ನಿವೇಶಗಳನ್ನು ಹಂಚಿಕೊಳ್ಳಬಯಸುವೆ.

ಅವರು ತಾವು ಆಹಿತಾಲನರು, ಐತಾಳರಲ್ಲ ಎಂದು ಭೇಟಿಯಾದಾಗಲೆಲ್ಲ ನನ್ನನ್ನು ಎಚ್ಚರಿಸುತ್ತಿದ್ದರು. ಆದರೂ ತಮ್ಮ ಐತಾಳ ಮನೆತನದ ಬಗ್ಗೆಯೂ ಹೆಮ್ಮೆಯಿಂದ ಮಾತನಾಡುತ್ತಿದ್ದರು. ಜನಸಾಮಾನ್ಯರು ವ್ಯವಸಾಯ ಮಾಡಿ ಕೂಡುಹಾಕಿದ ಭತ್ತವನ್ನು 'ತಿರಿ' ಕಟ್ಟಿ ನೀರಿನಿಂದ ಮತ್ತು ಪ್ರಾಣಿ ಪಕ್ಷಿಗಳಿಂದ ಪೋಲಾಗದಂತೆ ಕಾಪಾಡುತ್ತಿದ್ದರು. ಮುಖ್ಯವಾಗಿ ಭತ್ತದ ಹುಲ್ಲು ಮತ್ತು ಅದೇ ಹುಲ್ಲಿನಿಂದ ಮಾಡಿದ ಹಗ್ಗದಿಂದ ಕಟ್ಟಿದ ಕಣಜವೇ ತಿರಿ. ಇಡೀ ಕೋಟತಟ್ಟು ಗ್ರಾಮದಲ್ಲಿ ದೊಡ್ಡ ತಿರಿಯನ್ನು ಕಟ್ಟುತ್ತಿದ್ದ ಕುತ್ತಾಟು ಐತಾಳರ ಮನೆತನದವರು ತಾವು ಎಂದು ಹೇಳಿಕೊಂಡು ಹೆಮ್ಮೆಪಡುತ್ತಿದ್ದರು.

ಲಾಸ್ ಏಂಜಲೀಸಿಗೆ ಬಂದ ಮೊದಲಿಗೆ ಅವರ ದೋಸ್ತಿ ನಾಗರಾಜರ ಸಹಾಯ ಸದಾ ಇರುತ್ತಿತ್ತು (ಆ ಹೊತ್ತಿಗೆ ಐತಾಳರು ಕಾರ್ ಡ್ರೈವ್ ಮಾಡುವುದನ್ನು ನಿಲ್ಲಿಸಿಯಾಗಿತ್ತು). ನಾಗರಾಜ ಅವರು ಐತಾಳ ದಂಪತಿಯನ್ನು ಚಿಕಾಗೊದಿಂದ ಲಾಸ್ ಏಂಜಲಿಸ್‌ವರೆಗೂ ಡ್ರೈವ್ ಮಾಡಿ ಕರೆದುಕೊಂಡು ಬಂದಿದ್ದರು. ಸುಮಾರು ಮೂರು-ನಾಲ್ಕು ದಿನಗಳ ಪ್ರಯಾಣ! ಆ ಪ್ರಯಾಣದ ಬಗ್ಗೆ ಐತಾಳರು ರಸವತ್ತಾಗಿ ಮಾತನಾಡುತ್ತಿದ್ದರು. ನಾಗರಾಜ ಅವರನ್ನು 'ಕೆಂಪಂಗಿ ನಾಗರಾಜ'ರೆಂದು ನಾಮಕರಣ ಮಾಡಿದ್ದರು. ಪ್ರಯಾಣದುದ್ದಕ್ಕೂ ಹಾಕುತ್ತಿದ್ದ ಕೆಂಪಂಗಿಯ ಫೋಟೋವನ್ನು ತುಂಟ ನಗೆಯೊಂದಿಗೆ ತೋರಿಸುತ್ತಿದ್ದರು. ದುರದೃಷ್ಟವಶಾತ್ ನಾಗರಾಜರು ಹಲವು ವರ್ಷಗಳ ಹಿಂದೆ ಕಾಲವಶವಾದರು. ತದನಂತರ ಹತ್ತಿರದ ಓಡಾಟಕ್ಕೆ ಹೆಚ್ಚಾಗಿ ಸಹಾಯ ಮಾಡುವುದು ನನ್ನ ಭಾಗ್ಯವಾಗಿತ್ತು. ವಯಸ್ಸಿನಲ್ಲಿ ನನಗಿಂತ ಬಹಳ ಹಿರಿಯರಾದರೂ, ಅವರನ್ನು 'ಅಂಕಲ್' ಎನ್ನದೆ 'ಐತಾಳರೆ' ಎಂದು ಕರೆಯುತ್ತಿದ್ದೆ. ದೂರವಾಣಿ ಕರೆ ಮಾಡಿದಾಗ ಮಾತ್ರ ಡಾ. ಐತಾಳರೆಂದು ಅವರನ್ನು ನಾಟಕೀಯವಾಗಿ ಕರೆದರೆ ಸಂತೋಷ ಪಡುತ್ತಿದ್ದರು, ತಮ್ಮನ್ನು 'ಡಾಕ್ಟರ್, ಡಾಕ್ಟರ್' ಎಂದು ಪರಿಚಯಿಸಿಕೊಂಡು

ಸಂಭ್ರಮಿಸುತ್ತಿದ್ದರು. ಹಾಗೆಂದು ಅವರಲ್ಲಿ ಯಾವುದೇ ಬಿಗುಮಾನ, ದರ್ಪ ಇರಲಿಲ್ಲ. ಇದೆಲ್ಲ ಮಕ್ಕಳ ಥರ ಚೆಲ್ಲಾಟದ ಪಾರುಪತ್ಯ ಅಷ್ಟೆ!

ಅತಿಥಿಗಳ ಆದರೋಪಚಾರಕ್ಕೆ ಹೆಸರಾದ ಮಲೆನಾಡಿನ ಲಕ್ಷ್ಮಿಯವರನ್ನು ಕೈಹಿಡಿದ ಐತಾಳರ ಮನೆಯಲ್ಲಿ ಊಟೋಪಚಾರಕ್ಕೆ ಕೊನೆಮೊದಲಿರಲಿಲ್ಲ. ಅಡುಗೆಮನೆಯ ಎಲ್ಲ ವ್ಯವಹಾರವನ್ನು ಮಡದಿಗೆ ವಹಿಸಿದ ಐತಾಳರು ಅತಿಥಿಗಳನ್ನು ಭೋಜನಕ್ಕೆ ಎಬ್ಬಿಸುವಾಗ ಅಂದು ತಯಾರಿಸಿದ ಖಾದ್ಯಗಳ ಬಗ್ಗೆ ಏನೊಂದು ಸುಳಿವಿರದಿದ್ದರೂ ಅವರ ಮೊದಲ ಉಪಚಾರ ತಮಗೆ ಬಾರದ ತುಳುಭಾಷೆಯಲ್ಲಿ 'ಶಾಖ ಪಾಕ ದಾಳ ಇಜ್ಜಿ' (ಹೆಚ್ಚಿನ ಶಾಖ, ಪಾಕ ಏನೂ ಇಲ್ಲ) ...ಅಂತ!

ಸಣ್ಣ ಮಕ್ಕಳಿದ್ದಲ್ಲಿ ಅವರ ಕೈಹಿಡಿದು 'ಡು ಯು ವಾಂಟ್ ಎ ಪೆಟ್?' ಎಂದು ಕೇಳಿ, ಮಕ್ಕಳು 'ಹೂಂ' ಅಂದಾಗ ಬೆನ್ನಿಗೊಂದು ಸಣ್ಣ ಏಟು ಕೊಟ್ಟು, 'ಇದು ಕನ್ನಡದ ಪೆಟ್ಟು, ಇಂಗ್ಲಿಷಿನ ಪೆಟ್ ಅಲ್ಲ' ಎಂದು ನಗುತ್ತಿದ್ದರು.

ಐತಾಳರೊಡನೆ ಕುಳಿತು ಟಿ ವಿ ನೋಡುವುದೇ ಒಂದು ಆನಂದ. ತಮಗಾಗದ ರಾಜಕಾರಣಿಗಳನ್ನು, ವರದಿಗಾರರನ್ನು ನಿರ್ದಾಕ್ಷಿಣ್ಯವಾಗಿ ದಕ್ಷಿಣ ಕನ್ನಡದ ಆಡುಭಾಷೆಯಲ್ಲಿ ಬೈಯ್ಯುತ್ತಿದ್ದರು.

ನನ್ನ ಮಡದಿ ಸುಮಾ ಮೊದಲ ಬಾರಿಗೆ ತೌರುಮನೆಯನ್ನು ಬಿಟ್ಟು ದೂರದ ಚಿಕಾಗೋ ನಗರಕ್ಕೆ ಬಂದು ನೆಲಸಿದಾಗ ಐತಾಳರ ಮನೆಯೇ ತಾಯಿಯ ಮನೆಯಾಗಿತ್ತು. ಐತಾಳ ದಂಪತಿ ಅವಳ ತಾಯಿ ತಂದೆಗಳಾಗಿದ್ದರು. ಅವಳು ಮೊದಲ ಬಾರಿ ಗರ್ಭಿಣಿಯಾಗಿದ್ದಾಗ ತಮ್ಮ ಮನೆಯಲ್ಲಿ ಬೇಬಿ ಶವರ್ ಇಟ್ಟುಕೊಂಡಿದ್ದರು. ಅಗ ನಡೆದ ಒಂದು ಸ್ಪೆಷಲ್ 'ಐತಾಳ ಕಿತಾಪತಿ' ಯ ಬಗ್ಗೆ ಹೇಳ್ತೀನಿ, ಕೇಳಿ–

ಅವರ ಮನೆಯಲ್ಲಂದು ನಮಗಾಗಿ ಏರ್ಪಡಿಸಿದ 'Baby shower' ನಿಜಕ್ಕೂ ನಮಗೆ surprise ಆಗಿದ್ದಿತ್ತು. ಯಾವೊಂದೂ ಸುಳಿವಿರದ ನಮಗೆ ಐತಾಳ ದಂಪತಿಗಳ ಮತ್ತು ಅವರ ಸ್ನೇಹಿತರ ಸಂಭ್ರಮ, ಸಡಗರ ಮತ್ತು ವಿವಿಧ ಬಗೆಯ ತಿಂಡಿ ತಿನಸುಗಳು ಬೆರಗು ಉಂಟು ಮಾಡಿದ್ದವು. ಊಟಕ್ಕೆ ಮುಂಚೆ ಕೈಯ್ಯಲ್ಲೊಂದು spanner ಹಿಡಿದುಕೊಂಡು ತಮ್ಮ bathroomನ ಟಬ್ಬಿನ ಮೇಲಿರುವ shower head ಕಟ್ಟಿದೆ, ಸ್ವಲ್ಪ ಸಹಾಯ ಬೇಕೆಂದು ನನ್ನನ್ನು ಕೇಳಿಕೊಂಡರು. ಅವರನ್ನು ಹಿಂಬಾಲಿಸಿ ಬಾತ್‌ರೂಮಿಗೆ ಹೋಗಿ Shower head ಕೆಳಗೆ ನಿಂತು, ಕೆಳಗಿನ ನಲ್ಲಿಯನ್ನು off ಮಾಡಿಕೊಂಡು shower head ಅನ್ನು ನಿಧಾನವಾಗಿ ತಿರುಗಿಸಲು ಪ್ರಾರಂಭಿಸಿದೆ. ಅಷ್ಟರಲ್ಲಿ ಮೊದಲೇ ನಿರ್ಧರಿಸಿದಂತೆ ಐತಾಳರು ಕೆಳಗಿನ ನಲ್ಲಿಯನ್ನು ತಿರುಗಿಸಿ ನನಗೊಂದು shower ಕೊಡಲು ಯತ್ನಿಸಿದರು. ಅವರ ಕುಯುಕ್ತಿಯನ್ನು ಅರಿಯದಿದ್ದರೂ, ಕೂಡಲೇ ಟಬ್ಬಿನಿಂದ ಹೊರಗೆ ನೆಗೆದೆ. 'ಜಟ್ಟಿ ಬಿದ್ದರೂ ಮೀಸೆ

ಮಣ್ಣಾಗಲಿಲ್ಲ' ಎನ್ನುವಂತೆ, ಮೈಮೇಲೆಬಿದ್ದ ಹನಿಗಳನ್ನು ಒರಸಿಕೊಳ್ಳುತ್ತ ಹೊರಗೆ ಬಂದೆ. ಆದರೆ ಈ ತುಂಟಾಟದಿಂದ ಐತಾಳರು ಮಜ ತೆಗೆದುಕೊಂಡು ಬಿದ್ದು ಬಿದ್ದು ನಕ್ಕಿದ್ದನ್ನು ಮರೆಯುವುದಾದರೂ ಹೇಗೆ?

ಐತಾಳರು ಕೊನೆಯವರೆಗೂ ನನ್ನ ಮಡದಿ ಸುಮಾಳನ್ನು ತಮ್ಮ ಮಾನಸ ಪುತ್ರಿ ಎಂದು ಪ್ರೀತಿಯಿಂದ ಇತರರಿಗೆ ಪರಿಚಯಿಸುತ್ತಿದ್ದರು. ಆದರೆ ನನ್ನನ್ನು ಎಂದಿಗೂ ಮಾನಸ ಪುತ್ರನೆಂದು ಕರೆಯುತ್ತಿರಲಿಲ್ಲ, ಈ ಬಗ್ಗೆ ಹಲವು ಬಾರಿ ನಾನವರನ್ನು ಚುಡಾಯಿಸುತ್ತಿದ್ದೆ. ಅವರೂ ನನ್ನನ್ನು ಚುಡಾಯಿಸುತ್ತಿದ್ದರು. 'ನೀವ್ ಬಿಡಿ ಎತ್ತು ಕರು ಹಾಕಿತೆಂದರೆ ಕಟ್ಟು ಕೊಟ್ಟಿಗೆಯಲ್ಲಿ ಎನ್ನುವವರ ಸಾಲಿಗೆ ಸೇರಿದವರು' ಎಂದು ಪದೇ ಪದೇ ಹೇಳುತ್ತಿದ್ದರು. ಕಾಳಿಂಗರಾಯರ ಹಾಡೊಂದನ್ನು ಮೆಲುಕುಹಾಕುತ್ತಾ 'ಅದು ಬೆಟ್ಟ ಇದು ಬೆಟ್ಟ, ನಡುವೆ ಶ್ರೀನಿವಾಸ ಭಟ್ಟ'; ಎಂದು ತಮ್ಮದೇ ಸಾಲನ್ನು ಸದಾ ಎಲ್ಲರ ಮುಂದೆ ಹೇಳಿ ಸಂತಸಪಡುತ್ತಿದ್ದರು.

ನನ್ನ ಮಡದಿ ಸುಮಾ ಮತ್ತು ಐತಾಳರ ಅತ್ರಾಸ ಪ್ರಸಂಗವೊಂದನ್ನು ಹೇಳಲೇಬೇಕು. ಐತಾಳರನ್ನು ನಮ್ಮ ಮನೆಗೊಂದು ಬಾರಿ ಊಟಕ್ಕೆ ಕರೆದಾಗ ಸುಮಾ ಅತ್ರಾಸ ಮಾಡಿದ್ದಳು. ಆರೋಗ್ಯ ನಿಮಿತ್ತ ಮಿತಪ್ರಮಾಣದಲ್ಲಿ ಸಿಹಿಯನ್ನು ಸೇವಿಸಬಹುದಾದುದರಿಂದ ಸುಮಾ ಐತಾಳರ ಮೇಲೊಂದು ಕಣ್ಣಿಟ್ಟಿದ್ದಳು. ಐತಾಳರಿಗೊಂದು ಅತ್ರಾಸ ಕೊಡುತ್ತ 'ಮತ್ತೊಂದನ್ನು ತಟ್ಟೆಯಿಂದ ತೆಗೆಯಬೇಡಿ' ಎಂದು ಎಚ್ಚರಿಸಿದಳು.

'ನಾನಾಗಲೇ ಒಂದನ್ನು ತಿಂದು ಮುಗಿಸಿದೆ' ಎಂದು ಹಲ್ಲು ಕಿರಿದರು ಅವರು.

'ಹಾಗಾದರೆ ನಾನೀಗ ಕೊಟ್ಟ ಅತ್ರಾಸವನ್ನು ಹಿಂದಕ್ಕೆ ಕೊಡಿ' ಎಂದು ಅಂಗಲಾಚಿದಳು.

ಇವಳ ಬೇಡಿಕೆಗೆ ಫಲ ದೊರಕದಿದ್ದಾಗ ಬಲವಂತವಾಗಿ ಅವರಿಂದ ಕಿತ್ತುಕೊಳ್ಳುವ ಪ್ರಯತ್ನಮಾಡಿ ಅವರನ್ನು ಅಟ್ಟಿಸಿಕೊಂಡು ಹೋಗಿ ಅವರ ಎಡಗೈಯನ್ನು ಹಿಡಿದಳು. ಆಗ ನಮ್ಮ ಐತಾಳರು ತಮ್ಮ ಬಲಗೈಯಲ್ಲಿದ್ದ ಇಡೀ ಅತ್ರಾಸವನ್ನು ನಾಲಿಗೆ ಉದ್ದಮಾಡಿ ನೆಲ ಸಾರಿಸುವಂತೆ ತಮ್ಮ ಎಂಜಲಿನ ಝಳಕ ಮಾಡಿ 'ಈಗ ತೆಗೆದುಕೊ' ಎಂದಾಗ ನೋಡಬೇಕಿತ್ತು ಸುಮಾಳ ಮುಖವನ್ನು! ಮಕ್ಕಳು ಮಾಡಬಹುದಾದ ಇಂತಹ ಚೇಷ್ಟೆಗಳನ್ನು ತಮ್ಮ ಇಳಿ ವಯಸ್ಸಿನಲ್ಲೂ ಮಾಡಿ ಮಜಾ ತೆಗೆದುಕೊಳ್ಳುತ್ತಿದ್ದ ಎವರ್ ಗ್ರೀನ್ ನವಯುವಕ ಅವರು!

ಕನ್ನಡ ಭಾವಗೀತೆಗಳನ್ನು ಮತ್ತು ಹಳೆಯ ಹಿಂದಿ ಚಲನಚಿತ್ರ ಗೀತೆಗಳನ್ನು ಕೇಳುವುದರಲ್ಲಿ ಆಸಕ್ತಿ ಮಾತ್ರವಲ್ಲದೆ ಸ್ವತಃ ಹಾಡುತ್ತಿದ್ದರು... ಬನಾರಸ್ ಹಿಂದು ವಿಶ್ವವಿದ್ಯಾನಿಲಯದಲ್ಲಿ ಅಧ್ಯಯನ ಮಾಡುತ್ತಿದ್ದಾಗ ಹಿಂದುಸ್ತಾನಿ ಸಂಗೀತವನ್ನು ತಕ್ಕಮಟ್ಟಿಗೆ

ಕಲಿತಿದ್ದರು. ಭಾರತದಿಂದ ಆಗಮಿಸಿದ ಹಾಗೂ ಸ್ಥಳೀಯ ಸಂಗೀತಗಾರರನ್ನು ತಮ್ಮ ಮನೆಗೆ ಆಹ್ವಾನಿಸಿ ಕಛೇರಿಗಳನ್ನು ಏರ್ಪಡಿಸುವುದರಲ್ಲಿ ಸದಾ ಸಂತೋಷಪಡುತ್ತಿದ್ದರು. ನಾನು ಮತ್ತು ನನ್ನಾಕೆ ಅವರ ಮನೆಗೆ ಹೋದಾಗಲೆಲ್ಲ ಲಕ್ಷ್ಮೀನಾರಾಯಣ ಭಟ್ಟರ, ಕೆ. ಎಸ್. ನರಸಿಂಹಸ್ವಾಮಿಯವರ, ಶಿಶುನಾಳ ಶರೀಫರ ಹಾಗೂ ದಾಸರ ಪದಗಳನ್ನು ಸುಮಾಳ ಕೈಲಿ ಹಾಡಿಸಿ ರಸಧಾರೆಯಲ್ಲಿ ಮೀಯುತ್ತಿದ್ದರು. ನನ್ನಾಕೆ ಸ್ವಲ್ಪ ಹುರಿದುಂಬಿಸಿದಲ್ಲಿ ಐತಾಳರೂ ಪಂಡಿತ ಭೀಮಸೇನ ಜೋಷಿಯವರ ಆಲಾಪಗಳನ್ನು ಭಾವುಕರಾಗಿ ಹಾಡುತ್ತಿದ್ದರು.

'ಬರಹ' ಲಿಪಿಯನ್ನು ಬಳಸಿ ತಮ್ಮ ಕನ್ನಡ ಬರಹಗಳನ್ನು ಅಚ್ಚುಕಟ್ಟಾಗಿ ಕೊನೆಯತನಕವೂ ಕಂಪ್ಯೂಟರಿನಲ್ಲಿ ಹಿಡಿದಿಡುತ್ತಿದ್ದ ಅವರ ಸಾಹಸ ನಿಜಕ್ಕೂ ಮೆಚ್ಚತಕ್ಕದ್ದೆ. ಬರಬರುತ್ತ ಕಣ್ಣಿನ ದೃಷ್ಟಿ ಮಸುಕಾದಾಗ ಮುದ್ರಿಸಿದ ಹಾಳೆಗಳನ್ನು ಓದಲು ಅರ್ಧಗೋಳಾಕಾರದ ಗಾಜಿನ ಭೂತಕನ್ನಡಿಯನ್ನು, ಉಪಯೋಗಿಸುತ್ತಿದ್ದರು, ಹಾಗೂ computer monitor ನಲ್ಲಿರುವ ಅಕ್ಷರಗಳನ್ನು extra-large fount ಮೂಲಕ ಗುರುತಿಸುತ್ತಿದ್ದರು. ಕೊನೆಯವರೆಗೂ ಜೀವನೋತ್ಸಾಹವನ್ನು ಕಳೆದುಕೊಳ್ಳದ ಅವರ ಅದಮ್ಯ ಚೇತನಕ್ಕೆ ತಲೆ ಬಾಗುವೆ.


ಇಂತಿಪ್ಪ ನಾಗ ಐತಾಳರು ಆಗಾಗ ಕೋಟದ ಅವರ ಮನೆಯಿಂದ ಕೇವಲ ಒಂದು ಮೈಲಿ ದೂರದ ಮನೆಯವರಾದ ನಾವು ಯಾವುದೋ ರೀತಿಯಲ್ಲಿ ನೆಂಟರಾಗಿರಬೇಕು ಅಂತ ಯಾವಾಗಲೂ ಹೇಳುತ್ತಿದ್ದರು. ಅಂತಹ ರಕ್ತಸಂಬಂಧದ ಎಳೆ ಕೊನೆಗೂ ನಮಗೆ ಸಿಕ್ಕಲಿಲ್ಲ. ಆದರೂ ಎಲ್ಲ ರಕ್ತಸಂಬಂಧವನ್ನು ಮೀರಿದ ಹೃದಯ ಸಂಬಂಧ ಅಂತ ಒಂದು ಉಂಟಲ್ಲವೆ? ಹುಟ್ಟೂರಿನಿಂದ ಹತ್ತು ಸಾವಿರ ಮೈಲಿಗಳಾಚೆಯ ಈ ನೆಲದಲ್ಲಿ ಅಂತಹ ಒಂದು ಋಣಾನುಬಂಧ ನಮ್ಮನ್ನು ಬೆಸೆದಿತ್ತು. ಅವರಿಲ್ಲ ಎಂಬ ಎಲ್ಲ ನೋವಿನ ನಡುವೆ ಈಗ ಅವರ ಬೆಚ್ಚನೆಯ ನೆನಪುಗಳು ಮಾತ್ರ ಎದೆಯಲ್ಲಿ ಜೋಪಾನವಾಗಿ ಕುಳಿತಿವೆ. ಅವರ ಚೇಷ್ಟೆಗಳು ನೆನಪಾದಾಗ ಕಣ್ಣೀರನ್ನು ಒರೆಸಿಕೊಳ್ಳುತ್ತಿರುವಾಗಲೇ ಮುಖದಲ್ಲಿ ಮುಗುಳ್ನಗೆಯೊಂದು ಅರಳುತ್ತದೆ.

*



ಅಲೆ
ಅಲೆ





ನಾಗೈತಾಳರ 'ಕಾಲ ಉರುಳಿ ಉಳಿದುದು ನೆನಪಷ್ಟೇ'

– ವೈದೇಹಿ

ಅಮೆರಿಕದಲ್ಲಿ ಲಾಗಾಯ್ತಿನಿಂದಲೂ ನೆಲೆಸಿರುವ ಉಡುಪಿ ಜಿಲ್ಲೆಯ ಕೋಟತಟ್ಟಿನ ನಾಗೈತಾಳರ ಈ ಕೃತಿಯನ್ನು ತೆರೆವಾಗ ಹಳೆಯ ನೆನಪಿನುಗ್ರಾಣವನ್ನು ಎಷ್ಟೋ ವರ್ಷಗಳ ನಂತರ ಮೆಲ್ಲನೆ, ಹಳೆಯ ಬಿಜಾಗ್ರಿಯ ಕಿರ್‌ರ್ರ್ ಕೀಚ್ ಸೌಂಡ್ ಸಮೇತ ತೆರೆದುಕೊಂಡಂತೆ ಕೇಳಿಸಿತು. ಮೆಲ್ಲ ಒಳನಡೆದು ಅವರೊಡನೆ ಹೆಜ್ಜೆ ಹಾಕಿ ನೋಡಿದರೆ, ಇಷ್ಟು ವರ್ಷವಾದರೂ ಇಷ್ಟಪ್ಪ ಮಂದಿ, ಆಗಿಹೋದ ಎಷ್ಟೆಷ್ಟೋ ಸಮಾಚಾರಗಳು, ಕಷ್ಟಸುಖಗಳು, ಊರಿನ ಮತ್ತು ಮನೆಯ ಮೂಲೆಮೂಲೆಗಳು ಇನ್ನೂ ಒಂದಿಷ್ಟೂ ಮಸುಕಾಗದೆ ಉಳಿದುಕೊಂಡಿವೆಯಲ್ಲ, ಏನು ಹೇಳಲಿ! ಸಣ್ಣಸಣ್ಣ ಚಿಕ್ಕ ಚಕ್ಕೆ ಚಿಕಣಿ ಚೂರುಗಳನ್ನೂ ಬಿಡದೆ ಪುಟ್ಟ ಚಿಮಿಟಿ ತುದಿಯಿಂದ ಚಿಮಿಟಿ ಚಿಮಿಟಿ ಎತ್ತಿ ತೋರುವ ನಾಗೈತಾಳರ ಬರವಣಿಗೆಯನ್ನು ಈ ಹಿಂದೆಯೇ ಒಮ್ಮೆ ಓದಿ ಅಚ್ಚರಿಪಟ್ಟಿದ್ದೆ. ಈ ಕೃತಿಯಲ್ಲಂತೂ ತನ್ನೂರಿನ ವಿಚಾರಗಳನ್ನಾಗಲೀ ಜನರನ್ನಾಗಲೀ ಅವರಾಡಿದ ಮಾತುಗಳನ್ನಾಗಲೀ ಹೆಕ್ಕಿ ಹೇಳುವ ಪರಿ ಇನ್ನೂ ತೀಕ್ಷ್ಣವಾಗಿ ತಾಕುತ್ತಿದೆ. ಇಷ್ಟೆಲ್ಲಾ ಸ್ಮೃತಿಗಳನ್ನು ಎದೆಯ ಬಟ್ಟಲಲ್ಲಿಟ್ಟುಕೊಂಡು ಅಮೆರಿಕಾದಲ್ಲಿ ಅವರು ಇಷ್ಟು ದಿನಗಳ ಕಾಲ ದಿನ ತೆಗೆದರು ಮತ್ತು ಈಗಲೂ ತೆಗೆಯುತ್ತಿರುವವರು ಅಂದರೆ, ಅದು ಹೇಗೇ

ಅಂತ! ಪುಸ್ತಕ ಓದುತಿದ್ದೇನೆ, ಗಿರಡ್ಡಿ ಗೋವಿಂದರಾಜ ಸ್ಮಾರಕ ಪ್ರಥಮ ಉಪನ್ಯಾಸವಾಗಿ ಪ್ರೊ. ಮಕರಂದ ಪರಾಂಜಪೆ ಅವರು ತಮ್ಮ ಪೂರ್ವಿಕರ ಮನೆಯ ಕುರಿತು ಆಡಿದ ಮಾತುಗಳು ನೆನಪಾಗುತ್ತಿವೆ. ಆ ಸುದೀರ್ಘ ಉಪನ್ಯಾಸದಲ್ಲಿ ಅವರು 'ನನ್ನ ತಂದೆಯ ಕುಟುಂಬ ವಾಸವಾಗಿದ್ದ ಉಮರ್‌ಗಾಂವ್‌ನ ಆ ಮನೆಯ ಕುರಿತ ನನ್ನ ಅತೀ ಹಿಂದಿನ ನೆನಪುಗಳು... ಹಲವು ಸೋದರ ಸಂಬಂಧಿಗಳು, ಚಿಕ್ಕಪ್ಪ ಚಿಕ್ಕಮ್ಮಂದಿರು, ಅತ್ತೆ ಮಾವಂದಿರು, ಮಾಗುತ್ತಿರುವ ಮಾವಿನಹಣ್ಣು ತುಂಬಿದ ಕೋಣೆ, ಮುಸ್ಸಂಜೆಯ ಸುಶ್ರಾವ್ಯ ಸ್ತೋತ್ರಗಳು ಹಾಗೂ ಈಗಷ್ಟೇ ನೀರು ಸಿಂಪಡಿಸಿದ ಅಂಗಳದಲ್ಲಿ ಚಾರ್ಪಾಯಿಯ ಮೇಲೆ ಅಡ್ಡಾದಾಗ ಕಂಡ ನಕ್ಷತ್ರಭರಿತ ರಾತ್ರಿಗಳು ಹಾಗೂ ಚಂಪಕ ಹೂವುಗಳ ಸುವಾಸನೆ... ಮೂರು ಅಂತಸ್ತುಗಳ ಹದಿನೈದಕ್ಕೂ ಹೆಚ್ಚು ಕೋಣೆಗಳಿದ್ದ ದೊಡ್ಡಮನೆ, . ದ್ವಾರದ ಬಲಭಾಗದಲ್ಲಿ ದೊಡ್ಡ ಕೊಟ್ಟಿಗೆ, ಅದರೆದುರು ಅಂಗಳದಂತಹ ಖಾಲಿ ಜಾಗ, ಅಲ್ಲಿಂದ ಜಗಲಿಗೆ ಹೋಗಲು ಮೆಟ್ಟಲುಗಳು... ಪ್ರತಿಯೊಬ್ಬರೂ ಒಬ್ಬರಾದ ಮೇಲೊಬ್ಬರಂತೆ ಇಲ್ಲಿಂದ ಹೊರನಡೆದರು ಅಥವಾ ನಿಧನರಾದರು. ಒಂದು ಕಾಲದಲ್ಲಿ ವಿಸ್ತಾರವಾದ ಕುಟುಂಬವಿದ್ದ ಹಿರಿಮನೆ ಖಾಲಿಯಾಗಿ ಸಂಪೂರ್ಣ ಭಿನ್ನ ಚಹರೆ ಪಡೆಯಿತು. ನನ್ನ ಪೂರ್ವಿಕರ ಆ ಮನೆತನವನ್ನು ರೂಪಿಸುವಲ್ಲಿ ಗಮನಾರ್ಹ ರೀತಿಯಲ್ಲಿ ಕೊಡುಗೆ ನೀಡಿದೆ. ನಾನು ಹಲವು ವರ್ಷಗಳ ಕಾಲ ವಿದೇಶದಲ್ಲಿ ವಾಸವಾಗಿದ್ದಿರಬಹುದು ಹಾಗೂ ಐವತ್ತಕ್ಕೂ ಹೆಚ್ಚು ದೇಶಗಳನ್ನು ಸುತ್ತಿರಬಹುದು. ಆದರೆ ನನ್ನ ಪೂರ್ವಿಕರ ಮನೆಯ ನೆನಪು ಸದಾ ನನ್ನ ಅಸ್ಮಿತೆಯ ನಿರ್ಣಾಯಕ ಲಕ್ಷಣವಾಗಿ ನನ್ನ ಮನಸ್ಸಿನಲ್ಲಿ ಉಳಿದುಕೊಂಡಿದೆ' ಎಂದು ಮುಂತಾದ ಇನ್ನೂ ಬಹು ವಿವರಗಳು ಮತ್ತೆ ಮನೋನೆಲೆಯಲ್ಲಿ ಕಾಣಿಸಿಕೊಂಡವು. ಜೊತೆಗೆ ಕುವೆಂಪು ಅವರ 'ಹೋಗುವೆನು ನಾ' ಎಂಬ ಅಮರ ಕವನವೂ. ಮೂಲತಃ ಆಧುನಿಕ ಇಂಡಿಯಾದ ಚಹರೆಯೇ ಬದಲಾದ ಸ್ಮೃತಿಕಥೆಗಳು ಇವೆಲ್ಲ. ನಾಗೈತಾಳರ ಮತ್ತು ನಂತರದ ಒಂದು ಪೀಳಿಗೆಯವರಿಗೆ ದಕ್ಕಿದ ಅನುಭವ ವಿಶೇಷ. ಅದನ್ನು ದಾಖಲಿಸದೆ ವಿರಮಿಸಲಾರೆ ಎಂಬುದು ಅವರೆಲ್ಲರಲ್ಲಿಯೂ ಇದ್ದೇ ಇರುವ ಒಂದು ತೀಕ್ಷ್ಣ ಸಂವೇದನೆ.

ಮನೆ ಬಿಟ್ಟು ದೂರ ವಿದೇಶಕ್ಕೆ ಹೊರಟ ಪ್ರಥಮ ಪೀಳಿಗೆಯಲ್ಲವೆ ಅದು! ಹೆಚ್ಚಿನ ಅವಕಾಶ ಎಂಬ ಕಲ್ಪನೆ ಹುಟ್ಟಿದ, ಅವಕಾಶ ಒದಗಿದ, ಅದಕ್ಕೆ ತಕ್ಕಂತೆ ಕಾಲಕ್ಕನುಗುಣವಾಗಿ ಊರು ಬಿಟ್ಟು, ರಾಜ್ಯ ಬಿಟ್ಟು, ದೇಶ ಬಿಟ್ಟು ಹೊರಟ ಹೆಮ್ಮೆ, ಜಂಭ ಮತ್ತು ಆತಂಕಗಳನ್ನು ಒಟ್ಟಿಗೇ ಅನುಭವಿಸಿದ ಪೀಳಿಗೆ ಅದು. ಪ್ರತೀ ಸಲ ಹೊರಡುವಾಗಲೂ 'ಇನ್ನು ಯಾವಾಗ ಬರುವೆ?' ಎಂಬ ಪ್ರಶ್ನೆಯೆದುರು ಕಣ್ತುಂಬಿ ಕಂಪಿಸಿ ನಿಲ್ಲುತ್ತಿದ್ದ ಪೀಳಿಗೆಯೂ. ದೂರವಿದ್ದಾಗ ಹಳೆಯದು ಮರೆಯಾಗುತ್ತದೆ ಎಂಬುದು ಸಾಮಾನ್ಯ ತಿಳುವಳಿಕೆ. ಆ ಬಗ್ಗೆ ಸರ್ವೇಸಾಮಾನ್ಯ ಎಲ್ಲ ಭಾಷೆಗಳಲ್ಲಿಯೂ ಎಷ್ಟು ಗಾದೆಗಳು ಬೇಕು! ಸಂಬಂಧ ಸಡಿಲಾಗಿ, ಹುಟ್ಟಿದ ನೆಲ ಕಾಣದಾಗಿ, ಹೊಕ್ಕುಳ

ಬಳ್ಳಿಯು ಶಿಥಿಲವಾಗಿ... ಮುಂತಾಗಿಯೆಲ್ಲ ಒಂದು ಬಗೆಯ ವಿಸ್ಮರಣೆ ಕುರಿತ ನೈರಾಶ್ಯದ ಉದ್ಗಾರಗಳು ಅವು. ಇದೊಂದು ತೆರನಾದರೆ, ದೂರ ಹೋದಷ್ಟೂ ಬಿಟ್ಟು ಬಂದ ಜಗತ್ತು ಸ್ಫುಟವಾಗಿ ಕಾಣುವುದು ಇನ್ನೊಂದು ತರಹ. (ನನ್ನದೇ ಚಿಕ್ಕ ಅನುಭವ ಹೇಳಬೇಕೆಂದರೆ – ಮದುವೆಯಾಗಿ ನಾನು ಶಿವಮೊಗ್ಗೆಗೆ ಹೋದ ಮೇಲೆಯೇ ನನಗೆ ನಾನು ಬಿಟ್ಟು ಬಂದ ಕುಂದಾಪುರದ ಲೋಕ ನಿಚ್ಚಳವಾಗಿ ಕಾಣತೊಡಗಿದ್ದು. ಅದುವರೆಗೂ ಅದು ತಾಯಿಯಂತೆ, ನಿಕಟವಾಗಿ ಇದ್ದ ಕಾರಣಕ್ಕೇನೇ ಗಮನ ಸೆಳೆಯದಂತಿರುವ, ವಿಚಿತ್ರ ವಾಸ್ತವವಾಗಿತ್ತು. ದೂರವೆಂಬುದು ಹೇಗೆಲ್ಲ ನಮ್ಮ ಹಂಬಲ ಸ್ಮೃತಿ ತಳಮಳ ಮತ್ತು ಹಳವಂಡಗಳ ನಿರ್ಣಾಯಕ ಪಾತ್ರವಾಗುತ್ತದೆ! ಇರಲಿ) ಮೇಲೆ ಹೇಳಿದ ನೈರಾಶ್ಯದ ಉದ್ಗಾರಗಳನ್ನು ಸುಳ್ಳು ಮಾಡುವಷ್ಟು ಸ್ಮೃತಿ ಆವಿಷ್ಟತೆಯಲ್ಲಿ ಅದ್ದಿಕೊಂಡ ಚೇತನಗಳದೇ ಬೇರೆ ಕತೆ. ನಾಗೈತಾಳರಂಥವರ ಕತೆ ಹೀಗೆ. ನಾಗೈತಾಳರು ವರ್ಣಿಸಿದ ಕೋಟದೂರು ನನಗೆ ಪರಿಚಿತವೇ. ಅವರ ತಂದೆ ನಮ್ಮಲ್ಲಿ 'ಕೃಷ್ಣೇವೈತಾಳ್ರು' ಎಂದೇ ಪ್ರಸಿದ್ಧ. ಅವರು ತಂದೆಯನ್ನು ನೆನೆದ ರೀತಿಯಲ್ಲಿಯೂ ಅಂದಿನ ಊರುಬದಿಯ ವರ್ಣನೆ ವಿವರಗಳಲ್ಲಿಯೂ ಒಂದಿಷ್ಟೂ ಅತಿಶಯೋಕ್ತಿಯಿಲ್ಲವೆಂದು ನಮ್ಮೂರಿನ ಯಾರೂ ಹೇಳಿಯಾರು. ಈಗ ನೋಡಿದರೆ, ನಾಗೈತಾಳರು ಇದ್ದದ್ದು ಅಮೆರಿಕಾದಲ್ಲಿಯಾದರೂ ಜೀವಿಸಿದ್ದು ತನ್ನ ಜನರೊಂದಿಗೇ, ತನ್ನೂರಿನೊಂದಿಗೇ ತನ್ನ ಕುಟುಂಬ, ಅಮ್ಮ ಅಪ್ಪ ಅಕ್ಕ ತಂಗಿ ತಮ್ಮಂದಿರೊಂದಿಗೆ ಮತ್ತು ತನ್ನಲ್ಲಿ ಒಂದಿಷ್ಟೂ ಅಪಭ್ರಂಶವಾಗಲು ಬಿಡದೆ ಉಳಿಸಿಕೊಂಡ ಕೋಟತಟ್ಟಿನ ಗ್ರಾಮ್ಯ ಕನ್ನಡದೊಂದಿಗೇ; ನೆನಪುಗಳನ್ನು ಸಾಧ್ಯವಾದಷ್ಟೂ ಉದುರಿಹೋಗಲು ಬಿಡದೆ ಜೋಪಾನ ಮಾಡಿಕೊಂಡು! ಭೌಗೋಳಿಕ ದೂರದೊಂದಿಗೆ ಈಗ ವಯೋಮಾನದ ದೂರವೂ ಸೇರಿ ಕಳೆದುಹೋದ ಆ ದೂರ ದಿನಗಳನ್ನು ಹತ್ತಿರವಾಗಿಸಿದೆ. ಕಾಣದ ನೆಲದಲ್ಲಿ ಬದುಕು ಹೂಡುವ ತರುಣ ಗಡಿಬಿಡಿಯಲ್ಲಿ ನೆನಪಿಸಿದ್ದಕ್ಕಿಂತ ಈಗ ಎಲ್ಲ ಮುಗಿಸಿ ಕುಳಿತ ಇಳಿಹೊತ್ತಿನಲ್ಲಿ ಹೆಚ್ಚು ನಿಚ್ಚಳವಾಗಿ ಎಲ್ಲವನ್ನೂ ನೆನಪಿಸುತ್ತಿವೆ. ದೂರ ಹೋದಷ್ಟೂ ಸ್ಮೃತಿಗಳು ಇನ್ನಷ್ಟು ಸ್ಪಷ್ಟ ಕಾಣುವ ಚೋದ್ಯವಿದು. ಚಾಳೀಸಿನ ಅಗತ್ಯ ಕಳೆದು ದೃಷ್ಟಿಯನ್ನು ಮರುಪಡೆದುಕೊಳ್ಳುವ ಸಂಭ್ರಮದಂತೆ. ಈ ಸಂಭ್ರಮವಾಗಲೀ, ಚೋದ್ಯವಾಗಲೀ ನಾಗೈತಾಳರಿಗೆ ದಕ್ಕಿದೆಯೆಂದರೆ ಎಲ್ಲರಿಗೂ ದಕ್ಕುತ್ತದೆ ಎನ್ನುವಂತಿಲ್ಲವಲ್ಲ! ಬದಲು ಇದರ ವಿರುದ್ಧ ಸ್ಥಿತಿ ತಲುಪಿಲ್ಲವಾದರೆ, ಅದೇ ಪುಣ್ಯ.

ಒಂದು ರೀತಿಯಲ್ಲಿ ಈ ಕೃತಿ ಹೇಗಿದೆಯೆಂದರೆ ಕಾದಂಬರಿಯೊಂದರ ಕಥಾನಕ ಭಾಗವನ್ನು ಬೇರ್ಪಡಿಸಿ ಕೇವಲ ಸ್ಥಳ, ವ್ಯಕ್ತಿ, ಶೈಕ್ಷಣಿಕ ಸ್ಥಿತಿಗತಿ, ಮನೆತನ, ಇತ್ಯಾದಿಗಳನ್ನು ಭಾವಶೀಲತೆಯಿಂದ ವಿವರಣಾತ್ಮಕ ಮತ್ತು ಸಣ್ಣದೊಂದು ವಿಮರ್ಶೆಯ ಶೈಲಿಯಲ್ಲಿ ಉಲ್ಲೇಖವಾದಂತೆ. ಇವುಗಳ ಸುತ್ತ ಸುಮ್ಮನೆ ಒಂದು ಕಥಾನಕವನ್ನು ಹೆಣೆದರೆಂದರೆ ಅದು ಕಾರಂತರ ಕಾದಂಬರಿಯನ್ನು ನೆನಪಿಸುವ ಒಂದು ಕಾದಂಬರಿಯ ರೂಪ

ತಳೆದೀತು. ಆತ್ಮನಿರೀಕ್ಷಣೆ, ತಿಳಿಹಾಸ್ಯ, ಆತ್ಮನಿವೇದನೆ, ಪಶ್ಚಾತ್ತಾಪ, ತಪ್ಪೊಪ್ಪಿಗೆ, ಕೆಲವರ ಮೇಲೆ (ಉದಾ: ಮಾಬಲ ಮಾಸ್ತು) ಅಳಿದಂತೆ ಕಂಡೂ ಅಳಿದಿಲ್ಲದ ಕೋಪ, ಹಳಹಳಿಕೆ ಇತ್ಯಾದಿ ಎಲ್ಲದರ ಸಂಗಮವಾಗಿದೆ ಇಲ್ಲಿನ ನಿರೂಪಣೆ. ಎಲ್ಲ ಸಾತ್ವಿಕ ಸ್ತ್ರೀಯರ ನಡುವೆ ಪರಚಿ ನಿಂತಂತೆ ಕಾಣುವ ಆ ಗರಾಸಿ ಚಂದುವಿನ (ಚಿಕ್ಕಪ್ಪನ ಉಪಪತ್ನಿಯ) ಚಿತ್ರ ಎಷ್ಟು ಜೀವಂತವಾಗಿದೆ! ಸಣ್ಣದೊಂದು ಕ್ಯಾಪ್ಸೂಲಿನಲ್ಲಿ ಅಡಗಿಸಿ ಹೇಳಿದ, ಅಂದಿನ ಲಜ್ಜೆಯೆಂಬುದೇ ಇಲ್ಲದ ಭಯವೂ ಇಲ್ಲದ ಗಂಡಸರ ರಾಜಾರೋಷ ಹಾದರದ ಮತ್ತು ತಮ್ಮನ್ನು ಇಟ್ಟುಕೊಂಡವರಿಂದಾಗಿಯಷ್ಟೇ ಧ್ವನಿ ಪಡೆವ, ಅವರು ತೀರಿದ್ದೇ ಧ್ವನಿಭರ್ರನೆ ಇಳಿಯುತ್ತ ಹೋಗುವ ಕೆಲ ದಢಾಸಿ ಸ್ತ್ರೀಯರ ಯಥಾರ್ಥ ಚಿತ್ರಣವದು. ಆ ಚಂದು ತೀರಿಕೊಂಡಾಗ, 'ನಿನ್ನ ಕಿರಿಯಬ್ಬೆ ಹೋದ್ಲು' ಎಂದು ತಾಯಿ ತಮಾಷೆರೂಪದಲ್ಲಿ ಮಗನಿಗೆ ಸುದ್ದಿ ಅರುಹಿದ್ದನ್ನು ಓದಿದವಳಿಗೆ ನನ್ನಷ್ಟಕ್ಕೇ ನಗೆ. ನಮ್ಮ ಕಡೆ ಸ್ತ್ರೀಯರ ಮಾತಿನಲ್ಲೇ ಹಾಸ್ಯ ಕೋಪ ಮತ್ತು ವ್ಯಂಗ್ಯದ ಅಲಗುಗಳು ತಾಗಬೇಕಾದವರಿಗೆ ಮಾತ್ರ ತಾಕುವಂತೆ ಹೇಗಿರುತ್ತವೆ ಎಂಬುದಕ್ಕೆ ಇದೊಂದು ತೀರ ಸಣ್ಣ ಉದಾಹರಣೆ ಅಷ್ಟೆ. ನಾನು ಕಂಡಂತೆ ನಮ್ಮಲ್ಲಿನ ಮಾತುಗಳಲ್ಲಿ ಕವಿತೆಯ ಅಲಗುಗಳೂ ಅಲ್ಲಲ್ಲೆ ಮಡಚಿ ಹುದುಗಿರುತ್ತವೆ. ಇಲ್ಲಿನ ಅನೇಕರ ಕತೆ, ಅದರಲ್ಲಿಯೂ ಅವಳು ಹಾಡುವ ಆ ಚೆಲುವಾದ ಹಾಡಿನ ಸಮೇತ ನೆನೆದ ಕಾಶಮ್ಮಕ್ಕನ ಅರೆತೆರೆದ ಕತೆಯಂತೂ ಬರೆಯದ ಕಾದಂಬರಿಯ ಒಂದು ಪಾತ್ರದಂತೆಯೇ ಇದೆ. ಇತ್ತ ಉಪ್ಪರಿಗೆಯಲ್ಲಿ ಕಿಟ್ಟಕ್ಕನೆಂಬ ಚಿಕ್ಕಮ್ಮನ ನಿಧನ, ಅತ್ತ ಮೂಡುಚಾವಡಿಯಲ್ಲಿ ಅವಳಿಜವಳಿ ಹೆಣ್ಣು ಮಕ್ಕಳ ಜನನ! ದೇವರೆ! ಅಂದಿನ ವಿದ್ಯಮಾನಗಳಿಗೆ ಯಾವ ಲಂಗುಲಗಾಮಿಲ್ಲದೆ ಹೋಯಿತೆ! ನನಗೆ ಸಂಬಂಧಿಯೂ ಆಗಿರುವ ಅವರ ಕೊನೆಯ ತಂಗಿ ಯಶೋದೆ ಒಮ್ಮೊಮ್ಮೆ ಸಿಗುವುದಿದೆ. ಇನ್ನವಳು ಸಿಕ್ಕರೆ ಹೇಳಿಕೊಳ್ಳಲು ಮಾತಾಡಿಕೊಳ್ಳಲು ನನಗೆ ಇದೆಲ್ಲ ಇದೆ! ಒಮ್ಮೆ ತನ್ನ ಸೋದರಿಯರೊಂದಿಗೆ ಪತ್ನಿ ಲಕ್ಷ್ಮಿಯ ಜೊತೆಗೂಡಿ ನಾಗೈತಾಳರು ನಮ್ಮ ಮನೆಗೂ ಬಂದಿದ್ದರು. ಮಾತು ನಗೆ ಕುಶಾಲುಗಳ ನಡುವೆ ಸಮಯ ಸಂದದ್ದೇ ತಿಳಿಯದೆ ಪರ್ರನೆ ಹಾರಿಹೋದ ಸಂಜೆಯದು. ಅವರಾಡುತಿದ್ದ ತೀರಾ ಗ್ರಾಮ್ಯ ಕನ್ನಡವನ್ನು ಕೇಳಿ ನಾನು ಬೆಪ್ಪಾಗಿಬಿಟ್ಟಿದ್ದೆ. ನಮ್ಮ ಕೋಟಗನ್ನಡವನ್ನು ಅದರ ಅಪ್ಪಟ ಗ್ರಾಮ್ಯರೂಪ ಒಂಚೂರೂ ಕೆಡದಂತೆ ಅದರ ಸಂಕ್ಷಿಪ್ತತೆ, ಎಳೆತ ರಾಗ ಉಚ್ಚಾರಗಳ ಸಮೇತ ಉಳಿಸಿಕೊಂಡ ಅಪರೂಪದವರಲ್ಲಿ ನಾಗೈತಾಳರು ಒಬ್ಬರು. ಅವರು ತಾನು ಬಿಟ್ಟು ಹೋದ ಕಾಲದ ಕೋಟಭಾಷೆಯಲ್ಲೇ ಈಗಲೂ ನೆಲೆಸಿರುವರು. ಕೆಲ ಮಾರ್ಪಾಟುಗಳಿಗೆ ಈಡಾಗಿರುವ ಅದರ ಮೂಲ ಮಾದರಿ ಈಗ ಬೇಕೆಂದರೆ ಅದು ಸಿಗಬಹುದಾದ ಒಂದು ಸಂಪನ್ಮೂಲ ನಾಗೈತಾಳರು ಎಂಬ ನಂಬಿಕೆ ನನ್ನದು. ಓದಿ ಮುಗಿಸಿ, ಸುಮ್ಮನೆ ಕೃತಿ ಕುರಿತೇ ಯೋಚಿಸುತ್ತ ಕುಳಿತಾಗ ಅನಿಸಿದ್ದು ಇದೊಂದು ಕೈಮುಗಿದು ನಿಂತ ಧನ್ಯವಾದ ಸಮರ್ಪಣೆಯ ಕೃತಿಯೂ ಹೌದು. ಎಷ್ಟೆಲ್ಲ ತಾನು

ಪಡೆದೆ, ತನ್ನ ಇಂದಿನ ಬದುಕಿಗೆ ತನ್ನನ್ನು ಬೆಳೆಸಿದ ಏನೆಲ್ಲ, ಯಾರೆಲ್ಲ ಎಷ್ಟೆಲ್ಲ ಶಕ್ತಿಗಳು ಕಾರಣ ಎಂಬುದನ್ನು ನೆನೆಯುತ್ತ ಕೆಲವೆಡೆ ಅಶ್ರುತರ್ಪಣವನ್ನೂ ನೀಡುವ ಮೂಲಕ ಲೇಖಕನ ಮನಸ್ಸನ್ನು ಹಗುರಗೊಳಿಸಿದ ಬರವಣಿಗೆ ಇದು. ಈ ತೀರಾ ಇಳಿವಯಸ್ಸಿನಲ್ಲಿ ಕಳೆದು ಉಳಿದ ನೆನಪಿನ ಬಂಡಿಯಲ್ಲಿ ಇಷ್ಟು ದೀರ್ಘ ಪಯಣಿಸಿ ಪಯಣದುದ್ದಕ್ಕೂ ಹಾಸಿಬಂದ ಎಲ್ಲವನ್ನೂ ಭಾವಚಿತ್ರದಂತೆ ದಾಖಲಿಸಿ ಕೊಟ್ಟಿರುವ ನಾಗೈತಾಳರದು ಮೂಲತಃ ಹೆಣ್ಣು ಸಂವೇದನೆಯೇ ಸರಿ. ಹಾಗಲ್ಲದೆ ಹೋದಲ್ಲಿ ಇದು ಇಷ್ಟರಮಟ್ಟಿಗೆ ಸಾಧ್ಯವಾಗುತ್ತಿರಲಿಲ್ಲ. ಒಂದು ಲೆಕ್ಕದಲ್ಲಿ ಇದು ದಾಟಿ ಹೋದ ಕಾಲವೊಂದರ ಅಕ್ಷರರೂಪೀ ಡಾಕ್ಯುಮೆಂಟರಿ ಎಂದರೂ ಸರಿಯೆ. ಅವರು ಮಾಡಿದ ಈ ಉಪಕಾರಕ್ಕೆ, ಸಾಹಸಕ್ಕೆ ತಲೆಬಾಗುವೆ.


ಒಟ್ಟಿನಲ್ಲಿ– ಕೋಟದೂರಿನ ನಾಗಪ್ಪಯ್ಯ ಎಂಬ ಐತಾಳಮಾಣಿ ಈಗ ಬೆಳೆದು ದೊಡ್ಡವನಾಗಿ ನೆನಪಿನುಗ್ರಾಣ ಹೊಕ್ಕು ಅಲ್ಲಿನ ಕಡುಕತ್ತಲೊಳಗೆ ಸರ್ಚ್‌ಲೈಟ್ ಬಿಡುತ್ತ ಕಣ್ಣಿಗೆ ಕಂಡದ್ದು ಮಾತ್ರವಲ್ಲ ಭಿತ್ತಿಯಲ್ಲಿ ಅಂಟಿ ಕುಳಿತದ್ದನ್ನು ಕೂಡ ಕಾಣಿಸುತ್ತ ಕೇಳಿಸುತ್ತ ನಡುಗು ನಡೆಯಲ್ಲಿ ಸಾಗುತಿದ್ದರೆ ಇತ್ತ ನಮ್ಮೊಳಗೆ ಇನ್ನೊಂದೇ ಬಾಗಿಲು, ನಮ್ಮದೇ ನೆನಪುಗಳ ಉಗ್ರಾಣಬಾಗಿಲು ತನ್ನತನ್ನಂತೆ ತೆರೆಯುತ್ತಿದೆಯೋ ಎಂಬಂತೆ ಭಾಸವಾಗುವುದು, ಅಲ್ಲಿನ ಒಂದು ಚಿತ್ರವನ್ನು ಕಾಣುತಿದ್ದಂತೆ ನಮ್ಮೊಳಗೆ ಅದಕ್ಕೆ ಹೊಂದಿದ, ಒಂಚೂರೂ ಹೊಂದದ ಯಾವ್ಯಾವುದೋ ಚಿತ್ರಗಳು ಕಣ್ಣೆದುರು ಬಂದು ಒಂದು ಕ್ಷಣ ಅವುಗಳೆದುರು ನೆಲೆಸಿ, ಮತ್ತೆ ನಿಧಾನವಾಗಿ ಮುಂದರಿಯುವಂತೆ ಆಗುವುದು; ಒಂದಷ್ಟು ಪುಟ ಓದಿ ಕಣ್ಮುಚ್ಚಿ ಧೇನಿಸಿದರೆ ನಮ್ಮ ನಮ್ಮ ಮರೆವುಗಳೇ ಮೈತಿಳಿದೆದ್ದು ಬಂದು ಮಾತಿಗಾರಂಭಿಸತೊಡಗುವುದೂ – ಈ ಬರಹದ ಒಂದು ಶಕ್ತಿ ಎನ್ನಲೆ?

–

ಅನುಬಂಧ: ೨೦೧೯ರಲ್ಲಿ ಕನ್ನಡ ಸಾಹಿತ್ಯರಂಗ ನಡೆಸಿದ ವಸಂತೋತ್ಸವದಲ್ಲಿ ಪಾಲ್ಗೊಳ್ಳಲು ಹೋದಾಗ ನಾಗೈತಾಳರ ಪರಿಚಯವಾಗಿತ್ತು. ಅವರ ಪತ್ನಿ ಶಿವಮೊಗ್ಗೆಯ ಮೇಳಿಗೆಯವರು ಎಂದೂ ಅವರು ಕೋಟದ ಪ್ರಸಿದ್ಧ ಕೃಷ್ಣದೇವ ಐತಾಳರ ಪುತ್ರರೆಂದೂ ತಿಳಿದು ಒಂದು ತೂಕ ಹೆಚ್ಚಿಗೆ ಸಂತೋಷವಾಗಿತ್ತು. ನಾನೂ ಕೋಟದವಳು, ಮತ್ತು ಮದುವೆಯಾಗಿ ಶಿವಮೊಗ್ಗೆ ಸೇರಿದವಳು ಎಂಬ ಕಾರಣವೂ ಇರಬಹುದು. ನಮಗೇ ಗೊತ್ತಿಲ್ಲದಂತೆ ಇಂತಹ ಕಾರಣಗಳು ತನ್ನಷ್ಟಕ್ಕೇ ಸಂಬಂಧಗಳನ್ನು ಇನ್ನಷ್ಟು ಹತ್ತಿರ ತರುತ್ತವಷ್ಟೆ? (ಮಾರಕವಾಗುವುದೂ ಇವೇ ವಿಪರೀತಕ್ಕೆ ಹೋದಾಗ ಎನ್ನಿ. ಮನುಷ್ಯಕುಲ ತನ್ನ ಕುಟುಂಬ, ಊರು, ಜಾತಿ, ಸಮುದಾಯ, ಮತ ಇತ್ಯಾದಿಗಳ ಮೋಹ ಮಿತಿ ಗೆರೆದಾಟಿ ಅತಿ ಸೆಳೆತದಲ್ಲಿ ಜಗತ್ತನ್ನು ಒಡೆದು ಛಪ್ಪಂಚೂರು ಮಾಡುತ್ತಿದೆ. ಈ ದುರಂತವನ್ನೂ ನಾವು ಕಾಣುತಿದ್ದೇವೆ) ಒಂದು ಹದದಲ್ಲಿಯೇ ಇದ್ದಲ್ಲಿ ಇವೆಲ್ಲ ಎಷ್ಟು ಬೆಚ್ಚಗಿನ ಬಾಂಧವ್ಯ ಬೆಸೆಯುತ್ತವೆ! ನಾಗೈತಾಳರೊಡನೆ ಹೀಗೊಂದು ಬಾಂಧವ್ಯ

ಇತ್ತು. ಅಂದು ಅವರು ನೆಲೆಸಿದ ಲಾಸ್ ಏಂಜಲೀಸ್‌ನ ಮನೆಗೆ ಕಂಬಾರರನ್ನೂ ನನ್ನನ್ನೂ ಆಹ್ವಾನಿಸಿ ಸ್ನೇಹಿತರನ್ನು ಸೇರಿಸಿ ಒಂದು ಸ್ನೇಹಕೂಟ ಏರ್ಪಡಿಸಿ ಕಾವ್ಯವಾಚನ ಮಾಡಿಸಿದ್ದರು. ಅವತ್ತು ನಮಗಲ್ಲಿ ಊರುಮನೆ ಊಟ. ಮಲೆನಾಡಿನ, ಕೋಟದ ಮತ್ತು ಅಮೆರಿಕಾದ ರುಚಿಯ ಅಡುಗೆ, ಬಗೆ ಬಗೆ, ಎಲ್ಲವನ್ನೂ ಅವರ ಪತ್ನಿ ಸ್ವತಃ ತಯಾರಿಸಿದ್ದು, ಆಕೆ ಚುರುಕಿನ ಬುರುಡೆ, ಅಡುಗೆ ಪ್ರಯೋಗದಲ್ಲಿ ನಿಸ್ಸೀಮೆ ಎಂಬುದರ ಪ್ರತ್ಯಕ್ಷ ಅನುಭವ ನಮಗಾಯಿತು. ಉದ್ದಾನುದ್ದ ಐತಾಳರಿಗೆ ಪುಟ್ಟಾನುಪುಟ್ಟ ಲಕ್ಷಣವಂತೆ ಹೆಂಡತಿ, ಲಕ್ಷ್ಮಿ. ಗಂಡ ಮತ್ತು ತವರಿನವರು ಕರೆಯುವ ಕೊಂಡಾಟದ ಹೆಸರು, ವರ್ಷ ಎಂಭತ್ತಕ್ಕೆ ಸಮೀಪಿಸಿದ್ದರೂ, ಪುಟ್ಟಮ್ಮ! ಅವತ್ತಿನ ಆ ದಿನ ಎಷ್ಟು ಬೇಗ ಕಳೆದುಹೋಯಿತೆನ್ನಲಿ! ದಿನ ಕಳೆದುಹೋದರೇನು, ಅವರ ಜೊತೆಗಿನ ಆತ್ಮೀಯತೆ ಹೆಚ್ಚಿತು. ಊರಿಗೆ ಬಂದಾಗೆಲ್ಲ 'ನಾನು ಬಂದೆ!' ಅಂತ ನಾಗೈತಾಳರು ಫೋನ್ ಮಾಡಿಯೇ ಮಾಡುತಿದ್ದರು. ಆ ದನಿಯಲ್ಲಿ ಹೊಮ್ಮುವ ಹಿಗ್ಗು ಹೇಗಿರುತ್ತಿತ್ತೆಂದರೆ ಮಗು ಓಡೋಡಿ ಬಂದು ತಾಯಿಯ ಮಡಿಲಲ್ಲಿ ಕುಳಿತ ಹಿಗ್ಗಿನಂತೆ. ಪ್ರತೀ ಸಲವೂ ನಾವು ಮನೆಗೆ ಬನ್ನಿ ಎಂದು ಕರೆಯುತಿದ್ದೆವು. ಮರಳುವ ಮುಂಚೆ ಅವರು ಬಂದೇ ಬರುತಿದ್ದರು. ಒಮ್ಮೆ ತಂಗಿಯಂದಿರೊಡನೆ, ಒಮ್ಮೆ ತಮ್ಮನೊಡನೆ, ಪತ್ನಿಯೊಡನೆ ಹೀಗೆ ಜೊತೆಗೂಡಿ ಬರುತಿದ್ದರು. ಅಂದ ಹಾಗೆ ಕೊನೆಯ ಬಾರಿ ಐತಾಳರು ಊರಿಗೆ ಬಂದಾಗ ಕೋಟೇಶ್ವರದ ಬಳಿ ಸಮುದ್ರ ತಟದ ನಿವಾಸವೊಂದರಲ್ಲಿ ನಡೆದ ಲೇಖಕಿಯರ ಸಂವಾದ–ಒಡನಾಟ ಶಿಬಿರಕ್ಕೆ ಆಹ್ವಾನಿತರಾಗಿ ಪತ್ನಿ ಲಕ್ಷ್ಮಿ ಸಮೇತರಾಗಿ ಬಂದು ಶೀಘ್ರದಲ್ಲೇ ಬಿಡುಗಡೆಯಾಗಲಿದ್ದ ತಮ್ಮ ಆತ್ಮಕತೆ 'ಕಾಲ ಉರುಳಿ ಉಳಿದುದು ನೆನಪಷ್ಟೇ!' ಕುರಿತು ಮಾತಾಡಿದ್ದರು. ಎಂದಿನಂತೆಯೇ ಅಮೆರಿಕೆಗೆ ಮರಳುವ ಮುನ್ನ ನಮ್ಮ ಮನೆಗೆ ಭೇಟಿ ಇತ್ತರು. ಅವರು ಅಂದು ಎದುರಿಸುತ್ತಿದ್ದ ಆರೋಗ್ಯ ಸಮಸ್ಯೆಗಳು ಹಲವು. ಕಣ್ಣು ಸರಿಯಾಗಿ ಕಾಣುತ್ತಿರಲಿಲ್ಲ, ಹೆಜ್ಜೆ ದೃಢವಾಗಿರಲಿಲ್ಲ, ವಯಸ್ಸು ತೊಂಭತ್ತಕ್ಕೆ ಸಮೀಪಿಸುತಿತ್ತು. ಅಂಥಲ್ಲಿಯೂ, ಅವರ ಪ್ರೀತಿ ದೊಡ್ಡದು, ನಮ್ಮನೆಗೆ ಬಂದೇ ಬಂದರಲ್ಲ. ಬಂದು, ಪ್ರೀತಿ ವಿಶ್ವಾಸಕ್ಕೆ ಆಪ್ತತೆಗೆ ನೀಡುವ ಸ್ಥಾನ ಹೇಗಿರಬೇಕೆಂದು ತೋರಿಸಿಕೊಟ್ಟು ಹೋದರೆ? ಆತಿಥೇಯರನ್ನು ನಗಿಸುತ್ತ ನಗೆನಗೆಯಾಗಿ ಸಮಯದ ಸವಾರಿ ಮಾಡುವ ಸಾಮರ್ಥ್ಯದವರು ನಾಗೈತಾಳರು, ಅಂದು ಅವರು ನೀಡಿದ ಭೇಟಿ, ಪ್ರಫುಲ್ಲತೆ ಮಾಸದ, ಕೋಟದವರಿಗಿಂತ ಕೋಟದವರಾಗಿ ಲವಲವಿಕೆಯಿಂದ ಆಡುತ್ತಿದ್ದ, ಅವರ ಕೋಟಗನ್ನಡದ ಮಾತು ನೆನೆದಾಗೆಲ್ಲ ಮುದವೆನಿಸುತ್ತದೆ. ಇನ್ನು ಅಂಥವರು ಎಲ್ಲಿರುವರು? ಮನದುಂಬಿ ಬಾಯ್ತುಂಬ ಮಾತಾಡುವವರು, ವ್ಯರ್ಥ ಬೀಗದೆ, ತೂಕ ತೂಗದೆ, ಮಾತಿನ ಮಂಟಪ ಕಟ್ಟುವವರು, ಕೃತಕತೆ ಇಲ್ಲದೆ, ದಿನ ಹೋದಂತೆ ಹೆಚ್ಚೆಚ್ಚು ಮಾನವನಾಗುತ್ತ ಹೋಗುವವರು.

'ಕಾಲ ಉರುಳಿ...' ಕೃತಿಗೆ ಬರೆದ ಮುನ್ನುಡಿಯ ಪರಿಷ್ಕೃತ ರೂಪ ಕೃಪೆ: ನೆನೆಪು ಏಕತಾರಿ (೨೦೨೩)



ದೂರದಷ್ಟೇ ಮುಖ್ಯ ಆ ದೂರವನ್ನು ಕ್ರಮಿಸಿದ ಛಲ ಮತ್ತು ತಾಳಿಕೊಳ್ಳುವ ಗುಣ

– ವಿವೇಕ್ ಶಾನುಭಾಗ್

ಪ್ರಸ್ತುತ ಸಂಗ್ರಹಕ್ಕೆ ಪ್ರವೇಶಿಕೆಯಾಗಿ ಬರೆದಿರುವ ತಮ್ಮ ಮೊದಲ ಮಾತುಗಳಲ್ಲಿ ನಾಗ ಐತಾಳ ಅವರ ಬರವಣಿಗೆಯ ಹಿಂದಿನ ಸ್ಫೂರ್ತಿ ಬಗ್ಗೆ, ಅದರ ಒಟ್ಟು ಉದ್ದೇಶದ ಬಗ್ಗೆ ಕೆಲವು ಸೂಕ್ಷ್ಮವಾದ ಮಾತುಗಳನ್ನು ಆಡಿದ್ದಾರೆ. ಓದುಗರಾಗಿ ಈ ಕಥೆಗಳ ಪ್ರಪಂಚದ ಜೊತೆ ಸಂಬಂಧ ಹೂಡುವ ಮುನ್ನ ನಾವು ಈ ಮಾತುಗಳನ್ನು ಗಮನಿಸುವುದು ಮುಖ್ಯ. ಈ ಪ್ರವೇಶಿಕೆಯಲ್ಲಿ ಐತಾಳರು ಅವರ ತಮ್ಮ ವಾಸುದೇವನ (ವಾಸ್ತೇವನ) ಅದ್ಭುತ ಕಥೆಗಾರಿಕೆಯ ಬಗ್ಗೆ ಅನೇಕ ವಿವರಗಳನ್ನು ಕೊಡುತ್ತಾರೆ. ತಾನು ಕಂಡೇ ಇಲ್ಲದ, ಕೆಲವೊಮ್ಮೆ ತನ್ನ ಹುಟ್ಟಿಗೂ ಮುಂಚಿನ ತಮ್ಮ ಕುಟುಂಬದ ಸಂಗತಿಗಳನ್ನು ಕಣ್ಣಿಗೆ ಕಟ್ಟುವಂತೆ, ತಾನೇ ಪ್ರತ್ಯಕ್ಷ ಅಲ್ಲಿದ್ದವನಂತೆ ಹೇಳುವ ವಾಸ್ತೇವನ ಕಥೆಗಾರಿಕೆಯೇ ಈ ಸಂಕಲನದ ಮುಖ್ಯ ಪ್ರೇರಣೆಗಳಲ್ಲಿ ಒಂದು ಎಂಬುದನ್ನು ಅವರು ಹೇಳುತ್ತಾರೆ. ಇಂಥ ವಾಸ್ತೇವ ಒಂದೇ ಒಂದು ಕಥೆಯನ್ನು ಬರೆದವರಲ್ಲ. ಆದರೆ ಒಂದು ಕುಟುಂಬದ ನೆನಪುಗಳನ್ನು ಜೀವಂತ ಇಟ್ಟು ಆ ಕುಟುಂಬದ ನಾನಾ ಎಳೆಗಳ, ನಾನಾ ತಲೆಮಾರುಗಳ ನಡುವಿನ ಸಂಬಂಧ ದೃಢವಾಗುವಂತೆ ಮಾಡಿದವರು. ಇಂಥವರದು ಸಾಹಿತ್ಯದ ಮಹತ್ವಾಕಾಂಕ್ಷೆಯುಳ್ಳ ಕತೆಗಾರಿಕೆಯಲ್ಲ. ಬದಲಿಗೆ ತಾವೇ ಅದರಿಂದ ಮುದವನ್ನೂ ಸುಖವನ್ನೂ ಪಡೆದು, ಕೇಳುಗರ ಸಂತೋಷದಿಂದಲೇ ಸಂತುಷ್ಟರಾಗಿ ತಮಗೇ ಅರಿವಿಲ್ಲದ

ಹಾಗೆ ಸಂಬಂಧಗಳ ಬೇರುಗಳನ್ನು ಭದ್ರಗೊಳಿಸುವ ಮಹಾನುಭಾವರು ಇವರು. ನಮ್ಮ ಸಮಾಜದಲ್ಲಿ ಅದರಲ್ಲು ಶಹರ ಬಿಟ್ಟು ಒಳನಾಡಿಗೆ ಹೋದರೆ ಇಂಥ ಅನೇಕ ಜನ ಕಾಣಸಿಗುತ್ತಾರೆ. ಇವರಿದ್ದಲ್ಲಿ ಒಂದು ಬಗೆಯ ವಿಶೇಷ ಉತ್ಸಾಹ, ಚೈತನ್ಯ ಇರುತ್ತದೆ. ಸಂಸಾರದ ಕೋಟಲೆಗಳ ನಡುವೆಯೂ, ಈ ಕತೆಗಳ ಲೋಕವೊಂದರ ಮೂಲಕ ತಾವೆಲ್ಲ ಹೇಗೋ ಸಂಬಂಧಪಟ್ಟಿದ್ದೇವೆ ಎಂಬ ಭಾವನೆಯನ್ನು ಹುಟ್ಟಿಸಿ ಕುಂಟುಂಬದವರನ್ನು ಅವರು ಒಂದುಗೂಡಿಸುತ್ತಾರೆ.

ಹೀಗೆ ತಮ್ಮ ವಾಸ್ತೇವನ ಕಥೆಗಾರಿಕೆಯ ಬಗ್ಗೆ ಮಾತನಾಡಿ, ಅವರು ಹೇಳಿದ ಕೆಲವು ಕತೆಗಳನ್ನೂ ಉಲ್ಲೇಖಿಸುವ ಐತಾಳರ ಪ್ರವೇಶಿಕೆಯು ಅನಾರೋಗ್ಯದಿಂದ ಮೃತ್ಯುವಿಗೆ ಈಡಾದ ತಮ್ಮನ ನೆನಪಿನೊಂದಿಗೆ, ಈ ಸಂಕಲನವನ್ನು ಅವರಿಗೆ ಅರ್ಪಿಸುವುದರೊಂದಿಗೆ ಮುಗಿಯುತ್ತದೆ; ಮತ್ತು ಈ ಕತೆಗಳನ್ನು ಹೇಳುವ ಸತ್ಕಾರ್ಯವನ್ನು ತಾವು ತಮ್ಮದೇ ರೀತಿಯಲ್ಲಿ ಅನಿವಾಸಿ ಕನ್ನಡಿಗರ ಬಹುದೊಡ್ಡ ಕುಟುಂಬದ ಸಂದರ್ಭದಲ್ಲಿ ಮುಂದುವರಿಸುತ್ತಿರುವ ಸಣ್ಣ ಸೂಚನೆಯನ್ನು ಕೊಡುತ್ತದೆ. ಕತೆಗಾರರಾಗಿ ಐತಾಳರ ಮನಃಸ್ಥಿತಿಯನ್ನು, ಅವರ ನಿರೂಪಣೆಯ ಧೋರಣೆಯನ್ನು ಮತ್ತು ಅವರ ಬರವಣಿಗೆಯಿಂದ ಅಪೇಕ್ಷಿಪಡುವುದೇನು ಎಂಬುದನ್ನು ಅರಿಯುವಲ್ಲಿ ಈ ಪ್ರವೇಶಿಕೆಯ ಪಾತ್ರ ಹಿರಿದು. ಈ ಕತೆಗಳು ಸಾಹಿತ್ಯಿಕವಾಗಿ ಮಹತ್ವದವೋ ಅಲ್ಲವೋ ಎಂಬುದು ಐತಾಳರಿಗೆ ಅಷ್ಟೊಂದು ಮುಖ್ಯವಲ್ಲ. ಇದೋ ನೋಡಿ, ಈ ಬದುಕಿನ ಮಗ್ಗಲುಗಳನ್ನು ಇಂಥ ಇನ್ನೊಂದು ಕೋನದಿಂದಲೂ ನೋಡಿ ಎಂದು ಓದುಗರ ಗಮನವನ್ನು ಅತ್ತ ಹರಿಸುವುದೇ ಅವರ ಪ್ರಧಾನ ಉದ್ದೇಶ. ಹಾಗಾಗಿ ವಸ್ತು, ತಂತ್ರ, ಸಂರಚನೆ, ಭಾಷೆ ಎಂಬ ಸಾಹಿತ್ಯ ಸಲಕರಣೆಗಳ ಜೊತೆ ಅವರು ಗುದ್ದಾಡುವುದಿಲ್ಲ. ಕಥನ ಪ್ರಕ್ರಿಯೆ, ಅದರಿಂದ ಹುಟ್ಟುವ ಬಾಂಧವ್ಯ ಮತ್ತು ಅರಿವು ಇವರಿಗೆ ಮುಖ್ಯವೇ ಹೊರತು ಅದರ ಸಾಹಿತ್ಯಿಕ ಸಾಧನೆಯಲ್ಲ. ಹಾಗಾಗಿ ಯಾವ ಹಿಂಜರಿಕೆಯೂ ಇಲ್ಲದೇ ಸಂಸ್ಕಾರದ ಪ್ರಾಣೇಶಾಚಾರ್ಯ, ಲಕ್ಷ್ಮೀನಾರಾಯಣ ಭಟ್ಟರ ಪದ್ಯ, ಕಾರಂತರ ಅಭಿಪ್ರಾಯಗಳು, ಸಂಗೀತಾ ಕಟ್ಟಿಯವರ ಗಾಯನ ಹೀಗೆ ಹಲವು ವಾಸ್ತವ ವಿವರಗಳನ್ನು ಕತೆಗಳಲ್ಲಿ ನಿರಾಯಾಸವಾಗಿ ಬೆರೆಸುತ್ತಾರೆ. ಅದು ಮಾತಿಗೆ ಕೂತವನು ಎದುರಿಗಿದ್ದವನನ್ನು ಒಲಿಸಿಕೊಳ್ಳಲು ಹೂಡುವ ಉಪಾಯವು ಹೌದು; ಕೇಳುಗರ ಸಂಸ್ಕೃತಿಪ್ರಿಯತೆಗೆ, ಅಂತರ್‌ಪಕ್ಕೀಯ ಬುದ್ಧಿವಂತಿಕೆಗೆ, ಕನ್ನಡಾಭಿಮಾನಕ್ಕೆ ಇತ್ತ ಮರ್ಯಾದೆಯೂ ಹೌದು. ಅವರ ಭಾಷೆಯೂ ಸರಳವಾಗಿದ್ದು ನಿತ್ಯ ನುಡಿಗಟ್ಟಿನದೇ ಆಗಿದೆ. ಹೊಸ ಬರಹಗಾರರು ಕ್ಲೀಷೆಯೆಂದು ಮುಟ್ಟಲು ಅಳುಕುವ ನುಡಿಗಟ್ಟುಗಳನ್ನು ಸಹ ಅವರು ನಿರಾಯಾಸವಾಗಿ ಬಳಸುತ್ತಾರೆ.

ಹಾಗಂತ ಐತಾಳರದು ಭೋಳೆ ಮನಸ್ಸಿನ ಕತೆಗಾರಿಕೆಯಲ್ಲ, ಅವರು ತಾವು ಬೆಳೆದ ಪರಿಸರ, ಬದುಕಿ ಬಾಳಿದ ಅಮೆರಿಕಾ ಹಾಗು ಈಗ ನಿವೃತ್ತಿ ಜೀವನದ

ಸಾವಧಾನದ ಅಲೆದಾಟಗಳನ್ನು ಬಹಳ ಪ್ರಬುದ್ಧತೆಯಿಂದ ಹಾಗೂ ಆತ್ಮವಿಶ್ವಾಸದಿಂದ ನೋಡಬಲ್ಲವರು. ಇವರಿಗೆ ಎಲ್ಲರೂ ಒಪ್ಪುವ, ಪೊಲಿಟಿಕಲಿ ಕರೆಕ್ಟಾದ ಮಾತುಗಳನ್ನು ಹೇಳಬೇಕೆಂಬ ಹಟವಿಲ್ಲ ಹಾಗೂ ಅವುಗಳಿಗೆ ಅಳುಕಿ ಅನಿಸಿದ್ದನ್ನು ಹೇಳದೇ ಉಳಿಯುವ ಲೇಖಕರು ಇವರಲ್ಲ. ತಮ್ಮ ಔದಾರ್ಯ ಮತ್ತು ಬದುಕಿನ ಬಗೆಗಿನ ನಿಷ್ಕಲ್ಮಷ ನಿಲುವುಗಳಿಂದ ಒಂದು ಬಗೆಯ ಸಮತೂಕ ದೃಷ್ಟಿ ಇವರಿಗೆ ಲಭಿಸಿದೆ. ಈ ಕಾರಣದಿಂದ ಯಾವ ಅಡೆತಡೆಗಳಿಲ್ಲದೇ ಎಂಥ ವಿಷಯವನ್ನಾಗಲೀ, ಅನಿವಾಸಿ ಜೀವನದ ಬಗೆಗಿನ ಯಾವುದೇ ಅಭಿಪ್ರಾಯವನ್ನಾಗಲೀ ಇವರು ಅಳುಕದೇ ಮುಂದಿಡಬಲ್ಲರು. ಅನಿವಾಸಿಗಳ ಸುಖ ಸಂತೋಷಗಳು ಪೊಲಿಟಿಕಲಿ ಕರೆಕ್ಟಾದ ಅಭಿವ್ಯಕ್ತಿಯ ಅಡ್ಡಕತ್ತರಿಯಲ್ಲಿ ಸಿಲುಕಿ ನಲುಗುವುದನ್ನು ನಾನು ಕಂಡಿದ್ದೇನೆ. ಭಾರತೀಯವೆಂದು ಕಲ್ಪಿಸಿಕೊಂಡ ಮೌಲ್ಯಗಳ ಭಾರಕ್ಕೋ, ಸಮಾಜದ ಅಪೇಕ್ಷೆಗಳ ಒತ್ತಡಕ್ಕೋ, ಹೊರನಾಡಿನ ವಾತಾವರಣದಿಂದ ರೂಢಿಸಿಕೊಂಡ ಜೀವನದ ನಡಾವಳಿಗಳಿಗೋ ಮಣಿದು ಅನಿವಾಸಿಗಳ ನಿಜಭಾವನೆಗಳೇ ಎಷ್ಟೋ ಬಾರಿ ಮರೆಯಾಗಿಬಿಡುತ್ತವೆ. ತಾಯಿನೆಲದ ನೆನಪು ಹುಟ್ಟಿಸುವ ಭಾವೋದ್ರೇಕವು ದೃಷ್ಟಿಯನ್ನು ಇನ್ನಷ್ಟು ಮಸುಕಾಗಿಸುತ್ತದೆ. ಇದಕ್ಕೆ ಸುಲಭ ಉಪಾಯಗಳಿಲ್ಲ. ಹಾಗಾಗಿ ಕೆಲವೊಮ್ಮೆ ಇದೆಲ್ಲದರಿಂದ ಬಿಡುಗಡೆ ಪಡೆದ ಮಾದರಿಗಳು ಎದುರಾದಾಗ ಅವುಗಳಿಂದ ಕಲಿಯುವ ಅವಕಾಶಗಳನ್ನು ಕಡೆಗಣಿಸಬಾರದು. ವಲಸೆಯ ಅನುಭವವು ಇವತ್ತಿನ ಸಮಾಜದ ಅತ್ಯಂತ ಮುಖ್ಯ ಹಾಗೂ ಸಂಕೀರ್ಣ ಸವಾಲಾಗಿರುವುದರಿಂದ ಅವುಗಳನ್ನು ನಿರ್ವಹಿಸುವ ಪ್ರತಿ ಪ್ರಯತ್ನಕ್ಕೂ - ಅದು ಕಲೆ, ಸಾಹಿತ್ಯ, ಉದ್ಯೋಗ, ವ್ಯಾಪಾರ ಹೀಗೆ ಯಾವುದೇ ಕ್ಷೇತ್ರವಾಗಿರಲಿ - ಅದರದ್ದೇ ಆದ ಮಹತ್ವವಿದೆ. ಐತಾಳರದು ನಿಸ್ಸಂದೇಹವಾಗಿ ಇಂಥ ಒಂದು ಗಂಭೀರ ಪ್ರಯತ್ನ.

ಇಷ್ಟೆಲ್ಲ ಹೇಳಿಯೂ 'ರಮ್ಮಿ ಅಂಡ್ ಶೋ'ದಂತಹ ಕತೆಗಳನ್ನು ಓದಿದಾಗ ಐತಾಳರು ತಮ್ಮ ಇನ್ನುಳಿದ ಕತೆಗಳ ಕಲೆಗಾರಿಕೆಗೆ ಇನ್ನಷ್ಟು ಒತ್ತು ಕೊಡಬೇಕಿತ್ತು, ಅದನ್ನೊಂದು ಕಲಾಕಾರ್ಯ ಎಂತಲೂ ಭಾವಿಸಿ ಬರೆಯಬೇಕಿತ್ತು ಎಂದು ಕತೆಗಾರನಾಗಿ ನನಗೆ ಅನ್ನಿಸಿದೆ. ಅಮೆರಿಕಾದಲ್ಲಿ ಜರುಗುವ 'ರಮ್ಮಿ ಅಂಡ್ ಶೋ' ಕತೆಯ ವಸ್ತುವೇ ವಿಶೇಷವಾಗಿದ್ದು, ಅದಕ್ಕೆ ಅನೇಕ ಮುಖಗಳಿವೆ. ನಾಲ್ಕು ಬಾರಿ ಅವಕಾಶ ಬಂದಾಗಲೂ ವಿಧಿಲೀಲೆಯಂತೆ, ವಿಚಿತ್ರ ಸಂಯೋಗದಂತೆ ತಪ್ಪಿಹೋಗುವ ಅಪರಿಚಿತನೊಬ್ಬನ ಭೇಟಿಯು ಐದನೆಯ ಬಾರಿ ಘಟಿಸಿದಾಗ ಆತನು ಸಾವಿಗೀಡಾಗಿರುತ್ತಾನೆ. ನಾನಾ ಸನ್ನಿವೇಶಗಳ ಮೂಲಕ ಅನಿವಾಸಿಗಳ ತುಮುಲಗಳನ್ನು, ವಯಸ್ಸು ಕಳೆದಂತೆ ಬದಲಾಗುವ ಭಾವನೆಗಳನ್ನು, ಜೊತೆಯವರನ್ನು ಒಬ್ಬೊಬ್ಬರಾಗಿ ಸಾವಿನಲ್ಲಿ ಬೀಳ್ಕೊಡುವ ಸಂದರ್ಭಗಳನ್ನು ಈ ಕತೆಯಲ್ಲಿ ಬಹು ವಿವರಗಳಲ್ಲಿ ರೂಪಿಸಲಾಗಿದೆ. ಕತೆಯು ಸಾವಿನ ಘಟನೆಯ ನಂತರವೂ ಬೆಳೆಯುತ್ತದೆ ಮತ್ತು ನಿರೂಪಕನು ಆ ಅಪರಿಚಿತ ಸಾವಿನ ಕಾರಣಗಳನ್ನು ಅವರಿವರಿಂದ ಕೇಳಿ ತಿಳಿದ ಸಂಗತಿಗಳ ಮೂಲಕ ಕಟ್ಟಿಕೊಡುತ್ತಾನೆ.

ರಮ್ಮಿ ಆಟದ ಸಣ್ಣಪುಟ್ಟ ಕ್ಷುಲ್ಲಕ ವಿವರಗಳು, ಸ್ನೇಹಸಂಗಮವನ್ನು ಬಯಸಿ ಅನಿವಾಸಿಗಳು ನಡೆಸುವ ನಾನಾ ಕಾರ್ಯಕ್ರಮಗಳು, ಸಂಪರ್ಕಸಾಧನಗಳು ಯಾವುದೇ ಕೊರತೆಯಿಲ್ಲದ ಸನ್ನಿವೇಶ, ಸತತ ಚಲನಶೀಲತೆಯ ಭ್ರಮೆ ಹುಟ್ಟಿಸುವ ನಿತ್ಯಬದುಕು– ಇದೆಲ್ಲವನ್ನು ಈ ಅಪರಿಚಿತ ವೆಂಕೋಬರಾವ್ನ ಒಂಟಿತನದ ಎದುರು ಇಟ್ಟು ಅದರ ತೀವ್ರತೆಯನ್ನು ಕತೆಗಾರರು ಮನಮುಟ್ಟುವಂತೆ ಇಷ್ಟೆಲ್ಲ ಸತತ ಚಟುವಟಿಕೆಯ ನಡುವೆಯೂ ಆತನ ಕತೆಯನ್ನು ಕೇಳುವ ಕಿವಿಗಳೇ ಇರಲಿಲ್ಲ; ಆತನ ಆತ್ಮಹತ್ಯೆಯನ್ನು ತಪ್ಪಿಸಲು ಸಾಧ್ಯವಾಗಲಿಲ್ಲ.

ಈ ಕತೆಯ ಸಾಧನೆಯನ್ನು ಗಮನದಲ್ಲಿಟ್ಟುಕೊಂಡು ಅವರ ಉಳಿದ ಕತೆಗಳನ್ನು ನೋಡಿದಾಗ ಕಲೆಗಾರಿಕೆಯ ಕುರಿತು ನನ್ನ ಅಪೇಕ್ಷೆಯ ಅರ್ಥವಾದೀತು. ಈ ನನ್ನ ಅಪೇಕ್ಷೆಯ ಮೂಲದಲ್ಲೇ ಐತಾಳರು ಯಾವ ರೀತಿಯಿಂದ ಭಿನ್ನರಾಗಿದ್ದಾರೆ ಎಂಬುದೂ ಅಡಕವಾಗಿದೆ. ಕಲಾತ್ಮಕತೆಗೆ ಬೇಕಾದ ಸೃಜನಶೀಲ ಏಕಾಗ್ರತೆಯ, ಕಲಾಕೃತಿಯನ್ನಲ್ಲದೇ ಬೇರೆ ಯಾವುದನ್ನೂ ಕಾಣದ ಕಠಿಣ ಹೃದಯವನ್ನು ಸಹ ಬೇಡುತ್ತದೆ. ಸಾಹಿತ್ಯದಲ್ಲಿ ಸೃಷ್ಟಿಯಾಗುವ ಲೋಕವು ಅಸಹಜವಾದದ್ದು ಎಂಬುದರ ಬಗ್ಗೆ ಮೂಲಭೂತವಾದ ನಂಬಿಕೆ ಇಲ್ಲದೇ ಇದು ಸಾಧ್ಯವಿಲ್ಲ. ಇಂಥ ಬರಹಗಾರರ ಕೇವಲ ಅನುಭವಗಳ ಸಂವಹನದಿಂದ ತೃಪ್ತವಾಗುವುದಿಲ್ಲ. ಅದರ ಮೂಲಕ ಇನ್ನೇನೋ ಹುಟ್ಟಿಸಬೇಕೆಂಬ ಮಹತ್ವಾಕಾಂಕ್ಷೆ'ಯನ್ನು ಅದು ಹೊಂದಿರುತ್ತದೆ. ಆದರೆ ಐತಾಳರ ಬರವಣಿಗೆಯ ಉದ್ದೇಶಗಳೇ ಬೇರೆಯಾಗಿರುವುದರಿಂದ, ಈ ಕಥೆಗಳ ಕುರಿತ ನನ್ನ ಇಂಥ ಅಪೇಕ್ಷೆ ಸಾಧುವೇ ಎಂಬ ಪ್ರಶ್ನೆಯು ನನಗೆ ಎದುರಾಗಿದೆ. ಆದ್ದರಿಂದಲೇ ಅವರು ವಾಸ್ತವದಿಂದ ಪಡೆದ ಸ್ಫೂರ್ತಿಯ ಹಿನ್ನೆಲೆಯನ್ನು ಮರೆಯದೇ ಅವರ ಕಥೆಗಳನ್ನು ನೋಡಬೇಕು. ಅವರ ಕಥನಕ್ರಮ ಮತ್ತು ನಿರೂಪಣಾ ವಿಧಾನವು ಎಲ್ಲವನ್ನು ಒಳಗೊಳ್ಳುವಂಥದ್ದು; ನಿರಾಕರಣೆ ಅದರ ಗುಣವಲ್ಲ. ಇದರ ಪರಿಣಾಮವೆಂದರೆ ಕಥೆಗಿಂತ ತಾನು ಹೇಳಲು ಎತ್ತಿಕೊಂಡ ಅನುಭವದ ಕುರಿತು ತನಗೆ ತಿಳಿದ ಎಲ್ಲವನ್ನು ಹೇಳುವುದೇ ಕಥೆಗಾರನಿಗೆ ಮುಖ್ಯವಾಗಿ ತೋರುತ್ತದೆ, ಐತಾಳರು ಕಲೆಗಾರಿಕೆಯ ಕಾರಣಕ್ಕಾಗಿ ತಮ್ಮ ಪಾತ್ರಗಳ ಬಾಯಿ ಮುಚ್ಚಿಸುವವರಲ್ಲ ಹಾಗಾಗಿ ಅದು ಕೆಲವೊಮ್ಮೆ 'ಔಟ್ ಆಫ್ ಫೋಕಸ್' ಆದ ಛಾಯಾಚಿತ್ರದಂತೆ ತೋರಬಹುದು. ಸರಿ ತಪ್ಪುಗಳ ಪ್ರಶ್ನೆಗಿಂತ ಇದನ್ನು ಇನ್ನೊಂದು ರೀತಿಯೆಂದು, ಇನ್ನೊಂದು ನಂಬಿಕೆಯೆಂದು ಇನ್ನೊಂದು ಉದ್ದೇಶವೆಂದು ನೋಡಬೇಕು ಎಂದು ನನಗನಿಸಿದೆ.

ಈ ಸಂಕಲನದ ಕಥೆಗಳ ಬಹುತೇಕ ಪಾತ್ರಗಳ ತುಮುಲಗಳು ಎರಡು ಸಂಸ್ಕೃತಿಗಳ ಅಥವಾ ಎರಡು ತಲೆಮಾರುಗಳ ಮುಖಾಮುಖಿಯಿಂದ ಉಂಟಾಗುವಂಥವು. ಹಾಗೂ ಅವುಗಳನ್ನು ಸಂಸ್ಕೃತಿಗಿಂತ ಹೆಚ್ಚಾಗಿ 'ರೂಢಿ' ಎಂದು ಭಾವಿಸಿ ಪರಿಹರಿಸಿಕೊಳ್ಳಬೇಕೆಂಬ ಸೂಚನೆಯೂ ಹಲವು ಕಥೆಗಳಲ್ಲಿ ಸಿಗುತ್ತದೆ. ಸಂಸ್ಕೃತಿಯ ಮುಸುಕಿನಲ್ಲಿರುವ, ಎರಡು


ಸಮಾಜಗಳ ರೂಢಿ ಹಾಗೂ ನಂಬಿಕೆಗಳ ಹಿಂದಿನ ಮಾನವೀಯವಾದ ಮುಖಗಳನ್ನು ಅನಾವರಣಗೊಳಿಸುವುದು ಐತಾಳರ ಎಲ್ಲಾ ಕಥೆಗಳಲ್ಲಿ ಕಾಣುವ ಸ್ಥಾಯೀ ಕಾಳಜಿಯಾಗಿದೆ. ಆಸಕ್ತಿಕರವಾದ ವಿಷಯವೆಂದರೆ ಇಲ್ಲಿ ಎಲ್ಲಿಯೂ ನಿತ್ಯ ಲೌಕಿಕದ ಸುಖಭೋಗವು ಒಂದು ಪ್ರಶ್ನೆಯೇ ಆಗಿಲ್ಲ. ಐತಾಳರ ತಲೆಮಾರಿನವರ ವಲಸೆಗೂ ಈಗಿನ ತಲೆಮಾರಿಗೂ ಇರುವ ಈ ಗ್ರಹಿಕೆಯ ವ್ಯತ್ಯಾಸವು ಮುಖ್ಯವೆಂದು ನನಗೆ ತೋರುತ್ತದೆ. ನಮ್ಮ ನೆಲದಲ್ಲಿಯೇ ನಡೆಯುವ 'ಮಿಣ್ಣು, ಹಣ್ಣು, ನಾಗೂ' ಹಾಗೂ 'ಇಂಗ್ಲೆಂಡ್ ರಿಟರ್ನ್ಡ್' ಎಂಬ ಕಥೆಗಳಲ್ಲಿ ಎರಡು ತಲೆಮಾರುಗಳು ಎದುರಾಗುತ್ತವೆ ಎನ್ನುವುದು ಬಿಟ್ಟರೆ ಆಳದಲ್ಲಿ ಅವೇ ಕಾಳಜಿಗಳು ಕಾಣುತ್ತವೆ.

'ಮೂಕವೇದನೆ', 'ಹಾಗಲಕಾಯಿ ಪಲ್ಯ' ಹಾಗೂ 'ಸೇತುಬಂಧನ' ಈ ಮೂರು ಕಥೆಗಳು ತಾಯಿ ನೆಲದ ಜೊತೆ ಸಂಪರ್ಕ ತಪ್ಪಿದ ಮನಸ್ಸಿನ ತಳಮಳಗಳನ್ನು ಹೇಳುತ್ತವೆ ಇಂತಹ ಸಂದರ್ಭ ಒದಗಿಸಿದ ಅಂತರದಿಂದ ಹುಟ್ಟಿದ ವಸ್ತುನಿಷ್ಠತೆ ನೆಲವನ್ನು ಸಂಬಂಧಗಳನ್ನು ತೊರೆದು ಹೋಗುವಾಗಿನ ನೋವುಗಳು ಈ ಕಥೆಗಳಲ್ಲಿ ಮುಖ್ಯವಾಗಿವೆ. 'ಹಾಗಲಕಾಯಿ ಪಲ್ಯದ' ಮೃತ್ಯು ಸಾಂಕೇತಿಕತೆಯನ್ನು ಪಡೆಯುತ್ತದೆ.

ಈ ಕಥೆಗಳನ್ನು ಓದಿದಾಗ ಹುಟ್ಟಿದ ಭಾವವಿಚಾರಗಳನ್ನು ಒಟ್ಟಾರೆಯಾಗಿ ಹಂಚಿಕೊಳ್ಳುವುದೇ ಈ ಪ್ರಸ್ತಾವನೆಯ ಉದ್ದೇಶವೇ ಹೊರತು ಇಲ್ಲಿರುವ ಪ್ರತಿಯೊಂದು ಕಥೆಗಳ ವಿಶ್ಲೇಷಣೆಗೆ ತೊಡಗುವುದಲ್ಲ. ಮಾತು ಮುಗಿಸುವ ಮುನ್ನ ನಾನು ಓದಿ ಸಂತೋಷಪಟ್ಟ ಇನ್ನೆರಡು ಕಥೆಗಳನ್ನು ಹೆಸರಿಸಬೇಕು ಮೊದಲನೆಯದು ಓ ಹೆನ್ರಿಯ ಪ್ರಸಿದ್ಧ ಕಥೆಯೊಂದರ ಸ್ಫೂರ್ತಿಯಿಂದ ಬರೆದ ಕವಲು ದಾರಿ ಎರಡನೆಯದು 'ಮೆಲಿಸ್ಸಳ' ಮನೋವೇದನೆ ಎರಡು ಕಥೆಗಳಲ್ಲಿ ಓದುಗರ ಊಹೆಯಂತೆಯೇ ಕಥೆಯು ಸಾಗುವುದಾದರೂ ವಿವರಗಳನ್ನು ಚಿತ್ರಿಸಿ ಕೊಡುವ ಕ್ರಮದಿಂದಾಗಿ ಅವು ಚುರುಕಾಗಿ ಓದಿಸಿಕೊಳ್ಳುತ್ತವೆ. ಕಾದಂಬರಿಯ ಹರಹನ್ನು ಪಡೆಯುವ ಸಾಧ್ಯತೆಯುಳ್ಳದ್ದು.

'ದೂರ ತೀರದಿಂದ ಹರಿದು ಬಂದ ಕಥೆಗಳು' ಎಂಬ ಶೀರ್ಷಿಕೆಯೂ ಸಹ ವಿಶೇಷವಾಗಿದೆ. ಇಲ್ಲಿ 'ತೀರ' ಎನ್ನುವುದು ಅಲ್ಲಿಯದು ಆಗಬಹುದು, ಇಲ್ಲಿಯದು ಆಗಬಹುದು, ಕೆಲವು ಕಥೆಗಳು ಇಲ್ಲಿಂದ ಅಲ್ಲಿಗೆ ಹರಿದಿವೆ, ಕೆಲವು ಅಲ್ಲಿಂದ ಇಲ್ಲಿಗೆ. ಆದರೆ ಐತಾಳರು ಅನಿವಾಸಿಯಾಗಿ ಬದುಕದೇ ಇದ್ದರೆ ಒಂದು ಕಥೆ ಹುಟ್ಟುತ್ತಿರಲಿಲ್ಲ. ಇಲ್ಲಿ 'ದೂರ'ದಷ್ಟೇ ಮುಖ್ಯವಾದದ್ದು ಆ ದೂರವನ್ನು ಕ್ರಮಿಸಿದ ಛಲ ಮತ್ತು ತಾಳಿಕೊಳ್ಳುವ ಗುಣ ಅನನ್ಯ. ಕನ್ನಡ ಪ್ರೀತಿಯ ಐತಾಳರು ಈ ಕಾರಣಕ್ಕಾಗಿ ಅಭಿನಂದನೆಗೆ ಅರ್ಹರು.

'ದೂರತೀರದಿಂದ ಬಂದ ಕಥೆಗಳು' ಕಥಾ ಸಂಕಲನಕ್ಕೆ ಬರೆದ ಪ್ರಸ್ತಾವನೆ



ಒಂದು ತಲೆಮಾರಿನ ಚರಿತ್ರೆ – ತಲೆಮಾರ ಸೆಲೆ

– ಗುರು ಪ್ರಸಾದ ಕಾಗಿನೆಲೆ

ಹಿರಿಯರಾದ ನಾಗ ಐತಾಳರ ಮೊದಲ ಕಾದಂಬರಿ 'ತಲೆಮಾರ ಸೆಲೆ' ಯನ್ನು ಓದಿಯಾದ ನಂತರ ನನ್ನ ಮೊದಲ ಓದಿಗೆ ದಕ್ಕಿದ್ದನ್ನು ಐತಾಳರ ಬಳಿ ಹಂಚಿಕೊಂಡಿದ್ದೆ. ಇದನ್ನು ನಾನು ಪ್ರತಿಸ್ಪಂದನ ಎಂಬ ಉದ್ದೇಶದಿಂದ ಬರೆದಿದ್ದರಿಂದ ಓದುಗರು ಕಾದಂಬರಿ ಓದಿದ ಮೇಲೆ ನನ್ನ ಲೇಖನವನ್ನು ಓದಿದಲ್ಲಿ ಹೆಚ್ಚು ಅರ್ಥಪೂರ್ಣವಾಗಬಹುದು. ಮೊಟ್ಟಮೊದಲಿಗೆ ನನಗನಿಸಿದ್ದು ಈ ಕಾದಂಬರಿ ಬಹಳ ಮಹತ್ವಾಕಾಂಕ್ಷೆಯನ್ನುಳ್ಳದ್ದಾಗಿದೆ. ಮೂರು ಅಥವಾ ಇನ್ನೂ ಹೆಚ್ಚಿನ ಪೀಳಿಗೆಗಳ ಸಂವೇದನೆಗಳನ್ನು ದೇಶ ಕಾಲಾಂತರದ ಪ್ರವಾಹಕ್ಕೆ ಒಡ್ಡಿ ಪರೀಕ್ಷಿಸುವುದು ಒಂದು ಸುಲಭವಾದ ಸವಾಲಲ್ಲ. ಇಂಥ ಒಂದು ಸಾಹಸಕ್ಕೆ ಪ್ರಯತ್ನಪಟ್ಟ ಐತಾಳರ ಧೈರ್ಯಕ್ಕೆ ಮೊಟ್ಟಮೊದಲು ಅಭಿನಂದನೆ ಸಲ್ಲಿಸುತ್ತೇನೆ. ದೇಶದಿಂದ ಹೊರಗಿದ್ದು ಬರೆಯುವವರ ಬರವಣಿಗೆಗೆ ಒಂದು ಸಾಮಾನ್ಯವಾದ ಗುಣವಿರುತ್ತದೆ. ಬಾಲ್ಯದ ನೆನಪುಗಳು, ಹುಟ್ಟಿ ಬೆಳೆದ ನಾಡನ್ನು ತೊರೆದು, ಬೇರೆ ಸಂಸ್ಕೃತಿಯನ್ನು ಮೈಗೂಡಿಸಿಕೊಳ್ಳಲು ಪಡುವ ಬವಣೆ, ಹೊಸ ಸಂಸ್ಕೃತಿಯಲ್ಲಿ ಬೆಳೆವ ಮಕ್ಕಳು, ಎರಡು ಸಂಸ್ಕೃತಿಗಳಲ್ಲಿನ ಭಿನ್ನತೆ, ಸಾಮ್ಯ, ಬದುಕಿನಲ್ಲಿ ಕಷ್ಟಗಳು ಬಂದಾಗ, ಒಂಟಿತನ ಕಾಡಿದಾಗ 'ಭಾರತದಲ್ಲಿದ್ದರೆ ಹೀಗಾಗುತ್ತಿರಲಿಲ್ಲ' ಎನ್ನುವ ಹಳವಂಡ, ಭಾರತದಲ್ಲಿದ್ದವರು ಭಾರತದಲ್ಲಿನ ವಸ್ತುಸ್ಥಿತಿ

ಕುರಿತು ಬರೆದಲ್ಲಿ ಅವರು ಕ್ರಿಟಿಕಲ್ ಇನ್‌ಸೈಡರ್‌ಗಳಾಗುತ್ತಾರೆ. ಅನಿವಾಸಿಗಳು ತಮ್ಮ ಭೌತಿಕ ದೂರದ, ಅನುಪಸ್ಥಿತಿಯ ದೂರದ ಕಾರಣದಿಂದ ಭಾರತದ ರಾಜಕೀಯ, ಸಾಮಾಜಿಕ ಮತ್ತು ಸಾಂಸ್ಕೃತಿಕ ಸ್ಥಿತಿಗತಿಯ ಮೇಲೆ ಟೀಕೆ ಟಿಪ್ಪಣಿ ಮಾಡುವ ಹಕ್ಕನ್ನು ನೈತಿಕವಾಗಿ ಕಳೆದುಕೊಂಡುಬಿಡುತ್ತಾರೆ. ಹೀಗಾಗಿ ಕಥಾಲೋಕದ ಕ್ಯಾನ್‌ವಾಸನ್ನು ನಮಗೇ ಗೊತ್ತಿಲ್ಲದೇ ವಿಶಾಲವಾಗಿ ಮಾಡಿಕೊಳ್ಳಬೇಕಾಗಿದೆ,

*

ಐತಾಳರ ಕಾದಂಬರಿಯೂ ಈ ಎಲ್ಲ ಗುಣಗಳಿಂದ ಹೊರತಾಗಿಲ್ಲ. ಕಾದಂಬರಿಯ ನಿರೂಪಣೆ ಸರಳವಾಗಿರುವುದರಿಂದ ಸುಲಲಿತವಾಗಿ ಓದಿಸಿಕೊಂಡು ಹೋಗುತ್ತದೆ. ಶೀರ್ಷಿಕೆಯೇ ಹೇಳುವಂತೆ ವಂಶಾವಳಿಯ ಸೆಲೆ ಕೊಕ್ಕೋಡಿನಿಂದ ಲಾಸ್ ಏಂಜಲೀಸ್ ನವರೆಗೆ ಹರಿದುಬರುತ್ತದೆ. ಸುಮತಿ ಮತ್ತು ಪ್ರಭಾಕರ ಇಬ್ಬರು ಕೊಕ್ಕೋಡಿನಿಂದ ಲಾಸ್ ಏಂಜಲೀಸ್‌ನಲ್ಲಿ ಬಂದು ನೆಲೆಸುವ ಪರಿ ಕಾದಂಬರಿಯ ಮುಖ್ಯ ಕಥಾ ಎಳೆ. ಎಲ್ಲ ಮಧ್ಯಮವರ್ಗದ ಕುಟುಂಬದಂತೆ ದೈವ, ದೈನಂದಿನ ಏರುಪೇರು, ಅಲ್ಲಲ್ಲಿ ಉಪನದಿಗಳಂತೆ ಬಂದು ಸೇರುವ ವಂಶಾವಳಿ, ಕೊಂಚ ಇರುಸುಮುರುಸು, ಕೊಂಚ ಖುಷಿ– ಹೀಗೆ ಎಲ್ಲವೂ ಸಹಜವಾಗಿ ನಡೆದುಕೊಂಡು ಹೋಗುತ್ತಿದ್ದ ಸಂಸಾರದ ಸ್ಥಿತಿ ಪ್ರಭಾಕರ, ಸುಮತಿ ಅಮೆರಿಕಾಕ್ಕೆ ಬರುವುದರ ಮೂಲಕ ಬೇರೆಯೇ ಒಂದು ಗತಿಯನ್ನು ಪಡೆಯುತ್ತದೆ. ಎರಡೂ ಸಂಸಾರದ ಎಲ್ಲಾ ಕಾರ್ಯಗಳು, ನಡಾವಳಿಗಳು ಈ ಪ್ರಭಾಕರ, ಸುಮತಿಯರ ಅಮೆರಿಕಾ ವಲಸೆಯೊಂದಿಗೆ ಪೂರಾ ಬದಲಾಗುತ್ತದೆ. ಒಂದು ಸಂಸಾರದಲ್ಲಿ ಒಂದು ಜೋಡಿ ದೇಶ ಬಿಟ್ಟು ಹೋಗುವುದು ಮತ್ತು ಆ ಪ್ರಕ್ರಿಯೆಗೆ ಹೊಂದಿಕೊಳ್ಳುವುದು ಬರೇ ಆ ಜೋಡಿಗಷ್ಟೇ ಸೀಮಿತವಾಗದೇ, ಸಂಸಾರದ ಎಲ್ಲರ ಜವಾಬ್ದಾರಿಯಾಗುತ್ತದೆ. ಮುಂದಿನ ಘಟನೆಗಳು ಸಾಮಾನ್ಯವಾಗಿ ಅಮೆರಿಕಾದಲ್ಲಿ ನೆಲಸಿರುವವರ ಮನೆಯಲ್ಲಿ ನಡೆಯುವ ಘಟನೆಗಳೇ ಆಗಿವೆ. ಆದರೆ, ಈ ಘಟನೆಗಳಲ್ಲಿ ಸುಮತಿಯ ವ್ಯಕ್ತಿತ್ವ ವಿಕಸಿತವಾಗುವುದನ್ನು ನಾವು ಕಾಣಬಹುದು. ಆಕೆ ತನ್ನದೇ ಆದ ಒಂದು ವ್ಯಕ್ತಿತ್ವವನ್ನು ಬೆಳೆಸಿಕೊಂಡು ಸ್ವತಂತ್ರವಾಗುವುದು ಕಾದಂಬರಿಯ ಒಂದು ಘಟ್ಟ, ಇದು ಸಾಧ್ಯವಾಗುವುದು ಆಕೆ ಇರುವ ಅಮೆರಿಕಾದಿಂದಲೇ. ಇಲ್ಲಿ ಈ ವಿವರಗಳು ಸ್ವಲ್ಪ ಜಾಸ್ತಿಯಾಯಿತು ಅಂತ ನನಗನಿಸಿತು. ಈ ಎಸೆಂಷಿಯಲ್ ಡೀಟೈಲ್ಸ್ ಎನ್ನುವ ವಿಮರ್ಶಕರ ಮಾತು ಇಲ್ಲಿ ಸುಮ್ಮನೆ ನೆನಪಾಯಿತು.

ಐತಾಳರು ನಮಗೆ ತೋರಿಸುವ ಅಮೆರಿಕ ನಾವೀಗ ನೋಡುತ್ತಿರುವ ಅಮೆರಿಕದ ಮೂರ್ನಾಲ್ಕು ದಶಕದ ಹಿಂದಿನ ಅಮೆರಿಕಾ. ಸೆಲ್‌ಫೋನು, ಕಂಪ್ಯೂಟರುಗಳಿಲ್ಲದ ಅಮೆರಿಕಾ, ಟೆಲಿಫೋನಿಗೆ ಗಂಟೆಗಟ್ಟಲೆ ಕಾಯಬೇಕಾದ ಅಮೆರಿಕಾ, ಲಾಸ್ ಏಂಜಲೀಸ್ ಏರಿಯಾದಲ್ಲಿ ಅರ್ಮೇನಿಯನ್ ಅಂಗಡಿಯಿಂದ ಭಾರತೀಯ ಗ್ರಾಸರಿಯನ್ನು ತರುವ ಭಾರತೀಯರಿದ್ದ ಅಮೆರಿಕಾ. ಹಾಗಾಗಿ, ಇಲ್ಲಿ ನೆಲಸಿರುವ ಇತ್ತೀಚಿನ ಎರಡು ತಲೆಮಾರಿನ

ಕನ್ನಡಿಗರಿಗರಲ್ಲಿ ಕೆಲವರಿಗೆ ಇದೊಂದು ಅವರ ಅಜ್ಜನ ಕಥೆಯೆನಿಸಿದರೆ ಅವರ ಹಿಂದಿನವರಿಗೆ ಅವರ ಕಥೆಯೇ ಎನಿಸುತ್ತದೆ. ಆ ಮೂಲಕ ಒಂದು ತಲೆಮಾರಿನ ಚರಿತ್ರೆಯಂತೂ ದಾಖಲೆಯಾಗುತ್ತದೆ.


ಕಾದಂಬರಿಯ ಹೆಣ್ಣುಪಾತ್ರಗಳ ಬಗ್ಗೆ ಕೆಲಮಾತುಗಳನ್ನು ಹೇಳಲೇಬೇಕೆನಿಸಿದೆ, ಏಕೆಂದರೆ, ಈ ಪಾತ್ರಗಳಿಂದಲೇ ಕಾದಂಬರಿ ಬೆಳೆಯುವುದು. ಸುಮತಿ ಈ ಕಾದಂಬರಿಯ ಕೇಂದ್ರಪಾತ್ರ, ಮಗಳಾಗಿ, ಹೆಂಡತಿಯಾಗಿ, ಅಮ್ಮನಾಗಿ, ಅಜ್ಜಿಯಾಗಿ ಒಂದು ಕುಟುಂಬವನ್ನು ನಿಭಾಯಿಸುತ್ತಾಳೆ. ಆ ಅರ್ಥದಲ್ಲಿ ಆಕೆ ಸ್ತ್ರೀ. ಸಂಸಾರದ ಬೇರೆ ಬೇರೆ ಸವಾಲುಗಳನ್ನು ಬೇರೆ ಬೇರೆ ಘಟ್ಟದಲ್ಲಿ ಆಕೆ ತಾಳ್ಮೆಯಿಂದ ನಿಭಾಯಿಸುವುದು, ನಿಧಾನವಾಗಿ ಬೆಳೆಸಿಕೊಳ್ಳುವ ಆಕೆಯ ಸ್ವತಂತ್ರ ವ್ಯಕ್ತಿತ್ವ ಬಹಳ ಸರಳವಾಗಿಯಾದರೂ ಚೆಂದಾಗಿ ನಿರೂಪಿತವಾಗಿವೆ. ಕಾದಂಬರಿಯ ಬೇರೆ ಹೆಣ್ಣು ಪಾತ್ರಗಳೆಂದರೆ ಮೆಲಿಸ್ಸಾ (ಸುಮತಿಯ ಬೀಗಿತ್ತಿ), ಮೇಗನ್ ಮೆಲಿಸ್ಸಾ ಬ್ರೆಜಿಲ್‌ನಿಂದ ಬಂದು ಅಮೆರಿಕಾದಲ್ಲಿ ಸೆಟಲ್ ಆಗಿರುತ್ತಾಳೆ. ಲೇಖಕರಿಗೆ ಸುಮತಿಯ ಪಾತ್ರದ ಬಗ್ಗೆ ಇರುವ ಪ್ರೀತಿ ಮೆಲಿಸ್ಸಾಳ ಪಾತ್ರದ ಬಗ್ಗೆ ಇಲ್ಲವೇನೋ ಅನ್ನಿಸುತ್ತೆ. ಇದಕ್ಕೆ ಕಾರಣ ಸುಮತಿಯ ಭಾರತೀಯತೆ ಇದ್ದರೂ ಇರಬಹುದು. ನಮ್ಮ ಸಂಸ್ಕೃತಿಯ ಬೇರುಗಳು ಬೇರೆಲ್ಲ ಸಂಸ್ಕೃತಿಗಳಿಗಿಂತ ಹೆಚ್ಚು ಭದ್ರವಾಗಿರುವುದರಿಂದ ಬೇರೊಂದು ಸಸಿ, ಬಳ್ಳಿಗಳಿಗೂ ನಾವು ಆಶ್ರಯ ಕೊಡುತ್ತೇವೆಯೆಂದೇ? ಬಿಟ್ಟರೆ ಬೇರ್ಯಾವ ಜನಾಂಗದ ಮೇಲೆಯೂ ಪ್ರೀತಿಯಿಲ್ಲ, ಗೌರವವಿಲ್ಲ ಇರಲಿ, ಆ ರೀತಿಯ ಜನರನ್ನು ನಾವು ದಿನಾಲೂ ನೋಡುತ್ತೇವೆ. ಆದರೆ, ಆ ಪಾತ್ರದ ಬಗ್ಗೆ ಲೇಖಕರಿಗೆ ಕೊಂಚವೂ ಪ್ರೀತಿಯಿಲ್ಲವೇನೋ ಅನ್ನಿಸಿತು. ಆಕೆಯೂ ಸುಮತಿಯಂತೆ ವಲಸೆಗಾರ್ತಿ ಆಕೆಗೂ ತನ್ನ ಸಂಸ್ಕೃತಿ, ಇತರೇ ಎಲ್ಲವನ್ನು ಕಾಪಾಡಿಕೊಳ್ಳುವುದರಲ್ಲಿ ಸುಮತಿಯಷ್ಟೇ ಕಾಳಜಿಯಿದೆ. ಮೂಲತಃ ತನ್ನ ಸಂಸ್ಕೃತಿಯನ್ನು ಮುಂದಿನ ಪೀಳಿಗೆಗೆ ತಾಗಿಸುವ ಕಾಳಜಿಯಲ್ಲಿ ಮೆಲಿಸ್ಸಾ ಮತ್ತು ಸುಮತಿ ಬೇರೆಯಲ್ಲ. ಆದರೆ, ಹಾಗೆ ಮಾಡುವ ಈ ಕ್ರಿಯೆಯಲ್ಲಿ ಆಕೆ ಕಡೆಗೆ ವ್ಯಾಂಪ್ ಆಗಿಬಿಡುತ್ತಾಳೆ. ಮೇಗನ್ ತನ್ನ ಮತ್ತು ಜಯರಾಮನ ಸಂಸಾರದಲ್ಲಿರುವ ಬಿಕ್ಕಟ್ಟನ್ನು ಆದಷ್ಟು ನಾಗರಿಕವಾಗಿ ನಿಭಾಯಿಸಲು ಪ್ರಯತ್ನಿಸುವುದು ಪ್ರತೀ ಸಮಸ್ಯೆಗೂ ಒಂದು ಪರಿಹಾರ ಇದ್ದೇ ಇರುತ್ತದೆ ಎಂಬ ಹೊಸಾ ಪೀಳಿಗೆಯ ದೃಢ ನಂಬಿಕೆ ಮತ್ತು ಸಂಬಂಧಗಳನ್ನು ಉಳಿಸಿಕೊಳ್ಳಲು ಮಾಡುವ ಪ್ರಜ್ಞಾಪೂರ್ವಕ ಶ್ರಮವನ್ನು ತೋರಿಸುತ್ತದೆ. ಇಬ್ಬರೂ ಮನಃಶಾಸ್ತ್ರಜ್ಞರ ಮೊರೆ ಹೋಗಿ ಸಂಬಂಧವನ್ನು ಉಳಿಸಿಕೊಳ್ಳಲು ತಾವಿಬ್ಬರೂ ಕೆಲವಾದರೂ ಸಮಯ ದೂರವಿದ್ದರೆ ಒಳ್ಳೆಯದು ಎಂಬ ನಿರ್ಧಾರಕ್ಕೆ ಬರುವುದು ಸಂಸಾರದ ನೆಮ್ಮದಿಗೆ ಈ ಪೀಳಿಗೆ ತಂತಾನೇ ಕಂಡುಕೊಂಡಿರುವ ರಕ್ಷಣಾ ವ್ಯವಸ್ಥೆ ಮತ್ತು ಬದಲಾದ ಮೌಲ್ಯವನ್ನು ತೋರಿಸುತ್ತದೆ. ಕಾದಂಬರಿಯಲ್ಲಾಗುವ ಕೆಲವು ಸಾವುಗಳು ಕಾದಂಬರಿಯ ಮುಂದುವರಿಕೆಗೆ ಮತ್ತು ಕಾದಂಬರಿಯ ಒಟ್ಟಾರೆ ಆಶಯಕ್ಕೆ ಪೂರಕವಾಗಲೆಂದೇ

ಉದ್ದೇಶಪೂರ್ವಕವಾಗಿ ಮಾಡಿದೆ. ಐತಾಳರ ವಂಶದ ಗಂಡು ಸಂತಾನ ಡೆನಿಸ್ ಅಥವಾ ದಿನೇಶ– ನೋಡಲು ಅಮೆರಿಕನ್‌ನಂತಿದ್ದರೂ ಆತನ ಆತ್ಮ ಭಾರತೀಯವಾದದ್ದು. ಆತನ ಈ ಭಾರತೀಯತೆಯ ಇರವಿಗೆ ಇರಬಹುದಾದ ತೊಡಕೆಂದರೆ ಮೆಲಿಸ್ಸಾ ಮತ್ತು ಮೇಗನ್ ಮಾತ್ರ. ಮೆಲಿಸ್ಸಾ ಬೇರೆ ಸಂಸ್ಕೃತಿಯ ಬಗ್ಗೆ ಅನಾದರವನ್ನು ಮೊದಲಿಂದಲೂ ಇಟ್ಟುಕೊಂಡು ಬಂದವಳು. ಆಕೆ ಲ್ಯುಕೇಮಿಯ ಬಂದು ಇದ್ದಕ್ಕಿದ್ದಂತೆ ಸಾಯುತ್ತಾಳೆ. ಹಾಗೆಯೇ ಮೇಗನ್ ಕೂಡ ಅಪಘಾತದಲ್ಲಿ ಸಾಯುತ್ತಾಳೆ.

ನಮ್ಮ ಜೀವನದಲ್ಲಿಯೂ ಇಂಥ ಅನೇಕ ಅನಿರೀಕ್ಷಿತ ಸಾವುಗಳು ಆಗುತ್ತವೆ. ಇಲ್ಲವೆಂದಲ್ಲ. ಆದರೆ, ಈ ಕಾದಂಬರಿಯ ಮಟ್ಟಿಗೆ ಮಾತ್ರ ಯೋಚಿಸಿದಲ್ಲಿ– ಒಂದು ಪಕ್ಷ ಮೇಗನ್ ಅಥವಾ ಮೆಲಿಸ್ಸಾ ಇಬ್ಬರಲ್ಲಿ ಯಾರಾದರೂ ಒಬ್ಬರು ಬದುಕಿದ್ದರೆ, ಡೆನಿಸ್ ದಿನೇಶನಾಗುತ್ತಿದ್ದನೇ, ಮುಂದೆ ಭಾರತದಲ್ಲಿ ಐತಾಳರ ಕುಟುಂಬದ ವಂಶವೃಕ್ಷವನ್ನು ಬರೆಸುತ್ತಿದ್ದನೇ? ಅದಿರಲಿ, ಹಾಗೆ ಅವನಿಗೆ ತೊಡಕಾಗಬಲ್ಲ ಯಾವುದೇ ಎರಡನೇ ಪೀಳಿಗೆಯವರೂ ಉಳಿಯುವುದಿಲ್ಲ. (ಅವನಪ್ಪ ಜಯರಾಮನನ್ನು ಸೇರಿ). ಅಷ್ಟೇ ಅಲ್ಲ, ಜಯರಾಮ ಮತ್ತೆ ಮದುವೆ ಆಗುವುದು ಜಾನಕಿ ಎಂಬ ಭಾರತೀಯಳನ್ನು. ಡೆನಿಸ್ ಮದುವೆಯಾಗುವುದೂ ಮೇಘನಾ ಎಂಬ ಭಾರತೀಯಳನ್ನು. ಒಟ್ಟಾರೆ ಕಾರಂತರ ಮರಳಿಮಣ್ಣಿಗೆಯ ನಾಯಕನ ತರ ಅಮೆರಿಕಾ, ಭಾರತ, ಬ್ರೆಜ಼ಿಲ್ ಎಲ್ಲ ಸಂಸ್ಕೃತಿಗಳನ್ನೂ ನೋಡಿ ಕೊನೆಗೆ ಅಜ್ಜಿ ಸುಮತಿಯ ಹಾದಿಯನ್ನೇ ಆತ ಅನುಸರಿಸುತ್ತಾನೆ. ಇಲ್ಲಿ ಕಾದಂಬರಿಕಾರನ ಉದ್ದೇಶವೇನು? ಇಲ್ಲ, ಇದನ್ನು ಸಾರ್ವತ್ರಿಕಗೊಳಿಸುವ ಗೋಜಿಗೆ ಹೋಗುವುದು ಬೇಡ, ಇದೊಂದು ಸಂಸಾರದ ಕಥೆ ಎಂದೂ ನಾವು ಹೇಳಬಹುದು.

ಆದರೆ, ಈ ಕಾದಂಬರಿಯನ್ನು ಒಂದು ಸಂಸಾರದ ಕಥೆಯೆಂದು ಜನ ಓದುವುದಿಲ್ಲ. ನನಗೆ ಈ ಕಾದಂಬರಿಯನ್ನು ಓದಿದ ಮೇಲೆ ಇಂಥ ದೊಡ್ಡ ಕಾದಂಬರಿಯನ್ನು ಬರೆದ ಐತಾಳರ ತಾಳ್ಮೆಯ ಬಗ್ಗೆ ಅಪಾರವಾದ ಗೌರವ ಬರುತ್ತದೆ. ಯಾವುದೇ ಫಿರ್ಯಾದಿಲ್ಲದೆ, ತಮ್ಮ ಪಾಡಿಗೆ ತಾವು ಬರೆದುಕೊಂಡು ಹೋಗುವ ಐತಾಳರ ಹುಮ್ಮಸ್ಸಿನಲ್ಲಿ ಅರ್ಧಭಾಗದಷ್ಟಾದರೂ ನನ್ನಂಥವರಿಗೆ ಆ ಪರಮಾತ್ಮ ಕೊಡಬಾರದೇ? ಇನ್ನು ಹತ್ತು ವರ್ಷದ ನಂತರ ನಾನೀ ಕಾದಂಬರಿಯನ್ನು ಮತ್ತೆ ಓದಿದಲ್ಲಿ, ಪ್ರಭಾಕರನೊಂದಿಗೆಯಲ್ಲದಿದ್ದರೂ, ಜಯರಾಮನೊಂದಿಗೆ ನನ್ನನ್ನು ನಾನು ಸಮೀಕರಿಸಿಕೊಳ್ಳಬಹುದೇನೋ. ಈ ವಲಸೆ ಪ್ರಕ್ರಿಯೆಯನ್ನು ಜೀರ್ಣಿಸಿಕೊಳ್ಳುವುದಕ್ಕೆ ಒಂದು ಪೀಳಿಗೆಯ ಸಮಯ ಸಾಕಾಗಲಾರದು. ಅದು ಸುಮಾರು ಐದು ದಶಕಗಳ ಹಿಂದೆ ಅಮೆರಿಕೆಗೆ ವಲಸೆಯಾದ ಐತಾಳರಿಗೂ ಸತ್ಯ. ಇತ್ತೀಚೆಗೆ ಬಂದ ನಮಗೂ ಸತ್ಯ. ಕಾದಂಬರಿಯ ಕರಡನ್ನು ಅಭಿಮಾನದಿಂದ ನನ್ನಿಂದ ಓದಿಸಿದಕ್ಕಾಗಿ ಐತಾಳರಿಗೆ ಧನ್ಯವಾದಗಳು.

*



ತಾರೆಗಳ ಓರೆಗಣ್ಣಿನ ಕಡೆಗೆ ಆಗಾಗ ಬೀಸುವುದು ಬಯಲ ಗಾಳಿ

– ಕೆ. ಸತ್ಯನಾರಾಯಣ

ಡೊನಾಲ್ಡ್ ಟ್ರಂಪ್ ಇನ್ನು ಎರಡು ವಾರಗಳಲ್ಲೇ ಅಮೆರಿಕಾದ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಲಿದ್ದಾರೆ, ಅಮೆರಿಕಾದ ಅಧಿಕಾರ ರಾಜಕಾರಣದಲ್ಲಿ, ನೀತಿ ನಿರೂಪಣೆಯಲ್ಲಿ ಮೊದಲಬಾರಿಗೆ ಭಾರತೀಯರಿಗೆ ವಿವಿಧ ಹಂತಗಳಲ್ಲಿ ಪ್ರಾಶಸ್ತ್ಯ-ಪ್ರಾತಿನಿಧ್ಯ ಸಿಗುತ್ತಿದೆ. ಬಾಬಿ ಜಿಂದಾಲ್, ನಿಕ್ಕಿ ಹ್ಯಾರಿಸ್, ಕಮಲಾ ಹ್ಯಾರಿಸ್, ಶೀನಿವಾಸನ್, ವಿಕ್ರಮ್ ಮೂರ್ತಿ, ಇಂದಿರಾ ಮಾಯಿ– ಹೀಗೆ ಹೆಸರಿಸುತ್ತಾ ಹೋಗಬಹುದು. ವೃತ್ತಿ ಪ್ರಪಂಚದಲ್ಲಿ, ವಿಶ್ವವಿದ್ಯಾಲಯಗಳಲ್ಲಿ ಭಾರತೀಯರ ಮಹತ್ವ ಮತ್ತು ಕಾಣಿಕೆಯನ್ನು ಕೂಡ ಒಪ್ಪಲಾಗುತ್ತಿದೆ, ಗೌರವಿಸಲಾಗುತ್ತಿದೆ. ವಲಸಿಗರಿಗೆ ಈಗಿರುವಷ್ಟು ಪ್ರಾಮುಖ್ಯತೆ ಇರಬೇಕೆ ಬೇಡವೇ ಎಂಬುದು ಈ ಸಲದ ಚುನಾವಣೆಯಲ್ಲಿ ಒಂದು ಮುಖ್ಯ ವಿಷಯವಾಗಿತ್ತು. ಅಮೆರಿಕದಲ್ಲಿ ಮಾತ್ರವಲ್ಲ; ಯುರೋಪಿನಲ್ಲು ಕೂಡ ಈಗ ವಲಸಿಗರ ಆಗಮನ, ಅವಕಾಶಗಳನ್ನು ಕುರಿತು ದೊಡ್ಡಪ್ರಮಾಣದ ವಿರೋಧವಿದೆ, ಜಾಗತೀಕರಣವೆಂದರೆ ಬಂಡವಾಳದ, ಸಂಪನ್ಮೂಲದ, ತಂತ್ರಜ್ಞರ, ಕಾರ್ಮಿಕರ ಚಲನೆ ಮತ್ತು ವಲಸೆ ವ್ಯಾಪಾರ– ವ್ಯವಹಾರಗಳ ಅಂತರ್‌ರಾಷ್ಟ್ರೀಕರಣ. ಎರಡು ಮೂರು ದಶಕಗಳಿಂದ ಜಾಗತೀಕರಣದ ಪರವಾಗಿದ್ದ ದೇಶಗಳ ಸರಕಾರಗಳು ಈಗ ಇದ್ದಕ್ಕಿದ್ದಂತೆ ರಾಷ್ಟ್ರೀಯತೆಯ ಪರವಾಗಿ, ವಲಸೆ ಚಲನೆ ವಿರುದ್ಧವಾಗಿ ಮಾತನಾಡಲು ಪ್ರಾರಂಭಿಸಿವೆ.

ಜಾಗತೀಕರಣದ ಕೆಲವು ಸ್ತರಗಳನ್ನು ವಿರೋಧಿಸುತ್ತಾ ಇನ್ನು ಕೆಲವು ಸ್ತರಗಳನ್ನು ಬಯಸುತ್ತಾ, ಸ್ವೀಕರಿಸುತ್ತಾ ರಾಷ್ಟ್ರೀಯತೆಯ ಪರವಾಗಿ ವಾದಿಸುತ್ತಿದ್ದ ಭಾರತದಂಥ ದೇಶಗಳು ಈಗ ಜಾಗತಿಕ, ಅಂತರರಾಷ್ಟ್ರೀಯತೆ, ವಲಸಿಗರ ಸ್ವಾತಂತ್ರ್ಯ ಚಲನೆಯ ಪರವಾಗಿ ಮಾತನಾಡುತ್ತಿವೆ. ಇಲ್ಲಿ ಒಂದು ವಿರೋಧಾಭಾಸವೂ ಇದೆ, ಜಾಗತಿಕ ಮಟ್ಟದಲ್ಲಿ ವಲಸಿಗರ ಸ್ವಾತಂತ್ರ್ಯದ ಪರವಾಗಿ ಮಾತನಾಡುವ ಭಾರತ– ಪಾಕಿಸ್ತಾನದಂಥ ದೇಶಗಳು, ಮಧ್ಯಪ್ರಾಚ್ಯದ ದೇಶಗಳ ತಮ್ಮ ನೆರೆಹೊರೆಯ ದೇಶಗಳಿಂದ ಬರುವ, ಬರುತ್ತಿರುವ ವಲಸಿಗರನ್ನು ತೀವ್ರವಾಗಿ ವಿರೋಧಿಸುತ್ತವೆ, ಪಾಕಿಸ್ತಾನದಲ್ಲಿ ಅಫಘಾನಿಸ್ಥಾನದಿಂದ ಬರುವ ನಿರಾಶ್ರಿತರ ಬಗ್ಗೆ ನಮ್ಮಲ್ಲಿ ಬಾಂಗ್ಲಾ ದೇಶದಿಂದ ಬರುವ ವಲಸಿಗರ ಬಗ್ಗೆ ತೀವ್ರ ವಿರೋಧವಿದೆ, ಈ ವಿರೋಧಾಭಾಸಗಳ ನಡುವೆಯೆ ನಮ್ಮೆದುರಿಗೆ ಭಾರತದಿಂದ ವಲಸೆ ಹೊರಟ ಕುಟುಂಬಗಳು ಒಂದು– ಎರಡು ತಲೆಮಾರುಗಳ ಬದುಕನ್ನು ಅಮೆರಿಕಾದಲ್ಲಿ ಬದುಕಿದ್ದಾರೆ, ಕೆಲವರು ಅಲ್ಲಿಯೇ ಕಾಲವಾಗಿದ್ದಾರೆ, ಬಹುಪಾಲು ಕುಟುಂಬಗಳ ಎರಡನೆಯ, ಮೂರನೆಯ ತಲೆಮಾರು, ಬದುಕು ಸಂಸ್ಕೃತಿ ಉದ್ಯೋಗ–ವಿವಾಹ ಇಂತಹಾ ಕ್ಷೇತ್ರಗಳಲ್ಲಿ ನಾನಾ ರೀತಿಯ ಸಮಸ್ಯೆಗಳನ್ನು ಎದುರಿಸುತ್ತಿವೆ. ಹಿರಿಯ ತಲೆಮಾರಿನವರು ಭಾರತದ ಬೇರುಗಳನ್ನು ಕಳಚಿಕೊಂಡರೆ, ಹೀಗೆ ಬೇರುಗಳನ್ನು ಕಳಚಿಕೊಳ್ಳುವುದು ಅನಿರ್ವಾಯವೇ? ಈ ಪ್ರವೃತ್ತಿಯ ಬಗ್ಗೆ ಅವರು ಹೇಗೆ ಯೋಚಿಸುತ್ತಾರೆ, ಅಮೆರಿಕಕ್ಕೆ ಹೋದವರು, ಹೋಗುತ್ತಿರುವವರಲ್ಲಿ ಸುಖ ಸಂಪತ್ತಿನಲ್ಲಿ ತೇಲಾಡುತ್ತಿದ್ದಾರೆಂದು ಇಲ್ಲಿರುವವರು ಭಾವಿಸುವುದು ಎಷ್ಟು ಸರಿ? ಈ ಭಾವನೆಯಲ್ಲಿ ಅಸೂಯೆಯ ಪಾಲು ಎಷ್ಟು? ವಸ್ತುನಿಷ್ಠೆಯ ಪಾಲು ಎಷ್ಟು? ಇಂತಹಾ ಪ್ರಶ್ನೆಗಳನ್ನು ಕುರಿತು ಕನ್ನಡಿಗರೊಬ್ಬರು ತಮ್ಮ ಅನುಭವಗಳ ಹಿನ್ನೆಲೆಯಲ್ಲಿ ಒಂದು ಪಠ್ಯವನ್ನು ರಚಿಸಿದ್ದಾರೆ, ನಾಗ ಐತಾಳರ 'ಅಮೆರಿಕಾದಲ್ಲಿ ಕಂಡ ಕನಸು, ಕಟ್ಟಿದ ನೆನಪು' (ಅಭಿನವ ಎರಡನೆಯ ಮುದ್ರಣ 2015) ದಿನಚರಿ, ಆತ್ಮಕತೆ. ಕೌಟುಂಬಿಕ ವಿವರ ಸಾಮಾಜಿಕ ವಿಶ್ಲೇಷಣೆ– ಎಲ್ಲವೂ ಬೆರೆತ ಕೃತಿ 'ಮರಳಿ ಮಣ್ಣಿಗೆ' ಬರೆದ ಶಿವರಾಮ ಕಾರಂತರ ಕೋಟಾದಿಂದ ಬಂದ ನಾಗ ಐತಾಳರೇ ಬೇರುಗಳಿಂದ ದೂರವಾಗುವ ಅನಿವಾರ್ಯತೆಯಿಂದ ಕಥನವನ್ನು ಬರೆಯುತ್ತಿರುವುದರಲ್ಲಿ ಇತಿಹಾಸದ ಚಲನೆಯು ಇದೆ, ಚೋದ್ಯವು ಇದೆ. ಮೂರು ನಾಲ್ಕು ದಶಕಗಳ ಹಿಂದೆ ವಲಸೆಹೋಗಿ ವೃತ್ತಿಯಲ್ಲಿ ಯಶಸ್ವಿಯಾಗಿ, ಅಲ್ಲಿಯ ನಾಗರಿಕತೆ ಪಡೆದು ಸಂವೇದನಾಶೀಲರಾಗಿರುವ ಒಬ್ಬ ಬಂಧು ಈಚೆಗೆ ಬೆಂಗಳೂರಿಗೆ ಬಂದಿದ್ದರು, ಅವರ ತಂದೆ ತಾಯಿ ಇಬ್ಬರು ಈಗ ತೀರಿಹೋಗಿದ್ದಾರೆ, ಅವರಿಗೆ ಪ್ರವಾಸ–ವಾಸ್ತವ್ಯದ ಉದ್ದಕ್ಕೂ ಒಂದೇ ಕಡೆ ಇಳಿದುಕೊಳ್ಳುವ 'ಸ್ವಂತ' ಎಂಬ ಮನೆಯಿರಲಿಲ್ಲ, ಮನೆಯಿಂದ ಮನೆಗೆ ಬಂಧುಗಳಿಂದ– ಬಂಧುಗಳಿಗೆ ಸೂಟ್ಕೇಸ್ ಎತ್ತಿಕೊಂಡು ತಿರುಗಾಡುತ್ತಿದ್ದರು. ಅವರ ಅಮೆರಿಕನ್ ಸಹೋದ್ಯೋಗಿಯೊಬ್ಬರು ಭಾರತದ ಪ್ರವಾಸಕ್ಕೆ

ಬರುತ್ತಿದ್ದರು, ಹೊಟೇಲಿನಲ್ಲಿ ಉಳಿದುಕೊಳ್ಳುತ್ತಿದ್ದರು. ಇವರು ಕೂಡ ಅವರ ಜೊತೆ ಹೊಟೇಲಿನಲ್ಲಿ ಇದ್ದರು. ಕೇವಲ ಇಪ್ಪತ್ತೈದು ಮೂವತ್ತು ವರ್ಷಗಳ ಹಿಂದೆ ಬೆಂಗಳೂರಿನಲ್ಲಿ ಸಾಂಸ್ಕೃತಿಕವಾಗಿ ಸಾಮಾಜಿಕವಾಗಿ ಕ್ರಿಯಾಶೀಲವಾಗಿ ಬದುಕಿದವರು ಅವರು. ಮನೆಯಿಂದ ಮನೆಗೆ ಬಂಧುಗಳಿಂದ– ಬಂಧುಗಳಿಗೆ ಅವರು ತಿರುಗುವುದರ ಹಿಂದೆ ಇದ್ದ ವ್ಯಾಕುಲತೆ ಮನ ಕರಗಿಸುವಂತಿತ್ತು. ಭಾರತದಿಂದ ವಲಸೆ ಹೋದವರು ಮೊದ ಮೊದಲ ವರ್ಷಗಳಲ್ಲಿ 'ಇಲ್ಲ, ನಾವು ಕೆಲವು ವರ್ಷಗಳಲ್ಲಿ ವಾಪಾಸ್ ಹೋರಟು ಹೋಗುತ್ತೇವೆ' ಎಂದು ಬಡಬಡಾಯಿಸುವುದರ ಬಗ್ಗೆ ಬಂಧುವೇ ನನಗೆ ನ್ಯೂ ಜೆರ್ಸಿಯಲ್ಲಿ ಸಿಕ್ಕಾಗ ತಮಾಷೆ ಮಾಡಿದ್ದರು. 'ಇಂಥ ಮಾತುಗಳನ್ನು ಪ್ರತಿಯೊಬ್ಬ ವಲಸಿಗನ ಬಾಯಲ್ಲಿ ಕೇಳಿ–ಕೇಳಿ ನಕ್ಕು, ನಕ್ಕು ನಮಗೆ ಈಗ ನಗಲು ಕೂಡ ಸಾಧ್ಯವಾಗುತ್ತಿಲ್ಲ' ಎಂದು ಪ್ರತಿಕ್ರಿಯಿಸಿದ್ದರು. 'ಇಲ್ಲ ಇನ್ನು ನಾವು ಭಾರತಕ್ಕೆ ಹೋಗುವುದಿಲ್ಲ ವೃತ್ತಿಯ ಕಾರಣಕ್ಕೂ, ಮಕ್ಕಳ ಬದುಕಿನ ಕಾರಣಕ್ಕೂ ನಾವು ಎಂದೂ ಹಿಂದಿರುಗಲಾರೆವು, ಭಾರತವು ಇನ್ನು ಏನಿದ್ದರೂ ನಾವು ತೊರೆದ ದೇಶ ಎಂಬುದನ್ನು ವಲಸಿಗನು ತನಗೆ ತಾನೇ ಒಪ್ಪಿಕೊಳ್ಳುವ ದಿನ ಕ್ಷಣ, ಎರಡು ತುಂಬು ನೋವಿನ ಆತ್ಮಪರೀಕ್ಷೆಯ ಕ್ಷಣಗಳು' ಎಂದು ವಿಷಾದದಿಂದಲೇ ನಿವೇದಿಸಿಕೊಂಡಿದ್ದ ಇನ್ನೊಬ್ಬ ಬಂಧು ಕನ್ನಡ ಸಾಹಿತ್ಯ ಸಂಸ್ಕೃತಿ ಸಂವೇದನೆಯನ್ನು ಅಲ್ಲಿ ಹರಡುವಲ್ಲಿ ಮುಂಚೂಣಿಯಲ್ಲಿರುವವರು.

ವಲಸೆಗೆ ಕಾರಣ ಏನು, ಇಲ್ಲಿ ಉದ್ಯೋಗಾವಕಾಶಗಳು, ಜೀವನಾವಕಾಶಗಳು ಇಲ್ಲದಿರುವುದೇ? ಲೇಖಕರು ಇದನ್ನು ಒಪ್ಪುವುದಿಲ್ಲ. 'ಭಾರತದಲ್ಲೇ ತನಗೆ ಒಳ್ಳೆಯ ಸಂಬಳ ಮತ್ತು ಬಡ್ತಿ ದೊರೆಯುವ ಎಲ್ಲ ಅವಕಾಶಗಳು ಇದ್ದವು. ಖಚಿತವಾದ ಭರವಸೆಯು ಇತ್ತು. ವೃತ್ತಿ ನೈಪುಣ್ಯತೆಯನ್ನು ಅಭಿವೃದ್ಧಿಗೊಳಿಸಿಕೊಳ್ಳುವ ದೃಷ್ಟಿಯಿಂದ ನಾನು ಅಮೆರಿಕಾದಲ್ಲಿ ಕ್ರಮೇಣವಾಗಿ ಬೇರೂರಿದೆ' ಎಂದು ಅವರು ಹೇಳುತ್ತಾರೆ. ಕಥನದ ಕೊನೆಯಲ್ಲಿ ಅವರಿಗಿರುವ ಸಮಾಧಾನ, ತೃಪ್ತಿಯ ಹಿಂದೆ, ಕೌಟುಂಬಿಕ ಕಾರಣಗಳಿಗಿರುವಷ್ಟೇ ಪಾಲು ವೃತ್ತಿ ಪ್ರಪಂಚದ ಸಾಧನೆಯ ಬಗ್ಗೆಯೂ ಇದೆ. ಈಗಲೂ ಕೂಡ ಮಾಹಿತಿ ತಂತ್ರಜ್ಞಾನದ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವವರು, ಭಾರತದಲ್ಲಿ ಕೆಲಸ ಮಾಡಿದರೆ ಕೇವಲ ಸಂಬಳ– ಸಾರಿಗೆಗಳಲ್ಲಿ ಎತ್ತರವನ್ನು ಸಾಧಿಸಬಹುದೆ ಹೊರತು, ವೃತ್ತಿ ನೈಪುಣ್ಯತೆ, ಸಂಶೋಧನೆಯ ಬಗ್ಗೆ ಕಾಳಜಿಯಿರುವವರಲ್ಲಿ ಅಮೆರಿಕಾದ ಮಾಹಿತಿ ತಂತ್ರಜ್ಞಾನದ ಕಂಪೆನಿಗಳಲ್ಲಿ ಕೆಲಸ ಮಾಡುವ ಹೆಂಗಸರು ಇನ್ನು ಒಂದು ವಿಶೇಷವಾದ ಕಾರಣವನ್ನು ನೀಡುತ್ತಾರೆ. ಹೆಂಗಸರು ಭಾರತದಲ್ಲಿ ಕೆಲಸ ಮಾಡುತ್ತಾ ಎಷ್ಟೇ ದೊಡ್ಡ ಹುದ್ದೆಯಲ್ಲಿರಲಿ Personal space ತುಂಬಾ ವಿಶಾಲವಾದದ್ದು. ಚೇತೋಹಾರಿಯಾದದ್ದು ಎಂದು ಭಾವಿಸುತ್ತಾರೆ. ನಮ್ಮ ಪೂರ್ವಜರು ಒಂದು ಸ್ಥಳದಲ್ಲಿ ದೀರ್ಘಕಾಲ ಒಂದೇ ನಗರದಲ್ಲಿ ವೃತ್ತಿ ಮಾಡುವುದರಿಂದಲೂ, ಒಂದು ಸ್ಥಳ ನಮ್ಮದು ಎಂಬ ಭಾವನೆಯನ್ನು ಹುಟ್ಟಿಸಿಬಿಡುತ್ತದೆ. ಚಿಕಾಗೋದಲ್ಲಿ ತುಂಬಾ ವರ್ಷಗಳಿದ್ದು,

ಎಲ್ಲ ಸಂಪರ್ಕಗಳನ್ನು ಕಳೆದುಕೊಂಡ ಮತ್ತೆ ಲಾಸ್ ಏಂಜಲೀಸ್‌ಗೆ ಹೋಗಬೇಕಾದ ಸಂದರ್ಭದಲ್ಲಿ ನಾಗ ಐತಾಳರು ಅನುಭವಿಸುವ ಭಾವನೆಗಳು ಕೋಟಾವನ್ನು, ಭಾರತವನ್ನು ಬಿಡಬೇಕಾಗಿ ಬಂದಾಗ ಅನುಭವಿಸುವ ಭಾವನೆಗಳಷ್ಟೇ ತೀವ್ರವಾಗಿವೆ. ವಲಸೆ ಹೋಗುವುದು ಅನಿಕೇತನರಾಗುವುದಕ್ಕಾಗಿ ಅಲ್ಲ, ವಿಶ್ವಪ್ರಜೆಯಾಗುವುದಕ್ಕೂ ಅಲ್ಲ; ಸ್ವಂತ ಬದುಕನ್ನು, ಗೂಡನ್ನು, ಕುಟುಂಬವನ್ನು ಕಟ್ಟಿಕೊಳ್ಳುವುದಕ್ಕೆ, ಲೇಖಕರೇ ಸೂಚಿಸಿರುವ ಹಾಗೆ ಕನಸುಗಳನ್ನು ಕಂಡ, ಸಾಕ್ಷಾತ್ಕರಿಸಿಕೊಂಡ ಕಟ್ಟಿದ ನೆನಪುಗಳನ್ನೇ ಮತ್ತೆ ಮತ್ತೆ ಹೇಳಬೇಕಾಗುತ್ತದೆ. ಹೇಳುತ್ತಲೇ ಇರಬೇಕಾಗುತ್ತದೆ ನೈಪಾಲ 'A house for biswas' ಕಾದಂಬರಿ ಹೋದ ಕಡೆಯಲ್ಲಿ ಮನೆ ಹುಡುಕುವ, ಮನೆಕಟ್ಟುವ, ಕೊಳ್ಳುವ, ಬೇರು ಬಿಡುವ ಕಥೆಯನ್ನು ಹೇಳುತ್ತದೆ. ಝುಂಪಾ ಲಹರಿಯ ಭಾರತೀಯ ಕಥೆಗಳು ಅಮೆರಿಕನ್ ಕಥೆಗಳೂ ಎರಡೂ ಕೂಡ ಬದುಕನ್ನು ಕಟ್ಟಿಕೊಳ್ಳುವ ಹೆಣಗಾಟವನ್ನೇ ಸಂವೇದನಾಶೀಲವಾಗಿ ಹೇಳುತ್ತವೆ, ನಾಗಐತಾಳರು ಮನೆ ಕೊಳ್ಳುವಾಗ ಹಾಕುವ ಲೆಕ್ಕಾಚಾರಗಳು, ಮನೆ ಮಾರಿದಾಗ ಲಾಭ ಸಿಕ್ಕಾಗ ಪಡುವ ಸಂತೋಷ ಎಲ್ಲವೂ ಭಾರತದ ಮೇಲೆ ಜಾತಿಯವರು ತಮ್ಮ 'ಮೇಲರಿಮೆ'ಯಿಂದ ಬೀಗುತ್ತಾ ಅಮೇರಿಕಾದಂತಹ ದೇಶಗಳ ಮುಂದುವರೆದ ವರ್ಗಗಳೊಡನೆ ತಮ್ಮನ್ನು ಗುರುತಿಸಿಕೊಳ್ಳುವಾಗಲೂ ತಾವು ಅಂತರರಾಷ್ಟ್ರೀಯ ಸ್ತರದಲ್ಲಿ ಶೂದ್ರರೆಂಬುದನ್ನು ಮರೆಯಬಾರದೆಂದು ರಾಮಮನೋಹರ ಲೋಹಿಯಾ ಹೇಳಿದ್ದುದು ನೆನಪಾಗುತ್ತದೆ, ವಲಸೆಯಿಂದ ಮಾಡುವ ದೊಡ್ಡ ಮತ್ತು ಕಠಿಣ ಸತ್ಯಗಳನ್ನು ಎದುರಿಸಬೇಕಾಗುವುದು ವಲಸಿಗರ ಮಕ್ಕಳು ಎದೆಯ ಮಟ್ಟಕ್ಕೂ ಬೆಳೆದು ನಿಂತಾಗ, ವಿದ್ಯಾಭ್ಯಾಸ, ವೃತ್ತಿ, ಗೆಳೆತನ, ವಿವಾಹ ಎಲ್ಲದರಲ್ಲೂ ಸ್ವಾತಂತ್ರ್ಯವನ್ನು ಬಯಸಿದಾಗ ಮುಂದಿನ ತಲೆಮಾರಿನವರ ಆಯ್ಕೆಯನ್ನು ಒಪ್ಪಿ ಕೊಳ್ಳುವುದರಲ್ಲಿ, ಗೌರವಿಸುವುದರಲ್ಲಿ ತನಗಿಂತ ತನ್ನ ಪತ್ನಿಯೇ ಹೆಚ್ಚು ಮುಕ್ತ ಮನಸ್ಸಿನವಳಾಗಿದ್ದಳು, ಎಂದು ಲೇಖಕರು ಸೂಚಿಸುತ್ತಾರೆ.


ಮಗ ಪಾರ್ಸಿ ಭಾಷೆ ಮಾತನಾಡುವ ಇರಾನಿ ಮುಸ್ಲಿಂ ಹುಡುಗಿಯನ್ನು ಮದುವೆಯಾದಾಗ, ಮನಸ್ಸಿನಲ್ಲಿ ಮೂಡಿದ ಆತಂಕಗಳನ್ನು, ಆದರೆ ಆ ಸೊಸೆ ಕ್ರಮೇಣ ಕುಟುಂಬದವಳೇ ಆದದ್ದನ್ನು ಎರಡನ್ನು ವಸ್ತುನಿಷ್ಠವಾಗಿ ಲೇಖಕರು ಹೇಳಿಕೊಂಡಿದ್ದಾರೆ, ಈ ರೀತಿಯ ಆತಂಕಗಳನ್ನು ಮುಕ್ತವಾಗಿ ಹೇಳಿಕೊಳ್ಳುವ ಅವಕಾಶವನ್ನು ಸೃಷ್ಟಿಸುವಲ್ಲಿ ನಾವು ಭಾರತದಲ್ಲಿ ವಿಫಲವಾಗಿದ್ದೇವೆಯೇ? ಮಕ್ಕಳು ವಿದ್ಯಾಭ್ಯಾಸಕ್ಕೆಂದು, ವೃತ್ತಿಗೆಂದು ಮನೆಯಿಂದ ಹೊರಟು ನಿಂತ, ತಂದೆ ತಾಯಿಗೆ ವಿದಾಯ ಹೇಳಿದಾಗ ಲೇಖಕರಿಗೆ ತಾವು ಹಿಂದೆ ತಮ್ಮ ತಂದೆ ತಾಯಿಯರಿಗೆ ಮೂರು ವರ್ಷದಲ್ಲೇ ವಾಪಾಸ್ ಆಗುವುದಾಗಿ ಕೊಟ್ಟಿದ್ದ ಮಾತು ನೆನಪಾಗುತ್ತದೆ.

ಅಮೆರಿಕಾದಲ್ಲಿ ವಾಸಿಸುವ ಭಾರತೀಯರು ಅಲ್ಲಿಯ ಸಾಮಾಜಿಕ, ರಾಜಕೀಯ ಜೀವನದಲ್ಲಿ ಹೇಗೆ ಭಾಗವಹಿಸಬೇಕು ಎಂಬುದು ಒಂದು ಮುಖ್ಯ ಪ್ರಶ್ನೆ, ಇದು

ನಮಗೆ ಉದ್ಯೋಗ, ಸಂಪತ್ತನ್ನು ನೀಡುವ ದೇಶ ಎಂಬ ಗೌರವ ಪ್ರೀತಿ ತಪ್ಪಲ್ಲ. ಆದರೆ ದಶಕಗಳ ಕಾಲ ಅಲ್ಲೇ ಬದುಕುತ್ತಾ, ಮುಂದಿನ ತಲೆಮಾರುಗಳಿಗೂ ಅಲ್ಲೇ ಬೇರುಗಳನ್ನು ಸೃಷ್ಟಿಸುತ್ತಾ ಹೋಗುವವರು, ಅಮೆರಿಕಾದ ಇತರ ನಾಗರಿಕರಂತೆ ದೇಶದ ಆಗುಹೋಗುಗಳಲ್ಲಿ, ಸಮಾನತೆಯ ನೆಲೆಯಲ್ಲೇ ಭಾಗವಹಿಸಬೇಕಾಗುತ್ತದೆ. (ಜೊತೆಯ ಅಮರಿಕಾದ ನಾಗರಿಕರಂತೆ) ಈ ಪ್ರೀತಿಯ ಸಮಾನ ತಲೆಯಲ್ಲಿ ಭಾಗವಹಿಸುವುದಕ್ಕೂ, ಬಹುಪಾಲು ಭಾರತೀಯರಿಗೆ ಮಾನಸಿಕ ಸಿದ್ಧತೆಯೇ ಇಲ್ಲವೆಂದು, ಶ್ರೀ ಗುಂಡು ಶಂಕರ್‌ರಂತಹ ಸಂವಿಧಾನಶೀಲ ಮಿತ್ರರು ಹೇಳುತ್ತಾರೆ.

ಭಾರತದಲ್ಲಿ ಸಾಮಾಜಿಕ ಸಮಾನತೆಯನ್ನು ಬಯಸುವ, ಒಪ್ಪುವ ಮನಸ್ಸಿಗೆ ಮಾತ್ರ ಅಮೆರಿಕಾದ ಸಮಕಾಲೀನ ಆಗುಹೋಗುಗಳಲ್ಲೂ ಸಮಾನ ನೆಲೆಯಲ್ಲಿ ಕ್ರಿಯಾಶೀಲರಾಗಿ ಭಾಗವಹಿಸಲು ಸಾಧ್ಯ, ಎಂಬುದು ಅವರ ಅಭಿಪ್ರಾಯ, ಭಾರತದಲ್ಲಿ ಆಗುತ್ತಿರುವ ಸಾಮಾಜಿಕ, ರಾಜಕೀಯ ಬದಲಾವಣೆಗಳು ಸೃಷ್ಟಿಸುವ ವಾಸ್ತವ ಮತ್ತು ಕಲ್ಪಿತ ಒತ್ತಡಗಳಿಂದ ತಪ್ಪಿಸಿಕೊಳ್ಳಲು, ವಲಸೆ ಎಂಬುದು ಪಾಸ್‌ಪೋರ್ಟ್ ಮತ್ತು ವೀಸಾ ಆಗುವುದು ಸಾಧ್ಯವಿಲ್ಲ. ನಾಗ ಅವರು ತಮ್ಮ ವೃತ್ತಿ ಕುಟುಂಬ ಬಂಧುಗಳು ಮಕ್ಕಳ ಜೀವನದ ವಿವರಗಳ ಮೂಲಕ ಸೂಚಿಸಿರುವ ಹಾಗೆ ಕನಸುಗಳನ್ನು ಕಾಣುವಾಗಲೂ ಕಟ್ಟುವಾಗಲೂ ಬದುಕಿನ ಹೆಣಗಾಟ ಮತ್ತು ಆ ಹೆಣಗಾಟವೇ ಕಾರಣವಾಗಿ ಸಿಗುವ ಸ್ವಾತಂತ್ರ್ಯ ಜವಾಬ್ದಾರಿ ಮತ್ತು ನೋವುಗಳಿಂದ ತಪ್ಪಿಸಿಕೊಳ್ಳಲಾಗುವುದಿಲ್ಲ. ವಲಸೆಯಿಂದಾಗಿ ಬದುಕಿನಲ್ಲಿ ಸೃಷ್ಟಿ ಯಾಗುವ ಸಮಸ್ಯೆಗಳು, ನೆಲೆಗಳು ಭಾರತದ ನಗರ ಜೀವನದ ಮಧ್ಯಮ ವರ್ಗದ ಅವಿಭಾಜ್ಯ ಅಂಗವಾಗುತ್ತಿರುವ ಸಂದರ್ಭದಲ್ಲಿ ನಾಗ ಐತಾಳರ ಅನುಭವ, ಅನಿಸಿಕೆಗಳ ಓದು ಇಲ್ಲಿರುವವರ ಕನಸು–ಆಶೋತ್ತರಗಳನ್ನು, ಮತ್ತು ಇದು ಅಲ್ಲಿ ಸಾಕಾರಗೊಳ್ಳುವ ರೂಪವನ್ನು ಅರ್ಥಮಾಡಿಕೊಳ್ಳಲು ತುಂಬಾ ನೆರವಾಗುತ್ತದೆ.

'ವಿಜಯ ಕರ್ನಾಟಕ ಪತ್ರಿಕೆ'ಯಲ್ಲಿ ಬರೆದ ಅಂಕಣ ಬರಹ



ಲೇಖನಿ ಹಿಡಿದಂಥ ವ್ಯಕ್ತಿ, ಬರೆದಂಥ ಕಥನ

– ನಳಿನಿ ಮೈಯ

'ಅಮೆರಿಕನ್ನಡಿಗನೊಬ್ಬನ ದಿನಚರಿಯಿಂದ' ಎಂಬ ಹೆಸರು ಕೊಟ್ಟಿದ್ದಾರೆ ನಾಗ ಐತಾಳರು ಈ ಗ್ರಂಥಕ್ಕೆ. ದಿನಚರಿ ಬರೆಯುವುದೆಂದರೆ ಅದೊಂದು ಬಗೆಯ ಆತ್ಮ ನಿವೇದನೆ ಇದ್ದಂತೆ. ಯಾವುದೇ ಬಗೆಯ ಸಂಕೋಚವಿಲ್ಲದೆ, ಯಾರೇನೆಂದುಕೊಂಡಾರೆಂಬ ಭಯವಿಲ್ಲದೆ ಕೇವಲ ಎದೆಯನ್ನು ಹಗುರಾಗಿಸಿಕೊಳ್ಳುವ ಉದ್ದೇಶದಿಂದ ಬರೆದದ್ದು ದಿನಚರಿ. ಅದಕ್ಕೇ ಇನ್ನೊಬ್ಬರ ದಿನಚರಿಯನ್ನು ಕದ್ದು ಓದುವವರಿಗೆ ಅವರ ಮನಸ್ಸಿನ ಆಗುಹೋಗುಗಳಿಗೆ, ಜೀವನದ ಏರುಪೇರುಗಳಿಗೆ, ಒಂದು ಇಣುಕು ನೋಟ ಸಿಕ್ಕಿದ ಅನುಭವವಾದೀತು. ಆದರೆ ಇಲ್ಲಿ ಲೇಖಕರೇ ತಮ್ಮ ದಿನಚರಿಯನ್ನು ನಮ್ಮೆದುರು ತೆರೆದಿಟ್ಟಿದ್ದಾರೆ. ಅದೂ ಎಂತಹ ದಿನಚರಿ! ಅದೆಂತಹ ಜೀವನ! ಅಮೆರಿಕಾಗೆ ವಲಸೆ ಬಂದ ಭಾರತೀಯರಲ್ಲಿ ಮೊದಲ ತಂಡದವರಾದ ಇವರು ನೋಡುವ ಕಣ್ಣು, ಅನುಭವಿಸುವ ಹೃದಯ, ಎಲ್ಲವೂ ಭಾರತೀಯವಾದರೂ ಕಾಣುವ ದೃಶ್ಯ, ನಡೆಯುವ ಘಟನೆ ಅಮೆರಿಕಾದ್ದು. ಯಾವಾಗಲೂ ಹಾಲು ಕುಡಿದು ಅಭ್ಯಾಸವಿದ್ದ ಬೆಕ್ಕಿಗೆ ಸಾರು ಕುಡಿದಂತಹ ಅನುಭವ! ಈ ಅನುಭವಗಳು ಕೆಲವೊಮ್ಮೆ ಹಾಸ್ಯಮಯವಾಗಿ, ಕೆಲವೊಮ್ಮೆ ಮಾರ್ಮಿಕವಾಗಿ, ಮತ್ತೆ ಕೆಲವೊಮ್ಮೆ ಕರುಳು ಹಿಂಡುವ ಘಟನೆಗಳಾಗಿ ಮೂಡಿ ಬಂದಿವೆ. ನಾಗ ಐತಾಳರ ಲೇಖನಿಯಲ್ಲಿ ಉದ್ದಕ್ಕೂ ಕಾಣುವ ಒಂದೇ ಒಂದು

ಸ್ಥಿರವಾದ ಅಂಶವೆಂದರೆ ಭಾರತದ ಬಗ್ಗೆ ಲೇಖಕರಿಗಿರುವ ಎಂದೂ ಕಡಿದುಕೊಳ್ಳಲಾರದ ಬಲವಾದ ನಂಟು. 'ಆರಂಕುಶವಿಟ್ಟೊಡಂ ನೆನೆವುದೆನ್ನ ಮನಂ ಬನವಾಸಿ ದೇಶಮಂ' ಎಂಬ ಕವಿವಾಣಿ ಇದ್ದಕ್ಕಿದ್ದಂತೆ ಪುಸ್ತಕವಾಗಿ ಮೈದಾಳಿ ನಮ್ಮೆದುರು ನಿಂತಿತೋ ಎಂಬಂತೆ ಭಾಸವಾಗುತ್ತದೆ.

ನನ್ನ ದೃಷ್ಟಿಯಲ್ಲಿ ಇದು ಕನ್ನಡ ಸಾಹಿತ್ಯದಲ್ಲಿ ಒಂದು ಮಹತ್ವಪೂರ್ಣ ಕೃತಿ, ಇದುವರೆಗೆ ಕನ್ನಡದಲ್ಲಿ ಎಷ್ಟೋ ಪ್ರವಾಸಕಥನಗಳು ಹೊರಬಂದಿವೆ, ನಿಜ. ಅಮೆರಿಕಾದಲ್ಲಿ ನೆಲೆಸಿದ ಕನ್ನಡಿಗರು ತಮ್ಮ ಅನುಭವಗಳ ಬಗ್ಗೆ ಬರೆದ ಕವನಗಳು, ಬಿಡಿ ಕಥೆಗಳು, ಪ್ರಬಂಧಗಳೂ ಸಾಕಷ್ಟಿವೆ. ಆದರೆ 1960ನೆಯ ದಶಕದಲ್ಲಿ ವಲಸೆ ಬಂದ ಕನ್ನಡಿಗನೊಬ್ಬ ಹೊಸ ದೇಶಕ್ಕೆ ಹೊಂದಿಕೊಳ್ಳುವ, ಅಲ್ಲಿ ನೆಲೆಯೂರುವ ತನ್ನ ವಿವಿಧ ಅನುಭವಗಳನ್ನೇ ಮೂಲವಸ್ತುವನ್ನಾಗಿಸಿಕೊಂಡು ಬರೆದ ಇಂತಹ ಗ್ರಂಥಗಳು ವಿರಳ, ಇಲ್ಲವೇ ಇಲ್ಲ ಎನ್ನಬಹುದು.

ನಾನು 1960ನೆಯ ದಶಕದಲ್ಲಿ ಎಂದು ಒತ್ತಿ ಹೇಳುವುದಕ್ಕೆ ಒಂದು ಕಾರಣವಿದೆ. 60ನೆಯ ಮತ್ತು 70ನೆಯ ದಶಕದ ಆದಿಯಲ್ಲಿ ಅಮೆರಿಕಾಗೆ ವಲಸೆ ಬಂದ ಭಾರತೀಯರು ಒಂದು ವಿಶಿಷ್ಟ ಪಂಗಡಕ್ಕೆ ಸೇರಿದವರು. ಅಮೆರಿಕಾದಲ್ಲಿ ಭಾರತೀಯತೆಯ ಉಪಸ್ಥಿತಿಯನ್ನು ಭದ್ರಗೊಳಿಸಿದವರು ಇವರು. ಭಾರತೀಯ ಅಂಗಡಿಗಳು, ಹೋಟಲುಗಳು, ಕನ್ನಡ ಕೂಟ, ದೇವಸ್ಥಾನ ಯಾವುದೂ ಇಲ್ಲದ ದೇಶದಲ್ಲಿ ಬಂದು ತಬ್ಬಿಬ್ಬಾಗಿ ಕಣ್ಣು ಕಣ್ಣು ಬಿಟ್ಟವರು ಇವರು; ಆಮೇಲೆ ಚೇತರಿಸಿಕೊಂಡು ಅಮೆರಿಕನ್ನರಿಗೆ ಭಾರತೀಯತೆಯ ತಿಳುವಳಿಕೆ ಕೊಟ್ಟು, ಭಾರತೀಯರಾಗಿ ಅಮೆರಿಕಾದ ತಿಳುವಳಿಕೆ ಪಡೆದುಕೊಂಡು, ಅಂತೂ ಇಂತೂ ಕಡೆಗೆ ಜಯಿಸಿದವರು ಇವರು; ಕನ್ನಡ ಕೂಟ, ದೇವಸ್ಥಾನ ಮುಂತಾದವುಗಳನ್ನು ಹುಟ್ಟು ಹಾಕಿದವರು ಇವರು. ಈ ಕಾರಣದಿಂದ ಇವರ ಅನುಭವಗಳೆಲ್ಲ ವಿಶಿಷ್ಟವಾದವು. ಆಮೇಲೆ ಅಲೆಯಲೆಯಾಗಿ ಬಂದ ಇತರ ಭಾರತೀಯ ವಲಸೆಗಾರರಿಗೆ ಈಗಾಗಲೇ ನೆಲೆಸಿರುವ ಭಾರತೀಯರು ಎಲ್ಲ ಅನುಕೂಲತೆಗಳನ್ನೂ ಕಲ್ಪಿಸಿಕೊಟ್ಟಿದ್ದರಿಂದ ಹೆಚ್ಚಿನ ಕಷ್ಟ ಆಗಲಿಲ್ಲ.

ಇಂತಹ ಮೊದಲ ತಂಡದ ವಲಸೆಗಾರರಾದ ನಾಗ ಐತಾಳರು ತಾಯ್ನಾಡಿಗೆ ಹಪಹಪಿಸುತ್ತಿರುವಾಗಲೂ ಹೊರದೇಶಕ್ಕೆ ಹೊಂದಿಕೊಳ್ಳುವ ಪ್ರಯತ್ನ ನಡೆಸಿ ಆ ಪ್ರಯತ್ನದಲ್ಲಿ ಸಾಕಷ್ಟು ಯಶಸ್ವಿಯೂ ಆಗಿ ತುಂಬುಸ್‌ಜೀವನ ನಡೆಸಿದ ಕನ್ನಡಿಗರು, ಜೀವನದಲ್ಲಿ ತಾವು ಎಡವಿದ್ದು, ಮುಗ್ಗರಿಸಿ ಬಿದ್ದಿದ್ದು, ಮತ್ತೆ ಎದ್ದು ಮಣ್ಣು ಕೊಡವಿಕೊಂಡು ನಡೆದಿದ್ದು ಎಲ್ಲವನ್ನೂ ಲೇಖಕರು 'ಪದ ಕುಸಿಯೆ ನೆಲವಿಹುದು' ಎಂಬ ಭಾವದಿಂದ ವರ್ಣಿಸುತ್ತಿರುವುದನ್ನು ಓದುವಾಗ ಬದುಕಿನ ಏರುಪೇರಿನ ಹಾದಿಯಲ್ಲಿ ನಡೆದ ಪ್ರತಿಯೊಬ್ಬ ಓದುಗನ ಹೃದಯವೂ ಸ್ಪಂದಿಸುತ್ತದೆ. 'ಡೋನಟ್' ಎಂಬ ಸಿಹಿ ತಿಂಡಿಯನ್ನು ಉದ್ದಿನ ವಡೆಯಂಥ ತಿಂಡಿ ಎಂದುಕೊಂಡು ಚಟ್ನಿಯ ಜೊತೆ ತಿನ್ನುವ ಸನ್ನಾಹ ನಡೆಸಿದ

ಹಾಸ್ಯ ಪ್ರಕರಣದಿಂದ ಹಿಡಿದು ನಮ್ಮವರು, ತಮ್ಮವರು ಯಾರೂ ಇಲ್ಲದ ನಾಡಿನಲ್ಲಿ ಪತ್ನಿಗೆ ಕ್ಯಾನ್ಸರ್ ಆದ ಭೀಕರ ಸನ್ನಿವೇಶವನ್ನು ಎದುರಿಸುತ್ತ ಎರಡು ಮಕ್ಕಳ ತಂದೆಯಾದರೂ ತಬ್ಬಲಿ ಮಗುವಿನಂತೆ ಕಣ್ಣೀರು ಹರಿಸುತ್ತಾ ನಿಂತ ಹೃದಯವಿದ್ರಾವಕ ಪ್ರಸಂಗದವರೆಗೆ ಲೇಖಕರು ನಡೆದು ಬಂದ ಹಾದಿ ನಮ್ಮ ಹಾದಿ ಕೂಡಾ ಹೌದು ಎನ್ನಿಸಿಬಿಡುತ್ತದೆ! ಏಕೆಂದರೆ ಈ ವಿಶಿಷ್ಟ ಅನುಭವಗಳು ನಮ್ಮದಲ್ಲವಾದರೂ ಇಂತಹ ಭಾವಗಳನ್ನು ಹೊಮ್ಮಿಸುವ ಇನ್ನೆಷ್ಟೋ ಅನುಭವಗಳಲ್ಲಿ ನಾವೂ ಪಾಲುದಾರರೇ, ಬದುಕಿನ ಹಾದಿಯಲ್ಲಿ ನಾವೆಲ್ಲರೂ ಎದ್ದುಬಿದ್ದು ನಡೆದವರೇ.

ನಾಗ ಐತಾಳರೇ ಹೇಳಿದಂತೆ ಭಾರತವನ್ನು ಬಿಟ್ಟು ಬಂದ ವಲಸೆಗಾರರು ಅಮೆರಿಕಾಗೆ ಬಂದ ಇತರ ವಲಸೆಗಾರರಂತೆ ಯಾವ ರಾಜಕೀಯ ದಬ್ಬಾಳಿಕೆಗಾಗಲಿ ಅಥವಾ ಆರ್ಥಿಕ ಮುಗ್ಗಟ್ಟಿಗಾಗಲಿ ಸಿಕ್ಕು ದೇಶ ಬಿಟ್ಟು ಓಡಿ ಬಂದವರಲ್ಲ, ಭಾರತ ಇವರ ನಲ್ಮೆಯ ನಾಡು, ಇವರ ಬಾಲ್ಯದ ಸುಂದರ ನೆನಪುಗಳೆಲ್ಲ ಅಲ್ಲಿ ಅಡಕವಾಗಿವೆ. ಆದರೆ ಅಶೃಂಖಲ ಚೇತನರು ಈ ವಲಸೆಗಾರರು, ಆಚೆ ಬದಿಯ ಹುಲ್ಲು ಹೆಚ್ಚು ಹಸಿರಾಗಿದ್ದರೆ (Grass is greener on the other side) ಒಂದು ಕೈ ನೋಡಬಾರದೇಕೆ ಎನ್ನುವವರು. ಆದರೆ ಅವರು ತುಳಿಯಬಯಸಿದ ಈ ಹೊಸ ಹಾದಿ ಎಣಿಸಿದಷ್ಟು ಸುಗಮವೇನೂ ಅಲ್ಲ! ಕಲ್ಲು ಮುಳ್ಳಿನ ಹಾದಿಯಲ್ಲಿ ಜೀವನದ ಸಂಧ್ಯೆಯವರೆಗೂ ನಡೆದು ಒಮ್ಮೆ ತಿರುಗಿ ನೋಡಿದಾಗ ಲೇಖಕರಿಗೆ ಹೃದಯದಲ್ಲಿ ಹಲವು ಮಿಶ್ರ ಭಾವಗಳು ಮೂಡಿವೆ. ಅವುಗಳನ್ನೆಲ್ಲ ಯಾವ ಮುಚ್ಚುಮರೆಯೂ ಇಲ್ಲದೆ, ತೋರಿಕೆಯ ಬಿಗುಮಾನವಿಲ್ಲದೆ ಪ್ರಾಮಾಣಿಕವಾಗಿ ಓದುಗನ ಜೊತೆ ಹಂಚಿಕೊಂಡಿರುವುದೇ ಈ ಕೃತಿಯ ಹೆಗ್ಗಳಿಕೆ ಎಂದು ನನ್ನ ಅನಿಸಿಕೆ. ಇಲ್ಲಿ ನಾಗ ಐತಾಳರು ನಕ್ಕಿದ್ದಾರೆ, ಅತ್ತಿದ್ದಾರೆ, ರೇಗಿದ್ದಾರೆ, ಪಶ್ಚಾತ್ತಾಪಪಟ್ಟಿದ್ದಾರೆ, ಆತ್ಮವಿಮರ್ಶೆ ಮಾಡಿಕೊಂಡಿದ್ದಾರೆ, ಕಡೆಯಲ್ಲಿ ತಾನೊಬ್ಬ ಮನುಷ್ಯ ಮಾತ್ರ; ಸಾಮಾನ್ಯ ಮನುಷ್ಯನಲ್ಲಿ ಇರಬಹುದಾದ ಕುಂದು ಕೊರತೆಗಳು, ಅಪರಿಪೂರ್ಣತೆ ತನ್ನಲ್ಲಿಯೂ ಇವೆ, ಆದರೆ ಹೃದಯವಂತಿಕೆ ಮಾತ್ರ ತನ್ನಿಂದ ದೂರವಾಗಿಲ್ಲ ಎಂದು ತಮ್ಮ ಬರವಣಿಗೆಯ ಮೂಲಕ ತೋರಿಸಿಕೊಂಡಿದ್ದಾರೆ.

ಇನ್ನೊಂದು ವಿಷಯ, ಇತ್ತೀಚೆಗೆ ನಾಗ ಐತಾಳರ ಕಣ್ಣಿನ ದೃಷ್ಟಿ ಬಹಳಷ್ಟು ಹೋಗಿದೆ. ಒಂದು ಕಣ್ಣಿನಲ್ಲಿ ಪೂರ್ತಿಯಾಗಿ ದೃಷ್ಟಿ ಹೋಗಿದ್ದು ಇನ್ನೊಂದು ಕಣ್ಣಿನ ದೃಷ್ಟಿಯೂ ಸಾಕಷ್ಟು ಮಂದವಾಗಿದೆ, ಎಷ್ಟರಮಟ್ಟಿಗೆ ಎಂದರೆ ಪರಿಚಿತವಲ್ಲದ ಸ್ಥಳಗಳಲ್ಲಿ ನಡೆಯುವಾಗ ಬಹಳ ಎಚ್ಚರಿಕೆ ವಹಿಸಬೇಕಾಗುತ್ತದೆ. ಇದನ್ನೆಲ್ಲ ನೀವು ಅವರ ಲೇಖನದಲ್ಲೇ ಓದುತ್ತೀರಿ, ನಾನು ಇದನ್ನು ಯಾಕೆ ಪ್ರಸ್ತಾಪಿಸಿದೆ ಎಂದರೆ ಅವರ ಕ್ರಿಯಾಶೀಲತೆ, ಅದಮ್ಯ ಉತ್ಸಾಹ ಮತ್ತು ಕನ್ನಡದ ಅಭಿಮಾನಕ್ಕೆ ಒಂದು ನಿದರ್ಶನ ನೀಡುವ ಸಲುವಾಗಿ. ಈಗೀಗ ಅವರಿಗೆ ಪುಸ್ತಕಗಳನ್ನು ಓದಲು ಯಾವ ಕನ್ನಡಕವೂ ಸಾಕಾಗುತ್ತಿಲ್ಲ. ಹಾಗೆಂದು


ನಾಗ ಐತಾಳರು ತಮ್ಮ ದುರದೃಷ್ಟವನ್ನು ಹಳಿಯುತ್ತ ಮೂಲೆಯಲ್ಲಿ ಕೂರುವವರಲ್ಲ, ಒಂದು ಅರ್ಧ ಗೋಳಾಕಾರದ ಭೂತಗನ್ನಡಿಯನ್ನು ಇಟ್ಟುಕೊಂಡು ಪುಸ್ತಕದ ಪ್ರತಿಯೊಂದು ಸಾಲಿನ ಮೇಲೆ ಅದನ್ನು ಜರುಗಿಸುತ್ತಾ ಒಂದೊಂದೇ ಪದವಾಗಿ ಈಗಲೂ ಓದುತ್ತಿದ್ದಾರೆ. ಕಂಪ್ಯೂಟರ್ ಬಳಿ ಕುಳಿತು ಕನ್ನಡದ ಕೆಲಸ ನಡೆಸುತ್ತಿರುತ್ತಾರೆ. ನಾನು ಅವರಿಗೆ 'ಅದಮ್ಯ ಉತ್ಸಾಹವಿದೆ' ಎಂದು ಹೇಳಿದಾಗ 'ಅದಮ್ಯ' ಎಂದರೆ ದಮ್ಯವಾಗದ್ದು ಎಂದು ಪ್ರತ್ಯೇಕವಾಗಿ ಹೇಳಬೇಕೆ? ಲಕ್ಷ್ಮೀನಾರಾಯಣ ಭಟ್ಟರು, ಶಿವರುದ್ರಪ್ಪನವರು ಮುಂತಾದ ಕವಿಗಳನ್ನು ಈಗಲೂ ಅವರು ತಮ್ಮ ಮನೆಗೆ ಕರೆದು ಸತ್ಕರಿಸಿ ಸಾಹಿತ್ಯದ ಬಗ್ಗೆ ವಿಚಾರ ವಿನಿಮಯ ನಡೆಸುತ್ತಿರುತ್ತಾರೆ.

ಅವರ ಕಣ್ಣಿನ ಸರ್ಜರಿಯಾದ ದಿನ ಕವಿ ಲಕ್ಷ್ಮೀನಾರಾಯಣ ಭಟ್ಟರು ನಮ್ಮ ಮನೆಯಲ್ಲಿ ಇಳಿದುಕೊಂಡಿದ್ದರು. ಆಗ ಕಣ್ಣು ನೋವಿದ್ದರೂ ಸಹ ಸರ್ಜರಿ ನಡೆದ ಸಂಜೆಯೇ ನಮ್ಮ ಮನೆಗೆ ಬಂದು ಕಣ್ಣಿಗೆ ಪ್ಯಾಚ್ ಹಾಕಿಕೊಂಡೇ ಕುಳಿತು ಭಟ್ಟರ ಜೊತೆ ಸಾಹಿತ್ಯದ ಬಗ್ಗೆ ಮಾತುಕಥೆ ನಡೆಸಿದ್ದು ನನಗೆ ಇನ್ನೂ ನೆನಪಾಗುತ್ತಿದೆ.

ನರಕಕ್ ಇಳ್ಸಿ ನಾಲ್ಗೆ ಸೀಳ್ಸಿ
ಬಾಯ್ ಒಲ್ಸಾಕಿದ್ರೂನೆ
ಮೂಗ್ನಲ್ ಕನ್ನಡ್ ಪದವಾಡ್ತೀನಿ
ನನ್ ಮನ್ಸನ್ ನೀ ಕಾಣೆ

ಎಂಬ ರಾಜರತ್ನಂ ಅವರ ರತ್ನನ ಪದ ಮನುಷ್ಯ ರೂಪಿನಲ್ಲಿ ನಮ್ಮೆದುರು ಬಂದು ನಿಂತಿರಬಹುದೆ? ಎನ್ನಿಸುತ್ತದೆ ಅವರನ್ನು ನೋಡಿದರೆ, ಇಂತಹ ನಾಗ ಐತಾಳರಿಂದ ಇನ್ನಷ್ಟು ಕನ್ನಡ ಪುಸ್ತಕಗಳು ಹೊರಬರಲಿ. ಕನ್ನಡಮ್ಮನ ಒಡಲನ್ನು ಅಲಂಕರಿಸಲಿ ಎಂಬುದೇ ನನ್ನ ಹಾರೈಕೆ.

ಅಮೆರಿಕನೊಬ್ಬನ ದಿನಚರಿಯಿಂದ ಕೃತಿಗೆ ಬರೆದ ಮುನ್ನುಡಿ



'ಜೀವನ ರಹಸ್ಯ' ಒಂದು ಪರಿಚಯ

ಡಾ. ಎಸ್. ಸಿ. ಚಂದ್ರಶೇಖರಪ್ಪ

'ಜೀವನ ರಹಸ್ಯ' ಡಾ. ಐತಾಳರಿಗಿರುವ ಸಾಹಿತ್ಯಕ ನಿಷ್ಠೆ, ಶ್ರದ್ಧೆ ಮತ್ತು ಭಾಷೆಯ ಬಗ್ಗೆ ಅವರಿಗಿರುವ ಪ್ರೀತಿಯ ಫಲ. ಕಥನಕಾರರಾಗಿ, ಲೇಖಕರಾಗಿ, ಹಲವು ಕೃತಿಗಳ ಸಂಪಾದಕರಾಗಿ, 'ಕನ್ನಡ ಸಾಹಿತ್ಯ ರಂಗ, ಯು.ಎಸ್.ಎ.'ದ ಸ್ಥಾಪಕ ಸದಸ್ಯರಾಗಿ, ಪರಿಚಿತರಾಗಿರುವ ಡಾ. ಐತಾಳರು ಈ ಕೃತಿಯ ಮೂಲಕ ಕನ್ನಡ ವೈಜ್ಞಾನಿಕ ಸಾಹಿತ್ಯ ಲೋಕಕ್ಕೆ ಅಡಿ ಇಟ್ಟಿದ್ದಾರೆ. ತಮ್ಮ ಜೀವಿತದ ಅಮೂಲ್ಯ ಭಾಗವನ್ನು ವೈಜ್ಞಾನಿಕ ಸಂಶೋಧನೆ, ಅಧ್ಯಯನ ಮತ್ತು ಬೋಧನೆಗೆ ಮೀಸಲಿಟ್ಟ ಅವರ ಈ ಕೃತಿ ಒಂದು ಗುರುತರವಾದ ಕೊಡುಗೆ. ದಿನಂಪ್ರತಿ ಸಂಶೋಧನೆ ನಡೆಸುವ ತಮ್ಮ ವೃತ್ತಿಯಿಂದ ನಿವೃತ್ತರಾದ ಮೇಲೂ ತಾವು ಅಭ್ಯಸಿಸಿದ ವೈಜ್ಞಾನಿಕ ಜ್ಞಾನವನ್ನು ತಾವು ಅಭ್ಯಸಿಸಿದಷ್ಟೇ ಉತ್ಸಾಹ ಮತ್ತು ಉತ್ಕಟತೆಯಿಂದ ಇತರರೊಂದಿಗೆ ಹಂಚಿಕೊಳ್ಳಬೇಕೆನ್ನುವ ಅವರ ಬಯಕೆ, ಇತರರೂ ಜೀವಶಾಸ್ತ್ರವನ್ನು ತಮ್ಮ ಅಭ್ಯಾಸದ ವಿಷಯವನ್ನಾಗಿಸಿಕೊಳ್ಳಬಹುದು ಎಂಬ ಆಶಯ ಅವರ ಬರಹಕ್ಕಿದೆ. ಕಳೆದ ಶತಮಾನದ ಉತ್ತರಾರ್ಧ ಸಮಯದಲ್ಲಿ ಜೀವಶಾಸ್ತ್ರವು ಬೆಳವಣಿಗೆ– ಏಳಿಗೆ ಮಾಡಿದಷ್ಟು ಸುದ್ದಿ–ಸದ್ದು ಮತ್ಯಾವ ವೈಜ್ಞಾನಿಕ ಶಾಖೆಯೂ ಮಾಡಿಲ್ಲವೆಂದೇ ಹೇಳಬೇಕು. ಒಂದು ಕಾಲಕ್ಕೆ ಯಾವ ಕ್ಷೇತ್ರವು ವರ್ಣನೆ ಮತ್ತು ಅವಲೋಕನಕ್ಕೆ ಸೀಮಿತವಾಗಿತ್ತೋ ಆ ಜೀವಶಾಸ್ತ್ರವು ಈಗ ಅಣು–ಪರಮಾಣುವಿನ

(atomic-molecular) ಸ್ತರದಲ್ಲಿ ಒಂದು ಜೀವಕೋಶದಲ್ಲಿ ನಡೆಯುವ ಕ್ರಿಯೆಯನ್ನು ವೀಕ್ಷಿಸುವ ಕ್ಷೇತ್ರವಾಗಿ ಪರಿವರ್ತಿತವಾಗಿದೆ. ಒಂದು ಜೀವಕೋಶದ ಆಗು ಹೋಗುಗಳ ತಿಳಿವಳಿಕೆಯ ರಹಸ್ಯವನ್ನು ಭೇದಿಸಿ ತೆರೆದಿಡುವ ಮೂಲಕ ಇಂದಿನ ಜೀವಶಾಸ್ತ್ರವು ಮಾನವ ಜೀವಿಯ ಬಗ್ಗೆ ಅದೇ ಅರಿವನ್ನು ಮೂಡಿಸುವಲ್ಲಿ ಫಲಕಾರಿಯಾಗಿದೆ. ಈ ಹೊಸ ಆವಿಷ್ಕಾರಗಳು ವಿಜ್ಞಾನಿಗಳನ್ನು ಮಂತ್ರಮುಗ್ಧರನ್ನಾಗಿಯೂ, ಜನಸಾಮಾನ್ಯರನ್ನು ಮೂಕವಿಸ್ಮಿತರನ್ನಾಗಿಯೂ ಮಾಡಿವೆ. ಡಿ.ಎನ್.ಎ.ಯ (DNA) ಅನುವಂಶಿಕತೆಯ ಆಧಾರ ಹಾಗೂ ಅದರ ಜೋಡಿ ಎಳೆಯ ರಚನೆಯಲ್ಲಿ ಅಡಗಿರುವ ಜೀವನದ ನಿರಂತರತೆಯ ರಹಸ್ಯ ಭೇದಿಸಿದ ಐವತ್ತು ವರ್ಷದ ಒಳಗಾಗಿ ಮನುಷ್ಯನ ಪ್ರತಿಯೊಂದು ಜೀವಕೋಶದಲ್ಲಿ ಅಡಗಿರುವ 3.1 ಬಿಲಿಯನ್ ಬೇರುಗಳ (base) ಕ್ರಮಾನುಗತಿ (sequence) ರಚನಾ ವ್ಯವಸ್ಥೆಯನ್ನು ತೆರೆದಿಡಲಾಗಿದೆ.

ಪ್ರತಿ ಜೀವವರ್ಗದ ಅನ್ಯತೆಯು ಅದರ ಡಿ.ಎನ್.ಎ.ನ ಕ್ರಮಾನುಗತಿಯಲ್ಲಿರುತ್ತದೆ (DNA sequence). ಈ ಅನ್ಯತೆಯನ್ನು ಕೇವಲ ಅವುಗಳ ಆಕಾರ, ಪರಿಸರಗಳಂತಹ ಮೇಲ್ನೋಟಕ್ಕೆ ಸೀಮಿತವಾಗಿದ್ದ ವಸ್ತು ವಿಷಯ ಇಂದು ಅವುಗಳ ಡಿ.ಎನ್.ಎ.ದಲ್ಲಿರುವ ಬಿಲಿಯನ್‌ಗಟ್ಟಲೆ ಬೇರುಗಳ ಕ್ರಮಾನುಗತಿಯಲ್ಲಿ ವಿಶ್ಲೇಷಿಸಬಹುದಾಗಿದೆ. ಎಂದರೆ ಜೀವಿಗಳ ಅನ್ಯತೆಯ ಆಳ, ವಿಸ್ತಾರಗಳನ್ನು ಯಾವ ಸ್ತರದಲ್ಲಿ ಅರ್ಥೈಸಿಕೊಳ್ಳಬಹುದು ಎಂಬುದನ್ನು ಕಲ್ಪಿಸಿಕೊಳ್ಳಬಹುದು. ಮುಂಬರುವ ದಿನಗಳಲ್ಲಿ ಪ್ರತಿಯೊಬ್ಬ ವ್ಯಕ್ತಿಯ ಡಿ.ಎನ್.ಎ. ಕ್ರಮಾನುಗತಿಯನ್ನು ಕಂಡು ಹಿಡಿಯುವ ಬಲವಾದ ಸಾಧ್ಯತೆಗಳಿವೆ. ಜೀವ ಶಾಸ್ತ್ರ ಅಧ್ಯಯನದ ಪ್ರಗತಿ ಪ್ರತಿ ಮಾನವ ಜೀವಿಯ ಅಧ್ಯಯನದ ಪ್ರಗತಿ ಕೂಡ ಹೌದು. ಈ ತೆರನಾದ ಅಭ್ಯಾಸ ಕೇವಲ ಅಧ್ಯಯನಕ್ಕಾಗಿ ಮೀಸಲಿರದೆ ಇಡೀ ಮಾನವಕುಲದ ಆರೋಗ್ಯ ಮತ್ತು ಅನಾರೋಗ್ಯಕ್ಕೆ ನೇರವಾಗಿ ಸಂಬಂಧಿಸಲ್ಪಟ್ಟಿದೆ. ಈ ತೆರನಾದ ಅಧ್ಯಯನದ ಫಲವಾಗಿ ವ್ಯಕ್ತಿಯು ಯಾವ ಅನಾರೋಗ್ಯಕ್ಕೆ ತುತ್ತಾಗಬಹುದೆಂಬ ತಿಳಿವಳಿಕೆ ಮೂಲದಲ್ಲೇ ತಿಳಿಯಲು ಸಾಧ್ಯವಾಗುತ್ತದೆ. ಇದರ ಫಲವಾಗಿ ಅನಾರೋಗ್ಯದ ಚಿಕಿತ್ಸಾ ಕ್ರಮದಲ್ಲಿ ಬಹುಮಟ್ಟಿನ ಸುಧಾರಣೆ ಸಾಧಿಸಲು ಸಾಧ್ಯ. ಈ ದಿಕ್ಕಿನಲ್ಲಿ ನಾವು ಈಗಾಗಲೇ ತ್ವರಿತಗತಿಯ ಪ್ರಗತಿಯನ್ನು ಕಾಣುತ್ತಲಿದ್ದೇವೆ. ಈ ಪ್ರಗತಿಯ ಫಲವಾಗಿ ರೋಗಗಳನ್ನು ಗುರುತಿಸುವ ಮತ್ತು ಚಿಕಿತ್ಸೆ ನೀಡುವ ಹೊಸ ರೀತಿಯ ಚಿಕಿತ್ಸಾ ಕ್ರಮಗಳು ಬಹು ವೇಗದಲ್ಲಿ ಕಾಣಿಸಿಕೊಳ್ಳುತ್ತಿವೆ.

'ಜೀವನ ರಹಸ್ಯ' ಪುಸ್ತಕದಲ್ಲಿನ ಹತ್ತು ಭಾಗಗಳಲ್ಲಿ ಮೊದಲರ್ಧ ಭಾಗಗಳು ಉಳಿದರ್ಧ ಅಧ್ಯಾಯಗಳಲ್ಲಿ ಬರುವ ಅಭ್ಯಾಸಕ್ಕೆ ಅಗತ್ಯವಾದ ಚೌಕಟ್ಟನ್ನು ಒದಗಿಸಿವೆ. ಮೊದಲ ಐದು ಭಾಗಗಳಲ್ಲಿ ಜೀವ ಕೋಶಗಳ ಭಾಗಗಳು ಮತ್ತು ಕ್ರಿಯೆಗಳು, ಡಿ.ಎನ್.ಎ. ರಚನೆ, ಕ್ರಿಯೆ ಮತ್ತು ವರ್ಣತಂತುಗಳ (chromosome) ವ್ಯವಸ್ಥೆ, ಹಾಗೂ ಈ ಅಧ್ಯಯನಕ್ಕೆ ವಿಜ್ಞಾನಿಗಳು ಉಪಯೋಗಿಸುವ ತಂತ್ರಜ್ಞಾನದ ಸ್ಥೂಲ


ಪರಿಚಯವಿದೆ. ಮುಂದಿನ ಅಧ್ಯಾಯಗಳು ಜೀವಕೋಶಗಳಲ್ಲಿ ನಡೆಯುವ ಡಿ.ಎನ್.ಎ.ಗೆ ಸಂಬಂಧ ಪಟ್ಟ ಅತ್ಯಂತ ಉಪಯುಕ್ತವಾದ ವಿಷಯಗಳ ಬಗ್ಗೆ ಗಂಭೀರವಾದ ಮಾಹಿತಿಯನ್ನು ಒದಗಿಸುತ್ತವೆ. ಅವುಗಳೆಂದರೆ ಡಿ.ಎನ್.ಎ. ಹಾಗೂ ವರ್ಣ ತಂತುಗಳ ರಚನೆಗಳಲ್ಲಾದ ಬದಲಾವಣೆಗಳಿಂದಾಗಿ ಬರಬಹುದಾದ ಅನಾರೋಗ್ಯಗಳು ಹಾಗೂ ಸೋಂಕು ರೋಗಗಳಿಂದ ರಕ್ಷಿಸಲು ನಮ್ಮ ಶರೀರದಲ್ಲಿರುವ ಸಂರಕ್ಷಣಾ ಕಾರ್ಯದ ಸವಿಸ್ತಾರ ಚಿತ್ರಣ ಹಾಗೂ ಉಪಯುಕ್ತ ಮಾಹಿತಿಗಳಿವೆ. ಕೊನೆಯ ಅಧ್ಯಾಯದಲ್ಲಿ ಡಿ.ಎನ್.ಎ. ಮತ್ತು ಆರ್.ಎನ್.ಎ.ಗಳ ಅಭ್ಯಾಸದಿಂದಾಗಿ ಉಪಯುಕ್ತವಾಗಿರುವ ಅಪರಾಧ/ಫೋರೆನ್ಸಿಕ್ ವಿಜ್ಞಾನ ಹಾಗೂ ಸೊಮ್ಯಾಟಿಕ್ ಸೆಲ್ ಟ್ರಾನ್ಸ್‌ಫರ್ ಮೂಲಕ ಪ್ರಾಣಿಗಳ ಕ್ಲೋನಿಂಗ್ ವಿಷಯಗಳ ದೀರ್ಘ ಚರ್ಚೆ ಇದೆ. ಈ ಎಲ್ಲ ವಸ್ತು ವಿಷಯಗಳ ಜೋಡಣೆ ಮತ್ತು ಅನುಕ್ರಮ ಓದುಗರಿಗೆ ಜೀವಶಾಸ್ತ್ರಗಳ ಹೊಸ ವಿಷಯಗಳ ಮತ್ತು ಆವಿಷ್ಕಾರಗಳ ಬಗ್ಗೆ ಹೊಸ ನೋಟದ ಪರಿಚಯ ಮಾಡಿಸುತ್ತದೆ. ಜೀವಕೋಶಗಳಲ್ಲಿ ನಡೆಯುವ ಸಹಸ್ರಾರು ಅತ್ಯಂತ ಸಂಕೀರ್ಣವಾದ ಕ್ರಿಯೆಗಳ ವಿವರಗಳನ್ನು ಸರಳೀಕರಿಸಿ ಹೇಳುವುದು ಸುಲಭದ ವಿಷಯವಲ್ಲ. ಈ ವಿಷಯಗಳ ಅತಿ ಸೂಕ್ಷ್ಮವಾದ ವಿವರ ಕೊಡಲು ಹೋದಲ್ಲಿ ಕ್ಲಿಷ್ಟವಾದ ಹೊಸ, ಹೊಸ ವಿಚಾರಗಳನ್ನು ಪರಿಚಯಿಸಬೇಕಾಗುತ್ತದೆ. ಅದರಿಂದಾಗಿ ಸಾಮಾನ್ಯ ಸರಳವಾದ ಓದಿಗೆ ಭಂಗ ಬರಬಹುದಾದ ಸಾಧ್ಯತೆ ಇದೆ. ಹೇಳದಿದ್ದಲ್ಲಿ ಆಸಕ್ತ ಓದುಗರ ಕುತೂಹಲಕ್ಕೆ ತಡೆ ಒಡ್ಡಿದಂತಾಗುತ್ತದೆ.

ಡಾ. ಐತಾಳರು ಎರಡೂ ವರ್ಗದ ಓದುಗರಿಗೆ ಸಮತೋಲನ ಜ್ಞಾನವನ್ನು ಒದಗಿಸುವುದರಲ್ಲಿ ಸಮರ್ಥವಾಗಿ ಕಾರ್ಯ ನಿರ್ವಹಿಸಿದ್ದಾರೆ ಎನ್ನುವುದಂತೂ ನಿಜ. ಡಾ. ಐತಾಳರ ಈ ಪ್ರಾಮಾಣಿಕ ಯತ್ನ ಇದೇ ರೀತಿಯ ಇತರರ ಬರವಣಿಗೆಗೆ

ನಾಂದಿಯಾಗಲಿ ಎನ್ನುವುದು ನನ್ನ ಆಶಯ.

*

ನಾಗ ಐತಾಳರ 'ಜೀವನ ರಹಸ್ಯ' ಕೃತಿಗೆ ಬರೆದ ಮುನ್ನುಡಿ



ಅಮಿತೋತ್ಸಾಹೀ ಆಹಿತಾನಲ!

– ಮೈ. ಶ್ರೀ. ನಟರಾಜ

'ಆಹಿತಾನಲ' ಎಂಬ ಕಾವ್ಯನಾಮದ ಶ್ರೀಯುತ ನಾಗ ಐತಾಳರು ಸುಮಾರು ಮೂರು ದಶಕಗಳಿಂದ ಎಡಬಿಡದೆ ಬರಹದ ವಿವಿಧ ಪ್ರಕಾರಗಳಲ್ಲಿ ತೊಡಗಿಸಿಕೊಂಡಿರುವ ಅಮೆರಿಕದ ಕನ್ನಡಿಗರಲ್ಲಿ ಹಿರಿಯರು ಹಾಗು ಮುಖ್ಯರು, ವೃತ್ತಿಜೀವನದಲ್ಲಿ ವಿಜ್ಞಾನಿಯಾಗಿ ಉನ್ನತಮಟ್ಟದ ಸಾಧನೆಗಳನ್ನು ಮಾಡುತ್ತಲೇ ಕನ್ನಡ ಸಾಹಿತ್ಯವನ್ನು ಗಂಭೀರವಾಗಿ ಅಭ್ಯಸಿಸಿ ಅನೇಕ ಪುಸ್ತಕಗಳನ್ನು ಬರೆದು ಪ್ರಕಟಿಸಿರುವುದರ ಜೊತೆಗೆ ಹಲವಾರು ಗ್ರಂಥಗಳ ಮುಖ್ಯ ಸಂಪಾದಕತ್ವ ವಹಿಸಿಕೊಂಡ ಕೀರ್ತಿ ಇವರದ್ದು. ಕತೆ, ಕಾದಂಬರಿ, ಪ್ರಬಂಧ ಹೀಗೆ ಹಲವು ಸಾಹಿತ್ಯ ಪ್ರಕಾರಗಳ ಜೊತೆಗೆ ಜೀವರಸಾಯನ ಶಾಸ್ತ್ರವನ್ನು ಕುರಿತ ವೈಜ್ಞಾನಿಕ ಉದ್ಗ್ರಂಥವೊಂದನ್ನು ಕನ್ನಡದಲ್ಲಿ ಬರೆದ ಏಕೈಕ ವ್ಯಕ್ತಿ ಇವರು ಎಂಬುದು ಗಮನಾರ್ಹ, ಅಮೆರಿಕದಲ್ಲಿ ಕನ್ನಡ ಸಾಹಿತ್ಯಕ್ಕೋಸ್ಕರವಾಗಿಯೇ ಸ್ಥಾಪಿಸಲಾದ 'ಕನ್ನಡ ಸಾಹಿತ್ಯ ರಂಗ' ಎಂಬ ಸಂಸ್ಥೆಯ ಆಡಳಿತ ಮಂಡಲಿಯ ಹಾಲೀ ಅಧ್ಯಕ್ಷರಾಗಿ ಶ್ರೀ ಐತಾಳರು ದುಡಿಯುತ್ತಿದ್ದಾರೆ. ಹತ್ತಾರು ವರ್ಷಗಳಿಂದ ಶ್ರೀಯುತರ ಸ್ನೇಹದ ಲಾಭವನ್ನು ಪಡೆದಿರುವ ನನಗೆ ಅವರ ಮಿತಿಯಿಲ್ಲದ ಸಾಹಿತ್ಯೋತ್ಸಾಹವನ್ನು ಹತ್ತಿರದಿಂದ ಕಂಡು ಅನುಭವಿಸುವ ಅವಕಾಶ ಸಿಕ್ಕಿದೆ. ಸಹಸ್ರಚಂದ್ರ ದರ್ಶನವನ್ನು ಕಂಡ ಅಮೆರಿಕದ ಕೆಲವೇ ಕನ್ನಡ ಬರಹಗಾರರಲ್ಲಿ ಒಬ್ಬರಾದ ಶ್ರೀ ಐತಾಳರು ತಮ್ಮ ವಯಸ್ಸಿನ ಮಿತಿಯನ್ನಾಗಲೀ, ಕಣ್ಣಿನ ತೊಂದರೆಯನ್ನಾಗಲೀ ನೆಪವನ್ನಾಗಿಸದೇ ನಿರಂತರವಾಗಿ

ಗಣಕದ ಮುಂದೆ ಕುಳಿತು ತಮ್ಮ ಬರವಣಿಗೆಯ ಕೃಷಿಯನ್ನು ಮುಂದುವರಿಸಿದ್ದಾರೆ, ಹಾಗು ಇತರ ಬರಹಗಾರರಿಗೆ ಆದರ್ಶಪ್ರಾಯರಾಗಿದ್ದಾರೆ. ನಿವೃತ್ತರಾಗಿ ಕ್ಯಾಲಿಫೋರ್ನಿಯಾದಲ್ಲಿ ನೆಲೆಸಿದ ನಂತರ 'ಸಾಹಿತ್ಯಾಂಜಲಿ' ಎಂಬ ಸಂಸ್ಥೆಯನ್ನು ಸ್ಥಾಪಿಸಿ ಸಾಹಿತ್ಯ ಸಂಕಿರಣಗಳನ್ನು ಆಗಾಗ್ಗೆ ನಡೆಸುತ್ತ ತಾವೇ ಬರೆದ ಹಾಗು ಇತರರು ಬರೆದ ಲೇಖನಗಳನ್ನು ಒಟ್ಟುಗೂಡಿಸಿ ಸಂಕಲನರೂಪದಲ್ಲಿ ಪ್ರಕಟಿಸುತ್ತಾ ಬಂದಿದ್ದಾರೆ. ಹೀಗೆ, ಕನ್ನಡದ ಹಲವು ಪ್ರಮುಖ ಸಾಹಿತಿಗಳನ್ನು ಕುರಿತ ಪ್ರಬುದ್ಧ ಲೇಖನಗಳ ಸಂಕಲನಗಳನ್ನು ಪ್ರಕಟಿಸಿ ಪ್ರಖ್ಯಾತರಾಗಿದ್ದಾರೆ.

ಐತಾಳರು ಸಾಹಿತ್ಯದ ವಿದ್ಯಾರ್ಥಿಯಾಗಿ ಕನ್ನಡವನ್ನು ಕಲಿಯದಿದ್ದರೂ ಶಾಲಾ-ಕಾಲೇಜುಗಳಲ್ಲಿ ಕನ್ನಡವನ್ನು ಒಂದು ಭಾಷೆಯಾಗಿ ಅತ್ಯಂತ ಶ್ರದ್ಧೆಯಿಂದ ಅಧ್ಯಯನ ಮಾಡಿದ್ದಾರೆ ಎಂಬುದಕ್ಕೆ ಅವರ ವಿಪುಲವಾದ ಬರೆಹಗಳೇ ಸಾಕ್ಷಿ. ಇವರು ಕನ್ನಡದ ದಿಗ್ಗಜರಾದ ಕಾರಂತ, ಕುವೆಂಪು, ಮಾಸ್ತಿ, ಬೇಂದ್ರೆ, ಪುತಿನ, ರಾಜರತ್ನಂ, ಅನಂತಮೂರ್ತಿ, ಇವರುಗಳ ಸಮಗ್ರ ಸಾಹಿತ್ಯವನ್ನು ಕುರಿತ ಆಯ್ದ ಲೇಖನಗಳನ್ನು ಅಮೆರಿಕನ್ನಡಿಗರಿಂದ ಬರೆಯಿಸಿ, ಪರಿಷ್ಕರಿಸಿ, ತಮ್ಮ ಸಂಪಾದಕತ್ವದಲ್ಲಿ ಗ್ರಂಥರೂಪದಲ್ಲಿ ಪ್ರಕಟಿಸಿರುವುದು ಕನ್ನಡ ಸಾರಸ್ವತಲೋಕಕ್ಕೆ ಅತ್ಯಂತ ದೊಡ್ಡ ಕೊಡುಗೆಯಾಗಿದೆ. ಈ ಪುಸ್ತಕಗಳು ಉನ್ನತ ಮಟ್ಟದವು, ಕನ್ನಡ ಸಾಹಿತ್ಯವನ್ನು ಅಭ್ಯಸಿಸುವ ವಿದ್ಯಾರ್ಥಿಗಳಿಗೆ ಮೇಲೆ ಹೇಳಿದ ಸಾಹಿತಿಗಳನ್ನು ಪರಿಚಯಿಸುವ ಕೈಪಿಡಿಗಳಂತಿವೆ ಎಂದರೆ ಕೇವಲ ಅಭಿಮಾನದ ಮಾತಲ್ಲ. ಇಂಥ ಪ್ರಕಟಣೆಗಳಲ್ಲಿ, ಕರ್ನಾಟಕದ ಹಲವು ಪ್ರಸಿದ್ಧ ಬರಹಗಾರರೂ ಮಿತವಾಗಿ ಕೈಜೋಡಿಸಿದ್ದಾರಾದರೂ, ಅಮೆರಿಕದ ಕನ್ನಡಿಗರ ಬರೆಹಗಳೇ ಹೆಚ್ಚಿನ ಸಂಖ್ಯೆಯಲ್ಲಿವೆ. ಐತಾಳರು ಸಂಪಾದಿಸಿದ ಪುಸ್ತಕಗಳಲ್ಲಿನ ಬರಹಗಾರರಲ್ಲಿ ಭಾರತವನ್ನು ಬಿಟ್ಟು ಬಂದು ಹಲವು ದಶಕಗಳೇ ಕಳೆದಿರುವ, ಕನ್ನಡ ಸಾಹಿತ್ಯವನ್ನು ತಮ್ಮ ಓದಿನ ಮುಖ್ಯ ವಿಷಯವನ್ನಾಗಿ ಆಯ್ದುಕೊಳ್ಳದೇ ಇದ್ದವರೇ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಆದರೆ ಅವರಲ್ಲನೇಕರು ಬರೆದ ಹಲವು ಲೇಖನಗಳು ಕರ್ನಾಟಕದ ಕನ್ನಡ ಸಾಹಿತ್ಯದ ವಿದ್ಯಾರ್ಥಿಗಳೊಂದಿಗೆ ಸ್ಪರ್ಧೆಗೆ ನಿಲ್ಲುವ ಮಟ್ಟದಲ್ಲಿವೆ ಎಂದು ಕರ್ನಾಟಕದ ಖ್ಯಾತ ಬರಹಗಾರರೇ ಹೇಳಿದ್ದಾರೆ ಎಂದ ಮೇಲೆ ಹೆಚ್ಚು ಮಾತೇನು! ಇದನ್ನೆಲ್ಲ ನನ್ನ ಮುನ್ನುಡಿಯಲ್ಲಿ ಪ್ರಸ್ತಾಪಿಸಲು ಕಾರಣವೇನೆಂದರೆ, ಶ್ರೀ ನಾಗ ಐತಾಳರು ತಾವು ಬರೆದಿರುವುದಷ್ಟೇ ಅಲ್ಲದೇ ಇತರರು ಬರೆಯಲು ಪ್ರೇರಕರಾಗಿದ್ದಾರೆ ಮತ್ತು ಇತರರು ಬರೆದದ್ದನ್ನು ಪ್ರಕಟಿಸಿ ಹಂಚುವ ಔದಾರ್ಯವನ್ನೂ ತೋರಿದ್ದಾರೆ ಎಂಬುದನ್ನು ಸ್ಮರಿಸಿಕೊಳ್ಳಲು.

ಇನ್ನು ಪ್ರಸ್ತುತ 'ಸಾಹಿತ್ಯ ಸ್ಪಂದನ' ಪುಸ್ತಕದ ಬಗ್ಗೆ ಎರಡು ಮಾತುಗಳನ್ನು ಹೇಳದೇ ಈ ಮುನ್ನುಡಿ ಸಂಪೂರ್ಣವಾಗದು. ಇತರ ಪುಸ್ತಕಗಳಲ್ಲಿ ಈಗಾಗಲೆ ಅಚ್ಚಾಗಿರುವ ಇವರ ಪ್ರಬಂಧಗಳ ಸರಮಾಲೆ, ಈ ಪುಸ್ತಕ. ಇವರು ಸಂಪಾದಿಸಿದ ಇತರ ಗ್ರಂಥಗಳಲ್ಲಿ

ಒಂದೊಂದೇ ಇದ್ದ ಐತಾಳರ ಪ್ರಬಂಧಗಳು ಇಲ್ಲಿ ಒಟ್ಟಾಗಿ ಸೇರಿಕೊಂಡಿವೆ. ಕವಿಗಳನ್ನು ಕಾದಂಬರಿಕಾರರನ್ನು ಸಹೃದಯರಾಗಿ ನೋಡಿ ವಿಮರ್ಶಾತ್ಮಕವಾಗಿ ಬರೆದಿರುವ ಪ್ರಬಂಧಗಳು ಐತಾಳರ ಸಮತ್ವವನ್ನು ಪ್ರದರ್ಶಿಸುವುದರ ಜೊತೆಗೆ ಅವರ ಓದಿನ ಹರಹು ಮತ್ತು ಆಳವನ್ನು ಸಹ ಪ್ರದರ್ಶಿಸುತ್ತವೆ. ಅವರು ಆಯ್ದುಕೊಂಡಿರುವ ಕನ್ನಡ ದಿಗ್ಗಜರೋ ಅತಿರಥ ಮಹಾರಥರು! ಈ ಮೊದಲೇ ತಿಳಿಸಿದಂತೆ ಕಾರಂತ ಮುಂತಾದವರೇ ಅಲ್ಲದೆ, ಡಿವಿಜಿ, ಕೆ. ಎಸ್. ನರಸಿಂಹಸ್ವಾಮಿ, ಜಿಎಸ್ಸೆಸ್ ಮೊದಲಾದ ವರಕವಿಗಳ ಸಾಹಿತ್ಯದೊಂದಿಗೆ ಸಹ ಐತಾಳರು ಸ್ಪಂದಿಸಿದ್ದಾರೆ. ಇಂಥಾ ಉದ್ದಾಮ ಸಾಹಿತಿಗಳ ಬಗ್ಗೆ ಅದೆಷ್ಟೋ ಪಂಡಿತರು ಬರೆದು ಇತರರಿಗೆ ಏನೇನೂ ಉಳಿಯದಂತೆ ಮಾಡಿಬಿಟ್ಟಿದ್ದಾರೆ. ಹಾಗಿದ್ದರೂ ಇಪ್ಪತ್ತನೇ ಶತಮಾನದ ಖ್ಯಾತ ಕನ್ನಡ ಬರಹಗಾರರ ಕತೆ, ಕಾದಂಬರಿ ಮತ್ತು ಕವಿತೆಗಳನ್ನು ನಿರ್ಭಿಡೆಯಿಂದ ಐತಾಳರು ವಿಶ್ಲೇಶಿಸಿದ್ದಾರೆ, ಸದ್ಭಾವದಿಂದ ಕೂಡಿದ ವಿಮರ್ಶೆಯನ್ನೂ ಸಮರ್ಥವಾಗಿಯೇ ಮಾಡಿದ್ದಾರೆ, ಅತ್ಯಂತ ಮೃದುವಾಗಿ ಸ್ಪಂದಿಸಿದ್ದಾರೆ. ಈ ಕಾರಣಗಳಿಂದ 'ಸಾಹಿತ್ಯ ಸ್ಪಂದನ' ಎಂಬ ಹೆಸರು ಐತಾಳರ ಪುಸ್ತಕಕ್ಕೆ ಅನ್ವರ್ಥನಾಮವಾಗಿದೆ.

ಸಾಹಿತ್ಯ ಸ್ಪಂದನದಷ್ಟೇ ಮುಖ್ಯವಾದ ಮತ್ತೊಂದು ಅಂಶ ಐತಾಳರ ಬರೆಹಗಳಲ್ಲಿ ಕಾಣಬರುವುದು ಏನೆಂದರೆ, ತಾವು ಕಂಡ ಗೀತನಾಟಕ, ನರ್ತನ ಅಥವಾ ಮತ್ತಾವುದೋ ಸುಂದರವಾದ ಕಾರ್ಯಕ್ರಮ ಅವರ ಮನಸ್ಸನ್ನು ಸೂರೆಗೊಂಡಾಗಿನ ಸಿಹಿ ಅನುಭವಗಳನ್ನು ಓದುಗರೊಂದಿಗೆ ಅತ್ಯಂತ ಆಪ್ತವಾಗಿ ಹಂಚಿಕೊಳ್ಳುವ ಅವರ ಮೋಡಿ. ಹಿರಿಯ ಸಾಹಿತಿಗಳನ್ನು ತಮ್ಮ ಮನೆಯಲ್ಲಿ ಆಹ್ವಾನಿಸಿ ಅವರೊಂದಿಗೆ ನಡೆಸಿದ ಚರ್ಚೆಗಳ ಹೂರಣವನ್ನು ಗೆಳೆಯರೊಂದಿಗೆ ಹಂಚಿಕೊಳ್ಳುವ ಪರಿ. ಉದಾಹರಣೆಗೆ, ಪ್ರೊ. ಬರಗೂರು ರಾಮಚಂದ್ರಪ್ಪ 'ರನ್ನನ ಗದಾಯುದ್ಧ' ಕಾವ್ಯದ ಬಗ್ಗೆ ಮಾಡಿದ ಭಾಷಣದ ವೈಖರಿಯನ್ನು ವಿವರಿಸುವ ಪ್ರಬಂಧವನ್ನು ಓದಿದವರಿಗೆ ನನ್ನ ಮಾತಿನ ಅರ್ಥವಾದೀತು. ಹಿಂದೆಂದೋ ಕೇಳಿದ ಪಾಠದ ನೆನಪುಗಳು, ಮತ್ತೆಂದೋ ಓದಿದ ಬಿ.ಎಂ.ಶ್ರೀ. ಅಥವಾ ಕುವೆಂಪು ಅವರ ಬರಹಗಳ ತುಲನೆ ಎಲ್ಲವನ್ನೂ ಸಮಯೋಚಿತವಾಗಿ ಸೇರಿಸುವ ಅವರ ಕ್ರಮ ಮೆಚ್ಚುವಂತಹುದು.

ಇಲ್ಲಿರುವ ಲೇಖನಗಳಲ್ಲಿ ಐತಾಳರಿಗೆ ಕಾವ್ಯದ ಬಗ್ಗೆ (ಗದ್ಯಕ್ಕಿಂತ ಹೆಚ್ಚಾಗಿ!) ಇರುವ ಒಲವು ಎದ್ದು ಕಾಣುತ್ತದೆ. ಬೇಂದ್ರೆ, ಪುತಿನ, ಕೆ.ಎಸ್.ನ, ಜಿಎಸ್ಸೆಸ್ ಮುಂತಾದವರ ಕಾವ್ಯಗಳನ್ನು ಚರ್ಚಿಸುತ್ತ ಐತಾಳರು 'ಕಳೆದೇ ಹೋಗುತ್ತಾರೆ' ಎನ್ನುವಷ್ಟರ ಮಟ್ಟದಲ್ಲಿ ಮಗ್ನರಾಗುತ್ತಾರೆ, ಅಂಥ ತನ್ಮಯತೆಯಲ್ಲೂ ತಾವು ಬರೆಯ ಹೊರಟ ಮುಖ್ಯ ವಸ್ತುವಿಗೆ ತೊಂದರೆಯಾಗದಂತೆ ಎಚ್ಚರಿಕೆ ವಹಿಸುತ್ತಾ, ಅತ್ತಿತ್ತ ಓಡಾಡಿದ್ದ ಮನಸ್ಸನ್ನು ಮತ್ತೆ ಕೇಂದ್ರದ ಹತ್ತಿರಕ್ಕೆ ತಂದಿಡುತ್ತಾರೆ. ಈ ಮಾತಿಗೆ ದೃಷ್ಟಾಂತವನ್ನು ಬೇಂದ್ರೆ, ಪುತಿನ, ಕೆ.ಎಸ್.ನ., ಡಿ.ವಿ.ಜಿ., ಜಿಎಸ್ಸೆಸ್ ಮೊದಲಾದ ಕವಿಗಳನ್ನು ಕುರಿತು ಐತಾಳರು


ಬರೆದ ಪ್ರಬಂಧಗಳಲ್ಲಿ ಅವರು ಮೂಲವಸ್ತುವಿನ ಸುತ್ತ ಸುತ್ತಾಡಿ ಪುನಃ 'ಕೇಂದ್ರದೃಷ್ಟಿ'ಯೆಡೆಗೆ ಹಿಂದಿರುಗುವ ಪರಿಯನ್ನು ಕಾಣಬಹುದಾಗಿದೆ (ಉದಾಹರಣೆಗೆ, 'ಬೇಂದ್ರೆ ಮತ್ತು ಬೆಳಕು' ಇತ್ಯಾದಿ). ಐತಾಳರು ತನ್ಮಯರಾಗುವ ಬಗ್ಗೆ ಹೇಳುವುದಾದರೆ, ಅವರು ಪುತಿನ ಅವರ 'ಗೋಕುಲ ನಿರ್ಗಮನ'ದಲ್ಲಿ ಎಷ್ಟು ಕಳೆದುಹೋಗಿದ್ದರೆಂದರೆ, ರಾಧೆಯನ್ನು ತೊರೆದು ಹೋಗುವ ಕೃಷ್ಣನ ಕಥೆಯನ್ನು ಹಿಗ್ಗಿಸಿ ಐತಾಳರು ಒಂದು ಕಿರುಗಾದಂಬರಿಯನ್ನೇ ('ಕಾದೇ ಇರುವಳು ರಾಧೆ') ಬರೆದಿರುವ ವಿಷಯವನ್ನು ನಾವಿಲ್ಲಿ ಸ್ಮರಿಸಿಕೊಳ್ಳಬಹುದು!

ಮೆಚ್ಚಬಹುದಾದ ಹಲವು ಲೇಖನಗಳು ಈ ಪುಸ್ತಕದಲ್ಲಿವೆಯಾಗಿ ಯಾವುದರ ಬಗ್ಗೆ ಚರ್ಚಿಸಬೇಕೆಂದು ತೀರ್ಮಾನಿಸುವುದು ಕಷ್ಟವಾಗಿದೆ. ಮಾಸ್ತಿಯವರ ಕತೆಗಳ ಮತ್ತು ಅಲ್ಲಿನ ಪಾತ್ರಗಳನ್ನು ಕುರಿತ ಲೇಖನ ಐತಾಳರ ಓದಿನ ಹರಹನ್ನು ಸೂಚಿಸಿದರೆ, ಅನಂತಮೂರ್ತಿಯವರ ಎರಡು ಮುಖ್ಯ ಕಾದಂಬರಿಗಳಾದ 'ಸಂಸ್ಕಾರ' ಮತ್ತು 'ದಿವ್ಯ' ಇವುಗಳನ್ನು ತುಲನಾತ್ಮಕವಾಗಿ ವಿಮರ್ಶಿಸಿ ಬರೆದಿರುವ ಪ್ರಬಂಧ ಇವರ ಓದಿನ ಆಳವನ್ನು ಸೂಚಿಸುತ್ತದೆ. 'ಸಂಸ್ಕಾರ'ದಿಂದ 'ದಿವ್ಯ'ದೆಡೆಗೆ ನಡೆದುಬಂದ ಕಾದಂಬರಿಕಾರರ ಮನಸ್ಸಿನಲ್ಲಾದ 'ದಿವ್ಯಸಂಸ್ಕಾರ'ವನ್ನು (ನಡುವಿನ 'ಅವಸ್ಥೆ'ಯ 'ಭವ'ವನ್ನೂ ಒಳಗೊಂಡಂತೆ!) ದಿಟ್ಟವಾಗಿ ಆದರೂ ಮೃದುವಾಗಿ ಗುರುತಿಸುವ ಐತಾಳರ ಲೇಖನಕ್ಕೆ ತಲೆದೂಗಲೇಬೇಕಾಗುತ್ತದೆ!

ಮೊದಲ ಮಾತು ದೀರ್ಘವಾಗುತ್ತಿದೆ, ಆದರೆ ನನಗೆ ಹಿತವೆನಿಸಿದ 'ಯಾರು ಹಾಡಿದರೂ ನಮ್ಮ ತಾಯಿ ಹಾಡಿದಂತಿಲ್ಲ' (ನನಗೂ ನನ್ನ ತಾಯಿಯ ಬಗ್ಗೆ ಹಾಗೇ ಅನ್ನಿಸುವುದರಿಂದಲೋ ಏನೋ?) ಎಂಬ ಅವರ ಲೇಖನದ ವಿಷಯನ್ನು ಪ್ರಸ್ತಾಪಿಸದೇ ಈ ಮುನ್ನುಡಿಯನ್ನು ಮುಗಿಸಲಾರೆ. ಅಲ್ಲಿ ಅಡಕವಾಗಿರುವ ಐತಾಳರ ಮಾತೃಪ್ರೇಮ, ಅವರಿಗೆ ಬಾಲ್ಯದಲ್ಲಿ ದೊರಕಿರಬಹುದಾದ ತಾಯ ಮಮತೆ, ಜೊತೆಗೆ ಬಾಲ್ಯದ ವಾತಾವರಣದಿಂದಲೇ ಸಮೃದ್ಧವಾಗಿ ಬೆಳೆದ ಅವರ ಜನಪದ ಗೀತೆಗಳ ಒಲವು ಇವೆಲ್ಲ ಹೇಗೆ ಅವರ ವ್ಯಕ್ತಿತ್ವದ ವಿಕಾಸಕ್ಕೆ ಕಾರಣವಾಗಿವೆ ಎಂದು ಊಹಿಸಲು ಸಾಧ್ಯವಿದೆ. ಅವರ ಇತರ ಗ್ರಂಥಗಳಿಗೆ ದೊರೆತ ಆದರದಂತೆ, ಈ ಪುಸ್ತಕವನ್ನೂ ವಿಶ್ವದಾದ್ಯಂತ ಹರಡಿರುವ ಕನ್ನಡಿಗರು ಅತ್ಯಂತ ಅಭಿಮಾನದಿಂದ ಸ್ವಾಗತಿಸಲಿ ಎಂದು ಆಶಿಸುತ್ತಾ ಓದುಗರನ್ನು ಈ ಗ್ರಂಥಕ್ಕೆ ಆಹ್ವಾನಿಸುತ್ತೇನೆ. ಹಿರಿಯ ಮಿತ್ರರಾದ ಶ್ರೀ ನಾಗ ಐತಾಳರಿಗೆ ನುಡಿನಮನವನ್ನು ಸಲ್ಲಿಸುತ್ತ, ಕಿರಿಯನಾದ ನನ್ನನ್ನು ತಮ್ಮ ಪುಸ್ತಕಕ್ಕೆ ಮುನ್ನುಡಿ ಬರೆಯಲು ಕೇಳಿ ಗೌರವಿಸಿದ್ದಕ್ಕಾಗಿ ವಂದಿಸುತ್ತೇನೆ ಮತ್ತು ಈ ಯೋಗವನ್ನು ಅತ್ಯಂತ ಆನಂದದಾಯಕವಾದ ಕರ್ತವ್ಯವೆಂದು ಭಾವಿಸುತ್ತೇನೆ.

ಸಾಹಿತ್ಯ ಸ್ಪಂದನ ಕೃತಿಗೆ ಬರೆದ ಮುನ್ನುಡಿ





ನಾಗ ಐತಾಳರ ಎರಡು ಕೃತಿಗಳು

–ಮೈ. ಶ್ರೀ. ನಟರಾಜ್

ಶಿವರಾಮ ಕಾರಂತರ ಊರಿನವರಾದ ನಾಗ ಐತಾಳರು ಅಮೆರಿಕದಲ್ಲಿ ನೆಲೆಸಿರುವ ಕನ್ನಡಿಗರಲ್ಲಿ ಹಿರಿಯರು. ಜೀವ–ರಸಾಯನಶಾಸ್ತ್ರದಲ್ಲಿ ಉನ್ನತ ವ್ಯಾಸಂಗ ಮತ್ತು ಸಂಶೋಧನೆ ನಡೆಸಿ ಸಾರ್ಥಕ ವೃತ್ತಿಜೀವನ ಮುಗಿಸಿ ಈಗ ವಿಶ್ರಾಂತರಾಗಿದ್ದಾರೆ. ಅಮೇರಿಕಾ ಮತ್ತು ಭಾರತಗಳ ನಡುವೆ ಓಡಾಡುತ್ತ, ಇಲ್ಲಿ ತಮ್ಮ ಮಕ್ಕಳು ಮೊಮ್ಮೊಕ್ಕಳೊಂದಿಗೆ ಒಂದಿಷ್ಟು ದಿನ ಕಳೆದರೆ, ಅಲ್ಲಿ ಕನ್ನಡ ನಾಡಿನಲ್ಲಿ ತಮ್ಮ ನೆಂಟರಿಷ್ಟರ ನಡುವೆ ಒಂದಿಷ್ಟು ದಿನಗಳೆಯುತ್ತಾ ನೆಮ್ಮದಿಯ ಜೀವನ ನಡೆಸುತ್ತಿದ್ದಾರೆ. ಮೊದಲಿನಿಂದಲೂ ಕನ್ನಡದಲ್ಲಿ ಬರೆಯುವ ಹವ್ಯಾಸ ಇವರಿಗೆ ಇದ್ದೇ ಇತ್ತು. ಈಗ ವೃತ್ತಿಜೀವನದಿಂದ ಬಿಡುವು ಪಡೆದ ಮೇಲೆ ಬರವಣಿಗೆ ಹೆಚ್ಚು ಹೆಚ್ಚು ತೀವ್ರಗೊಳ್ಳುತ್ತಾ ಬಂದಿದೆ.

2002ರಲ್ಲಿ ಅವರು ಪ್ರಕಟಿಸಿದ 'ಅಮೆರಿಕನ್ನಡಿಗನೊಬ್ಬನ ದಿನಚರಿಯಿಂದ (ವಸಂತ ಪ್ರಕಾಶನ, ಬೆಂಗಳೂರು) ಅವರ ಆತ್ಮಕಥೆ. ಅದಕ್ಕೂ ಮುನ್ನ 2000ದಲ್ಲಿ ಕಾರಂತ ಚಿಂತನ (ಅಕ್ಷರ ಪ್ರಕಾಶನ, ಹೆಗ್ಗೋಡು) ಎಂಬ ಗ್ರಂಥದ ಸಂಪಾದಕರಾಗಿ ಅಮೆರಿಕನ್ನಡಿಗ ಲೇಖಕರ ಬರಹಗಳನ್ನು ಬೆಳಕಿಗೆ ತಂದವರಿವರು. ಅದೇ ರೀತಿ ವರಕವಿ ಪುತಿನ ಬಗ್ಗೆ ಯದುಗಿರಿಯ ಬೆಳಕು ('ಸಾಹಿತ್ಯಾಂಜಲಿ'–ಕ್ಯಾಲಿಫೋರ್ನಿಯ ಮತ್ತು 'ಅಭಿನವ'–ಬೆಂಗಳೂರು – ಜಂಟಿ ಪ್ರಕಟಣೆ, 2004), ಜ್ಞಾನಪೀಠ ಪುರಸ್ಕೃತ ಮಾಸ್ತಿಯವರ

ಬಗ್ಗೆ ಕನ್ನಡದಮರಚೇತನ (ಸಾಹಿತ್ಯಾಂಜಲಿ– ಅಭಿನವ, 2006) ಗ್ರಂಥಗಳ ಸಂಪಾದನೆ ಇವರ ಹೆಗ್ಗಳಿಕೆ. ಕನ್ನಡ ಸಾಹಿತ್ಯ ರಂಗದ ಎಲ್ಲಾ ಪ್ರಕಟಣೆಗಳಿಗೂ ಇವರ ಸಹಕಾರ, ಸಹಯೋಗ ಮತ್ತು ಸಹಸಂಪಾದಕತ್ವ. ಇವೇ ಅಲ್ಲದೇ ಇನ್ನೂ ಹಲವು ಯೋಜನೆಗಳು ಇವರ ರಚನಾತ್ಮಕ ಮನಸ್ಸಿನಲ್ಲಿ ರೂಪುಗೊಳ್ಳುತ್ತಲೇ ಇವೆ. ಇವುಗಳ ನಡುವೆ, 2007ರಲ್ಲಿ ಸಾಹಿತ್ಯಾಂಜಲಿ ಮತ್ತು ಬೆಂಗಳೂರಿನ ಅಭಿನವ ಜೊತೆಗೂಡಿ ಪ್ರಕಟಿಸಿರುವ ಇವರ ಎರಡು ಪುಸ್ತಗಳು ಲೋಕಾರ್ಪಣೆಗೊಂಡಿವೆ. ನಿವೃತ್ತಿಯ ನಂತರ ಪೂರ್ವತೀರದಿಂದ ಪಶ್ಚಿಮತೀರಕ್ಕೆ ಓಡಾಡುತ್ತಿರುವ ಐತಾಳರ ಜೀವನದ ಪ್ರಧಾನ ರಂಗಸ್ಥಳ ಚಿಕಾಗೋ ನಗರವಾಗಿತ್ತು. ಅಲ್ಲಿದ್ದಾಗ ಕನ್ನಡ ಸಾಹಿತ್ಯಕ್ಕೆ ಸಂಬಂಧಪಟ್ಟಂತೆ ವಿವಿಧ ಚಿಕಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಿ ರಚನಾತ್ಮಕ ಬರವಣಿಗೆಯಲ್ಲಿ ತೊಡಗಿ, 'ಆಹಿತಾನಲ' ಎಂಬ ಕಾವ್ಯನಾಮದಿಂದ ಪ್ರಸಿದ್ಧರಾಗಿರುವರು. ಇವರ ಇತ್ತೀಚಿನ ಕಟ್ಟುಕಥೆಗಳ ಸಂಗ್ರಹ (ಒಂದಾನೊಂದು ಕಾಲದಲ್ಲಿ) ಮತ್ತು ಕಿರುಗಾದಂಬರಿ (ಕಾದೇ ಇರುವಳು ರಾಧೆ) ಸಾಹಿತ್ಯಾಂಜಲಿ ಮತ್ತು ಅಭಿನವ ಸಂಸ್ಥೆಗಳ ಜಂಟಿ–ಪ್ರಕಟಣೆ 2007ರಲ್ಲಿ ಲೋಕಾರ್ಪಣೆಗೊಂಡಿವೆ.

ಒಂದಾನೊಂದು ಕಾಲದಲ್ಲಿ

ಇದೊಂದು ಕಟ್ಟು ಕಥೆಗಳ ಸಂಕಲನ. ಈ ಪುಸ್ತಕದ ಮುಖ್ಯ ಆಕರ್ಷಣೆ ಎಂದರೆ ಇದು ಸುಲಭವಾಗಿ ಓದಿಸಿಕೊಳ್ಳುವ ಪುಸ್ತಕ. ಒಂದೇ ಸಲಕ್ಕೆ ಓದಬೇಕಾಗಿಲ್ಲ, ಅದೊಂದು ಅನುಕೂಲ. ಸುಮಾರು ಎಪ್ಪತ್ತಕ್ಕೂ ಹೆಚ್ಚು ಕಥೆಗಳಿವೆ, ಈ ಸಂಗ್ರಹದಲ್ಲಿ. ಇವು ನನ್ನ ಸ್ವಂತ ಕಥೆಗಳಲ್ಲ ಎಂದು ಮೊದಲೇ ತಿಳಿಸಿ ತಾವು ಕೇಳಿದ, ಓದಿದ ಕಥೆಗಳನ್ನು ತಮ್ಮದೇ ಆದ ಭಾಷೆಯಲ್ಲಿ ಸ್ವಾರಸ್ಯಕರವಾಗಿ ಮತ್ತೆ ಹೇಳಿದ್ದಾರೆ. ಈ ಕಥೆಗಳೆಲ್ಲವೂ ನಾವೂ ಅಜ್ಜ, ಅಜ್ಜಿ, ಅಪ್ಪ, ಅಮ್ಮ, ಅಥವಾ ಶಾಲಾ ಉಪಾಧ್ಯಾಯರಿಂದ ಕೇಳಿರಬಹುದಾದ ಕಥೆಗಳೇ. ಆದರೂ ಪ್ರತಿಯೊಬ್ಬರಿಗೂ ಹಲವಾದರು ಹೊಸ ಕಥೆಗಳು ಇಲ್ಲಿವೆ.

ಕಾಗೆ–ಗುಬ್ಬಿ, ಕಾಗೆ–ನರಿ, ಕಾಗೆ–ಸರ್ಪ, ಭೂತ–ಬೇತಾಳ, ದೆವ್ವ–ಪಿಶಾಚಿ, ರಾಜಕುಮಾರ–ರಾಜಕುಮಾರಿ, ಮುದುಕ–ಮುದುಕಿ, ರಾಜ–ಮಂತ್ರಿ, ಹೀಗೇ ಒಂದೇ ಎರಡೇ ಇಲ್ಲಿರುವ ಪಾತ್ರಗಳು? ಪಂಚತಂತ್ರದ ಕಥೆಗಳು ಇಲ್ಲಿ ಸುಳಿಯುತ್ತವೆ. ಚಂದಮಾಮಾದ ಕಥೆಗಳು ಇಲ್ಲಿ ಹೊಳೆಯುತ್ತವೆ. ಅಡಗೂಲಜ್ಜಿಯ ಕಥೆಗಳು ತಮ್ಮದೇ ಆದ ಸೌಂದರ್ಯವನ್ನು ಪಡೆದು ಇಲ್ಲಿ ಪುನರ್ಜನ್ಮ ಪಡೆಯುತ್ತವೆ. ಇವುಗಳನ್ನು ಓದುವಾಗ, ನಾವು ಮಕ್ಕಳ ಹಾಗೆ ಹಸುಳೆಯ ಮನಸ್ಸಿನಿಂದ ಓದಬೇಕು. ಇಲ್ಲದಿದ್ದರೆ, ಕಥೆ ರುಚಿಸುವುದಿಲ್ಲ. ನಮಗೆ ಗೊತ್ತಿರುವ ಕಥೆಯೇ ಆದರೂ ಅಂತ್ಯ ಗೊತ್ತಿಲ್ಲ ಎನ್ನುವಂತೆ ನಟಿಸುತ್ತಾ ಸಾಗಬೇಕು. ಅಜ್ಜ–ಅಜ್ಜಿ ಅಥವಾ ಅಪ್ಪ–ಅಮ್ಮ ಹೇಳಿದ ಕಥೆಗಳನ್ನೇ ಎಷ್ಟೊಂದು ಸಾರಿ ಹೇಳುತ್ತಿದ್ದರು, ನಾವು ಬೇಸರವಿಲ್ಲದೇ ತದೇಕಚಿತ್ತರಾಗಿ ಕೇಳುತ್ತಿರಲಿಲ್ಲವೇ? ಈಗಲೂ ಅಂಥಾ ಕಥೆಗಳನ್ನು ಬರೆಯಲು ಮತ್ತು ಓದಲು ಸ್ವಾರಸ್ಯ ಇರುವುದನ್ನು ನೋಡಿದರೆ, ಮನುಷ್ಯನಿಗೆ ಕಥೆಯನ್ನು ಹೇಳುವ ಮತ್ತು

ಕೇಳುವ ಚಟ ವಯಸ್ಸಾದಂತೆ ಹೆಚ್ಚಾಗುತ್ತದೆಯೇ ಹೊರತು ಕಮ್ಮಿಯಾಗುವುದಿಲ್ಲ ಎನ್ನಿಸುತ್ತದೆ. ಆ ರೀತಿಯ ಆಕರ್ಷಕ ಶಕ್ತಿ ಅಡಗಿದೆ ಇಲ್ಲಿ ಸಂಗ್ರಹವಾಗಿರುವ ಕಥೆಗಳಲ್ಲಿ. ಹಳೆಯ ಕಥೆಗಳನ್ನು ಹೊಸದಾಗಿ ಹೇಳಿದ, ನೆನಪಿಗೆ ತಂದ ಐತಾಳರಿಗೆ ಓದುಗರ ಮೆಚ್ಚುಗೆ ಸಿಕ್ಕುತ್ತದೆ. ಮನಸ್ಸಿಗೆ ಮುದವನ್ನು ಕೊಟ್ಟ ಅನೇಕ ಕಥೆಗಳು ಇಲ್ಲಿದ್ದರೂ ಅವುಗಳಲ್ಲಿ ನನ್ನನ್ನು ಸೆಳೆದ ಒಂದು ಕಥೆಯ ಬಗ್ಗೆ ಬರೆಯದೇ ಈ ಪುಸ್ತಕದ ವಿಚಾರವನ್ನು ಮುಗಿಸಲಾರೆ. ಅದರ ಹೆಸರು ರಾಮ'ನಾತ'ಪುರ. ಅದು ನನ್ನ ಗಮನವನ್ನು ಸೆಳೆದದ್ದಕ್ಕೆ ಕಾರಣಗಳು ಎರಡು: ಒಂದು ಇದನ್ನು ಐತಾಳರಿಗೆ ಹೇಳಿದವರು ಚಿಕಾಗೋ ವಿಶ್ವವಿದ್ಯಾನಿಲಯದಲ್ಲಿದ್ದ ಸುಪ್ರಸಿದ್ಧ ಕಥೆಗಾರ ಏ. ಕೆ. ರಾಮಾನುಜನ್; ಇನ್ನೊಂದು ಕಥೆಯಲ್ಲಿ ಬರುವ ಊರು ಹಾಸನ ಜಿಲ್ಲೆಯಲ್ಲಿರುವ ರಾಮನಾಥಪುರಕ್ಕೆ ಸಂಬಂಧಪಟ್ಟದ್ದು. ಸೀತೆಯನ್ನು ಹುಡುಕುತ್ತಾ ಹುಡುಕುತ್ತಾ ಬಸವಳಿದು ಬೆವರಿ ಮೈಯೆಲ್ಲಾ ಕೊಳಕಾಗಿ ಸ್ನಾನಕ್ಕೆಂದು ನೀರನ್ನು ಹುಡುಕುತ್ತಾರೆ, ರಾಮ–ಲಕ್ಷ್ಮಣರು. ಕೊನೆಗೆ ಒಂದು ಹಳ್ಳಿಯಲ್ಲಿ ಒಂದು 'ಸರೋವರ'ವನ್ನು ಕಂಡು ಜಳಕಮಾಡಲು ಉತ್ಸುಕರಾಗುತ್ತಾರೆ. ಭ್ರಾತೃಭಕ್ತ ಲಕ್ಷ್ಮಣನಾದರೋ, ಅಣ್ಣನಿಗೆ ಹಣ್ಣು ಹಂಪಲು ತರುವುದಾಗಿ ಹೇಳಿ ಅಣ್ಣನಿಗೆ ಮೊದಲು ಸ್ನಾನದ ಅವಕಾಶ ಕೊಡುತ್ತಾನೆ. ತನ್ನ ಮೈಯ್ಯಿನ ಕೊಳೆಯನ್ನೆಲ್ಲಾ ತೊಳೆದು ಇಡೀ ಸರೋವರದ ನೀರು ನಾರುವಂತೆ ಮಾಡುತ್ತಾನೆ, ಶ್ರೀರಾಮ. ತಮ್ಮ ಹಿಂದಿನಿಂದ ಬಂದು ನೀರಿನಲ್ಲಿ ಧುಮುಕಿದರೆ ತಾಳಲಾರದಷ್ಟು 'ನಾತ,' ಲಕ್ಷ್ಮಣ ಮೂಗು ಮುಚ್ಚಿಕೊಳ್ಳುತ್ತಾನೆ. ರಾಮನಿಂದ ನಾತವನ್ನು ಪಡೆದ ಆ ಸರೋವರಕ್ಕೆ ರಾಮನಾತ ಸರೋವರವೆಂದೂ ಆ ಹಳ್ಳಿಗೆ ರಾಮನಾತಪುರವೆಂದೂ ಹೆಸರಾಗುತ್ತದಂತೆ. ಕಾಲಕ್ರಮೇಣ ಯಾರೋ (ಸಂಸ್ಕೃತ ಪಂಡಿತರು) ಇದನ್ನು ರಾಮನಾಥಪುರವೆಂದು ತಿದ್ದಿರಬೇಕು ಎಂಬುದು ಕಥೆಯ ಸಾರಾಂಶ.

ಈ ಕಥೆಯನ್ನೋದಿ ರಾಮಾನುಜನ್ ಅವರ ಮೇಲೆ ಸ್ವಲ್ಪ ಕೋಪ ಬಂತು. ಅವರು ಪ್ರಾಯಶಃ ರಾಮನಾಥಪುರಕ್ಕೆ ಹೋಗಿರಲಾರರು. ನನಗೆ ತಿಳಿದಿರುವಂತೆ ಅಲ್ಲಿ ಯಾವ ಸರೋವರವೂ ಇಲ್ಲ, ಅಲ್ಲಿ ಪವಿತ್ರ ಕಾವೇರಿ ನದಿ ಹರಿಯುತ್ತದೆ, ಎಷ್ಟೇ ಕೊಳಕು ಮೈಯ್ಯಿನವರು ಬಂದರೂ ಅವರ ದೇಹವನ್ನೂ (ಅವರ ಪಾಪವನ್ನೂ) ತೊಳೆಯುವ ಶಕ್ತಿ ನಮ್ಮ ಕಾವೇರೀ ತಾಯಿಗಿದೆ. ಅಲ್ಲಿ ನದಿಯ ಇಕ್ಕೆಲಗಳಲ್ಲೂ ದೇವಸ್ಥಾನಗಳು, ಒಂದಕ್ಕಿಂತ ಒಂದು ದೊಡ್ಡದು. ಅಗಸ್ತ್ಯೇಶ್ವರ, ಸುಬ್ರಹ್ಮಣ್ಯೇಶ್ವರ, ರಾಮನಾಥೇಶ್ವರ, ಲಕ್ಷ್ಮಣೇಶ್ವರ (ಈಗ ಈ ದೇವಸ್ಥಾನ ಪಾಳು ಬಿದ್ದಿದೆ), ಮುಂತಾದ ಪ್ರಸಿದ್ಧ ದೇವಾಲಯಗಳಿರುವ ನಮ್ಮ ಹಾಸನ ಜಿಲ್ಲೆಯ ರಾಮನಾಥಪುರ ಎಂದೆಂದಿಗೂ ರಾಮ'ನಾತ'ಪುರ ವಾಗಲಾರದು. ಈ ಕಥೆಯನ್ನೋದಿದಾಗ, 'ರಾಮಾನುಜನ್' (ಲಕ್ಷ್ಮಣ!) ಎಂಬ ಹೆಸರಿಟ್ಟುಕೊಂಡವರಿಗೆ ಇಂಥಾ ಕಥೆ ಊಹೆಯಲ್ಲೂ ಬರಬಾರದಲ್ಲವೇ, ಎನ್ನಿಸಿದ್ದೇನೋ ನಿಜ! ಇರಲಿ, ಮಿಕ್ಕೆಲ್ಲಾ ಕಥೆಗಳ ನಡುವೆ ಇದೊಂದು ಮನಸ್ಸಿನಲ್ಲಿ ಉಳಿದಿದ್ದರ ಕಾರಣ ನನ್ನ ಜನ್ಮಭೂಮಿಯ ಮೇಲಿನ ಪ್ರೀತಿಯಲ್ಲದೇ ಮತ್ತೇನೂ

ಅಲ್ಲ. ನೀವೂ ಈ ಸಂಕಲನವನ್ನು ಓದಿ ಆನಂದಿಸಿರಿ, ನೀವು ಹಿಂದೆ ಓದಿಲ್ಲದ/ ಕೇಳಿಲ್ಲದ ಹಲವು ಮನಸ್ಸಿನಲ್ಲಿ ಅಚ್ಚಳಿಯದೇ ನಿಲ್ಲುವ ಕಥೆಗಳು ಅಲ್ಲಿವೆ ಎಂದು ಧೈರ್ಯವಾಗಿ ಹೇಳಬಲ್ಲೆ.


ಕಾದೇ ಇರುವಳು ರಾಧೆ

ಇದು ಐತಾಳರ ಚೊಚ್ಚಲು ಕಾದಂಬರಿ. ಪ್ರಾಯಶಃ ಪು.ತಿ.ನ. ಅವರ ಗೋಕುಲ ನಿರ್ಗಮನ, ಜಯದೇವನ ಗೀತಗೋವಿಂದ ಇನ್ನೂ ಮುಂತಾದ ರಾಧಾ–ಕೃಷ್ಣರ ಪ್ರೇಮ ಗೀತೆಗಳನ್ನು ಓದಿ ಅಥವಾ ತತ್ಸಂಬಂಧವಾದ ನೃತ್ಯ, ನಾಟಕಗಳನ್ನು ನೋಡಿ, ಮೂಡಿರಬೇಕೆಂದು ಈ ಕಾದಂಬರಿಯನ್ನೋದಿದ ಮೇಲೆ ನನಗೆ ಅನ್ನಿಸಿತು. ರಾಧೆ ಎಂಬ ಪಾತ್ರವನ್ನು ಯಾವ ಪ್ರೇಮಿ ಸೃಷ್ಟಿಸಿದನೋ, ಅಂತು ಅವಳಿಲ್ಲದೇ ಕೃಷ್ಣನಿಗೂ ಅಸ್ತಿತ್ವವಿಲ್ಲ ಅನ್ನುವಷ್ಟು ಅವಳು ಭಾರತೀಯರ ಹೃದಯದಲ್ಲಿ ಬೀಡು ಬಿಟ್ಟಿದ್ದಾಳೆ. ಅಂಥವಳೊಬ್ಬಳು ಇದ್ದಳೇ, ಹಾಗಿದ್ದಿದ್ದರೆ ಅವಳಿಗೂ ಕೃಷ್ಣನಿಗೂ ಎಂಥಾ ಸಂಬಂಧವಿತ್ತು? ಕೃಷ್ಣ ತುಂಟ ಬಾಲಕನಾಗಿದ್ದಾಗ ಆಕೆಯ ವಯಸ್ಸೆಷ್ಟಿತ್ತು? ಆಕೆಗೂ ಕೃಷ್ಣನಿಗೂ ವಿವಾಹವಾಯಿತೇ? ಇತರ ಗೋಪಿಕಾಸ್ತ್ರೀಯರಂತೆ ಅವಳೂ ಒಬ್ಬಳೇ? ಕೃಷ್ಣ ಗೋಕುಲವನ್ನು ಬಿಟ್ಟ ಮೇಲೆ ಅವಳ ಗತಿ ಏನಾಯಿತು? ಕೃಷ್ಣನ ಜೊತೆಗೆ ಅವಳಿಗೂ ದೈವತ್ವ ಯಾವಾಗ ಪ್ರಾಪ್ತವಾಯಿತು? ಇನ್ನೂ ಅನೇಕ ಪ್ರಶ್ನೆಗಳಿಗೆ ನಮ್ಮಲ್ಲಿ ಖಚಿತವಾದ ಉತ್ತರ ಸಿಕ್ಕುವುದಿಲ್ಲ. ಆದರೆ, ರಾಧಾ–ಕೃಷ್ಣರ ಪ್ರೇಮವೆಂಬುದು ಜಗದ್ವಿಖ್ಯಾತ.

ಜಯದೇವನಿಂದ ಮೊದಲ್ಗೊಂಡು ಇಂದಿನವರೆಗೂ ರಾಧಾಕೃಷ್ಣರ ಅಮರ ಪ್ರೇಮವನ್ನು ಕೊಂಡಾಡಿದ, ಅವರನ್ನೇ ಕೇಂದ್ರವಾಗಿಟ್ಟುಕೊಂಡು ಕಾವ್ಯ ರಚಿಸಿದ ಕವಿಗಳಿಗೆ ಲೆಕ್ಕವಿಲ್ಲ. ಭಾರತೀಯ ಸಂಗೀತ, ನೃತ್ಯ ಮತ್ತು ನಾಟಕಗಳಲ್ಲಿ ರಾಧೆಗೆ ವಿಶಿಷ್ಠ ಸ್ಥಾನವಂತೂ ಇದ್ದೇ ಇದೆ. ಐತಾಳರು, ರಾಧೆಯನ್ನು ಓರ್ವ ಬಾಲೆಯನ್ನಾಗಿ ಚಿತ್ರಿಸಿ ಅವಳಿಗೆ ಜೀವ ತುಂಬಿದ್ದಾರೆ. ಅವಳ ತಂದೆ ತಾಯಿ, ಅವಳ ಊರು, ಅವಳ ಜೀವನ, ಅವಳ ಪ್ರೇಮ, ವಿರಹ ಇವೆಲ್ಲವನ್ನೂ ಕಣ್ಣಿಗೆ ಕಟ್ಟುವಂತೆ ವರ್ಣಿಸಿ ಅವಳ ಮತ್ತು ಕೃಷ್ಣನ ಪ್ರೀತಿಯ ಸುತ್ತ ನಂಬಲರ್ಹವಾದ ಕಥೆಯೊಂದನ್ನು ಬಲು ನೈಜವಾಗಿ, ಸಹಜವಾಗಿ ರಚಿಸಿ ಒಂದು ಕಿರುಗಾದಂಬರಿಯನ್ನು ಹೆಣೆದಿದ್ದಾರೆ. ಇಲ್ಲಿ ಹೊಸದೆನಿಸುವ ವಿಷಯವೆಂದರೆ, ರಾಧೆ ಕೃಷ್ಣನಿಗಿಂತ ಚಿಕ್ಕವಳು. ಈ ಕಾದಂಬರಿಯಲ್ಲಿ ಅವಳ ವಯಸ್ಸು ಹನ್ನೊಂದು. ಅನುರಾಗ ಬೆಳೆಯುವ ವಯಸ್ಸಲ್ಲದಿದ್ದರೂ ಕೃಷ್ಣನಂಥಾ ಆಕರ್ಷಕ ವ್ಯಕ್ತಿಯಲ್ಲಿ ಮನಸ್ಸನ್ನು ಅರ್ಪಿಸುವ ಭಾವ ಉಂಟಾಗಲು ಅಡ್ಡಿಯಿಲ್ಲ. ಕೃಷ್ಣನೂ ಇಲ್ಲಿ ದೇವರಲ್ಲ. ಒಬ್ಬ ಅಸಾಧಾರಣ ಗೊಲ್ಲ ಬಾಲಕ, ತುಂಟ, ಕಿಲಾಡಿ, ಹೆಂಗೆಳೆಯರನ್ನು ಗೊಲ್ಲತಿಯರನ್ನು ಗೋಳುಹುಯ್ದುಕೊಳ್ಳುವ ಪೋರ. ಅವನ ಪಾತ್ರವೂ ನಂಬಬಹುದಾದಂತೆ ಬೆಳೆದಿದೆ. ಇಡೀ ಕಾದಂಬರಿ ಯಾವ ತಿರುವುಗಳೂ ಇಲ್ಲದೇ ಸರಳವಾಗಿ ಬೆಳೆದು ನಿರೀಕ್ಷಿತವಾಗುತ್ತದೆ. ಪುಟ್ಟ ಬಾಲಕಿಯ ವಿರಹ ಹೃದಯಸ್ಪರ್ಶಿಯಾಗಿದೆ.

ಹೀಗೇ ಇದ್ದಿತೇನೋ ಅಂದಿನ ಗೋಕುಲ ಎಂಬ ಕಾವ್ಯಮಯತೆ ಇಲ್ಲೂ ಇದೆ. ಈಗಲೂ, ಗೋಕುಲದ ಸುತ್ತಲಿನ ಜನರು, ಬಿಳಿಯ ಸೀರೆಯನ್ನುಟ್ಟ ಒಬ್ಬ ಹೆಂಗಸು, ಕೊಳಲನ್ನು ಎದೆಗೆ ಅಪ್ಪಿಕೊಂಡು, 'ಕನ್ಹಯ್ಯಾ..., ಕನ್ಹಯ್ಯಾ,....' ಎಂದು ಹಲುಬುತ್ತ, ಹುಣ್ಣಿಮೆಯ ರಾತ್ರಿ, ವೃಂದಾವನದಲ್ಲಿ ಸುತ್ತಾಡುತ್ತಿರುವುದನ್ನು ಕಂಡಿದ್ದೇವೆಂದು ಹೇಳುತ್ತಾರೆ. ಅವಳೇ ರಾಧೆಯೆಂಬುದೂ ಅವರ ನಂಬಿಕೆ...ಈ ರೀತಿ ಕೊನೆಯಾಗುತ್ತದೆ ಈ ಕಾದಂಬರಿ., ಕಾದೇ ಇರುವಳು ರಾಧೆ ಎಂಬ ಶೀರ್ಷಿಕೆ ಸಾರ್ಥಕವಾಗಿ ಅನ್ವರ್ಥನಾಮವಾಗುತ್ತದೆ! ಒಟ್ಟಿನಲ್ಲಿ ಅಮೆರಿಕನ್ನಡಿಗರಲ್ಲಿ ಹಿರಿಯರಾದ ಐತಾಳರ ಲೇಖನಿ ಜೀವಂತವಾಗಿದೆ. ಈ ಎರಡು ಪುಸ್ತಕಗಳನ್ನು ಸಾರಸ್ವತಲೋಕಕ್ಕೆ ಇತ್ತ ಮತ್ತು ಇದಕ್ಕೂ ಮುನ್ನ ಅನೇಕ ಪುಸ್ತಕಗಳ ರಚನೆಗೆ ಕಾರಣಕರ್ತರಾದ ಐತಾಳರು ಇನ್ನೂ ತಮ್ಮ ಮನಸ್ಸಿನಲ್ಲಿ ಬೆಳೆಯುತ್ತಿರುವ ಹಲವಾರು ವಿಷಯಗಳನ್ನು ಪುಸ್ತಕರೂಪಕ್ಕೆ ಇಳಿಸಲಿ ಎಂದು ಆಶಿಸುತ್ತೇನೆ.

ದಟ್ಸ್ ಕನ್ನಡ ಅಂತರ್ಜಾಲ ಪತ್ರಿಕೆಯಲ್ಲಿ ಪ್ರಕಟವಾದ ವಿಮರ್ಶೆ



ಹಾದಿಗುಂಟ ಹೆಜ್ಜೆ ಗುರುತು

– ನಳಿನಿ ಮೈಯ


ಇಪ್ಪತ್ತನೆಯ ಶತಮಾನದ ಮಧ್ಯಭಾಗ ಕಡಲ ತೀರದ ಒಂದು ಹಳ್ಳಿ, ಎಲ್ಲೆಲ್ಲೂ ಪ್ರಕೃತಿಯ ಸೊಬಗು, ವ್ಯವಸಾಯವೇ ಬದುಕಿಗೆ ಆಧಾರ, ಪ್ರೀತಿಯೇ ಉಕ್ಕಿ ಹರಿಯುವ ಕೂಡು ಕುಟುಂಬ, ಅಲ್ಲಿ ಬಾಲ್ಯದ ಮುಗ್ಧ ದಿನಗಳನ್ನು ಕಳೆದು ಬೆಳೆದ ಒಂದು ಸಹೃದಯಿ ಜೀವ...ಎಲ್ಲವೂ ಒಟ್ಟಾದರೆ ಅದು ಹೇಗಿರಬಹುದು! ಈ ಹೊತ್ತಗೆಯಲ್ಲಿ ಅಂದಿನ ಬದುಕಿನ ಚಿತ್ರಣ ಒಂದು ಸುಂದರ ಲೋಕವನ್ನು ಕಟ್ಟಿಕೊಡುತ್ತದೆ. ಹಾದು ಬಂದ ಹೆಜ್ಜೆಗಳ ಜಾಡನ್ನರಸುತ್ತ ಹಿಂದೆ ಹಿಂದೆ ಸರಿಯುವ ಮನಸ್ಸು, ಭಾವಪ್ರಧಾನವಾದ ಕವಿಹೃದಯ ಓದುಗರ ಮುಂದೆ ತೆರೆದಿಡುವ ಆ ಲೋಕದ ವಿವರಗಳ ಕಂಪಿನಿಂದ ಅಮ್ಮನ ಅಪ್ಪುಗೆಯಲ್ಲಿ ಬೆಚ್ಚಗೆ ಮಲಗಿದ ಮಗುವಿನಂತೆ ನಮ್ಮ ಮನಸ್ಸು ಹಗುರಾಗಿ ತೇಲುತ್ತದೆ, ಮರುಕ್ಷಣವೇ ಆ ದಿನಗಳು ಕಳೆದುಹೋದವು–ಮತ್ತೆಂದೂ ಬಾರದಂತೆ ಎಂಬ ಕಟುಸತ್ಯದ ಈ ಲೋಕಕ್ಕೆ ಎಚ್ಚರಾಗಿ ಆಳವಾದ ವಿಷಾದ ಒಂದು ಮನಸ್ಸನ್ನು ತಟ್ಟುತ್ತದೆ. ಬದಲಾವಣೆ ಎಂಬುದು ಎಷ್ಟು ಸೂಕ್ಷ್ಮವಾಗಿ ನಡೆಯುತ್ತದೆ ಎಂದರೆ ನಮ್ಮ ಗಮನಕ್ಕೇ ಬಾರದಂತೆ ಎಲ್ಲವೂ ತಲೆಕೆಳಗಾಗಿರುತ್ತದೆ! ನಮಗೆ ಪ್ರಿಯರಾದ ಎಷ್ಟೋ ಜೀವಿಗಳು ಕಣ್ಮರೆಯಾಗಿರುತ್ತಾರೆ, ನಮಗೆ ಇಷ್ಟವಾದ ಮನೆಯ ವಾಸ್ತುವೇ ಬದಲಾಗಿರುತ್ತದೆ. ನಾವು ಎಂದೆಂದಿಗೂ ನಡೆಯುವುದೇ ಇಲ್ಲ ಅಂದುಕೊಂಡಿದ್ದ

ಏನೇನೋ ಸಂಗತಿಗಳು ನಮ್ಮ ಮೂಗಿನ ಅಡಿಯಲ್ಲೇ ನಡೆದುಹೋಗಿರುತ್ತವೆ! ಹಾಗಾಗಿ ಒನಕೆಯಲ್ಲಿ ಭತ್ತ ಕುಟ್ಟುತ್ತಾ ಹಾಡು ಹೇಳುವ ಹೆಂಗಳೆಯರು, ಆ ಜನಪದ ಗೀತೆಗಳು, ಅಂದಿನ ಒಲೆ, ತಿರಿ, ಮೊರ, ರುಬ್ಬುವ ಕಲ್ಲು, ಕೊಟ್ಟಿಗೆ, ಭಾವಿ ಕಟ್ಟೆಯಲ್ಲಿ ನೀರು ಸೇದುವುದು, ಬಟ್ಟೆ ಒಗೆಯುವುದು, ವಿಜೃಂಭಣೆಯ ಪೂಜೆ ಪುನಸ್ಕಾರಗಳು ಮುಂತಾದ ಎಷ್ಟೋ ಸಂಗತಿಗಳು ಮಾಯವಾಗಿ ನೆನಪುಗಳು ಮಾತ್ರ ಮನದಾಳದ ಮಾಣಿಕ್ಯಗಳಾಗಿ ಉಳಿದುಹೋಗಿವೆ! ನದಿಯೊಂದು ಸದ್ದಿಲ್ಲದೆ ದೊಡ್ಡ ಪರ್ವತವನ್ನು ಕೊರೆದು ಕಂದರವನ್ನೇ ಸೃಷ್ಟಿಸಿದಂತೆ ಕಾಲದ ಪ್ರವಾಹ ಬಾಲ್ಯದ ನೆನಪುಗಳಿಗೂ ಇಂದಿನ ಜಗತ್ತಿಗೂ ನಡುವೆ ಒಂದು ಕಂದಕವನ್ನೇ ಸೃಷ್ಟಿಸಿಬಿಡುತ್ತದೆ! ನಮ್ಮಲ್ಲಿ ಬಹಳಷ್ಟು ಮಂದಿ ಸಮಾನ ಮನಸ್ಕರು ಹಾಗೂ ಸಮಾನ ವಯಸ್ಕರು ಒಟ್ಟಾದಾಗ ಕಳೆದ ದಿನಗಳ ನೆನಪನ್ನು ಮೆಲುಕು ಹಾಕುತ್ತೇವೆ, ಫೋಟೋಗಳನ್ನು ನೋಡಿ ನಿಟ್ಟುಸಿರಿಡುತ್ತೇವೆ, ಅಥವಾ ಒಬ್ಬರೇ ಕುಳಿತು ಆಪ್ಯಾಯಮಾನವಾದ ಕೆಲವು ಸಂದರ್ಭಗಳನ್ನು ನೆನೆದು ಕಣ್ಣೀರು ತುಂಬುತ್ತೇವೆ. ಆದರೆ ಇಷ್ಟು ಸುವ್ಯವಸ್ಥಿತವಾಗಿ ಕಳೆದೆಲ್ಲ ನೆನಪುಗಳ ಎಳೆ ಎಳೆಯನ್ನೂ ಹಿಡಿದು, ಹೊಸೆದು ಹಗ್ಗವನ್ನು ಮಾಡಿದಂತೆ ಒಂದು ಪುಸ್ತಕವನ್ನು ಬರೆಯುವವರು ಅತಿ ವಿರಳ. ಇದು ಆ ಕಾಲದಲ್ಲಿ ಬಾಳಿ ಬದುಕಿದ ಹಿರಿಯರಿಗೆ ಈಜಾಡಬಹುದಾದ ನೆನಪಿನ ಕೊಳವಾದರೆ ಕಿರಿಯ ತಲೆಮಾರಿಗೆ ಅಂದಿನ ಜನಜೀವನದ ಬಗ್ಗೆ ಉಪಯುಕ್ತ ಮಾಹಿತಿಯನ್ನು ಒದಗಿಸುವ ರತ್ನದ ಗಣಿ. ಒಂದು ಕಾಲದ ಜನಜೀವನದ ಬಗ್ಗೆ ಚರಿತ್ರೆಯ ಪುಸ್ತಕ ಓದಿ ಒಣ ಮಾಹಿತಿಯನ್ನು ನೀರಸವಾಗಿ ಕಲೆಹಾಕುವ ಉತ್ಸಾಹ ಯಾರಿಗುಂಟು? ಆದರೆ ಕಥೆಗಳಾಗಿ, ವ್ಯಕ್ತಿಚಿತ್ರಗಳಾಗಿ ನಮ್ಮನ್ನು ನಗಿಸಿ ಅಳಿಸಿ ತನ್ನೊಳಗೆ ಕೂಡಿಹಾಕುವ ಶಕ್ತಿ ಈ ಬಗೆಯ ಆತ್ಮ ವೃತ್ತಾಂತಗಳಿಗೆ ಇದೆ! ನಿಜವಾಗಿಯೂ ಆ ಕಾಲ ಅಷ್ಟೊಂದು ಚಂದವಿತ್ತೆ? ಎಂಬ ಪ್ರಶ್ನೆ ಮೂಡುವುದು ಸಹಜ. ಉತ್ತರ ಏನೆಂದರೆ 'ಹೌದು' ಮತ್ತು 'ಇಲ್ಲ'! ಯಾಂತ್ರಿಕ ಮತ್ತು ತಾಂತ್ರಿಕ 'ಪ್ರಗತಿ' ಸಾಧಿಸಿಲ್ಲದ ಆ ಕಾಲದಲ್ಲಿ ಕೇವಲ ಮನುಷ್ಯ-ಮನುಷ್ಯರ ಸಂಬಂಧಗಳ ಬಲದ ಮೇಲೆ ಬದುಕು ಸಾಗಿತ್ತು. ಅಲ್ಲಿತ್ತು ಆ ಕಾಲದ ಸ್ನಿಗ್ಧ ಸೌಂದರ್ಯ. ಆದರೆ ಆ ಕಾಲದಲ್ಲಿ ಕೆಳಜಾತಿಯವರ ಮೇಲೆ ನಡೆಯುವ ದೌರ್ಜನ್ಯ ಇಂದಿಗಿಂತ ಬಹುಶಃ ಒಂದು ಹಂತ ಮೇಲೆ ಇತ್ತು.

ಸಮಾಜದಲ್ಲಿ ಹೆಣ್ಣಿನ ಸ್ಥಾನಮಾನ ಇನ್ನೂ ಕೆಳಮಟ್ಟದಲ್ಲಿತ್ತು. ಇವೆಲ್ಲವನ್ನೂ ವಸ್ತುನಿಷ್ಠವಾಗಿ, ಪ್ರಾಮಾಣಿಕವಾಗಿ ನೋಡುವ ಪ್ರಬುದ್ಧ ಮನಃಸ್ಥಿತಿಯನ್ನು ಇಲ್ಲಿ ಕಾಣಬಹುದು. ಇಲ್ಲಿ ಪ್ರೀತಿಯಿಂದ ಮಾರ್ಗದರ್ಶನ ಮಾಡುವ ತುಂಗ್ರು ಮಾಸ್ಟ್ರು ಇದ್ದಾರೆ, ನಿಷ್ಠೆ, ನಿಯತ್ತುಗಳ ಪ್ರತಿರೂಪವಾದ ಹಂಡಿಕೆರೆ ಸೀನಸೆಟ್ಟಿ ಇದ್ದಾನೆ. ಜೊತೆಜೊತೆಗೇ ಚಿಕ್ಕಪ್ಪನ ಉಪಪತ್ನಿಯಾಗಿ ಕೆಳಜಾತಿಯ ಗಠವಾಣಿ ಹೆಂಗಸಾದ ಚಂದು ವ್ಯವಸ್ಥೆಗೆ ಧಿಕ್ಕಾರ ಹೇಳುತ್ತಾಳೆ. ಮನೆ ಮಕ್ಕಳನ್ನು 'ವಡೀನೇ' (ಒಡೆಯನೆ) ಎಂದು ಕರೆಯುವ ಬದಲು 'ಮಾಣಿ' ಎನ್ನುತ್ತಾಳೆ! ಪ್ರೀತಿಯೇ ಮೈದಾಳಿ ಬಂದಂಥ

ಬೋಳ ಕಾಲುನೋವೆಂದು ಕುಂಟುತ್ತಿರುವ ಬಾಲಕ ನಾಗಪ್ಪಯ್ಯನನ್ನು ತಾನು ಮುಟ್ಟಬಾರದೆಂದು ಗೊತ್ತಿದ್ದೂ 'ಯಾರಿಗೂ ಹೇಳಬೇಡಿ' ಎನ್ನುತ್ತ ಗುಟ್ಟಾಗಿ ಮನೆ ಬಾಗಿಲವರೆಗೂ ಎತ್ತಿಕೊಂಡು ಬರುತ್ತಾನೆ. ಹೀಗೆ ಅಂದಿನ ಸಮಾಜದ ವ್ಯವಸ್ಥೆಯ ಪದರ ಪದರಗಳನ್ನು ಬಿಡಿಸುತ್ತಲೇ ಹೋಗುವ ಇಲ್ಲಿಯ ಲೇಖನ ಮಾಲೆ ನಮ್ಮೆಲ್ಲರ ಗತಕಾಲದ ಮರೆತೇನೆಂದರೂ ಮರೆಯಲಾಗದ, ಬಿಟ್ಟೇನೆಂದರೂ ಬಿಡಲಾಗದ ನಂಟುಗಳ, ಸಂಬಂಧಗಳ ಪ್ರತಿರೂಪವಾಗಿ, ಪ್ರತಿಧ್ವನಿಯಾಗಿ ಭಾವನೆಗಳ ಸುನಾಮಿಯನ್ನೇ ಎಬ್ಬಿಸುತ್ತದೆ, ವ್ಯಕ್ತಿಯೊಬ್ಬನ ಪ್ರತ್ಯೇಕ ಕಥೆಯಾಗಿರುತ್ತಲೇ ಅಂದಿನ ಸಮುದಾಯದ ಒಟ್ಟು ಬದುಕಿನ ಇತಿಹಾಸವೂ ಆಗುತ್ತದೆ!. ಸಕ್ಕರೆಯನ್ನು ಯಾವ ಪದಾರ್ಥಕ್ಕೆ ಹಾಕಿದರೂ ಅದು ಮಾಡುವ ಕೆಲಸ ಒಂದೇ– ಸಿಹಿ ತುಂಬುವುದು. ಪಾಯಸದಲ್ಲಿ ಒಂದು ರುಚಿಯಾದರೆ ಕಾಫಿಯಲ್ಲಿ ಮತ್ತೊಂದು ಬಗೆಯ ರುಚಿ ಅಷ್ಟೇ. ಹಾಗೆಯೇ ಪ್ರೀತಿ ತುಂಬಿದ ಭಾವಾರ್ದ್ರ ಮನಸ್ಸು ಕೋಟದ ಹಳ್ಳಿಯಲ್ಲೇ ಇರಲಿ, ಬೆಂಗಳೂರೆಂಬ ನಗರದಲ್ಲೇ ಇರಲಿ ಅಥವಾ ಹತ್ತು ಸಾವಿರ ಮೈಲಿಗಳಾಚೆಯ ಅಮೆರಿಕಾದಲ್ಲೇ ಇರಲಿ ಅದು ಮಾಡುವುದು ಒಂದೇ ಕೆಲಸ ಸಂಬಂಧಗಳಲ್ಲಿ ಸವಿ ಹರಡುವುದು. ಹೀಗೇ ನಾಗ ಐತಾಳರು ದೂರದ ಅಮೆರಿಕೆಯಲ್ಲಿ ನಾಗರಾಜ್, ಶ್ರೀನಿವಾಸ ಭಟ್ಟರಂತಹ ಸ್ನೇಹಿತರಲ್ಲಿ, ಮಡದಿ, ಮಕ್ಕಳು, ಸೊಸೆ, ಮೊಮ್ಮಕ್ಕಳಲ್ಲಿ ಮತ್ತದೇ ಪ್ರೀತಿಯ ಬಾಂಧವ್ಯವನ್ನು ಹೊಸೆಯುತ್ತಿರುವುದನ್ನು ಗ್ರಂಥದ ಉತ್ತರಾರ್ಧದಲ್ಲಿ ಕಾಣುತ್ತೇವೆ. ಅಮೆರಿಕೆಯ ಪ್ರಖ್ಯಾತ ಕವಯಿತ್ರಿ ಮಾಯಾ ಏಂಜೆಲೊ ಹೇಳಿದ ಮಾತು– People may forget what you said or what you did. But they will always remember how you made them feel. ಈ ಮಾತು ಹೊತ್ತಗೆಯ ಉದ್ದಕ್ಕೂ ಅನುರಣಿಸಿದೆ. ಅದಕ್ಕೇ ತಾನೆ ನಾಗ ಐತಾಳರ ಮೆಚ್ಚಿನ ಕವಿ ಶಿವರುದ್ರಪ್ಪನವರು ಹೇಳಿದ್ದು– 'ಪ್ರೀತಿ ಇಲ್ಲದ ಮೇಲೆ ಹೂವು ಅರಳೀತು ಹೇಗೆ?' ಎಂದು! ನಿಜ, ಪ್ರೀತಿಯೊಂದು ಇಲ್ಲದೆ ಹೋದರೆ ಹೂವು ಅರಳೀತು ಹೇಗೆ? ಮೋಡ ಕಟ್ಟೀತು ಹೇಗೆ? ನೆನಪುಗಳ ಅಣಿಮುತ್ತು ಅಕ್ಷರಗಳಲ್ಲಿ ಕೋದೀತು ಹೇಗೆ? ಅಭಿನಂದನೆಗಳು ಆಹಿತಾನಲರಿಗೆ ಸಾರ್ಥಕ ಕ್ಷಣಗಳ ಸುಂದರ ಬದುಕಿಗಾಗಿ, ಆ ಬದುಕನ್ನು ಈ ರೀತಿಯಲ್ಲಿ ದಾಖಲಿಸಿದ್ದಕ್ಕಾಗಿ.

*



ಕಾರಂತ ಚಿಂತನ

– ಯು. ಆರ್. ಅನಂತಮೂರ್ತಿ

ನಾಗ ಐತಾಳರಿಂದ ಸಂಪಾದಿತವಾದ ಈ 'ಕಾರಂತ ಚಿಂತನ' ಸಂಕಲನ ಒಂದು ವಿಶಿಷ್ಟ ಕೃತಿ ಎಂದರೆ ಅದು ಮುನ್ನುಡಿಯ ಶಿಷ್ಟಾಚಾರದ ಹೊಗಳಿಕೆಯ ಮಾತೆಂದು ತಿಳಿಯಬಾರದು. ಕನ್ನಡ ನಾಡಿನಿಂದ ಬಹುದೂರದಲ್ಲಿ, ಬಹುಕಾಲದಿಂದ, ಬದುಕುತ್ತಿರುವ ಇಲ್ಲಿನ ಲೇಖಕರು ಕನ್ನಡದಿಂದ ದೂರವಾದವರಲ್ಲ ಎಂಬುದು ಸೋಜಿಗದ ವಿಷಯವೇ. ಅಲ್ಲದೆ ಈ ಲೇಖಕರಲ್ಲಿ ಹಲವರು, ನಾನು ತಿಳಿದಂತೆ, ವೃತ್ತಿಪರ ಸಾಹಿತಿಗಳೂ ಅಲ್ಲ, ಸಾಹಿತ್ಯ ವಿಮರ್ಶಕರೂ ಅಲ್ಲ. ಎಂಜಿನಿಯರ್‌ಗಳು, ವೈದ್ಯರು, ವಿಜ್ಞಾನ ಸಂಶೋಧಕರು – ಇತ್ಯಾದಿ ವೃತ್ತಿನಿರತರು. ಕನ್ನಡದ ಒಬ್ಬ ದೊಡ್ಡ ಲೇಖಕನಿಂದ ತಾವೇನು ಪಡೆದೆವು ಎಂಬುದನ್ನು ಸರಳವಾಗಿ, ಸಹಜವಾಗಿ ಬರೆದುಕೊಂಡಿದ್ದಾರೆ. ವೇಗವಾಗಿ ಬದಲಾಗುತ್ತಿರುವ ಸದ್ಯದ್ದು ಮಾತ್ರ ಸತ್ಯವೆಂದು ತೋರುವ ಅಮೆರಿಕದ ಈ ಕಾಲದಲ್ಲಿ ಇದು ವಿಶೇಷವೇ.

ನನ್ನ ಊಹೆ : ಇವರಲ್ಲಿ ಹಲವರು ಕನ್ನಡ ಮಾಧ್ಯಮದಲ್ಲಿ ಓದಿ, ಇಂಗ್ಲಿಷನ್ನು ಚೆನ್ನಾಗಿ ಕಲಿತು ಪ್ರಪಂಚದಲ್ಲಿ ಎಲ್ಲಾದರೂ ಸಲ್ಲಬಲ್ಲ ಶಕ್ತಿ ಪಡೆದವರು. ಅಮೆರಿಕದಲ್ಲಿ ಹುಟ್ಟಿ ಬೆಳೆದ ತಮ್ಮ ಮಕ್ಕಳು ಕನ್ನಡ ಮಾತಾಡದಿದ್ದರೂ, ತಮ್ಮ ಒಳಬಾಳಿನ ಇಂಗಿತಗಳ ಭಾಷೆಯಾಗಿ ಕನ್ನಡವನ್ನು ಉಳಿಸಿಕೊಂಡವರು.

ಎಸ್.ಎಸ್.ಎಲ್.ಸಿ. ತನಕವಾದರೂ ಕನ್ನಡ ಮಾಧ್ಯಮದಲ್ಲಿ ಕಲಿತು ಇಂಗ್ಲಿಷನ್ನೂ ಚೆನ್ನಾಗಿ ಬಲ್ಲವರು ಜೀವನದಲ್ಲಿ ಯಶಸ್ಸನ್ನೂ ಪಡೆಯುತ್ತಾರೆ; ಕನ್ನಡ ಸಮುದಾಯದ ಜೊತೆ, ನಮ್ಮ ಪರಂಪರೆಯಲ್ಲಿ ಅತ್ಯುತ್ತಮವಾದ್ದರ ಜೊತೆ ಸಂಬಂಧವನ್ನೂ ಉಳಿಸಿಕೊಂಡಿರುತ್ತಾರೆ. ಲೌಕಿಕ ಯಶಸ್ಸಿಗೂ, ಪಾರಮಾರ್ಥಿಕ ಎನ್ನಬಹುದಾದ ಮನಸ್ಸಿನ ಅಗತ್ಯಗಳಿಗೂ ಒಟ್ಟಾಗಿ ಸಲ್ಲುವ ಉಪಾಯಗಳನ್ನು ಸಾವಿರಾರು ವರ್ಷಗಳಿಂದ ಬಲ್ಲವರಾದ ಭಾರತೀಯರು ಆಧುನಿಕ ನಾಗರಿಕತೆಯ ಈ ಕಾಲದ ಒತ್ತಡಗಳಲ್ಲಿ ಇಷ್ಟು ಸುಲಭವಾದ ಉಪಾಯವನ್ನು ನಿರ್ಲಕ್ಷಿಸುತ್ತಿದ್ದಾರೆಂಬುದು ಮೂರ್ಖತನವಾಗಿ ಕಾಣುತ್ತದೆ. ಈ ಮಾತನ್ನಾಡುವಾಗ ನನ್ನ ದೃಷ್ಟಿಯಲ್ಲಿ ಇರುವವರು ಕರ್ನಾಟಕದಲ್ಲಿ ವಿದ್ಯಾವಂತರಾಗುತ್ತಿರುವ ಕನ್ನಡಿಗರೇ.

ಈ ಪುಸ್ತಕದ ಹಲವು ಲೇಖಕರು ಕಾರಂತರ ಬಗ್ಗೆ ಹೊಸದೇನನ್ನೂ ಹೇಳದೇ ಇರಬಹುದು; ಆದರೆ ಅವರು ಹೇಳಿದಷ್ಟು ಪ್ರಾಮಾಣಿಕವಾಗಿ ಮನಸ್ಸಿಗೆ ಮುಟ್ಟುವಂತಿದೆ. ಮೂರು ನಾಲ್ಕು ಲೇಖಕರು ಗಾಢವಾಗಿಯೂ ಕಾರಂತರನ್ನು ವಿಮರ್ಶಿಸಿದ್ದಾರೆ.

ಕಾರಂತರು ಆಸ್ತಿಕರಲ್ಲದಿದ್ದರೂ, ನಾಸ್ತಿಕರಲ್ಲ ಎನ್ನುವುದನ್ನು ತಾರ್ಕಿಕ ಸಂಯಮದಲ್ಲಿ ಹೇಳುವ ಪ್ರಕಾಶ್ ಹೇಮಾವತಿ; ಅಮೆರಿಕದ ಕಪ್ಪು ಜನರ ಹೋರಾಟಕ್ಕೂ 'ಚೋಮನ ದುಡಿ'ಗೂ ಸಂಬಂಧ ಕಾಣುವ ನಳಿನಿ ಮೈಯ; ತಾಂತ್ರಿಕ ಪದಗಳ ಬ್ರಹ್ಮನೆಂದು ಕಾರಂತರನ್ನು ಗುರುತಿಸುವ ಜಯಸ್ವಾಮಿ; ಕಾರಂತರು ಸೃಷ್ಟಿಸುವ ಅತ್ಯಂತ ಪ್ರಾದೇಶಿಕ ಸನ್ನಿವೇಶಗಳಲ್ಲಿ ಸಾರ್ವತ್ರಿಕ ಸತ್ಯವನ್ನು ಕಾಣುವ, ಕಾರಂತರ ಕೃತಿಯನ್ನು ಚಿತ್ರೀಕರಿಸುವ ಹಂಬಲ ಪಡೆದಿದ್ದ ತಾವರೆಕೆರೆ ಶ್ರೀಕಂಠಯ್ಯ ಕಂಠಿ: ಹಳ್ಳಿಯ ತಮ್ಮ ವೈದ್ಯಕೀಯ ಅನುಭವದಲ್ಲಿ ಔದಾರ್ಯದ ಉರುಳಲ್ಲಿ ಕೃತಿಯನ್ನು ಮೆಚ್ಚಿಕೊಳ್ಳುವ ರೋಹಿಣಿ ಉಡುಪ; ನಾನು ಇನ್ನೂ ಓದದಿರುವ 'ಅಂಟಿದ ಅಪರಂಜಿ'ಯನ್ನು ಓದಬೇಕು ಎನ್ನಿಸುವಂತೆ ಗ್ರಹಿಸಿರುವ ಎಚ್. ಕೆ. ಚಂದ್ರಶೇಖರ್; – ಹೀಗೇ ಪ್ರತಿಯೊಬ್ಬರೂ, ಅಚ್ಚುಕಟ್ಟಾಗಿ ಬರೆಯುವ ಹೇಮಾ ಶ್ರೀಕಂಠ, ಕುಂಭಾಶಿ ಶ್ರೀನಿವಾಸ ಭಟ್ಟ, ಅಣ್ಣಾಪುರ ಶಿವಕುಮಾರ್, ಚಂದ್ರಶೇಖರ ಐತಾಳ, ರಾಧಾಮಣಿ ಶಾಸ್ತ್ರಿ, ವಸುಧಾ ಕೃಷ್ಣಮೂರ್ತಿ, ವಿಶ್ವನಾಥ್ ಹುಲಿಕಲ್, ಆಪ್ತ ನೆನಪುಗಳನ್ನು ಪ್ರೀತಿಯಿಂದ ಮೂಡಿಸುವ ಕಾರಂತರ ಮೊಮ್ಮಕ್ಕಳು, ಎಲ್ಲರೂ ತಮ್ಮತಮ್ಮ ಅನುಭವದ ಸತ್ಯದಲ್ಲಿ ಕಾರಂತರನ್ನು ಪಡೆದು, ಸೋಗಿಲ್ಲದ ಗದ್ಯದಲ್ಲಿ ನಮಗೆ ತಾವು ಕಂಡದ್ದನ್ನು ಕಾಣಿಸುತ್ತಾರೆ. ನಮ್ಮ ಲೇಖಕರಲ್ಲೆಲ್ಲಾ ಸಾಹಿತ್ಯಾಸಕ್ತರನ್ನು ಮಾತ್ರ ದೃಷ್ಟಿಯಲ್ಲಿ ಇಟ್ಟುಕೊಳ್ಳದೇ ಬರೆಯುವವರು ಕಾರಂತರು ಎಂಬುದು ಈ ವಿಮರ್ಶಾ ಸಂಕಲನದಿಂದ ಮನದಟ್ಟಾಗುತ್ತದೆ.

ಸಾಹಿತ್ಯ ವಿಮರ್ಶೆಯಾಗಿಯೂ ಎದ್ದು ಕಾಣುವ ಇನ್ನೂ ಕೆಲವು ಲೇಖನಗಳ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬಹುದು.

ಈ ಪುಸ್ತಕದ ಸಂಪಾದಕ ನಾಗ ಐತಾಳರು 'ಆಹಿತಾನಲ' ಎಂಬ ಕಾವ್ಯನಾಮದಲ್ಲಿ ಅಳಿದ ಮೇಲೆ ಕೃತಿಯನ್ನು ವಿಮರ್ಶಿಸಿದ್ದಾರೆ; ಅಂದರೆ ಸಾಹಿತ್ಯ ವಿಮರ್ಶೆಯ ಶಿಸ್ತಿನಲ್ಲಿ ವಿಮರ್ಶಿಸಿದ್ದಾರೆ. ಕಾದಂಬರಿಯ ಪಾರ್ವತಮ್ಮ ಎಂಬ ಪಾತ್ರದ 'ದೇವರು ಕರೆಸಿಕೊಳ್ಳುವುದು' ಎಂಬ ಮಾತನ್ನು ಐತಾಳರು ವಿಶ್ಲೇಷಿಸುವ ಕ್ರಮ ಸಾಹಿತ್ಯ ವಿಮರ್ಶೆಯದೇ, ಕಾರಂತರು ತಮ್ಮ ಎಲ್ಲ ವೈಚಾರಿಕತೆಯನ್ನೂ ಬದಿಗಿಟ್ಟು ಪಾರ್ವತಮ್ಮನ ನಂಬಿಕೆಯಲ್ಲಿ ಭಾಗವಹಿಸುತ್ತಾರೆಯೇ? ಈ ತನ್ನ ಅನುಮಾನವನ್ನು ಐತಾಳರು ಶೋಧಿಸುವ ಬಗೆ ಆಳವಾದ ಓದಿನಿಂದ ಪ್ರಾಪ್ತವಾದದ್ದು.

ಹೀಗೆ ಗುಂಡ್ಮಿ ಅರವಿಂದ ಉಪಾಧ್ಯ, ಟಿ. ಎನ್. ಕೃಷ್ಣರಾಜು ಕಾರಂತರಿಗೂ ನಮ್ಮ ಹಳೆಯ ತಲೆಮಾರಿನ ಸಂಪ್ರದಾಯಸ್ಥರಿಗೂ ಇರುವ ಸಂಬಂಧದ ಬಗ್ಗೆ ಬರೆಯುತ್ತಾರೆ. ಕೃಷ್ಣರಾಜು ಇದನ್ನು ನೋಡುವ ಕ್ರಮ ಬೇರೆ – ಈ ಬಗ್ಗೆ ಮುಂದೆ ಮಾತಿದೆ. ನಾವು ಹಲವರು ಕಾರಂತರ ಬಗ್ಗೆ ಮಾತಾಡುವಾಗ ಸಾಂಪ್ರದಾಯಕತೆಯ ಬಗ್ಗೆ ಇರಬಹುದಾದ ಒಂದು ವ್ಯತ್ಯಾಸವನ್ನು ಮುಖ್ಯವೆಂದುಕೊಳ್ಳುತ್ತೇವೆ– ಇದು ಕಾರಂತರೇ ಮಾಡುವ ವ್ಯತ್ಯಾಸವೆಂದು ನಾವು ತಿಳಿದಿರುತ್ತೇವೆ. ಅದೇಂದರೆ : ಸಂಪ್ರದಾಯ'ವಾದಿ'ಗಳೇ ಬೇರೆ, ಸಂಪ್ರದಾಯ'ಶೀಲ'ರೇ ಬೇರೆ. ಸಂಪ್ರದಾಯ'ವಾದಿ'ಗಳಲ್ಲಿ ಅವರು ಬುದ್ಧಿಪೂರ್ವಕವಾಗಿ ತಿಳಿದ ಧೋರಣೆಗಳಿರುತ್ತವೆ. ಈ ಧೋರಣೆಗಳ ಹಿಂದೆ ಸಂಕುಚಿತ ಮನೋಭಾವವಿರಬಹುದು, ಕ್ರೌರ್ಯವಿರಬಹುದು, ಸೋಗಲಾಡಿತನ ಖಂಡಿತ ಇರಬಹುದು. ಆದರೆ ಸಂಪ್ರದಾಯ 'ಶೀಲ'ರು ಮುಗ್ಧರಾಗಿರುತ್ತಾರೆ. ತಾವು ನಂಬಿದ್ದನ್ನು ಪ್ರಾಮಾಣಿಕವಾಗಿ ಆಚರಿಸುವವರಾಗಿರುತ್ತಾರೆ. ಇವರು ಖಂಡಿತ ಹೃದಯ ಹೀನರಲ್ಲ; ಸಂಪ್ರದಾಯ 'ವಾದಿ'ಗಳಂತೆ ದಗಲುಬಾಜಿಗಳು ಅಲ್ಲವೇ ಅಲ್ಲ.

ಈ 'ವಾದಿ–ಶೀಲ' ವ್ಯತ್ಯಾಸ ಮಾಡಬೇಕಾದ್ದು; ಯಾಕೆಂದರೆ ಅದು ನಿಜವಾದ್ದು. ಕಾರಂತರು ಅದನ್ನು ತಮ್ಮ ಮುದುಕಿಯರಲ್ಲಿ ನಮ್ಮ ಮನಸ್ಸು ಮುಟ್ಟುವಂತೆ ಚಿತ್ರಿಸುತ್ತಾರೆ. ಆದರೆ ಈ ವ್ಯತ್ಯಾಸವನ್ನು ಕಾರಂತರು ಮಾಡುತ್ತಾರೆಂಬುದು ನಮಗೆ ಮುಖ್ಯವಾಗಿ ಕಾಣುವುದು ಮಾತ್ರವಲ್ಲ; ನಮಗದರಿಂದ ತುಂಬ ಖುಷಿ ಯಾಕಾಗುತ್ತದೆ? (ನಾನು 'ಖುಷಿ' ಎಂಬ ಪದವನ್ನು ಅನುಭವಕ್ಕೂ ಅನ್ವಯಿಸುವಂತೆ ಬಳಸುತ್ತಿದ್ದೇನೆ ಎಂದು ಹೇಳಲಿಚ್ಛಿಸುತ್ತೇನೆ.)

ಈ 'ಖುಷಿ' ಆಳವಾದ ಚಿಂತನೆಗೆ ಒಳಪಡಬೇಕು. ನಾವು ಪಡುವ ಖುಷಿಯಲ್ಲಿ ನಮ್ಮನ್ನು ನಾವೇ ಸಮಾಧಾನಪಡಿಸಿಕೊಳ್ಳುವ ಹವಣಿಕೆ ಇದೆಯೇ? ಆಧುನಿಕ ನಾಗರಿಕತೆಯ ಒತ್ತಡದಲ್ಲಿ ಪಾರಂಪರಿಕವಾದ ಸಂಪ್ರದಾಯಗಳೆಲ್ಲವೂ ಕಳೆದು ಹೋಗುತ್ತಿರುವಾಗ, ಪ್ರಾರಂಭದಲ್ಲಿ, ಸಂಪ್ರದಾಯಗಳಲ್ಲಿ ಕೆಟ್ಟದ್ದನ್ನು ಬಿಟ್ಟು, ಒಳ್ಳೆಯದನ್ನು ಮಾತ್ರ ಪ್ರಜ್ಞಾಪೂರ್ವಕವಾಗಿ ಉಳಿಸಿಕೊಳ್ಳುತ್ತೇವೆ ಎಂದು ನಮಗೆ ನಾವೇ ಅಂದುಕೊಳ್ಳುತ್ತೇವೆ. ಆದರೆ ಆಧುನಿಕ ನಾಗರಿಕತೆ ಎಷ್ಟು ಸರ್ವಶಕ್ತ ಮತ್ತು

ಸರ್ವವ್ಯಾಪಿಯೆಂದರೆ, ಅದು ನಮ್ಮನ್ನು ಒಳಗಿನಿಂದಲೂ ಆಕ್ರಮಿಸಿಬಿಡುತ್ತದೆ. ಕೆಟ್ಟದರ ಜೊತೆ ನಾವು ಒಳ್ಳೆಯದೆಂದು ಆತುಕೊಳ್ಳುವ ಸಂಪ್ರದಾಯಗಳೂ ಇಗೋ ಎನ್ನುವಷ್ಟರಲ್ಲಿ ನಾಶವಾಗುತ್ತವೆ. ನಮ್ಮ ಗುರುತು ನಮಗೇ ಸಿಗದಷ್ಟು ನಮ್ಮ ಉದ್ಧಾರಕ್ಕೆಂದು ತಿಳಿದ ನಮ್ಮ ವಿದ್ಯಾರ್ಜನೆಯೇ ಬದಲಾಯಿಸುತ್ತದೆ. ಭಾರತದ ಒಳಗಿದ್ದೇ ನಾವು ನಮ್ಮಷ್ಟು ವಿದ್ಯಾವಂತವಲ್ಲದ ಸಮುದಾಯದ ಜೊತೆ ಸಂಪರ್ಕವನ್ನು ಕಳೆದುಕೊಳ್ಳುತ್ತೇವೆ. ಜುಟ್ಟು, ಜನಿವಾರ, ಲಿಂಗ, ನಾಮ, ಗ್ರಾಮದೇವತೆ, ಮನೆದೇವರು, ಇಷ್ಟದೇವತೆ– ಎಲ್ಲವೂ ಅಪ್ರಸ್ತುತವಾಗುತ್ತವೆ. ಈ ಬಿಡುಗಡೆಯಿಂದ ನಾವು ಸುಖಿಸುತ್ತೇವೆ, ಅರಳುತ್ತೇವೆ, ಸಂಪನ್ನರಾಗುತ್ತೇವೆ– ಲೌಕಿಕವಾಗಿ ಉದ್ಧಾರವಾಗುತ್ತೇವೆ. ಆದರೆ ಇವೆಲ್ಲಕ್ಕೂ ಅಂಟಿಕೊಂಡ ಸಮುದಾಯ ಅಗೋ ಅಲ್ಲಿ ಎನ್ನುವಂತೆ ದೂರದಲ್ಲಿ ಅಥವಾ ಇಲ್ಲೇ ನಾರುವ ಹಿತ್ತಲಲ್ಲೇ ಎನ್ನುವಂತೆ ಹತ್ತಿರದಲ್ಲಿ, ಆರ್ಥಿಕವೋ, ರಾಜಕೀಯವೋ ಆದ ಪ್ರಕ್ಷುಬ್ಧ ಸಂದರ್ಭಗಳಲ್ಲಿ ನಮಗೆ ಎದುರಾಗುತ್ತದೆ. ಪ್ರಾಯಶಃ ನಮ್ಮಲ್ಲಿ ಅನೇಕರು ಹೀಗೆ ಎದುರಾದಾಗ, ನಮ್ಮ ಪ್ರಗತಿಯ ಆತುರದಲ್ಲೂ, ಅತಿಯಾಸೆಯಲ್ಲೂ ನಮಗೂ ಸಮುದಾಯಕ್ಕೂ ಮುಖ್ಯ ಕೊಂಡಿಯಾದ ನಮ್ಮ ಭಾಷೆಗಳನ್ನು ಕಳೆದುಕೊಂಡಿರುತ್ತೇವೆ; ನಿರ್ವೀರ್ಯರಾಗುತ್ತೇವೆ.

ಹೀಗೆ ಕಳೆದುಕೊಂಡ ಪರಕೀಯತೆಯ ಹಳಹಳಿಕೆಯಲ್ಲಿ ನಮ್ಮ ಪೂರ್ವಜರ ನೆನಪಾಗುವುದುಂಟು. ಕಾರಂತರ ಮುಗ್ಧ ಸಂಪ್ರದಾಯಶೀಲ ಅಜ್ಜಿಯರು ಇಂಥ ಹಳಹಳಿಕೆಯಲ್ಲಿ ನಮಗೆ ಎದುರಾದಾಗ 'ನಾವು' ಎನ್ನಲು ತೊಡಗುತ್ತೇವೆಯೆ? ಕೇವಲ ಭಾವನಾತ್ಮಕವಾದ ಸಮಾಧಾನದ ನೆಮ್ಮದಿಯಲ್ಲಿ ನಾವು ಎದುರಿಸಬೇಕಾದ ನಮ್ಮ ಗೂಢವಾದ ಒಳಗಿನ ಅಗತ್ಯಗಳಿಂದ ವಂಚಿತರಾಗುತ್ತೇವೆಯೆ?

ವಿದ್ಯಾವಂತರಾದ ನಮ್ಮಲ್ಲಿ ಕೆಲವರು ಕಳೆದುಕೊಂಡ ನಮ್ಮತನವನ್ನು ಮತೀಯ ವಾದದಲ್ಲಿ ಗುರುತಿಸಿಕೊಳ್ಳುವುದುಂಟು. ಲೌಕಿಕವಾಗಿ ಮಾತ್ರವಲ್ಲದೆ, ಪಾರಮಾರ್ಥಿಕವಾಗಿಯೂ ಇದು ಅಸಹ್ಯವಾದ ಆಯ್ಕೆಯಾಗಿರುತ್ತದೆ. ಭಾರತೀಯತೆಯಲ್ಲಿ ಬೆಲೆಯುಳ್ಳದ್ದೆಲ್ಲವನ್ನೂ ಕಳೆದುಕೊಂಡ, ಧ್ಯಾನಶೀಲತೆ ಕಿಂಚಿತ್ತೂ ಇಲ್ಲದ, ಅಂತರ್ಮುಖತೆ ನಾಶವಾದ, ಹಿಂಸಾತ್ಮಕ ಆಕ್ರಮಣದಲ್ಲಿ ಮಾತ್ರ ಅಲ್ಪವಾದ ಫಲವನ್ನು ಕೊಡಬಲ್ಲ ಇಂಥ ಆಯ್ಕೆಯೂ ಆಧುನಿಕ ನಾಗರಿಕತೆಯ ಶಸ್ತ್ರಾಸ್ತ್ರಗಳ ಆಶ್ರಯದಲ್ಲಿ ಮಾತ್ರ ಬೆಳೆಯಬಲ್ಲದಾಗಿರುತ್ತದೆ. ಕ್ಷಾತ್ರಕ್ಕೆ ಮಾತ್ರ ಮನ್ನಣೆ ಇರುವ ಇಸ್ಲಾಂ ಆಗಲಿ, ಹಿಂದೂ ಧರ್ಮವಾಗಲೀ, ಕ್ರಿಶ್ಚಿಯಾನಿಟಿಯಾಗಲೀ ಮಾನವನ ಒಳ ಬಾಳಿನ ವಿಕಾಸವನ್ನು ಸಾಧಿಸಲಾರವು.

ಎಲ್ಲೆಲ್ಲೋ ಬೆಳೆಯುತ್ತಿರುವ ನನ್ನ ಮಾತುಗಳನ್ನು 'ಕಾರಂತ ಚಿಂತನ'ಕ್ಕೆ ಹಿಂದಿರುಗಿಸಿ ಅವರನ್ನು ಮತ್ತೆ ನೋಡಲು ಇಚ್ಛಿಸುತ್ತೇನೆ. ಜಗತ್ತನ್ನು ಪರಿಭ್ರಮಿಸಿದರೂ ಅವರು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನೆಲೆಸಿದವರು. ಈ ಜಿಲ್ಲೆ ಕೂಡ ಎಷ್ಟು ಸಾಂಪ್ರದಾಯಕವೋ

ಅಷ್ಟೇ ಆಧುನಿಕವಾದ ಪ್ರದೇಶ. ಇಲ್ಲಿ ಧರ್ಮಸ್ಥಳದ ಭೂತಾರಾಧನೆ ಇದೆ; ಕೃಷ್ಣನಿಗೆ ಶತಮಾನಗಳಿಂದ ಸಲ್ಲುತ್ತಿರುವ ಪಾರಂಪರಿಕ ಪೂಜಾ ವಿಧಾನಗಳಿವೆ; ಬ್ಯಾಂಕು ಮತ್ತು ವಿದ್ಯಾಭ್ಯಾಸಗಳಲ್ಲಿ ಅತ್ಯಂತ ಆಧುನಿಕವಾದ ಶಕ್ತಿಕೇಂದ್ರಗಳನ್ನು ಸ್ಥಾಪಿಸಿದ ಪೈ ಕುಟುಂಬವಿದೆ.

ಈ ಎಲ್ಲರ ನಡುವೆಯೂ ಇದ್ದು ಕಾರಂತರು ತಮ್ಮ ಸ್ವಂತಿಕೆಯನ್ನು ಕಾಯ್ದುಕೊಂಡಿದ್ದರು. ದಕ್ಷಿಣ ಕನ್ನಡ ಜಿಲ್ಲೆಯ ಇನ್ನೊಂದು ಭೂತವೆಂಬಂತೆ ಸಿಡುಕುತ್ತ, ಹೋರಾಡುತ್ತ, ಪ್ರೀತಿಸುತ್ತ, ಬಂಡವಾಳಶಾಹಿ ವ್ಯವಸ್ಥೆಯನ್ನು ಆಧುನಿಕ ವಿಜ್ಞಾನವನ್ನೂ ಒಮ್ಮೆ ಬೆಂಬಲಿಸುತ್ತ, ಇನ್ನೊಮ್ಮೆ ಪರಿಸರವಾದಿಯಾಗಿ ಅಣುಸ್ಥಾವರಗಳನ್ನು ವಿರೋಧಿಸುತ್ತ, ಯಕ್ಷಗಾನದ ವೇಷದಲ್ಲಿ ತಾನೇ ಪುರಾಣ ದೇವತೆಯಾಗುತ್ತ, ಹಾಗೇ ಪುರಾಣ ಭಂಜಕರಾಗುತ್ತ ಬದುಕಿದರು. ತಮ್ಮ ಉದ್ದ ಕೂದಲು, ಮೀಸೆ, ಜುಬ್ಬ, ಕಚ್ಚೆಪಂಚೆಗಳಲ್ಲಿ ಅವರು ಥೇಟು ದಕ್ಷಿಣ ಕನ್ನಡದವರು. ಆದರೆ ವಿಚಾರದಲ್ಲಿ ಏನನ್ನಾದರೂ ಪ್ರಶ್ನಿಸಿಯೇ ಒಪ್ಪಬೇಕೆಂಬ ಹಠದ ಆಧುನಿಕರು. ಪರಂಪರೆಯೂ, ಆಧುನಿಕತೆಯೂ ಒಟ್ಟಾಗಿ ಇರಬಹುದೆಂಬುದನ್ನು ಹೀಗೆ ಕಾರಂತರು ತಮ್ಮ ಅಸ್ತಿತ್ವದಲ್ಲೇ ತೋರಿಸಿದ್ದರು ಎಂಬುದನ್ನು ಮರೆಯಬಾರದು. ಕಾರಂತರು ಮಾತ್ರವಲ್ಲ; ಮತಾಚರಣೆಯ ವಿಷಯದಲ್ಲಿ ವಿಚಾರವಾದಿಯಾಗಿದ್ದೂ ಪರಮಹಂಸರ ಮುಖೇನ ಅಪ್ಪಟ ಆಧುನಿಕ ಭಾರತೀಯರಾಗಿದ್ದ ಕುವೆಂಪು, ಹಣೆಯ ಮೇಲಿನ ಶ್ರೀವೈಷ್ಣವ ಚಿಹ್ನೆಯ ಮಾನವವಾದಿ ಮಾಸ್ತಿ – ಪರಂಪರೆಯಿಂದಲೂ, ಆಧುನಿಕತೆಯಿಂದಲೂ ಪ್ರೇರಣೆ ಪಡೆದು ಬೆಳೆದವರು. ಇನ್ನು ಬೇಂದ್ರೆ? ಅವರದು ವಿಲಕ್ಷಣ ಬಗೆಯ ಯಾವ ಕಾಲಕ್ಕೂ ಬದ್ಧವಾಗದ ಭಾರತೀಯತೆ. ಅಡಿಗರು ನಮ್ಮಂತೆ ತೊಳಲಿದವರು; ಮೊಗೇರಿಯ ನೆನಪುಗಳನ್ನು ಆಧುನಿಕ ಇಮೇಜುಗಳಲ್ಲಿ ಊರಿದವರು.

ನಮ್ಮ ಭಾಷೆಗಳಲ್ಲಿ ತನ್ನ ಪ್ರಾಣವನ್ನೂ, ಅಂತಃಸತ್ವವನ್ನೂ ಕಾಪಾಡಿಕೊಂಡ ಭಾರತೀಯತೆ ಈ ಬಗೆಗಳಲ್ಲಿ ಉಳಿದಿರುತ್ತದೆ ಎಂಬುದು ನಮ್ಮ ಆತಂಕವನ್ನು ಕಡಿಮೆ ಮಾಡುವುದಿಲ್ಲ. ಈ ಮೇಲಿನ ಹಿರಿಯರಲ್ಲಿ ನಾಶವಾಗದಂತೆ ಉಳಿದುಕೊಂಡ ನಮ್ಮ ಪರಂಪರೆಯ ಉತ್ತಮ ಗುಣಗಳು ಅವರಲ್ಲಿ ಕೂಡ ಒಂದು ಟೆನ್‌ಶನ್‌ನಲ್ಲಿ ಹುಟ್ಟಿರುತ್ತವೆ. ಈ ಟೆನ್‌ಶನ್ ಮಾಯವಾದದ್ದೇ ಅವರ ಪರಂಪರೆಯ ಶ್ರದ್ಧೆ ಕೇವಲ ಕೀರ್ತನೆಯಂತೆ ಕಾಣತೊಡಗುತ್ತದೆ – ಬೇಂದ್ರೆ, ಮಾಸ್ತಿ, ಪು.ತಿ.ನ. ಯಾರೂ ಇದಕ್ಕೆ ವಿನಾಯಿತಿಯಲ್ಲ.

ಕಾರಂತರಲ್ಲೂ ಹೀಗಾಗಬಹುದೆಂಬುದನ್ನು ಟಿ. ಎನ್. ಕೃಷ್ಣರಾಜು ತೋರಿಸಿ ಕೊಟ್ಟಿದ್ದಾರೆ. 'ಕೇವಲ ಮನುಷ್ಯರು' ಎಂಬ ಕಾದಂಬರಿಯಲ್ಲಿ ಕಾರಂತರು ಸಂಪ್ರದಾಯ ಶರಣರನ್ನು ಅನುಕಂಪದಿಂದ ನೋಡಿದ್ದಾರೆ. ಆದರೆ ಕಾರಂತರು ಹೀಗೆ ಮಾಡುವಾಗ ಸಪ್ಪೆಯಾದಂತೆ, ತನ್ನ ಮಾತಿನ ಸತ್ವ ಕಳೆದುಕೊಂಡವರಂತೆ ಕೃಷ್ಣರಾಜುಗೆ ಕಾಣುತ್ತಾರೆ. ಈ ಕಾದಂಬರಿಯಲ್ಲಿ ಕೃಷ್ಣರಾಜು ಪ್ರಕಾರ 'ಖಾರ ಕಳೆದುಕೊಂಡ ಉಪ್ಪಿನ ಕಾಯಿಯಂತೆ ಕೆಲವು ಕಡೆ ಪಾತ್ರಗಳು 'ನೀರಸ'ವಾಗುತ್ತವೆ'.

ಕಾರಂತರನ್ನು ನಮ್ಮ ಪೌರ್ವಾತ್ಯ ಸಾಹಿತ್ಯ ವಿಮರ್ಶೆಯ ದೃಷ್ಟಿಯಿಂದ ವಿಮರ್ಶಿಸಿದವರೇ ಕಡಿಮೆ, ಔಚಿತ್ಯದ ಮಾನದಂಡದಿಂದ ಕಾರಂತರ 'ಮೈಮನಗಳ ಸುಳಿಯಲ್ಲಿ' ಕೃತಿಯನ್ನು ರಂಗಾಚಾರ್ ವಿಮರ್ಶಿಸಿದ್ದಾರೆ. ಅಮೆರಿಕದ ಕನ್ನಡಿಗರಲ್ಲಿ ಇಂಥ ಒಂದು ಮನಸ್ಸು ನಮ್ಮಲ್ಲೇ ಅಪರೂಪವಾದದ್ದು – ಇದೆ ಎಂಬುದು ನನ್ನಲ್ಲಿ ಆಶ್ಚರ್ಯವನ್ನೂ, ಗೌರವವನ್ನೂ ಹುಟ್ಟಿಸಿತು. ಆಧುನಿಕ ನಾಗರಿಕತೆ ನಮಗೆ ನಮ್ಮ ಹಿಂದಿನ ಎಲ್ಲ ವೈಚಾರಿಕ ಕ್ರಮಗಳನ್ನೂ ಮರೆಸುತ್ತದೆ ಎಂಬ ನನ್ನ ಆತಂಕಕ್ಕೆ ಇಂಥ ವಿನಾಯಿತಿಗಳು ಎದುರಾದಾಗ ಮತ್ತೆ ಆಲೋಚಿಸುವಂತಾಗುತ್ತದೆ. ಸಂಸ್ಕೃತದ ಪರಂಪರೆಯಲ್ಲಿ ಬೆಳೆದ ಮನಸ್ಸು ಆಧುನಿಕ ವಿಚಾರದ ಒಂದು ಕೃತಿಗೆ ಎದುರಾಗಿ ಅದನ್ನು ಹೇಗೆ ಸ್ವೀಕರಿಸುತ್ತದೆ ಎಂಬುದಕ್ಕೆ ಇಲ್ಲಿ ಒಂದು ಉದಾಹರಣೆ ಸಿಗುತ್ತದೆ. ಸಂಸ್ಕೃತದಲ್ಲಿರುವ ವೈಚಾರಿಕ ಪರಂಪರೆ ಅತ್ಯಂತ ಆಧುನಿಕವಾದಕ್ಕೂ ಎದುರಾಗಬಹುದು ಎಂಬುದು ಇನ್ನು ಮುಂದೆ ಮುಖ್ಯವಾಗುತ್ತ ಹೋಗಬಹುದೇನೊ?

ರಂಗಾಚಾರ್ ಎಂಜಿನಿಯರ್ ಆದರೆ ವೈ. ಆರ್. ಮೋಹನ್ ಸಮಾಜ ಶಾಸ್ತ್ರಜ್ಞರು. 'ಕುಡಿಯರ ಕೂಸು' ಕೃತಿಯನ್ನು ಇವರು ವಿಮರ್ಶಿಸಿದ್ದಾರೆ. ತಮ್ಮ ಶಾಸ್ತ್ರದ ಜ್ಞಾನ ಮತ್ತು ರಸಗ್ರಹಣ ಶಕ್ತಿ ಎರಡಕ್ಕೂ ಕುಂದಾಗದಂತೆ ಕಾರಂತರನ್ನು ಇವರು ನೋಡಿ ಕೃತಿಯ ಶಕ್ತಿಯನ್ನೂ, ಮಿತಿಯನ್ನೂ ವಿವರಿಸಿದ್ದಾರೆ. ನಾರಾಯಣ ಹೆಗ್ಡೆ – ಪ್ರಾಯಶಃ ಇವರು ಮಾತ್ರ ಲೇಖಕರ ನಡುವೆ ಸಾಹಿತ್ಯದ ಪಾಠ ಹೇಳುವವರು – ಕಾರಂತರಂಥವರ ಕೃತಿಗಳ ಪ್ರಾದೇಶಿಕ ಸತ್ವವನ್ನು ಇಂಗ್ಲಿಷಿಗೆ ಭಾಷಾಂತರಿಸುವಾಗ ಏಳುವ ಸಮಸ್ಯೆಗಳನ್ನು ಸೂಕ್ಷ್ಮವಾಗಿ, ವಿವರವಾಗಿ ಚರ್ಚಿಸಿದ್ದಾರೆ.

ಇಲ್ಲಿನ ಲೇಖನಗಳಲ್ಲಿ ವೈಯಕ್ತಿಕವಾಗಿ ನನಗೆ ಪ್ರಿಯವಾದ ಒಂದು ಲೇಖನವೆಂದರೆ ಕಾರಂತರ ಕಣ್ಣಿನಲ್ಲಿ ಇತರರು ಹೇಗೆ ಕಾಣುತ್ತಾರೆಂಬ ಬಗ್ಗೆ ರಾಜಗೋಪಾಲ್ ಬರೆದ ಲೇಖನ. ಇದೊಂದು ಗಟ್ಟಿಯಾದ, ದೀರ್ಘವಾದ ಲೇಖನ, ಲೇಖನವನ್ನು ನಾನು ವಿವರಿಸಲು ಹೋಗುವುದಿಲ್ಲ. ಲೇಖಕರಿಗೆ ಕಾರಂತರ ಬರವಣಿಗೆ ಪ್ರಿಯವೆನ್ನಿಸಿದೆ; ಜೊತೆಗೇ ಅದರ ಮಿತಿಯೂ ಕಂಡಿದೆ. ಕಾರಂತರ ಕಠಿಣತೆ ನಿಷ್ಠೂರಗಳ ಬಗ್ಗೆ ಎಲ್ಲರೂ ಗೌರವದಿಂದ ಬರೆದರೆ, ರಾಜಗೋಪಾಲ್‌ಗೆ ಈ ಕಠಿಣತೆಯಲ್ಲಿ ಒಂದು ದೋಷವಿರುವಂತೆ ಕಾಣುತ್ತದೆ. ಒಮ್ಮೆ ಕಾರಂತರು ಅನಿವಾಸಿ ಕನ್ನಡಿಗರನ್ನು ಉದ್ದೇಶಿಸಿ ಮಾತನ್ನಾಡುತ್ತ – ನಮ್ಮ ಸಂಗೀತದಲ್ಲಿ ಸಂತೋಷ ಉತ್ಸಾಹಗಳೇ ಇಲ್ಲ – ಎಂದು ಟೀಕಿಸುವ ಭರದಲ್ಲಿ ದೀಕ್ಷಿತರ 'ವಾತಾಪಿ ಗಣಪತಿಂ ಭಜೇ' ಹಾಡನ್ನು ತ್ಯಾಗರಾಜರ ಕೃತಿ ಎಂದುಬಿಡುತ್ತಾರೆ. ಇದಕ್ಕೆ ರಾಜಗೋಪಾಲರ ಪ್ರತಿಕ್ರಿಯೆ ಗಮನಿಸಿ:

ಇಲ್ಲಿ (ಅಮೆರಿಕದಲ್ಲಿ) ನೆಲೆಸಿದ ಕನ್ನಡಿಗರಿಗೆ ತಮ್ಮ ನಾಡಿನ ಪ್ರಸಿದ್ಧ ಸಾಹಿತಿಯೊಬ್ಬರನ್ನು ಕರೆಸಿಕೊಂಡು ಅವರೊಡನೆ ತಮ್ಮ ಸಡಗರ ಹಂಚಿಕೊಳ್ಳಬೇಕೆಂದಿದ್ದ ಆಸೆಯೆಲ್ಲ ತಣ್ಣಗಾಯಿತು. 'ಕಾರಂತರ ಮಾತು ಖಾರಾಂತ ಗೊತ್ತಿಲ್ಲವೆ' ಎಂದು ನಾನು

ಇತರರೊಡನೆ ನಗೆಯಾಡಿಕೊಂಡಿದ್ದರೂ ಮನಸ್ಸಿನಲ್ಲಿ ಈ ಹಿರಿಯರಲ್ಲಿ ಇಷ್ಟು ಕಹಿ ಏಕೆ? ಎಂಬ ಯೋಚನೆ ಮಿಸುಕುತ್ತಲೇ ಇತ್ತು.

ತನ್ನ ಮನಸ್ಸಿನಲ್ಲಿದ್ದುದನ್ನು ರಾಜಗೋಪಾಲ್ ಮುಚ್ಚಿಡುವುದೂ ಇಲ್ಲ; ಅತಿ ಮಾಡುವುದೂ ಇಲ್ಲ. ಕಾರಂತರ ನಿಜವಾದ ಶಕ್ತಿಯ ಇತಿ ಮಿತಿಗಳನ್ನು, ಸ್ವಾರಸ್ಯಗಳನ್ನು ಕಾಣುವ ರಾಜಗೋಪಾಲರ ಅಧ್ಯಯನಕ್ಕೆ ಈ ಭಾವನೆ ಅಡ್ಡಿಯಾಗುವುದೂ ಇಲ್ಲ.


ಈ ಮಾತಿನ ಕ್ರಮದ ಹಿಂದೆ ಒಂದು ಪರಂಪರೆಯೇ ಇದೆ. ಇದು ಹಳೆ ಮೈಸೂರಿನದ್ದು; ಸಜ್ಜನಿಕೆಯದು. ಇದರ ಪರಮಾಚಾರ್ಯರೆಂದರೆ, ಮಾಸ್ತಿ, ಡಿವಿಜಿ, ವಿಸೀ, ವೆಂಕಣ್ಣಯ್ಯನಂಥ ಹಿರಿಯರು, ಔಚಿತ್ಯ ಜ್ಞಾನ, ರಸಿಕತೆ, ಅಬ್ಬರಕ್ಕೆ ನಾಚುವ ದಾಕ್ಷಿಣ್ಯ – ಇವರಲ್ಲಿ ಮೈಗೂಡಿದ ಗುಣಗಳು. ಇವರು ತಮ್ಮ ಆತ್ಮೀಯತೆಯನ್ನು ಸ್ನೇಹಿತರಿಗೆ ಗೊತ್ತುಪಡಿಸುವುದು ನವಿರಾದ ಹಾಸ್ಯದಲ್ಲಿ ಅಥವಾ ಪರಸ್ಪರವಾದ ಕಿಲಾಡಿತನದ ಲೇವಡಿಯಲ್ಲಿ.

ಇಂಥ ಸಜ್ಜನಿಕೆ ಅಪ್ರಮಾಣಿಕತೆವಾಗದೆ, ಕಟುವಾಗದೆ, ಪ್ರಾಯಶಃ ಕೊಂಚ ಸಂಕೋಚಪಡುತ್ತ ಸತ್ಯವನ್ನು ಪ್ರಕಟಿಸುತ್ತದೆ. ವ್ಯಕ್ತಿಯ ಶೀಲದ ಬಲದ ಮೇಲೆ ಈ ಹದ ಪ್ರಾಪ್ತವಾಗಿರುತ್ತದೆ. ಈ ಶೀಲವೆನ್ನುವುದು ನೈಜತೆಯನ್ನು ಕಳೆದುಕೊಳ್ಳದ ಮಾತಿನ ನಯದ ಮೇಲೆ ಅವಲಂಬಿಸಿರುತ್ತದೆ. ಈ ಶೀಲದಿಂದ ಹುಟ್ಟಿಕೊಳ್ಳುವುದೇ ಶೈಲಿ. ಇಂಥ ಶೈಲಿಯಿಂದ ಶಿಕ್ಷಿತವಾದ ಮನಸ್ಸು ರಾಜಗೋಪಾಲರದು. ಇಂಥವರು ತಮ್ಮ ದಾಕ್ಷಿಣ್ಯದಿಂದಾಗಿ ಬರೆಯುವುದೇ ಕಡಿಮೆ.

ಆದರೆ ನಾಗ ಐತಾಳರು ಎಂಥವರಿಂದಲೂ ಬರೆಯಿಸಬಲ್ಲರು. ಅಮೆರಿಕದಲ್ಲಿರುವ ಕನ್ನಡ ಸಮುದಾಯದಿಂದ ಕನ್ನಡದ ಕೆಲಸವನ್ನು ಇಷ್ಟು ಚೆನ್ನಾಗಿ ಮಾಡಿಸಿಕೊಂಡು ಕನ್ನಡವನ್ನು ಉಳಿಸಿ, ಬೆಳೆಸುತ್ತಿರುವ ನಾಗ ಐತಾಳರನ್ನು ಅಭಿನಂದಿಸುತ್ತೇನೆ.

'ಕಾರಂತ ಚಿಂತನ'ಕ್ಕೆ ಬರೆದ ಮುನ್ನುಡಿ.

ಮೊದಲ ಮುದ್ರಣ 2000 ಪ್ರ: ಅಕ್ಷರ ಪ್ರಕಾಶನ ಹೆಗ್ಗೋಡು



ಕುವೆಂಪು ಸಾಹಿತ್ಯ ಸಮೀಕ್ಷೆ

– ಜಿ. ಎಸ್. ಶಿವರುದ್ರಪ್ಪ

ಸುಮಾರು ಎರಡು ತಿಂಗಳ ಹಿಂದೆ ಎಂದು ಕಾಣುತ್ತದೆ. ಅಮೆರಿಕಾದಿಂದ ನನಗೊಂದು ದೂರವಾಣಿಯ ಕರೆ ಬಂತು. ಹಾಗೆ ಕರೆದವರು ನನಗೆ ಪ್ರಿಯರಾದ ಶ್ರೀ ನಾಗ ಐತಾಳರು. ಅವರು ಹೇಳಿದರು: 'ಅಮೆರಿಕಾದ ಸಾಹಿತ್ಯಾಸಕ್ತ ಕನ್ನಡಿಗರಾದ ನಾವು ಕೆಲವರು, ಶ್ರೀ ಕುವೆಂಪು ಶತಮಾನೋತ್ಸವದ ನೆನಪಿಗೆ 'ಕುವೆಂಪು ಸಾಹಿತ್ಯ ಸಮೀಕ್ಷೆ' ಎಂಬ ಸಂಪುಟವನ್ನು ಪ್ರಕಟಿಸುತ್ತಿದ್ದೇವೆ. ನೀವು ಅದಕ್ಕೊಂದು ಮುನ್ನುಡಿ ಬರೆಯಬೇಕು.' ಈ ಪ್ರಿಯವಾದ ಕಾರ್ಯವನ್ನು ನಾನು ಸಂತೋಷದಿಂದ ಮಾಡುತ್ತೇನೆ – ಎಂದೆ.

ನಾನು ಅಮೆರಿಕಾಕ್ಕೆ ಮೊದಲ ಸಲ ಹೋದದ್ದು 1987ರಂದು. ಅನಂತರ ಇನ್ನೂ ಎರಡು ಸಲ ಹೋಗಿ ಬಂದಿದ್ದೇನೆ. ಅಲ್ಲಿನ ಅನೇಕ ಕನ್ನಡ ಬಂಧುಗಳ ಅತಿಥಿಯಾಗಿದ್ದೇನೆ; ಹಲವಾರು ಕನ್ನಡ ಕೂಟಗಳ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದೇನೆ; ಅನೇಕ ಅಭಿಮಾನಿಗಳ ಹಾಗೂ ಗೆಳೆಯರ ಪ್ರೀತಿ–ವಿಶ್ವಾಸಗಳನ್ನು ಗಳಿಸಿಕೊಂಡಿದ್ದೇನೆ. ಯಾವ ಸಲ ಹೋದರೂ ನಮ್ಮಲ್ಲಿಗೆ ಬರದೆ ನೀವು ಹೇಗೆ ಹೋಗುತ್ತೀರಿ?' ಎಂದು ನನ್ನನ್ನು ತಾವಿದ್ದಲ್ಲಿಗೆ ಬರಮಾಡಿಕೊಂಡು, ನನ್ನನ್ನು ತಮ್ಮ ಪ್ರೀತಿ–ವಿಶ್ವಾಸದಲ್ಲಿ ಕಟ್ಟಿ ಹಾಕಿದ ಕೆಲವರಲ್ಲಿ ಶ್ರೀ ಐತಾಳರು ಮೊದಲಿಗರು. ಚಿಕಾಗೋದಲ್ಲಿ ಅವರಿದ್ದಾಗ ಹೀಗೆ

ನಾನೂ ಅವರೂ ಗಂಟೆಗಟ್ಟಲೆ ಕೂತು ಏನೆಲ್ಲಾ ವಿಷಯಗಳನ್ನು ಕುರಿತು ನಡೆಯಿಸಿದ ಎಷ್ಟೋ ಸಂವಾದಗಳ ಸಂದರ್ಭಗಳು ಇನ್ನೂ ನನ್ನ ನೆನಪಿನಲ್ಲಿ ಹಸಿರಾಗಿವೆ. ಶಿವರಾಮ ಕಾರಂತರಿಂದ ಹಿಡಿದು, ಡಿ. ಆರ್. ನಾಗರಾಜ್‌ವರೆಗೆ, ಕನ್ನಡದ ಅನೇಕ ಸಾಹಿತಿಗಳ ಹಾಗೂ ಕಲಾವಿದರ ಒಡನಾಟವಿದೆ ಐತಾಳರಿಗೆ, ನಾಲ್ಕು ವರ್ಷಗಳ ಹಿಂದೆ ಹೀಗೆ ಅಮೆರಿಕಾದ ಕನ್ನಡಿಗರಿಂದ ಕಾರಂತರನ್ನು ಕುರಿತು ಬರೆಯಿಸಿದ ಲೇಖನಗಳ ಒಂದು ಸಂಪುಟ 'ಕಾರಂತ ಚಿಂತನ' ಇವರ ಸಾಹಸದ ಪರಿಣಾಮವೇ, ಮತ್ತೆ ಅದೇ ಐತಾಳರೇ ಕುವೆಂಪು ಶತಮಾನೋತ್ಸವದ ನೆನಪಿಗೆ 'ಕುವೆಂಪು ಸಾಹಿತ್ಯ ಸಮೀಕ್ಷೆ' ಎಂಬ ಸಂಪುಟವೊಂದನ್ನು ಸಂಪಾದಿಸಿದ್ದಾರೆ. ಮುನ್ನುಡಿಯ ನೆಪಮಾಡಿಕೊಂಡು ನನ್ನನ್ನು ತಮ್ಮ ಜತೆಗೆ ಸೇರಿಸಿಕೊಂಡಿದ್ದಾರೆ.

'ಕುವೆಂಪು ಸಾಹಿತ್ಯ ಸಮೀಕ್ಷೆ', ಕುವೆಂಪು ಸಾಹಿತ್ಯದ ಹಲವು ಮುಖಗಳನ್ನು ಕುರಿತು, ಕಡಲಾಚೆಯ ಕನ್ನಡಿಗರು ಬರೆದ ಲೇಖನಗಳ ಒಂದು ಸಂಪುಟ. ಇಲ್ಲಿರುವ ಲೇಖನಗಳನ್ನು ಬರೆದ ಯಾರೂ ಮೂಲತಃ ಸಾಹಿತ್ಯದ ವಿದ್ಯಾರ್ಥಿಗಳಲ್ಲ ಸಾಹಿತ್ಯವನ್ನು ಕಲಿಸುವ ಸಂಸ್ಥೆಗಳಿಗೆ ಸೇರಿದವರೂ ಅಲ್ಲ. ಅವರೆಲ್ಲ ಬಹುತೇಕ ವೈದ್ಯರು, ಎಂಜಿನಿಯರುಗಳು, ಸಮಾಜ ಶಾಸ್ತ್ರಜ್ಞರು, ವಿವಿಧ ವೈಜ್ಞಾನಿಕ ಹಾಗೂ ಔದ್ಯೋಗಿಕ ಕ್ಷೇತ್ರಗಳಲ್ಲಿ ಕೆಲಸ ಮಾಡುತ್ತ ಇರುವವರು. ಒಂದು ವೇಳೆ ಇವರೇನಾದರೂ ಕರ್ನಾಟಕದಲ್ಲೆ ಇದ್ದಿದ್ದರೆ, ಇಲ್ಲಿರುವ ಎಷ್ಟೋ ಇಂಜಿನಿಯರುಗಳ ಹಾಗೆ, ವೈದ್ಯರುಗಳ ಹಾಗೆ ತಮಗೂ ಕನ್ನಡ ಸಾಹಿತ್ಯಕ್ಕೂ ಏನೇನೂ ಸಂಬಂಧವಿಲ್ಲದವರ ಹಾಗೆ ಹಾಯಾಗಿ ಇದ್ದುಬಿಡುತ್ತಿದ್ದರೇನೋ! ಆದರೆ ಇವರಿರುವುದು ದೂರದ ಅಮೆರಿಕಾದಲ್ಲಿ; ತಾವು ಹುಟ್ಟಿ ಬೆಳೆದು ಬದುಕಿದ ಕನ್ನಡ ನಾಡಿನ ಸಾಂಸ್ಕೃತಿಕ ಸ್ಮರಣೆಗಳನ್ನು ತಮ್ಮ ಅಂತರಾಳಗಳಲ್ಲಿ ಅಡಗಿಸಿಕೊಂಡ ಏಕಾಕಿತನಗಳಲ್ಲಿ, ಹೀಗಾಗಿ ಕೆಲವರಿಗಾದರೂ ಈ ಪರಿಸರದಲ್ಲಿ ತಮ್ಮನ್ನು ಹಿಡಿದು ಕೂಡಿಸಬಹುದಾದದ್ದು, ತಮ್ಮನ್ನು ತಾವು ಕಂಡುಕೊಳ್ಳಬಹುದಾದದ್ದು ಮತ್ತು ತಮ್ಮ ಪರಂಪರೆಯೊಂದಿಗೆ ಅನುಸಂಧಾನ ನಡೆಯಿಸುತ್ತ ತಮ್ಮ ವ್ಯಕ್ತಿತ್ವವನ್ನು ಉಳಿಸಿಕೊಳ್ಳಲು ಸಾಧ್ಯವಾಗುವುದು ಕನ್ನಡಪರ ಕಾಳಜಿಗಳ ಮೂಲಕವೇ ಎಂದು ಅನ್ನಿಸುವುದು ಸಹಜವಾಗಿದೆ.

ಒಂದು ಕಾಲಕ್ಕೆ ಭಾರತೀಯರಿಗೆ 'ಸ್ವದೇಶೋ ಭುವನತ್ರಯಂ'. ಆದರೆ ಈ ಭುವನತ್ರಯವೇ ಸ್ವದೇಶ ಎಂಬ ಅರಿವಿಗೆ ಕಣ್ ತೆರೆದಿದ್ದೇವೆ. ಹೀಗಾಗಿ ಭಾರತದವರೂ ಸೀಮೋಲ್ಲಂಘನ ಮಾಡಿ ದೇಶ–ವಿದೇಶಗಳಲ್ಲಿ ನೆಲಸುವ ಧೈರ್ಯ ಮಾಡಿದ್ದಾರೆ.

ತಮ್ಮ ಅದೃಷ್ಟವನ್ನರಸಿಕೊಂಡು, ಯಾವತ್ತಿನಿಂದಲೋ ಅಮೆರಿಕಾಕ್ಕೆ ಬಂದು ನೆಲಸಿರುವ ಕನ್ನಡಿಗರು, ಬೇರೊಂದು ಸಾಂಸ್ಕೃತಿಕ ಸಂದರ್ಭದಲ್ಲಿ ಬದುಕಬೇಕಾಗಿ ಲೌಕಿಕವಾಗಿ ಅತ್ಯಂತ ಆಕರ್ಷಕವೂ, ಪ್ರಬಲವೂ ಆದ ಜೀವನಕ್ರಮದೊಂದಿಗೆ ಮುಖಾಮುಖಿಯಾಗುವ ಅನಿವಾರ್ಯತೆ ಅವರಿಗೆ ಒದಗಿದೆ. ಹೀಗಾಗಿ ಇವರು

ಒಂದು ಬಗೆಯ ಸಾಂಸ್ಕೃತಿಕ ಸಂಘರ್ಷಕ್ಕೆ ಒಳಗಾಗಿದ್ದಾರೆ ಎನ್ನಬಹುದು. ಈ ಸಂಘರ್ಷದಿಂದ ಲಾಭವೂ ಉಂಟು, ಭಯವೂ ಉಂಟು. ಲಾಭ, ಯಾಕೆಂದರೆ ನಮ್ಮ ಭಾರತೀಯ ಪರಿಸರದಿಂದ ಕಟ್ಟಿಕೊಂಡು ಬಂದ ಎಷ್ಟೋ ಸಾಂಪ್ರದಾಯಿಕವಾದ ಸಂಗತಿಗಳು, ವಿಚಾರಗಳು, ನಂಬಿಕೆಗಳು ಈ ಜೀವನಕ್ರಮದ ಸಂಪರ್ಕದಿಂದ ಒದಗುವ ಆಘಾತಗಳಿಂದ, ಚಿಕಿತ್ಸೆಗೆ ಒಳಗಾಗುತ್ತವೆ, ತಿದ್ದುಪಡಿ ಹೊಂದುತ್ತವೆ, ಹಾಗೂ ಬದುಕನ್ನು ನೋಡುವ ಮತ್ತು ಗ್ರಹಿಸುವ ನಿಲುವುಗಳು ಮಾರ್ಪಾಡು ಹೊಂದುತ್ತವೆ, ಇನ್ನೆಷ್ಟೋ ಅಸಂಗತಿಗಳು ವಿಮರ್ಶೆಗೆ ಗುರಿಯಾಗುತ್ತವೆ. ಇವು ವ್ಯಕ್ತಿತ್ವಕ್ಕೆ ಒದಗುವ 'ಲಾಭ' ಎನ್ನಬಹುದು. ಇನ್ನು 'ಭಯ' – ಯಾಕೆಂದರೆ, ಈ ನೂತನವೂ, ಪ್ರಬಲವೂ ಆಕರ್ಷಕವೂ ಆದ ಜೀವನ ವಿಧಾನ ಪ್ರವಾಹದೊಳಗೆ, ತಮ್ಮನ್ನು ತಾವು ಕಳೆದುಕೊಳ್ಳುವ ಆತಂಕದಿಂದ. ಇಲ್ಲಿನ ಪ್ರಶ್ನೆ, ಈ ಸಾಂಸ್ಕೃತಿಕ ಸಂಘರ್ಷದಲ್ಲಿ ಕನ್ನಡಿಗರಾದ ನಾವು ನಮ್ಮ ವ್ಯಕ್ತಿತ್ವವನ್ನು ಉಳಿಸಿಕೊಳ್ಳುವುದು ಹೇಗೆ – ಎನ್ನುವುದು. ಈ ಭಯ ಕೂಡಾ ಒಂದು ರೀತಿಯಲ್ಲಿ ಸಾಪೇಕ್ಷವಾದುದು ಎನ್ನಬಹುದು. ಅಮೇರಿಕಾದಲ್ಲಿರುವಾಗ ನಾವೂ ಅಮೆರಿಕನ್ನರಾಗುವುದರಲ್ಲಿ ತಪ್ಪೇನಿದೆ ಎಂದು ಕೆಲವರು ಕೇಳಬಹುದು. ಆದರೆ ಭಾರತದಂಥ ದೇಶದಿಂದ ಬಂದ, ಮತ್ತು ದಟ್ಟವಾದ ಸಾಂಸ್ಕೃತಿಕ ಸ್ಮರಣೆಗಳನ್ನು ಹುದುಗಿಸಿಕೊಂಡ, ಹಾಗೂ ವ್ಯಕ್ತಿತ್ವದಲ್ಲಿ ನಂಬಿಕೆಯುಳ್ಳ ಕೆಲವರಿಗಾದರೂ ತಮ್ಮತನವನ್ನು ಬಿಟ್ಟುಕೊಟ್ಟು ಬೇರೊಂದರಲ್ಲಿ ಕರಗಿಹೋಗುವುದು ಅಪೇಕ್ಷಣೀಯವೆಂದಾಗಲೀ, ಅನಿವಾರ್ಯವೆಂದಾಗಲೀ ಅನ್ನಿಸಲಾರದು. ಆದಕಾರಣ ಅಮೆರಿಕಾದಲ್ಲಿದ್ದೂ ತಮ್ಮ ಕನ್ನಡ ವ್ಯಕ್ತಿತ್ವವನ್ನು ಉಳಿಸಿಕೊಳ್ಳುವ ಸಂರಕ್ಷಕ ಕವಚಗಳನ್ನು ಕಂಡುಕೊಳ್ಳುವುದು ಅಗತ್ಯವಾಗಿದೆ. (ಈ ಅನಿವಾರ್ಯತೆ ಕರ್ನಾಟಕದಲ್ಲಿ ಸಾಕಷ್ಟು ಕಾಲ ಇದ್ದು ಅನಂತರ ಅಮೆರಿಕಾದಲ್ಲಿ ಬಂದು ನೆಲಸಿದವರಿಗೆ ಇರುವಂತೆ, ಅಲ್ಲೇ ಹುಟ್ಟಿ ಬೆಳೆದ ತಲೆಮಾರಿನವರಿಗೆ ಇರುತ್ತದೆಯೆ...) ಅನುಮಾನಾಸ್ಪದವಾದ ಉಳಿಸಿಕೊಳ್ಳುವುದರಲ್ಲಿ ಒಂದು ಬಗೆಯ ಧೀರೋದಾತ್ತತೆ ಮತ್ತು ಇದೆಯೆಂಬುದನ್ನು ಬಹುಮಂದಿ ಕಂಡುಕೊಂಡಿದ್ದಾರೆ. ಕಡಲಾಚೆಯ ಈ ಕನ್ನಡಿಗರು – ಇವರನ್ನು ಭಾರತೀಯ ಕನ್ನಡಿಗರೆಂದು ಕರೆಯುವುದು ಹೆಚ್ಚು ಉಚಿತ – ತಮ್ಮ ಕನ್ನಡ – ಭಾರತದ ಪ್ರಾದೇಶಿಕ ಸಾಂಸ್ಕೃತಿಕ ಸ್ಮರಣೆಗಳನ್ನು ಪುನರಭಿನಯಿಸುವ, ಹಾಡು, ಕುಣಿತ, ಕತೆ, ಕವಿತೆ, ನಾಟಕ, ಹಬ್ಬ– ಹರಿದಿನ ಇತ್ಯಾದಿಗಳ ಮೂಲಕ ತಮ್ಮನ್ನು ತಾವು ಅಭಿವ್ಯಕ್ತಪಡಿಸಿಕೊಳ್ಳುತ್ತ ಮತ್ತು ತಮ್ಮನ್ನು ಹಿಡಿದು ಒಂದುಗೂಡಿಸುವ ಸಂಘ – ಸಂಸ್ಥೆಗಳನ್ನು ಕಟ್ಟಿಕೊಳ್ಳುತ್ತ ಸಮ್ಮೇಳನಗಳನ್ನು ಏರ್ಪಡಿಸುತ್ತ ಕರ್ನಾಟಕದಿಂದ ಬರುವ ಅಥವಾ ಬರಮಾಡಿಕೊಳ್ಳುವ ಸಾಹಿತಿ ಚಿಂತಕರೊಂದಿಗೆ, ಸಂವಾದಿಸುತ್ತ ಸ್ಪಂದಿಸುತ್ತ– ಈ ಬಗೆಯ ಬಹುಮುಖೀ ಚಟುವಟಿಕೆಗಳ ಮೂಲಕ ತಮ್ಮೊಳಗಿನ ಕನ್ನಡತನವನ್ನು ತುಕ್ಕು ಹಿಡಿಯದಂತೆ ಕಾಪಾಡಿಕೊಂಡಿದ್ದಾರೆ. ಹೀಗೆ ತಮ್ಮ ಬಿಡುವಿಲ್ಲದ ಗಡಿಬಿಡಿಗಳ ನಡುವೆ, ತಮ್ಮ ಕನ್ನಡತನವನ್ನು ಈ ನಮ್ಮ ಕಡಲಾಚೆಯ ಕನ್ನಡಿಗರು ಉಳಿಸಿಕೊಂಡದ್ದರ ಸಂಕೇತವೇ, ಈ 'ಕುವೆಂಪು ಸಾಹಿತ್ಯ ಸಮೀಕ್ಷೆ'.


ಗಮನಿಸಬೇಕಾದ ಸಂಗತಿ ಎಂದರೆ ಶ್ರೀ ಕುವೆಂಪು ಅವರು ಹೊರನಾಡುಗಳಲ್ಲಿ ಬದುಕಬೇಕಾದ ಕನ್ನಡಿಗರಿಗೆ ಒಂದು ರೀತಿಯ ಮಾರ್ಗದರ್ಶಕ ಸೂಕ್ತಿಯೊಂದನ್ನು ಕೊಟ್ಟಿದ್ದಾರೆ. ಅದೆಂದರೆ : 'ಎಲ್ಲಾದರು ಇರು ಎಂತಾದರು ಇರು ಎಂದೆಂದಿಗು ನೀ ಕನ್ನಡವಾಗಿರು' – ಎನ್ನುವುದು. ನನ್ನ ಗಮನಕ್ಕೆ ಬಂದಂತೆ ಅಮೆರಿಕಾದ ಬಹುಸಂಖ್ಯೆಯ ಕನ್ನಡ ಕೂಟಗಳಲ್ಲಿ ಕಾರ್ಯಕ್ರಮಗಳ ಮೊದಲಿಗೆ ಕೇಳಿಬರುವುದು ಯಾವುದೇ ದೇವತಾ ಪ್ರಾರ್ಥನೆ ಅಲ್ಲ; 'ಎಲ್ಲಾದರು ಇರು ಎಂತಾದರು ಇರು ಎಂದೆಂದಿಗು ನೀ ಕನ್ನಡವಾಗಿರ ಎಂಬ ಕುವೆಂಪು ಕವಿತೆಯ ಹಾಡುಗಾರಿಕೆ, ಯಾವತ್ತಿನಿಂದಲೋ ಅಮೆರಿಕಾದ ಕನ್ನಡಿಗರು ಕುವೆಂಪು ಅವರ ಈ ನಿರ್ದೇಶನವನ್ನು ಒಂದು ಮಂತ್ರದೀಕ್ಷೆಯಂತೆ ಒಪ್ಪಿಕೊಂಡು ತಾವು 'ಕನ್ನಡವಾಗಿರುವುದು' ಹೇಗೆ ಎಂಬುದನ್ನು – ಉಳಿದೆಲ್ಲ ವಿದೇಶೀ ಕನ್ನಡಿಗರಿಗಿಂತ ಭಿನ್ನವಾಗಿ, ಮತ್ತು ಅರ್ಥಪೂರ್ಣವಾಗಿ ತೋರಿಸಿಕೊಟ್ಟಿದ್ದಾರೆ. ತಾವು ನಿಂತ ನೆಲವನ್ನೆ ಕರ್ನಾಟಕವನ್ನಾಗಿ ಮಾಡಿಕೊಳ್ಳುವ ಅವರ ಕಾಳಜಿಗಳು, ಕರ್ನಾಟಕದ ನೆಲದಲ್ಲಿ ನಿಂತ ನಮ್ಮವರಿಗೆ ಇದೆಯೆ ಎಂದು ಕೇಳಿಕೊಳ್ಳುವಂಥ ಸ್ಥಿತಿಯಲ್ಲಿದ್ದೇವೆ ನಾವು – ಕಡಲೀಚೆಯ ಕನ್ನಡಿಗರು.

ಇಂಥ ಕಡಲಾಚೆಯ ಕನ್ನಡಿಗ ಬರೆಹಗಾರರು ಕುವೆಂಪು ಶತಮಾನೋತ್ಸವ ಸಂದರ್ಭದಲ್ಲಿ ಸಲ್ಲಿಸಿದ ನುಡಿಗೌರವ ಈ 'ಕುವೆಂಪು ಸಾಹಿತ್ಯ ಸಮೀಕ್ಷೆ,' ಶ್ರೀ ಕುವೆಂಪು ಅವರ ಸಾಹಿತ್ಯ ಅವರು ಹುಟ್ಟಿ ಬೆಳೆದು ಬದುಕಿದ ಸಹ್ಯಾದ್ರಿಯ ಪರ್ವತಾರಣ್ಯ ಪ್ರಪಂಚದಂತೆ ವಿಸ್ತಾರವೂ ವೈವಿಧ್ಯಮಯವೂ ದುಷ್ಪ್ರವೇಶ್ಯವೂ ವಿಮರ್ಶಕರಿಗೂ ಒಂದು ಸವಾಲಿನಂತಿದೆ. ಆದರೂ ಅದನ್ನು ಪ್ರವೇಶಮಾಡುವ ಸಾಧ್ಯ ಕುವೆಂಪು ಸಾಹಿತ್ಯದ ಅಧ್ಯಾತ್ಮಿಕ ಹಾಗೂ ತಾತ್ವಿಕ ಹಿನ್ನೆಲೆಗಳನ್ನು ಕುರಿತು, ಅವರ ನಿಸರ್ಗ ರಸಿಕರು ಕಡಮೆಯೇನೂ ಇಲ್ಲ. ನಮ್ಮ ಅಮೆರಿಕಾ ಕನ್ನಡ ಬರಹಗಾರರು ಹಿಂಜರಿಯದ, ಪ್ರೀತಿಯನ್ನು ಕುರಿತು, ಅವರು ಕನ್ನಡಕ್ಕೆ ತಂದ ಸಾನೆಟ್ಟುಗಳ ರಚನಾಕ್ರಮವನ್ನು ಕುರಿತು ಅವರ ವೈಜ್ಞಾನಿಕ ಹಾಗೂ ವೈಚಾರಿಕ ನಿಲುವುಗಳನ್ನು ಕುರಿತು, ಕತೆ–ಕಾದಂಬರಿ–ಲಲಿತ ಪ್ರಬಂಧ ನಾಟಕಗಳನ್ನು ಕುರಿತು, ಅವರ ಮಹಾಕಾವ್ಯವಾದ ಶ್ರೀ ರಾಮಾಯಣ ದರ್ಶನವನ್ನು ಕುರಿತು, ತಮ್ಮ ನೆನಪುಗಳಲ್ಲಿ ಮನೆ ಮಾಡಿಕೊಂಡಿರಬಹುದಾದ ಕುವೆಂಪು ತಕ್ಕ ಪ್ರೀತಿ–ಗೌರವ–ಶ್ರದ್ಧೆಗಳಿಂದಲೇ ತಮ್ಮ ಕ್ರಿಯೆ–ಪ್ರತಿಕ್ರಿಯೆಗಳನ್ನು ದಾಖಲಿಸಿದ್ದಾರೆ. ಒಟ್ಟಾರೆಯಾಗಿ ಕುವೆಂಪು ಸಾಹಿತ್ಯ ನಿರ್ಮಿತಿಯನ್ನು ಕುರಿತ ಒಂದು ಒಳ್ಳೆಯ 'ಸಮೀಕ್ಷೆ' ಇದು. ಅದರಲ್ಲೂ ಪ್ರತ್ಯೇಕವಾಗಿ ಹೇಳಬೇಕಾದ ಮಾತೆಂದರೆ ಕುವೆಂಪು ಅವರ ಕಿಂದರಿಜೋಗಿ'ಯನ್ನು ಕುರಿತು ಬರೆಯುವಾಗ ಶ್ರೀ ಹೆಚ್. ವೈ. ರಾಜಗೋಪಾಲ್ ಅವರು, ಕುವೆಂಪು ಅವರ ಕವಿತೆಗೆ ಮೂಲವಾದ ಬ್ರೌನಿಂಗನ ಕಥಾವಸ್ತುವನ್ನು ಕುರಿತು ಇಂಟರ್ನೆಟ್ ಮೂಲಕ, ಅದರ ಜಾನಪದ–ಚಾರಿತ್ರಿಕ ಆಕರಗಳನ್ನು ಕಂಡುಹಿಡಿಯುತ್ತ ಈ ಕತೆಯ ಚರಿತ್ರೆಯ ಬಾಗಿಲುಗಳನ್ನು ತೆರೆಯುವ ಕ್ರಮ ಚೇತೋಹಾರಿಯಾಗಿದೆ

ಮಾತ್ರವಲ್ಲ ಅಧ್ಯಯನದ ಹೊಸ ಸಾಧ್ಯತೆಗಳನ್ನು ಸೂಚಿಸುತ್ತದೆ. ಹಾಗೆಯೆ ಕುವೆಂಪು ಅವರ ಕಾನೂರು ಹೆಗ್ಗಡಿತಿಯನ್ನು ಸಮಾಜ ಶಾಸ್ತ್ರೀಯ ಅಧ್ಯಯನಕ್ಕೆ ಗುರಿಪಡಿಸಿದ ವೈ.ಆರ್. ಮೋಹನ್ ಅವರ ಬರೆಹವೂ, ವಿವಿಧ ಜ್ಞಾನಶಾಖೆಗಳವರು ಸೃಜನ ಸಾಹಿತ್ಯದ ಅಧ್ಯಯನ ಹಾಗೂ ವಿಶ್ಲೇಷಣೆಗೆ ತೊಡಗುವುದರಿಂದ ಸಾಹಿತ್ಯದ ಅರ್ಥವಂತಿಕೆಗೆ ಒದಗುವ ಆಯಾಮಗಳೇನೆಂಬುದನ್ನು – ಸ್ಪಷ್ಟಪಡಿಸುತ್ತದೆ. ಇವರನ್ನೂ ಇನ್ನಿತರ ಬರಹಗಾರರನ್ನೂ ನಾನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ.

ಇದರ ಪ್ರಧಾನ ಸಂಪಾದಕರಾದ ಶ್ರೀ ನಾಗ ಐತಾಳರು ಇಷ್ಟೊಂದು ಬರೆಹಗಳನ್ನು ಸಂಗ್ರಹಿಸಿ – ಜತೆಗೆ ನಮ್ಮನ್ನೂ (ನಾನು – ಡಾ. ಪ್ರಭುಶಂಕರ – ಡಾ. ಎನ್. ಎಸ್. ಲಕ್ಷ್ಮೀನಾರಾಯಣ ಭಟ್ಟ) ಸೇರಿಸಿಕೊಂಡು ಕವಿ ಕುವೆಂಪು ಅವರ ಶತಮಾನ ಸ್ಮರಣೆಗೆ ಗೌರವವನ್ನು ಸಲ್ಲಿಸುವ ಅವಕಾಶವನ್ನು ಕಲ್ಪಿಸಿಕೊಟ್ಟಿದ್ದಾರೆ. ಇದಕ್ಕಾಗಿ ಐತಾಳರಿಗೆ ಧನ್ಯವಾದಗಳು.

ಕುವೆಂಪು ಸಾಹಿತ್ಯ ಸಮೀಕ್ಷೆಗೆ ಬರೆದ ಮುನ್ನುಡಿ(2004) ಪ್ರ: ವಸಂತ ಪ್ರಕಾಶನ.



ಕನ್ನಡದಮರಚೇತನ

– ಎಲ್. ಎಸ್. ಶೇಷಗಿರಿರಾವ್

ಅಮೆರಿಕದ ನಮ್ಮ ಸೋದರ ಕನ್ನಡಿಗರು ಸಿದ್ಧಪಡಿಸಿರುವ ಈ ಸಂಕಲನಕ್ಕೆ ಮುನ್ನುಡಿಯನ್ನು ಬರೆಯುವುದು ಒಂದು ಗೌರವ ಎಂದು ಭಾವಿಸಿದ್ದೇನೆ. ಇದಕ್ಕೆ ಎರಡು ಕಾರಣಗಳು. ದೂರದ ನಾಡಿನ ಬಂಧುಗಳ ಕನ್ನಡ ಸಾಹಿತ್ಯ ಪ್ರೀತಿ ಅರ್ಥವತ್ತಾಗಿ ಇಲ್ಲಿ ರೂಪ ಪಡೆಯುತ್ತದೆ ಎನ್ನುವುದು ಮೊದಲನೆಯದು. ಎರಡನೆಯದಾಗಿ: ಅರ್ಧ ಶತಮಾನದ ಕಾಲ ಮಾಸ್ತಿ ಅವರ ಆದರವನ್ನು ಪಡೆದು ಆಗಾಗ ಅವರೊಡನೆ ಕಾಲ ಕಳೆಯುವ ಸುಯೋಗ ನನ್ನದಾಗಿತ್ತು ಎನ್ನುವುದು. ಇಂಗ್ಲೆಂಡಿನ ಶ್ರೇಷ್ಠ ಕವಿಗಳಲ್ಲಿ ಒಬ್ಬನಾದ ವಿಲಿಯಂ ವರ್ಡ್ಸ್‌ವರ್ತ್ ಆಸ್ಥಾನ ಕವಿಯಾಗಿದ್ದ. ಅವನು ತೀರಿಕೊಂಡು ತಾನು ಆಸ್ಥಾನ ಕವಿಯಾದಾಗ ಆಲ್‌ಫ್ರೆಡ್ ಟೆನಿಸನ್ ಆ ಗೌರವವನ್ನು this laurel greener from the brows of him that uttered nothing base ಎಂದ; ವರ್ಡ್ಸ್‌ವರ್ತ್ ಎಂದೂ ಕೀಳು ಮಾತನಾಡಲಿಲ್ಲ, ಆದ್ದರಿಂದ ಅವನು ಆಸ್ಥಾನಕವಿಯ ಸ್ಥಾನದ ಗೌರವವನ್ನು ಹೆಚ್ಚಿಸಿದ ಎಂದ. He that uttered nothing base ಎನ್ನುವ ಮಾತನ್ನು ಮಾಸ್ತಿಯವರ ವಿಷಯದಲ್ಲಿಯೂ ಹೇಳಬಹುದು.

ಈ ಪುಸ್ತಕವನ್ನು ಹೊರತರುತ್ತಿರುವ ಅಮೆರಿಕ ಕನ್ನಡಿಗರು ಈಗಾಗಲೇ 'ಕಾರಂತ ಚಿಂತನ–ಕಡಲಾಚೆಯ ಕನ್ನಡಿಗರಿಂದ', 'ಕುವೆಂಪು ಸಾಹಿತ್ಯ ಸಮೀಕ್ಷೆ' ಮತ್ತು 'ಯದುಗಿರಿಯ

– ಬೆಳಕು' ಎನ್ನುವ ಗ್ರಂಥಗಳನ್ನು ತಾವು ಮೆಚ್ಚಿಕೊಂಡ ಮಹಾನ್ ಸಾಹಿತಿಗಳನ್ನು ಕುರಿತು ಪ್ರಕಟಿಸಿದ್ದಾರೆ. ಈ ಕೃತಿಗಳು ಮೆಚ್ಚಿಕೆಯ ಅಭಿವ್ಯಕ್ತಿ ಅಷ್ಟೇ ಅಲ್ಲ, 'ಪಸರಿಟ್ಟು ಮೆಚ್ಚು'ವ ಆರೋಗ್ಯಕರವಾದ ಪ್ರಯತ್ನದ ಫಲ. ಅಮೆರಿಕದ ಕನ್ನಡಿಗರು ಕನ್ನಡದ ಉತ್ಸವಗಳನ್ನು ನಡೆಸುತ್ತಿದ್ದಾರೆ, ಹಲವರು ಅಮೆರಿಕದ ಕನ್ನಡಿಗರು ಬರೆದ ಸೊಗಸಾದ ಕನ್ನಡ ಪುಸ್ತಕಗಳನ್ನು ಓದಿದ್ದೇನೆ. ಅಂಥ ಕೆಲವು ಪುಸ್ತಕಗಳನ್ನು ಲೋಕಾರ್ಪಣೆ ಮಾಡುವ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಸಂತೋಷವು ನನ್ನದಾಗಿತ್ತು. ಅಮೆರಿಕದ ಕನ್ನಡಿಗರ ಕನ್ನಡದ ಪ್ರೀತಿ ಗಾಢವಾದದ್ದು, ಕ್ರಿಯಾಶೀಲವಾದದ್ದು. ಅವರಿಗೆ ನನ್ನ ಪ್ರೀತಿಯ ಅಭಿನಂದನೆಗಳು, ವಂದನೆಗಳು.

ಈ ಪುಸ್ತಕದ ಪ್ರಾರಂಭದಲ್ಲಿ 'ನಿಮ್ಮೊಡನೆ: ಸಂಪಾದಕರ ಮೊದಲ ಮಾತು' ನಮ್ಮನ್ನು ಎದುರುಗೊಳ್ಳುತ್ತದೆ. ಈ ಬರಹ ಸಂಗ್ರಹವಾಗಿದ್ದರೂ ಎಷ್ಟು ಸಮಗ್ರವಾಗಿದೆ ಎಂದರೆ ಇದಕ್ಕೆ ನಾನು ಜೋಡಿಸುವ ಮಾತುಗಳು ಹೆಚ್ಚು ಇಲ್ಲ ಎನ್ನಿಸುತ್ತದೆ. ಈ ಬರಹ ಮಾಸ್ತಿಯವರ ಬದುಕು, ವ್ಯಕ್ತಿತ್ವ, ಸಾಹಿತ್ಯ ಮೂರನ್ನೂ ಸೊಗಸಾಗಿ ಪರಿಚಯ ಮಾಡಿಕೊಡುತ್ತದೆ.

ಈ ಸಂಗ್ರಹದ ಲೇಖನಗಳು ಮಾಸ್ತಿಯವರ ಬದುಕು ಮತ್ತು ವ್ಯಕ್ತಿತ್ವ ಇವನ್ನು ಮತ್ತೆ ಮತ್ತೆ ಪ್ರಸ್ತಾಪಿಸುತ್ತವೆ. ಮಾಸ್ತಿಯವರು ಏನನ್ನೂ ಬರೆಯದೆ ಇದ್ದರೂ ಅವರ ಬದುಕಿನ – ಶ್ರೀಮಂತಿಕೆಯಿಂದ, ವ್ಯಕ್ತಿತ್ವದ ಘನತೆಯಿಂದ ನಮಗೆ ಪೂಜ್ಯರಾಗುತ್ತಿದ್ದರು. 'ಜೀವನ ದರ್ಶನ' ಭಾಗದಲ್ಲಿ ಶ್ರೀ ಮಾವಿನಕೆರೆ ರಂಗನಾಥನ್ ಅವರ ತೂಕವಾದ ಲೇಖನವಿದೆ, ವಿವಿಧ ಸಂಗ್ರಹಗಳಿಂದ ಅವತರಣಿಕೆಗಳಿವೆ, ಶ್ರೀಮತಿ ಅಲಮೇಲು ಅಯ್ಯಂಗಾರ್ ಮತ್ತು ಶ್ರೀಮತಿ ವಿಮಲಾ ರಾಜಗೋಪಾಲ್ ಸ್ಮರಿಸಿಕೊಳ್ಳುವ ಪ್ರಸಂಗಗಳು ಮಾಸ್ತಿಯವರ ವ್ಯಕ್ತಿತ್ವವನ್ನು ನಮ್ಮ ಮುಂದೆ ನಿಲ್ಲಿಸುತ್ತವೆ. ಅವರದು ಅಂತಃಕರಣದ ಸ್ವಭಾವ, ಪ್ರೀತಿಯ ಸ್ವಭಾವ, ಮಕ್ಕಳ ಪ್ರೀತಿಯನ್ನು ಕೆಲವೇ ಕ್ಷಣಗಳಲ್ಲಿ ಗೆಲ್ಲುತ್ತಿದ್ದಂತೆಯೇ ಬೆಳೆದವರ ಪ್ರೀತಿ ಗೌರವಗಳನ್ನೂ ಗೆಲ್ಲುತ್ತಿದ್ದರು. ನನ್ನ ಅನುಭವಕ್ಕೆ ಬಂದ ಒಂದು ಪ್ರಸಂಗವನ್ನು ಓದುಗರೊಡನೆ ಹಂಚಿಕೊಳ್ಳಬಹುದು. ಸುಮಾರು 58 ವರ್ಷಗಳ ಹಿಂದೆ ನಾನೂ ನನ್ನ ಗೆಳೆಯರೊಬ್ಬರೂ ನಾಡುನುಡಿಗಳ ಸೇವೆಗೆ ತಮ್ಮನ್ನು ಅರ್ಪಿಸಿಕೊಂಡ ಹಿರಿಯರೊಬ್ಬರ ಮನೆಗೆ ಹೋಗಿದ್ದವು. ಅವರಿಗೆ ವಿಪರೀತ ಅನಾರೋಗ್ಯ, ಮನೆಯಲ್ಲಿ ಆರ್ಥಿಕ ಪರಿಸ್ಥಿತಿ ಏನೂ ಚೆನ್ನಾಗಿರಲಿಲ್ಲ. ಅವರ ಶ್ರೀಮತಿಯವರು ಕಣ್ಣಿನಲ್ಲಿ ನೀರು ಹಾಕಿಕೊಳ್ಳುತ್ತ ಈ ವಿಷಯವನ್ನು ತಿಳಿಸಿದರು. ಅನಂತರ ಮಾಸ್ತಿಯವರ ಮನೆಗೆ ಹೋದಾಗ ಅವರಿಗೆ ಈ ವಿಷಯವನ್ನು ಹೇಳಿದೆವು. ನಾವು ಹೊರಟಾಗ ಅವರು ಒಂದು ಲಕೋಟೆಯಲ್ಲಿ ಹಣವಿಟ್ಟು ನಮಗೆ ಕೊಟ್ಟು 'ಅವರ ಮನೆಗೆ ಹೋದಾಗ ಅವರಿಗೆ ತಿಳಿಯದಂತೆ ದೇವರ ಮನೆಯಲ್ಲಿ ಇಟ್ಟು ಬಂದುಬಿಡಿ' ಎಂದರು.

ಪರೀಕ್ಷೆ ಮುಗಿಸಿ ಕೆಲಸಕ್ಕೆ ಸೇರಿ ಮನೆಗೆ ನೆರವಾಗುತ್ತೇನೆ ಎಂದು ಹಂಬಲಿಸುತ್ತಿದ್ದ ನನ್ನ ವಿದ್ಯಾರ್ಥಿನಿಯೊಬ್ಬಳು ಪರೀಕ್ಷೆಗೆ ಹಣ ಕಟ್ಟಲು ಕಾಸಿಲ್ಲದೆ, ಅಯೋಗ್ಯನೊಬ್ಬನ ಆಮಿಷಕ್ಕೆ ಬಲಿಯಾಗಲಿದ್ದ ಒಂದು ಪ್ರಸಂಗವನ್ನು ಅವರಿಗೆ ಒಮ್ಮೆ ಹೇಳಿದೆ. 'ನೀವೇನು ಮಾಡಿದಿರಿ?' ಎಂದು ಕೇಳಿದರು, 'ಅನುಚಿತ ಹೆಜ್ಜೆಯನ್ನು ಹುಡುಗಿ ಇಡುವ ಮೊದಲು ವಿಷಯ ತಿಳಿಯಿತು. ನನ್ನಿಂದಾದ ಅಲ್ಪಸಹಾಯದಿಂದ ಅನಾಹುತ ತಪ್ಪಿತು' ಎಂದು ಹೇಳಿದೆ. ನಾನು ಹೊರಟಾಗ ನನ್ನ ಕೈಯಲ್ಲಿ ಒಂದಿಷ್ಟು ಹಣಕೊಟ್ಟು ಆಕೆಗಾಗಲಿ ಇನ್ನು ಯಾವ ವಿದ್ಯಾರ್ಥಿನಿಗಾಗಲಿ ಅಗತ್ಯವಿದ್ದರೆ ಬಳಸಿ' ಎಂದರು.

ಒಂದು ಮಾತನ್ನು ಹೇಳಬೇಕು. ಮಾಸ್ತಿಯವರದು ಮೃದುಸ್ವಭಾವ. ಆದರೆ ತಮಗೆ ಸರಿ ಎಂದು ಕಂಡದ್ದನ್ನು ಮಾಡುವಾಗ ಉಕ್ಕಿನ ನಿರ್ಧಾರ. ಮಹಾರಾಜರು ಅವರಿಗೆ ಮಂತ್ರಿಪದವಿಯನ್ನು ತಪ್ಪಿಸಿದಾಗ ಅಧಿಕಾರ ಸ್ಥಾನದಿಂದ ನಿವೃತ್ತರಾಗುವ ನಿರ್ಧಾರವನ್ನು ಮಾಡಿದರು, ಸ್ನೇಹಿತರು, ದಿವಾನರು ಎಲ್ಲ ಅವರು ನಿರ್ಧಾರವನ್ನು ಬದಲಾಯಿಸುವಂತೆ ಮಾಡಲು ಪ್ರಯತ್ನಿಸಿದರೂ ಒಪ್ಪಲಿಲ್ಲ. ಅನೇಕ ಬಾರಿ ಈ ರೀತಿ ಅವರು ನಡೆದುಕೊಂಡದ್ದನ್ನು ಕಂಡಿದ್ದೇನೆ.

ಇಲ್ಲಿ ಎರಡು ಅಂಶಗಳನ್ನು ಗಮನಿಸಬಹುದು. ಈ ಸಂಕಲನವು ಮಾಸ್ತಿಯವರ ವ್ಯಕ್ತಿತ್ವವನ್ನೂ ಸಾಹಿತ್ಯಸೃಷ್ಟಿಯನ್ನೂ ಸಮಗ್ರವಾಗಿ ಪರಿಚಯ ಮಾಡಿಕೊಡುತ್ತದೆ. ಮಾಸ್ತಿಯವರ ವಿಷಯ ಏನೂ ತಿಳಿಯದಿದ್ದವರೂ ಈ ಸಂಕಲನವನ್ನು ಓದಿದರೆ ಪುಸ್ತಕವನ್ನು ಕೆಳಗಿಡುವ ಹೊತ್ತಿಗೆ ಮಾಸ್ತಿ ಅವರ ವಿಷಯವನ್ನು ಸಾಕಷ್ಟು ತಿಳಿದುಕೊಂಡಿರುತ್ತಾರೆ. ಸಂಕಲನದ ಮೊದಲ ಭಾಗವನ್ನು ಆಗಲೇ ಪ್ರಸ್ತಾಪಿಸಿದ್ದೇನೆ. ಎರಡನೆಯ ಭಾಗದಲ್ಲಿ ಶ್ರೀ ರಾಜಗೋಪಾಲ್ ಅವರು ಮಾಸ್ತಿಯವರನ್ನು ಕುರಿತು ಒಂದು ಬಹು ಅರ್ಥವತ್ತಾದ ಶಬ್ದವನ್ನು ಬಳಸಿದ್ದಾರೆ– 'ಋಷಿ'. ನಿಜ, ಜ್ಞಾನದಲ್ಲಿ ಸಮಚಿತ್ತದಲ್ಲಿ ಅನುಭವದಲ್ಲಿ ಮುಖ್ಯವಾಗಿ ಮನುಷ್ಯ ಸ್ವಭಾವದ ಗ್ರಹಿಕೆಯಲ್ಲಿ ಅನುಕಂಪದಲ್ಲಿ ಮತ್ತು ಸಮಸ್ತ ಜೀವಿಗಳಿಗೆ ಶುಭವನ್ನು ಹಾರೈಸುವುದರಲ್ಲಿ ಅವರು ಋಷಿಗಳೇ. ಶ್ರೀ ರಾಜಗೋಪಾಲ್ ಅವರ ಲೇಖನದ ಮೊದಲನೆಯ ಪ್ಯಾರ ಸಂಗ್ರಹವಾಗಿ ಹಲವು ವಿಷಯಗಳನ್ನು ಹೇಳುತ್ತದೆ.

ಎರಡನೆಯ ಭಾಗದಲ್ಲಿ ಶ್ರೀ ಕೃಷ್ಣಪ್ರಿಯ ಅವರು ಸಾಮಾನ್ಯವಾಗಿ ಓದುಗರು ಗಮನಿಸದಿರುವ ಒಂದು ಕೃತಿಯತ್ತ ಗಮನ ಸೆಳೆದಿದ್ದಾರೆ. ಮಾಸ್ತಿಯವರು ಭಾಷಾಶಾಸ್ತ್ರವನ್ನು ಅಧ್ಯಯನ ಮಾಡಿದ್ದರು, ತಮ್ಮ ಅಧ್ಯಯನವನ್ನು ಕನ್ನಡ ಭಾಷೆಯ ತಿಳಿವಳಿಕೆಗೆ ಅನ್ವಯಿಸಿದ್ದರು. ಮಾಸ್ತಿಯವರ ಕವನಗಳ ಪ್ರಸ್ತಾಪಗಳಿವೆ, 'ಶ್ರೀರಾಮ ಪಟ್ಟಾಭಿಷೇಕ', 'ನವರಾತ್ರಿ' ಮತ್ತು 'ರಾಮನವಮಿ'ಗಳನ್ನು ಕುರಿತು ಇಲ್ಲಿ ಪ್ರತ್ಯೇಕ ಲೇಖನಗಳಿವೆ. ಮಾಸ್ತಿಯವರ ಕಾವ್ಯ ಪರಿಪಕ್ವ ಮನಸ್ಸಿಗೆ ಹಿಡಿಸುವ ಕಾವ್ಯ. ಅದರಲ್ಲಿ ಆವೇಶವಿಲ್ಲ. ಭಾವಗಳ ಗೌರೀಶಂಕರಗಳು ಬಿರುಗಾಳಿಗಳು ಪ್ರಪಾತಗಳು ಇಲ್ಲ. 'ನೀನೆನ್ನ

ಜೊತೆಯಲೇ ಎಡೆಬಿಡದೆ ನಡೆದುದನು ನಾನಿನ್ನೆವರಂ ಅರಿಯೆನಯ್ಯ' ಅಂಥ ಕವನ, ಓದುಗನಿಗೆ ಸಾಕಷ್ಟು ಬದುಕಿನ ಅನುಭವವಾದ ನಂತರವೇ ಮನಸ್ಸಿನಲ್ಲಿ ಇಳಿಯುವುದು. ದೊಡ್ಡರಂಗೇಗೌಡರು ಸರಿಯಾಗಿಯೇ ಮಾಸ್ತಿಯವರನ್ನು ನವೋದಯ ಸಂದರ್ಭದಲ್ಲಿಟ್ಟು ನೋಡಿದ್ದಾರೆ, ಹಾಗೆಯೇ ವಿಶಿಷ್ಟ ವ್ಯಕ್ತಿತ್ವವಿರುವ ಕವಿಯಾಗಿಯೂ ಕಂಡಿದ್ದಾರೆ. ಕಿರುಮಹಾಕಾವ್ಯವಾದ 'ಶ್ರೀರಾಮ ಪಟ್ಟಾಭಿಷೇಕ'ವನ್ನು ಕುರಿತು ಹಲವು ಮಾತುಗಳನ್ನು ಹೇಳಬಹುದು. ಇಲ್ಲಿ ಮಾಸ್ತಿಯವರ ತಂತ್ರ ಗಮನಿಸಬೇಕಾದದ್ದು. ರಾಮರಾವಣರ ಯುದ್ಧ ಮುಗಿದು ರಾಮಸೀತೆಯರು ಹಿಂದಿರುಗುವ ದಿನದ ಹಿಂದಿನ ದಿನ ಕ್ರಿಯೆ ಪ್ರಾರಂಭವಾಗುತ್ತದೆ, ನಿರೂಪಣೆ ಒಟ್ಟಾರೆಯಾಗಿ ಹಿಂದೆ ನಡೆದುದನ್ನು ಸ್ಮರಿಸಿಕೊಂಡು ಬೇರೆ ಬೇರೆ ಪಾತ್ರಗಳು ಬಿತ್ತರಿಸುವುದರಿಂದ ಸಾಗುತ್ತದೆ. ಎಂದರೆ ಬೇರೆ ಬೇರೆ ಘಟನೆಗಳು ನಡೆಯುವ ಕಾಲದ ತಳಮಳ, ತೀವ್ರ ಭಾವನೆಗಳು ಆರಿ, ಸಮಚಿತ್ತದ ನಿರೂಪಣೆ ಇಲ್ಲಿ ಕಾಣುವುದು. ಇಲ್ಲಿ ಮೂರು ಸಂಸ್ಕೃತಿಗಳನ್ನು ಮಾಸ್ತಿಯವರು ನಮ್ಮ ಮುಂದಿಡುತ್ತಾರೆ. ಅಯೋಧ್ಯೆಯ ಸಂಸ್ಕೃತಿ, ಕಿಷ್ಕಿಂಧೆಯ ಸಂಸ್ಕೃತಿ ಮತ್ತು ಲಂಕೆಯ ಸಂಸ್ಕೃತಿ. ಇವುಗಳಾಚೆ, ಸಂಸ್ಕೃತಿ ಎಂದರೇನು, ಸುಸಂಸ್ಕೃತ ವ್ಯಕ್ತಿಯ ನಡತೆ, ಮಾತು ಎಂಥವು ಎನ್ನುವುದು ಮನವರಿಕೆಯಾಗುತ್ತದೆ. ವಿದ್ಯುಚ್ಛಕ್ತಿ ಬೇರೆ ಬೇರೆ ದೀಪಗಳಲ್ಲಿ ಬೇರೆ ಬೇರೆ ರೀತಿಗಳಲ್ಲಿ ಬೆಳಗುವಂತೆ ನಿಜವಾದ ಮಾನವ ಸಂಸ್ಕೃತಿ ಬೇರೆ ಸನ್ನಿವೇಶಗಳಲ್ಲಿ ಮೂಲತಃ ಒಂದೇ ಆಗಿ ಹೇಗೆ ಬೆಳಗುತ್ತದೆ ಎನ್ನುವುದನ್ನು ಕಾಣುತ್ತೇವೆ.

'ನವರಾತ್ರಿ' ಬಹಳ ಸಂತೋಷಕೊಡುವ ಕೃತಿ. 'ಸೋಜಿಗದ ಹೊನಲು'ನಂಥ ಕವನ ಮಾಸ್ತಿಯವರ ಕೌಶಲಕ್ಕೆ ಸಾಕ್ಷಿ, ಮಾನವಾತೀತ ಅಂಶವನ್ನು ನಿರೂಪಿಸುವ ಬಗೆಯಲ್ಲಿ ಸಂಕೀರ್ಣತೆ ಇದೆ. ಇಡೀ ಕೃತಿ ಮಾನವ ಸ್ವಭಾವದ ವ್ಯಾಪ್ತಿ ಮತ್ತು ವೈಚಿತ್ರ್ಯಗಳಿಗೆ ಹಿಡಿದ ಕನ್ನಡಿ, ಇದಕ್ಕೆ ತನ್ನದೇ ಆದ ಮಿತಿಗಳಿವೆ. ಉದಾಹರಣೆಗೆ, ಕಥೆಗಳನ್ನು ಹೇಳುವವರ ಸ್ವಭಾವಗಳಲ್ಲಿ ದೃಷ್ಟಿಗಳಲ್ಲಿ (ವಾಸರನ 'ಕ್ಯಾಂಟರ್ ಬರಿ ಟೇಲ್ಸ್'ನ ಪ್ರಲಾಗ್‌ದಲ್ಲಿ ಮತ್ತು ಕಥೆಗಳಲ್ಲಿ ಕಾಣುವ) ವೈವಿಧ್ಯ ಕಂಡುಬರುವುದಿಲ್ಲ.

ಈ ಸಂಕಲನದಲ್ಲಿ 'ಯಶೋಧರಾ' ಮತ್ತು 'ಕಾಕನಕೋಟೆ' ಸಹಜವಾಗಿ ಪ್ರತ್ಯೇಕ ಲೇಖನಗಳನ್ನು ಪಡೆದುಕೊಂಡಿವೆ. ಕನ್ನಡ ರಂಗಭೂಮಿಯಲ್ಲಿ ಹವ್ಯಾಸಿ ತಂಡಗಳು ಕಾಣಿಸಿಕೊಳ್ಳುತ್ತಿದ್ದ ದಿನಗಳಲ್ಲಿ ಮಾಸ್ತಿಯವರು ನಾಟಕಗಳನ್ನು ಬರೆಯಲು ಪ್ರಾರಂಭಿಸಿದರು. ('ಮಾಸತಿ' ಗಮನಿಸಬೇಕಾದ ಇನ್ನೊಂದು ನಾಟಕ), ಶ್ರೀಮತಿ ನಳಿನಿ ಮಯ್ಯ ಅವರು ಹೇಳುವಂತೆ ಕನ್ನಡ ಸಾಹಿತ್ಯದ ಹಲವರು ಹಿರಿಯರು ಬುದ್ಧನನ್ನು ಕುರಿತು ನಾಟಕಗಳನ್ನು ಬರೆದಿದ್ದಾರೆ. ಆ ನಾಟಕಗಳ ಕೇಂದ್ರ ಬುದ್ಧ. ಅವು ಬೆಳಗುವುದು ಅವನ ಮಹಾತ್ಯಾಗವನ್ನು, ಕಾರುಣ್ಯವನ್ನು. ಆದರೆ ಹಿನ್ನೆಲೆಯಲ್ಲಿ ಯಾರ ಗಮನವನ್ನೂ ತನ್ನಡೆಗೆ ಸೆಳೆಯದೆ ನಿಶ್ಯಬ್ದವಾಗಿ ಜೀವನ ಸವೆಸುತ್ತಿರುವ ಹೆಣ್ಣು ಯಶೋಧರೆಯ ಬಗ್ಗೆ ಬರೆದವರು ಮಾಸ್ತಿಯವರೊಬ್ಬರೇ. ಬುದ್ಧನ ಮುಂದೆ ಕುಬ್ಜವಾಗಿ

ಕಾಣದಂತಹ ಪಾತ್ರವನ್ನ ಸೃಷ್ಟಿಸುವುದು ಸುಲಭವಲ್ಲ. ಮಾಸ್ತಿಯವರು ಇಲ್ಲಿ ಇದನ್ನು ಸಾಧಿಸಿದ್ದಾರೆ. ಯಶೋಧರೆಯ ನೋವು, ತ್ಯಾಗಗಳಂತೆಯೇ ಅವಳ ಸ್ವಾಭಿಮಾನವೂ ಹಿರಿದು. ಮೂರ್ತತೆ ಅಮೂರ್ತತೆ ಇವು ಈ ನಾಟಕದಲ್ಲಿ ಹೇಗೆ ಪ್ರಕಟವಾಗುತ್ತವೆ, ಆಧ್ಯಾತ್ಮಿಕತೆಯ ಜಗತ್ತು ಮತ್ತು ನೋವಿನ ಅರಮನೆಯ ಜಗತ್ತು ಹೇಗೆ ಕ್ರಮೇಣ ಒಂದಾಗುತ್ತವೆ ಎಂಬುದರತ್ತ ನಾನು ಬೇರೆಡೆ ಗಮನ ಸೆಳೆದಿದ್ದೇನೆ ('ಮಾಸ್ತಿ ಜೀವನ ಮತ್ತು ಸಾಹಿತ್ಯ', ಪುಟ 210–213).

ನವೋದಯ ಯುಗದ ಅತ್ಯಂತ ಲವಲವಿಕೆಯ ನಾಟಕಗಳಲ್ಲಿ ಒಂದು 'ಕಾಕನಕೋಟೆ', ಇಲ್ಲಿ ಮಾಸ್ತಿಯವರಿಗೆ ಪಾತ್ರಸೃಷ್ಟಿ, ಸಂಭಾಷಣೆ ಎರಡರ ಮೇಲೂ ಇರುವ ನಿಯಂತ್ರಣ ವಿಶಿಷ್ಟವಾದದ್ದು. ಒಂದು ನಾಟಕದಲ್ಲಿ ಒಬ್ಬ ಮನುಷ್ಯ ಬುದ್ಧಿವಂತ ಎಂದು ಇತರ ಪಾತ್ರಗಳ ಬಾಯಲ್ಲಿ ಹೇಳಿಸುವುದು ಸುಲಭ. ಆತನೇ ನಮ್ಮ ಮುಂದೆ ನಿಂತಾಗ, ಮಾತನಾಡಿದಾಗ, ಕ್ರಿಯೆಯಲ್ಲಿ ನಿರತನಾದಾಗ, ಆತ ಬುದ್ಧಿವಂತ ಎಂದು ನಮಗೇ ಎನ್ನಿಸುವಂತೆ ರಂಗಭೂಮಿಯ ಮೇಲೆ ಸೃಷ್ಟಿಸುವುದು ಕಷ್ಟ. ಮಾಸ್ತಿಯವರು ಈ ಕಷ್ಟದ ಕೆಲಸವನ್ನು ಸಾಧಿಸಿದ್ದಾರೆ. ಬೇರೆಡೆ ನಾನು ಬಳಸಿದ ಮಾತುಗಳನ್ನು ಇಲ್ಲಿ ಹೇಳಬಯಸುತ್ತೇನೆ: 'ಸಂಪ್ರದಾಯವಂತ ಮಧ್ಯಮವರ್ಗದ ಬ್ರಾಹ್ಮಣ ಕುಟಂಬದಿಂದ ಬಂದು ಉಚ್ಚ ಶಿಕ್ಷಣವನ್ನು ಪಡೆದ ಹಿರಿಯ ಅಧಿಕಾರಿಯಾದವರು ಈ ಕೃತಿಯನ್ನು ಬರೆದರು ಎನ್ನುವುದೊಂದು ವಿಶಿಷ್ಟವಾದ ಸಂಗತಿ. ಹಳ್ಳಿಯ ಜನರ ಬದುಕಷ್ಟೆ ಅಲ್ಲ, ಗುಡ್ಡಗಾಡು ಜನರ ಬದುಕಿನಲ್ಲಿ ಗಾಢವಾದ ಆಸಕ್ತಿ ಇಲ್ಲದೆ, ಅದನ್ನು ಪ್ರೀತಿಯಿಂದ ಅಧ್ಯಯನ ಮಾಡದೆ ಯಾರೂ ಇಂಥ ನಾಟಕವನ್ನು ಬರೆಯುವುದಿರಲಿ ಕಲ್ಪಿಸಿಕೊಳ್ಳುವುದೂ ಸಾಧ್ಯವಿಲ್ಲ. ನಾಟಕ ಕಾಡು, ಕುರುಬರ, ಬದುಕಿನ ನೂರು ವಿವರಗಳನ್ನು ಅವರ ಒಳಸಂಬಂಧಗಳ ನೂರು ವಿವರಗಳನ್ನು ಎಷ್ಟು ಸ್ಪಷ್ಟವಾಗಿ ಬಳಸುತ್ತದೆ ಮತ್ತು ಅವರ ಹೊರಜೀವನದ ವಿವರಗಳನ್ನಷ್ಟೆ ಅಲ್ಲದೆ ಅವರ ಬದುಕಿನ ಚೇತನವನ್ನ ಹಿಡಿಯುತ್ತದೆ ಎನ್ನುವುದು ಗಮನಿಸಬೇಕಾದ ಸಂಗತಿ.' ('ಮಾಸ್ತಿ – ಜೀವನ ಮತ್ತು ಬದುಕು', ಪುಟ 220).

ತನ್ನದೇ 'ಸತ್ವ, ಸೊಬಗುಗಳನ್ನುಳ್ಳ ಕಾಡು, ಇಲ್ಲಿ ನಾಡಿನ ಆಕ್ರಮಣಕ್ಕೆ ಒಳಗಾಗುತ್ತದೆ. ನಮ್ಮ ಇಂದಿನ ಬದುಕಿನ ದುರಂತವು ಇಲ್ಲಿ ಅಭಿವ್ಯಕ್ತವಾಗುತ್ತದೆ. ಕಾಡು ತನ್ನ ಸ್ವಾತಂತ್ರ್ಯವನ್ನು ಸಂಸ್ಕೃತಿಯನ್ನು ಉಳಿಸಿಕೊಳ್ಳುವುದು ನಾಡಿನ ಕೃಪೆಯಿಂದ, ನಾಡು ಕೃಪೆ ಮಾಡಿದಷ್ಟು. ಕಾಡುಕುರುಬರ ಬಣದ ಚೈತನ್ಯವೇ ಆದ ಕಾಚನೂ 'ಕಾಡು ನಮ್ಮದು' ಎಂದು ಹೇಳುವ ಸ್ಥಿತಿಯಲ್ಲಿಲ್ಲ. ಕಾಡು ಅರಸರ ಆಡಳಿತಕ್ಕೆ ಸೇರಬೇಕೆ, ಹೆಗ್ಗಡೆಯ ಆಡಳಿತಕ್ಕೆ ಸೇರಬೇಕೆ ಎನ್ನುವುದಷ್ಟೇ ಪ್ರಶ್ನೆ, ರಾಜನ ಮಗಳು ತನ್ನ ಬಣದ ಮೋನನನ್ನು ಒಲ್ಲಳು, ನಗರದಿಂದ ಬಂದ ಚಿಕ್ಕಯ್ಯನಿಗೆ ಒಲಿಯುತ್ತಾಳೆ. ನಗರಕ್ಕೆ ಆಕರ್ಷಣೆಯೂ ಇದೆ.

ಬಣದ ಸ್ಮೃತಿಯಲ್ಲಿ ಉಳಿದ ನಾಗರಿಕತೆಯ ಪ್ರಕ್ರಿಯೆಯ ಶಿಲ್ಪಿ ಕರಿಹೈದ. ನವೋದಯ ಯುಗವು ಕನ್ನಡಕ್ಕೆ ಕೊಟ್ಟ ಶ್ರೇಷ್ಠ ನಾಟಕಗಳಲ್ಲಿ ಇದೊಂದು.

ಸಹಜವಾಗಿಯೇ ಈ ಸಂಕಲನದಲ್ಲಿ ಸಣ್ಣ ಕತೆಗಳನ್ನು ಕುರಿತು ಹಲವು ಲೇಖನಗಳಿವೆ, ಇವುಗಳಲ್ಲಿ ವಿಮರ್ಶೆಯ ಭಾಗವೂ ಸಾಕಷ್ಟಿದೆ. ಶ್ರೀ ರಾಜಗೋಪಾಲ್ ಅವರು ಅಚಲವಾದ ದೈವಶ್ರದ್ಧೆ, ನಮ್ಮ ಪುರಾತನ ಸಂಸ್ಕೃತಿಯ ಬಗ್ಗೆ ಗೌರವ, ಆದರ, ನಮ್ಮ ಭಾರತೀಯ ಸಂಪ್ರದಾಯದ ಆಳವಾದ ಅರಿವು, ಅದರ ಆರ್ಷೇಯವಾದ ನಂಬಿಕೆಗಳಲ್ಲಿ ಶ್ರದ್ಧೆ ಇವು ಎಲ್ಲರೂ ಮಾಸ್ತಿಯವರಲ್ಲಿ ಗುರುತಿಸಬಹುದಾದ ಗುಣಗಳು ಎನ್ನುತ್ತಾರೆ. ಮಾಸ್ತಿಯವರ ಕತೆಗಳಲ್ಲಿ ಎದ್ದು ಕಾಣುವುದು ಅವರ ಮಾನವೀಯತೆ, ಅವರದು ತಪ್ಪನ್ನು ಕಂಡರೂ ಕ್ಷಮಿಸುವ ನೋಟ ಎನ್ನುತ್ತಾರೆ. ಕ್ಲಿಷ್ಟವಾದ ಕಾಮದ ವಸ್ತುವನ್ನು ಅವರು ನಿರ್ವಹಿಸುವ ವಿಧಾನವನ್ನು ನಿದರ್ಶನಗಳೊಂದಿಗೆ ವಿವರಿಸುತ್ತಾರೆ. ಈ ವಿಸ್ತಾರವಾದ ಲೇಖನದಲ್ಲಿ ಮಾಸ್ತಿಯರ ಹಲವು ಕತೆಗಳ ಸಾರಾಂಶವನ್ನು ಕೊಟ್ಟು ಅವುಗಳ ವಿಶಿಷ್ಟ ಅಂಶಗಳಿಗೆ ಗಮನವನ್ನು ಸೆಳೆಯುತ್ತಾರೆ. ವಿಶ್ವನಾಥ್ ಹುಲಿಕಲ್ ಅವರು ಕೆಲವು ಕಥೆಗಳ ಕಥಾವಸ್ತುವನ್ನು ಪರಿಚಯ ಮಾಡಿ ಕೆಲವೇ ವಾಕ್ಯಗಳಲ್ಲಿ ಗಮನಿಸಬೇಕಾದ ಅಂಶವನ್ನು ಹೇಳುತ್ತಾರೆ. ಮೈ. ಶ್ರೀ. ನಟರಾಜ ಅವರೂ ಆಹಿತಾನಲರೂ ಇನ್ನು ಕೆಲವು ಕಥೆಗಳನ್ನು ವಿಶ್ಲೇಷಿಸುತ್ತಾರೆ. ಆಹಿತಾನಲರ ಲೇಖನದಲ್ಲಿ ಮಾಸ್ತಿಯವರ ಪ್ರಾರಂಭದ ಕಥೆಗಳ 'ಹೀರೋ' ರಂಗಪ್ಪನ ಸ್ಮರಣೆ ಇದೆ. ಕತೆಗಳನ್ನು ಸ್ವಲ್ಪಮಟ್ಟಿಗೆ ವರ್ಗೀಕರಿಸಿದ್ದಾರೆ. ಮಾಸ್ತಿಯವರ ಅನುಕಂಪ, ಆಧ್ಯಾತ್ಮಿಕ ದೃಷ್ಟಿ ಇವನ್ನು ಪ್ರಸ್ತಾಪಿಸುತ್ತಾರೆ. ಇವರೆಲ್ಲ ಮಾಸ್ತಿಯವರ ಪಾತ್ರಸೃಷ್ಟಿಯ ವ್ಯಾಪ್ತಿ ಮತ್ತು ವೈವಿಧ್ಯಗಳತ್ತ ನಮ್ಮ ಗಮನವನ್ನು ಸೆಳೆಯುತ್ತಾರೆ. ನೀಳ್ಗತೆ ಅಥವಾ ಕಿರುಕಾದಂಬರಿಯಾದ 'ಸುಬ್ಬಣ್ಣ' ಎರಡು ಒಳ್ಳೆಯ ಲೇಖನಗಳ ವಸ್ತುವಾಗಿದೆ. ಪ್ರವೀಣ್ ಶಿವಶಂಕರ್ ತಮ್ಮ ಸಂಗ್ರಹವಾದ ಲೇಖನದಲ್ಲಿ 'ಸುಬ್ಬಣ್ಣ'ನಲ್ಲಿ ಮಾಸ್ತಿಯವರು ಸಂಗೀತದ ಶಕ್ತಿಯನ್ನು ಹೇಗೆ ಪ್ರಕಟಗೊಳಿಸುತ್ತಾರೆ ಎಂಬುದರತ್ತ ಗಮನ ಸೆಳೆಯುತ್ತಾರೆ. ಎಚ್. ಕೆ. ನಂಜುಂಡಸ್ವಾಮಿ ಅವರು ಕೆಲವು ಕುತೂಹಲಕರ ಪ್ರಶ್ನೆಗಳನ್ನು ಎತ್ತುತ್ತಾರೆ. ಕೆಲವು ಊಹೆಗಳನ್ನು ನಮ್ಮ ಮುಂದಿಡುತ್ತಾರೆ. (ಉದಾ. : ಸುಬ್ಬಣ್ಣನ ಮತ್ತು ಅವನ ತಾಯಿಯ ಬಾಂಧವ್ಯ ಹಿತಕರವಾಗಿಲ್ಲದ ಕಾರಣ ಆತನಿಗೆ ಆಕೆಯ ಹೆಸರು ಹೇಳುವುದಕ್ಕೂ ಇಷ್ಟವಿದ್ದಿರಲಾರದು). ಪ್ರಶ್ನೆಗಳೂ ಊಹೆಗಳೂ ಕುತೂಹಲಕರವಾಗಿವೆ. ಆದರೆ ಈ ಸಂದರ್ಭದಲ್ಲಿ ಸಾಹಿತ್ಯಕೃತಿಯಲ್ಲಿ ನಾವು ಕಾಣುವ ಪಾತ್ರಗಳು. ನಿಜಜೀವನದಲ್ಲಿ ಕಾಣುವ ಜನ ಇವರ ಮಧ್ಯೆ ವ್ಯತ್ಯಾಸವನ್ನು ಗುರುತಿಸಬೇಕಲ್ಲದೆ, ಈ ವ್ಯತ್ಯಾಸಗಳು ಯಾವುವು ಎಂಬುದನ್ನು ಪರಿಶೀಲಿಸಬಹುದು. ನನಗೆ ಮುಖ್ಯ ಎಂದು ಕಾಣುವ ಅಂಶ, ಮಾಸ್ತಿಯವರ ಹಲವು ಮುಖ್ಯ ಕೃತಿಗಳಂತೆ ಈ ನೀಳ್ಗತೆಯೂ ಒಂದು ಜೀವವು ಮಾಗುವ ಪ್ರಕ್ರಿಯೆಯನ್ನು ಕಲಾತ್ಮಕವಾಗಿ ಪುನಸ್ಸೃಷ್ಟಿ ಮಾಡುತ್ತದೆ. 'ಮಂತ್ರೋದಯ'ದ ಮಹರ್ಷಿಗಳು 'ಮಮತೆ ತಪ್ಪು ಅಭಿಮಾನ ತಪ್ಪಲ್ಲ'

ಎನ್ನುತ್ತಾರೆ. ಸುಬ್ಬಣ್ಣ ಆ ಸ್ಥಿತಿಯನ್ನು ತಲುಪುತ್ತಾರೆ. ಬದುಕಿನಲ್ಲಿ ಬೇಸರವಿಲ್ಲ; ಬದುಕಿಗೆ ಅಂಟಿಕೊಂಡೂ ಇಲ್ಲ.

ಮಾಸ್ತಿಯವರು ಬರೆದ ಎರಡು ಐತಿಹಾಸಿಕ ಕಾದಂಬರಿಗಳು ವಿಶಿಷ್ಟ ರಚನೆಗಳು ವಿಕ್ರಮ್ ಹತ್ವಾರ ಅವರು 'ಚೆನ್ನಬಸವನಾಯಕ' ಕಾದಂಬರಿಯ ಕಥಾವಸ್ತುವಿನ ಪರಿಚಯ ಮಾಡಿಕೊಟ್ಟು ಕೆಲವು ವಿಚಾರಪ್ರಚೋದಕವಾದ ಪ್ರಶ್ನೆಗಳನ್ನು ಎತ್ತುತ್ತಾರೆ. ಇವೆಲ್ಲವೂ ಚರ್ಚೆಯಾಗಬೇಕಾದುವೆ. ಉದಾಹರಣೆಗೆ, ಗಂಡ ತೀರಿಕೊಂಡ ಮೇಲೆ ವೀರಮ್ಮಾಜಿ ಮತ್ತೊಬ್ಬ ಪುರುಷನಲ್ಲಿ ಸೌಖ್ಯ ಕಾಣುವುದು ತಪ್ಪೆ ಎಂಬ ಪ್ರಶ್ನೆ. ಇದನ್ನು ಹೀಗೆ ಪ್ರತ್ಯೇಕಿಸಿ ಕೇಳುವಾಗ ಕೊಡಬಹುದಾದ ಉತ್ತರವೇ ಬೇರೆ. ಒಂದು ನಿರ್ದಿಷ್ಟ ಸಮಾಜದಲ್ಲಿ ರಾಜ್ಯದ ನಿರ್ವಹಣೆಯ ಹೊಣೆ ಹೊತ್ತ ವಿಧವೆ, ಶತ್ರುಗಳಿಂದ ರಾಜ್ಯವನ್ನು ರಕ್ಷಿಸಬೇಕಾದವಳು, ಒಬ್ಬ ನಿರ್ದಿಷ್ಟ ಪುರುಷನೊಡನೆ ಸಖ್ಯ ಬೆಳೆಸುವುದು ವಿಹಿತವೇ ಎಂದು ಪ್ರಶ್ನೆ ಕೇಳಿದಾಗ ಕೊಡಬಹುದಾದ ಉತ್ತರವೇ ಬೇರೆ. ಎರಡು ಕಾದಂಬರಿಗಳಲ್ಲಿಯೂ ಮೂಲಪ್ರಶ್ನೆ, ಹಲವು ದಶಕಗಳ ಕಾಲ ಅಸ್ತಿತ್ವದಲ್ಲಿದ್ದ ರಾಜ್ಯ ಒಂದು ಅವನತಿ ಸ್ಥಿತಿಗೆ ಬರುವುದು ಏಕೆ, ಪರಕೀಯರ ವಶವಾಗುವ ಸ್ಥಿತಿಗೆ ಏಕೆ ಬರುತ್ತದೆ? ಒಂದು ಕಾದಂಬರಿಯು ಐತಿಹಾಸಿಕ ಕಾದಂಬರಿಯಾಗುವುದು ಕೆಲವರು ಐತಿಹಾಸಿಕ ವ್ಯಕ್ತಿಗಳ ಕಥೆಯನ್ನು ಹೇಳುವುದರಿಂದಷ್ಟೇ ಅಲ್ಲ. ಅದು ಒಂದು ಯುಗವನ್ನು ಪುನರ್ ಸೃಷ್ಟಿಸಬೇಕು. ಆ ಯುಗದ ಸಾಮಾಜಿಕ ರಚನೆಯೂ ಒಂದು ಪಾತ್ರವನ್ನು ವಹಿಸಬೇಕು. ಕಾದಂಬರಿಯು ಇತಿಹಾಸದ ವ್ಯಾಖ್ಯಾನವೂ ಆಗಬೇಕು. ಸಾಮಾನ್ಯವಾಗಿ ಕನ್ನಡದಲ್ಲಿ ಐತಿಹಾಸಿಕ ಕಾದಂಬರಿಗಳನ್ನು ಬರೆದವರು ಒಬ್ಬ ಮಹಾನ್ ಅರಸನ ಸುತ್ತ ಬೆಳೆದ ವೈಭವದ ಯುಗವನ್ನು ಆರಿಸಿಕೊಂಡರು. ಮಾಸ್ತಿಯವರ ಐತಿಹಾಸಿಕ ಕಾದಂಬರಿಗಳು ವಿಶಿಷ್ಟವಾದವು.

ಮಾಸ್ತಿಯವರ ಇನ್ನೂ ಕೆಲವು ಕೃತಿಗಳನ್ನು ಈ ಸಂಕಲನದಲ್ಲಿ ಸಂಗ್ರಹವಾಗಿ ಪರಿಶೀಲಿಸಿದೆ. ಅವರ 'ಭಾವ' ಒಂದು ಯುಗವನ್ನು ನಮ್ಮ ಮುಂದೆ ನಿಲ್ಲಿಸುತ್ತದೆ, ಮಾಸ್ತಿಯವರ ವ್ಯಕಿತ್ವವನ್ನು ಅರ್ಥಮಾಡಿಕೊಳ್ಳಲು ಈ ಕೃತಿಯನ್ನು ಓದಬೇಕು. ಅವರ ಇಂಗ್ಲಿಷ್ ಪುಸ್ತಕದಲ್ಲಿ ಅವರು ಹೇಳಿರುವ ಮಾತುಗಳನ್ನು ಉದ್ಧರಿಸಬೇಕು ಎನ್ನಿಸುತ್ತದೆ. -Everything in my life, as I wrote years ago, is as well as it can be. 'All is, if I have grace to see it so, as ever in my Taskmaster's eye'. And the teaching of my life taken as a whole is, 'Believe in God and know for certain that He is watching over you all the moments of you life.' ಈ ಮಾತುಗಳನ್ನು ಬರೆದವರು ಮಾಸ್ತಿಯವರು.

ಇದನ್ನು ನಾನು ಒತ್ತಿ ಏಕೆ ಹೇಳುತ್ತೇನೆ ಎಂದರೆ ಮಾಸ್ತಿಯವರಿಗೂ ಶ್ರೀನಿವಾಸರಿಗೂ ವ್ಯತ್ಯಾಸವಿದೆ ಎಂಬ ಕಾರಣಕ್ಕಾಗಿ, ಮಾಸ್ತಿಯವರಿಗೆ ಜ್ಞಾನಪೀಠ

ಪ್ರಶಸ್ತಿ ಬಂದಾಗ ನಾನು ಅವರನ್ನು ಸಂದರ್ಶಿಸಬೇಕೆಂದು ಭಾರತೀಯ ವಿದ್ಯಾಭವನ ಸೂಚಿಸಿತು. ಸಂದರ್ಶನದ ಪ್ರಾರಂಭದಲ್ಲಿಯೇ ಮಾಸ್ತಿಯವರು, 'ಮನುಷ್ಯನ ಬದುಕಿನಲ್ಲಿ ನಡೆಯುವುದೆಲ್ಲ ದೈವೇಚ್ಛೆ' ಎಂದುಬಿಟ್ಟರು. ನಾನು 'ಹಾಗಾದರೆ ಮನುಷ್ಯನಿಗೆ ನೈತಿಕ ಹೊಣೆ ಇಲ್ಲ ಎಂದಾಯಿತು' ಎಂದೆ. 'ಮನುಷ್ಯ ಬೊಂಬೆಯಷ್ಟೆ, ಆ ಸೂತ್ರಧಾರ ನಡೆಸುತ್ತಾನೆ' ಎಂದರು. 'ಹಾಗಾದರೆ ಸಾಹಿತ್ಯವೇ ಇಲ್ಲವಲ್ಲ?' ಎಂದೆ ನಾನು. ಹೀಗೆಯೇ ನಮ್ಮ ಮಾತು ನಡೆಯಿತು. (ತಮಗೂ ಒಂದು ಸಂದರ್ಭದಲ್ಲಿ ಇದೇ ಅನುಭವವಾಯಿತು ಎಂದು ರಾಮಚಂದ್ರ ಶರ್ಮರೂ ನನಗೆ ಹೇಳಿದರು) ಮಾಸ್ತಿಯವರಿಗೆ ಅರವತ್ತು ತುಂಬಿದಾಗ ನಡೆದ ಅಭಿನಂದನಾ ಸಭೆಯಲ್ಲಿಯೂ ಇದೇ ಧಾಟಿಯಲ್ಲಿಯೇ ಅವರು ಮಾತನಾಡಿದ್ದರು.

ಆದರೆ 'ಶ್ರೀನಿವಾಸ'ರಾಗಿ ಅವರು ಬರೆದಾಗ ಸಂದೇಹ, ಪ್ರಶ್ನೆ, ಎಲ್ಲ ಕಾಲಿಡುತ್ತವೆ. 'ವೇಲೂರಿನ ಲಕ್ಷ್ಮಮ್ಮ'ನಲ್ಲಿ ಕತೆ ಹೇಳುವವರು ಬ್ರಹ್ಮನ ಬರಹವನ್ನು ತಮ್ಮ ಚಿಕ್ಕ ಮಗ ರಾಮುವಿನ ಬರಹಕ್ಕೆ ಹೋಲಿಸುತ್ತಾರೆ. ಗೆರೆ ಎಳೆಯುತ್ತಾ ಇರೋದೇ ಬರೆಹ. ಅದರಲ್ಲೆಲ್ಲಾದರೂ ಒಂದು ಅಕ್ಷರ, ಆದರೆ ಅವನ ತಪ್ಪಲ್ಲ. ಬ್ರಹ್ಮನ ಬರಹದಲ್ಲಿ ಸಿಕ್ಕಾಪಟ್ಟೆ ಹೋಗುವುದೇ ಪದ್ಧತಿ. ಸಾವಿರದಲ್ಲಿ ಒಂದು ಒಳ್ಳೆಯದಿಲ್ಲ. ಅದು ಒಳ್ಳೆಯದಾದಾಗ ಆಯಿತು. ಇದು ಅವನ ತಪ್ಪಲ್ಲ. 'ಚಿಕವೀರ ರಾಜೇಂದ್ರ'ದಲ್ಲಿ ಕಾದಂಬರಿಕಾರರು ನೇರವಾಗಿ ಹೇಳುವ ಮಾತುಗಳು: 'ಇದೆಲ್ಲಾ ಸರಿಯೆ, ಆದರೆ ಇದನ್ನು ತಪ್ಪಿಸುವುದಕ್ಕೆ ಏನು ಮಾಡಬಹುದು? ಇಂಥ ಸಂದರ್ಭದಲ್ಲಿ ಜೀವನವೆನ್ನುವುದು ವಿಧಾತ ಬರೆದಿಟ್ಟ ಒಂದು ನಾಟಕ ಆಗಿಬಿಡುತ್ತದೆ. ಕವಿ ಬರೆದು ಮುಗಿಸಿ ಆಡಿ ಎಂದು ಕೈಗೆ ಕೊಟ್ಟಿರುವ ನಾಟಕ, ನಟ ಅದನ್ನು ಆಡಬಹುದು ಹೊರತು ಬೇರೆ ಮಾಡಲು ಬರುವುದಿಲ್ಲ. ಇದನ್ನೇ ಪೂರ್ವಿಕರು ವಿಧಿಲಿಖಿತ ಎಂದಿರುವುದು. ಕಾಡಿನ ಮಧ್ಯದ ರಾಜಮಾರ್ಗದಲ್ಲಿ ಹೊರಟ ರಥ ಎದುರಿಗೆ ಹುಲಿ ಬಂದಿತೆಂದು ಕಾಡಿಗೆ ಹರಿಯುವಂತಿಲ್ಲ. ಮಾರ್ಗದಲ್ಲೆ ಹರಿಯಬೇಕು. ಜೀವನದ ಹರಿವೂ ಇಷ್ಟೆ. ರಥಕ್ಕೆ ಜೀವನಕ್ಕೆ ಒಂದೇ ವ್ಯತ್ಯಾಸ. ಹುಲಿಗೆ ಅಂಜಿ ರಥ ನಿಂತಲ್ಲಿ ನಿಲ್ಲಬಹುದು; ಜೀವನದಲ್ಲಿ ಸಿಕ್ಕವರಿಗೆ ಈ ಭಾಗ್ಯವಿಲ್ಲ.' 'ಸುಬ್ಬಣ್ಣ'ನಲ್ಲಿ ಕಥೆ ಹೇಳುವವರು ಕಡೆಯ ದಿನಗಳಲ್ಲಿ ಸುಬ್ಬಣ್ಣನವರಿಗೆ 'ಸಂಸಾರ ಮಾಡದೇ ಇದ್ದಿದ್ದರೆ ನಿಮಗೆ ಇಷ್ಟು ಸಂಸ್ಕಾರ ಹೇಗಾಗುತ್ತಿತ್ತು?' ಎಂದು ಪ್ರಶ್ನಿಸಿ ಸಮಾಧಾನಪಡಿಸಲು ಯತ್ನಿಸುತ್ತಾರೆ. ಸುಬ್ಬಣ್ಣನವರು 'ಇಲ್ಲಿಗೆ ಬಂದು ಈ ಸಂಸ್ಕಾರ ಏಕಾಗಬೇಕಾಗಿತ್ತು?' ಎಂದು ಕೇಳುತ್ತಾರೆ. ಕಥೆ ಹೇಳುವವರಿಗೆ ಉತ್ತರ ತೋರುವುದಿಲ್ಲ. 'ಕೃಷ್ಣಮೂರ್ತಿಯ ಹೆಂಡತಿ', 'ವೇಲೂರಿನ ಲಕ್ಷ್ಮಮ್ಮ', 'ಸುಬ್ಬಣ್ಣ', 'ಚನ್ನಬಸವ ನಾಯಕ ಯಾವುದೂ ಮನುಷ್ಯನ ಬದುಕನ್ನು ಸರ್ವಶಕ್ತ, ಸರ್ವಜ್ಞ ಕರುಣಾಮಯಿ ಶಕ್ತಿಯೊಂದು ರೂಪಿಸುತ್ತದೆ ಎಂಬ ಭಾವನೆಯನ್ನೇನೂ ಮೂಡಿಸುವುದಿಲ್ಲ. ಮಾಸ್ತಿಯವರು ಏನೇ ಹೇಳಲಿ, 'ಶ್ರೀನಿವಾಸ'ರಿಗೆ ಮನುಷ್ಯನ

ಸಂದೇಹ, ದಿಗ್ಭ್ರಮೆಗಳ ಪರಿಚಯ ಉಂಟು, ಅವನಲ್ಲಿ ಅನುಕಂಪ ಉಂಟು. ಆದುದರಿಂದಲೇ ಅವರ ಸಾಹಿತ್ಯಕ್ಕೆ ಗಹನತೆ ಮತ್ತು ಮಾನವೀಯತೆ ಪ್ರಾಪ್ತವಾಗಿರುವುದು.

ಮಾಸ್ತಿಯವರ ಬರಹ ಬಹು ಸರಳ ಎಂದು ಕಾಣುತ್ತದೆ. ಕಥೆಯನ್ನು ಉದ್ದಕ್ಕೆ ಹೇಳಿಕೊಂಡು ಹೋಗಿದ್ದಾರೆ ಎನ್ನಿಸುತ್ತದೆ. ಆದರೆ ಅವರ ಕೃತಿಗಳಲ್ಲಿಯೂ ಅನುಭವವು ಅನುಭವವಾಗಿಯೇ ಕಥೆ, ಕಾದಂಬರಿ, ಕವನ, ನಾಟಕ ಆಗುವುದಿಲ್ಲ, ಅದು ರೂಪವನ್ನು ಪಡೆಯುತ್ತದೆ. ಅನುಭವವನ್ನು ಸಾಹಿತ್ಯಮಾಡುವ ಕಲೆ (ಯಾವ ಒಳ್ಳೆಯ ಸಾಹಿತ್ಯ ಕೃತಿಯಲ್ಲಾಗಲಿ) ಲೆಕ್ಕಾಚಾರ ಹಾಕಿದ, ಸಂಪೂರ್ಣ ಪ್ರಜ್ಞಾಪೂರ್ವಕ ಕಲೆ ಆಗುವುದಿಲ್ಲ. ಸಾಹಿತಿಗೆ ಅನುಭವ ದಕ್ಕುವುದು ರೂಪ ಪಡೆದು. ಮಾಸ್ತಿಯವರಲ್ಲಿ ಈ ಕಲೆ ಇದೆ. ಆದರೆ ಎಷ್ಟು ಸಹಜವಾಗಿದೆ ಎಂದರೆ ಅದು ಎಷ್ಟೋ ಬಾರಿ ಗಮನಕ್ಕೇ ಬರುವುದಿಲ್ಲ. ಈ ಮಾತಿಗೆ ಕೆಲವು ಉದಾಹರಣೆಗಳನ್ನು ನೋಡಬಹುದು. 'ರಾಮನವಮಿ' ಬರಿಯ ಒಂದು ಘಟನೆಯ ನಿರೂಪಣೆಯಲ್ಲ. ಅದು ಒಂದು ಆವರಣವನ್ನು, ತನ್ನದೇ ಜಗತ್ತನ್ನು ಸೃಷ್ಟಿಸಿಬಿಡುತ್ತದೆ. 'ವೆಂಕಟಿಗನ ಹೆಂಡತಿ'ಯಲ್ಲಿ ದೇವಕಣಿಗಲೆ ಮರದ ಪ್ರಸ್ತಾಪ ಇಲ್ಲಿನ ಲೇಖನದಲ್ಲಿದೆ. ಈ ಕಥೆಯಲ್ಲಿ ಸಂಕೇತಗಳ ಬಳಕೆಯ ಪ್ರಸ್ತಾಪವಿದೆ. ಗರುಡ, ದೇವಕಣಿಗಲೆ, ಹಕ್ಕಿ ಇವುಗಳ ಪ್ರಸ್ತಾಪಗಳನ್ನು ಕಥೆಯಿಂದ ತೆಗೆದುಬಿಟ್ಟರೆ ಸಾಹಿತ್ಯಕವಾಗಿ ಕಥೆಯು ಬಡಕಲಾಗುತ್ತದೆ. ವೆಂಕಟಿಗನನ್ನು ನಾವು ಕಾಣುವ ಮೊದಲೇ ಸೋಲದ, ಅಳಿಯದ ಬದುಕಿನ ಸಂಕೇತಗಳನ್ನು ಕಥೆ ನಮ್ಮ ಮುಂದಿಡುತ್ತದೆ. 'ಚಿಕವೀರ ರಾಜೇಂದ್ರ' ಕಾದಂಬರಿಯಲ್ಲಿ ಸರಿಯಾಗಿ ಅರ್ಧಭಾಗ ಮುಗಿದಿರುವಾಗ ಆಂಗ್ಲ ಅಧಿಕಾರಿಗಳು ಕೊಡಗಿಗೆ ಬಂದಾಗ ಏರ್ಪಾಟಾದ ಮನರಂಜನೆಯ ಕಾರ್ಯಕ್ರಮದ ವಿಸ್ತಾರವಾದ ನಿರೂಪಣೆ ಇದೆ. ಇದರ ಅಗತ್ಯವೇನು? ನಾಲ್ಕು ದಿನಗಳ ಆಟಗಳಲ್ಲಿ ಕೊಡಗಿನ ಈಚೆಗಿನ ಇತಿಹಾಸದ ಪುನರ್ ಸೃಷ್ಟಿಯಾಗುತ್ತದೆ. ಚಿಕವೀರ ರಾಜೇಂದ್ರನ ಭವಿಷ್ಯವು ಇತ್ಯರ್ಥವಾಗುವ ಘಟ್ಟದಲ್ಲಿ ಅನವಶ್ಯಕ ಎಂದು ಕಾಣಬಹುದಾದ ಈ ವರ್ಣನೆಯು ರಾಜನ ಬದುಕನ್ನು ನಾವು ನೋಡಬೇಕಾದ ಮಹತ್ವದ ಹಿನ್ನೆಲೆಯನ್ನು ನಮ್ಮ ಮುಂದೆ ತಂದು ನಿಲ್ಲಿಸುತ್ತದೆ. ಈ ರಾಜನ ವಂಶದ ಮೂಲಪುರುಷನು 'ನಾನೂ ನನ್ನ ವಂಶದವರೂ ನಿಮ್ಮನ್ನು (ಪ್ರಜೆಗಳನ್ನು) ಮನೆ ಮಕ್ಕಳಂತೆ ನೋಡಿಕೊಳ್ಳುತ್ತೇವೆ. ಈ ವಂಶದಲ್ಲಿ ಯಾವನು ಹೀಗೆ ನಡೆಯದೆ ತಪ್ಪುತ್ತಾನೋ ಅವನಿಗೆ ಅವನ ಕಾಲದ ಜನ ಈ ಹಿಂದಿನ ಅರಸನಿಗೆ ನೀವು ಕೊಟ್ಟ ಶಿಕ್ಷೆಯನ್ನು ಕೊಡತಕ್ಕದ್ದು' ಎಂದು ಮಾತುಕೊಟ್ಟಿದ್ದಾನೆ. (ಈ ಹಿಂದಿನ ಅರಸನನ್ನು ಜನ ಕೊಂದರು. ನಾಲ್ಕು ದಿನಗಳ ಮನರಂಜನೆಯೂ ಈ ರೀತಿಯದೇ–ಹೊರನೋಟಕ್ಕೆ ಮನರಂಜನೆ, ವಾಸ್ತವವಾಗಿ ಮೌಲ್ಯಗಳ ಸ್ಥಾಪನೆ. 'ಚೆನ್ನಬಸವನಾಯಕ'ನಲ್ಲಿ ಮಲ್ಲಿಗೆ, ಸಗುವ ಮಾಸ್ತಿಯವರು ಸೃಷ್ಟಿಸಿದ, ಕ್ರಿಯೆಯ ಅಂಚಿನಲ್ಲಿರುವ ಪಾತ್ರಗಳು. ಅವರು ಸಾಮಾನ್ಯ ಜನರು, ದೊಡ್ಡವರೆನ್ನಿಸಿಕೊಂಡವರೆಲ್ಲ ಯುದ್ಧಗಳ ವಿಷಯ ಯೋಚಿಸಿ ಯೋಚಿಸಿ ಆಕ್ರಮಣ ರಕ್ಷಣೆಗಳಲ್ಲಿ ಮುಳುಗಿರುವಾಗ

ಸಾವಿರಾರು ಜನ ಅಬ್ಬರವಿಲ್ಲದ ಸರಳ ಬದುಕುಗಳನ್ನು ನಡೆಸಿಕೊಂಡು ಹೋಗುತ್ತಾರೆ. ಇಂಥವರಲ್ಲಿ ಒಬ್ಬಳು ಮಲ್ಲಿಗೆ, ಉತ್ಸಾಹ ಲವಲವಿಕೆಗಳ ಮಿಂಚಿನಬಳ್ಳಿ ಅವಳು. ಕಾದಂಬರಿಕಾರರು ಮೂರು ಸಮುದಾಯಗಳ ಮಂಕು ದಿನಗಳನ್ನು ಚಿತ್ರಿಸುತ್ತಾರೆ. ಈ ಮಬ್ಬಿನಲ್ಲಿ ಮಲ್ಲಿಗೆ ಹೊಳೆಯುತ್ತಾಳೆ. ಮಾನವ ಜೀವನ ಅಮೂಲ್ಯ ಎನ್ನುವುದನ್ನು ಅವಳು ಮನಗಾಣಿಸುತ್ತಾಳೆ. ಮಲ್ಲಿಗೆ–ಸಗುನ ಇಬ್ಬರೂ ಚಿಕ್ಕವಯಸ್ಸಿನ ಪ್ರೇಮಿಗಳು. ಅವರು ಕಾದಂಬರಿಯ ಇನ್ನಿಬ್ಬರು ತರುಣ ಪ್ರೇಮಿಗಳ ನೆನಪು ಕೊಡುತ್ತಾರೆ–ಶಾಂತವ್ವ, ಚೆನ್ನಬಸವನಾಯಕ. ಇವರ ಭಾಗ್ಯರೇಖೆಗಳ, ಬದುಕಿನ ಸುಖನೋವುಗಳ ವೈದೃಶ್ಯ ಮನಸ್ಸನ್ನು ಮುಟ್ಟುತ್ತದೆ. ಮಾಸ್ತಿಯವರು ವೈದೃಶ್ಯವನ್ನು ಬಳಸಿಕೊಳ್ಳುವ ಮತ್ತೊಂದು ನಿದರ್ಶನವನ್ನು ವೀರಮ್ಮಾಜಿ, ಅವಳ ಸೋದರಿ, ಮೈಸೂರಿನ ಮಹಾರಾಣಿ ಇವರ ಪಾತ್ರಗಳಲ್ಲಿ ಕಾಣಬಹುದು.

ಮಾಸ್ತಿಯವರು ಐತಿಹಾಸಿಕ ಕಾದಂಬರಿಗಳನ್ನು ಭಾಷೆಯನ್ನು ಬಳಸುವ ರೀತಿಯನ್ನು ಸಂಭಾಷಣೆಗಳ ನಿರ್ವಹಣೆಯನ್ನು ಕುರಿತು ಬೇರೆಡೆ ವಿಸ್ತಾರವಾಗಿ ಬರೆದಿದ್ದೇನೆ. ('ಮಾಸ್ತಿ ಜೀವನ ಮತ್ತು ಸಾಹಿತ್ಯ', ಪುಟ 162–167)

ಮಾಸ್ತಿಯವರ ವ್ಯಕ್ತಿತ್ವ, ಸಾಹಿತ್ಯ ಎರಡನ್ನು ಕುರಿತೂ ಬೇಕಾದಷ್ಟು ಹೇಳಬಹುದು. ಪುಸ್ತಕದ ಮೊದಲನೆಯ ಭಾಗದಲ್ಲಿ ಹಲವರು ಹಿರಿಯರು ಆಡಿದ ಮಾತುಗಳನ್ನು ಕೊಟ್ಟಿರುವುದು ಒಳ್ಳೆಯ ಯೋಚನೆ. ತೀ.ನಂ.ಶ್ರೀ. ಅವರು ಮಾಸ್ತಿಯವರ ವಿಶ್ವದೃಷ್ಟಿಯನ್ನು ಕುರಿತು ಮಾತನಾಡುತ್ತಾರೆ; ಅನಕೃ ಒಂದು ಅರ್ಥವತ್ತಾದ ಘಟನೆಯನ್ನು ನೆನಪು ಮಾಡಿಕೊಳ್ಳುತ್ತಾರೆ, ಗೋಪಾಲಕೃಷ್ಣ ಅಡಿಗರ ಮಾತುಗಳು ತೂಕವಾದವು. ನಾನು ಎರಡು ಅಂಶಗಳನ್ನು ಪ್ರಸ್ತಾಪಿಸಿ ನನ್ನ ಅರಿಕೆಯನ್ನು ಮುಗಿಸುತ್ತೇನೆ.

ಮಾಸ್ತಿಯವರು ಬದುಕಿನಲ್ಲಿ ಸಮೃದ್ಧಿಯಾಗಿ ಒಳ್ಳೆಯವರನ್ನೆ, ಒಳ್ಳೆಯತನವನ್ನೆ ಕಾಣುತ್ತಾರೆ. ಅಪ್ಪಟ ದುಷ್ಟರೆನ್ನುವವರು ಅವರ ಜಗತ್ತಿನಲ್ಲಿ ಹೆಚ್ಚು ಮಂದಿ ಇಲ್ಲ. ವೆಂಕಟಿಗನ ಹೆಂಡತಿಗೆ ಮೋಸಮಾಡಿದ ಸಾಹುಕಾರ, ಸುಬೇದಾರರ ಘಟಿಂಗ ಅಡುಗೆಯವನು, 'ಚೆನ್ನಮ್ಮ' ಕತೆಯಲ್ಲಿ ಚೆನ್ನಮ್ಮನ ಗಂಡ ಮಾರನಾಯಕ–ಇಂಥ ಕೆಲವರನ್ನು ಕಾಣಬಹುದು. ಆದರೆ ಬದುಕಿನಲ್ಲಿ ಇತರರಿಗೆ ನೋವು ಕೊಡುವವರು ಅಥವಾ ತಾವು ನೋವನ್ನು ಅನುಭವಿಸುವವರು ಬಹು ಮಂದಿಯಲ್ಲಿ ಕಾಣುವುದು ದೌರ್ಬಲ್ಯ. ವೆಂಕಟಿಗನ ಹೆಂಡತಿಯಾಗಲಿ ಟಾಲ್‌ಸ್ಟಾಯಿಯ ಹೆಂಡತಿಯಾಗಲಿ 'ಚೆನ್ನಬಸವ ನಾಯಕ'ನ ಕಾದಂಬರಿಯ ವೀರಮ್ಮಾಜಿಯಾಗಲಿ ಚಿಕವೀರ ರಾಜೇಂದ್ರನಾಗಲಿ 'ಕಾಕನಕೋಟೆ'ಯ ಮಾವನಾಗಲಿ ದುಷ್ಟತನ ಇವರಲ್ಲಿ ಕಾಣುವುದು ದೌರ್ಬಲ್ಯವಾಗಿ. ಮಾಸ್ತಿಯವರೂ ಈ ದೌರ್ಬಲ್ಯವನ್ನು ಒಪ್ಪಿಕೊಳ್ಳುವುದಿಲ್ಲ ಆದರೆ ಅದರ ಬಗ್ಗೆ ಅನುಕಂಪ ಉಂಟು. 'ತಿರುಪಾಣಿ' ನಾಟಕದಲ್ಲಿ ಪಾಣಿಯವರ ತಂಗಿ ತನ್ನನ್ನು ಮಾತನಾಡಿಸಿದುದರಿಂದ ತನಗೆ ಮೈಲಿಗೆಯಾಯಿತೆಂದು ಸಿಡಿಗುಟ್ಟುವ ಒಬ್ಬಾಕೆಯ

ವಿಷಯ ಬೇಸರಪಟ್ಟಾಗ ಸಂತಪಾಣಿ 'ಬಾಳು ಬೇವಿನ ಹಂಗೆ ಬಲಿತುಬಿಟ್ಟಿದೆ. ಬಲಿತಷ್ಟು ಕಹಿ' ಎಂದವರೇ 'ಪಾಪ ಇಂತಹವರ ಬದುಕು ಕಷ್ಟ' ಎನ್ನುತ್ತಾರೆ:

ಮಾಸ್ತಿಯವರ ಜೀವನದರ್ಶನಕ್ಕೆ ಬೆಳಕು ನೀಡುವುದು ವಿಶಾಲ ದೃಷ್ಟಿಯ ಕೃತಿಕ ವಿಶಾಲವಾದ ಅರ್ಥದಲ್ಲಿ ಧಾರ್ಮಿಕತೆ, ಇದು ನಿಷ್ಕ್ರಿಯ (ಪ್ಯಾಸಿವ್) ಮನೋಧರ್ಮ ಇದು ಕ್ರಿಯೇಟಿವ್, ಎಂದರೆ ಇದರ ಗುಣ ಬಾಳನ್ನು ಬೆಳೆಸುವುದು, ಅರಳಿಸುವುದು, ಅಧ್ಯಾತ್ಮ ಸಾಧನೆಯ ಶಿಖರದಲ್ಲಿರುವ ಮಹರ್ಷಿ ವಾಮದೇವ ದ್ವೈಪಾಯನ ಅರುಣೀಯರೂ 'ಅಧ್ಯಾತ್ಮ' ಎಂಬ ಶಬ್ದವನ್ನೂ ಅರಿಯದ ವೆಂಕಟಿಗನೂ ಒಂದೇ ಪಂಕ್ತಿಯಲ್ಲಿ ನಿಲ್ಲುವುದು ಈ ಕಾರಣದಿಂದ. ಇಬ್ಬರೂ ಬದುಕನ್ನು ಅರಳಿಸುವವರು, ಬೆಳೆಸುವವರು, ತಮಗೆ ಒಂದು ನೂರು ವರ್ಷ ತುಂಬಿ ತಾವು ಈ ಜಗತ್ತನ್ನು ಬಿಡುವ ದಿನವೂ ಮಹರ್ಷಿಗಳು ಸಸಿಗಳ ಪೋಷಣೆಯಲ್ಲಿ ನಿರತರಾಗಿದ್ದಾರೆ. ತನ್ನನ್ನು ಬಿಟ್ಟು ಬೇರೊಬ್ಬನೆಡೆಗೆ ಹೋದ ಹೆಂಡತಿ ಮಗುವನ್ನು ಎತ್ತಿಕೊಂಡು ಹಿಂದಿರುಗಿದಾಗ ವೆಂಕಟಿಗ ಒಂದು ಪ್ರಶ್ನೆಯನ್ನೂ ಕೇಳದೆ ಅವಳನ್ನು ಮನೆಗೆ ಕರೆದುಕೊಳ್ಳುತ್ತಾನೆ. 'ಯಶೋಧರಾ'ದಲ್ಲಿ ಬುದ್ಧಗುರು ಹೇಳುತ್ತಾರೆ:

ನಾನು ಅಲ್ಪನು ಎಂದ ಮಾನವನು
ಲೋಕಗಳ ಕಲ್ಯಾಣದಾವಾಸವಾಗುವನು,
ಆಗವನು ತನ್ನನಲ್ಲನು ಎಂದು ಹಳಿವುದಕು
ತಾನು ತನ್ನೊಡವೆಯಲ್ಲೆಂಬುದನು ಅರಿಯುವನು.
ತಾನೆಂಬುದುಂಟುಸ ವಿಶ್ವದ ಒಡವೆಯಾಗಿ,
ತನ್ನೊಡವೆಯಾಗಿ ಇಲ್ಲ.

ಯಾವುದು ಧರ್ಮ, ಯಾವುದು ಧರ್ಮವಲ್ಲ ಎಂದು ನಿರ್ಧರಿಸಲೂ ಅವರು ಕೊಡುವ ಸೂತ್ರಗಳಲ್ಲಿ ಮೊದಲನೆಯದು ಇದು:

ಧರ್ಮಸೂಕ್ಷ್ಮವನರಿವ ಮನ ತನ್ನ ಸುಖದಿಂದ
ಧರ್ಮವನು ಅಳೆಯಲಾಗದು–ಮೂಲಸೂತ್ರವಿದು

ಬದುಕಿಗೆ ನಿರ್ಮಲ ಸಂತೋಷವನ್ನು ತಂದು ಅದನ್ನು ಅರಳಿಸುವುದನ್ನೆಲ್ಲ ಮಾಸ್ತಿಯವರು ಗುರುತಿಸುತ್ತಾರೆ, ಮೆಚ್ಚುತ್ತಾರೆ. 'ನಮ್ಮ ಮೇಷ್ಟ್ರು' ಕತೆಯನ್ನು ಬೇರೆ ಯಾರಾದರೂ ಬರೆದಿದ್ದರೆ ಪ್ರಾಯಶಃ ಇನ್ಸ್‌ಪೆಕ್ಟರು ಮೇಷ್ಟ್ರ ಸಂಬಳವನ್ನು ಹೆಚ್ಚು ಮಾಡಲು ಶಿಫಾರಸು ಮಾಡಿದರು ಎನ್ನುವಲ್ಲಿಗೆ ಮುಕ್ತಾಯ ಮಾಡುತ್ತಿದ್ದರು. ಮಾಸ್ತಿ ಕಥೆಯನ್ನು ಮುಂದುವರೆಸುತ್ತಾರೆ. ಗಯ್ಯಾಳಿಯಂತೆ ಕಾಣಿಸಿದ ಆ ಹೆಂಡತಿಯ ಮೃದುತ್ವವನ್ನು, ಪ್ರೀತಿಯನ್ನು ಅನಾವರಣ ಮಾಡುತ್ತಾರೆ. ಏಕೆಂದರೆ ಇಂಥ ಪ್ರೀತಿಯೇ ಬದುಕಿಗೆ ಆಧಾರ. (ತಮ್ಮ ಮೊದಲನೆಯ ಕತೆಗಳ ಸಂಗ್ರಹದಲ್ಲಿಯೇ ಅವರು ಇಂಥ ಕತೆಯನ್ನು ಕೊಟ್ಟರೆಂಬುದು ಅಸಾಧಾರಣ ಸಂಗತಿ).

ಈ ಎಲ್ಲ ಮಾತೂ ಮಾಸ್ತಿಯವರ ಬರಹ ಉಪದೇಶಪ್ರಿಯ ಎಂಬ ಭಾವನೆಯನ್ನು ಉಂಟುಮಾಡಬಹುದು. ಮಾಸ್ತಿಯವರಲ್ಲಿನ ನೈತಿಕ ಒಲವು ಶ್ರೇಷ್ಠ ಸೃಜನಶೀಲ ಸಾಹಿತಿಗಿರಬೇಕಾದ ಮತ್ತೊಂದು ಗುಣದೊಂದಿಗೆ ಸೇರಿತ್ತು. ಅದು ಮಾನವ ಸ್ವಭಾವದಲ್ಲಿ ಸಹಜವಾದ ಸದಾ ಪುಟಪುಟಿಯುತ್ತಿರುವ ಆಸಕ್ತಿ, ಇದೇ ಅವರಿಂದ ಹಲವು ಸೊಗಸಾದ ಕಥೆಗಳನ್ನು ಬರೆಸಿತು. 'ವಿಚಿತ್ರ ಪ್ರೇಮ' ಕಥೆ ನೋಡಿ, ಆ ಕಥೆಯನ್ನು ಯಾರ ಕೈಗಾದಾರೂ ಕೊಟ್ಟು ಇದನ್ನು ಯಾರು ಬರೆದಿರಬಹುದು?' ಎಂದು ಪ್ರಶ್ನಿಸಿದರೆ 'ಮಾಸ್ತಿಯವರು' ಎಂದು ಹೇಳಬಹುದೆ? ಕಡೆಗೆ, ಒಪ್ಪಿಕೊಳ್ಳುತ್ತಾರೆಯೆ? ಹೇಳುವುದು ಕಷ್ಟ. ಆದರೆ ಇದರಲ್ಲಿ ಕಾಣುವುದು ಈ ಕಥೆಯ ಚಾಟಲ್ಲೈಟ್ ಪ್ರಭವಿಯನ್ನು ಮೆಚ್ಚಿಕೊಳ್ಳಬೇಕೆ? ಮಾಸ್ತಿ ಮೆಚ್ಚಿಕೊಳ್ಳುತ್ತಾರೆಯೆ? ಮನುಷ್ಯ ಸ್ವಭಾವದಲ್ಲಿ ಆಸಕ್ತಿ, ಬೇರೆ ದೇಶಗಳ ಚರಿತ್ರೆಗಳಿಂದ ವ್ಯಕ್ತಿಗಳನ್ನು ಆರಿಸಿಕೊಂಡು ಅವರು ಕಥೆಗಳನ್ನು ಬರೆದರು. ಇದರಲ್ಲಿ ಹಲವು ಕಥೆಗಳಿಗೆ ಪ್ರೇರಣೆ ಮನುಷ್ಯ ಸ್ವಭಾವದಲ್ಲಿ ಆಸಕ್ತಿ, ಹೆಂಗಸಾಗಿ, ಹೆಂಗಸಿನ ಸ್ವಭಾವವನ್ನು ಉದ್ದೇಶಪೂರ್ವಕವಾಗಿ ಅದುಮಿಟ್ಟು ಗಂಡಸಿನಂತೆ ಬಾಳುವ ರಾಣಿ, ಹೆಮ್ಮೆಯ ಹೆಣ್ಣು ಇಸಡೋರಾ ಡಂಕನ್ ಮುಂತಾದ ಹಲವು ಪಾತ್ರಗಳ ವಿಷಯದಲ್ಲಿ ನೀತಿ-ಅನೀತಿಗಳ ತೀರ್ಪನ್ನು ಒತ್ತಟ್ಟಿಗಿಟ್ಟು ಮನುಷ್ಯ ಸ್ವಭಾವ ಹೇಗಿರುತ್ತದೆ ಎಂದು ಕಾಣುವ ಮನೋಧರ್ಮವೇ ಮಾಸ್ತಿಯವರ ಇನ್ನೊಂದು ವಿಶಿಷ್ಟ ಸಾಧನೆಯ ಮೂಲ.

ಈ ಸಂಗ್ರಹದಲ್ಲಿ ಲೇಖನಗಳನ್ನು ಬರೆದಿರುವ ಹಲವರು ಸ್ನೇಹಿತರು ಮಾಸ್ತಿ ಸಾಹಿತ್ಯದ ಒಂದು ವೈಶಿಷ್ಟವನ್ನು ಪ್ರಸ್ತಾಪಿಸಿದ್ದಾರೆ-ಪಾತ್ರ ವೈವಿಧ್ಯ. ಅತ್ಯಂತ ಶ್ರೇಷ್ಠ ಸಾಹಿತಿಗಳಿಗೆ ಮಾತ್ರ ಈ ಸಾಧನೆ ಸಾಧ್ಯ, ನಮ್ಮ ಸುತ್ತಮುತ್ತಲಿನ ಜಗತ್ತಿನಂಥ, ನಮಗೆ ಜೀವಂತ ಎಂದು ತೋರುವ ಮತ್ತು ಆಸಕ್ತಿಯನ್ನುಂಟುಮಾಡುವ ಜನರ ಜಗತ್ತನ್ನು ಸೃಷ್ಟಿಸಬಲ್ಲರು. (ಕೆಲವು 'ಟೈಪ್' ಪಾತ್ರಗಳನ್ನೆ ಸೃಷ್ಟಿ ಮಾಡುತ್ತ ನೂರಾರು ಸಣ್ಣ ಕತೆಗಳನ್ನು ದೊಡ್ಡ ಸಂಖ್ಯೆಯ ಕಾದಂಬರಿಗಳನ್ನು ಬರೆದವರುಂಟು. 'ಜೀವಂತ ಎಂದು ತೋರುವ ಮತ್ತು ಆಸಕ್ತಿಯನ್ನುಂಟುಮಾಡುವ' ಎನ್ನುವುದು ಮುಖ್ಯ. ವ್ಯಾಸ, ಷೇಕ್ಸ್‌ಪಿಯರ್, ಟಾಲ್‌ಸ್ಟಾಯ್, ಶಿವರಾಮ ಕಾರಂತ, ಕುವೆಂಪು, ಎಸ್.ಎಲ್. ಭೈರಪ್ಪ-ಹೀಗೆ ಕೆಲವರಲ್ಲಿ ಮಾತ್ರ ಈ ದೈತ್ಯಶಕ್ತಿಯನ್ನು ಕಾಣುತ್ತೇವೆ. ಮಾಸ್ತಿಯವರು ಹೀಗೆ ತಮ್ಮದೇ ಒಂದು ಜಗತ್ತನ್ನು ಸೃಷ್ಟಿಮಾಡಬಲ್ಲ ಪ್ರತಿಭೆ.

ಮಾಸ್ತಿಯವರು ಸಮಕಾಲೀನ ಸಮಾಜದ ಕ್ರೌರ್ಯ, ಅನ್ಯಾಯಗಳಿಗೆ ಸ್ಪಂದಿಸಲಿಲ್ಲ ಎನ್ನುವ ಮಾತುಂಟು. ಮಾಸ್ತಿಯವರು ಸಮಕಾಲೀನ ಸಮಾಜದಲ್ಲಿನ ಕ್ರೌರ್ಯ, ಅನ್ಯಾಯ, ಶೋಷಣೆಗಳನ್ನು ಗಮನಿಸದೆ ಹೋಗಲಿಲ್ಲ. ಆದರೆ ಇದೆಲ್ಲದರ ಹಿಂದೆ ಒಂದು ಸ್ವಾರ್ಥವನ್ನು ಸಂಕುಚಿತ ಮನೋಭಾವವನ್ನು ಕಂಡರು. ಈ ಮನೋಧರ್ಮವನ್ನು ಮನುಷ್ಯ ದೂರವಿಟ್ಟರೆ ಬದುಕು ನೆಮ್ಮದಿಯಾಗುತ್ತದೆ ಎಂದು ಭಾವಿಸಿದರು. ಭಾರತೀಯ


ಸಂಸ್ಕೃತಿಗೆ ಒತ್ತು ಕೊಟ್ಟರು ಎಂದರೂ ಭಾರತೀಯ ಸಂಸ್ಕೃತಿಗಷ್ಟೇ ಮಹತ್ವ ಕೊಡಲಿಲ್ಲ, ಅವರಿಗೆ ಬದುಕನ್ನು ಅರಳಿಸುವ ಪೋಷಿಸುವ ಸಂಸ್ಕೃತಿ ಮುಖ್ಯವಾಗಿತ್ತು.

ಈ ಸಂಕಲನದ ಲೇಖನಗಳಲ್ಲಿ ಮಾಸ್ತಿಯವರ ಹಾಸ್ಯಪ್ರಜ್ಞೆ, ಅವರ ಎಲ್ಲೆ ಇಲ್ಲದ ಅನುಕಂಪ–ಕರುಣೆ ಇವುಗಳನ್ನು ಲೇಖಕರು ಸಾಕಷ್ಟು ಪ್ರಸ್ತಾಪಿಸಿದ್ದಾರೆ. ಆದುದರಿಂದ ನಾನು ಅವನ್ನು ಕುರಿತು ದೀರ್ಘವಾಗಿ ಬರೆಯುತ್ತಿಲ್ಲ. ಅವರ ಪ್ರಾರಂಭದ ಕಥೆಗಳು ರಂಗಪ್ಪನನ್ನು ಕುರಿತವು. ಅವುಗಳು ಎಂಥ ಸೊಗಸಾದ ಹಾಸ್ಯ! ದೊಡ್ಡ ಊರಿನಿಂದ ಬಂದ ರಂಗ ಶ್ಯಾಮಣ್ಣನವರಿಗೆ ನಮಸ್ಕಾರ ಮಾಡುತ್ತಾನೆ, ಶಾಮಣ್ಣ, ಹಿರಿಯರಿಗೆ ಮರ್ಯಾದೆ ತೋರಿಸುತ್ತಾನೆ ಹುಡುಗ ಎಂದುಕೊಳ್ಳುತ್ತಾನೆ. ರಂಗಪ್ಪನ ಕೋರ್ಟ್‌ಷಿಪ್ ಹಾಸ್ಯದ ಗಣಿ, 'ನಮ್ಮ ಮೇಷ್ಟರು' ಕತೆಯ ಪೂರ್ವಾರ್ಧದಲ್ಲಿ ಹಾಸ್ಯ, ಉತ್ತರಾರ್ಧದಲ್ಲಿ ಮನಸ್ಸು ಗಮನಿಸಬೇಕು. ಮಾಸ್ತಿಯವರು ಪೂರ್ತಿ ದುಷ್ಟರಾದವರನ್ನು ಚಿತ್ರಿಸುವುದು ವಿರಳ. ತಪ್ಪು ಅಂತಃಕರಣವನ್ನು ಪ್ರವೇಶಿಸಿಬಿಡುತ್ತಾರೆ. ಈ ಕತೆಯಲ್ಲಿ ಹಾಸ್ಯದ ವಿಶಿಷ್ಟ ಬಳಕೆಯನ್ನು ಮಾಡಿದ ಪಾತ್ರದ ವಿಷಯ ಹೇಳುವಾಗ 'ತಿಳಿಯದ ಹೆಣ್ಣು, 'ಸಾಹುಕಾರ ಬೆಳ್ಳಿಸಿದ್ದ, 'ಪಾಪ ತಿಳಿವಳಿಕೆ ಇಲ್ಲ' ಇಂಥ ಮಾತುಗಳನ್ನು ಜೋಡಿಸುತ್ತಾರೆ. ಚಿಕವೀರರಾಜನಂಥ ದುಷ್ಟ ಕೆಲಸಗಳನ್ನು ಮಾಡುವ ರಾಜನನ್ನು ಚಿತ್ರಿಸುವಾಗಲೂ, ಅವನ ಬಾಲ್ಯ ತಾರುಣ್ಯಗಳಲ್ಲಿ ಮಾರ್ಗದರ್ಶನವಿರಲಿಲ್ಲ ಎನ್ನುವ ಅಂಶಕ್ಕೆ ಗಮನ ಸೆಳೆಯುತ್ತಾರೆ. 'ಗೌತಮಿ ಹೇಳಿದ ಕಥೆ', 'ಹೇಮಕೂಟದಿಂದ ಹಿಂದಿರುಗಿದ ಮೇಲೆ' 'ಯಶೋಧರಾ' . 'ಸುಬ್ಬಣ್ಣ' ಮುಂತಾದ ಕೃತಿಗಳಲ್ಲಿ ಕರುಣೆ ಎಷ್ಟು ಆಳ, ಆದರೆ ಎಂಥ ಸಂಯಮ! ಎಲ್ಲಿಯೂ ಅನುಕಂಪ ಭಾವಾತಿರೇಕವಾಗುವುದಿಲ್ಲ.

ಈ ಮುನ್ನುಡಿಯ ಪ್ರಾರಂಭದಲ್ಲಿ ಈ ಕೃತಿಯನ್ನು ಕುರಿತು ಎರಡು ಅಂಶಗಳನ್ನು ಪ್ರಸ್ತಾಪಿಸಿದವನು, ಒಂದನ್ನು ಮಾತ್ರ ವಿವರಿಸಿದೆ–ಈ ಸಂಕಲನವು ಮಾಸ್ತಿಯವರ ವ್ಯಕ್ತಿತ್ವವನ್ನು ಸಾಹಿತ್ಯವನ್ನು (ಭಾವ ಒಂದನ್ನುಳಿದು) ಪರಿಚಯ ಮಾಡಿಕೊಡುತ್ತದೆ ಎಂದು. ಎರಡನೆಯದನ್ನು ಈಗ ಹೇಳುತ್ತಿದ್ದೇನೆ–ಇಲ್ಲಿನ ಎಲ್ಲ ಲೇಖನಗಳಲ್ಲಿ ಮಾಸ್ತಿಯವರನ್ನು ಕುರಿತು ಗೌರವ, ಪ್ರೀತಿ, ಆತ್ಮೀಯತೆಗಳು ಕಾಣುತ್ತವೆ. ಮಾಸ್ತಿ ಇಂಥ ಬರಹಗಾರರು– ಆತ್ಮೀಯತೆಯನ್ನು ಗೆದ್ದುಕೊಳ್ಳುವ ಬರಹಗಾರರು. ನಾನು ಅವರನ್ನು ಕಂಡಿದ್ದೆ, ಅವರೊಡನೆ ಕಾಲ ಕಳೆದಿದ್ದೆ. ಈ ಮುನ್ನುಡಿಯನ್ನು ಅತ್ಯಂತ ಗೌರವದಿಂದ, ಆತ್ಮೀಯತೆಯಿಂದ ಬರೆಯುತ್ತಿದ್ದೇನೆ. ಎಂ. ಜಿ. ಕೃಷ್ಣಮೂರ್ತಿಯವರು ಕಾಲ ಕಳೆದಂತೆ ಮಾಸ್ತಿಯವರ ಕಥೆಗಳ ಪ್ರಭಾವ ಕಡಿಮೆಯಾಗುವುದಲ್ಲದೆ ಹೆಚ್ಚಾಗುವುದು ಸಾಧ್ಯವಿಲ್ಲ ಎಂದರು. ಅವರು ಆ ಮಾತು ಬರೆದು ಆಗಲೇ ಮೂರು ನಾಲ್ಕು ದಶಕಗಳು ಕಳೆದವು. ನಮ್ಮ ಜಗತ್ತಿನಲ್ಲಿ ಬದುಕಿನಲ್ಲಿ ಆತಂಕ ಹೆಚ್ಚಾಗಿದೆ. ಪ್ರೊ. ಕೃಷ್ಣಮೂರ್ತಿಯವರು ಕಲ್ಪಿಸಿಕೊಳ್ಳಲೂ ಸಾಧ್ಯವಿಲ್ಲದಂಥ ಭಯೋತ್ಪಾದನೆ, ಕ್ರೌರ್ಯ ಇಂದು ನಮ್ಮ ಬದುಕಿನ ಭಾಗವಾಗಿವೆ. ವೇಗ, ಎಕ್ಸೈಟ್‌ಮೆಂಟ್, ಗದ್ದಲ, ಭಯ ಇವೇ ಬದುಕಿನ ಮುಖ್ಯ

ಬಯಕೆಗಳಾಗಿವೆ. ಇಂಥ ದಿನಗಳಲ್ಲಿ ಬದುಕಿನ ಅರ್ಥ, ಶಾಂತಿಗಳ ಮೂಲದತ್ತ ನಮ್ಮ ಮನಸ್ಸನ್ನು ಹರಿಸುವ, ಇಂದಿನ ಬದುಕಿನ ಗೊಂದಲಗಳಿಂದ ದೂರ ಕರೆದೊಯ್ದು ಅರ್ಥವತ್ತಾದ ಬದುಕಿನ ಮೂಲ ಸತ್ಯಗಳನ್ನು ಮೌಲ್ಯಗಳನ್ನು ಅನಾವರಣ ಮಾಡುವ ಮಾಸ್ತಿಯವರ ಸಾಹಿತ್ಯದ ಪ್ರಸ್ತುತತೆ ಹೆಚ್ಚಿದೆಯಲ್ಲದೆ ಕಡಮೆಯಾಗಿಲ್ಲ.

'ಕನ್ನಡದಮರಚೇತನ' ಕೃತಿಗೆ ಬರೆದ ಮುನ್ನುಡಿ. ಪ್ರ: ಸಾಹಿತ್ಯಾಂಜಲಿ ಮತ್ತು ಅಭಿನವ 2007.



ಯದುಗಿರಿಯ ಬೆಳಕು

– ಎಚ್. ಎಸ್. ವೆಂಕಟೇಶಮೂರ್ತಿ

ಪುತಿನ ಅವರ ಶತಮಾನೋತ್ಸವವನ್ನು ಅಮೆರಿಕಾದ ಕನ್ನಡಿಗರು ಉಳಿಬಾಳುವ ಒಂದು ಕ್ರಿಯೆಯ ಮೂಲಕ ಆಚರಿಸುತ್ತಿದ್ದಾರೆ. ಆ ಕ್ರಿಯೆ 'ಯದುಗಿರಿಯ ಬೆಳಕು' ಎಂಬ ಈ ಕೃತಿಯ ಪ್ರಕಟಣೆ. ಈ ಪ್ರಕಟಣೆಯ ಹಿಂದೆ ಇರುವ ಶ್ರದ್ಧೆ, ಅಭಿಮಾನ ಮತ್ತು ಸಾಂಸ್ಕೃತಿಕ ತುರ್ತು ನನ್ನನ್ನು ಮೂಕವಿಕವಿಸ್ಮಿತನನ್ನಾಗಿ ಮಾಡಿದೆ. ಪುತಿನ ಬಗ್ಗೆ ಉಪನ್ಯಾಸಗಳನ್ನು ಏರ್ಪಡಿಸುವುದು ಅಥವಾ ನುರಿತ ಲೇಖಕರಿಂದ ಪುತಿನ ಅವರ ಕೃತಿಗಳ ಬಗ್ಗೆ ಲೇಖನಗಳನ್ನು ಬರೆಸಿ ಪ್ರಕಟಿಸುವುದು, ಪುತಿನ ಗೀತೆಗಳ ಗಾಯನವನ್ನೊ, ನಾಟಕಗಳ ಪ್ರದರ್ಶನವನ್ನೊ, ಏರ್ಪಡಿಸುವುದು ಅಮೆರಿಕನ್ನಡಿಗರಿಗೆ ಅಸಾಧ್ಯವಾದ ಮಾತೇನೂ ಆಗಿರಲಿಲ್ಲ. ಅದನ್ನೂ ಅವರು ಮಾಡುತ್ತಾ ಬಂದಿದ್ದಾರೆ. ಆದರೆ ತಾವೇ ಪುತಿನ ಕೃತಿಗಳನ್ನು ಎದುರಿಗೆ ಹರಗಿಕೊಂಡು ಕುಳಿತು, ಅಮೆರಿಕಾದ ವೇಗಜೀವನದ ನಡುವೆ ಮನಸ್ಸನ್ನು ಸಾಹಿತ್ಯದಲ್ಲಿ ನಿಲ್ಲಿಸಿ ತಾವೇ ಆ ಸಾಹಿತ್ಯಿಕ ಅನುಭವವನ್ನು ತಮ್ಮೊಳಗೆ ತೆಗೆದುಕೊಳ್ಳಲಿಕ್ಕೆ ಹೊರಟಿದ್ದು ಬೆರಗು ಉಂಟುಮಾಡಿದೆ. ಯಾಕೆಂದರೆ ಅಧ್ಯಯನ ಮತ್ತು ಅನುಸಂಧಾನ ಮಾತ್ರ ಕಲಾಕೃತಿಯನ್ನು ನಮ್ಮದಾಗಿಸಿಕೊಳ್ಳುವ ಏಕೈಕ ಮಾರ್ಗವಾಗಿದೆ. ಹೊರಗಿನ ವ್ಯಾಖ್ಯಾನಗಳು ಮಾಹಿತಿಗಳನ್ನು ಪೂರೈಸಬಲ್ಲವೇ ಹೊರತು, ಪಿತ್ರಾರ್ಜಿತ ಆಸ್ತಿಯನ್ನು ಪ್ರಾಪ್ತಿಯ

ನೆಲೆಗೆ ತರಲಾರವು. ತನ್ನ ಊಟ, ತನ್ನ ಪೂಜೆ, ತನ್ನ ಓದನ್ನು ಒಬ್ಬ ವ್ಯಕ್ತಿ ತಾನೇ ಮಾಡಬೇಕಾಗುತ್ತದೆ. 'ಯದುಗಿರಿಯ ಬೆಳಕು'ನಲ್ಲಿ ಅದಾಗಿದೆ.

ಇಲ್ಲಿಯ ಬರಹಗಳು ಪ್ರಾಮಾಣಿಕವಾಗಿವೆ. ಗಂಭೀರವಾಗಿವೆ. ಎಷ್ಟು ಪ್ರಾಮಾಣಿಕವೆಂದರೆ ಈ ಕೆಲವು ಪದ್ಯಗಳು ನನಗೆ ಅರ್ಥವಾಗಲಿಲ್ಲ ಎಂದು ನಿಸ್ಸಂಕೋಚವಾಗಿ ಹೇಳಿಬಿಡುವಷ್ಟು, ವೃತ್ತಿಪರ ಲೇಖಕರಲ್ಲದ ಇವರು, ಕನ್ನಡನಾಡಿನಿಂದ, ಭಾಷೆಯಿಂದ ಬಹಳ ದೂರದಲ್ಲಿರುವ ಸಂದರ್ಭದಲ್ಲಿ ತಮ್ಮ ಅಂತರಂಗದಲ್ಲಿ ಕನ್ನಡದ ಅಮೃತಗಿಂಡಿಯನ್ನು ಜತನವಾಗಿ ಕಾಪಾಡಿಕೊಂಡು ಬಂದಿರುವುದು ನನಗಂತೂ ಅಭಿಮಾನದ ಸಂಗತಿಯಾಗಿದೆ. ನಮಗೆ ಗೊತ್ತಿರುವ ಇವರಲ್ಲಿ ಕೆಲವರು ಸೃಷ್ಟಿಶೀಲ ಲೇಖಕರಾಗಿಯೂ ಹೆಸರು ಮಾಡಿರುವವರು. ಕೆಲವರು ಕನ್ನಡದಲ್ಲಿ ಉದ್ಗ್ರಂಥಗಳನ್ನು ರಚಿಸಿರುವವರು. ವೈದ್ಯರೋ, ತಂತ್ರವೇತ್ತರೋ, ವಿಜ್ಞಾನಿಗಳೋ, ಅಧಿಕಾರಿಗಳೋ, ಉದ್ಯಮಶೀಲರೋ ಆಗಿರುವವರು. ಎಲ್ಲದಕ್ಕು ಮೊದಲು ಅಚ್ಚ ಕನ್ನಡಿಗರಾಗಿದ್ದಾರೆ. ಎಷ್ಟು ತೊಳೆದರೂ ಬಣ್ಣಬಿಡದ ಹಸಿರು ಮೈದಾನದಂತೆ, ಪ್ರತಿಕೂಲ ಸಂದರ್ಭದಲ್ಲೂ ಕನ್ನಡವನ್ನು ಮನಸ್ಸಿನಲ್ಲಿ ಬಣ್ಣ ಮಾಸದಂತೆ ಉಳಿಸಿಕೊಂಡಿದ್ದಾರೆ. ಇದು ದೊಡ್ಡ ಹೋರಾಟವೇ ಸರಿ.

ಈ ಹೋರಾಟ ಯಾತಕ್ಕಾಗಿ ಎಂಬುದು ಕೇಳಿಕೊಳ್ಳಬೇಕಾದ ಪ್ರಶ್ನೆ. ಇದು ಅಮೆರಿಕನ್ನಡಿಗರು ತಮ್ಮ ಅಸ್ಮಿತೆಯ ಉಳಿವಿಗಾಗಿ ನಡೆಸಿರುವ ಹೋರಾಟ ಎಂಬುದು ತಕ್ಷಣ ಹೊಳೆಯುವ ಉತ್ತರ. ನಾವು ಎಲ್ಲಿಗೆ ಹೋದರೂ ನಮ್ಮ ನೆರಳು ನಮ್ಮನ್ನು ಹಿಂಬಾಲಿಸುವಂತೆ ಬಾಲ್ಯದಿಂದಲೂ ನಮ್ಮನ್ನು ರೂಪಿಸಿದ ಸಂಸ್ಕಾರ, ನಡಾವಳಿ, ನೆನಪುಗಳು, ನಮ್ಮನ್ನು ಬೆಳೆಸಿದ ಆಪ್ತಲೋಕ, ಇಂದ್ರಿಯಗಳ ಮೂಲಕ ನಾವು ಪಡೆದ ಯಾವತ್ತೂ ರೂಪ ರಸ ಗಂಧಗಳು ನಮ್ಮನ್ನು ಹಿಂಬಾಲಿಸುತ್ತವೆ. ಈ ಆಪ್ತಲೋಕವನ್ನು ರಾಕೆಟ್ಟಿನಂತೆ ಜಗಿದುಗುಳಿ ಮುನ್ನುಗ್ಗುವುದು ಅಷ್ಟು ಸುಲಭವಲ್ಲ. ಹಾಗೆ ಜಗಿದುಗುಳಿ ಮುನ್ನುಗ್ಗುವುದು ಒಂದು ಬಗೆಯ ಸುಖಪುರುಷರೆಂದೇ ಹೇಳಬೇಕು. ಆದರೆ ಪವಮಾನಸುತನಂತೆ ತಾಯಿ, ಅಣ್ಣ ತಮ್ಮದಿರನ್ನು ಹೆಗಲ ಮೇಲೆ ಹೊತ್ತು ನಡೆಯುವ ಸಂಸ್ಕಾರಶೀಲರಿಗೆ ಆಪ್ತ ಲೋಕವನ್ನು ಅಷ್ಟುಸುಲಭವಾಗಿ ಚೆಲ್ಲಿ ಕೊಡುವುದು ಅಸಾಧ್ಯ. ಬೆಂಗಳೂರಿನ ಕೆಲವು ಮನೆಗಳ ಮುಂದೆ ಆಯಾ ಗೃಹಸ್ಥರ ಹಳ್ಳಿಗಳ ಹೆಸರನ್ನು ಹೇಳುವ ಮನೆಗಳ ನಾಮಫಲಕಗಳನ್ನು ನೋಡಿದ್ದೇನೆ. ತಮ್ಮನ್ನು ತಮ್ಮ ಹಳ್ಳಿಗಳ ಹೆಸರಿನಿಂದಲೇ ಗುರುತಿಸಿಕೊಳ್ಳುವ ನಗರವಾಸಿಗಳನ್ನು ನೋಡಿದ್ದೇನೆ, ಗೊರೂರು, ಮಾಸ್ತಿ, ಬೆಟಗೇರಿ, ಗೋಕಾಕ ಮೊದಲಾದ ಹೆಸರುಗಳು ನಮ್ಮ ಲೇಖಕರ ನಿಜ ನಾಮಧೇಯಗಳಿಗೆ ಅಳಿಸಲಾಗದ ಪ್ರತಿನಿಧಾನಗಳಾಗಿಬಿಟ್ಟಿವೆ. ಈಗ ಅಮೆರಿಕದ ಅನೇಕ ಗೃಹಸ್ಥರೂ ತಮ್ಮ ಮನೆಗಳಿಗೆ ಕರ್ನಾಟಕದ ಯಾವುದೋ ಹಳ್ಳಿಯ ನಾಮಕರಣ ಮಾಡಿದ್ದರೆ ಆಶ್ಚರ್ಯಪಡಬೇಕಾದ್ದಿಲ್ಲ. ಅಮೆರಿಕದಲ್ಲಿರುವ ಕನ್ನಡಿಗರು ತಮ್ಮ ಮನೆಗಳಲ್ಲಿ

ಆ ಮನೆಗಳ ಮೂಲ ನಿಧಿಗಳಾಗಿ ಕನ್ನಡದ ಸಾಹಿತ್ಯ, ಕನ್ನಡದ ಹಾಡು ಹಸೆ, ಕನ್ನಡ ಶಿಲ್ಪಚಿತ್ರ, ಕನ್ನಡದ ತಿಂಡಿ ತಿನಿಸು, ಕನ್ನಡದ ಹಬ್ಬ ಹುಣ್ಣಿಮೆ, ಕನ್ನಡದ ಗುಡಿ ಗುಂಡಾಂತರ ಚಿಹ್ನೆಗಳನ್ನು ಆವಾಹಿಸಿಕೊಳ್ಳುವ ಎಲ್ಲಕಿಂತ ಹೆಚ್ಚಾಗಿ ತಮ್ಮ ಎದೆಗೆ ಹೊಕ್ಕ ಅಮೆರಿಕೆಯ ಗಾಳಿಯನ್ನು ಕನ್ನಡ ಭಾಷೆಯಾಗಿ ಪರಿವರ್ತಿಸುವ ಖಾಸಗಿಯತ್ನದಲ್ಲಿ ನಿರಂತರವಾಗಿ ತೊಡಗಿಕೊಂಡಿದ್ದಾರೆ. ಇದು ಪ್ರಜ್ಞಾಪೂರ್ವಕವಾಗಿ ನಡೆಸಿಕೊಂಡು ಹೋಗುವ ಅಸ್ಮಿತೆಯ ವ್ರತ. ಇಂಥಾ ವ್ರತದ ದೀಕ್ಷೆ ತೊಟ್ಟವರೆಂದೇ ಅಮೆರಿಕೆಯ ಅನೇಕ ಕನ್ನಡ ಬಂಧುಗಳು ನಮ್ಮ ಮನಸ್ಸಿನ ಒಳಗಿರುವ ಕನ್ನಡಿಗರಾಗಿದ್ದಾರೆ.

'ಯದುಗಿರಯ ಬೆಳಕು' ಕೃತಿಯಲ್ಲಿನ ಅನೇಕ ಲೇಖನಗಳು ನನಗೆ ಪ್ರಿಯವಾಗಿವೆ. ಉದಾಹರಣೆಗೆ 'ಶ್ರೀಹರಿಚರಿತೆಯ ರಸ ನಿಮಿಷಗಳು' ಎಂಬ ಲೇಖನದಲ್ಲಿ ಕೇವಲ ಕಥವಾಹಿನಿಯಲ್ಲಿ ರಮಿಸದೆ ರಸನಿರ್ಮಿತಿಯ ಗ್ರಂಥಿಗಳಾದ ಪ್ರತೀಕಗಳ ಅನುಸಂಧಾನದಲ್ಲಿ ಡಾ. ರಂಗಾಚಾರ್ ಅವರು ತೊಡಗಿಕೊಳ್ಳುತ್ತಾರೆ. ಪುತಿನ ಅವರ ಗೇಯ ನಾಟಕಗಳನ್ನು ಕುರಿತ ಲೇಖನಗಳು ಅಮೆರಿಕೆಯ ಸಂದರ್ಭದಲ್ಲಿ 'ಗೋಕುಲ ನಿರ್ಗಮನ'ದಂಥ ಕೃತಿಯ ಅರ್ಥೈಕೆಗೆ ಹವಣಿಸುತ್ತವೆ. ಹಾಗಾಗಿಯೆ ಇಂಥ ಲೇಖನಗಳು ಕೃತಿಯನ್ನು ಸ್ವಾಂತಗೊಳಿಸಿಕೊಳ್ಳುವ ಗಂಭೀರ ಹುನ್ನಾರದಲ್ಲಿ ತೊಡಗಿ ಕೃತಕೃತ್ಯವೆನ್ನಿಸುತ್ತವೆ.


'ಯದುಗಿರಿಯ ಬೆಳಕು' ಗ್ರಂಥದಲ್ಲಿ ನನ್ನನ್ನು ಆಳದಲ್ಲಿ ಕಲಕಿದ ಬರಹಗಳೆಂದರೆ ಪುತಿನ ಅವರನ್ನು ಆಪ್ತನೆಲೆಯಲ್ಲಿ ಧ್ಯಾನಿಸುವ ಅವರ ವ್ಯಕ್ತಿತ್ವನ್ನು ಕುರಿತು ಬರೆಯಲಾಗಿರುವ ಲೇಖನಗಳು. ಅಣ್ಣನ ನೆನಪಿನಲ್ಲಿ, ಬೆಳಗಿನ ಗಾಳಿ ಸಂಚಾರ, ಕೇವಲ ಪುತಿನ ಬಗ್ಗೆ ಹೇಳುತ್ತಿವೆಯೇ? ಹಿಂದೆ ಸರಿಯುತ್ತಿರುವ ಹಳೆಗಾಲ ಮತ್ತು ಆಕ್ರಮಿಸುತ್ತಿರುವ ಹೊಸಗಾಲಗಳ ಮುಖಾಮುಖಿಯನ್ನು ಈ ಲೇಖನಗಳಲ್ಲಿ ನೋಡುತ್ತೇವೆ. ಆದರೆ ಇಲ್ಲಿ ಯಾವುದೇ ವೈಚಾರಿಕ ಭಾರವಿಲ್ಲದ ಆಪ್ತನೆಲೆ ಮುಖ್ಯವಾಗಿದೆ. ಸ್ವತಃ ಪುತಿನ ಬರೆದಿರುವ ರಸವ್ಯಂಜಕವಾದ ಲಲಿತ ಪ್ರಬಂಧಗಳ ನೆನಪನ್ನು ಜಾಗೃತಗೊಳಿಸುವಷ್ಟು ಈ ಪ್ರಬಂಧಗಳು ಚೆಲುವಾಗಿವೆ ಅಂದರೆ ಸಾಕು.

ಯದುಗಿರಿಯ ಬೆಳಕು ಕೃತಿಯಲ್ಲಿ ನಮ್ಮ ನಾಡಿನ ಕೆಲವರು ಹಿರಿಯ ಲೇಖಕರ ಆಹ್ವಾನಿತ ಲೇಖನಗಳೂ ಸಮಾಹಿತವಾಗಿವೆ. ಡಾ. ಜಿ. ಎಸ್. ಶಿವರುದ್ರಪ್ಪ, ಡಾ. ಎನ್. ಎಸ್. ಲಕ್ಷ್ಮೀನಾರಾಯಣ ಭಟ್ಟ, ಡಾ. ಪ್ರಭುಶಂಕರ, ಪ್ರೊ. ಅ. ರಾ. ಮಿತ್ರ, ಡಾ. ಎಲ್. ಜಿ ಸುಮಿತ್ರ ಅವರು ಲೇಖನಗಳು ಕೃತಿಯ ಘನತೆಯನ್ನು ಮತ್ತಷ್ಟು ಹೆಚ್ಚಿಸಿವೆ.

ಇಂಥ ಸಾರ್ಥಕ ಕೃತಿಯನ್ನು ರೂಪಿಸಿರುವ ಡಾ. ನಾಗ ಐತಾಳರ ಪರಿಶ್ರಮ, ಶ್ರದ್ಧೆ, ಕಾರ್ಯದ ಕ್ಷಮತ್ವವನ್ನು ಎಷ್ಟು ಶ್ಲಾಘಿಸಿದರೂ ಕಮ್ಮಿಯೇ. ಅವರಿಗೆ ಕವಿವರ್ಯ ಪುತಿನ ಅವರ ಬಗ್ಗೆ ಇರುವ ಪ್ರೀತಿಯೂ, ಕನ್ನಡ ಭಾಷಾ ಸಂಸ್ಕೃತಿಯ ಬಗ್ಗೆ ಇರುವ

ಪ್ರೀತಿಯೂ ಈ ಗ್ರಂಥ ನಿರ್ಮಾಣದಿಂದ ಒಮ್ಮೆಗೇ ವ್ಯಕ್ತವಾಗಿವೆ. ಶ್ರೀಯುತ ನಾಗ ಐತಾಳರನ್ನೂ, ಈ ಪುಸ್ತಕವನ್ನು ಸಾಧ್ಯವಾಗಿಸಿರುವ ಅಮೆರಿಕಾದ ಎಲ್ಲ ಕನ್ನಡ ಬಂಧುಗಳನ್ನೂ ನಾನು ಹಾರ್ದಿಕವಾಗಿ ಅಭಿನಂದಿಸುತ್ತೇನೆ.

'ಯದುಗಿರಿಯ ಬೆಳಕು' ಕೃತಿಗೆ ಬರೆದ ಮುನ್ನುಡಿ. ಮೊದಲ ಮುದ್ರಣ ೨೦೦೫.
ಪ್ರ: ಸಾಹಿತ್ಯಾಂಜಲಿ ಕ್ಯಾಲಿಫೋರ್ನಿಯಾ ಮತ್ತು ಅಭಿನವ ಬೆಂಗಳೂರು.



ಒಬ್ಬ ರಾಜ ಒಂದೂರಲ್ಲೇ ಯಾಕಿದ್ದಾನೆ ಎನ್ನುತ್ತಾ...

– ವಿಶ್ವೇಶ್ವರ ಭಟ್

ಹೌದಲ್ವ? ಬಹುಪಾಲು ಕತೆಗಳು ಶುರುವಾಗುವುದೇ ಹೀಗೆ: ಒಂದು ಊರಲ್ಲಿ ಒಬ್ಬ ರಾಜ ಇದ್ನಂತೆ! ಅವನಿಗೆ ಒಬ್ಬಳೇ ಮಗಳಂತೆ...

ನಮಗೆಲ್ಲ ಗೊತ್ತಿರೋ ಹಾಗೆ, ಊರು ಅಂದ್ರೆ ನೂರಿನ್ನೂರು ಮನೆಗಳಿರುವ ಒಂದು ಪ್ರದೇಶ. ಅಲ್ಲಿಗೆ ಒಬ್ಬ ರಾಜ ಇರೋದು ಸಾಧ್ಯವೇ ಇಲ್ಲ. ನೂರಾರು ಹಳ್ಳಿಗಳನ್ನು ತನ್ನ ಅಧೀನದಲ್ಲಿ ಇಟ್ಟುಕೊಂಡು ಆಡಳಿತ ನಡೆಸ್ತಾನಲ್ಲ, ಅವನು ರಾಜ. ಅವನು ಇರುವ ಪ್ರದೇಶಕ್ಕೆ ರಾಜಧಾನಿ ಅಂತಾರೆ. ಅಲ್ಲಿ ಅರಮನೆ, ಸೆರೆಮನೆ, ಗುರುಮನೆ, ನೆಲಮನೆ ಎಲ್ಲ ಇರುತ್ತೆ. ಹಾಗಾಗಿ ಕತೆ ಹೇಳುವಾಗ ಒಂದು ರಾಜ್ಯ ಇತ್ತಂತೆ. ಅಲ್ಲಿಗೊಬ್ಬ ರಾಜ ಇದ್ದನಂತೆ. ಅವನಿಗೆ ಒಬ್ಬಳು ಮಗಳು ಇದ್ದಳಂತೆ... ಅಂತ ತಾನೆ ಕತೆ ಶುರುವಾಗಬೇಕಿರೋದು?

ಆದರೆ, ಒಂದು ರಾಜ್ಯದಲ್ಲಿ ಒಬ್ಬ ರಾಜ ಇದ್ದನಂತೆ ಅಂತ ಯಾವ ಕತೆಯೂ ಶುರುವಾಗುವುದಿಲ್ಲ. ಪ್ರತಿ ಕತೆಯೂ ಒಂದೂರಿನಲ್ಲಿ ಒಬ್ಬ ರಾಜ ಇದ್ದಂತೆ ಎಂದೇ ಶುರುವಾಗುತ್ತದೆ ಮತ್ತು ಹಾಗೆ ಶುರುವಾಗುವ ಪ್ರತಿಯೊಂದು ಕತೆಯೂ ಇಷ್ಟವಾಗುತ್ತದೆ.

ಹೌದಲ್ಲವಾ? ಇವತ್ತು ಏನೇ ಇಂಟರ್‌ನೆಟ್, ಕಾರ್ಟೂನ್ ನೆಟ್‌ವರ್ಕ್, ಸೂಪರ್‌ಫಾಸ್ಟ್ ಬದುಕು ಸೂಚನೆ ಕೊಡದೇ ಸರಿದುಬಿಡುವ ಕಾಲ. ಜಾಗತೀಕರಣದ

ಜಾದೂ ಎಂದೆಲ್ಲ ಹೇಳಿಕೊಂಡರೂ ಚಂದಮಾಮದ ಕತೆಗಳು ಬಿಟ್ಟೂ ಬಿಡದೆ ಕಾಡುತ್ತವೆ. ಸಂಜೆಯಿಂದ ರಾತ್ರಿ ಹತ್ತು ಗಂಟೆಯವರೆಗೂ ಕಾರ್ಟೂನ್ ನೆಟ್‌ವರ್ಕ್ ನೋಡಿದರೂ ನಗದ ಮಗು, ಒಂದು ಕತೆ ಕೇಳಿದರೆ ಸೂರು ಹಾರಿಹೋಗುವಂತೆ ನಕ್ಕುಬಿಡುತ್ತದೆ. ಪದೇ ಪದೆ ಕೋತಿಯ ಕತೆಗಾಗಿ, ಆನೆಯ ಕತೆಗಾಗಿ, ಹಾವಿನ ಕತೆಗಾಗಿ ಪೀಡಿಸುತ್ತದೆ. ಕಾಗೆ–ಗುಬ್ಬಿಯ ಕತೆನೂ ನಂಗೆ ಇಷ್ಟ ಎನ್ನುತ್ತದೆ. ಬರೀ ಸುಳ್ ಸುಳ್ಳು ಹೇಳಿದರೂ ಕೂಡ ಆ ಕತೆಯನ್ನು ಖುಷಿಯಿಂದ ಕೇಳಿಸಿಕೊಳ್ಳುತ್ತದೆ. ಹಾಗೆ, ಕಾಗೆಯ ಕತೆ, ಕೋತಿಯ ಕತೆ, ಜಿಂಕೆಯ ಕತೆ, ಹುಲಿ–ಸಿಂಹದ ಕತೆಯನ್ನು ಕೇಳುತ್ತ ಕೇಳುತ್ತಲೇ ನಿದ್ರೆಗೆ ಜಾರಿಬಿಡುತ್ತದೆ. ಆದರೆ, ಮರುದಿನ ರಾತ್ರಿ ಮಲಗುವ ಮುನ್ನ– ನಿನ್ನೆ ಅರ್ಧಮಾಡಿದಲ್ಲ ಕತೆ, ಅದನ್ನು ಪೂರ್ತಿ ಹೇಳು ಎಂದು ದುಂಬಾಲು ಬೀಳುತ್ತದೆ ಅಥವಾ ತನಗೆ ತುಂಬ ಇಷ್ಟವಾದ ಕತೆಯನ್ನೇ ಮತ್ತೆ ಹೇಳುವಂತೆ ಪೀಡಿಸುತ್ತದೆ. ಹಾಗೆ ಇಷ್ಟವಾದ ಕತೆಯನ್ನು ಒಂದೆರಡು ದಿನಗಳ ನಂತರ ತನ್ನ ಗೆಳೆಯರ ಮಧ್ಯೆ ಹೇಳುತ್ತಾ...

ಇದು ನಮ್ ಪಪ್ಪ/ಮಮ್ಮಿ ಹೇಳಿಕೊಟ್ಟಿದ್ದು, ಗೊತ್ತಾ? ಎಂದು ಬೀಗುತ್ತದೆ. ಹೌದು, ಆ ಕತೆಯ ಮೂಲಕ ಮಗು ಮತ್ತು ಅದರ ಅಪ್ಪ–ಅಮ್ಮ ಹೀರೊಗಳಾಗುತ್ತಾರೆ.

ಸುಮ್ಮನೆ ಹುಟ್ಟಿಕೊಂಡ ಕಟ್ಟುಕತೆ ನಮಗೆ ನೀಡುವ ಕೊಡುಗೆ ಇದು,

ಎಲ್ಲರಿಗೂ ಗೊತ್ತಿರುವಂತೆ– 'ಒಂದೂರಲ್ಲಿ ಒಬ್ಬ ರಾಜ ಇದ್ನಂತೇ...' ಎಂದು ಶುರುವಾಗುವ ಕತೆಗಳೆಲ್ಲಾ ಇದ್ದಕ್ಕಿದ್ದಂತೆಯೇ ಹುಟ್ಟಿಕೊಂಡಂಥವು, ಯಾವ ಕತೆಗೂ ಹಿನ್ನೆಲೆಯಾಗಲಿ ಮುನ್ನೆಲೆಯಾಗಲಿ ಇಲ್ಲವೇ ಇಲ್ಲ. ಹಾಗಿದ್ದೂ ಅದೆಷ್ಟೋ ಕತೆಗಳಲ್ಲಿ ಪಸಂದ್ ಎಂಬಂಥ ಸ್ವಾರಸ್ಯವಿರುತ್ತದೆ. ನೀತಿ ಇರುತ್ತದೆ, ಹಿತವಚನವಿರುತ್ತದೆ ಮತ್ತು ಈ ಕಾರಣದಿಂದಲೇ ಎಲ್ಲ ಕತೆಗಳೂ ವಿಪರೀತ ಅಂದ್ರೆ ವಿಪರೀತ ಇಷ್ಟವಾಗುತ್ತ ಮಕ್ಕಳಿಗೆಂದೇ ಸೃಷ್ಟಿಯಾದ ಕತೆಗಳು ದೊಡ್ಡವರಿಗೂ ಇಷ್ಟವಾಗುತ್ತವೆ.

ಕತೆಗಳನ್ನು ಕುರಿತು ಹೀಗೆ, ಒಂದು ದೊಡ್ಡ ಕತೆ ಹೊಡೆಯುತ್ತಿರುವುದಕ್ಕೂ ಕಾರಣವಿದೆ. ಭಾರತದ ಅದೆಷ್ಟೋ ಮಂದಿ ಅಪ್ಪ–ಅಮ್ಮಂದಿರು– 'ಅಯ್ಯೋ, ಈಗ ಮಗು ಏನಿದ್ರೂ ರ್‍ಯಾಂಕ್ ಬಂದ್ರೆ ಸಾಕು, ಆ ಕತೆಗಳ ವಿಷಯ ಯಾರಿಗೆ ಬೇಕಾಗಿದೆ' ಎಂದು ರಾಗ ತೆಗೆಯುತ್ತಿರುವ ಸಂದರ್ಭದಲ್ಲಿಯೇ; ಮಕ್ಕಳಿಗೆ ಈಗಂತೂ ಕಾರ್ಟೂನ್ ನೆಟ್‌ವರ್ಕ್ ಬಿಟ್ರೆ ಬೇರೇನೂ ಬೇಕಿಲ್ಲ. ಕತೆಗಳನ್ನು ಈಗ ಹೆಚ್ಚಿನ ಮಕ್ಕಳು ಇಷ್ಟಪಡೋದಿಲ್ಲ ಎಂದು ತಮ್ಮಷ್ಟಕ್ಕೆ ತಾವೇ ಹೇಳುತ್ತಿರುವ ಸಂದರ್ಭದಲ್ಲೇ, ಅಮೆರಿಕದ ಆಹಿತಾನಲ ಅವರು 'ಕಟ್ಟು ಕತೆಗಳು' ಹೆಸರಿನ ದೊಡ್ಡದೊಂದು ಪುಸ್ತಕವನ್ನೇ ತಂದಿದ್ದಾರೆ. ಬಾಲ್ಯದಲ್ಲಿ ನಾವೆಲ್ಲ ಕೇಳಿದ ಅದೆಷ್ಟೋ ಕತೆಗಳು ಇಲ್ಲಿ ಹೊಸ ಅರ್ಥದೊಂದಿಗೆ ಕಡೆಯಲ್ಲಿ ಒಂದು ಪಂಚ್ ಲೈನ್‌ನೊಂದಿಗೆ ಕಾಣಿಸಿಕೊಂಡಿವೆ. ಇಷ್ಟೊಂದು ಕತೆಗಳನ್ನು ಒಟ್ಟಿಗೇ ನೋಡಿದವರು 'ಈ ಕತೆ ಹೇಳುವ ಪರಿಪಾಠ ಶುರುವಾದದ್ದು ಯಾವಾಗ' ಎಂಬ ಪ್ರಶ್ನೆ

ಕೇಳಬಹುದು ಎಂಬ ಅನುಮಾನ ಆಹಿತಾನಲ ಅವರನ್ನು ಕಾಡಿತೇನೊ, ಅದಕ್ಕೆಂದೇ ಒಂದು ಕುತೂಹಲದ ಕತೆ ಹೇಳಿದ್ದಾರೆ. ಸಂಕ್ಷಿಪ್ತವಾಗಿ ಹೇಳುವುದಾದರೆ ಅದು ಹೀಗೆ:

ಒಂದಾನೊಂದು ಕಾಲದಲ್ಲಿ ಒಬ್ಬ ರಾಜ ಇದ್ದ. ಅವನಿಗೊಬ್ಬಳು ಮಗಳಿದ್ದಳು. ಅವಳಿಗೋ ನಿದ್ರಾಹೀನತೆಯ ಕಾಯಿಲೆ. ಯಾವ ವೈದ್ಯರಿಂದ ಚಿಕಿತ್ಸೆ ಕೊಡಿಸಿದರೂ ಕಾಯಿಲೆ ಗುಣವಾಗಲಿಲ್ಲ. ಮುದ್ದಿನ ಮಗಳ ಸ್ಥಿತಿ ಹೀಗಾಯಿತಲ್ಲ ಎಂದು ಚಿಂತೆಗೆ ಬಿದ್ದ ರಾಜ ಕಡೆಗೊಮ್ಮೆ–ರಾಜಕುಮಾರಿಗೆ ನಿದ್ರೆ ಬರುವಂತೆ ಮಾಡಿದವರಿಗೆ ಸಾವಿರ ಚಿನ್ನದ ನಾಣ್ಯಗಳನ್ನು ಉಡುಗೊರೆಯಾಗಿ ಕೊಡುವುದಾಗಿ ನಾಡಿನಾದ್ಯಂತ ಘೋಷಿಸಿದ.

ಈ ಘೋಷಣೆ ಕೇಳಿ ಅರಮನೆಗೆ ಬಂದ ಅಜ್ಜಿಯೊಬ್ಬಳು ಅರಮನೆ ಹೊಕ್ಕು, ರಾಜಕುಮಾರಿ ಇದ್ದ ಕೋಣೆಯ ಬಾಗಿಲು ಹಾಕಿದಳಂತೆ. ನಂತರ ಆ ರಾಜಕುಮಾರಿಗೆ 'ಒಂದೂರಿನಲ್ಲಿ ಒಂದು ಕಾಗೆ ಇತ್ತು' ಎಂದು ಕತೆ ಹೇಳಲು ಶುರುಮಾಡಿದಳು. ಕತೆ ಸುಲಭವಾಗಿ ಮುಂದುವರಿಯಬೇಕಾದರೆ– ಹೂಂ, ಅನ್ನುತ್ತಲೇ ಇರಬೇಕಲ್ಲ, ಹಾಗೆ, ಈ ರಾಜಕುಮಾರಿ ಹೂಂ ಹೂಂ ಎನ್ನುತ್ತಲೇ ನಿದ್ರೆಗೆ ಜಾರಿಬಿಟ್ಟಳಂತೆ. ಅಂದಿನಿಂದಲೇ ನಿದ್ರೆ ಬರುವುದಿಲ್ಲ ಎಂದು ಚಂಡಿ ಹಿಡಿಯುವ ಮಕ್ಕಳಿಗೆ ಕತೆ ಹೇಳಿ ಸುಮ್ಮನಿರಿಸುವ ತಂತ್ರ ಬಳಕೆಗೆ ಬಂತು.

ಕತೆ ಹೇಳುವ ಕಲೆ ರೂಪುಗೊಂಡದ್ದು ಹೇಗೆ ಎಂಬ ಪ್ರಶ್ನೆಗೆ ಇದೊಂದು ಉತ್ತರ. ಕತೆಗಳೆಲ್ಲ ಇದ್ದಕ್ಕಿದ್ದಂತೆಯೇ ಹುಟ್ಟಿಕೊಂಡಂಥವು. ಯಾವ ಕತೆಗಳಿಗೂ ಹಿನ್ನೆಲೆಯೋ ಮುನ್ನೆಲೆಯೊ ಇಲ್ಲ.

ಈ ಸಂಕಲನದಲ್ಲಿನ ಕತೆಗಳಲ್ಲಿ ತಮಾಷೆಯಿದೆ, ಸ್ವಾರಸ್ಯವಿದೆ, ಕುತೂಹಲವಿದೆ. ಮುಂದೆ ಏನಾಯ್ತು ಎಂದು ಹತ್ತು ಮಂದಿ ಒಮ್ಮೆಗೇ ಕೇಳುವಂಥ ಸಸ್ಪೆನ್ಸ್ ಇದೆ. ನೀತಿಯಿದೆ. ಕೆಲವು ಕತೆಗಳನ್ನಂತೂ ಓದುತ್ತ ಓದುತ್ತಲೇ ನಗು ಉಕ್ಕಿ ಉಕ್ಕಿ ಬರುತ್ತದೆ. ಅದಕ್ಕೊಂದು ಉದಾಹರಣೆಯಾಗಿ ರಾಜಕುಮಾರಿಯ ದೀರ್ಘ ನಿದ್ರೆ ಎಂಬ ಕತೆಯನ್ನೇ ನೋಡಿ, ಅದರ ವಿವರ ಹೀಗಿದೆ:

ಒಂದು ರಾಜ್ಯ, ಅಲ್ಲೊಬ್ಬ ರಾಜ. ಅವನಿಗೆ ತುಂಬಾ ಸಮಯ ಮಕ್ಕಳಿರಲಿಲ್ಲ, ಕಡೆಗೂ ಆತನಿಗೆ ಒಬ್ಬಳು ಮಗಳು ಹುಟ್ಟಿದಳು. ಮಗುವಿನ ನಾಮಕರಣದ ಸಂದರ್ಭದಲ್ಲಿ ಏನೋ ಅಚಾತುರ್ಯವಾಯಿತೆಂದು ಜ್ಯೋತಿಷಿಗಳು– ನಿನ್ನ ಮಗಳು 16ನೆಯ ವರ್ಷಕ್ಕೆ ಸೂಜಿ ಚುಚ್ಚಿದ್ದರಿಂದ ಸಾಯಲಿ ಎಂದು ಶಾಪ ಕೊಟ್ಟೇಬಿಟ್ಟರು. ನಂತರ ರಾಜ ಪರಿಪರಿಯಾಗಿ ಬೇಡಿಕೊಂಡ. ಶಾಪಕೊಟ್ಟವರೇ ಶಾಪ ವಿಮೋಚನೆಯ ಕುರಿತೂ ಹೇಳಿ ಹೋದರು.

ರಾಜ ಮಗಳನ್ನು ಉಳಿಸಿಕೊಳ್ಳಲೆಂದು ರಾಜ್ಯದಲ್ಲಿ ಯಾರೂ ಸೂಜಿ – ದಾರ ಹೊಂದಿರಲೇಬಾರದು ಎಂಬ ಕಾನೂನು ಜಾರಿಗೆ ತಂದ. ಆದರೆ ರಾಣಿ ತನ್ನ

ಹದಿನಾರನೆಯ ವರ್ಷದಲ್ಲಿ ಅರಮನೆಯಿಂದ ಹೊರಗೆ ಬಂದಳು. ಹಾಗೇ ವಿಹರಿಸುತ್ತ ಬಂದವಳು ಕಸೂತಿ ಕೆಲಸದಲ್ಲಿ ತೊಡಗಿದ್ದ ಮುದುಕಿಯೊಬ್ಬಳನ್ನು ಕಂಡು- ಅಜ್ಜಿ, ನನಗೂ ಕಸೂತಿ ಕಲಿಸು ಎಂದಳು.

ಈಕೆಗೆ ಒದಗಿ ಬಂದಿದ್ದ ಶಾಪದ ಬಗ್ಗೆ ಏನೂ ಗೊತ್ತಿಲ್ಲದ ಅಜ್ಜಿ ಸೂಜಿ-ದಾರವನ್ನು ರಾಜಕುಮಾರಿಗೆ ಕೊಟ್ಟು ಬಟ್ಟೆ ಹೊಲಿಯಲು ಹೇಳಿದಳು. ಆಗ ಆಕಸ್ಮಿಕವಾಗಿ ಸೂಜಿಯ ಮೊನೆ ಈ ಹುಡುಗಿಯ ಕೈಗೆ ಚುಚ್ಚಿತು. ಅಷ್ಟೆ, ಆನಂತರ ಏನಾಯಿತು? ಎಂಬ ಕುತೂಹಲಕ್ಕೆ ಕತೆಯ ಪ್ಯಾರಾ ಗಮನಿಸಿದರೇ ಚೆಂದ, ಅದು ಹೀಗಿದೆ...

...ರಾಜಕುಮಾರಿಯ ಕೈಗೆ ಸೂಜಿ ಚುಚ್ಚಿತಲ್ಲ, ಆ ಕ್ಷಣವೇ ಆಕೆ ದಾರ ಹಿಡಿದುಕೊಂಡು ಕುಳಿತಿದ್ದಲ್ಲೇ ನಿದ್ದೆ ಹೋದಳು. ಅದೇ ಸಮಯಕ್ಕೆ ಅರಮನೆಯ ಪ್ರಜೆಗಳೆಲ್ಲರೂ ಇದ್ದಕ್ಕಿದ್ದಂತೆ ನಿದ್ದೆಹೋದರು. ಆಸ್ಥಾನದಲ್ಲಿ ರಾಜ ಮಾತಾಡುತ್ತ ಕುಳಿತಿದ್ದ. ಅವನೂ ಜತೆಗಿದ್ದ ಮಂತ್ರಿಗಳೂ ಕುಳಿತಿದ್ದಂತೆಯೇ ನಿದ್ರಿಸಲು ತೊಡಗಿದರು. ಸ್ನಾನದ ಮನೆಯಲ್ಲಿದ್ದ ರಾಣಿ ಅಲ್ಲಿಯೇ ನಿದ್ರಿಸಲು ಪ್ರಾರಂಭಿಸಿದಳು. ಅಡುಗೆಯವಳು ಸೌಟು ಹಿಡಿದುಕೊಂಡು ನಿಂತೇ ನಿದ್ರಿಸುತ್ತಿದ್ದಳು. ಹೊರಗೆ ನಾಯಿಯೊಂದಿಗೆ ಆಡುತ್ತಿದ್ದ ಸೇವಕನೊಬ್ಬ, ನಾಯಿ ಮೇಲೆ ಹಾರುತ್ತಿದ್ದಂತೆ ಗಾಳಿಯಲ್ಲೇ ಅದು ನಿಂತು ನಿದ್ರಿಸುತ್ತಿತ್ತು...


ಹೀಗೆ ಸಾಗುತ್ತದೆ ಕತೆ. ಇಂಥ ಪ್ರಸಂಗಗಳನ್ನು ಕೇಳಿದರೆ ಯಾರಿಗೆ ತಾನೆ ನಗು ಬರುವುದಿಲ್ಲ ಹೇಳಿ?

ಕತೆಗಳು ಕಣ್ಮರೆಯಾಗುತ್ತಿವೆ ಎಂಬ ಕೂಗು ದೇಶಾದ್ಯಂತ ತುಂಬಾ ಜೋರಾಗಿ ಕೇಳಿಬಂದಿರುವ ಸಂದರ್ಭದಲ್ಲಿಯೇ ಆಹಿತಾನಲ ಅವರು ಹಳೆಯ ಕತೆಗಳೊಂದಿಗೆ ನಡೆದು ಬಂದಿದ್ದಾರೆ. ಅಮೆರಿಕದಲ್ಲಿದ್ದೂ ಅವರು ಕತೆಗಳನ್ನು ಮರೆತಿಲ್ಲ ಎಂಬುದು ಅವರ ಮೇಲಿನ ಅಭಿಮಾನ ಇನ್ನಷ್ಟು ಹೆಚ್ಚಲು ಕಾರಣವಾಗಿದೆ.

ಅವರ ಕತೆಗಳನ್ನು ಓದುವ ನೆಪದಲ್ಲಿ ನನಗಂತೂ ನನ್ನ ಬಾಲ್ಯದ ದಿನಗಳು, ಆಗ ಕೇಳಿದ ಒಂದಿಷ್ಟು ಕತೆಗಳು, ಕೇಳದೇ ಇದ್ದ ಕತೆಗಳೊಂದಿಗೇ ನೆನಪಾಗಿವೆ. ಓದಿ ಮುಗಿಸಿದ ನಂತರವೂ ಒಂದು ಗುಂಗಾಗಿ ಕಾಡಿವೆ. ಆ ಅನುಭವ ನಿಮ್ಮದೂ ಆಗಲಿ, ಆಹಿತಾನಲರ ಕನ್ನಡ ಸೇವೆ ನಿರಂತರ ಮುಂದುವರಿಯಲಿ.

ಅದು ಹಾರೈಕೆ ಮತ್ತು ಆಸೆ.

'ಒಂದಾನೊಂದು ಕಾಲ'ದಲ್ಲಿ ಕೃತಿಗೆ ಬರೆದ ಮುನ್ನುಡಿ. ಪ್ರ: ಅಭಿನವ. ಮೊದಲ ಮುದ್ರಣ 2007.



ಒಂದು ಈಸ್ಟ್ ಜೀವಕೋಶದ ಬಿಡಿಭಾಗಗಳು ಬೋಯಿಂಗ್ 777 ಜೆಟ್ ವಿಮಾನದ...

– ಎಂ. ಆರ್. ದತ್ತಾತ್ರಿ

ಅಮೆರಿಕದ ಚಿಕಾಗೋ ವಿಶ್ವವಿದ್ಯಾಲಯದಲ್ಲಿ ಜೀವವಿಜ್ಞಾನ ಸಂಶೋಧಕ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿ, ಈಗ ಲಾಸ್ ಏಂಜಲಿಸ್‌ನ ಸಮೀಪದ ಆರ್ಕೇಡಿಯಾ ಎನ್ನುವ ಊರಿನಲ್ಲಿ ನಿವೃತ್ತ ಜೀವನ ನಡೆಸುತ್ತಿರುವ ಡಾ. ನಾಗ ಐತಾಳರು ಇತ್ತೀಚೆಗೆ ಜೀವ ವಿಜ್ಞಾನದ ಮೇಲೆ ಕನ್ನಡದಲ್ಲೊಂದು ಪುಸ್ತಕವನ್ನು ಬರೆದಿದ್ದಾರೆ. 'ಜೀವನ ರಹಸ್ಯ' ಎನ್ನುವ ಈ ಪುಸ್ತಕವು ಮುನ್ನೂರ ಹದಿಮೂರು ಪುಟಗಳಲ್ಲಿ ಜೀವವಿಜ್ಞಾನದ ಪ್ರಮುಖ ಶಾಖೆಗಳನ್ನು ಸ್ಥೂಲವಾಗಿ ಪರಿಚಯಿಸಲು ನೋಡುತ್ತದೆ. ಒಬ್ಬ ವಿಜ್ಞಾನಿ ಮಾತ್ರ ಬರೆಯಬಲ್ಲಂತಹ ವೈಜ್ಞಾನಿಕ ಸೂಕ್ಷ್ಮಗಳ ಜೊತೆಗೆ ಐತಾಳರ ತುಂಬು ಜೀವನದ ಅನುಭಾವಗಳು ಮತ್ತು ವೈಚಾರಿಕತೆಯಿಂದಾಚೆಗೆ ನೋಡಬಲ್ಲ ತತ್ತ್ವಶಾಸ್ತ್ರಜ್ಞನ ಚಿಂತನೆಗಳೂ ಈ ಪುಸ್ತಕದಲ್ಲಿ ತುಂಬಿವೆ. ಒಂಟಿಕೋಶದಿಂದ ಆರಂಭವಾಗುವ ಜೀವ ಅನೇಕ ಹಂತಗಳ ಪ್ರಕೃತಿ ಕ್ರಿಯೆಗಳಿಂದಾಗಿ ಬಹುಕೋಶಗಳಾಗಿ ಪರಿವರ್ತಿತಗೊಂಡು ಅನೇಕ ಅವಯವಗಳನ್ನು ಹೊಂದುವ ಮತ್ತು ಯೋಚಿಸಬಲ್ಲಂತಹ ಸಂಕೀರ್ಣ ಜೀವವಾಗಿ ಮಾರ್ಪಾಡಾಗುವ ಕ್ರಿಯೆಯನ್ನು ವೈಜ್ಞಾನಿಕ ದೃಷ್ಟಿಯಿಂದ ನೋಡಿದಷ್ಟೇ ಸಹಜವಾಗಿ ಬಹು ಕುತೂಹಲದಿಂದಲೂ ನೋಡುವ ಮುಗ್ಧತೆಯನ್ನು ಲೇಖಕರು ಇಡೀ ಪುಸ್ತಕದಲ್ಲಿ ಉಳಿಸಿಕೊಂಡಿದ್ದಾರೆ.

ಐತಾಳರ ಈ ವಿಶೇಷ ಗುಣದಿಂದಾಗಿ ಜೀವ, ಜನನ, ಮರಣ, ರೋಗಗಳು, ಅನುವಂಶೀಯತೆ, ತಳಿವಿಜ್ಞಾನ, ಕ್ಲೋನಿಂಗ್ ಮುಂತಾದ ಜೈವಿಕ ಕ್ರಿಯೆಗಳನ್ನು ಅವುಗಳ ರಾಸಾಯನ ಶಾಸ್ತ್ರದ ಭಾಷೆಯಲ್ಲಿ ವಿವರಿಸುವಷ್ಟೇ ಸುಲಭವಾಗಿ ವಿಜ್ಞಾನದಾಚೆಗೂ ಹೋಗಿ ಜನಸಾಮಾನ್ಯರಿಗೆ ದಕ್ಕುವಂತೆ ಹೇಳುವ ಕಲೆ ಅವರಿಗೆ ಸಿದ್ಧಿಸಿದೆ. ಉದಾಹರಣೆಗೆ, ಪ್ರಕೃತಿ ಮತ್ತು ವಿಜ್ಞಾನವನ್ನು ಕುರಿತಾದ ಒಂದು ತಾತ್ವಿಕ ಚಿಂತನೆಯಲ್ಲಿ ಈ ಕೆಳಗಿನ ಸಾಲುಗಳನ್ನು ಗಮನಿಸಿ – 'ಜೀವ' ಎಂಬ ಪ್ರಕ್ರಿಯೆಯಲ್ಲಿ ಅಸಂಖ್ಯಾತ ರಾಸಾಯನಿಕ ಕ್ರಿಯೆಗಳು ಸೇರಿಕೊಂಡಿವೆ. ಅವು ಹೇಗೆ ಸೇರಿಕೊಂಡವೆಂಬುದು ನಮ್ಮ ತರ್ಕಕ್ಕೆ ಮೀರಿದ್ದು, ಆದರೆ 'ಜೀವ' ಮುಂದುವರೆಯಬೇಕಾದಲ್ಲಿ ಈ ರಾಸಾಯನಿಕ ಕ್ರಿಯೆಗಳು ಜರುಗುತ್ತಲೇ ಇರಬೇಕು. ಈ ಕ್ರಿಯೆಗಳನ್ನು ನಡೆಸಿಕೊಂಡು ಹೋಗುವಲ್ಲಿ ನಾವು ಅಸಮರ್ಥರಾದ ದಿನ ಸಾವು ಸಂಭವಿಸುವುದು. ಮರಣ ಒಂದು ವಿಧದಲ್ಲಿ ಜೀವ ಎಂಬ ಶಬ್ದವನ್ನು ಇನ್ನಷ್ಟು ಸಂಕೀರ್ಣಗೊಳಿಸುತ್ತದೆ. ಅದಕ್ಕೊಂದು ಉದಾಹರಣೆಯಾಗಿ ವೈರಸ್ ಇದೆ. ಒಂದು ಜೀವಿ ತನ್ನಂತೆಯೇ ತದ್ರೂಪದ ಮತ್ತೊಂದು ಜೀವಿಯನ್ನು ಉತ್ಪತ್ತಿ ಮಾಡುವ ಶಕ್ತಿ ಪಡೆದಿರುತ್ತದೆ ಎಂಬುದನ್ನು ಒಪ್ಪಿಕೊಂಡಲ್ಲಿ, ವೈರಸ್ ಈ ನಿಟ್ಟಿನಲ್ಲಿ ನಮಗೆ ಸವಾಲಾಗಿ ನಿಲ್ಲುತ್ತದೆ. ವೈರಸ್ ಕೂಡ ಮರು ಉತ್ಪತ್ತಿ ಮಾಡಬಲ್ಲದು. ಆದರೆ ಅದಕ್ಕೆ ಸಾಧ್ಯವಾಗುವುದು ಯಾವುದಾದರೊಂದು ಜೀವಕಣವನ್ನು ದಾಳಿ ಮಾಡಿದಾಗಲೇ. ಅಂದರೆ, ಅತಿಥೇಯ ಜೀವಕೋಶದ ಹೊರಗೆ ವೈರಸ್‌ಗಳು ನಿರ್ಜೀವಿ ಜಡವಸ್ತುಗಳೇ!

ಮೇಲಿನ ಸಾಲುಗಳನ್ನು ಉದಾಹರಿಸಿದ ಸಂದರ್ಭದಲ್ಲಿಯೇ ನಾನೊಂದು ಎಚ್ಚರಿಕೆಯ ಮಾತನ್ನೂ ಆಡಬೇಕು. ಇಡೀ ಪುಸ್ತಕವು ಮೇಲಿನ ಸಾಲುಗಳಷ್ಟು ಸರಳವಾಗಿಲ್ಲ. ಹಾಗೆ ಸರಳವಾಗಿಸುವುದೇ ಲೇಖಕರಿಗೆ ಉದ್ದೇಶವಾದಂತೆ ಕಾಣುವುದಿಲ್ಲ. ವಿವರಣೆಗಳನ್ನು ಕೊಡುವ ರಭಸದಲ್ಲಿ ವಿಜ್ಞಾನಿ ನಾಗ ಐತಾಳರು ನಮಗೆ ಅನೇಕ ವಿಷಯಗಳು ಗೊತ್ತು ಎಂದು ಊಹೆ ಮಾಡಿಕೊಳ್ಳುತ್ತಾರೆ. ಹಾಗಾಗಿ, ಬರೀ ಕುತೂಹಲಕ್ಕೆ ಓದುವ ಪುಸ್ತಕ ಇದಾಗಿರದೆ, ಜೀವವಿಜ್ಞಾನದಲ್ಲಿ ನಿಜವಾಗಿಯೂ ಆಸಕ್ತಿ ಮತ್ತು ಪರಿಶ್ರಮಗಳು ನಿಮಗಿದ್ದರೆ ಮಾತ್ರ ಇದು ಸೂಕ್ತವಾದ ಪುಸ್ತಕ ಎನ್ನಿಸಿಕೊಳ್ಳಬಹುದು. 'ನಾನು ಹೈಸ್ಕೂಲು ವಿದ್ಯಾರ್ಥಿಗಳನ್ನು ಗಮನದಲ್ಲಿಟ್ಟುಕೊಂಡು ಬರೆದದ್ದು' ಎಂದು ಲೇಖಕರು ಹೇಳಿಕೊಂಡರೂ ನನ್ನ ಅನುಭವದಲ್ಲಿ ಇದು ಕಾಲೇಜುಮಟ್ಟದ ವಿಶ್ವವಿದ್ಯಾಲಯಗಳ ಮಟ್ಟದ ಪುಸ್ತಕ.

ಜೀವವಿಜ್ಞಾನ ಎಂದಾಗ ಅದು ಬಹಳ ಮೇಲಿನ ಸ್ತರದ ಮಾತಾಗುತ್ತದೆ. ನಿಜ ಅರ್ಥದಲ್ಲಿ ಈ ಪುಸ್ತಕದ ಕೇಂದ್ರವಿರುವುದು 'ಅಣು ಜೀವವಿಜ್ಞಾನ'ದಲ್ಲಿ ಜೀವ ಕೋಶವೊಂದರ ಸುತ್ತಲಿನ ಅಧ್ಯಯನವೇ ಅಣು ಜೀವವಿಜ್ಞಾನ. ಜೀವ ರಚನೆಯಲ್ಲಿ ಇಟ್ಟಿಗೆಯಂತಿರುವ ಜೀವಕೋಶವು ತನ್ನ ಆಂತರಿಕ ರಚನೆಯಲ್ಲಿ ಬಹಳ

ಸಂಕೀರ್ಣವಾದುದು. ಅನೇಕ ರಾಸಾಯನಗಳು ಮತ್ತು ಅವುಗಳ ಬಂಧಗಳಿಂದಾದ 'ಜೈವಿಕ ಕಾರ್ಖಾನೆ' ಜೀವಕೋಶಗಳು. ಜೀವಕೋಶಗಳನ್ನು ಅರ್ಥ ಮಾಡಿಕೊಳ್ಳುವುದು ಅಷ್ಟು ಸುಲಭದ್ದಾಗಿ ಕಾಣುವುದಿಲ್ಲ. ಅತಿ ಸರಳವಾದ ಈಸ್ಟ್ ಜೀವಕೋಶ ಒಂದನ್ನು ಒಡೆದರೆ ಅದರಲ್ಲಿರುವ ಬಿಡಿಭಾಗಗಳು ಬೋಯಿಂಗ್ 777 ಜೆಟ್ ವಿಮಾನದ ಬಿಡಿಭಾಗಗಳಿಗೆ ಸಮವಂತೆ!

ಮಾನವ ಜೀವಕೋಶಕ್ಕೆ ಹೋಲಿಸಿದರೆ ಈಸ್ಟ್‌ನ ಜೀವಕೋಶ ಅತಿ ಸರಳ, ಇನ್ನು ನಮ್ಮ ಕೋಶಗಳ ಸಂಕೀರ್ಣತೆಯನ್ನು ಊಹಿಸಿಕೊಳ್ಳಿ. ಮಾಲಿಕ್ಯುಲರ್ ಬಯಾಲಜಿಯಲ್ಲಿ ನಡೆಯುತ್ತಿರುವ ವೇಗದ ಸಂಶೋಧನೆಗಳೇ ಸಾಕು ಈ ವಿಜ್ಞಾನ ಕ್ಷೇತ್ರದ ಅಗಾಧತೆಯನ್ನು ಸೂಚಿಸಲು. ಉದಾಹರಣೆಗೆ – ಜೀನ್ ಮತ್ತು ಅವುಗಳಿಗೆ ಸಂಬಂಧಿಸಿದಂತೆ ಆನುವಂಶಿಕ ಗುಣಗಳ ವಿಶ್ಲೇಷಣೆ, ಜೀನ್‌ಗಳ ರಹಸ್ಯ ಒಡೆಯುವ ಮೂಲಕ ನಮ್ಮ ಮೂಲಭೂತ ರಚನೆಯನ್ನು ಅರಿತುಕೊಳ್ಳುವಲ್ಲಿ ಸಹಕಾರಿಯಾದ ಹ್ಯೂಮನ್ ಜಿನೋಮ್ ಪ್ರಾಜೆಕ್ಟ್ ಕ್ಯಾನ್ಸರ್, ಅಲ್ ಜೈಮರ್ಸ್, ಅಣು ಮುಂತಾದ ಭಯಂಕರ ರೋಗಗಳಿಗೆ ಮದ್ದನ್ನು ಕಂಡುಹಿಡಿಯುವಲ್ಲಿ ನಡೆಯುತ್ತಿರುವ ಸಂಶೋಧನೆಗಳು, ಕ್ಲೋನಿಂಗ್ ಮುಂತಾದ ತಳಿವಿಜ್ಞಾನದ ತಂತ್ರಗಳು, ಇತ್ತೀಚಿನ ದಿನಗಳಲ್ಲಿ ಕಂಪ್ಯೂಟರ್ ತಂತ್ರಜ್ಞಾನದಷ್ಟೇ ವೇಗವಾಗಿ ಬೆಳೆಯುತ್ತ ಅನೇಕ ಸಾಧ್ಯತೆಗಳೆಡೆಗೆ ಕೈಚಾಚುತ್ತಿರುವ ಜ್ಞಾನ ಶಾಖೆ ಈ ಅಣು ಜೀವವಿಜ್ಞಾನ. ಮಾಲಿಕ್ಯುಲರ್ ಬಯಾಲಜಿಗೆ ಜೀವವಿಜ್ಞಾನವೆಂದು ಕರೆದು ಆ ಪದವನ್ನು ಇಡೀ ಪುಸ್ತಕದಲ್ಲಿ ನಾಗ ಐತಾಳರು ಬಳಸಿಕೊಂಡಿದ್ದಾರೆ. ಇದೇ ರೀತಿ ಇನ್ನೂ ಅನೇಕ ವೈಜ್ಞಾನಿಕ ಪದಪುಂಜಗಳನ್ನು ಈ ಪುಸ್ತಕದ ದೆಸೆಯಲ್ಲಿ ಕನ್ನಡಕ್ಕೆ ನೀಡಿದ್ದಾರೆ. ಕನ್ನಡದಲ್ಲಿ ಬಂದ ವಿಜ್ಞಾನ ಸಾಹಿತ್ಯದ ಪ್ರಚಾರದಿಂದ ಮತ್ತು ಮಾಧ್ಯಮಗಳಲ್ಲಿ ಇಂತಹ ಪದಪುಂಜಗಳ ಬಳಕೆಯಿಂದ ಇವು ಆಸಕ್ತ ಓದುಗರನ್ನು ತಲುಪಿ ಕನ್ನಡದ ಪರ್ಯಾಯಪದಗಳಾಗಿ ನೆಲೆಕಂಡಾವು.

ಈ ಪುಸ್ತಕದಲ್ಲಿನ ಮೊದಲ ಅಧ್ಯಾಯಗಳು ಜೀವಕೋಶಗಳ ರಚನೆ ಮತ್ತು ಕಾರ್ಯವಿಧಾನ, ಡಿ.ಎನ್.ಎ. ಮತ್ತು ಕ್ರೋಮೊಸೋಮ್‌ಗಳ ರಚನೆ ಮತ್ತು ಕಾರ್ಯ ವ್ಯವಸ್ಥೆಯನ್ನು ವಿವರಿಸುತ್ತವೆ. ಮುಂದಿನ ಅಧ್ಯಾಯಗಳು ಜೀವವಿಜ್ಞಾನದ ತಂತ್ರಗಳು ಮತ್ತು ಅವುಗಳ ಅಳವಡಿಕೆಗಳ ಬಗ್ಗೆ ಇದೆ. ಈ ಪುಸ್ತಕಕ್ಕೆ ಮುನ್ನುಡಿಯನ್ನು ಬರೆದಿರುವ ಅಮೆರಿಕದಲ್ಲಿ ನೆಲೆಸಿರುವ ಮತ್ತೊಬ್ಬ ಕನ್ನಡಿಗ ವಿಜ್ಞಾನಿ ಡಾ. ಎಸ್. ಸಿ. ಚಂದ್ರಶೇಖರಪ್ಪನವರು ಹೇಳುವಂತೆ 'ದಿನಂಪ್ರತಿ ಸಂಶೋಧನೆ ನಡೆಸುವ ತಮ್ಮ ವೃತ್ತಿಯಿಂದ ನಿವೃತ್ತರಾದ ಮೇಲೂ, ತಾವು ಅಭ್ಯಸಿಸಿದ ವೈಜ್ಞಾನಿಕ ಜ್ಞಾನವನ್ನು ತಾವು ಅಭ್ಯಸಿಸಿದಷ್ಟೇ ಉತ್ಸಾಹ ಮತ್ತು ಉತ್ಕಟತೆಯಿಂದ ಇತರರೊಂದಿಗೆ ಹಂಚಿಕೊಳ್ಳಬೇಕೆನ್ನುವ ಅವರ ಬಯಕೆ, ಇತರರೂ ಜೀವಶಾಸ್ತ್ರವನ್ನು ತಮ್ಮ ಅಭ್ಯಾಸದ ವಿಷಯವನ್ನಾಗಿಸಿಕೊಳ್ಳಬಹುದು ಎನ್ನುವ ಆಶಯ ಅವರ ಬರಹಕ್ಕಿದೆ.


ನಾಗ ಐತಾಳರು ಮತ್ತು ಅವರ ಪತ್ನಿ ಲಕ್ಷ್ಮಿಯವರೊಂದಿಗೆ ಲೋಕಾಭಿರಾಮವಾಗಿ ಹರಟುತ್ತ ನಾನು ಅವರನ್ನು ಕೆಣಕುವಂತೆ ಒಂದು ಪ್ರಶ್ನೆಯನ್ನು ಕೇಳಿದೆ – 'ಐತಾಳರೇ, ಅಸಲಿಯಾಗಿ ಕರ್ನಾಟಕದ ವಿಶ್ವವಿದ್ಯಾಲಯಮಟ್ಟದ ಕನ್ನಡ ಭಾಷೆಯಲ್ಲಿ ವಿಜ್ಞಾನದ ಓದೇ ಇದ್ದಂತಿಲ್ಲ. ಹಾಗಿರುವಾಗ ನೀವು ಕನ್ನಡದಲ್ಲಿ ಬರೆದಿರುವ ಈ ಜೀವವಿಜ್ಞಾನ ಗ್ರಂಥವನ್ನು ಯಾರು ಸ್ವಾಮಿ ಓದುತ್ತಾರೆ?'

ಅಮಿತಾಬ್ ಬಚ್ಚನ್ನನ್ನಷ್ಟೇ ಎತ್ತರವಿರುವ ನಾಗ ಐತಾಳರು ಬಾಗಿ ಕಣ್ಣುಗಳನ್ನು ಕಿರಿದಾಗಿಸಿಕೊಂಡು ನನ್ನನ್ನು ನೇರವಾಗಿ ನೋಡಿ 'ಚೆನ್ನಾಯ್ತ್ರೀ ನೀವು ಹೇಳೂದು. ಅವನ್ನೆಲ್ಲಾ ಯೋಚ್ನೆ ಮಾಡಿ ನಾವು ಬರೆಯುವುದನ್ನು ನಿಲ್ಲಿಸುದಕ್ಕಾಗುತ್ತಾ?' ಎಂದರು ತಮ್ಮ ಕುಂದಾಪುರ–ಕೋಟಾ ಕನ್ನಡದ ಸೊಗಡಿನಲ್ಲಿ.

ಬರೀ ಜೀವವಿಜ್ಞಾನ ಪುಸ್ತಕವಲ್ಲ, ಐತಾಳರು ಒಂದು ಕಾದಂಬರಿ, 'ಅಮೆರಿಕನ್ನಡಿಗ ಒಬ್ಬನ ದಿನಚರಿಯಿಂದ' ಎನ್ನುವ ತಮ್ಮ ಜೀವನ ಚರಿತ್ರೆ, ಕಾರಂತ, ಕುವೆಂಪು, ಬೇಂದ್ರೆ, ಪು.ತಿ.ನ., ಮಾಸ್ತಿ, ರಾಜರತ್ನಂರ ಮೇಲೆ ಸಾಹಿತ್ಯ ಸಮೀಕ್ಷಾ ಸಂಪಾದನ ಗ್ರಂಥಗಳು, ಎರಡು ಕಥಾಸಂಕಲನಗಳು, ಲೇಖನಗಳ ಸಂಗ್ರಹ ಹೀಗೆ ಹಲವಾರು ಪುಸ್ತಕಗಳನ್ನು ಬರೆದಿದ್ದಾರೆ. ಇದೀಗ ತಾನೆ ಅವರು ಮುಗಿಸಿರುವ ಒಂದು ಕಾದಂಬರಿ ಮುದ್ರಣದ ಹಂತದಲ್ಲಿದೆ.

ಕೆಲವರ ಜೀವನೋತ್ಸಾಹ ಮತ್ಸರ ಹುಟ್ಟಿಸುವಷ್ಟು ಉಚ್ಛ್ರಾಯವಾಗಿರುತ್ತದೆ.

'ವಿಜಯ ಕರ್ನಾಟಕ' ಪತ್ರಿಕೆಯ ತಮ್ಮ ಅಂಕಣದಲ್ಲಿ 'ಜೀವನ ರಹಸ್ಯ' ಕುರಿತು ಬರೆದ ಲೇಖನ.



ಬೇಂದ್ರೆ ಸಾಹಿತ್ಯದ ವಿರಾಟ್ ದರ್ಶನ

– ವಾಸುದೇವ ಶೆಟ್ಟಿ


ಕನ್ನಡಿಗರ ವಿಮರ್ಶನ ಪ್ರಜ್ಞೆಯನ್ನು ಸದಾ ಕೆಣಕುತ್ತಿರುವ ವಿಶೇಷ ಕವಿಗಳಲ್ಲಿ ವರಕವಿ ಅಂಬಿಕಾತನಯ ದತ್ತರು ಒಬ್ಬರು. ದ. ರಾ. ಬೇಂದ್ರೆ ಬದುಕಿನಲ್ಲಿ ಬಹಳ ಬೆಂದವರು. 'ಬೆಂದರಷ್ಟೆ ಬೇಂದ್ರೆಯಾಗುತ್ತಾರೆ' ಎಂದು ಅವರು ಹೇಳುತ್ತಿದ್ದರು. ಹೀಗಿದ್ದರೂ ಅವರು ತಮ್ಮ ನೋವನ್ನು ಇತರರಿಗೆ ಹಂಚಲಿಲ್ಲ. 'ಎನ್ನ ಪಾಡೆನಗಿರಲಿ ಅದರ ಹಾಡನ್ನಷ್ಟೆ ನೀಡುವೆನು ರಸಿಕ ನಿನಗೆ !' ಎಂದು ಅವರು ಹೇಳಿದರು. ಅವರ ಮಟ್ಟಿಗೆ ಹೇಳುವುದಾದರೆ 'ಪಟ್ಟ ಪಾಡೆಲ್ಲವೂ ಹುಟ್ಟು ಹಾಡಾಗಿ ಹರಿಯಿತು'. ಅದು ಕನ್ನಡಿಗರ ಭಾಗ್ಯ. ಕಾವ್ಯ ಅವರ ಪಾಲಿಗೆ ನಾದ ಲೀಲೆ. ಲೀಲೆ ಎಂಬುದು ಕೃಷ್ಣನಿಗೆ ಸಂಬಂಧಿಸಿದ್ದು. ಕಾವ್ಯ ಕಟ್ಟುವ ಕ್ರಿಯೆ ಕೂಡ ಲೀಲೆಗೆ ಸಮನಾದದ್ದು. ಈ ದತ್ತ ಅಂಬಿಕೆಯ ಕೊಡುಗೆಯಾದುದರಿಂದ ಇಂಥ ಲೀಲೆಯನ್ನು ನಡೆಸುವುದು ಅವರಿಗೆ ಸಾಧ್ಯವಾಯಿತು. ಅಮೆರಿಕದಲ್ಲಿ ನೆಲೆಸಿರುವ ಆಹಿತಾನಲ (ನಾಗ ಐತಾಳ) ಅವರು ನಳಿನಿ ಮೈಯ ಅವರ ಸಹಕಾರದೊಂದಿಗೆ 'ಬೇಂದ್ರೆ ಅಂದ್ರೆ' ಎಂಬ ಬೇಂದ್ರೆ ಸಾಹಿತ್ಯದ ವಿರಾಟ್ ದರ್ಶನ ಮಾಡಿಸುವ ಕೃತಿಯೊಂದನ್ನು ಸಂಪಾದಿಸಿದ್ದಾರೆ. ಇದಕ್ಕೆ ಅವರ ಅಭ್ಯಾಸಪೂರ್ಣವಾದ ಮುನ್ನುಡಿಯೂ ಇದೆ. ಇದರಲ್ಲಿ ಜಿ. ಎಸ್. ಶಿವರುದ್ರಪ್ಪನವರಿಂದ ಹಿಡಿದು ಕೀರ್ತಿನಾಥ ಕುರ್ತಕೋಟಿಯವರವರೆಗೆ ಗಣ್ಯರ ಲೇಖನಗಳಿವೆ. ಪು.ತಿ.

ನರಸಿಂಹಾಚಾರ್, ಶಂಕರ ಮೊಕಾಶಿ ಪುಣೇಕರ, ಕಿ. ರಂ. ನಾಗರಾಜ, ಡಿ. ಆರ್. ನಾಗರಾಜ, ಸಿ. ಎನ್. ರಾಮಚಂದ್ರನ್, ಶ್ಯಾಮಸುಂದರ ಬಿದರಕುಂದಿ, ಪಿ. ಲಂಕೇಶ, ಟಿ. ಪಿ. ಅಶೋಕ, ಓ. ಎಲ್. ನಾಗಭೂಷಣಸ್ವಾಮಿ, ಎನ್. ಎಸ್. ಲಕ್ಷ್ಮೀನಾರಾಯಣ ಭಟ್ಟ, ವಿ. ಕೃ. ಗೋಕಾಕ, ನರಹಳ್ಳಿ ಬಾಲಸುಬ್ರಹ್ಮಣ್ಯ, ಎಚ್. ಎಸ್. ರಾಘವೇಂದ್ರರಾವ್ ಹೀಗೆ ಆಧುನಿಕ ಕನ್ನಡದ ಘಟಾನುಘಟಿ ಲೇಖಕರು ಬರೆದ ಲೇಖನಗಳನ್ನು ಇದರಲ್ಲಿ ಸಮಾವೇಶಗೊಳಿಸಲಾಗಿದೆ. ಈ ಒಂದು ಸಂಪಾದನ ಕೃತಿಗಾಗಿಯೇ ಇವುಗಳನ್ನು ಬರೆದವು ಅಲ್ಲ ಎಂಬುದು ಈ ಹೆಸರುಗಳ ಪಟ್ಟಿಯನ್ನು ನೋಡಿದಾಗಲೇ ಗೊತ್ತಾಗುತ್ತದೆ. ಈ ಲೇಖನಗಳು ಹಿಂದೆ ಬೇರೆ ಕಡೆಗಳಲ್ಲಿ ಪ್ರಕಟವಾದವುಗಳು. ಅವನ್ನೆಲ್ಲ ಇಲ್ಲಿ ಕಲೆಹಾಕಲಾಗಿದೆ. ಈ ಮೂಲಕ ಬೇಂದ್ರೆಯನ್ನು ಅರ್ಥಮಾಡಿಕೊಳ್ಳಲು ಕಷ್ಟಪಡುವ ಹೊಸ ಪೀಳಿಗೆಯ ಓದುಗರಿಗೆ ನೆರವಾಗಿದ್ದಾರೆ ಸಂಪಾದಕರು. ಬೇಂದ್ರೆಯನ್ನು ಕಾವ್ಯದ ಮೂಲಕ, ಅವರ ವೈಯಕ್ತಿಕ ಬದುಕಿನ ಮೂಲಕ ಅನುಸಂಧಾನ ಮಾಡಿದ ಲೇಖನಗಳೂ ಇಲ್ಲಿವೆ. ಬೇಂದ್ರೆ ಸಾಹಿತ್ಯದ ಮೂಲಕ ಕನ್ನಡ ಸಾಹಿತ್ಯವನ್ನು ಅರ್ಥೈಸಲು ಮಾಡಿದ ಪ್ರಯತ್ನದ ಲೇಖನಗಳೂ ಇದರಲ್ಲಿವೆ. ಬೇಂದ್ರೆ ಒಂದು ಅದ್ಭುತ ಎಂದು ತಿಳಿದ ಆರಾಧನಾ ಭಾವದ ಲೇಖನಗಳೂ ಇವೆ. ರಮ್ಯ, ನವ್ಯ, ಬಂಡಾಯ ನೆಲೆಗಳಿಂದ ಬೇಂದ್ರೆಯವರನ್ನು ಅಧ್ಯಯನ ಮಾಡಿದ ಲೇಖನಗಳೂ ಇಲ್ಲಿವೆ. ಬೇಂದ್ರೆಯವರ ಕಲಾತ್ಮಕ ವ್ಯಕ್ತಿತ್ವದ ಬಗ್ಗೆ ಬರೆಯುವ ನರಸಿಂಹಾಚಾರ್ ಅವರು, 'ಬೇಂದ್ರೆಯವರ ಮನೋವೃತ್ತಿಯನ್ನು ಒಟ್ಟು ನೋಟದಿಂದ ನೋಡಿದಾಗ ಅವರದೇ ಒಂದು ಕವಿತೆಯ ಸಾಲು ನೆನಪಿಗೆ ಬರುತ್ತದೆ, ಹೂವನ್ನು ಕುರಿತದ್ದು; 'ಮಣ್ಣನ್ನು ಕಂಪತ್ತ ಹೊರಳಿಸುತಿರು'. ಅವರ ಕವಿತೆಗಳು ಕನ್ನಡ ನಾಡಿನ, ಏಕೆ– ಇಡೀ ಈ ಭೂಮಿಯ ದಿವ್ಯಗಂಧವನ್ನು ನಮ್ಮರಿವಿಗೆ ಬೀರುತ್ತವೆ. ತಾನು ತಾನಾಗಿಯೇ ಬೆಳೆದು ಮೊಗ್ಗಾಗಿ ಅರಳಿ ಕಂಪು ಬೀರುವುದು ಹೂವಿನ ಸಹಜ ಗುಣ. ಅದೊಂದು ಕಲೆಗಾರಿಕೆಯಲ್ಲ. ಬೇಂದ್ರೆಯವರ ಕವಿತೆಗಳೂ ಹಾಗೆಯೇ ಸುಕೃತಫಲ. ಅದು ಕಲೆಗಾರಿಕೆಯ ವಿಶ್ಲೇಷಣೆಗೆ ಸಿಕ್ಕುವುದಿಲ್ಲ ..' ಎಂದು ವಿವರಿಸುತ್ತಾರೆ. ಈ ಲೇಖನದ ಆರಂಭ ಕೂಡ ವಿಶಿಷ್ಟವಾಗಿದೆ. 'ಕವಿ ಬೇಂದ್ರೆ ಅಸಾಧಾರಣ ವ್ಯಕ್ತಿ. ಅವರದು ಸರಸ ತೇಜಸ್ವಿತೆ. ಅಗಲವಾದ ಹಣೆ, ನೀಟಾಗಿ ಇಳಿದಿದ್ದು ತುದಿಯಲ್ಲಿ ತುಸು ಹರಡಿರುವ ಮೂಗು, ಹಾಳತವಾದ ಗಂಡು ಮೀಸೆ, ರಸಾರ್ದ್ರವಾದ ತುಟಿಗಳು, ಮುದ್ದಾದ ಗಲ್ಲಕ್ಕೆ ಇಳಿಯುವ ಕೆನ್ನೆಗಳು, ಹೊಳಪುಗಣ್ಣು. ನಿಲುವು ಸ್ವಲ್ಪ ಕುಳ್ಳು. ಕೇದಗೆಯ ಹತ್ತಿರಕ್ಕೆ ಬರುವ ಮೈಬಣ್ಣ...' ಇದನ್ನು ಓದಿದ ಒಬ್ಬ ಚಿತ್ರಗಾರ ಬೇಂದ್ರೆಯವರನ್ನು ಕುಂಚದಲ್ಲಿ ಚಿತ್ರಿಸಬಹುದು. ಪುತಿನ ಬೇಂದ್ರೆಯವರ ಸಮಕಾಲೀನರು. ಒಬ್ಬ ಕವಿ ಇನ್ನೊಬ್ಬ ಕವಿಯ ಬಗ್ಗೆ ಇಷ್ಟೊಂದು ಉದಾರವಾಗಿ ಬರೆಯುವುದು ನವೋದಯ ಕಾಲದವರಿಗೆ ಮಾತ್ರ ಸಾಧ್ಯವಿತ್ತೇನೋ. ಇಂಥ ಒಂದು ಸಹೃದಯತೆಯ ದಾಖಲೆಯಾದ ಈ ಲೇಖನದ ಆಯ್ಕೆ ಸೂಕ್ತವಾಗಿದೆ. 'ಹಕ್ಕಿಗೆ ಗರಿ ಇದ್ದಂತೆ ಕವಿಗೆ

ಕವನ' ಎಂಬ ಬೇಂದ್ರೆಯವರ ಮಾತನ್ನು ನೆನಪಿಸುವ ಜಿ. ಎಸ್. ಶಿವರುದ್ರಪ್ಪನವರು, 'ಕಾವ್ಯ ಸೃಷ್ಟಿ– ಬೇಂದ್ರೆಯವರ ದೃಷ್ಟಿ' ಎಂಬ ಲೇಖನದಲ್ಲಿ ಕವಿಯು ಕಾವ್ಯಸೃಷ್ಟಿಯ ಬಗ್ಗೆ ಏನು ಹೇಳಿದ್ದಾರೆ ಎಂಬುದನ್ನು ಅವರ ಕವನಗಳಿಂದಲೇ ಹೆಕ್ಕಿಕೊಡುವ ಪ್ರಯತ್ನ ಮಾಡಿದ್ದಾರೆ. 'ನುಡಿದು ಬೇಸತ್ತಾಗ । ದುಡಿದುಡಿದು ಸತ್ತಾಗ ಜನಕ ಹಿಗ್ಗಿನ ಹಾಡು ನೀಡಾಂವ'. ಎಂದು 'ಸಖೀಗೀತ'ದಲ್ಲಿ ಕವಿ ಯಾರು ಎಂಬುದನ್ನು ಬೇಂದ್ರೆ ಹೇಳಿದ್ದಾರೆ. ಬೇಂದ್ರೆ ದೃಷ್ಟಿಯಲ್ಲಿ ಕವಿ ತನ್ನ ವೈಯಕ್ತಿಕ ನೋವನ್ನು ಜನರಿಗೆ ನೀಡಬಾರದು. 'ಕುಗ್ಗು ತನಗಿರಲಿ, ಹಿಗ್ಗು ಪರರಿಗಿರಲಿ' ಎಂಬಂಥ ಪರೋಪಕಾರ ಬುದ್ಧಿ ಅವರದ್ದು. ಕವಿಯ ಪಾಡು ಹಾಡಾಗುವುದು ಹೇಗೆ? 'ತೇಲಾಡುವಾಗ ಮನಸು ಮೇಲಾಡತಾವ ಕನಸು ತಾಕಾಡುವಾಗ ಇತ್ತ ತೇಕಾಡತಾವ ಚಿತ್ತ' ಕವಿಗೆ ಕಾವ್ಯವೆನ್ನುವುದು ಗರ್ಭಗುಡಿಯ ಗರ್ಭದಲ್ಲಿ ಪಡಿನುಡಿಯುವ ಮಂತ್ರ! ಕವಿಗೆ ಕಾವ್ಯವೆಂಬುದು ಸ್ಫೂರ್ತಾ, ಅಮೂರ್ತಾ, ಆವಿರ್ಭೂತಾ, ಭವ ಮಂಥನ ತಂತ್ರಾ ಹೀಗೆ ಜಿಎಸ್‌ಎಸ್ ಅವರು ಬೇಂದ್ರೆಯವರ ಕಾವ್ಯಮೀಮಾಂಸೆಯನ್ನು ನಮಗೆ ದರ್ಶನ ಮಾಡಿಸುತ್ತಾರೆ. ಕವಿ ತನ್ನ ಸ್ವಂತ, ಸ್ವತಂತ್ರ ಅನುಭವದ ಇರವಿನ ಪರಿಯನ್ನು ಶಬ್ದದಲ್ಲಿ ಮರುಸೃಷ್ಟಿಸುತ್ತ ಒಂದು ಭಾವಲೋಕವನ್ನು ಅಂದರೆ 'ಭೃಂಗದ ಬೆನ್ನೇರಿ ಬರುವ ಕಲ್ಪನಾ ವಿಲಾಸ'ವನ್ನು ನಾದಲಯಗಳಲ್ಲಿ ಕಟ್ಟಿಕೊಡುವಂತಹ ಕುಶಲ ಕೆಲಸ ಹೊಸಗನ್ನಡದಲ್ಲಿ ಬೇಂದ್ರೆಯವರಿಂದಲೇ ಆರಂಭವಾಯಿತು ಎಂಬ ಮಾತನ್ನು 'ಬೇಂದ್ರೆಯವರ ಪ್ರೀತಿ ಕಾವ್ಯ' ಲೇಖನದಲ್ಲಿ ಶ್ಯಾಮಸುಂದರ ಬಿಂದರಕುಂದಿಯವರು ಹೇಳಿದ್ದಾರೆ. ಬೇಂದ್ರೆ ಏಕೆ ಮಹಾಕಾವ್ಯ ಬರೆಯಲಿಲ್ಲ ಎಂಬುದನ್ನು ಚರ್ಚಿಸುವ ಕಂಬಾರರು, ಬೇಂದ್ರೆ ಪ್ರಾಚೀನರಂತೆ ಮಹಾಕಾವ್ಯ ಬರೆಯಲಿಲ್ಲ. ಆಗಿನಂತೆ ಬದುಕು ಒಮ್ಮುಖವಾಗಿಲ್ಲದ್ದು ಇದಕ್ಕೆ ಕಾರಣವಾಗಿರಬಹುದು. ಸಮಷ್ಟಿ ಮನೋಧರ್ಮವನ್ನು ಸ್ವಚ್ಛಂದವಾಗಿ ಧ್ವನಿಸಬಲ್ಲ ತೋಂಡಿ ಸಂಪ್ರದಾಯ ಬೇಂದ್ರೆ ಬಂದ ಕಾಲಕ್ಕೆ ಒಡೆದು ನೀರಾದದ್ದು ಕಾರಣವಾಗಿರಬಹುದು. ಯಾಕೆಂದರೆ ಯಾವುದೇ ಮಹಾಕಾವ್ಯ ಅದು ವೈಯಕ್ತಿಕವಾದದ್ದಿರಲಿ, ಸಾಮೂಹಿಕವಾದದ್ದಿರಲಿ ಜಾನಪದ ಉದ್ದೀಪನೆಯಿಂದಲೇ ಸಾಧ್ಯವೆಂದು ತೋರುತ್ತದೆ. ತೋಂಡಿಯಲ್ಲಿ ಅನೇಕ ಮುಖವಾಗಿ ಹರಿಯುವ ಮೌಲ್ಯಗಳು, ಆಶೋತ್ತರಗಳು ತಮ್ಮನ್ನಾಳುವ ರಾಜನ ಚರಿತ್ರೆಯ ಮುಖಾಂತರ ಅಥವಾ ತಮ್ಮ ಆದರ್ಶ ನಾಯಕನ ಜೀವನದ ಮುಖಾಂತರ ಒಮ್ಮುಖವಾಗಿ ಹರಿದಾಗ ಮಹಾಕಾವ್ಯ ಹುಟ್ಟಬಲ್ಲುದು. ಇಂಗ್ಲಿಷ್ ಪ್ರಭಾವದಿಂದ ಅಂದಿನ ಸಾಮಾಜಿಕ ಜೀವನದಲ್ಲಾದ ಬಿರುಕು ತೋಂಡಿ ಸಂಪ್ರದಾಯದಲ್ಲೂ ಬಿರುಕನ್ನುಂಟುಮಾಡಿತ್ತು. ಈ ಕಾರಣಗಳು ಬರೀ ನನ್ನ ಊಹೆಗಳಾಗಿರಬಹುದು. ಇಂಥ ಊಹೆಗೆ ಕಾರಣವೆಂದರೆ ಬೇಂದ್ರೆಯವರ ತಾತ್ವಿಕತೆ, ಕಾವ್ಯಧರ್ಮಗಳು ಕನ್ನಡ ಕವಿಗಳಿಗಿಂತ ಯಾವ ರೀತಿಯಲ್ಲೂ ಭಿನ್ನವಾಗಿರಲಿಲ್ಲ ಎಂದು ಹೇಳುತ್ತಾರೆ. ಆಧುನಿಕ ಲೇಖಕ/ ಓದುಗ ಬೇಂದ್ರೆಯನ್ನು ಹೇಗೆ ಗ್ರಹಿಸುತ್ತಾನೆ ಎನ್ನುವುದಕ್ಕೆ ಮತ್ತು ಬೇಂದ್ರೆಯನ್ನು

ಹೀಗೂ ಗ್ರಹಿಸಬಹುದು ಎನ್ನುವುದಕ್ಕೆ ಅನಿಲ್ ದೇಶಪಾಂಡೆಯವರ 'ಮೂರ್ಧನ್ಯ ತೇಜಸ್ಸಿನ ಕಿರಣ' ಎಂಬ ಲೇಖನ ಉತ್ತಮ ಉದಾಹರಣೆ. ಹಳಬರ ಮತ್ತು ಹೊಸಬರ ಮಿಳಿತವಾಗಿರುವ ಈ ಸಂಪುಟವು ಬೇಂದ್ರೆ ಕುರಿತ ಅಧ್ಯಯನವನ್ನು ವಿಸ್ತರಿಸಿದೆ.

'ಬೇಂದ್ರೆ ಅಂದ್ರೆ ಕೃತಿಯ' ಬಗೆಗೆ ಪ್ರಕಟವಾದ ವಿಮರ್ಶೆ



ಕಟ್ಟು ಕಥೆಗಳ ಅಪರೂಪದ ಕಟ್ಟು

– ಎ. ಆರ್. ವೆಂಕಟೇಶ

ಒಂದೂರಲ್ಲಿ ಒಬ್ಬ ರಾಜ ಇದ್ದ. ಅವನಿಗೊಬ್ಬಳು ಸುಂದರ ಮಗಳಿದ್ದಳು, ಆ ರಾಜಕುಮಾರಿಯನ್ನು ಒಬ್ಬ ರಾಕ್ಷಸ ಅಪಹರಿಸಿದ, ಆ ರಾಕ್ಷಸನ ಪ್ರಾಣ ಸಪ್ತ ಸಮುದ್ರಗಳಾಚೆ ಇರುವ ಭಯಂಕರ ಕಾಡಿನ ಮರವೊಂದರ ಪೊಟರೆಯಲ್ಲಿ ವಾಸ ಮಾಡುವ ಗೂಬೆಯಲ್ಲಿತ್ತು... ಹೀಗೆ ಸ್ವಾರಸ್ಯಕರ, ಕುತೂಹಲಕಾರಿ, ಕಾಲ್ಪನಿಕ, ನೀತಿ ಪೂರ್ಣ ಕಥೆಗಳನ್ನು ಕೇಳುತ್ತಾ ಬೆಳೆದವರೇ ಬಹುತೇಕ ಮಂದಿ. ಹಿಂದೆ ಮಕ್ಕಳು ತಮ್ಮ ಅಜ್ಜಿಯಂದಿರಿಂದ ಈ ರೀತಿಯ ಕಥೆಗಳನ್ನು ಕೇಳದೆ ಮಲಗಿದವರೇ ಇಲ್ಲ. ಇಂಥ ಅದ್ಭುತ ಕಥೆಗಳನ್ನು ಅಮೆರಿಕದಲ್ಲಿ ನೆಲೆಸಿರುವ ಆಹಿತಾನಲ (ನಾಗ ಐತಾಳ) ಅವರು ಸಂಗ್ರಹಿಸಿ ಪುಸ್ತಕ ರೂಪದಲ್ಲಿ ಕಟ್ಟಿಕೊಟ್ಟಿದ್ದಾರೆ.


ಆಹಿತಾನಲರ 'ಒಂದಾನೊಂದು ಕಾಲದಲ್ಲಿ' ಕೃತಿಯಲ್ಲಿ ಸಮೃದ್ಧ ಸ್ವಾರಸ್ಯಕರ ಕಥೆಗಳಿವೆ. ಹುಟ್ಟುತ್ತಲೇ ಮಕ್ಕಳ ಕೈಗೆ ಕಂಪ್ಯೂಟರ್ ಮೌಸ್ ನೀಡುವ ಈ ಕಾಲದಲ್ಲಿ ನಮ್ಮ ಜನಪದರ ಬಾಯಿಂದ ಇಂಥ ಕಥೆಗಳು ಮಾಯವಾಗುತ್ತಿವೆ. ಇಂಥ ಸಂದರ್ಭದಲ್ಲಿ ಕಾಲ್ಪನಿಕ ಕಥೆಗಳನ್ನು ಸಂಗ್ರಹಿಸಿರುವ ಆಹಿತಾನಲರ ಶ್ರಮ ಶ್ಲಾಘನೀಯ. ಸೋಮಾರಿತನ ಪ್ರಗತಿಯ ಶತ್ರು ಎಂಬ ಅರಿವುಂಟುಮಾಡುವ 'ಕೈ ಕೆಸರಾದರೆ ಬಾಯಿ ಮೊಸರು', ಕೇವಲ ವಿದ್ಯೆ ಇದ್ದರೆ ಸಾಲದು ಬುದ್ಧಿಯೂ ಇರಬೇಕು ಎಂಬುದನ್ನು ಸ್ವಾರಸ್ಯಕರವಾಗಿ

ತಿಳಿಸುವ 'ಸಿಂಹ ಮತ್ತು ಮೂವರು ಬ್ರಾಹ್ಮಣರು', ಅತಿ ಆಸೆಯ ಕೆಡುಕು ತಿಳಿಸುವ 'ಅತಿ ಆಸೆ, ತಲೆ ಬೋಳು' – ಹೀಗೆ ವೈವಿಧ್ಯಮಯ ಕಥೆಗಳಿವೆ.

ಬ್ರಹ್ಮಾಸ್ತ್ರ ಸ್ವರಮಾಲಾ, ಸುರಮಾಲಾ, ಸ್ವರ್ಣಮಾಲಾ ಮತ್ತಿತರ ತಮಾಷೆ ವಸ್ತುವಿನ ಕೆಲ ಕಥೆಗಳಂತೂ ನಗುವಿನ ಕಟ್ಟೆಯೊಡೆಯುತ್ತವೆ. ಕೆಲವು ಕಥೆಗಳ ನಿರೂಪಣೆ ಸರಾಗವಾಗಿಲ್ಲದಿದ್ದರೂ, ಕಥೆ ಹುಟ್ಟಿಸುವ ಕುತೂಹಲ ಆ ಕೊರತೆಯನ್ನು ನಿವಾರಿಸಿದೆ.

ಇಂತಹ ಕಥೆಗಳಲ್ಲಿ ಸಾಮಾನ್ಯವಾಗಿ ಮೋಸ ಮಾಡಬಾರದು, ಕೆಡುಕನ್ನು ಮಾಡಿದವರಿಗೆ ಕೊನೆಯಲ್ಲಿ ಶಿಕ್ಷೆ ಖಚಿತ ಎಂಬ ನೀತಿಗಳಿರುತ್ತವೆ. ಮಕ್ಕಳೂ ಇಂಥ ಕಥೆಗಳನ್ನು ಕೇಳುತ್ತಲೇ ಒಂದು ವ್ಯಕ್ತಿತ್ವ ಬೆಳೆಸಿಕೊಳ್ಳುತ್ತಾ ಹೋಗುತ್ತಾರೆ. ಆದರೆ ಆಹಿತಾನಲರ ಸಂಕಲದಲ್ಲಿ ಕೆಲವು ಮೌಢ್ಯದ ಮತ್ತು ಅನೀತಿಯ ಕಥೆಗಳೂ ತೂರಿಕೊಂಡಿವೆ. ಉದಾಹರಣೆಗೆ ಈ ಕೃತಿಯಲ್ಲಿರುವ 'ದರ್ಶಿನಿ ಮತ್ತು ನಾಗರಾಜ' ಎಂಬ ಕಥೆಯು ಮಕ್ಕಳಲ್ಲಿ ಮೌಢ್ಯ ಬಿತ್ತುವ ಧಾರ್ಮಿಕ ಆಚರಣೆಗೆ ಸಂಬಂಧಿಸಿದ್ದಾಗಿದೆ. ಮೂರ್ಖ ಮುದುಕಿ, ಸ್ವರ್ಗದಿಂದಿಳಿದು ಬಂದ ಸುಬ್ಬ ಇತ್ಯಾದಿ ಕಥೆಗಳಲ್ಲಿ ಕೆಲ ಪಾತ್ರ ಮೋಸ ಮಾಡಿ ಹಣಗಳಿಸುವ ಸನ್ನಿವೇಶಗಳಿವೆ. ಹಾಗಾದರೂ ಅವರು ಕೊನೆಯಲ್ಲಿ ಸುಖವಾಗಿ ಬಾಳಿದರು ಎಂಬ ಷರಾದೊಂದಿಗೆ ಇಂಥ ಕಥೆಗಳು ಮುಕ್ತಾಯಗೊಳ್ಳುತ್ತವೆ. ಇಂಥ ಕಥೆಗಳು ಮಕ್ಕಳ ಮನಸ್ಸಿನ ಮೇಲೆ ಎಂತಹ ಪರಿಣಾಮ ಬೀರುವುದು ಎಂಬುದನ್ನು ಊಹಿಸಬಹುದು. ಈ ಅಲ್ಪದೋಷವನ್ನು ಹೊರತುಪಡಿಸಿದರೆ, ಈ ಸಂಕಲನ ನಿಜಕ್ಕೂ ಸಂಗ್ರಹಾರ್ಹ ಕೃತಿ.

'ವಿಜಯ ಕರ್ನಾಟಕ' ಪತ್ರಿಕೆಯಲ್ಲಿ ಪ್ರಕಟವಾದ ಪುಸ್ತಕ ಪರಿಚಯ.



ನಾಗ ಐತಾಳರ ಕನ್ನಡದ ಕಹಳೆ

– ಪ್ರಕಾಶ ಕಡಮೆ

ಉಡುಪಿ ಜಿಲ್ಲೆಯ ಕೋಟದ ನಾಗಪ್ಪಯ್ಯ ತಮ್ಮ ೩೭ನೆಯ ವಯಸ್ಸಿನಲ್ಲಿ ಅಮೆರಿಕಾ ದೇಶಕ್ಕೆ ಬಂದು 'ನಾಗ ಐತಾಳ' ಆಗಿ ಸಪ್ತ ಸಾಗರದಾಚೆಯ ಆ ನಾಡಲ್ಲಿ ಕನ್ನಡದ ಕಹಳೆಯೂದುತ್ತಿರುವುದು ನಿಜವಾಗಿಯೂ ಬೆರಗಿನ ವಿಷಯವೇ! ತಮ್ಮ ತೊಂಬತ್ತನೆಯ ಈ ವಯಸ್ಸಿನಲ್ಲಿಯೂ ಅದೇ ಹರಯ ಲವಲವಿಕೆ; ಜೀವನ ಪ್ರೀತಿ.

೧೯೩೨ ರಲ್ಲಿ ಹುಟ್ಟಿದ ನಾಗಪ್ಪಯ್ಯ ಭಾರತದಲ್ಲಿ ಪಿಎಚ್.ಡಿ. ಪಡೆದು ನಂತರ ಬಯೋಕೆಮೆಸ್ಟ್ರಿಯಲ್ಲಿ ಹೆಚ್ಚಿನ ತರಬೇತಿ ಪಡೆಯಲು ಅಮೆರಿಕಾ, ಕೆನಡಾಕೆ ಬಂದು ೨೭ ವರ್ಷ ಚಿಕಾಗೋ ಯೂನಿವರ್ಸಿಟಿಯಲ್ಲಿ ಸಂಶೋಧನಾ ಪ್ರಾಧ್ಯಾಪಕರಾಗಿ ಕೆಲಸ ಮಾಡಿ ನಿವೃತ್ತಿಹೊಂದಿದ್ದಾರೆ. ಇಂದು ಮಡದಿ, ಮಗ, ಸೊಸೆ, ಮೊಮ್ಮಕ್ಕಳೊಂದಿಗೆ ತುಂಬು ಸಂಸಾರದಲ್ಲಿ ಆ ನೆಲದಲ್ಲಿ ನೆಲೆಸಿ ಎಷ್ಟೆಲ್ಲಾ ಕೆಲಸ ಕಾರ್ಯಗಳ ನಡುವೆ ಹವ್ಯಾಸಕ್ಕೆ ಕನ್ನಡದ ಬರಹದಲ್ಲಿ ತಮ್ಮನ್ನು ತಾವೇ ತೊಡಗಿಸಿಕೊಂಡಿದ್ದಾರೆ. ತಾವೂ ಬೆಳೆದು, ಕಿರಿಯರಿಗೂ ಬೆನ್ನೆಲುಬಾಗಿ ಈ ಉತ್ಸಾಹೀ ಯುವಕ ತಾಯ್ನೆಲ ಬಿಟ್ಟು ಕಡಲಾಚೆ ನೆಲೆಸಿ ಇಂದಿಗೆ ಸುವರ್ಣ ಮಹೋತ್ಸವದ ಸಂಭ್ರಮದಲ್ಲಿದ್ದರೂ, ಇವರ ಎದೆಯಲ್ಲಿ ಊರ ನೆನಪು ಸದಾ ಹಚ್ಚ ಹಸಿರು.

ನಾಗ ಐತಾಳರ 'ಸ್ಮರಣೆ ಸಾಲದೆ' ಎಂಬ ಅವರ ಬದುಕಿನ ಅನುಭವಗಳ ಪುಸ್ತಕ ಓದುತ್ತಿದ್ದಂತೆಯೇ ಅವರಿಗೆ ಎರಡು ಜಗತ್ತುಗಳಿವೆ ಎಂಬ ವಿಷಯ ಅರಿವಿಗೆ ಬರುತ್ತದೆ. ಒಂದು ಬಾಲ್ಯದ ಕೋಟದ ಜಗತ್ತು. ಇದು ಅವರ ವ್ಯಕ್ತಿತ್ವವನ್ನು ರೂಪಿಸಿದ್ದು. ಎಳೆಯ ಮನಸ್ಸು ತನ್ನ ಸುತ್ತಲಿನ ಪರಿಸರಕ್ಕೆ ಸ್ಪಂದಿಸುತ್ತಲೇ ತನ್ನ ಗುರಿ ದಾರಿಗಳನ್ನು ಗುರುತಿಸಿಕೊಳ್ಳಲು ಇದು ನೆರವು ನೀಡಿದೆ. ಚಿಕ್ಕಂದಿನಲ್ಲಿ ಎದುರಿಸಿದ ಅನೇಕ ಬಿಕ್ಕಟ್ಟುಗಳನ್ನು ಇದು ಒಳಗೊಂಡಿದೆ. ಮತ್ತೊಂದು ಅವರ ವೃತ್ತಿ ಬದುಕನ್ನು ರೂಪಿಸಿದ ಅಮೆರಿಕೆಯ ಜಗತ್ತು. ಕನ್ನಡ ಕರಾವಳಿಯ ಹುಡುಗನೊಬ್ಬ ಕಡಲನ್ನು ದಾಟಿ ಅಪರಿಚಿತ ಖಂಡ ಪ್ರವೇಶಿಸಿ ತನ್ನ ಬದುಕನ್ನು ಕಟ್ಟಿಕೊಂಡ ಅನೇಕ ಸಂದರ್ಭಗಳಲ್ಲಿ ಇವರ ಕೆಲಸ ಕಾರ್ಯಗಳ ಕಂಡು ಇಲ್ಲಿಯ ಜನರಿಂದಲೂ ಭೇಷ್ ಎನಿಸಿಕೊಂಡ ರೋಮಾಂಚಕ ಸಂಗತಿಗಳಿಗೆ ನಿಜವಾಗಿಯೂ ನಾಗ್ ಅಭಿನಂದನಾರ್ಹರು. ೨೦೦೧ರಲ್ಲಿ ನಿವೃತ್ತರಾದ ಇವರು ಅಂದಿನಿಂದ ಇಂದಿನತನಕವೂ ಆ ನೆಲದಲ್ಲಿ ಕನ್ನಡ ಕಟ್ಟುವ ಅಪೂರ್ವ ಕಾರ್ಯವನ್ನು ಮಾಡುತ್ತ ಬಂದಿದ್ದಾರೆ.

'ಸ್ಮರಣೆ ಸಾಲದೆ' ಈ ನೆನಪಿನ ಹೊತ್ತಿಗೆಯನ್ನು ಬೆಂಗಳೂರಿನ 'ಅಭಿನವ' ಹಾಗೂ ಕ್ಯಾಲಿಫೋರ್ನಿಯಾದ 'ಸಾಹಿತ್ಯಾಂಜಲಿ' ಪ್ರಕಾಶಿಸಿದ್ದು ೧೭೨ ಪುಟದೊಳಗೆ ೫೦ ನೆನಪಿನ ಅಧ್ಯಾಯಗಳು ಹೊಳೆಯುತ್ತಿವೆ. ನಾಗ ಐತಾಳರು ಈ ಪುಸ್ತಕವನ್ನು ಕನ್ನಡದ ಪ್ರಮುಖ ಬರಹಗಾರ್ತಿ ಸುನಂದಾ ಬೆಳಗಾಂವಕರ ಇವರ ದಿವ್ಯ ಸ್ಮರಣೆಗೆ ಅರ್ಪಿಸಿದ್ದು, ನಾಮಾಂಕಿತ ಬರಹಗಾರರಾದ ಡಾ. ನರಹಳ್ಳಿ ಬಾಲಸುಬ್ರಹ್ಮಣ್ಯರು ಪ್ರಬುದ್ಧ ಮುನ್ನುಡಿಯ ಕಳಸವಿಟ್ಟಿರುವರು. ಇಲ್ಲಿಯ ನೆನಪಿನ ಬುತ್ತಿಯನ್ನು ಒಂದೊಂದೇ ಬಿಚ್ಚುತ್ತಾ ಹೋದಂತೆ ಐವತ್ತೂ ಅಧ್ಯಾಯಗಳಲ್ಲಿ ನಾಗ್ ಐವತ್ತು ಸೊಗಸು ಬೆರಗು ಅದ್ಭುತಗಳನ್ನು ನಮಗೆ ಉಣಬಡಿಸಿರುವರು.


ಈ ನೆನಪುಗಳೇ ಹೀಗೆ: ಅವು ಸಿಹಿಯಾಗಿರಲಿ ಕಹಿಯಾಗಿರಲೀ ಅವೆಲ್ಲವೂ ಬದುಕನ್ನು ರೂಪಿಸಲು ಸಹಾಯಕವಾಗುವುದು. 'ತುಂಗ್ರ ಮೇಷ್ಟ್ರ' ಎಂಬ ಸೌಜನ್ಯ ತುಂಬಿದ ಗುರುಗಳನ್ನು ನೆನೆಯುತ್ತ ಅವರು ಎರಡು ಮೂರು ದಿನ ರಜೆಯಲ್ಲಿದ್ದಾಗಿನ ಅವಾಂತರವನ್ನು ಮನ ಬಿಚ್ಚಿ ಹೇಳಿಕೊಂಡಿರುವರು. ಊರ ನೆಲದಲ್ಲಿಯ 'ತಿರಿ' 'ಮುಡಿ'ಗಳನ್ನು ಮನಸಾರೆ ನೆನೆಯುತ್ತ ಅಂದಿನ ಕೆಲ ಸಂಪ್ರದಾಯಿಕಗಳು ಇಂದು ಮಾಯವಾಗುತ್ತಿದೆ ಎಂದು ಮಮ್ಮಲ ಮರುಗಿರುವರು. 'ನಂ ಸೆಪರೇಷನ್' ವೃತ್ತಾಂತದಲ್ಲಿ ಮೊಮ್ಮಗನ ಆಗಮನಕ್ಕಾಗಿ ತಾವಿಬ್ಬರೂ ಒಂದು ವರ್ಷ ದೂರವಿದ್ದಾಗಿನ ಸುದ್ದಿ ಆಫೀಸಿಗೆಲ್ಲ ಹರಡಿ, ಸತ್ಯ ತಿಳಿದ ನಂತರ ಎಲ್ಲರೂ ನಗೆಗಡಲಲ್ಲಿ ತಿಳಿಹಾಸ್ಯ ಘಟನೆಯ ವಿವರ ಸೊಗಸಾಗಿ ಮೂಡಿಬಂದಿದೆ. ಐತಾಳರ 'ಬಾತ್ರೂಮ್ ಸಂಗೀತ', 'ಗೂಟದ ಜನಿವಾರ'ದ ಪ್ರಸಂಗಗಳು ಇವರ ಮನೋವೈಶಾಲ್ಯತೆಯ ಸಂಕೇತವಾಗಿದೆ. ಎಂಥ ವಿಪರ್ಯಾಸ! ಒಂದೆಡೆ ಇಂಗ್ಲಿಷ್ ಮಾಧ್ಯಮದ ಅಮೆರಿಕೆಯಲ್ಲಿ ಕನ್ನಡಿಗರೊಬ್ಬರು

ನಾಯಿಯ ಜೊತೆಗೂ ಕನ್ನಡದಲ್ಲೇ ಸಂಭಾಷಿಸುವ ಅಭ್ಯಾಸ ಮಾಡಿಕೊಂಡಿದ್ದರೆ, ಇನ್ನೊಂದೆಡೆ ಕನ್ನಡವೇ ಮಾತೃಭಾಷೆಯಾಗಿರುವ ಬೆಂಗಳೂರಿನಲ್ಲಿ ನಾಯಿಗಳಿಗೂ ಕನ್ನಡವೇ ಅರ್ಥವಾಗದಿರುವ ಸಂದರ್ಭ ನಮ್ಮ ಮನಃಸ್ಸಾಕ್ಷಿಯ ದುರಂತಕ್ಕೆ ಕೈಗನ್ನಡಿಯಾಗಿದೆ.

ಇವರ ನೇತೃತ್ವ ಮತ್ತು ಸಂಘಟನೆಯಲ್ಲಿ 'ಕನ್ನಡ ಸಾಹಿತ್ಯ ರಂಗ' ಅಮೆರಿಕೆಯ ಕನ್ನಡಿಗರ ಜೀವನಾಡಿಯಾಗಿದೆ. ಅಮೆರಿಕೆಯಲ್ಲಿ ಸಾಹಿತ್ಯಕ್ಕೆಂದೇ ಮೀಸಲಾದ ಕನ್ನಡದ ನಾಡಿಮಿಡಿತ ಇದು. ಇದರ ಸ್ಥಾಪಕ ಸದಸ್ಯರು ಮತ್ತು ಈಗಿನ ಆಡಳಿತ ಮಂಡಳಿಯ ಅಧ್ಯಕ್ಷರೂ ಐತಾಳರೇ. ೨೦೦೩ರಲ್ಲಿ ಕನ್ನಡ ಸಾಹಿತ್ಯ ರಂಗ ಶುರುವಾಗಿ ಪ್ರತೀ ಎರಡು ವರ್ಷಕ್ಕೊಮ್ಮೆ ಕನ್ನಡದ ಕಂಪು ಅಮೆರಿಕೆಯ ತುಂಬಾ ಸೊಂಪಾಗಿ ಘಮ ಘಮಿಸುತ್ತದೆ. ಫಿಲಡೆಲ್ಫಿಯಾ, ಲಾಸ್ ಏಂಜಲೀಸ್, ಚಿಕಾಗೊ, ವಾಷಿಂಗ್ಟನ್ ಡಿಸಿ, ಸ್ಯಾನ್ ಫ್ರಾನ್ಸಿಸ್ಕೋ, ಹ್ಯೂಸ್ಟನ್, ಸೈಂಟ್ ಲೂಯಿಸ್, ಬಾಸ್ಟನ್ ಮತ್ತು ೨೦೧೯ರಲ್ಲಿ ನ್ಯೂ ಜೆರ್ಸಿಯಲ್ಲಿ ಅತ್ಯಂತ ಶಿಸ್ತುಬದ್ಧವಾಗಿ ಸಮರ್ಪಕವಾಗಿ ಕನ್ನಡದ ಕಾರ್ಯಕ್ರಮ ನಡೆಸಿದ ಕೀರ್ತಿಯಲ್ಲಿ ಇವರ ಪಾಲೂ ಹೆಚ್ಚಿನದೇ. ಪ್ರಭುಶಂಕರ್, ಬರಗೂರು ರಾಮಚಂದ್ರಪ್ಪ, ಎನ್. ಎಸ್. ಲಕ್ಷ್ಮಿನಾರಾಯಣಭಟ್ಟ, ಅ. ರಾ. ಮಿತ್ರ, ಎಚ್. ಎಸ್. ರಾಘವೇಂದ್ರರಾವ್, ವೈದೇಹಿ, ವೀಣಾ ಶಾಂತೇಶ್ವರ, ಸುಮತೀಂದ್ರ ನಾಡಿಗ್, ಭುವನೇಶ್ವರಿ ಹೆಗಡೆ, ಕೆ. ವಿ. ತಿರುಮಲೇಶ್, ಪ್ರಧಾನ ಗುರುದತ್ತ, ಲಕ್ಷ್ಮೀಶ ತೋಳ್ಪಾಡಿ ಹೀಗೆ ಅನೇಕಾನೇಕ ಕನ್ನಡದ ದಿಗ್ಗಜರು ಈ ಕನ್ನಡ ಸಾಹಿತ್ಯ ರಂಗದ ಮೂಲಕ ಕನ್ನಡದ ರಂಗನ್ನು ಕಡಲಾಚೆಯಲ್ಲಿ ಬಿತ್ತರಿಸಿದರು.

ಕಳೆದ ವರ್ಷ ನಮ್ಮ ವಿಸ್ಮಯನ 'ವಿಸ್ಮಯ'ದಿಂದಾಗಿ ಅದೇ ಸಮಯಕ್ಕೆ ನಾವೂ ನ್ಯೂಜೆರ್ಸಿಯಲ್ಲಿಯೇ ಇದ್ದೆವು. ಒಂಬತ್ತನೆಯ ಕನ್ನಡ ಸಾಹಿತ್ಯ ರಂಗದ ವಸಂತ ಸಾಹಿತ್ಯೋತ್ಸವದ ಆಡಳಿತ ಮಂಡಳಿಯ ಅಧ್ಯಕ್ಷರೂ ನಾಗ ಐತಾಳರೇ ಇದ್ದು ಕನ್ನಡದ ನಾಮಾಂಕಿತ ಬರಹಗಾರರಾದ ವಸುಧೇಂದ್ರ, ವಸುಂಧರಾ ಭೂಪತಿ ಮತ್ತು ಸುನಂದಾರೊಂದಿಗೆ ನಾನೂ ಅತಿಥಿಯಾದದ್ದು ಬದುಕಿನಲಿ, ಮರೆಯುದ ಕ್ಷಣಗಳಲ್ಲೊಂದು. ಆ ಅದ್ಭುತ ವೇದಿಕೆಯಲ್ಲಿ ನಾಗ ಐತಾಳರ 'ಸ್ಮರಣೆ ಸಾಲದೇ' ಪುಸ್ತಕ ಪರಿಚಯ ಮಾಡಿದ್ದು ನನ್ನ ಸಾಹಿತ್ಯದ ಬದುಕಿನ ಮೈಲಿಗಲ್ಲೆಂದು ಪರಿಗಣಿಸುವೆನು. ಮೈ. ಶ್ರೀ ನಟರಾಜ್, ನಳಿನಿ ಮೈಯ, ಗುರುಪ್ರಸಾದ ಕಾಗಿನೆಲೆ, ಶ್ರೀಕಾಂತ ಬಾಬು, ಗುಂಡು ಶಂಕರ್, ತ್ರಿವೇಣಿ ಶ್ರೀನಿವಾಸರಾವ್, ಮೀರಾ ರಾಜಗೋಪಾಲ್, ವೈಶಾಲಿ ಹೆಗಡೆ, ಪ್ರಕಾಶ ನಾಯಕ, ಶಂಕರ್ ಹೆಗಡೆ ಇವರೆಲ್ಲ ನಾಗ ಐತಾಳರ ನೇತೃತ್ವದಲ್ಲಿ ಹಗಲಿರುಳೂ ದುಡಿದು ಈ ಸಮ್ಮೇಳನವನ್ನು ಯಶಸ್ವಿಗೊಳಿಸಿದ್ದು, ಸಪ್ತಸಾಗರದ ಆ ನಾಡಲ್ಲಿ ನಾಗ ಐತಾಳರ ಕನ್ನಡದ ಕಹಳೆಗೆ ಸಾಕ್ಷಿಯಾಯಿತು.

*



ತಲೆಮಾರ ಸೆಲೆ ಮತ್ತು ನಾಗ ಐತಾಳರು

– ಶ್ರೀಧರ ಹೆಗಡೆ ಭದ್ರನ್

'ಆಹಿತಾನಲ' (ಐತಾಳದ ಮೂಲರೂಪ?) ಕಾವ್ಯನಾಮದಿಂದ ಬರವಣಿಗೆಯನ್ನು ಮಾಡುತ್ತಿರುವ ನಾಗ ಐತಾಳರು ಅನಿವಾಸಿ ಕನ್ನಡ, ಲೇಖಕರಲ್ಲಿ ಅಗ್ರಗಣ್ಯರು. ಜೀವರಸಾಯನಶಾಸ್ತ್ರ ಕ್ಷೇತ್ರದಲ್ಲಿ ವಿಜ್ಞಾನಿಯಾಗಿ ಕೆಲಸ ಮಾಡಿ ನಿವೃತ್ತರಾಗಿರುವ ಅವರು ಪೋಷಿಸಿಕೊಂಡು ಬಂದಿರುವ ಸಾಹಿತ್ಯಾಸಕ್ತಿ ಅಪೂರ್ವವಾದುದು. ಈ ಹಿಂದೆ (೨೦೦೭) 'ಕಾದೇ ಇರುವಳು ರಾಧೆ' ಎಂಬ ಕಾದಂಬರಿಯನ್ನು ಬರೆದು, ರಾಧಾ–ಕೃಷ್ಣರ ಪ್ರೇಮ ಕಥೆಯ ಹೊಸ ಪರಿಪ್ರೇಕ್ಷ್ಯವನ್ನು ನಿರ್ಮಾಣ ಮಾಡಿದ್ದ ಐತಾಳರ ಇತ್ತೀಚಿನ ಕಾದಂಬರಿ 'ತಲೆಮಾರ ಸೆಲೆ' (೨೦೧೨). ನಾಲ್ಕು ತಲೆಮಾರುಗಳ ಮಧ್ಯಮ ವರ್ಗದ ಕುಟುಂಬವೊಂದು ಮಲೆನಾಡ ಮಡಿಲಿನಿಂದ ಅಮೆರಿಕೆಗೆ ವಲಸೆ ಹೋಗಿ ಅಲ್ಲಿಂದ ಹಿಮ್ಮುಖ ಚಲನೆಗೆ ಒಳಪಡುವ ಕಥನವನ್ನು ಸವಿವರವಾಗಿ ಕಾದಂಬರಿ ನಾಲ್ಕುವರೆ ನೂರು ಪುಟಗಳಲ್ಲಿ ನಿರೂಪಿಸುತ್ತಾ ಸಾಗುತ್ತದೆ. ಕೊಕ್ಕೋಡು, ಚಿತ್ರಪಾಡಿಯಲ್ಲಿ ಶುರುವಾಗಿ, ಅಮೆರಿಕದಲ್ಲಿ ಸಾಗಿ, ಮರಳಿ ಮೂಲದೆಡೆಗೆ ಮುಖ ಮಾಡುವ ಕಥೆ ಆಕರ್ಷಕವಾದುದು. ಕಾರಂತರ 'ಮರಳಿ ಮಣ್ಣಿಗೆ' ಇದ್ದ ನೆಲದಲ್ಲೇ ಸಾಮಾಜಿಕ ಸ್ಥಿತ್ಯಂತರಗಳನ್ನು ಅನುಭವಿಸುವ ತಲೆಮಾರುಗಳ ಕಥೆಯಾದರೆ, 'ತಲೆಮಾರ ಸೆಲೆ' ವಲಸೆ ಹೋದವರ ಬದುಕು ಬವಣೆಗಳನ್ನು ಬಯಲಾಗಿಸುತ್ತದೆ.

ಜೀವವಿಜ್ಞಾನ ಕ್ಷೇತ್ರದಲ್ಲಿ ನುರಿತ ವಿಜ್ಞಾನಿಯಾದ ಪ್ರಭಾಕರ ಅವಕಾಶವನ್ನರಿಸಿ, ತನ್ನ ವೈಜ್ಞಾನಿಕ ಕೌಶಲಕ್ಕೆ ವೇದಿಕೆಯನ್ನು ಹುಡುಕಿ ಅಮೆರಿಕಕ್ಕೆ ವಲಸೆ ಹೋಗುತ್ತಾನೆ. ಹೀಗೆ ಹೋಗುವಾಗ ಅವನೊಂದಿಗೆ, ಮಲೆನಾಡಿನ ಕೊಕ್ಕೋಡಿನಲ್ಲಿ ಜನಿಸಿ, ಸಾಂಪ್ರದಾಯಿಕ ಕುಟುಂಬದ ಮೌಢ್ಯದಿಂದಾಗಿ ಕಾಲೇಜು ವಿದ್ಯಾಭ್ಯಾಸದಿಂದ ವಂಚಿತಳಾಗಿದ್ದ ಅವನ ಪತ್ನಿ ಸುಮತಿಯೂ ಇದ್ದಾಳೆ. ಇಡೀ ಕಾದಂಬರಿಯುದ್ದಕ್ಕೂ ತನ್ನ ವ್ಯಕ್ತಿತ್ವದ ಅನನ್ಯತೆಯಿಂದಾಗಿ ಬೆಳೆಯುತ್ತಾ ಸಾಗುವ ಪಾತ್ರ ಸುಮತಿಯದು. ಲೇಖಕರ ವಿಶೇಷ ಕಾಳಜಿಯನ್ನು ಧಾರಣ ಮಾಡಿರುವ ಪಾತ್ರವಾಗಿ ಅವಳು ಗಮನ ಸೆಳೆಯುತ್ತಾಳೆ. ಕರ್ನಾಟಕದ ಕುಗ್ರಾಮವೊಂದರಿಂದ ಏಕಾಏಕಿ ಅಮೆರಿಕಾಕ್ಕೆ ಹೋಗಿ ಅಲ್ಲಿ ಅವಳು ಅನುಭವಿಸಬೇಕಾಗಿ ಬರುವ ಮಾನಸಿಕ ಒತ್ತಡಗಳು, ದ್ವಂದ್ವಗಳು ಮತ್ತು ಪರಕೀಯತೆ ಇವೆಲ್ಲವೂ ಕೇವಲ ಸುಮತಿಯದು ಮಾತ್ರ ಅನ್ನಿಸಲಾರದು. ನಿರೂಪಣೆಯ ಪ್ರಾಮಾಣಿಕತೆ ಮತ್ತು ಅನುಭವದ ಸಾಂದ್ರತೆಯಿಂದಾಗಿ ಇದು ಹೀಗೆ ವಲಸೆ ಹೋದ ಹೆಣ್ಣು ಮಕ್ಕಳ ಸಾಮಾನ್ಯ ಸ್ಥಿತಿಯೇ ಅನ್ನಿಸುತ್ತದೆ. ಇವೆಲ್ಲಕ್ಕಿಂತ ಮುಖ್ಯವಾಗಿ ಸುಮತಿ ತನ್ನೆಲ್ಲ ಕಾಳಿಕೆಗಳನ್ನು ಕಳೆದುಕೊಂಡು ಲಾಸ್ ಏಂಜಲಿಸ್‌ನಲ್ಲಿ ವಿದ್ಯಾಭ್ಯಾಸ ಮುಂದುವರೆಸಿ, ಉತ್ತಮ ಲೇಖಕಿಯಾಗಿ ನೆಲೆ ನಿಲ್ಲುವ ವಿಕಾಸದ ಕ್ರಮ ವಿಶೇಷವೆನಿಸುತ್ತದೆ. ಈ ಜೀವನ ಪ್ರಯಾಣದಲ್ಲಿ ಸುಮತಿ, ಮಗಳಾಗಿ, ಹೆಂಡತಿಯಾಗಿ, ತಾಯಿಯಾಗಿ, ಅಜ್ಜಿಯಾಗಿ ಸಾಗುವ– ಮಾಗುವ ರೀತಿ; ವ್ಯಕ್ತಿತ್ವದ ವಿಭಿನ್ನ ಹಂತಗಳ ನಿರೂಪಣೆ ಆಕರ್ಷಕವಾಗಿ ಬಂದಿವೆ. ಈ ಪಾತ್ರಕ್ಕೆ ಹೊಂದಿಕೊಂಡು ಕ್ರಿಯಾಶೀಲವಾಗುವ ಇತರ ಸ್ತ್ರೀ ಪಾತ್ರಗಳ ಬಗ್ಗೆ ಲೇಖಕರಿಗೆ ಇದೇ ಬಗೆಯ ಆಸ್ಥೆ ಇಲ್ಲ. ಲೇಖಕರೇ ಹೇಳಿರುವಂತೆ ಇಲ್ಲಿಯ ಬರವಣಿಗೆಗೆ ಒಂದು ಸ್ಪಷ್ಟ ಉದ್ದೇಶವಿದೆ. 'ಕಾದಂಬರಿಯಲ್ಲಿ ಅಮೆರಿಕಾದ ಭಿನ್ನ ಸಂಸ್ಕೃತಿಯ ಮಧ್ಯೆ ಭಾರತೀಯ ಮೌಲ್ಯಗಳನ್ನು ಕಾಪಾಡಿಕೊಂಡು ಬರುವ ಉದ್ದೇಶ ನನ್ನದು. ಇಲ್ಲಿ (ಅಮೆರಿಕಾ) ನೆಲೆಸಿದ ಎರಡನೆಯ ಪೀಳಿಗೆಯವರಿಗೆ ತಮ್ಮ ಬೇರಿನ ಕಾಳಜಿ ಇರದೆ, ಮೂರನೆಯ ಪೀಳಿಗೆಯವರು ತಮ್ಮ ಮೂಲವನ್ನು ಹುಡುಕುತ್ತಾರೆ– ಎಂಬ ಮನಃಶಾಸ್ತ್ರಜ್ಞರ ಅಭಿಪ್ರಾಯವನ್ನು ಇಲ್ಲಿ ಸಮರ್ಥಿಸುವ ಪ್ರಯತ್ನ ಮಾಡಿದ್ದೇನೆ. ವಲಸೆ ಬಂದ ಒಂದು ಸಾಮಾನ್ಯ ವರ್ಗದ ಕುಟುಂಬ ಹೇಗೆ ತಾವು ಬಹುಕಾಲದಿಂದ ಅನುಸರಿಸಿ ಬಂದ ಸಾಂಪ್ರದಾಯಿಕ ಮೌಲ್ಯಗಳನ್ನು ಮರೆಯದೆ, ನೆಲಸಿದ ಹೊಸ ನಾಡಿಗೆ ಹೊಂದಿಕೊಳ್ಳುವ ಪ್ರಯತ್ನದಲ್ಲಿ ಎದುರಿಸಿದ ಸಮಸ್ಯೆಗಳಿಗೆ ಹೇಗೆ ಪರಿಹಾರ ಪಡೆಯಿತು ಎಂಬುದನ್ನು ಅರಿವು ಮಾಡಿಕೊಡುವುದು ನನ್ನ ಮುಖ್ಯ ಉದ್ದೇಶವಾಗಿದ್ದು, ಆ ಗುರಿ ಮುಟ್ಟುವಲ್ಲಿ ಕತೆಯ ತಿರುವು ಬದಲಾಗುತ್ತ ಹೋಗುತ್ತವೆ' (ಪ್ರಾವೇಶಿಕ ನುಡಿ). ಈ ಉದ್ದೇಶದ ಈಡೇರಿಕೆಗಾಗಿ ಇಡೀ ಕಾದಂಬರಿಯ ಬರವಣಿಗೆ ನಡೆದಿರುವುದು ಸ್ಪಷ್ಟ.

ತಲೆಮಾರುಗಳ ಅಂತರದಲ್ಲಿ ಅಮೆರಿಕಾದ ಬದುಕೂ ಅನಾವರಣಗೊಳ್ಳುವುದರಿಂದ, ಪರಿಚಿತರು– ಭಾರತೀಯರು – ಕರ್ನಾಟಕದವರು ಜೊತೆಯಾಗಿ ಸಿಕ್ಕಾಗ ಆಗುತ್ತಿದ್ದ ಸಂತೋಷ; ಇಲ್ಲಿಯ ಸಂಪ್ರದಾಯ–ಆಚರಣೆಗಳನ್ನು ಅಲ್ಲಿಯೂ ಆಚರಿಸುವಾಗಿನ ಸಂಭ್ರಮ ಮತ್ತು ಆ ಮೂಲಕ ತಾಯ್ನೆಲದೊಂದಿಗೆ ನಂಟನ್ನು ಅಂಟಿಸಿಕೊಂಡಿರುವೆವೆಂಬ ಸಮಾಧಾನ... ಹೀಗೆ ಕಾದಂಬರಿ ಸಂಸ್ಕೃತಿಯ ಬೇರಿನ ಅನನ್ಯತೆಯ ಭದ್ರತೆಗೆ ಅವಧಾರಣೆಯನ್ನು ಕೊಡುತ್ತಾ ಸಾಗುತ್ತದೆ. ಇದಕ್ಕೆ ನಿಜವಾದ ಸಮಸ್ಯೆ ಎದುರಾಗುವುದು ಜಯರಾಮ ಮತ್ತು ಮೇಗನ್‌ರ ಮದುವೆಯ ಮೂಲಕ. ಮೇಗನ್ ಅಮ್ಮ ಮೆಲಿಸ್ಸಾಳ ವರ್ತನೆ ಸ್ವತಃ ಕಾದಂಬರಿಕಾರರ ಅನಾದರಕ್ಕೂ ತುತ್ತಾಗುತ್ತದೆ. ಸಾಂಸ್ಕೃತಿಕ ಸಂಘರ್ಷದ ಅನಿವಾರ್ಯತೆ ಮತ್ತು ಅದನ್ನು ಎದುರಿಸುವಲ್ಲಿ ಸಾಂಪ್ರದಾಯಿಕ ಮನಸ್ಸುಗಳು ತೋರಿಸಬೇಕಾದ ಔದಾರ್ಯ ಇವುಗಳ ಜಟಾಪಟಿ ಇಲ್ಲಿ ನಡೆಯುತ್ತದೆ. ಹೀಗಾಗಿಯೇ ಐತಾಳರು ಹೇಳುವಂತೆ 'ಸಂಕುಚಿತತೆ ಮತ್ತು ಉದಾರತ್ವ' ಇವೆರಡು ಸಂಘರ್ಷ ಮತ್ತು ಸಂಧಾನಗಳ ಮೇಲೆ ಬೆಳಕು ಚೆಲ್ಲುವ ಕಾರ್ಯವನ್ನು ಕಾದಂಬರಿ ಮಾಡಿದೆ.

ವಲಸೆ ಹೋದ ಕುಟುಂಬ ತಲೆಮಾರ ಅಂತರದಲ್ಲಿ ಅನುಭವಿಸುವ ಸಂಕಷ್ಟಗಳನ್ನು ಮಾತ್ರ ಕಾದಂಬರಿ ಒಮ್ಮುಖವಾಗಿ ಚಿತ್ರಿಸಿಲ್ಲ. ಬದಲಿಗೆ ಕೊಕ್ಕೋಡಿನಲ್ಲಿ ಸುಮತಿಯ ಅಮ್ಮ ಸಿಂಗಾರೆಮ್ಮ ಮತ್ತು ತಮ್ಮ ಶ್ರೀನಿವಾಸನ ಹೆಂಡತಿ ವಿಶಾಲಾಕ್ಷಿ ಇವರ ಮಧ್ಯದ ಹೊಂದಾಣಿಕೆಯ ಸಮಸ್ಯೆಯನ್ನೂ ನಿರೂಪಿಸಿದೆ. ಅಂದರೆ ಸಾಂಸಾರಿಕ ಸಮಸ್ಯೆಗಳು ಯಾವ ನೆಲದಲ್ಲಿಯೂ ಸಹಜವಾದವು, ಅದೊಂದು 'ಸಾಗರ' ವೆಂಬ ಪಾರಂಪರಿಕ ನಂಬಿಕೆಯ ಹೊಸ ರೂಪ ಇಲ್ಲಿ ಅನಾವರಣವಾಗುತ್ತದೆ. ಪ್ರಭಾಕರ ಐತಾಳರ ಆಸ್ತಿಯನ್ನು ನಿರಾಕರಿಸುವ, ಆದರೂ ಅವರು ತಮ್ಮ ಗ್ರಹಿಕೆಯಂತೆ ವಿಲ್ ಮಾಡಿಸುವ, ಮುಂದೆ ಪ್ರಭಾಕರನ ಮೊಮ್ಮಗ ದಿನೇಶ (ಡೆನಿಕ್) ಅದಕ್ಕೆ ವಾರಸುದಾರನಾಗುವ ಪ್ರಕ್ರಿಯೆಗಳೆಲ್ಲ ಲೆಕ್ಕಾಚಾರದಂತೆಯೇ ಸಾಗಿ ಅಂತ್ಯ ಕಾಣುತ್ತವೆ. ಸಂಸ್ಕೃತಿಯ ಭಿನ್ನತೆಯ ಕಾರಣಕ್ಕಾಗಿಯೇ ಕಾದಂಬರಿಯಲ್ಲಿ ನಡೆಯುವ ಸುಮತಿ–ಪ್ರಭಾಕರ, ಮೇಗನ್–ಮೆಲಿಸ್ಸಾ, ಮೇಗನ್–ಜಯರಾಮ್ ಇವರ ನಡುವಿನ ವಾಗ್ವಾದಗಳು ಅಂತರ್ ಸಾಂಸ್ಕೃತಿಕ ಪಠ್ಯವೆನ್ನಿಸುವುದ–ರೊಂದಿಗೆ, ತಮ್ಮ ಜಟಿಲತೆಯ ದರ್ಶನ ಮಾಡಿಸುತ್ತವೆ. ಇದೇ ಕಾರಣಕ್ಕೆ ಇಲ್ಲಿ ಮದುವೆ, ಗಂಡು–ಹೆಣ್ಣಿನ ಸಂಬಂಧಗಳು ಇಂತಹ ಸಾಮಾನ್ಯ ಸಂಗತಿಗಳೂ ಸಂಕೀರ್ಣಗೊಳ್ಳುತ್ತಾ ಸಾಗುತ್ತವೆ.

ಕಾದಂಬರಿಯ ಓದಿನುದ್ದಕ್ಕೂ ಇದು ಲೇಖಕರದೇ ಅನುಭವ ಕಥನವೇನೊ ಎಂಬ ಅನುಮಾನ ಬರುತ್ತಲೇ ಇರುತ್ತದೆ. ಸ್ವತಃ ವಲಸೆಹೋಗಿರುವ ಲೇಖಕರು ಕಾದಂಬರಿಯ ಪ್ರಧಾನ ಪಾತ್ರವಾದ ಪ್ರಭಾಕರನದೇ ವೃತ್ತಿಯವರು ಕೂಡ; ಇದೂ ಮೊದಲಿನ ಅನುಮಾನಕ್ಕೆ ಇಂಬುಕೊಡುತ್ತದೆ. ಆದರೆ ಲೇಖಕರೇ ಸ್ಪಷ್ಟಪಡಿಸಿದ್ದಾರೆ; 'ಕತೆಯಲ್ಲಿ ಬರುವ ಹೆಚ್ಚಿನ ನಿರೂಪಣೆಗಳು, ಪಾತ್ರಗಳು, ಸಂದರ್ಭಗಳು–ಎಲ್ಲವೂ

ಕಾಲ್ಪನಿಕ. ಅಲ್ಲಲ್ಲಿ ಏನಾದರೂ ಹೋಲಿಕೆಗಳು ಕಂಡುಬಂದಲ್ಲಿ ಅದು ಕೇವಲ ಆಕಸ್ಮಿಕ! ಕಥಾನಾಯಕನ ಮತ್ತು ಲೇಖಕನ ಲಾಸ್ಟ್ ನೇಮ್ ಎರಡೂ 'ಐತಾಳ' ನಾಗಿದ್ದುದಕ್ಕೆ ಏನೂ ಸಂಬಂಧವಿಲ್ಲ'–ಎಂದು. ಆದರೆ ಕಾದಂಬರಿಯ ನಿರೂಪಣೆಯ ಓಘ, ಅನುಭವದ ಪ್ರಾಮಾಣಿಕತೆ ಮತ್ತು ನಿಖರತೆಗಳು ಲೇಖಕರ ಸ್ವಾನುಭವ ದ್ರವ್ಯದ ಹೂರಣವನ್ನು ಸಂಪೂರ್ಣವಾಗಿ ನಿರಾಕರಿಸಲು ಒಪ್ಪುವುದಿಲ್ಲ.

ಬಹುಶಃ ಹೀಗೆ ವಲಸೆಹೋದ ಬಹುಸಂಖ್ಯಾತ ಭಾರತೀಯರಲ್ಲಿರಬಹುದಾದ, ತಾಯ್ನೆಲದ ಮೌಲ್ಯಗಳನ್ನು ಮರೆಯದೇ ಅದನ್ನು ಅಮೆರಿಕದ ಸಂಸ್ಕೃತಿಯೊಂದಿಗೆ ಬೆರೆಸಿ, ಒಂದು ಮಧ್ಯಮ ಮಾರ್ಗವನ್ನು ನಿರ್ಮಿಸಿಕೊಂಡು ಬದುಕುವ ಪ್ರವೃತ್ತಿ ಮತ್ತು ಮನಃಸ್ಥಿತಿ ಕಾದಂಬರಿಯಲ್ಲಿ ಪ್ರತಿಪಾದಿತವಾಗಿದೆ. ಹೀಗೆ ಅಮೆರಿಕದಲ್ಲಿ ವಾಸಿಸುವ ಭಾರತೀಯ ಮೂಲದ ಕುಟುಂಬಗಳ ಮುಂದಿನ ತಲೆಮಾರಿನವರು ತಮ್ಮ ತಾಯ್ನೆಲವನ್ನು ಮರೆಯದೆ, ಭಾರತೀಯ ಕೊಂಡಿಯನ್ನು ಉಳಿಸಿಕೊಂಡು ಬರಬೇಕೆನ್ನುವ ಆಶಯ ಕಾದಂಬರಿಯಲ್ಲಿ ಅನುರಣಿತವಾಗಿದೆ. ಹೀಗಾದಾಗ ಭಾರತ–ಅಮೆರಿಕಾದ ಮಧ್ಯೆ ಸ್ನೇಹದ ಸೇತುವೆ ನಿರ್ಮಾಣವಾಗುತ್ತದೆ ಎಂಬ ಆದರ್ಶವನ್ನು ಲೇಖಕರು ಹೊಂದಿದ್ದಾರೆ. ಕಾದಂಬರಿ ಕೂಡಾ ಅದೇ ಆಶಯದಲ್ಲಿ ಪರ್ಯವಸಾನಗೊಳ್ಳುತ್ತದೆ.

*

ನಾಗ ಐತಾಳರು ಈ ಮೊದಲು ತಾವು ಪ್ರಕಟಿಸಿರುವ ಹತ್ತಾರು ಪುಸ್ತಕಗಳಿಂದ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ವಿಶಿಷ್ಟ ಸ್ಥಾನಮಾನಗಳನ್ನು ಪಡೆದುಕೊಂಡಿದ್ದಾರೆ. ಅವರ ಆತ್ಮಕಥನ–'ಅಮೆರಿಕನ್ನಡಿಗನೊಬ್ಬನ ದಿನಚರಿಯಿಂದ' (೨೦೦೨) ಹಲವಾರು ಚರ್ಚೆಗಳನ್ನು ಹುಟ್ಟು ಹಾಕಿರುವ ಕೃತಿ. ಮಕ್ಕಳಿಗಾಗಿ ಕಟ್ಟು ಕತೆಗಳ ಒಂದು ಸಂಕಲನ 'ಒಂದಾನೊಂದು ಕಾಲದಲ್ಲಿ' (೨೦೦೭) ಯನ್ನು ಪ್ರಕಟಿಸಿದ್ದಾರೆ. 'ಕಲಬೆರಕೆ' (೨೦೦೮) ಅವರ ಪ್ರಬಂಧಗಳ ಸಂಕಲನ. ಇವುಗಳೊಂದಿಗೆ ಐತಾಳರು ಯೋಜಿಸಿ, ಸಂಪಾದಿಸಿರುವ ಕನ್ನಡದ ಹಿರಿಯ ಧೀಮಂತ ಲೇಖಕರ ಕಾಣ್ಕೆಗಳನ್ನು ಗೌರವಿಸುವ, ವಿಮರ್ಶಿಸುವ ಕೃತಿಮಾಲೆ ಬಹಳ ಮುಖ್ಯವಾದುದು. 'ಕಾರಂತರ ಚಿಂತನ' (೨೦೦೦), 'ಕುವೆಂಪು ಸಾಹಿತ್ಯ ಸಮೀಕ್ಷೆ' (೨೦೦೪), 'ಯದುಗಿರಿಯ ಬೆಳಕು' (೨೦೦೬), 'ಕನ್ನಡದಮರಚೇತನ' (೨೦೦೨), 'ಅನಂತಮುಖದ ಮೂರ್ತಿ', 'ಗೆಲುವಿನ ಚಿಲುಮೆ ರಾಜರತ್ನಂ', 'ಬೇಂದ್ರೆ ಅಂದ್ರೆ' ಹೀಗೆ ಕನ್ನಡದ ಹಿರಿಯ ತಲೆಮಾರಿನ ಲೇಖಕರ ಸಾಹಿತ್ಯದ ಕುರಿತು ಅಮೆರಿಕನ್ನಡಿಗ ಸಹೃದಯರಿಂದ ಲೇಖನಗಳನ್ನು ಬರೆಸಿ, ತಿದ್ದಿ–ತೀಡಿ ಅದನ್ನು ಸಂಗ್ರಹ ರೂಪದಲ್ಲಿ ಪ್ರಕಟಿಸಿದ್ದಾರೆ. ಆಯಾ ಲೇಖಕರ ಬಗ್ಗೆ ಅಭ್ಯಾಸ ಮಾಡುವವರು ಈ ಹೊತ್ತಗೆಗಳನ್ನು ನೋಡದೇ ಮುಂದೆ ಹೋಗುವಂತೆಯೇ ಇಲ್ಲ – ಎಂಬ ಮಟ್ಟಿಗಿನ ಅಸ್ತಿತ್ವವನ್ನು ಅವು ತೋರ್ಪಡಿಸಿವೆ.

ಶ್ರೀ ಐತಾಳರು ತಾವು ಸಂಪಾದಿಸಿದ ಕೃತಿಗಳಲ್ಲಿ ಆಯಾ ಲೇಖಕರ ಕೃತಿಗಳ ಬಗ್ಗೆ ಬರೆದಿರುವ ವಿಮರ್ಶಾ ಪ್ರಬಂಧಗಳು ತುಂಬಾ ವಿದ್ವತ್‌ಪೂರ್ಣವಾದವು. ಕೃತಿಯ


ಆಳವನ್ನು ಅದರ ಸಾಂಸ್ಕೃತಿಕ ಸಂದರ್ಭದಲ್ಲಿಟ್ಟು ಸುದೀರ್ಘವಾಗಿ ಪರಿಶೀಲಿಸುವ ಗುರುತಿಸುವ ಕೆಲಸವನ್ನು ಅವರು ಶ್ರದ್ಧೆಯಿಂದ ಮಾಡಿದ್ದಾರೆ. ಚಿತ್ತಾಲರ ಕೇಂದ್ರ ವೃತ್ತಾಂತ ಕಾದಂಬರಿಯನ್ನು ಕುರಿತ ತಮ್ಮ ಲೇಖನದಲ್ಲಿ ನಾಗ ಐತಾಳರು, ಅದರ ಶೀರ್ಷಿಕೆಯ (ಕೇಂದ್ರ, ವರ್ತುಲ, ಪರಿಧಿ) ಮುಖಾಂತರವೇ ಕೃತಿಯ ಅನನ್ಯತೆಯನ್ನು ಅರಿಯುವ ಕಾರ್ಯ ಮಾಡಿದ್ದಾರೆ. ಇಂತಹ ಹಲವು ಪ್ರಯೋಗಗಳ ಮೂಲಕ ಅವರ ವಿಮರ್ಶಾ ಬರಹಗಳು ಗಮನ ಸೆಳೆಯುತ್ತವೆ.

'ಜೀವನ ರಹಸ್ಯ' (ಅಣುಜೀವ ವಿಜ್ಞಾನದ ಒಂದು ಸ್ಥೂಲ ಪರಿಚಯ) ಕೃತಿ ಕನ್ನಡಕ್ಕೆ ಶ್ರೀ ನಾಗ ಐತಾಳರ ಅಪೂರ್ವ ಕೊಡುಗೆ (೨೦೧೧) ತಮ್ಮ ಎರಡೂವರೆ–ಮೂರು ದಶಕಗಳ ಅಧ್ಯಯನದ ಸಾರವನ್ನು ಕನ್ನಡದಲ್ಲಿ ಕಟ್ಟಿಕೊಡುವ ಐತಾಳರ ಮಹತ್ಕೃತಿ. ತಮ್ಮ ವೈಜ್ಞಾನಿಕ ಜ್ಞಾನವನ್ನು ತಾವು ಅಭ್ಯಾಸ ಮಾಡಿದಷ್ಟೇ ಉತ್ಸಾಹ ಮತ್ತು ಉತ್ಕಟತೆಯಿಂದ ಐತಾಳರು ಇಲ್ಲಿ ಹಂಚಿಕೊಂಡಿದ್ದಾರೆ. ಪಠ್ಯಪುಸ್ತಕಗಳನ್ನು ಹೊರತುಪಡಿಸಿದರೆ ಕನ್ನಡದಲ್ಲಿಯೇ ರಚಿತವಾಗಿರುವ ಜೀವವಿಜ್ಞಾನದ ಅನನ್ಯ ಗ್ರಂಥಗಳಲ್ಲಿ ಇದಕ್ಕೆ ಅಗ್ರಸ್ಥಾನ ಸಲ್ಲಬೇಕು. ಸಹಸ್ರಾರು ಜೀವ'ಣಗಳಿಂದ ರಚಿತವಾಗಿರುವ ಮನುಷ್ಯನ ಅಂಗಾಂಗಗಳು ಅವುಗಳ ಮೂಲಕವೇ ತಮ್ಮ ಬದುಕನ್ನು ಸಾಗಿಸಿಕೊಂಡು ಹೋಗುತ್ತವೆ. ಈ ಜೀವಕಣಗಳ ಮರು ಉತ್ಪತ್ತಿಗೆ ಕಾರಣವಾಗಿರುವ ಡಿ.ಎನ್.ಎ. ಎಂಬ ಅಣು ಪದಾರ್ಥದ ಅಸಾಮಾನ್ಯ ರಹಸ್ಯವನ್ನು ಕನ್ನಡದಲ್ಲಿ ಸಾಮಾನ್ಯರಿಗೂ ತಿಳಿಯುವಂತೆ ಐತಾಳರು ನಿರೂಪಿಸಿದ್ದಾರೆ.

ಎಂಬತ್ತೊಂದರ (ಜನನ : ೧೯೩೨) ಇಳಿವಯಸ್ಸಿನಲ್ಲಿಯೂ ತಾವೇ ಕಟ್ಟಿದ ಅಮೆರಿಕಾದ 'ಕನ್ನಡ ಸಾಹಿತ್ಯ ರಂಗ' ಎಂಬ ಸಂಸ್ಥೆಯ ಮೂಲಕ ಕ್ರಿಯಾಶೀಲರಾಗಿ ತೊಡಗಿಸಿಕೊಂಡಿರುವ ಡಾ. ನಾಗ ಐತಾಳರು ಕನ್ನಡಿಗರ ಗೌರವ, ಆದರಗಳಿಗೆ ಪಾತ್ರರಾಗಿದ್ದಾರೆ. ತಮ್ಮ ಅಪರೂಪದ ಬರವಣಿಗೆಯಿಂದಾಗಿ ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದ್ದಾರೆ. ಈಗ ಇಂದಿಗೆ ಸರಿಯಾಗಿ ಹತ್ತು ವರ್ಷಗಳ ಹಿಂದೆ ಬೆಂಗಳೂರಿನಲ್ಲಿ ಅಮೆರಿಕನ್ನಡಿಗರೊಬ್ಬರ ಪುಸ್ತಕ ಬಿಡುಗಡೆ ('ಅಮೆರಿಕಾಯಣ') ಸಮಾರಂಭದಲ್ಲಿ ಕವಿ ಡಾ. ಬಿ. ಸಿ. ರಾಮಚಂದ್ರ ಶರ್ಮರು 'ಅಮೆರಿಕನ್ನಡಿಗರ ಸಾಹಿತ್ಯ ಪ್ರೀತಿಯನ್ನು ಬೂಟಾಟಿಕೆ, ಪಾಪಮನೋಭಾವ' ಇತ್ಯಾದಿಯಾಗಿ ಕರೆದಿದ್ದು, ವ್ಯಾಪಕ ವಿರೋಧಕ್ಕೆ ಎಡೆಮಾಡಿಕೊಟ್ಟಿತ್ತು. ಇಂದು ಅವರು ಇದ್ದಿದ್ದರೆ ಶ್ರೀ ನಾಗ ಐತಾಳರಂತಹ ನೂರಾರು ಅನಿವಾಸಿ ಕನ್ನಡಿಗರ ಸಾಹಿತ್ಯ ಕಾಣ್ಕೆಯನ್ನು ಮೆಚ್ಚದಿರಲು ಸಾಧ್ಯವೇ ಇರಲಿಲ್ಲ. ಇದನ್ನೇ ಚರಿತ್ರೆಯ ವ್ಯಂಗ್ಯವೆನ್ನುವುದು.

ಬೆಂಗಳೂರಿನ ವಿದ್ಯಾವರ್ಧಕ ಸಂಘದ ಕಾಲೇಜು ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಡಾ. ಚಂದ್ರಶೇಖರ ಕಂಬಾರರು ಪುಸ್ತಕ ಬಿಡುಗಡೆ ಮಾಡಿದ ಸಂದರ್ಭ. ಪುಸ್ತಕ ಪರಿಚಯ ಭಾಷಣದ ಲಿಖಿತ ರೂಪ.

ತಲೆಮಾರು(ಕಾದಂಬರಿ) ಸಾಹಿತ್ಯಾಂಜಲಿ ಕ್ಯಾಲಿಫೋರ್ನಿಯಾ ಮತ್ತು ಅಭಿನವ ಬೆಂಗಳೂರು.



ಅಪೂರ್ವ ಅನುಭೂತಿಯ ಆತ್ಮಕಥನ 'ಕಾಲ ಉರುಳಿ..'

– ಪಾರ್ವತಿ ಜಿ. ಐತಾಳ್

ನಾಗ ಐತಾಳರ ಆತ್ಮಕಥನ 'ಕಾಲ ಉರುಳಿ ಉಳಿದುದು ನೆನಪಷ್ಟೆ' ಓದುಗರನ್ನು ತನ್ನೊಂದಿಗೆ ಸೆಳೆದೊಯ್ಯುವ ಒಂದು ಸುಂದರ ಅನುಭವಕಥನ. ತಮ್ಮ ಬಹಳಷ್ಟು ಆತ್ಮಕಥಾತ್ಮಕ ವಿವರಗಳನ್ನು ಅವರು ಇದಕ್ಕೆ ಮೊದಲಿನ ಎರಡು ಮೂರು ಕೃತಿಗಳಲ್ಲಿ ಹೇಳಿರುವರಾದರೂ ಅವರ ಬಾಲ್ಯ, ಯೌವನ, ವಾರ್ಧಕ್ಯಗಳ ಅನುಭವಗಳನ್ನೊಳಗೊಂಡ ಈ ಕೃತಿಯು ಅವರ ವ್ಯಕ್ತಿತ್ವದ ಹಲವು ಮುಖಗಳನ್ನು ಕಣ್ಣಿಗೆ ಕಟ್ಟುವಂತೆ ಪರಿಚಯಿಸುತ್ತದೆ. ಐತಾಳರು ಹುಟ್ಟಿ ಬೆಳೆದು ಆರಂಭಿಕ ಶಿಕ್ಷಣವನ್ನು ಪಡೆದ 'ಕೋಟ' ಎಂಬ ಪುಟ್ಟ ಊರಿನ ಅಂದಿನ ಪರಿಸರದ ವರ್ಣನೆ, ದೇವಸ್ಥಾನದ ಉತ್ಸವ, ಆಗರ್ಭ ಶ್ರೀಮಂತರೂ ಜಮೀನುದಾರರೂ ಆದ ಅವರ ಹಿರಿಯರು ಬಾಳಿ ಬದುಕಿದ ಅರಮನೆಯಂಥ ಪುರಾತನ ಮನೆಯ ವರ್ಣನೆ, ಕೂಡು ಕುಟುಂಬದಲ್ಲಿ ಐವತ್ತಕ್ಕೂ ಹೆಚ್ಚು ಮಂದಿಯ ಸಹಬಾಳ್ವೆಯ ಚಿತ್ರಣ, ಪೂಜೆ–ಪುನಸ್ಕಾರ, ಹಬ್ಬ–ಹರಿದಿನ, ಆಹಾರ ವೈವಿಧ್ಯತೆಗಳ ವರ್ಣನೆ ಅಣ್ಣ ತಮ್ಮಂದಿರು–ಅಕ್ಕ–ತಂಗಿಯರು, ಅಜ್ಜ, ಚಿಕ್ಕಪ್ಪ ದೊಡ್ಡಪ್ಪಂದಿರ ಜತೆಗಿನ ಸಂಬಂಧದ ವೈಖರಿ–ಹೀಗೆ ಎಲ್ಲರನ್ನೂ ಅಂದು ತಾವು ಕಂಡಂತೆ ಚಿತ್ರಿಸುವ ಕೃತಿಯ ಮೊದಲರ್ಧ ಭಾಗವು ಅಪೂರ್ವ ಚಿತ್ರಕ ಶಕ್ತಿಯಿಂದ ತುಂಬಿದೆ. ಮನೆಯ ಕಲಾತ್ಮಕ ರಚನೆ ಮತ್ತು ಕುಸುರಿ ಕೆಲಸಗಳ ಭವ್ಯತೆಯ ಇಂಚಿಂಚು ವರ್ಣನೆಯಂತೂ ಕಣ್ಣಿಗೆ ಕಟ್ಟುವಂತಿದೆ...

ತಾವು ಪ್ರಾಥಮಿಕ ಶಿಕ್ಷಣ ಪಡೆದ ಗಿಳಿಯಾರು ಶಾಲೆಯ ನೆನಪುಗಳು ಅವರಿಗೆ ಯಾವಾಗಲೂ ಸುಂದರವೆನ್ನಿಸಿದರೂ ನಿರಪರಾಧಿಯಾಗಿದ್ದ ತನ್ನನ್ನು ಶಿಕ್ಷಕರು ಅನ್ಯಾಯವಾಗಿ ಶಿಕ್ಷಿಸಿದ ಒಂದೆರಡು ಅನುಭವಗಳು ನೋಯಿಸುವ ಗಾಯಗಳಾಗಿ ಉಳಿದುಕೊಂಡದ್ದನ್ನು ಅವರು ಹೇಳುತ್ತಾರೆ. ಆದರೆ ತನ್ನ ತಮ್ಮಂದಿರನ್ನು ಗೋಳಾಡಿಸುತ್ತ ಅವರ ಪಾಲಿನ ತಿಂಡಿಯನ್ನು ಮೋಸದಿಂದ ಗೆಲ್ಲುತ್ತಿದ್ದ ಬಗ್ಗೆ ತಮ್ಮ ಪಶ್ಚಾತ್ತಾಪವನ್ನೂ ವ್ಯಕ್ತಪಡಿಸುತ್ತಾರೆ. ಕುಟುಂಬದೊಳಗೇ ಇದ್ದ ಚಿಕ್ಕಪ್ಪನ ವರ್ತನೆಯ ಬಗ್ಗೆ ಮುಚ್ಚು ಮರೆಯಿಲ್ಲದೆ ತಮ್ಮ ಅಸಮಾಧಾನವನ್ನು ವ್ಯಕ್ತಪಡಿಸುತ್ತಾರೆ. ಸಾಧು ಸ್ವಭಾವದವರು ಯಾರಾದರೂ ಸಿಕ್ಕರೆ ಅವರನ್ನು ನೋಯಿಸುವ ರೀತಿಯಲ್ಲಿ ತಮಾಷೆ ಮಾಡಿ ಮಜಾ ತೆಗೆದುಕೊಳ್ಳುವ ಕ್ರೌರ್ಯವನ್ನು ಲೇಖಕರು ಇಷ್ಟಪಡುವುದಿಲ್ಲ. ಅಲ್ಲದೆ ಜಾಣೆಯೂ ಸಹನಾಮಯಿಯೂ ಆದ ಹೆಂಡತಿ (ಕಿಟ್ಟಕ್ಕ) ಮನೆಯಲ್ಲಿರುವಾಗ ಮನೆಗೆಲಸದ ಚಂದುವನ್ನು ಉಪಪತ್ನಿಯಾಗಿಟ್ಟುಕೊಳ್ಳುವುದು ಮಾತ್ರವಲ್ಲದೆ ಅವಳಿಗೆ ಅನಗತ್ಯ ಸಲುಗೆ ಕೊಟ್ಟು ತಲೆಯ ಮೇಲೆ ಕೂರಿಸಿದ ಚಿಕ್ಕಪ್ಪನ ಬಗ್ಗೆ ಲೇಖಕರಿಗೆ ಎಳ್ಳಷ್ಟೂ ಗೌರವ ಇರುವುದಿಲ್ಲ. ಮೊದಲ ಹೆಂಡತಿ ಅಕಾಲ ಮರಣಕ್ಕೆ ತುತ್ತಾದಾಗ ತಂದೆಯವರು ತಮಗಿಂತ 27 ವರ್ಷ ಚಿಕ್ಕವಳಾದ ತನ್ನ ತಾಯಿಯನ್ನು ವಿವಾಹವಾಗಿದ್ದು, ಆದರೂ ಎಲ್ಲ ಕಷ್ಟಗಳನ್ನೂ ಧೈರ್ಯವಾಗಿ ಎದುರಿಸಿ ಇಡೀ ಕುಟುಂಬದ ಜವಾಬ್ದಾರಿಯನ್ನು ಆಕೆ ಯಶಸ್ವಿಯಾಗಿ ನಿರ್ವಹಿಸಿಕೊಂಡು ಬಂದಿದ್ದನ್ನು ಲೇಖಕರು ಬಹಳ ಮೆಚ್ಚುಗೆಯಿಂದ ನೆನಪಿಸಿಕೊಳ್ಳುತ್ತಾರೆ. ಆದರೆ ತಂದೆ ತಮ್ಮ ಹನ್ನೆರಡು ಮಂದಿ ಮಕ್ಕಳನ್ನು ವಿದ್ಯಾವಂತರನ್ನಾಗಿಸಲು ತುಂಬಾ ಕಷ್ಟಪಟ್ಟು ಬೇಕುಬೇಕಾದ ಎಲ್ಲ ವ್ಯವಸ್ಥೆಗಳನ್ನು ಮಾಡಿದರೂ ಅವರ ಬಗ್ಗೆ ಹೆಚ್ಚು ಸಲುಗೆ ಪ್ರೀತಿಗಳನ್ನು ಅವರು ಯಾಕೋ ಬೆಳೆಸಿಕೊಳ್ಳಲಿಲ್ಲ. ಆ ಬಗ್ಗೆ ಅವರು ಖೇದಪಡುತ್ತಾರೆ.


ಕೃತಿಯ ಉತ್ತರಾರ್ಧವನ್ನು ಪೂರ್ತಿಯಾಗಿ ಲೇಖಕರು ತಮ್ಮ ಒಡಹುಟ್ಟಿದವರ ಮತ್ತು ಬಂಧು ಬಳಗದವರ ಕುರಿತು ಮತ್ತು ಅವರೊಂದಿಗೆ ತಮ್ಮ ಸಂಬಂಧ ಹೇಗಿತ್ತು ಎಂಬುದನ್ನು ತೋರಿಸಲು ಬಳಸಿದ್ದಾರೆ. ಕಾದಂಬರಿಯೊಂದರ ಪಾತ್ರ ಚಿತ್ರಣದಂತೆ ಇಲ್ಲಿ ಎಲ್ಲರ ಕುರಿತಾದ ಸಮೃದ್ಧ ವಿವರಗಳಿವೆ. ಅದರಲ್ಲೂ ತನ್ನ ತಮ್ಮ ವಾಸುದೇವ ಸಾಕಷ್ಟು ಕಲಿತು ಪದವಿ ಗಳಿಸಿ ಒಳ್ಳೆಯ ಉದ್ಯೋಗ ಸಿಕ್ಕಿದರೂ ಅವೆಲ್ಲವನ್ನೂ ಬಿಟ್ಟು ಹಿರಿಯರು ಕಾಪಾಡಿಕೊಂಡು ಬಂದ ಆಸ್ತಿ-ಮನೆ ವ್ಯವಹಾರಗಳನ್ನು ನೋಡಿಕೊಳ್ಳಲೆಂದು ಊರಿಗೆ ಬಂದು ನೆಲೆಸಿ ಬೇಸಾಯದ ಕೆಲಸವನ್ನು ಕೈಗೊಂಡ ಬಗ್ಗೆ ಲೇಖಕರು ಅವನ ಬಗೆಗೆ ಕೃತಜ್ಞತೆಯಿಂದ ನೆನಪಿಸಿಕೊಳ್ಳುತ್ತಾರೆ. ಕಿರಿಯ ತಂಗಿ ಯಶೋದಾ ಬೆಂಗಳೂರಿನಲ್ಲಿ ನೆಲೆಸಿ ತಾವು ಪ್ರತಿ ಬಾರಿ ಅಮೆರಿಕಾದಿಂದ ಬಂದಾಗಲೂ ತನ್ನ ಮನೆಯಲ್ಲೇ ವಾರಗಟ್ಟಲೆ-ತಿಂಗಳುಗಟ್ಟಲೆ ನಿಸ್ಸಂಕೋಚವಾಗಿ ಉಳಿದುಕೊಳ್ಳಲು ವ್ಯವಸ್ಥೆ ಮಾಡುತ್ತಿರುವುದರ ಬಗ್ಗೆ ಲೇಖಕರಿಗೆ ಅಪಾರ ಸಂತೋಷವಿದೆ. ಬದುಕಿನಲ್ಲಿ ಎಷ್ಟೇ

ಏಳು ಬೀಳುಗಳಿದ್ದರೂ ಇಂದಿನ ಇಳಿವಯಸ್ಸಿನಲ್ಲಿ ಆ ಘಟನೆಗಳನ್ನು ಮೆಲುಕು ಹಾಕುವುದು ಅವರಿಗೆ ಹಿತವಾಗಿ ಕಾಣಿಸುತ್ತದೆ. ಅಂತೆಯೇ ಕೊನೆಯಲ್ಲಿ ಅವರು 'ಬದುಕಿನಲ್ಲಿ ಕಷ್ಟಗಳನ್ನು ಎದುರಿಸಲೇಬೇಕಾಗುತ್ತದೆ. ಆದರೆ ಎಂತಹ ಕಷ್ಟ ಬಂದರೂ ಅದನ್ನು ಸಹಿಸಿ, ಸರಿಪಡಿಸಿ ಮುಂದಕ್ಕೆ ಸಾಗುತ್ತಿದ್ದರೆ ನಾವು ಬಹಳಷ್ಟು ತೃಪ್ತಿ ಪಡೆಯುತ್ತೇವೆ. ಅಂದರೆ, ಮನಸ್ಸನ್ನು ನಿಯಂತ್ರಿಸಿಕೊಂಡು ನಮ್ಮ ನಮ್ಮ ಬದುಕನ್ನು ಸಮಯೋಚಿತವಾಗಿ ರೂಪಿಸಿಕೊಳ್ಳುವುದೇ ತೃಪ್ತಿಯ ಬಹು ಮುಖ್ಯ ಸಾಧನ' ಎಂಬ ತಾತ್ತ್ವಿಕ ನಿರ್ಣಯಕ್ಕೆ ಬರುತ್ತಾರೆ.

ತಮಗೆ ಅನುರೂಪಳಾಗಿ ತಮ್ಮ ಬಾಳನ್ನು ರೂಪಿಸಿ ಬದುಕನ್ನು ಅರ್ಥಪೂರ್ಣವಾಗಿಸಿದ ಮಡದಿ ಲಕ್ಷ್ಮಿ (ಪುಟ್ಟಮ್ಮ), ಕೌಟುಂಬಿಕ ಬದುಕಿನ ಭದ್ರತೆಯನ್ನಿತ್ತ ಮಕ್ಕಳಾದ ಅನುರಾಧಾ ಮತ್ತು ಅರವಿಂದರ ಬಗ್ಗೆ ಹೇಳಲು ಕೃತಿಯ ಒಂದು ಸಣ್ಣ ಅಧ್ಯಾಯವನ್ನಷ್ಟೇ ಕೊಟ್ಟದ್ದು ಆಶ್ಚರ್ಯ. ಆತ್ಮಕಥೆಯನ್ನು ತೀರಾ ಸ್ವಕೇಂದ್ರಿತವಾಗಿಸದೆ ಬದುಕಿನಲ್ಲಿ ಬೆರೆತುಹೋದ ಇತರರಿಗೆ ಪ್ರಾಮುಖ್ಯವನ್ನು ಕೊಟ್ಟು ಆತ್ಮಕತೆಗೊಂದು ಹೊಸ ಭಾಷ್ಯವನ್ನು ಬರೆಯುವುದು ಲೇಖಕರ ಉದ್ದೇಶವಾಗಿರಬಹುದು. ಕೃತಿಯುದ್ದಕ್ಕೂ ಬಳಸಿದ ಭಾಷಾ ಶೈಲಿ, ನಿರೂಪಣೆ ಮತ್ತು ಎಲ್ಲೂ ವಿಷಯಾಂತರಕ್ಕೆ ಹೋಗದ ಬಿಗಿಯಾದ ರಚನಾ ಬಂಧ ಮತ್ತು ಆತ್ಮಕಥೆಯಲ್ಲಿರಬೇಕಾದ ಪ್ರಾಮಾಣಿಕತೆಗಳು ಕೃತಿಯ ಗಟ್ಟಿತನಕ್ಕೆ ಕಾರಣವಾಗಿವೆ.

'ಕಾಲ ಉರುಳಿ ಉಳಿದುದು ನೆನಪಷ್ಟೆ' ಕೃತಿಯ ಬಗೆಗಿನ ವಿಮರ್ಶೆ.

ಪ್ರ: ಅಭಿನವ, ಬೆಂಗಳೂರು. ಮೊದಲ ಮುದ್ರಣ 2019



ಋತುಗಾನಕ್ಕೊಂದು ಸಮ್ಮಾನ

– ಪಿ. ಚಂದ್ರಿಕಾ

ಜೀವ ರಾಸಾಯನಿಕ ಶಾಸ್ತ್ರದ ವಿಜ್ಞಾನಿಯಾದ ನಾಗ ಐತಾಳರು ಕನ್ನಡ ಸಾಹಿತ್ಯ ಲೋಕಕ್ಕೆ ಅಪರಿಚಿತರಲ್ಲ. ಅನೇಕ ಸಂಪಾದಿತ ಕೃತಿಗಳು, ಅನುವಾದಗಳು, ನೆನಪುಗಳ ಮೂಲಕ ದೂರದ ನೆಲದಿಂದಲೇ ಕನ್ನಡವನ್ನು ಶ್ರೀಮಂತಗೊಳಿಸುತ್ತಿರುವ ಸ್ನೇಹಜೀವಿ. ಇವರೇಕೆ ಕವಿತೆ ಬರೆದರು? ಅದೂ ಈ ಇಳಿವಯಸ್ಸಿನಲ್ಲಿ ಎನ್ನುವ ಕುತೂಹಲ ನನಗೆ. ಯಾಕೆಂದರೆ ಪದ್ಯ ಬರೆಯುವ ಇರಾದೆ ಒಳಗೆ ಎಲ್ಲೋ ಇದ್ದರೂ ಆರಂಭದ ದಿನಗಳಲ್ಲಿ ಬರೆದು ಮುಗಿಸಿ ನಂತರ ಗದ್ಯದ ಕಡೆಗೆ ಜಾರುತ್ತಾರೆ. ಆದರೆ ನಾಗ ಐತಾಳರ ವಿಷಯಕ್ಕೆ ಇದು ಉಲ್ಟಾ ಆಗಿದೆ. ಅದು ಹೀಗೂ ಇರಬಹುದು–ವಯಸ್ಸು ಮಾಗುತ್ತಾ ಬಂದ ಹಾಗೇ ಭಾವನಾ ಪ್ರಪಂಚ ಹಿಗ್ಗುತ್ತಲೂ ಹೋಗಬಹುದು ಆಗ ಗದ್ಯಕ್ಕಿಂತ ಪದ್ಯ ಹೆಚ್ಚು ಹತ್ತಿರ ಅನ್ನಿಸಲೂಬಹುದು. ಇದೆಲ್ಲಾ ಸುಮ್ಮನೆ ಈಕ್ವೇಷನ್‌ಗಳು. ಪದ್ಯ ಇವ್ಯಾವುದನ್ನೂ ಧಾರಣೆ ಮಾಡುವುದಿಲ್ಲ.

ಪದ್ಯ ಹಾಗಿದೆ ಹೀಗಿದೆ ಎಂದು ಹೇಳುವುದರಲ್ಲಿ ಯಾವ ಅರ್ಥವೂ ನನಗೆ ಕಾಣುವುದಿಲ್ಲ. ಯಾಕೆಂದರೆ ಕವಿತೆ ಒಂದು ಅನುಭವ. ಅದರ ತೀವ್ರತೆ ಎಷ್ಟಿದೆ ಎನ್ನುವುದು ಅನುಭವಕ್ಕೆ ಬಂದರೆ ಸಾಕು. ಅದು ಇದೆ ಆಕಾಶದ ಅವಕಾಶದ ಹಾಗೆ, ನಾನು ಇದ್ದೇನೆ ಪರಾಗದ ಸಣ್ಣ ಧೂಳಿನ ಹಾಗೆ 'ಇರುವ ಅದು' ಮತ್ತು 'ಇರುವ ನಾನು' ಎದುರಾದಾಗ

ಜಗತ್ತಿನಲ್ಲೊಂದು ಬದಲಾವಣೆ ಆಗುತ್ತದೆ. ಅದು ನನ್ನೊಳಗಿನದ್ದೂ ಮತ್ತು ಆ ದೊಡ್ಡ ಅವಕಾಶದ್ದೂ ಹೌದು. ಹೀಗೆ ಎರಡಿದ್ದ ನಾನು ಮತ್ತು ಕವಿತೆ ಒಂದಾಗುವ ಅಪೂರ್ವ ಗಳಿಗೆಯಲ್ಲಿ ಅನುಭವಗಳು ತಳುಕು ಹಾಕಿಕೊಂಡು, ಒಂದನ್ನೊಂದು ತಾಳಿಕೊಂಡು, ಆತುಕೊಂಡು ಕಡೆಗೆ ಅವಿಚ್ಛಿನ್ನವಾದ ಅನುಭವಕ್ಕೆ ಕಾರಣವಾಗುತ್ತದೆ. ಈ ಅನುಭವವನ್ನು ಹೇಳುವುದು ಸುಲಭವಲ್ಲ. ಇದು ಪ್ರಾಣಘಾತಕ. ಅನುಭವದ ಪರಿಣಾಮವನ್ನು ವಿವರಿಸುವುದು ಪ್ರಾಣದ ಆಚೆಗೆ ಹೋಗಿಬಂದ ಹಾಗೆ ಎಂದು ಅಲ್ಲಮ ಹೇಳಿರುವುದು.

ಇದರ ಜೊತೆಗೆ ಇನ್ನೂ ಒಂದು ಸಮಸ್ಯೆ ಇದೆ. 'ಕವಿತೆ ಎಂದರೆ ತನ್ನನ್ನು ತಾನು ಹೇಳಿಕೊಳ್ಳುವುದು' ಎಂದು. ಗದ್ಯದಲ್ಲಿಲ್ಲದ ಆತ್ಮಚರಿತ್ರೆಯೊಂದು ನಮಗೇ ಗೊತ್ತಿಲ್ಲದೆ ಕವಿತೆಗಳಲ್ಲಿ ರೂಪುಗೊಂಡಿರುತ್ತದೆ. ಅದೊಂದು ವಿನ್ಯಾಸವೂ ಹೌದು. ಯಾರೋ ಬೆಳೆದ ತರಕಾರಿಯನ್ನು ನಮಗೆ ತೋಚಿದ ಹಾಗೇ ಅಡುಗೆ ಮಾಡುವುದಲ್ಲ. ನನ್ನ ತೋಟದಲ್ಲಿ ನಾನು ಏನನ್ನು ಬೆಳೆಯುತ್ತೇನೋ ಅದರಿಂದ ಒಂದು ಪಾಕವನ್ನು ಮಾಡಬೇಕಾಗುತ್ತದೆ. ಹಾಗೆಯೇ ವಿನಾಕಾರಣ ಗಿಡದಲ್ಲಿ ಒಂದು ಹಕ್ಕಿ ಕೂತು ಹಾಡುವುದಿಲ್ಲ. ಹಾಗೆ ನಮಗೆ ಅನ್ನಿಸಿದರೆ ಅದು ನಮ್ಮ ಮಿತಿಯೇ ಹೊರತು ಆ ಹಕ್ಕಿಯದ್ದಲ್ಲ. ಹಕ್ಕಿಗೆ ಒಂದು ಜೀವನ ಇದೆ ಅದಕ್ಕೊಂದು ಕ್ರಮ ಇದೆ, ಅದಕ್ಕೊಂದು ಆವರಣ ಇದೆ, ಅದಕ್ಕೊಂದು ಪರಿಸರ ಇದೆ, ಅದಕ್ಕೊಂದು ಹಳೆತನ, ಪ್ರೀತಿ ಪ್ರೇಮ ಪ್ರಣಯ, ವಾತ್ಸಲ್ಯ ಎಲ್ಲವೂ ಇದೆ. ಅದೆಲ್ಲವೂ ಸೇರಿ ಹಕ್ಕಿಯ ಹಾಡಾಗಿದೆ. ಒಬ್ಬ ಮನುಷ್ಯ ಖಂಡಿತಾ ಸುಮ್ಮನೆ ಪದ್ಯ ಬರೆಯುವುದಿಲ್ಲ.

ಹಾಗಾದರೆ ಕವಿತೆ ಉದ್ದೇಶರಹಿತವಾದ್ದೇ ಎಂದರೆ ಖಂಡಿತಾ ಅಲ್ಲ. ಅದರ ಉದ್ದೇಶ ನಮ್ಮನ್ನು ಮೀರುತ್ತಿರುತ್ತದೆ. ಬತ್ತುವ ಗಿಡಕ್ಕೆ ಮಳೆ ಹನಿಯೊಂದು ಚೈತನ್ಯ ತುಂಬುವ ಹಾಗೇ, ಯಾರಿಗೆ ಯಾವುದು ಬೇಕು? ಎನ್ನುವ ಮೂಲ ಪ್ರಶ್ನೆಯೊಂದಕ್ಕೆ ಜೀವನೂ ದೇವನೂ ಒಟ್ಟಿಗೆ ಉತ್ತರ ಹುಡುಕುವಂತೆ. ಇದ್ದಕ್ಕಿದ್ದಹಾಗೇ ಸಂಭವಿಸುವ ತಿಳಿವಿನ ಹಾಗೆ.

ಎಲ್ಲಿಂದೆಲ್ಲಿಗೆ ಮಾತು ಬೆಳೆಯುತ್ತಾ ಹೋಗುತ್ತದೆ! ಕವಿತೆ ಕೂಡಾ ಅತೀಂದ್ರಿಯವಾದ್ದು ಎನ್ನುವುದನ್ನು ಹೇಳುತ್ತಾ ಹೇಳುತ್ತಾ ನಮ್ಮನ್ನು ನಂಬಿಸಿದ್ದರ ಪರಿಣಾಮವಾ ಇದು? ಗೊತ್ತಿಲ್ಲ. ಆದರೆ ಇವೆಲ್ಲದರ ಜೊತೆಗೆ ನಾಗ ಐತಾಳರ ಪದ್ಯ ನನ್ನೊಳಗೆ ಇನ್ನಷ್ಟು ಸಂಗತಿಗಳನ್ನು ಬೆಸೆಯುತ್ತಾ ಬೆಸಗೊಳ್ಳುತ್ತಾ ಹೋಗುತ್ತಿರುವುದು ನನ್ನ ಈ ಮಾತುಗಳಿಗೆ ಕಾರಣವೂ ಇರಬಹುದು.

ನಾಗ ಐತಾಳರಿಗೆ ಕವಿತೆ ಎಂದರೆ ಇನ್ನೂ ಉಳಿದಿರುವ ಇಹದ ಋಣದ ಕಂತು, ಇದು ತೀರುವುದಲ್ಲ. ಸಂದ ಕಾಲದ ಮುಂಬರುವ ಕಾಲದ ಕನಸುಗಳ ಹಾಸು ನಡುವೆ ಉಳಿದಿರುವ ಇನ್ನೂ ಸಾಧಿಸಬೇಕಾದ ಅನೇಕ ಸಂಗತಿಗಳು ಕಾಣದ ತುದಿ, ತಿರುವಿನಾಚೆಗೆ ಉಳಿದ ಉಳಿಯುವ ಕಡತ, ತಪ್ಪಿಸಿಕೊಂಡ ಉಪಕಾರ ಸ್ಮರಣೆ ಎಲ್ಲವನ್ನೂ

ಕೊಟ್ಟ ಇನ್ನೇನೋ. ಲೆಕ್ಕ ಯಾವ ಕಡೆಯಿಂದ ಆರಂಭಿಸಬೇಕು? ಒಪ್ಪಿಸಿದೆ ಎಂದರೂ ಬದುಕಿಗೆ ವಾಪಾಸು ಏನನ್ನು ಕೊಡಲಿ? ಎನ್ನುವ ಹಂಬಲಿಕೆ, ಪ್ರತಿಯೊಬ್ಬ ಸೂಕ್ಷ್ಮಮತಿಯಾದ ಮನುಷ್ಯನೂ ಯೋಚಿಸುವ ಕ್ರಮವೇ ಇದು. ಮನುಷ್ಯ ಮಾತ್ರ ಈ ಜಗತ್ತಿನ ಎಲ್ಲ ಭೋಗಗಳನ್ನೂ ಅನುಭವಿಸುವವ. ಉಳಿದೆಲ್ಲಾ ವ್ಯರ್ಥ ಎನ್ನುವ ಭಾವವನ್ನು ಒಡೆಯದಿದ್ದರೆ ಯಾವುದೂ ಕಾಣುವುದಿಲ್ಲ. ಮುಚ್ಚಿದ ಮನದ ಕದವನ್ನು ಒಮ್ಮೆ ತೆರೆಯಬೇಕು. ಜಗತ್ತು ನನಗಾಗಿ ಏನೆಲ್ಲಾ ಕೊಟ್ಟಿದೆ ಎನ್ನುವುದು ಅರ್ಥವಾಗುತ್ತದೆ. ಈ ಮನಸ್ಸೇ ಹೀಗೆ ನಿನ್ನೆ ಇಳೆಕಂಡ ಶಿಶುವೊಂದು ಇಂದಿನ ಗೊಂದಲದ ಮಧ್ಯೆ ಸಿಲುಕಿ ಮುಂದೆ ಎಂದೋ ತೀರಿಕೊಳ್ಳುವುದು. ಆದರೆ ಹೊಂದಾಣಿಕೆ ಎನ್ನುವುದು ಎಂಥಾ ಅದ್ಭುತವಾದ ಶಕ್ತಿ ಬದುಕ ಪಯಣದಲ್ಲಿ. ಅನಂತ ಪ್ರಣಯದಲ್ಲಿ ಜನ್ಮಜನ್ಮಾಂತರದ ದಿವ್ಯ ಬಂಧಕ್ಕೆ ಎಂಥಾ ಶಕ್ತಿ ಇದೆ! ಬದುಕನ್ನು ಬಯಸಿದ ದಿಕ್ಕಲ್ಲಿ ನಡೆಸಲು ಇವೆಲ್ಲವೂ ಚಾಲಕ ಶಕ್ತಿಗಳು.

'ನಾನೂ ಕವಿತೆ ಬರೆದೆ' ಸಂಕಲನದಲ್ಲಿರುವ ಎಲ್ಲ ಕವಿತೆಗಳು ಸಣ್ಣ ಮತ್ತು ದೊಡ್ಡ ಸಂಗತಿಗಳ ಜೊತೆ ವ್ಯವಹರಿಸುತ್ತವೆ. ಜೀವನಕ್ಕೆ ದೊಡ್ಡದು ಹೇಗೆ ಮುಖ್ಯವೋ ಸಣ್ಣ ಸಂಗತಿಗಳೂ ಅಷ್ಟೇ ಮುಖ್ಯ. ಹಿಮದ ಕಾರಣಕ್ಕೆ ಸ್ಟಾರ್ಟ್ ಆಗದ ಕಾರನ್ನು ಜಂಪ್ ಸ್ಟಾರ್ಟ್ ಕೊಟ್ಟು ಕಾರು ಮುನ್ನಡೆಸಿದವ ಹೇಗೆ ಮುಖ್ಯನೋ; ಹಿಂದೂವಲ್ಲದ ಇರಾನಿನ ಹುಡುಗಿ ಮಗನ ಮಡದಿಯಾಗಿ ಬರುವುದೂ ಅವರಿಗೆ ಅಷ್ಟೇ ಮುಖ್ಯ. ದೈವದಂತೆ ಅಪ್ಪಯ್ಯನೂ, ಹೆಂಡತಿಯಂತೆ ಭರವಸೆಯ ಬೆಳಕೂ ಮುಖ್ಯವೇ.

ಜೀವಯಾನದಲ್ಲಿ ಎಲ್ಲವೂ ಇದೆ ಎಲ್ಲವು ನಡೆಯುತ್ತದೆ. ಯಾವುದು ನಡೆದಾಗ ಮನಸ್ಸು ಕುಗ್ಗುತ್ತದೋ; ಯಾವುದು ನಡೆದಾಗ ಮನಸ್ಸು ಹಿಗ್ಗುತ್ತದೋ ಅವೆಲ್ಲವೂ ನಾಗ ಐತಾಳರಿಗೆ ದೈವ ನಿಯಾಮಕ. ಆದರೆ ಒಳಗಣ್ಣು ಮಾತ್ರ ತನ್ನ ಶಕ್ತಿಯನ್ನು ಕುಂದದ ಹಾಗೇ ಕಾಪಿಟ್ಟುಕೊಳ್ಳುವುದು ದೊಡ್ಡ ಸವಾಲು. ಅದನ್ನು ಯಾವ ಮನುಷ್ಯನೇ ಆಗಲಿ ಸ್ವೀಕರಿಸಬೇಕು ಎನ್ನುವುದು ಅವರ ನಿಲುವು. 'ಈ ಜಗತ್ತು ಹೀಗಿದೆ ನಿಜ ಆದರೆ ಈ ಜಗತ್ತಿನಲ್ಲಿ ನೀನೇನಾಗಬೇಕು? ನಿನ್ನ ಈ ಇಚ್ಛಾಶಕ್ತಿ ಏನು?' ಎನ್ನುವುದನ್ನು ಅರಿತುಕೊಳ್ಳಬೇಕು.

ಇನ್ನು ಅನುವಾದವಾದರೂ ಕವಿಯ ಮನಃಸ್ಥಿತಿಯನ್ನು ಬಿಂಬಿಸುವ ಪದ್ಯ ಅಜ್ಜಿಯ ಜೊತೆ ನಡೆಯುವುದೆಂದರೆ, ಮಕ್ಕಳ ಪದ್ಯದ ಹಾಗೆ ಭಾಸವಾದರೂ?


ಅದೇ ಸರಿಯಾದರೂ ಇಡೀ ಜಗತ್ತು ಆತುರದಿಂದ ನಡೆಯುತ್ತಿದ್ದರೆ ಜಗತ್ತನ್ನು ಸೂಕ್ಷ್ಮವಾಗಿ ಅವಲೋಕಿಸುವವರಾದರೂ ಯಾರು? ಸುತ್ತಮುತ್ತಾ ಏನಿದೆ ಎಂದು ಪರೀಕ್ಷಿಸುವವರಾದರೂ ಯಾರು? ಕಣ್ಣ ಕುತೂಹಲ ದೀವಿಗೆಗೆ ದೃಗ್ಗೋಚರವಾಗುವ ಸಂಗತಿಗಳನ್ನು ಮನದ ಆಳಕ್ಕೆ ಹಾಕಿಕೊಳ್ಳುವುದಾದರೂ ಹೇಗೆ? ಸಂಬಂಧಗಳ ಬೆಳಕಲ್ಲಿ ನಡೆಯಬೇಕಿರುವ ಬದುಕು ಅಸಹನೆಯ ಗೂಡಾಗಿದೆ. ತಾಳ್ಮೆಗೆ ಅವಕಾಶವೇ ಇಲ್ಲದಂತೆ

ತೂರಿಹೋಗುವ ಬದಲಿಗೆ ಎಲ್ಲಕ್ಕೂ ಸ್ಪಂದಿಸುವ, ಮನುಷ್ಯನಾಗುವ ಅದರಲ್ಲೂ ಮಗುವಾಗುವ, ಮಾಗುವಿಕೆಯಲ್ಲೂ ನಗುವ ಅಜ್ಜಿ ಎಳೆತನದ ಮೊಮ್ಮಗು ಎರಡರ ನಡುವಣ ಹದದ ಬದುಕು ಬೇಕು. ಅದಿಲ್ಲದಿದ್ದರೆ ಅರಿವಿನ ಬೆಳಕು ಹೊತ್ತುವುದಾದರೂ ಹೇಗೆ? ರಾತ್ರಿಗಳು ಬೆಳಗುಗಳನ್ನು ಒಡಲಲ್ಲಿ ಹುದುಗಿಸಿಕೊಂಡಿರುವ ಸತ್ಯವನ್ನೂ, ಆಕರ್ಷಣೆ ವಿಕರ್ಷಣೆಗಳ ನಡುವಣ ಸಂಗತಿಗಳನ್ನು ಹೇಳುವ ಮಿಡತೆಯನ್ನು ಹೊಣೆಯಾಗುವ ಯಾವ ಸಂಗತಿಗಳನ್ನೂ ವಿಚಕ್ಷಣತೆಯಿಂದ ವಿವರಿಸುವ ಇಲ್ಲಿನ ಪದ್ಯಗಳು ಕೆಲ ಕಾಲ ನಿಂತು ನಮ್ಮನ್ನು ಚಿಂತನೆಗೆ ಹಚ್ಚುತ್ತವೆ. ಕವಿತೆಯ ಸಾರ್ಥಕತೆ ಇದಕ್ಕಿಂತ ಹೆಚ್ಚೇನಿದೆ?!

ಒಂದು ಸಂಗತಿಯನ್ನು ನೆನಪಿಸಿಕೊಳ್ಳುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ. 'ದಿ ಡಿಕ್ಟೇಟರ್' ಎನ್ನುವ ಸಿನಿಮಾ ನೋಡುತ್ತಿದ್ದೆ. ಅದರಲ್ಲಿ ದೇಶವನ್ನೇ ಅಲುಗಾಡಿಸಿದ ಸರ್ವಾಧಿಕಾರಿಯೊಬ್ಬನನ್ನು ಗಲ್ಲಿಗೇರಿಸಿದಾಗ ಅವನ ಕೈಯಿಂದ ಮಣ್ಣು ಜಾರಿ ಬೀಳುತ್ತದೆ. ಸಾವಿನವರೆಗೂ ಅವನು ಭಾವನಾತ್ಮಕ ನಂಟಾಗಿ ತನ್ನ ನೆಲದ ಮಣ್ಣನ್ನು ತನ್ನ ಜೊತೆ ಕೊಂಡೊಯ್ಯುತ್ತಾನೆ. ಭಾರತದಿಂದ ವಿದೇಶಕ್ಕೆ ಹೋದ ಎಲ್ಲರೂ ತಮ್ಮ ಕೈಗಳಲ್ಲಿ ಇಲ್ಲಿಯ ಮಣ್ಣನ್ನು ಹಿಡಿದಿರುವವರೇ. ಆ ಮಣ್ಣಿನಲ್ಲಿ ಪುಟ್ಟ ಗಿಡ ನೆಟ್ಟು ಇಲ್ಲಿಯ ಮಣ್ಣನ್ನು ಜೀವಂತವಾಗಿಟ್ಟವರು. ಅಂಥವರಲ್ಲಿ ನಾಗ ಐತಾಳರು ಮುಖ್ಯರು. ತಮ್ಮ ಕವಿತೆಗಳಿಗೆ ಪ್ರೀತಿಯಿಂದ ಮುನ್ನುಡಿ ಕೇಳಿದ ಐತಾಳರಿಗೆ, ಅವರ ಜೀವನ ಪ್ರೀತಿಗೆ ಮತ್ತು ಬರೆಯುವ ಹುಚ್ಚಿಗೆ ನನ್ನ ನಮಸ್ಕಾರ.

ನಾನೂ ಕವನ ಬರೆದೆ (ಕವನ ಸಂಕಲನ)ಕ್ಕೆ ಬರೆದ ಮುನ್ನುಡಿ

ಪ್ರ: ಅಭಿನವ, ಬೆಂಗಳೂರು. ಮೊದಲ ಮುದ್ರಣ 2019



ಸಹಬಾಳ್ವೆಯ ಜೀವಂತ ಆದರ್ಶ

– ನರಹಳ್ಳಿ ಬಾಲಸುಬ್ರಹ್ಮಣ್ಯ

ನಮ್ಮ ಬದುಕಿನಲ್ಲಿ ಕನಸು ಹಾಗೂ ನೆನಪುಗಳಿಗೆ ವಿಶೇಷ ಮಹತ್ವವಿದೆ. ಬಾಲ್ಯ ಯೌವನದಲ್ಲಿ ಕನಸುಗಳದೇ ಸಾಮ್ರಾಜ್ಯ. ಕಣ್ತುಂಬ ಸುಂದರ ಕನಸುಗಳು. ನಮ್ಮ ಬದುಕನ್ನು ರೂಪಿಸಿಕೊಳ್ಳುವುದರ ಬಗ್ಗೆ ಏನೆಲ್ಲ ಕನಸು ಕಾಣುತ್ತಿರುತ್ತೇವೆ. ಒಂದು ಹಂತದವರೆಗೆ ಕನಸು ಕಾಣಲು ಸಾಧ್ಯ. ಆದರೆ ಬದುಕಿನ ಕಠೋರ ವಾಸ್ತವ ನಮ್ಮ ಕನಸು ಕಾಣುವ ಶಕ್ತಿಯನ್ನು ಕಸಿದುಕೊಂಡುಬಿಡುತ್ತದೆ. ಕನಸು ಕಾಣಲು ಹೊರಟಾಗ ವಾಸ್ತವ ಎದುರು ನಿಂತು ಅಣಕಿಸುತ್ತದೆ. ಚಿಕ್ಕಂದಿನಲ್ಲಿ ನಮ್ಮ ಮುಂದಿನ ವೃತ್ತಿಜೀವನದ ಬಗ್ಗೆ ಏನೆಲ್ಲ ಕನಸುಗಳಿರುತ್ತವೆ. ಪ್ರೌಢಶಾಲೆಯಲ್ಲಿರುವಾಗ ಎಂಜಿನಿಯರ್ ಆಗುತ್ತೇನೆ, ಡಾಕ್ಟರ್ ಆಗುತ್ತೇನೆ ಇತ್ಯಾದಿ ಕನಸು ಕಾಣುವುದು ಸಹಜ. ಆದರೆ ಒಮ್ಮೆ ಪದವಿಪೂರ್ವ ತರಗತಿಯಲ್ಲಿ ಆರ್ಟ್ಸ್ ತೆಗೆದುಕೊಂಡರೆ ಅಲ್ಲಿಗೆ ಎಂಜಿನಿಯರ್, ಡಾಕ್ಟರ್ ಆಗುವ ಕನಸು ಮುಗಿದಂತೆ. ಮುಂದೆ ಆಗಬಾರದೆಂದಿಲ್ಲ, ಆದರೆ ತತ್ಕಾಲಕ್ಕೆ ಅದು ಹಿಂದೆ ಸರಿಯುತ್ತದೆ. ಹೀಗೆಯೇ ಎಲ್ಲವೂ ನಾವು ಕನಸು ಕಾಣುವುದೊಂದು, ಆಗುವುದು ಮತ್ತೊಂದು! ಕನಸುಗಳೆಂದರೆ ಅದು ನಮ್ಮ ಒಳ ಆಸೆಗಳ ಜೀವಸೆಲೆ. ಅದಕ್ಕೆ ಯಾವ ಹಂಗೂ ಇಲ್ಲ. ಚಿತ್ತ ಹರಿದತ್ತ ಅದರ ಹಾದಿ. ಆದರೆ ವಾಸ್ತವದ ಬದುಕು ನಮ್ಮ ಕನಸುಗಳನ್ನೂ ನಿಯಂತ್ರಿಸುತ್ತದೆ. ಮನಸ್ಸನ್ನು ಕ್ರಮೇಣ ಜಡವಾಗಿಸಿಬಿಡುತ್ತದೆ.

ಕನಸು ಕಾಣುವ ಶಕ್ತಿ ಕಡಿಮೆಯಾದಂತೆ ಮನಸ್ಸು ನೆನಪುಗಳ ಮೊರೆಹೋಗುತ್ತದೆ. ಪಟ್ಟ ಪಾಡುಗಳೆಲ್ಲ ಈಗ ಸೋಸಿದಪರಂಜಿಯಾಗಿ, ಕಾಳಿಕೆ ಕಳೆದುಕೊಂಡು ಸವಿಭಾವ ಹೊಮ್ಮಿಸುವ ಮಧುರ ಸ್ಮೃತಿಗಳಾಗಿ ಹಿತಾನುಭವ ನೀಡುತ್ತವೆ. ಒಂದು ಕಾಲದ ಒರಟು ವಾಸ್ತವ ಶಿಲೆ ಈಗ ನಮಗೆ ಮಾತ್ರವಲ್ಲ; ಇತರರಿಗೂ ಉಲ್ಲಾಸ ನೀಡುವ ಸೊಗಸಾದ ಕಲಾಕೃತಿಯಾಗಿ ರೂಪುಗೊಳ್ಳುತ್ತದೆ. ಕನಸುಗಳ ಕೊರತೆಯನ್ನು ನೆನಪುಗಳು ತುಂಬುತ್ತವೆ. ಅದರಲ್ಲೂ ಅತ್ಯಂತ ಖಾಸಗೀ ನೆನಪುಗಳು – ಗುಟ್ಟುಗಳು ಎಂದು ಬೇಕಾದರೂ ಹೇಳಬಹುದು – ಬದುಕಿಗೆ ಮುದ ನೀಡುವ ನಿಧಿಯಿದ್ದಂತೆ.

ಆಹಿತಾನಲ ಅವರ 'ಸ್ಮರಣೆ ಸಾಲದೆ...' ಅಂತಹ ನೆನಪುಗಳ ಸರಮಾಲೆ. ಇದೊಂದು ರೀತಿ ಅವರ ಆತ್ಮಕಥಾನಕದ ಬರಹವೂ ಹೌದು. ಆದರೆ ಚೌಕಟ್ಟು ಭಿನ್ನ. ನಾಗಐತಾಳರ ಬದುಕಿನ ವಿವಿಧ ಹಂತಗಳ ಘಟನೆಗಳು ಇಲ್ಲಿ ದಾಖಲಾಗಿವೆ. ಕೋಟದ 'ನಾಗಪ್ಪಯ್ಯ' 'ನಾಗ ಐತಾಳ'ರಾಗಿ 'ಆಹಿತಾನಲ'ರವರೆಗಿನ ಬೆಳವಣಿಗೆಯ ಬಗ್ಗೆ ಈ ಕೃತಿಯ ವಿನ್ಯಾಸ ರೂಪಿಸಿದೆ. ಹಿನ್ನೋಟದಲ್ಲಿ ಬದುಕು ಕಣ್ತೆರೆದಿದೆ.

ಇಲ್ಲಿ ಪ್ರಮುಖವಾಗಿ ಎರಡು ಜಗತ್ತುಗಳಿವೆ. ಒಂದು ಬಾಲ್ಯದ ಕೋಟಜಗತ್ತು. ಇದು ಅವರ ವ್ಯಕ್ತಿತ್ವವನ್ನು ರೂಪಿಸಿದ್ದು. ಎಳೆಯ ಮನಸ್ಸು ತನ್ನ ಸುತ್ತಮುತ್ತಲಿನ ಪರಿಸರಕ್ಕೆ ಸ್ಪಂದಿಸುತ್ತಲೇ ತನ್ನ ಗುರಿ ದಾರಿಗಳನ್ನು ಗುರ್ತಿಸಿಕೊಳ್ಳಲು ಇದು ನೆರವು ನೀಡಿದೆ. ಹುಡುಗ ನಾಗಪ್ಪಯ್ಯನ ಮನಸ್ಸನ್ನು ಆವರಿಸಿದ ಕೆಲವು ವ್ಯಕ್ತಿಗಳ ಪ್ರಸಂಗಗಳು ಇಲ್ಲಿ ಚಿತ್ರಿತವಾಗಿದೆ. ಚಿಕ್ಕಂದಿನಲ್ಲಿ ಎದುರಿಸಿದ ಬಿಕ್ಕಟ್ಟಿನ ಘಟನೆಗಳು ಇಲ್ಲಿ ಹಗುರಹೃದಯದ ಅಭಿವ್ಯಕ್ತಿಯಾಗಿ ರೂಪು ಪಡೆದಿವೆ. ಮತ್ತೊಂದು ಅವರ ವೃತ್ತಿಬದುಕನ್ನು ರೂಪಿಸಿದ ಅಮೆರಿಕ ಜಗತ್ತು. ಕರಾವಳಿಯ ಹುಡುಗನೊಬ್ಬ ಕಡಲು ದಾಟಿ ಅಪರಿಚಿತ ಖಂಡ ಪ್ರವೇಶಿಸಿ ತನ್ನ ಬದುಕನ್ನು ಕಟ್ಟಿಕೊಂಡ ರೋಮಾಂಚಕ ಅನುಭವಗಳಲ್ಲಿ ಕೆಲವು ಇಲ್ಲಿವೆ.

ಹೀಗಾಗಿಯೇ ಈ ಕೃತಿ ಕೇವಲ ನೆನಪುಗಳ ಚಿತ್ರಣವಲ್ಲ, ಎರಡು ಸಂಸ್ಕೃತಿಗಳ ಕಥನವೂ ಹೌದು. ಇದರಿಂದಾಗಿ ಇದಕ್ಕೆ ಒಂದು ಸಾಂಸ್ಕೃತಿಕ ನೆಲೆಯೂ ಒದಗಿಬಂದಿದೆ. ಈಗ ಬದುಕುತ್ತಿರುವ ವರ್ತಮಾನದ ಪರಿಸರದಲ್ಲಿ ಚಿಕ್ಕಂದಿನಲ್ಲಿ ತನ್ನ ವ್ಯಕ್ತಿತ್ವವನ್ನು ರೂಪಿಸಿದ ವ್ಯಕ್ತಿ–ಘಟನೆಗಳನ್ನು ನೆನಪಿಸಿಕೊಳ್ಳುವ ಕ್ರಮದಲ್ಲಿಯೇ ಭಿನ್ನ ಸಂಸ್ಕೃತಿಗಳನ್ನು ಮುಖಾಮುಖಿಯಾಗಿಸಿ ನೋಡುವ ಕುತೂಹಲವಿದೆ. ಬಾಲ್ಯದ ವಿವರಗಳನ್ನು ಹೇಳುವಾಗ ಐತಾಳರಿಗೆ ಕಳೆದುಹೋಗುತ್ತಿರುವ ಒಂದು ಜೀವನ ವಿಧಾನವನ್ನು ಪುನಾರಚಿಸಿ ಕೊಡುವ ಹಂಬಲವೂ ಇದೆ. ತಾವು ಕಂಡುಂಡ ಅನುಭವಗಳನ್ನು ಹೀಗೆ ದಾಖಲಿಸುವ ಬಗೆಯಲ್ಲಿ ಸಾಮಾಜಿಕ ಬದುಕಿನಲ್ಲಾದ ಪಲ್ಲಟವನ್ನು ಸೂಚಿಸುವ ಇರಾದೆ ಇದೆಯೇ ಹೊರತು ಹಳಹಳಿಕೆಯಿಲ್ಲ. ಹೀಗಾಗಿಯೇ ಇದು ನೆನಪುಗಳ ಮರುಕಥನವಾಗದೆ 'ಸಂಸ್ಕೃತಿ ಚರಿತ್ರೆ'ಯ ಸ್ವರೂಪ ಪಡೆದುಕೊಳ್ಳುತ್ತದೆ.

ಬಾಲ್ಯದ ಜಗತ್ತನ್ನು ಮತ್ತೆ ನೆನಪಿಸಿಕೊಳ್ಳುವಲ್ಲಿ ನಾಗ ಐತಾಳ ಅವರಿಗೆ ಒಂದು ರೀತಿಯ ಕೃತಜ್ಞತೆಯ ಭಾವವಿದೆ. ಚಿಕ್ಕಂದಿನಲ್ಲಿ ಒಡನಾಟಕ್ಕೆ ಬಂದ ವ್ಯಕ್ತಿಗಳಿಂದ ತಾವು ಪಡೆದದ್ದನ್ನು ಅವರೀಗ ಸ್ಮರಿಸಿಕೊಳ್ಳುವ ಧಾಟಿಯಲ್ಲಿ ಈ ಬರಹದ ವಿನ್ಯಾಸವಿದೆ. ತುಂಗು ಮೇಷ್ಟ್ರು, ಸೂರ, ವಾಸುದೇವ, ಶಿವರಾಮ ಮಯ್ಯ, ಕಿಟ್ಟಕ್ಕ ಇವರೆಲ್ಲರ ವ್ಯಕ್ತಿತ್ವ – ಇಲ್ಲಿ ಆಪ್ತವಾಗಿ ಅನಾವರಣಗೊಳ್ಳುತ್ತದೆ. ಹೆಬ್ಬಾರರ ರೇಖಾಚಿತ್ರದಂತೆ ಇವರೆಲ್ಲರ ವ್ಯಕ್ತಿತ್ವ ಇಲ್ಲಿ ಕೆಲವೇ ಕೆಲವು ಅಕ್ಷರರೇಖೆಗಳಲ್ಲಿ ಚಿತ್ರಿತವಾಗಿದೆ. ಆದರೆ ನಂತರದ ಅಮೆರಿಕದ ಅನುಭವಗಳಲ್ಲಿ ಆಹಿತಾನಲ ಅವರು ತಾವು ವಿಭಿನ್ನ ಪರಿಸರಕ್ಕೆ ಬಂದಾಗಿನ ಸಾಂಸ್ಕೃತಿಕ ಸಾಮಾಜಿಕ ಇಕ್ಕಟ್ಟುಗಳನ್ನು ಲಘುಹಾಸ್ಯದ ಧಾಟಿಯಲ್ಲಿ ಚಿತ್ರಿಸುತ್ತಾರೆ. ಆಗ ಅನುಭವಿಸಿದ ಸಂಕಟಗಳು ಈಗ ವಿನೋದ ಪ್ರಸಂಗಗಳಾಗಿ ರೂಪ ತಾಳಿವೆ.

ಇಲ್ಲಿನ ಬರಹಗಳ ಮತ್ತೊಂದು ವೈಶಿಷ್ಟ್ಯವೆಂದರೆ ನಾಗ ಐತಾಳರು ಕಟ್ಟಿಕೊಡುವ ಭಾವಜಗತ್ತು. ಆಧುನಿಕ ಬದುಕಿನಲ್ಲಿ ಕಣ್ಮರೆಯಾಗುತ್ತಿರುವ ಭಾವಲೋಕವನ್ನು ಅವರಿಲ್ಲಿ ಸಮಚಿತ್ತದಿಂದ ಚಿತ್ರಿಸುತ್ತಾರೆ. ಮಾರ್ಕೆಸ್ ಒಂದು ಸಂದರ್ಶನದಲ್ಲಿ ಹೇಳುತ್ತಾನೆ: 'ನಾವೀಗ ಸಂತೋಷಪಡುವ ಮನೋಭಾವವನ್ನೇ ಕಳೆದುಕೊಂಡುಬಿಟ್ಟಿದ್ದೇವೆ. ನಮ್ಮ ಬದುಕಿನಲ್ಲಿ ಮತ್ತೆ ಆ ಭಾವ ಉದ್ದೀಪಗೊಳ್ಳುವ ಹಾಗೆ ನಾವು ಬರೆಯಬೇಕು'. ನಾಗ ಐತಾಳರ ಈ ಬರಹಗಳನ್ನು ಓದುವಾಗ ಸಹಜವೆಂಬಂತೆ ಮಾರ್ಕೆಸ್‌ನ ಈ ಮಾತುಗಳು ನೆನಪಾದವು.

ನಾಗ ಐತಾಳರನ್ನು ನಾನು ಕಳೆದ ಒಂದು ದಶಕದಿಂದ ಹತ್ತಿರದಿಂದ ಬಲ್ಲೆ. ದೇಹ ತನ್ನ ಕಸುವನ್ನು ಕಳೆದುಕೊಳ್ಳುತ್ತಿದ್ದರೂ ಅವರ ಜೀವನೋತ್ಸಾಹ ಕಿಂಚಿತ್ತೂ ಕಡಿಮೆಯಾಗಿಲ್ಲ. ಸಹಬಾಳ್ವೆಯ ಬಗೆಗಿನ ಅವರ ನಿಲುವು ನಮ್ಮ ಕಾಲಕ್ಕೆ ಒಂದು ಜೀವಂತ ಆದರ್ಶ. ಕಿರಿಯರನ್ನು ಅವರು ನಡೆಸಿಕೊಳ್ಳುವ ರೀತಿ ಕವಿಯುತ್ತಿರುವ ಕಗ್ಗತ್ತಲಲ್ಲಿ ಭರವಸೆಯ ಬೆಳ್ಳಿಗೆರೆ. ಇಲ್ಲಿನ ಬರಹ ಅವರ ಈ ಬಗೆಯ ವ್ಯಕ್ತಿತ್ವದ ಸಹಜ ಅಭಿವ್ಯಕ್ತಿಯಾಗಿದೆ. ಪಟ್ಟ ಪಾಡೆಲ್ಲ ಇನಿದನಿಯ ಹಾಡಾಗುವ ಪವಾಡ ಅವರ ಸೃಜನಶೀಲತೆಯ ಶಕ್ತಿಗೆ ಸಂಬಂಧಿಸಿದ್ದು. ಅವರು ನೀಡಿದ ಈ ಉಲ್ಲಾಸಕ್ಕೆ ಕೃತಜ್ಞತೆಯ ಅಭಿನಂದನೆಗಳು.

'ಸ್ಮರಣೆ ಸಾಲದೆ' ಪುಸ್ತಕಕ್ಕೆ ಬರೆದ ಮುನ್ನುಡಿ.

ಪ್ರ: ಅಭಿನವ, ಬೆಂಗಳೂರು. ಮೊದಲ ಮುದ್ರಣ 2017,



ಶಾಶ್ವತ ಪ್ರೇಮ ಪವಿತ್ರ ಪ್ರೇಮವೂ ಹೌದು

– ಪ್ರಭುಶಂಕರ

'ಆಹಿತಾನಲ' ಎಂಬುದು ಶ್ರೀ ನಾಗ ಐತಾಳರ ಕಾವ್ಯನಾಮ. ಉದ್ಯೋಗವನ್ನು ಅರಸಿ ಅಮೆರಿಕಕ್ಕೆ ಅನೇಕ ದಶಕಗಳ ಹಿಂದೆ ತೆರಳಿದ ಐತಾಳರು, ಈಗ ಆ ದೇಶದ ಮುಖ್ಯ ಪಟ್ಟಣಗಳಲ್ಲಿ ಒಂದಾದ ಲಾಸ್ ಏಂಜಲಿಸ್‌ನಲ್ಲಿ ನೆಲಸಿದ್ದಾರೆ. ಎರಡು ವರ್ಷಗಳ ಹಿಂದೆ ಅವರ ಮನೆಯಲ್ಲಿ ತಂಗಿದ್ದು, ಅವರ ಆತಿಥ್ಯ ಸ್ವೀಕರಿಸುವ ಭಾಗ್ಯ ನನ್ನದಾಗಿತ್ತು. ಅವರ ಮತ್ತು ಅವರ ಪತ್ನಿ ಲಕ್ಷ್ಮೀ ಅವರ ವಿಶಾಲವಾದ ಲೋಕಾನುಭವ ಮತ್ತು ಆಳವಾದ ಅಧ್ಯಯನ ನನ್ನ ಮೇಲೆ ಬಹುಕಾಲ ಉಳಿಯುವಂಥ ಪ್ರಭಾವ ಬೀರಿದೆ. ಕನ್ನಡ ನಾಡಿನಿಂದ ಅನೇಕ ದಶಕಗಳ ಕಾಲ ದೂರವಿದ್ದರೂ ಕನ್ನಡದ ಅನೇಕ ಮೌಲಿಕ ಕೃತಿಗಳನ್ನು ಗಂಡ–ಹೆಂಡತಿಯರು ಶ್ರದ್ಧೆಯಿಂದ ಅಧ್ಯಯನ ಮಾಡಿದ್ದಾರೆ. ಅಷ್ಟಲ್ಲದೆ ಅವುಗಳ ಸ್ವಾರಸ್ಯವಾದ ಭಾಗಗಳು ಅವರ ನೆನಪಿನಲ್ಲಿ ಉಳಿದಿದೆ. ಸೂಕ್ತ ಸಂದರ್ಭಗಳಲ್ಲಿ ಅವರು ಅವನ್ನು ಉಲ್ಲೇಖಿಸುತ್ತಾರೆ. ಮಾಸ್ತಿ ವೆಂಕಟೇಶ ಅಯ್ಯಂಗಾರ್, ಶಿವರಾಮ ಕಾರಂತರು, ಕುವೆಂಪು ಮುಂತಾದವರನ್ನು ಕುರಿತು ಅಮೆರಿಕದಲ್ಲಿರುವ ಸಾಹಿತ್ಯಾಸಕ್ತ ಬಂಧುಗಳಿಂದ ಮೌಲಿಕವಾದ ವಿಮರ್ಶಾ ಲೇಖನಗಳನ್ನು ಬರೆಸಿ ಸಂಪುಟಗಳನ್ನು ಪ್ರಕಟಿಸಿದ್ದಾರಷ್ಟೆ ಅವುಗಳ ಪ್ರಕಟಣೆಯ ಕಾಯಕದಲ್ಲಿ ಶ್ರೀ ನಾಗ ಐತಾಳರು ಪ್ರಮುಖವಾದ ಪಾತ್ರವನ್ನು ವಹಿಸಿದ್ದಾರೆ. ಅಲ್ಲದೆ ಅವುಗಳಲ್ಲಿ ಐತಾಳರ ಪ್ರಬುದ್ಧ ಚಿಂತನೆಗಳನ್ನು ಒಳಗೊಂಡ ಲೇಖನಗಳಿವೆ.


'ಕಾದೇ ಇರುವಳು ರಾಧೆ' ಎಂಬುದು ನಾಗ ಐತಾಳರ ಕಲ್ಪನೆಯಿಂದ ಮೂಡಿರುವ 'ಗದ್ಯಕಾವ್ಯ' ಎನ್ನಬಹುದಾದ ಕಿರುಕಾದಂಬರಿ. ಕೃಷ್ಣ-ರಾಧೆಯರ ಪ್ರೇಮ ನಾಡಿನ ಜನಕೋಟಿಯ ಮನಸ್ಸಿನಲ್ಲಿ ಮೂಡಿ, ಬೆಳೆದು ಚಿರಸ್ಥಾಯಿಯಾಗಿ ನಿಂತಿರುವ ಕಲ್ಪನಾ ವಿಲಾಸ. ಕೃಷ್ಣ ಕಥೆಯೇ ಆಗಿರುವ ಭಾಗವತದಲ್ಲಿ ರಾಧೆಯ ಹೆಸರೇ ಇಲ್ಲ. ಭಕ್ತಿಯ ಸ್ವರೂಪವನ್ನು ವರ್ಣಿಸಿರುವ 'ನಾರದ ಭಕ್ತಿಸೂತ್ರ'ಗಳಲ್ಲೂ ರಾಧೆಯ ಉಲ್ಲೇಖವಿಲ್ಲ. 'ಯಥಾ ವ್ರಜ ಗೋಪಿಕಾನಾಂ' ಎಂದು ಹೇಳಿ ಪ್ರೇಮಸ್ವರೂಪವಾದ ಭಕ್ತಿಗೆ ವ್ರಜಗೋಪಿಯರ ಪ್ರೇಮವೇ ಪ್ರಮಾಣ ಎಂದಿದ್ದಾರೆಯೇ ಹೊರತು ಅಲ್ಲೂ ರಾಧೆಯನ್ನು ಪ್ರತ್ಯೇಕವಾಗಿ ಹೆಸರಿಸಿಲ್ಲ. ಮುಂದಿನ ಕಾಲದಲ್ಲಿ ಯಾವಾಗಲೋ ರಾಧೆಯ ಹೆಸರು ಕೃಷ್ಣನ ಜೊತೆಯಲ್ಲಿ ಎಷ್ಟರಮಟ್ಟಿಗೆ ಬೆರೆತುಕೊಂಡಿದೆಯೆಂದರೆ ಅವನು ರಾಧಾಕೃಷ್ಣನೆಂದೇ ಪ್ರಸಿದ್ಧವಾಗಿದ್ದಾನೆಯೇ ಹೊರತು ರುಕ್ಮಿಣೀಕೃಷ್ಣ ಅಥವಾ ಸತ್ಯಭಾಮಾ ಕೃಷ್ಣ ಎಂದಲ್ಲ! ಇದು ಎಷ್ಟರಮಟ್ಟಿಗೆ ಎಂದರೆ ರಾಧೆಯಿಲ್ಲದೆ ಕೃಷ್ಣನನ್ನು ಊಹಿಸಿಕೊಳ್ಳುವುದೇ ಕಷ್ಟವಾಗಿದೆ.

ಐತಾಳರು ರಾಧೆಯನ್ನು ಪ್ರಧಾನ ಪಾತ್ರವನ್ನಾಗಿಸಿಕೊಂಡು ಎಲ್ಲರಿಗೂ ಪ್ರಿಯವಾಗಬಹುದಾದ ಇಂಥದೊಂದು ಪುಸ್ತಕವನ್ನು ರಚಿಸಲು ಪ್ರಚೋದಿಸಲು ಕಾರಣವಾದ ಅಂಶ ಯಾವುದು? ಎಂಬುದನ್ನು ಕುರಿತು ನಾನು ಚಿಂತನೆ ನಡೆಸುತ್ತಲೇ ಇದ್ದೇನೆ. ವಸ್ತುವಿನಲ್ಲೇ ಅಂತರ್ಗತವಾಗಿರುವ ಶಾಶ್ವತ ಪ್ರೇಮ ಅವರಿಗೆ ಪ್ರೇರಣೆ ನೀಡಿರುವ ಸಾಧ್ಯತೆ ಇದೆ. ಆ ಶಾಶ್ವತ ಪ್ರೇಮ ಪವಿತ್ರ ಪ್ರೇಮವೂ ಹೌದು. ಅದು ದೈಹಿಕ ಪ್ರೇಮದ ಆಚೆನದು. ಅಂತಹ ಪ್ರೇಮ ಶುದ್ಧ ಭಾವನೆಯ ನೆಲೆಯಲ್ಲೇ ಇರುವಂತೆ ಐತಾಳರು ಕೃತಿಯನ್ನು ನಿರ್ವಹಿಸಿದ್ದಾರೆ. ರಾಧೆ ಕೊನೆಯವರೆಗೂ ಅವಿವಾಹಿತಳಾಗಿಯೇ ಉಳಿಯುತ್ತಾಳೆ. ರಾಧೆಯ ತಂದೆಗೆ ಪತ್ನೀ ವಿಯೋಗ, ರಾಧೆಗೆ ಪ್ರಿಯನ ವಿಯೋಗ. ಇಷ್ಟಾದರೂ ಇಲ್ಲಿ ದುಃಖ ಹೆಣಭಾರವಾಗಿ ತಂಗುವುದಿಲ್ಲ. ಬದುಕಿನ ಅನಿವಾರ್ಯ ಘಟನೆಯಾಗಿ ತೇಲಿಹೋಗುತ್ತದೆ. ಒಂದು ಮಾತಿನಲ್ಲಿ ಹೇಳುವುದಾದರೆ ಸುಸಂಸ್ಕೃತವೂ ಪರಿಪಕ್ವವೂ ಆದ ಒಂದು ಮನಸ್ಸು ಅಖಂಡ ಪ್ರೇಮರೂಪಕಕ್ಕೆ ನೀಡಿದ ಸಾರಸ್ವತ ಪ್ರತಿಕ್ರಿಯೆ ಈ ಪುಟ್ಟ ಪುಸ್ತಕ. ರಾಧಾಕೃಷ್ಣರ ಪ್ರೇಮವು ಭೌತಿಕ ನೆಲೆಯನ್ನು ಮೀರಿದುದು ಎಂಬುದನ್ನು ಸ್ಥಾಪಿಸುವಾಗ ಆವರಣ ನಿರ್ಮಾಣ, ಸಂಭಾಷಣೆಯ ನಿರ್ವಹಣೆ-ಇವೆಲ್ಲ ಅಧ್ಯಾತ್ಮದ ಅಂಚಿನಲ್ಲಿ ನಡೆಯಬೇಕಾಗುತ್ತದೆಯಷ್ಟೆ? ಐತಾಳರ ಸೂಕ್ಷ್ಮ ಮನಸ್ಸು ಆ ಕಾರ್ಯವನ್ನು ಯಶಸ್ವಿಯಾಗಿ ನಡೆಸಿದೆ. ಯಾವುದೇ ಹಿಂಜರಿಕೆ, ಹೇವರಿಕೆಯಿಲ್ಲದೆ ಒಂದು ಗಂಡು-ಇಲ್ಲಿ ಅದು ದೈವತ್ವದ ಆವರಣದಲ್ಲಿರುವಂಥದು- ಒಂದು ಹೆಣ್ಣು ದೈವತ್ವದ ಸಮೀಪವರ್ತಿಯಾದುದು-ವಿವಾಹದ ಚೌಕಟ್ಟಿನಾಚೆಯೂ ಪ್ರೀತಿಸುವುದು ಸಾಧ್ಯ ಎಂಬ ಉನ್ನತಿಯ ಗ್ರಹಿಕೆಯಲ್ಲಿ ನಾವು ಈ ಇಬ್ಬರ ಪ್ರೇಮವಿಶೇಷವನ್ನು ಅರ್ಥೈಸಬಹುದಾಗಿದೆ.

ಇಂಥದೊಂದು ಹೃದ್ಯವಾದ ಗದ್ಯಕೃತಿಯನ್ನು ರಚಿಸಿರುವ ನಾಗ ಐತಾಳರನ್ನು ಎಲ್ಲ ಕನ್ನಡಿಗರೂ ಹೃತ್ಪೂರ್ವಕವಾಗಿ ಅಭಿನಂದಿಸಬೇಕು. ಇಂಥ ಇನ್ನೂ ಕೆಲವು ಕೃತಿಗಳನ್ನು ಅವರು ರಚಿಸಲಿ ಎಂದು ಹಾರೈಸೋಣ.

ಈ ನುಡಿನಮನದ ರಚನೆಯಲ್ಲಿ ನನಗೆ ನೆರವನ್ನು ನೀಡಿರುವವರು ನನ್ನ ಪ್ರಿಯಮಿತ್ರ ಆರ್. ಎಸ್. ಪೂರ್ಣಾನಂದರು. ಅವರಿಗೆ ನನ್ನ ಹೃತ್ಪೂರ್ವಕ ಕೃತಜ್ಞತೆಗಳು.

'ಕಾದೇ ಇರುವಳು ರಾಧೆ' ಕೃತಿಗೆ ಬರೆದ ಮುನ್ನುಡಿ. ಪ್ರ: ಅಭಿನವ ಬೆಂಗಳೂರು. ಮೊದಲ ಮುದ್ರಣ 2007,



ಅಮೆರಿಕಗೂ ಸೈ ಭಾರತಕ್ಕೆ ಜೈ

– ಕಾವ್ಯಾ ಕಡಮೆ ನಾಗರಕಟ್ಟೆ

1. ನಿಮ್ಮಲ್ಲಿ ಬರವಣಿಗೆಯ ಆಸಕ್ತಿ ಬೆಳೆಯಲು ನಿಮ್ಮ ಬಾಲ್ಯ, ಚಿಕ್ಕಂದಿನ ಮನೆಯ ಪರಿಸರ ಎಷ್ಟರಮಟ್ಟಿಗೆ ಕಾರಣ?

ನನ್ನ ಬಾಲ್ಯದ ಪರಿಸರವೇನೂ ಅಂಥಾ ಹೆಚ್ಚಿನದಲ್ಲ. ನನ್ನ ತಾಯಿ ಹಾಡುತ್ತಿದ್ದ ಜೋಗುಳ ಹಾಡುಗಳು ನನಗೆ ತಿಳಿಯದಂತೆ ಸಾಹಿತ್ಯಾಸಕ್ತಿ ಹುಟ್ಟಿಸಿರಬಹುದು. ಬೇಸಾಯ ಕುಟುಂಬದವನಾದ ನಮ್ಮ ಮನೆಯಲ್ಲಿ ಭತ್ತ ಕುಟ್ಟಲು ಬರುತ್ತಿದ್ದ ಕೂಲಿ ಹೆಂಗಳೆಯರು ಹಾಡುತ್ತಿದ್ದ ತ್ರಿಪದಿಗಳೂ ಜನಪದ ಸಾಹಿತ್ಯದಲ್ಲಿ ಆಸಕ್ತಿ ಹುಟ್ಟಿಸಿರಬಹುದು. ಶಾಲೆಯಲ್ಲಿ ಕನ್ನಡ ಕಲಿಸಿದ ಉಪಾಧ್ಯಾಯರೊಬ್ಬರ ನೆನಪು ಬರುತ್ತಿದೆ. ಅವರು 'ಗೋವಿನ ಹಾಡ'ನ್ನು ಸುಶ್ರಾವ್ಯವಾಗಿ ಹಾಡುತ್ತಿದ್ದರು. ನನ್ನ ಆಸಕ್ತಿಯನ್ನು ಅವರು ಕೆರಳಿಸಿದ್ದಾರೆಂದು ಹೇಳಬಹುದೇನೋ! ಆದರೆ ಕಾಲೇಜು ವಿದ್ಯಾಭ್ಯಾಸದಲ್ಲಿ ಕನ್ನಡ ಪಾಠ ಹೇಳುತ್ತಿದ್ದ ಕನ್ನಡ ಪಂಡಿತರ ಜ್ಞಾಪಕವಾದಾಗಲೆಲ್ಲ ನನ್ನಲ್ಲಿ ಅವರ ಮೇಲೆ ಜಿಗುಪ್ಸೆ ಹುಟ್ಟುತ್ತಿದೆ. ಅವರು ಬೇಂದ್ರೆಯವರ 'ಹಕ್ಕಿ ಹಾರುತಿದೆ ನೋಡಿದಿರಾ?' ಕವನದ ಮೇಲೆ ಮಾಡಿದ ವ್ಯಾಖ್ಯಾನ ಹೀಗಿದೆ: 'ಹಕ್ಕಿ ಅಂದರೆ, ಪಕ್ಷಿ; ಹಾರುವುದು ಅಂದಾಗ ರೆಕ್ಕೆ ಬಿಚ್ಚಿ ಆಕಾಶದಲ್ಲಿ ತೇಲುತ್ತಿರುವುದು; ಅದನ್ನು ಕಂಡಿರಾ? ಇಲ್ಲಿ ಸೂಕ್ಷ್ಮವಾಗಿ ಕವಿಯ ಪ್ರಕೃತಿ ವರ್ಣನೆಯನ್ನು ಗಮನಿಸಬೇಕು' ಎಂದು. ಆ ಕವನದಲ್ಲಿನ ಕಾಲದ ಪ್ರತಿಮೆಯನ್ನೇ ಅವರು ಅರಿಯದಾದರು.

ಕೆಲವೊಮ್ಮೆ ಇಂಥ 'ಬರಡು' ಹಿನ್ನೆಲೆಯೇ ಒಂದು ವಿಧದಲ್ಲಿ ನನ್ನ ಸಾಹಿತ್ಯಾಭಿರುಚಿಯನ್ನು ಕೆರಳಿಸಿರಬಹುದೋ ಏನೋ ಎಂದು ಆಶ್ಚರ್ಯಪಡುತ್ತಿದ್ದೇನೆ.

2. ನೀವು ಅರವತ್ತರ ದಶಕದಲ್ಲಿಯೇ ಅಮೆರಿಕೆಗೆ ವಲಸೆ ಬಂದವರು. ಈಗಿನಂತೆ 'ಇಂಟರ್ನೆಟ್ ಯುಗ'ವಲ್ಲದ ಆ ಕಾಲದಲ್ಲಿ ಕನ್ನಡ ಸಾಹಿತ್ಯಲೋಕದ ಜೊತೆಗೆ ನಿಕಟ ಸಂಪರ್ಕ ಇರಿಸಿಕೊಳ್ಳಲು ನಿಮಗೆ ಸಾಧ್ಯವಾಯಿತೇ? ಆ ನಿಟ್ಟಿನಲ್ಲಿ ನೀವು ಎದುರಿಸಿದ ಸವಾಲುಗಳೇನು ?

ಅರವತ್ತರ ದಶಕದಲ್ಲಿ ಅಮೆರಿಕದಲ್ಲಿ ಕನ್ನಡಿಗರ ಸಂಖ್ಯೆ ತೀರ ಕಡಿಮೆಯಾಗಿತ್ತೆಂದೇ ಹೇಳಬಹುದು. ಕನ್ನಡದಿಂದ ದೂರವಾಗಿದ್ದೇವೆಂಬ ಕೊರಗು ನಮ್ಮನ್ನು ಕಾಡುತ್ತಿತ್ತೆಂಬುದು ನಿಜ! ಅದರ ಪರಿಣಾಮವಾಗಿ ಇಲ್ಲಿನ ಕನ್ನಡ ಬಳಗವನ್ನು ಒಟ್ಟಾಗಿಸುವ ಪ್ರಯತ್ನ ಆ ಕಾಲದಲ್ಲಿ ನಮ್ಮ ಹೊಣೆಯಾಗಿತ್ತು. 60ರ ದಶಕದಲ್ಲಿ ಲಾಸ್ ಎಂಜಲಿಸ್‌ನ ನಮ್ಮ ಮನೆಯಲ್ಲಿ ಆ ವಲಯದಲ್ಲಿದ್ದ ಕೆಲವೇ ಕನ್ನಡಿಗರನ್ನು ಒಟ್ಟುಗೂಡಿಸಿ, ಭಾವಗೀತೆಗಳನ್ನು ಹಾಡಿಯೋ, ಭಜನೆ– ಗೀತೆಗಳನ್ನು ಹಾಡಿಯೋ ಅಥವಾ ಕರ್ನಾಟಕದ ವಿಶಿಷ್ಟತೆಯ ಮೇಲೆ ಚರ್ಚೆ ನಡೆಸಿಯೋ, ನಮ್ಮ ತೃಷೆಯನ್ನು ನೀಗಿಸಿಕೊಂಡ ದಿನಗಳು ಆಗಾಗ್ಗೆ ನೆನಪಿಗೆ ಬರುತ್ತಿವೆ. ಆಗಿನ ಕಾಲದಲ್ಲಿ ಅಷ್ಟೇ ಪ್ರಯತ್ನ ನಮ್ಮಿಂದ ಸಾಧ್ಯವಾದದ್ದು. ಮುಂದೆ, ಡಿಟ್ರಾಯಿಟ್‌ನ ಉತ್ಸುಕ ಕನ್ನಡಿಗರ ಸಾಹಸದಿಂದಾಗಿ ಅಮೆರಿಕದಲ್ಲೊಂದು ಕನ್ನಡ ಕೂಟದ ಸ್ಥಾಪನೆಯಾಯ್ತು. ಪರಿಣಾಮವಾಗಿ ದೇಶದ ಹಲವು ನಗರಗಳಲ್ಲಿ ಸ್ಥಳೀಯ ಕನ್ನಡ ಕೂಟಗಳು ಸ್ಥಾಪನೆಯಾದವು. ಕನ್ನಡ ಕೂಟಗಳು ಮೊದಲಿಗೆ ಸೀಮಿತ ಸಾಂಸ್ಕೃತಿಕ, ಧಾರ್ಮಿಕ ಕಾರ್ಯಕ್ರಮಗಳನ್ನು ಏರ್ಪಡಿಸುತ್ತಿದ್ದುವು. ಕ್ರಮೇಣ ನಾಟಕ, ಭರತನಾಟ್ಯ ಮೊದಲಾದ ಕಾರ್ಯಕ್ರಮಗಳೂ ಸೇರಿದವು. ಈ ಮಧ್ಯೆ, ಕರ್ನಾಟಕದಿಂದ ಬಂದ ಸಾಹಿತಿಗಳು, ಕಲಾವಿದರು, ನಮ್ಮ ಸಾಹಿತ್ಯಿಕ, ಸಾಂಸ್ಕೃತಿಕ ಆಸಕ್ತಿಯನ್ನು ಕೆರಳಿಸಲು ಕಾರಣರಾದರು. ಮುಂದೆ ಕೈಬರಹಗಳಲ್ಲಿ ಪತ್ರಿಕೆಗಳನ್ನು ಪ್ರಕಟಿಸಲಾಯ್ತು. ಅವುಗಳಲ್ಲಿ, ಜನಪ್ರಿಯ ಕವನಗಳ ತುಣುಕು, ನಾಟಕಗಳ ಕೆಲವು ದೃಶ್ಯ, ಆಗಾಗ್ಗೆ ತಾವೇ ರಚಿಸಿದ ಕವನ, ಕತೆಗಳೂ ಪ್ರಕಟವಾದವು. ಕಂಪ್ಯೂಟರ್ ಬಳಕೆಗೆ ಬಂದಾಗ ಈ ಪತ್ರಿಕೆಗಳನ್ನು ಕಂಪ್ಯೂಟರೀಕರಿಸಿ ಪ್ರಕಟಿಸಲು ಪ್ರಾರಂಭವಾಯ್ತು. ನನಗಿನ್ನೂ ಜ್ಞಾಪಕವಿದೆ– ಶಿಕಾಗೋ 'ವಿದ್ಯಾರಣ್ಯ' ಕನ್ನಡ ಕೂಟದ ಮೊದಲ ಸ್ಮರಣ ಸಂಚಿಕೆ, ತೋನ್ಸೆ ಕೃಷ್ಣರಾಜು ಅವರ ಸಂಪಾದಕತ್ವದಲ್ಲಿ ಹೊರಬಂದ ದಿನಗಳು. ಅದರಲ್ಲಿ ಪ್ರಕಟವಾದ '....ಇವಳ ಸೊಬಗನವಳಿಗಿಟ್ಟು ನೋಡ ಬಯಸಿದೆ: ಅವಳ ತೊಡಿಗೆ ಇವಳಿಗಿಟ್ಟು ಹಾಡ ಬಯಸಿದೆ...' ಎಂಬ ಬಿ.ಎಂ.ಶ್ರೀ.ಯವರ ಕವನದ ಸಾಲು. ಹೊರಗಿನಿಂದ ಬಂದು ನೆಲೆಸಿದ ಈ ನಾಡಿಗೆ ಹೊಂದಿಕೊಳ್ಳುವಲ್ಲಿ ನಮ್ಮ ಪ್ರಯತ್ನಗಳನ್ನು ಎಷ್ಟೊಂದು ಅರ್ಥಗರ್ಭಿತವಾಗಿ ಈ ಸಾಲುಗಳು ವಿವರಿಸುತ್ತವೆ!

ನಮ್ಮ ಸಾಹಿತ್ಯಾಸಕ್ತಿಯನ್ನು ಕೆರಳಿಸಲು ಭಾರತದಿಂದ ಬಂದ ಹಲವಾರು ಸಾಹಿತಿಗಳು ನೀಡಿದ ಪ್ರೋತ್ಸಾಹವನ್ನು ಇಲ್ಲಿ ಕೃತಜ್ಞತೆಯಿಂದ ನೆನೆಯಲೇಬೇಕು.

ವೈಯಕ್ತಿಕವಾಗಿ ಶಿವರಾಮ ಕಾರಂತ, ಯು. ಆರ್. ಅನಂತಮೂರ್ತಿ. ಜಿ. ಎಸ್. ಶಿವರುದ್ರಪ್ಪ, ಎನ್. ಎಸ್. ಲಕ್ಷ್ಮೀನಾರಾಯಣ ಭಟ್ಟ, ಚಂದ್ರಶೇಖರ ಕಂಬಾರ, ಎಸ್. ಎಲ್. ಭೈರಪ್ಪ, ಮತ್ತೂರು ಕೃಷ್ಣಮೂರ್ತಿ, ಗಿರೀಶ್ ಕಾರ್ನಾಡ್, ಡಿ. ಆರ್. ನಾಗರಾಜ, ವ್ಯಾಸರಾಯ ಬಲ್ಲಾಳ, ಪ್ರಭುಶಂಕರ ಮುಂತಾದವರ ಭೇಟಿಯಿಂದ ಬಹಳಷ್ಟು ಲಾಭ ಪಡೆದಿದ್ದೇನೆ. ಈ ಭೇಟಿಗಳಿಂದ ಕರ್ನಾಟಕದ ಸಾಹಿತಿಗಳೊಡನೆ ಸಂಪರ್ಕ ಬೆಳೆಸಿಕೊಳ್ಳಲು ಸಹಾಯವಾಯ್ತು. ಈ ನಿಟ್ಟಿನಲ್ಲಿ, ಅಮೆರಿಕನ್ನಡಿಗರಲ್ಲಿ ಸಾಹಿತ್ಯಾಭಿರುಚಿ ಮೂಡಲು ಪ್ರೋತ್ಸಾಹ ನೀಡಿದ ಕೆಲವು ವ್ಯಕ್ತಿಗಳನ್ನು ಧನ್ಯತಾಭಾವನೆಯಿಂದ ನೆನೆಸಿಕೊಳ್ಳಬೇಕು. 'ಅಮೆರಿಕನ್ನಡ'ವೆಂಬ ದ್ವೈಮಾಸಿಕ ಪತ್ರಿಕೆಯನ್ನು ಪ್ರಾರಂಭಿಸಿದ ಹರಿಹರೇಶ್ವರ ದಂಪತಿ– ಮೊದಲಿಗೆ ಉಚಿತವಾಗಿ ಬರಹ ತಂತ್ರಾಂಶವನ್ನು ಒದಗಿಸಿ, ಅಮೆರಿಕನ್ನಡಿಗರಲ್ಲಿ ಹುದುಗಿದ್ದ ಸಾಹಿತ್ಯಾಭಿಮಾನವನ್ನು ಹೊಡೆದೆಬ್ಬಿಸಿದ, ಬರಹ ಶೇಷಾದ್ರಿ ವಾಸು, ಅಮೆರಿಕನ್ನಡಿಗರ ಬರಹಗಳನ್ನು ತಮ್ಮ ಅಂತರ್ಜಾಲ ಪತ್ರಿಕೆ, 'ದಟ್ಸ್ ಕನ್ನಡ'ದಲ್ಲಿ ಪ್ರಕಟಿಸಿ, ಪ್ರೋತ್ಸಾಹಿಸಿದ ಶಾಮಸುಂದರ – ಇವರು ಅಂಥವರಲ್ಲಿ ಕೆಲವರು. ಅಲ್ಲದೆ ಇಲ್ಲಿ ನಮ್ಮ ವಲಸೆ ಜೀವನವೂ ನಮ್ಮ ಸಾಹಿತ್ಯಾಸಕ್ತಿ ವೃದ್ಧಿಯಾಗಲು ಕಾರಣವಾಯ್ತೆಂಬುದನ್ನು ಮರೆಯುವಂತಿಲ್ಲ. ಈಗ ಎಣಿಸಿದಲ್ಲಿ, ಮೊದಲಿಗೆ ಬಂದ ಕನ್ನಡ ವಲಸೆಗಾರರು ಅನುಭವಿಸಿದ ತಲ್ಲಣಗಳು ಕೆಲವರಿಗೆ, ಅದರಲ್ಲೂ ಇತ್ತೀಚೆಗೆ ಬಂದ ವಲಸೆಗಾರರಿಗೆ ಕ್ಷುಲ್ಲಕವಾಗಿ ಕಂಡೀತು. ಹಿಂದೆ ಬಂದ ಕನ್ನಡಿಗ ವಲೆಸೆಗಾರರು ಇಂದಿಗೂ ತಮ್ಮ ಸಂಕುಚಿತ ಪ್ರಪಂಚದಲ್ಲೇ ಹುದುಗಿ, ತಾವು ಅಂದು ನಡೆಸಿದ ಸಾಮಾನ್ಯ ಕಾರ್ಯಗಳನ್ನು ವೈಭವೀಕರಿಸುತ್ತಿದ್ದಾರೆಂಬ ಟೀಕೆಯನ್ನೂ ಕೇಳಿದ್ದೇನೆ. ಆದರೆ, ಹಿಂದಿನ ಅನುಭವಗಳೇ – ಅವೆಷ್ಟು ಈಗ ಕ್ಷುಲ್ಲಕವಾಗಿ ಕಂಡರೂ – ಮುಂದಿನ ಪ್ರಗತಿಗೆ ದಾರಿ ಎಂಬುದನ್ನು ಮರೆಯಬಾರದು.

3. ತಾವು ಸಂಪಾದಿಸಿದ ಕೃತಿಯೊಂದರ ಪ್ರಸ್ತಾವನೆಯಲ್ಲಿ 'ಸಾಹಿತ್ಯ ಒಂದು ಜನಾಂಗದ ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತದೆ' ಎಂದು ಹೇಳಿದ್ದೀರಿ. ಬದುಕಿನ ಬಹುಪಾಲು ಸಮಯವನ್ನು ತಾಯ್ನಾಡಿನ ಸಂಸ್ಕೃತಿಯಿಂದ ದೂರವಾಗಿಯೇ ಕಳೆದ ನೀವು ಎರಡೂ ನಾಡುಗಳ ಸಂಸ್ಕೃತಿ– ಸಂಘರ್ಷವನ್ನು ಹೇಗೆ ಎದುರಿಸಿದಿರಿ?

ಕಳೆದ 46 ವರ್ಷಗಳಿಂದ ನಾನು ಭಾರತದಿಂದ ದೂರವಾಗಿ ಉಳಿದುದು ನಿಜ. ಆದರೆ, ಭಾರತ, ಕನ್ನಡ ನಾಡು, 'ಕನ್ನಡತನ' ಮಾತ್ರ ನನ್ನಿಂದ ದೂರವಾಗಿಯೇ ಇಲ್ಲ. ಇದು ಅತಿಶಯೋಕ್ತಿಯಾಗಿ ಕಾಣಬಹುದು; ಆದರೆ ಅಪ್ಪಟ ಸತ್ಯ. ಕನ್ನಡದಿಂದ ದೂರವಾಗಿದ್ದರೂ, ಕನ್ನಡತನ ನನ್ನ ಬೆನ್ನಿಗೆ ಅಂಟಿಕೊಂಡೇ ಬಂದಿದೆ. ಹಾಗಾಗಿ ಇಲ್ಲಿ ಸ್ವಲ್ಪ ಭಿನ್ನ ಸಂಸ್ಕೃತಿಯ ನಡುವೆ ಜೀವನ ನಡೆಸುತ್ತಿದ್ದರೂ, ನಾನು ಕನ್ನಡಿಗನಾಗಿಯೇ – ಬೇಕಾದರೆ 'ಅಮೆರಿಕನ್ನಡಿಗ'ನೆಂದೇ ಹೇಳಿ – ಉಳಿದಿದ್ದೇನೆಂಬ ಹೆಮ್ಮೆ ಇದೆ. ಅಮೆರಿಕನ್ನಡಿಗನೆಂದಾಗ ಇಲ್ಲಿ ಅಮೆರಿಕದ 'ಸಂಸ್ಕೃತಿ'ಯೊಡನೆ ಹೊಂದಾಣಿಕೆ ಮಾಡಿಕೊಂಡ ಸುಳಿವು ಸಿಗುತ್ತದಲ್ಲವೇ?

ಇನ್ನು ಸಂಸ್ಕೃತಿ– ಸಂಘರ್ಷದ ಬಗ್ಗೆ ನನ್ನ ಉತ್ತರವಿಷ್ಟೆ! 'ಸಂಘರ್ಷ' ಹಾಗೂ 'ಸಂಧಾನ' ಇವೆರಡೂ ನಮ್ಮ ಮನೋಭಾವದ ಮೇಲೆ ಹೊಂದಿಕೊಂಡಿರುತ್ತದೆ. ಪ್ರತಿಯೊಂದು ಸಂಸ್ಕೃತಿಯಲ್ಲೂ ಒಂದಲ್ಲ ಒಂದು ಸಂಘರ್ಷವಿದ್ದೇ ಇರುತ್ತದೆ. ಹಾಗೆಂದು, ಒಂದು ಸಂಸ್ಕೃತಿಯನ್ನು ಕೀಳು ದೃಷ್ಟಿಯಿಂದ ನೋಡಬಾರದು. ನಾವೇ ಆರಿಸಿಕೊಂಡು ಇಲ್ಲಿ ನೆಲೆಸುವ ನಿರ್ಧಾರ ಕೈಗೊಂಡಿರುವಾಗ, ಇಲ್ಲಿನ ನಡೆ–ನುಡಿ, ಜೀವನಕ್ರಮಗಳನ್ನು ಒಪ್ಪಿ, ಅವುಗಳಿಗೆ ಹೊಂದಿಕೊಂಡು ಹೋಗುವ ಕರ್ತವ್ಯವೂ ನಮ್ಮದಾಗಿದೆ. ಅಂದರೆ, ಇಲ್ಲಿಯ ಸಂಸ್ಕೃತಿಯೊಡನೆ ಒಡಂಬಡಿಕೆ ಮಾಡಿಕೊಳ್ಳುವ ಪ್ರವೃತ್ತಿಯನ್ನು ನಾವು ಬೆಳೆಸಿಕೊಂಡು ಬರಬೇಕು. ಇಲ್ಲಿಗೆ ವಲಸೆ ಬಂದ ಹೊಸದರಲ್ಲಿ ಈ ಹೊಂದಿಕೊಳ್ಳುವ ಪ್ರವೃತ್ತಿ ಸ್ವಲ್ಪ ಕಷ್ಟವಾಗಿದ್ದೇನೋ ನಿಜ, ಆದರೆ, ದಿನಕಳೆದಂತೆ ನನ್ನ ಜವಾಬ್ದಾರಿಯ ಕುರಿತು ನಾನೇ ಎಚ್ಚರಗೊಂಡು, ನಿಧಾನವಾಗಿ ಇಲ್ಲಿಯವರ ನಡತೆಗಳನ್ನು ಒಪ್ಪಿಕೊಳ್ಳಲಾರಂಭಿಸಿದೆ. ಈ ಪ್ರಕ್ರಿಯೆಯಲ್ಲಿ, ಎಳೆವಯಸ್ಸಿನ ನನ್ನ ಮಕ್ಕಳು ಸುಲಭವಾಗಿ ಹೊಂದಿಕೊಂಡು, ನನಗೆ ತುಂಬಾ ಸಹಾಯ ಮಾಡಿದ್ದಾರೆ. ನಮ್ಮ ಸಂಸ್ಕೃತಿಯನ್ನು ಕಾಪಾಡಿಕೊಂಡೇ, ಇಲ್ಲಿಯವರೊಡನೆ ಬೆರೆಯಬಹುದು ಎಂಬ ಪಾಠ ಕ್ರಮೇಣ ಕಲಿಯುತ್ತ ಬಂದೆ. ಆಗ, ಪರಿಚಯದ ಪರಿಸರವಲ್ಲದ ಈ ನಾಡಿನಲ್ಲಿ ನಾವು 'ಒಂಟಿ'ಯಾಗಿದ್ದೇವೆಂಬ ಮನೋಭಾವ ನನ್ನಿಂದ ದೂರವಾಗುತ್ತ ಬಂತು. ನಮ್ಮ ನಾಡಿನ ಮೇಲೆ ನಾವು ಅಭಿಮಾನವಿಡುವುದು ಸ್ವಾಭಾವಿಕವೇ! ಆದರೆ, ಅದು ಇನ್ನೊಂದು ಸಂಸ್ಕೃತಿಯ ಮೇಲೆ ಅಭಿಮಾನ ಬೆಳಸುವಲ್ಲಿ ಅಡ್ಡಿ ಬರಬಾರದಲ್ಲವೇ? ಅದು 'ಸಂಧಾನ' ಪ್ರವೃತ್ತಿಯಿಂದ ಮಾತ್ರ ಸಾಧ್ಯ!

4. ನೀವು ಬರವಣಿಗೆಯ ಜೊತೆಜೊತೆಗೆ ಕುವೆಂಪು–ಕಾರಂತ–ಬೇಂದ್ರೆ ಮುಂತಾದವರ ಸಾಹಿತ್ಯದ ಕುರಿತು ಗ್ರಂಥಗಳನ್ನು ಸಂಪಾದಿಸಿದ್ದೀರಿ. ನಿಮ್ಮ ಪ್ರಕಾರ 'ಸೃಜನಶೀಲ ಸಾಹಿತಿ' ಮತ್ತು 'ಸಂಪಾದಕ' ಈ ಎರಡರಲ್ಲಿ ಹೃದಯಕ್ಕೆ ಹತ್ತಿರವಾದ ಆಯ್ಕೆ ಯಾವುದು? ಏಕೆ?

ನಿಜ, ನಾನು ಇದುವರೆಗೆ ಕಾರಂತ, ಕುವೆಂಪು, ಪು.ತಿ.ನ., ಮಾಸ್ತಿ, ರಾಜರತ್ನಂ, ಅನಂತಮೂರ್ತಿ, ಬೇಂದ್ರೆ – ಇವರ ಸಾಹಿತ್ಯದ ಕುರಿತು ಕೃತಿಗಳನ್ನು ಸಂಪಾದಿಸಿದ್ದೇನೆ. ಹಾಗೆಯೇ ಬೇರೆ 9 ಸ್ವಂತ ಕೃತಿಗಳನ್ನೂ ಪ್ರಕಟಿಸಿದ್ದೇನೆ. ಸಂಪಾದಕ ಮತ್ತು ಸ್ವಂತ ಬರವಣಿಗೆ – ಇವೆರಡರಲ್ಲಿ ನನಗೆ ಯಾವುದು ಆಪ್ತವಾದುದು ಎಂಬ ಪ್ರಶ್ನೆಗೆ ಉತ್ತರ ಕೊಡುವುದು ಸ್ವಲ್ಪ ಕಷ್ಟವೇ! ಪೂರ್ವಸೂರಿಗಳ ಮೇಲೆ ಕೃತಿ ಸಂಪಾದಿಸಿದ್ದುದು ನನಗೆ ತುಂಬಾ ತೃಪ್ತಿ ನೀಡಿದೆ. ಆ ಪ್ರಕ್ರಿಯೆಯಲ್ಲಿ ನಾನು ಅನೇಕ ಅಮೆರಿಕನ್ನಡ ಬರಹಗಾರರ ಸಂಪರ್ಕ ಬೆಳೆಸಿ ತುಂಬಾ ಲಾಭ ಪಡೆದಿರುತ್ತೇನೆ. ಜೊತೆಗೆ, ಬೇರೆ ಹವ್ಯಾಸೀ ಬರಹಗಾರರಿಗೆ ಪ್ರೋತ್ಸಾಹ ನೀಡಿದ್ದೆನೆಂಬ ತೃಪ್ತಿಯೂ ನನ್ನದಾಗಿದೆ. ಇದನ್ನು ಹೆಗ್ಗಳಿಕೆಯ ಮಾತೆಂದು ತಿಳಿಯಬಾರದು. ಅಲ್ಲದೆ, ಸಂಪಾದಕನಾಗಿ ಕರ್ನಾಟಕದ ಹಲವು ಜನಪ್ರಿಯ

ಲೇಖಕರ ಸಂಪರ್ಕ ಬೆಳೆಸಿಕೊಳ್ಳುವ ಭಾಗ್ಯವೂ ನನ್ನದಾಗಿದೆ. 'ಕಾರಂತ ಚಿಂತನ' ಕೃತಿ ರಚಿಸುವಾಗ ಅಲ್ಲಿನ ಎಲ್ಲ ಲೇಖನಗಳೂ ಅಮೆರಿಕನ್ನಡಿಗರದ್ದೇ ಆಗಿವೆ. ಆದರೆ, ಇತರ ಕೃತಿಗಳಲ್ಲಿ ಕರ್ನಾಟಕದ ಲೇಖಕರಿಂದಲೂ ಲೇಖನ ಪಡೆದಿದ್ದೇನೆ.

ಇನ್ನು ಸ್ವಂತ ಬರವಣಿಗೆಯೂ ನನಗೆ ಬಹಳಷ್ಟು ತೃಪ್ತಿ ನೀಡಿದೆ. ಇತ್ತೀಚೆಗೆ ನನ್ನ ಹುಟ್ಟೂರು ಕೋಟದಲ್ಲಿ 'ಅಮೆರಿಕದಲ್ಲಿ ಕಂಡ ಕನಸು, ಕಟ್ಟಿದ ನೆನಪು' ಎಂಬ ಕೃತಿ ಬಿಡುಗಡೆಯಾಗಿದ್ದುದೂ ಎಲ್ಲಿಲ್ಲದ ಆನಂದ ನೀಡಿದೆ. ಬರವಣಿಗೆಯಲ್ಲಿ ನಾನು ಅನೇಕರ ಸಹಾಯ ಪಡೆದುದನ್ನು ಇಲ್ಲಿ ಧನ್ಯತಾ ಭಾವನೆಯಿಂದ ನೆನೆಯುತ್ತೇನೆ. ನನ್ನ ಹೆಚ್ಚಿನ ಕೃತಿಗಳ ಪ್ರಕಾಶಕರಾಗಿ ಬೆಂಗಳೂರಿನ 'ಅಭಿನವ'ದ ರವಿಕುಮಾರ್–ಚಂದ್ರಿಕಾ ಅವರ ಸಹಕಾರವನ್ನು ಮರೆಯುವಂತಿಲ್ಲ. ಹಾಗೆಯೇ, ನಳಿನಿ ಮೈಯ, ಎಚ್. ವೈ. ರಾಜಗೋಪಾಲ್, ಮೈ. ಶ್ರೀ. ನಟರಾಜ ಮತ್ತಿತರ ಸಹಕಾರವನ್ನೂ ನೆನೆಯುವೆ. ಬರವಣಿಗೆ ನನಗೆ ಹಲವಾರು ಬರಹಗಾರರ ಸಂಪರ್ಕ ಬೆಳೆಸಲು ಸಹಾಯವಾಗಿದೆ. ಹೇಳೀಕೇಳಿ ನಾನೊಬ್ಬ ವೈಜ್ಞಾನಿಕ ಸಂಶೋಧನಾ ವಿದ್ಯಾರ್ಥಿ. ಆದರೆ, ಸುಮಾರು 1999ರಿಂದ ನನ್ನಲ್ಲಿ ಬರವಣಿಗೆಯ ಮೇಲಿನ ಆಸಕ್ತಿ ಅದು ಹೇಗೋ ಹುಟ್ಟಿ, ಬೆಳೆದು ಬಂದಿದೆ. ಈ ಮಾರ್ಪಾಟಿಗಾಗಿ ನನಗೆ ಯಾವ ರಿಗ್ರೆಟೂ ಇಲ್ಲ! ಬದಲಿಗೆ, ಸಂಪಾದಕನಾಗಿಯೂ, ಸ್ವಂತ ಕೃತಿಕಾರನಾಗಿಯೂ ಅತೀವ ಸಂತೋಷ ಪಡೆದಿರುವೆ. ಸಾಧ್ಯವಾಗುವವರೆಗೂ ನಾನು ನನ್ನ ಬರವಣಿಗೆಯನ್ನು ಮುಂದುವರಿಸಿಕೊಂಡು ಬರುವ ಮಹದಾಸೆ ಇಟ್ಟುಕೊಂಡಿರುವೆ.

5. ಯು. ಆರ್. ಅನಂತಮೂರ್ತಿ ಮತ್ತು ಜಿ.ಎಸ್.ಎಸ್. ಅವರ ಜೊತೆಗೆ ನಿಮ್ಮದು ಬಹುಕಾಲದ ಆತ್ಮೀಯ ಸ್ನೇಹವಾಗಿತ್ತು. ಅವರೊಡನೆ ಒಡನಾಟ ಹೇಗಿತ್ತು ?

ನನ್ನ ಬರವಣಿಗೆಯ ಬೆಳವಣಿಗೆಯಲ್ಲಿ ನನಗೆ ಕರ್ನಾಟಕದ ಹಲವು ಸಾಹಿತಿಗಳ ಬೆಂಬಲ ಮತ್ತು ಆತ್ಮೀಯ ಸಂಬಂಧ ಸುಖ ತೃಪ್ತಿ ನೀಡಿವೆ. ಅವರಲ್ಲಿ ಅನಂತಮೂರ್ತಿ ಮತ್ತು ಶಿವರುದ್ರಪ್ಪನವರ ಹೆಸರುಗಳು ನನ್ನ ಮನಸ್ಸಿನಲ್ಲಿ ಥಟ್ಟನೆ ಮೂಡಿಬರುತ್ತದೆ.

ಅನಂತಮೂರ್ತಿಯವರೊಡನೆ ಆತ್ಮೀಯತೆ ಬೆಳೆದುದು ಕಳೆದ 80ರ ದಶಕದ ಮಧ್ಯದಲ್ಲೆಂಬ ನೆನಪು. ಆಗ ಅವರು ಅಯೋವಾ ಯೂನಿವರ್ಸಿಟಿಯಲ್ಲಿ ವಿಸಿಟಿಂಗ್ ಪ್ರಾಧ್ಯಾಪಕರಾಗಿ ಕೆಲಸ ಮಾಡುತ್ತಿದ್ದರು. ಶಿಕಾಗೋ ಯುನಿವರ್ಸಿಟಿಯ ಎ. ಕೆ. ರಾಮಾನುಜನ್ ಅವರನ್ನು ಭಾಷಣಕ್ಕೆಂದು ತಮ್ಮಲ್ಲಿಗೆ ಆಗಾಗ್ಗೆ ಬರಮಾಡಿಕೊಳ್ಳುತ್ತಿದ್ದರು. ಒಮ್ಮೆ ಹಾಗೆ ಬಂದಾಗ, ಇಂಟರ್‌ನ್ಯಾಷನಲ್ ಹೌಸ್‌ನಲ್ಲಿ ತಂಗಿದ ಅವರನ್ನು ಪ್ರಥಮ ಬಾರಿಗೆ ಭೇಟಿ ಮಾಡಿ ನನ್ನ–ಅವರ ಮಲೆನಾಡಿನ ಕನೆಕ್ಷನ್ ಹೇಳಿಕೊಂಡು ನಮ್ಮ ಮನೆಗೆ ಕರೆದು ತಂದೆ. ಮಲೆನಾಡಿನವಳಾದ ನನ್ನವಳ ಆತಿಥ್ಯವನ್ನು ಅವರು ಬಲುವಾಗಿ ಮೆಚ್ಚಿದರು. ಆಮೇಲಿಂದ, ಅವರು ಶಿಕಾಗೋಗೆ ಬಂದಾಗಲೆಲ್ಲ ನಮ್ಮ ಆತಿಥ್ಯವನ್ನೇ ಸ್ವೀಕರಿಸುತ್ತಿದ್ದರು. ಅವರು ಬಂದಾಗಲೆಲ್ಲ ಸಾಹಿತ್ಯಕ್ಕೆ ಸಂಬಂಧಪಟ್ಟ ವಿಷಯಗಳ


ಮೇಲೆ ಸಂಪಾದ ನಡೆಸುತ್ತಿದ್ದೆವು. ನಾವು ಬೆಂಗಳೂರಿಗೆ ಹೋದಾಗಲೆಲ್ಲ ಅವರನ್ನು ಭೇಟಿ ಮಾಡಿಯೇ ಬರುತ್ತಿದ್ದೆವು. ಆದರೆ, 2013ರಲ್ಲಿ ಭಾರತ ಭೇಟಿ ಮಾಡಿದಾಗ ಕಾರಣಾಂತರ ಅವರನ್ನು ನೋಡಲಾಗಲಿಲ್ಲ. ಇದು ನಮಗೆ ಇಂದಿಗೂ ಸಂಕಟ ತರುತ್ತಿದೆ. ಕಾರಣ, ಭೌತಿಕವಾಗಿ ಭೇಟಿ ಮಾಡದಂತೆ ವಿಧಿ ಅವರ ನಿಧನದೊಂದಿಗೆ ಅವರನ್ನು ನಮ್ಮಿಂದ ಕಿತ್ತುಕೊಂಡಿತು.

2009ರಲ್ಲಿ ನಾನು ಅವರ ಮೇಲೆ ಒಂದು ಗ್ರಂಥವನ್ನು ಸಂಪಾದಿಸಿದುದು ಅತೀವ ತೃಪ್ತಿ ತಂದಿದೆ. ರಾಜರತ್ನಂ ಮೇಲಿನ ನನ್ನ ಸಂಪಾದಿತ ಗ್ರಂಥಕ್ಕೆ ಮುನ್ನುಡಿ ಬರೆಯಲು ಕೇಳಿಕೊಂಡಾಗ, ಅನಾರೋಗ್ಯದಿಂದಾಗಿ ಬರೆಯಲಾಗದಿದ್ದರೂ ಈ ಕೆಳಗಿನ ಮಾತನ್ನು ಬರೆದು ಕಳುಹಿಸಿದ್ದರು: '...ಈಗ ಐತಾಳರು ದೇಹದಲ್ಲಿ ದಣಿದಿದ್ದರೂ ಅಮೆರಿಕದಲ್ಲಿ ಕನ್ನಡಕ್ಕೊಂದು ಮನೆ ಕಟ್ಟುತ್ತಿದ್ದಾರೆ. ಇಂಥವರ ಪ್ರಯತ್ನದಿಂದಲೇ ಶಾಸ್ತ್ರೀಯ ಭಾಷೆ ಜೀವಂತ ಭಾಷೆಯಾಗಿಯೂ 'ಕವಿರಾಜ ಮಾರ್ಗ' ಹಾಕಿದ ಗಡಿಯನ್ನು ಮೀರಿರುವುದು...' ಒಬ್ಬ ಶ್ರೇಷ್ಠ ಸಾಹಿತಿ, ವಿಮರ್ಶಕ, ಚಿಂತಕನಿಂದ ಈ ಮಾತು ಬಂದುದು ನನ್ನ ಭಾಗ್ಯವೆಂದೇ ಭಾವಿಸುತ್ತೇನೆ. ನಾನು ಸಂಪಾದಿಸಿದ ಮೊಟ್ಟ ಮೊದಲನೆಯ ಗ್ರಂಥ, 'ಕಾರಂತ ಚಿಂತನ – ಕಡಲಾಚೆಯ ಕನ್ನಡಿಗರಿಂದ' ಅವರ ಪ್ರೋತ್ಸಾಹದಿಂದಲೇ ಪ್ರಕಟವಾಗಲು ಸಾಧ್ಯವಾಯ್ತು. ಅವರು ಶಿಕಾಗೋಗೆ ಬಂದಾಗ, ಕಾರಂತರ ಮೇಲೊಂದು ಗ್ರಂಥ ತಯಾರಿಸುವುದಕ್ಕೆ ಸಲಹೆ ಕೊಟ್ಟು, ಆ ಕೆಲಸವನ್ನು ನನ್ನಿಂದ ಮಾಡಿಸಿದರು. ಆ ಬಗ್ಗೆ ನಾನವರಿಗೆ ಕೃತಜ್ಞ! ಮುಂದೆ, ಬೇರೆ ಗ್ರಂಥ ಪ್ರಕಟಿಸುವಲ್ಲಿ ಅವರ ಪ್ರೋತ್ಸಾಹ ನನಗೆ ಎಲ್ಲಿಲ್ಲದ ಉತ್ತೇಜನ ಕೊಟ್ಟಿತು ಎಂಬುದನ್ನು ಧನ್ಯತಾಭಾವನೆಯಿಂದ ಸ್ಮರಿಸುತ್ತೇನೆ. ರಾಜಕೀಯದಲ್ಲಿ, ಸೆಕ್ಯುಲರಿಸಂ ಮೇಲಿನ ಅವರ ನಿಲುವು ಏನೇ ಇರಲಿ, ಅವರೊಬ್ಬ ಅಪ್ಪಟ ಕನ್ನಡಪ್ರೇಮಿ. ಪ್ರತಿಭಾವಂತ ಚಿಂತಕ, ಉತ್ತಮ ಸಾಹಿತಿ ಎಂಬುದರಲ್ಲಿ ಅನುಮಾನವೇ ಇಲ್ಲ! ಅವರ ಒಂದು ಗಮನಾರ್ಹ ಗುಣವೆಂದರೆ, ಅವರು ವೈಚಾರಿಕತೆಗೆ ಕೊಡುವ ಮಹತ್ತ್ವ. ಅಂಥವರ ಆತ್ಮೀಯ ಸ್ನೇಹ ನನಗೆ ದೊರಕಿದುದು ಅದೃಷ್ಟವೆಂದೇ ತಿಳಿದಿರುವೆ.

ಹಾಗೆಯೇ ಶಿವರುದ್ರಪ್ಪನವರ ಸಂಪರ್ಕವೂ ನನ್ನ ಪಾಲಿನ ಭಾಗ್ಯ. ಅವರು ಅಮೆರಿಕಕ್ಕೆ ಬಂದಾಗಲೆಲ್ಲ ನಮ್ಮ ಆತಿಥ್ಯ ಪಡೆಯದೆ ಹೋಗುತ್ತಿರಲಿಲ್ಲ. ನಾನೂ ಕೂಡ ಬೆಂಗಳೂರಿಗೆ ಭೇಟಿ ಕೊಟ್ಟಾಗಲೆಲ್ಲ ಅವರನ್ನು ಭೇಟಿಯಾಗುತ್ತಿದ್ದೆ. ಬಂದಾಗಲೆಲ್ಲ ನಾನೂ, ನನ್ನವಳೂ ನಮ್ಮ ಕಿಚನ್ ಟೇಬಲ್ ಮುಂದೆ ನಡೆಸಿದ ಸಾಹಿತ್ಯ ಸಂವಾದ ನನಗೆ ಅತ್ಯಂತ ಆತ್ಮೀಯವಾದುದು. ಅದು ನನಗೆ ಅವರ ಸಾಹಿತ್ಯದ ಆಳ ಜ್ಞಾನದ ಅರಿವಾದುದಲ್ಲದೆ, ನನ್ನ ಸಾಹಿತ್ಯಾಸಕ್ತಿಯನ್ನೂ ಕೆರಳಿಸಲು ಕಾರಣವಾಯ್ತು. ಅಂಥ ಒಂದು ಸಂವಾದವನ್ನು ನನ್ನ ಇತ್ತೀಚಿನ 'ಸಾಹಿತ್ಯ ಸ್ಪಂದನ'ದಲ್ಲಿನ ಲೇಖನವೊಂದರಲ್ಲಿ ದಾಖಲೀಕರಿಸಿದ್ದೇನೆ. ಅವರು ತೀರಿಕೊಳ್ಳುವ ಮೊದಲು ಬಹುಕಾಲ ಪ್ರಜ್ಞೆ ತಪ್ಪಿದ್ದರು.

ಆ ಸ್ಥಿತಿಯಲ್ಲಿ ಅವರನ್ನು ಕಾಣುವ ದೌರ್ಭಾಗ್ಯ ನನ್ನದಾಗಿತ್ತು. ತಮ್ಮ ಕವನವೊಂದರಲ್ಲಿ ಹೇಳಿದ 'ದತ್ತವಾಗಿದೆ ಮತ್ತೆ ವ್ಯಕ್ತ ಮಧ್ಯದ ಬದುಕು; ಮೊದಲಿಗಿಂತಲೂ ಸೊಗಸಾಗಿ ಕಂಡಿತು ಲೋಕ; ಈವರೆಗೂ ಮಹಾ ವಿಸ್ಮೃತಿಯಲ್ಲಿ ಕರಗಿ ಹೋಗಿ ಬಂದ ಅಸ್ತಿತ್ವಕ್ಕೆ ಎಲ್ಲವನೂ ತಬ್ಬಿಕೊಳ್ಳುವ ತವಕ' ಎಂಬ ಮಾತಿನ ಅರ್ಥವನ್ನು ಅರಿಯುವ ಸ್ಥಿತಿ ನನ್ನದಾಗಿತ್ತು. ಅವರ ಆ ಸ್ಥಿತಿಯನ್ನು ನೋಡಿದಾಗ, ಅವರನ್ನು ನೆನೆಸಿದಾಗಲೆಲ್ಲ ನನ್ನ 'ಎದೆತುಂಬಿ' ಬರುವುದು. ಭೌತಿಕವಾಗಿ ಈಗ ಅವರು ನಮ್ಮೆದುರು ಇಲ್ಲದಿದ್ದರೂ, ನಮ್ಮ ಸ್ಮರಣೆಯಲ್ಲಂತೂ ಅವರು ಸದಾ ಉಳಿಯುವುದಂತೂ ನಿಜ! ಇದೇ ನಮ್ಮೆಲ್ಲರಿಗೂ, ಸಾಹಿತ್ಯಲೋಕಕ್ಕೂ ಅವರು ಬಿಟ್ಟುಹೋದ ಬಳುವಳಿ! ಅವರ 'ಪ್ರೀತಿ ಇಲ್ಲದ ಮೇಲೆ ಹೂವು ಅರಳಿತು ಹೇಗೆ?' ಎಂಬ ಸಂದೇಶದ ತಿರುಳು ನಮ್ಮ ಮನಸ್ಸಿನಲ್ಲಿ ಮಥಿಸುತ್ತಿರುವುದಂತೂ ನಿಜ! ಅವರು ನನ್ನ ಮೇಲಿಟ್ಟ ಪ್ರೀತಿ, ವಿಶ್ವಾಸವನ್ನು ನೆನೆದಾಗಲೆಲ್ಲ ನನ್ನ ಹೃದಯ ಕೃತಜ್ಞತೆಯಿಂದ ತುಂಬಿ ತುಳುಕಾಡುತ್ತಿರುತ್ತದೆ! ಅಂತಹ ಮಹಾಚೇತನಕ್ಕೆ ನಮ್ರ ನಮನ!

ಬೃಂದಾವನ ತಿಂಗಳ ಪತ್ರಿಕೆಯಲ್ಲಿ 2016ರಲ್ಲಿ ಪ್ರಕಟವಾದ ಸಂದರ್ಶನ



ನಾಗ ಐತಾಳರ ಮೂಲಕ ನನ್ನ ಬಾಲ್ಯಕ್ಕೆ ಒಂದು ಪ್ರವೇಶ

– ಸೀಮಾ ಎಸ್. ಭಟ್

ನಾನು 'ಹೊಸ ದಿಗಂತ' ಪತ್ರಿಕೆಯಲ್ಲಿದ್ದಾಗ ನಾಗ ಐತಾಳರ ಪುಸ್ತಕವೊಂದನ್ನು ಓದಿದ್ದೆ. ಈಗ ಮತ್ತೆ ನಾಗ ಐತಾಳರ ಎಲ್ಲ ಪುಸ್ತಕಗಳನ್ನು ಗಮನಿಸುವಾಗ ಯಾಕೆ ಅವರು ಮತ್ತೆ ಮತ್ತೆ ತಮ್ಮ ಆತ್ಮಕಥನವನ್ನು ಬರೆದರು? ಎಂಬ ಪ್ರಶ್ನೆ ಕಾಡಿತು. ಅವರ 'ತಲೆಮಾರು' ಕಾದಂಬರಿಯಲ್ಲಿ ಕೂಡ ಅವರ ಊರಿನ ಮತ್ತು ಬಾಲ್ಯದ ಹಲವು ಸಂಗತಿಗಳು ಪ್ರಸ್ತಾಪವಾಗುತ್ತವೆ.

ನಾಗ ಐತಾಳರು 'ಅಮೆರಿಕದಲ್ಲಿ ಕಂಡ ಕನಸು ಕಟ್ಟಿದ ನೆನಪು', 'ಸ್ಮರಣೆ ಸಾಲದೆ' ಮತ್ತು 'ಕಾಲ ಉರುಳಿ ಉಳಿದುದು ನೆನಪಷ್ಟೆ' ಎಂಬ ಮೂರು ಕೃತಿಗಳಲ್ಲಿ ತಮ್ಮ ಬಾಲ್ಯಕಾಲದ ಅನುಭವಗಳನ್ನು ಮತ್ತೆ ಮತ್ತೆ ಪ್ರಸ್ತಾಪಿಸುತ್ತಾರೆ. ಯಾಕೆ ಒಬ್ಬ ವ್ಯಕ್ತಿ ಮತ್ತೆ ಮತ್ತೆ ತನ್ನ ಬಾಲ್ಯವನ್ನು ಹಿಂದಿರುಗಿ ನೋಡುತ್ತಾನೆ ಎಂಬ ಕುತೂಹಲ ನನಗೆ.

ನಾನೂ ಕೂಡ ಅದೇ ಊರಿನ ಪರಿಸರದಿಂದ ಬಂದದ್ದು. ಅವರ ಬಾಲ್ಯದ ಘಟನೆಗಳನ್ನು ಓದುವಾಗಲೆಲ್ಲ. ನನ್ನ ಬಾಲ್ಯದ ನೆನಪುಗಳೂ ನುಗ್ಗಿ ಬಂದವು. ನಮ್ಮ ಅಪ್ಪನಿಗೆ ನಾಲ್ವರು ಹೆಣ್ಣುಮಕ್ಕಳು. ಇದ್ದದ್ದು ನಾಲ್ಕು ಎಕರೆ ತೋಟ. ಸ್ವಾಭಿಮಾನಿಯಾದ ಆತ ನಮಗೆ ಕಲಿಸಿದ್ದು ಕೂಡ ಆತ್ಮಗೌರವವನ್ನು ಕಾಪಾಡಿಕೊಳ್ಳುವ ಬಗೆಗೆ. ಅದೆಷ್ಟು

ಬಡತನ ಅಂತೀರಿ. ಕೈಯಗಲದ ಎರಡು ದೋಸೆಯನ್ನು ನಾಲ್ವರು ತಿನ್ನಬೇಕಿತ್ತು. ಅದೂ ಅಲ್ಲದೆ ನಮ್ಮದು ಕೂಡು ಕುಟುಂಬ.

ನಾನಾಗ ನಾಲ್ಕುವರ್ಷದ ಹುಡುಗಿಯಿರಬೇಕು. ಒಮ್ಮೆ 'ಶಾಲೆಯಲ್ಲಿ ಹೇಳಿಕೊಡುವ ಗಣಿತವನ್ನು ಹೇಗೆ ಕಲಿತಿದ್ದೀಯ ನೋಡೋಣ ಎಲ್ಲ ತೆಂಗಿನ ಮರಗಳನ್ನು ಎಣಿಸಿಕಡ್ ನೀರು ಹಾಕಿಕಿ ಬಾ' ಎಂದು ಚಿಕ್ಕಪ್ಪ ಹೇಳಿದ್ದ. ನಾನು ಎಲ್ಲ ಗಿಡಗಳಿಗೆ ನೀರು ಹಾಕಿದ್ರೂ ಎಲ್ಲೊ ಕಣ್ಣು ತಪ್ಪಿ ಹೋಯಿತ್. ಅದಕ್ಕೆ ಹೊಡೆದ ತೆಂಗಿನ ಕುಣಿಗೆ ಬಿದ್ದೆ, ಹಂಗೆ ಕುತ್ತಿಗೆಯ ಮೇಲೆ ಕಾಲಿಟ್ಟ. ತ್ವಾಟದ ಬದಿಯಿಂದ ಬಪ್ಪುತ್ತಿದ್ದ ಅಮ್ಮ ನನ್ನ ಕಂಡ್ಲು 'ಅಯ್ಯೋ ಮಗುಗೆ ಯಂತ ಮಾಡಿದ್ಯ' ಎಂದು ಕೂಗಿದ್ಲು ಕಾಣಿ ಹೋದ ಜೀವ ಬಂದ ಹಾಗೆ ಆಯಿತ್, ಅಮ್ಮ ಬರ್ದಿದ್ರೆ ಈ ಹೊತ್ತಿಗೆ ನಾನ್ ಆ ತೆಂಗಿನ ಕುಣಿಗೆ ಗೊಬ್ಬರ ಆಯಿ ಹೋತಿದ್ನೇನೊ...

ಹೆಣ್ಣು ಎಂಬ ಕಾರಣಕ್ಕೋ ಅಥವಾ ಬಡತನ ಎಂಬ ಕಾರಣಕ್ಕೋ ಅಪ್ಪ ವಿಪರೀತ ಸ್ವಾಭಿಮಾನಿಯಾದ ಕಾರಣಕ್ಕೋ ನಮಗೆ ಕಷ್ಟಗಳು ಹೆಚ್ಚಿದ್ದವು. ನಮಗೆ ಬಿಡಿ ನಮ್ಮ ಮನೆಯ ಹಸುವೊಂದು ತೋಟದ ಬಾಳಿ ಎಲಿ ತಿಂಬುದಕ್ಕೆ ಕರೆಂಟ್ ಶಾಕ್ ಕೊಟ್ಟಿಬಿಟ್ಟ, ದನು ಸತ್ತೊಪಂಗೆ ಕೂಗಿತ್. ಹಿಂಸಿ ಕೋಡುವವರು ಈ ಕಾಲದಲ್ಲಿ ಏಕೆ, ಆ ಕಾಲದಲ್ಲೂ ಇದ್ದಿದ್ರು. ಪಾಪ ಹಸುಗೆ ಗೊತ್ತಿಪ್ಪುದು ಕೇವಲ ಹಸಿರಾದ ಎಲೆಯನ್ನು ತಿಂಬುಕೆ ಮಾತ್ರ. ಅವುಗಳಿಗೆ ಮನುಷ್ಯ ಮನುಷ್ಯರ ಸಂಬಂಧ ದ್ವೇಷ ಅಸೂಯೆಗಳ ಬಗೆಗೆ ಗೊತ್ತಿದ್ರೆ ಅವೂ ವಿಚಾರಮಾಡಿ ತಿನ್ನುತಿದವೋ ಏನೋ! ಇದೆಲ್ಲ ಮತ್ತೆ ನೆನಪಾದ್ದು ನಾಗ ಐತಾಳರ 'ಸ್ಮರಣೆ ಸಾಲದೆ' ಮತ್ತು 'ಕಾಲ ಉರುಳಿ' ಪುಸ್ತಕಗಳನ್ನು ಮತ್ತೆ ಓದಿ. ಹಾಗೆ ಓದುತ್ತಾ ಯಾಕೆ ನಾವು ಮತ್ತೆ ಮತ್ತೆ ಬಾಲ್ಯದ ನೆನಪುಗಳಿಗೆ ಹೋಗುತ್ತೇವೆ ಎಂದು ಯೋಚಿಸುವಾಗ ಹೊಳೆದ ಸಂಗತಿಗಳಿವು.

೧. ಮನುಷ್ಯನ ಜೀವಿತದ ಕಾಲದಲ್ಲಿ (ಅದು ಜೀವವಿರುವ ಎಲ್ಲ ಚೈತನ್ಯಗಳಲ್ಲೂ) ಬಾಲ್ಯಕಾಲ ಎನ್ನುವುದು ಬಹಳ ಮುಖ್ಯ ಕಾಲಘಟ್ಟ. ಬದುಕಿನ ಕ್ಷಣಗಳನ್ನು ಆತ್ಯಂತಿಕವಾಗಿ ಅನುಭವಿಸಲು ಸಾಧ್ಯವಾಗುವುದು ಈ ಸಮಯದಲ್ಲಿಯೇ.

೨. ಬಾಲ್ಯ ಕಾಲದಲ್ಲಿ ಜವಾಬುದಾರಿಗಳು ಕಡಿಮೆ. ಯಾರಿಗೋ ಅಂಜಿ ಅಥವಾ ಮೆಚ್ಚಿಸಲು ಬದುಕಬೇಕಾದ ಅವಶ್ಯಕತೆ ಇರುವುದಿಲ್ಲ. ಎಲ್ಲವನ್ನು ಸಹಜವಾಗಿ ಸ್ವೀಕರಿಸುವ ಮತ್ತು ಯಾವ ಪೂರ್ವಾಗ್ರಹಗಳು ಇಲ್ಲದ ಹಾಗೆ ಸ್ಪಂದಿಸುವ ಮನಃಸ್ಥಿತಿ ಬಾಲ್ಯಕಾಲದಲ್ಲಿರುತ್ತದೆ.

೩. ಬಾಲ್ಯಕಾಲಕ್ಕೆ ಹೋಗಲು ಇರುವ ಮತ್ತೊಂದು ಮುಖ್ಯ ಕಾರಣ ವಾಸ್ತವದ ಕಟು ಸತ್ಯಗಳನ್ನು ಮರೆಯಲು. ಮನುಷ್ಯನ ಮನಸ್ಸು ಯಾವಾಗಲೂ ಸುಖವಾಗಿ ಸಂತೋಷವಾಗಿ ಇರಲು ಬಯಸುತ್ತದೆ. ಹೀಗಾಗಿ ಬಾಲ್ಯದ ಅನುಭವಗಳು ಸರಿ

ಸುಮಾರು ಎಲ್ಲರಿಗೂ ಹಿತವಾದ ಅನುಭವವನ್ನು ಕೊಡುವ ಕಾರಣಕ್ಕೆ ಬಾಲ್ಯಕಾಲಕ್ಕೆ ಹಿಂದಿರುಗಲು ಪ್ರಯತ್ನಿಸುತ್ತಾರೆ.

೪. ಸದ್ಯದ ಪರಿಸ್ಥಿತಿಯನ್ನು ಬಾಲ್ಯಕಾಲದ ಜತೆ ಹೋಲಿಸಿಕೊಳ್ಳುವುದು. ಆ ಮೂಲಕ ವಾಸ್ತವ ಮತ್ತು ಅವಾಸ್ತವ ಸಂಗತಿಗಳ ಜತೆ ಸಮೀಕರಿಸಿಕೊಂಡು ದುಃಖದ ಸಂಗತಿಗಳನ್ನು, ಕಷ್ಟದ ಘಟನೆಗಳನ್ನು ಮರೆಯಲು ಪ್ರಯತ್ನಿಸುವುದು.

ಸಾಂಟಾಕ್ಲಾರ ವಿಶ್ವವಿದ್ಯಾಲಯದ ಪ್ರಾಧ್ಯಾಪಕಿ ಜೆರ್ರಿ ಬರ್ಜರ್ ಎಂಬುವರು 'ಯಾಕೆ ಅಮೆರಿಕದ ೪೬ರಷ್ಟು ವಯಸ್ಕರು ತಾವು ಹುಟ್ಟಿ ಬೆಳೆದ ಮನೆಗಳಿಗೆ ಹೋಗಿ ಬರುತ್ತಾರೆ' ಎಂಬ ಬಗೆಗೆ ಅಧ್ಯಯನ ನಡೆಸಿ ಕುತೂಹಲಕರ ಸಂಗತಿಗಳನ್ನು ಹೇಳುತ್ತಾರೆ. ಮನುಷ್ಯನ 'ಸೆಲ್ಫ್' ರೂಪುಗೊಳ್ಳುವುದು ೫–೧೦ ವರ್ಷಗಳ ಕಾಲಾವಧಿಯಲ್ಲಿ. ಹೀಗೆ ಆ ಅವಧಿಯ ಎಲ್ಲ ವಸ್ತು, ಸ್ಥಳ, ವ್ಯಕ್ತಿಗಳ ಬಗೆಗೆ ಸಹಜವಾಗಿಯೇ ಭಾವನಾತ್ಮಕ ಸಂಬಂಧ ಏರ್ಪಟ್ಟಿರುತ್ತದೆ.

ನಾಗ ಐತಾಳರು ತಮ್ಮ ಊರಿನ ಭಾಷೆಯ ಬಗೆಗೆ ಬರೆದಿರುವ ಈ ಸಾಲುಗಳನ್ನು ಗಮನಿಸಿ:ಮೇಲ್ನೋಟಕ್ಕೆ ಕೋಟದ ಹೋಯ್ಕ್–ಬರ್ಕ್ ಭಾಷೆಯನ್ನು ಅರ್ಥಮಾಡಿಕೊಳ್ಳಲು ಕಷ್ಟವೆಂದು ತೋರಿದರೂ, ಅಲ್ಲಿನ ಜಿಡುಕು ಶಬ್ದಗಳನ್ನು ಬಿಡಿಸಿ, ಶಬ್ದ ವಿಂಗಡಿಸಿದಲ್ಲಿ, ಅದನ್ನು ಅರ್ಥಮಾಡಿಕೊಳ್ಳುವುದು ಸುಲಭವಾದೀತು. ಉದಾಹರಣೆಗೆ, 'ಆ ಬಿಂಗ್ರಿಗೆ ಮಂಡಿ ಸಮಆಪ್ಪಾದ್ರೂ ಏಗ್ಳಿಗೆ...?' – ಎಂಬ ವಾಕ್ಯದಲ್ಲಿ 'ಬಿಂಗ್ರಿ' ಎಂಬ ಶಬ್ದ ಒಬ್ಬನ ಮಾನಸಿಕ ನ್ಯೂನತೆಯ ಮೇಲೆ ಬೆಳಕು ಚೆಲ್ಲುತ್ತದೆ; 'ಮಂಡಿ' ಎಂಬುದು ಮಂಡೆ ಎಂಬುದರ ಗ್ರಾಮೀಕರಣ; ಮಂಡೆ ಎಂದರೆ ತಲೆ (ಅಂದರೆ ಇಲ್ಲಿ ಬುದ್ಧಿ). 'ಸಮಆಪ್ದು' ಎಂದರೆ ಸರಿಯಾಗುವುದು (ಆಪ್ದು = ಆಗುವುದು); 'ಏಗ್ಳಿಗೆ' ಎಂಬ ಶಬ್ದವನ್ನು ವಿಂಗಡಿಸಿದರೆ, ಯಾವ ಗಳಿಗೆಗೆ ಎಂಬ ಅರ್ಥವಾಗುತ್ತದೆ. ಅದೇ ರೀತಿ, 'ಆಪ್ದಲ್ಲ ಹೋಪ್ದಲ್ಲ.., ರಂಡಿ ಹೆಣ್ ಬಾಳುದಲ್ಲ...' ಅಂದರೆ, ಒಬ್ಬ ರಂಡೆ ಹೆಣ್ಣಿನ ಬಾಳು ಏನು ಮಾಡಿದರೂ ಸರಿಹೋಗಲಾರದು ಎಂದು. ಇಲ್ಲಿ 'ಆಪ್ದಲ್ಲ ಹೋಪ್ದಲ್ಲ' ಅಂದರೆ, ಆಗುವುದಲ್ಲ, ಹೋಗುವುದಲ್ಲ ಎಂಬ ಶಬ್ದಗಳ ಃಡಿಣಜಟಜ ಜಿಂಡಿಥ. (ಆಪುದು=ಆಗುವುದು; ಹೋಪುದು=ಹೋಗುವುದು) ಹಾಗೆಯೇ, 'ಅವ್ನಿಗ್ ಯಲ್ಲಾ ಎಣ್ಣಿಕೂಳ್ಳೇ ಆಯ್ಕಂಬ್ರು' ಎಂಬ ವಾಕ್ಯದಲ್ಲಿ ಶಬ್ದ ವಿಂಗಡಣೆ ಮಾಡಿದಲ್ಲಿ ಅರ್ಥವಾಗುವುದು ಸುಲಭವಾಗುತ್ತದೆ. (ಎಣ್ಣಿಕೂಳ್ಳೆ= ಎಣಿಸಿದ ಕೂಡಲೇ; ಆಯ್ಕ್= ಆಗಬೇಕು; ಅಂಬ್ರು= ಅಂಬರು.) ಹೀಗೆ, ಕೋಟ ಕನ್ನಡದಲ್ಲಿ ಶಬ್ದಗಳು ಚುಟುಕುಗೊಳ್ಳುವುದು ಆ ಆಡುಭಾಷೆಯ ಒಂದು ವಿಶಿಷ್ಟ ಗುಣ.

ಈ ಸಂಗತಿಗಳೆಲ್ಲ ಬಾಲ್ಯಕಾಲ ಸುಖಮಯವಾಗಿರುವ ವ್ಯಕ್ತಿಗಳಿಗೆ ಸರಿ. ದುಃಖಮಯವಾದ, ಘೋರ ಮತ್ತು ಅವಮಾನಿತರಾದ, ಅನುಭವಗಳಾದ ಮಕ್ಕಳ/ವ್ಯಕ್ತಿಗಳ ಕುರಿತು ಏನು ಹೇಳುವುದು? ಇಂಥವರು ಬಾಲ್ಯದ ಅನುಭವಗಳನ್ನು

ನೆನಪಿಸಿಕೊಳ್ಳದೆ ವಾಸ್ತವದ ಬದುಕಿನ ಜತೆಗೆ ಹೊಂದಿಕೊಳ್ಳಲು ಮಾನಸಿಕವಾಗಿ ಸಿದ್ಧರಾಗುತ್ತಾರೆ. ನಾನೇ ಬಾಲ್ಯದಲ್ಲಿ ಅನುಭವಿಸಿದ ಕಷ್ಟ ಅವಮಾನಗಳಿಂದ ಹೊರಬರಲು ಚಿಕ್ಕಂದಿನಲ್ಲಿ ತೋಟಕ್ಕೆ ಹೋಗಿ ನನ್ನ ಸಿಟ್ಟು ಅವಮಾನಗಳನ್ನು ತೋಟದಲ್ಲಿದ್ದ ಗಿಡಗಳನ್ನು ಕತ್ತರಿಸುವ ಮೂಲಕ ಪರಿಹರಿಸಿಕೊಳ್ಳುತ್ತಿದ್ದೆ. ಕೆಲವೊಮ್ಮೆ ಹಾಗೆ ಕತ್ತರಿಸುವಾಗ ಕತ್ತಿ ನನ್ನ ಕೈಗೂ ತಾಗಿ ರಕ್ತ ಚೆಲ್ಲಿದಾಗ ಅವಮಾನಿಸಿದ ವ್ಯಕ್ತಿಯನ್ನೇ ಕೊಂದ ಸಮಾಧಾನವಾಗುತ್ತಿತ್ತು.

ನಾಗ ಐತಾಳರ ಪುಸ್ತಕಕ್ಕೆ ಮತ್ತೆ ಬರುವೆ. ಅವರು ಪ್ರತಿವರ್ಷ ಭಾರತಕ್ಕೆ ಬಂದಾಗಲೆಲ್ಲ ತಾವು ಹುಟ್ಟಿದ ಮನೆಗೆ ಬರುತ್ತಿದ್ದರು. ಅಲ್ಲಿನ ಪ್ರತಿಯೊಂದು ಘಟನೆಯೂ ಅವರ ಕಣ್ಣಮುಂದೆ ಬರುತ್ತಿತ್ತು. ಅದು ಕೇವಲ ಅವರ ನೆನಪು ಮಾತ್ರವಲ್ಲ; ಅವರು ಬೆಳೆದ ಪರಿಸರ, ಆಚರಣೆಗಳು, ಮನುಷ್ಯರ ನಡವಳಿಕೆಗಳು ಎಲ್ಲ ಸಂಗತಿಗಳು ನೆನಪಾಗಿ ನರಹಳ್ಳಿ ಸರ್ ಮುನ್ನುಡಿಯಲ್ಲಿ ಹೇಳುವ ಹಾಗೆ 'ಇದು ಕೇವಲ ನಾಗ ಐತಾಳರ ನೆನಪುಗಳಾಗದೆ ಒಂದು ಕಾಲಘಟ್ಟದ ಸಾಂಸ್ಕೃತಿಕ ಚರಿತ್ರೆಯ ದಾಖಲೆಯಾಗುತ್ತವೆ'. ಎಂಬ ಮಾತು ನಿಜ ಎನ್ನಿಸಿತು.



ಅಲೆ

ಅಲೆ

ಅಲೆ



ಹರಿಹರೇಶ್ವರ ಮತ್ತು ಅಮೆರಿಕದಲ್ಲಿ ಕನ್ನಡದ ಕೆಲಸ

– ನಾಗ ಐತಾಳ

ಕುವೆಂಪು, ಅವರ 'ಕನ್ನಡವೆ ಸತ್ಯ, ಕನ್ನಡವೆ ನಿತ್ಯ...' ಎಂಬ ಕವನದ ಸಾಲನ್ನು ಬರೆಯುವಾಗ ಶಿಕಾರಿಪುರ ಹರಿಹರೇಶ್ವರಂಥವರನ್ನೇ ಗಮನದಲ್ಲಿ ಇಟ್ಟುಕೊಂಡಿರಬೇಕು. ಹರಿಹರೇಶ್ವರರಿಗೆ – ಕನ್ನಡವೇ ಸತ್ಯ ಹಾಗೂ ನಿತ್ಯ – ಎಂಬುದಂತೂ ನಿಜ! ಅಮೆರಿಕದಲ್ಲಿ ಕನ್ನಡ ಪ್ರಜ್ಞೆಯನ್ನು ಹೊಡೆದೆಬ್ಬಿಸಿದ ವೀರ ಕನ್ನಡಿಗ, ಅವರು. ಜುಲೈ 22, 2010ರಂದು ಅವರು ಮೈಸೂರಿನಲ್ಲಿ ಸ್ವರ್ಗಸ್ಥರಾದರು. ಆದರೆ, ಅಮೆರಿಕನ್ನಡಿಗರ ಸ್ಮರಣೆಯಲ್ಲಿ ಅಚ್ಚಳಿಯದೆ ಉಳಿದ ಅಮರ ವೀರ ಹರಿಹರೇಶ್ವರರು! ಅವರು ನಡೆಸಿಕೊಂಡು ಬಂದ 'ಅಮೆರಿಕನ್ನಡ' ದ್ವೈಮಾಸಿಕ ಮ್ಯಾಗಜಿನ್ ಅವರ ಹೆಸರನ್ನು ಅಮರರನ್ನಾಗಿ ಮಾಡಿದೆ. ಈಗ ಅವರು ಭೌತಿಕವಾಗಿ ನಮ್ಮನ್ನಗಲಿದ್ದರೂ! ಎಷ್ಟೊಂದು ಹವ್ಯಾಸೀ ಬರಹಗಾರರಲ್ಲಿ ಸುಪ್ತವಾಗಿದ್ದ ಪ್ರತಿಭೆಯನ್ನು ಕೆರಳಿಸಿ, ಪ್ರೋತ್ಸಾಹಿಸಿ, ಅವರಿಂದ ಲೇಖನಗಳನ್ನು ಬರೆಸಿ, 'ಅಮೆರಿಕನ್ನಡ'ದಲ್ಲಿ ಪ್ರಕಟಿಸಿ, ಅಮೆರಿಕದಲ್ಲಿ ಕನ್ನಡದ ಅಪಾರ ಸೇವೆ ಮಾಡಿದವರಲ್ಲಿ ಮೊದಲಿಗರು ಎಂದರೆ ಅತಿಶಯೋಕ್ತಿಯಾಗಲಾರದು. ಅವರಿಂದಾಗಿ, ಎಷ್ಟೋ ಅಮೆರಿಕನ್ನಡಿಗರಲ್ಲಿ ಸುಪ್ತವಾಗಿ ಅಡಗಿ ಕುಳಿತಿದ್ದ 'ಪ್ರತಿಭೆ' ಪ್ರಕಟವಾಗಲು ಅವಕಾಶ ದೊರಕಿತು.

ಕನ್ನಡಿಗರು ಆ ಬಗ್ಗೆ ಹರಿಹರೇಶ್ವರರಿಗೆ ಎಷ್ಟು ಕೃತಜ್ಞತೆ ಸಲ್ಲಿಸಿದರೂ ಅದು ಕಡಿಮೆಯೇ! ಆದರೆ, ಅಮೆರಿಕನ್ನಡಿಗರ ದುರದೃಷ್ಟವೆಂಬಂತೆ 'ಅಮೆರಿಕನ್ನಡ'

ದ್ವೈಮಾಸಿಕ ಪತ್ರಿಕೆ ಪ್ರಕಟಣೆಯನ್ನು ನಿಲ್ಲಿಸಬೇಕಾಯ್ತು. ಅದರಿಂದಾಗಿ, ಹರಿಹರೇಶ್ವರರು ಆರ್ಥಿಕವಾಗಿ 'ಕೈ ಸುಟ್ಟು'ಕೊಂಡಿದ್ದರು. ಆದರೂ ಅವರಿಗೆ ತಮಗಾದ ಆರ್ಥಿಕ ನಷ್ಟದ ಬಗ್ಗೆ ಪಶ್ಚಾತ್ತಾಪವಿಲ್ಲ. ಕಾರಣ, ಆರ್ಥಿಕ ನಷ್ಟಕ್ಕಿಂತಲೂ ತಮ್ಮಿಂದ ಕಿಂಚಿತ್ತಾದರೂ ಕನ್ನಡ ಸೇವೆ ನಡೆಯಿತು ಎಂಬ 'ಆತ್ಮತೃಪ್ತಿ' ಅವರಿಗೆ ಅಗಾಧ moral support ಕೊಟ್ಟಿತ್ತು! ಅಮೆರಿಕದಲ್ಲಿ ಒಂದು ಬಗೆಯ ಸಾಹಿತ್ಯಿಕ ಕ್ರಾಂತಿಗೆ ಹರಿಕಾರರಾಗಿದ್ದರು ಹರಿಯವರು! ವೃತ್ತಿಯಲ್ಲಿ ಅವರೊಬ್ಬ ಇಂಜಿನಿಯರ್. ಆದರೆ, ಸಮಾಜ ಸೇವೆ, ಕನ್ನಡ ಸೇವೆ ಅವರ ಪ್ರವೃತ್ತಿಯಾಗಿತ್ತು. ಅವರೊಬ್ಬ ಮಹಾ ಮಾತುಗಾರರು! ಅವರ ಮಾತು ಸರಳ ಮತ್ತು ನೇರ. ಅವರು ಬರೆದ 'ಮಾತಿನ ಮಂಟಪ', 'ಮಾತಿನ ಚಪ್ಪರ', 'ಮಾತಿನ ಚಾವಡಿ', 'ಮಾತಿನ ಮಲ್ಲಿಗೆ', 'ಮಾತೇ ಮುತ್ತು' ಇತ್ಯಾದಿ ಗ್ರಂಥಗಳೇ ಈ ಮಾತಿಗೆ ಸಾಕ್ಷಿ! ಅವರ ಆತ್ಮಕತೆ 'ಮೌನ ಮಾತಾಡಿದಾಗ'ದಲ್ಲಿ ಮೌನಕ್ಕೂ ಮಾತು ಜೋಡಿಸಿದ್ದಾರೆ. ಅವರ ಅಗಲುವಿಕೆಯಿಂದ ಕವಿದ 'ಮೌನ' ನಮ್ಮ ಮನಸ್ಸಿನಲ್ಲಿ ಮಾತುಗಳನ್ನು ಹುಟ್ಟಿಸಿದೆ! ಅವರು ಪ್ರಕಟಿಸಿದ ಇತರ ಗ್ರಂಥಗಳೂ – ಉದಾ: 'ವಿದೇಶಕ್ಕೆ ಬಂದವರು', 'ಕನ್ನಡ ಉಳಿಸಿ ಬೆಳಸುವ ಬಗೆ' ಇತ್ಯಾದಿ – ಓದುಗರ ಮೆಚ್ಚುಗೆ ಪಡೆದಿವೆ. ಅವರು ಬರೆದಿಟ್ಟ ಹಲವು ಗ್ರಂಥಗಳನ್ನು ಅವರು ತೀರಿಕೊಂಡ ಮೇಲೆ ಪ್ರಕಟಿಸಿದವರು ಸಹಧರ್ಮಿಣಿ, ನಾಗಲಕ್ಷ್ಮಿಯವರು.

ಹರಿಹರೇಶ್ವರರು ಬದುಕಿರುತ್ತಿದ್ದರೆ, ಈ ವರ್ಷ ಅವರಿಗೆ 80 ತುಂಬುತ್ತಿತ್ತು. ತಮ್ಮ ಸಹಸ್ರಚಂದ್ರ ದರ್ಶನದ ದಿನವನ್ನು ನೋಡುವ ಭಾಗ್ಯವಿಲ್ಲದಿದ್ದರೂ, ಅವರ ಅಪಾರ ಹಿತಾಸಕ್ತರಿಗೆ ಆ ದಿನಾಚರಣೆ ಮಾಡಿ ಸಂತೋಷಪಡುವ ಅವಕಾಶ ದೊರಕಿರುತ್ತಿತ್ತು. ಅಮೆರಿಕಕ್ಕೆ ಭೇಟಿಕೊಟ್ಟ ಅವರ ಧರ್ಮಪತ್ನಿ ಈ ಅವಕಾಶ ಸಿಗುವುದರಲ್ಲಿ ಕಾರಣರಾಗಿದ್ದರು. ಭಾರತದಲ್ಲಿ, ಕಳೆದ ಮಾರ್ಚ್(2016)ನಿಂದ ಈ ವರ್ಷ ಮಾರ್ಚ್(2017)ರವರೆಗೂ ಹರಿಹರೇಶ್ವರರ ನೆನಪಿನಲ್ಲಿ ಅನೇಕ ಸಂಕಿರಣಗಳನ್ನು ಏರ್ಪಡಿಸಿ, ಇದೀಗ ಅಮೆರಿಕದಲ್ಲಿಯೂ ಹಲವೆಡೆ ಆ ಯೋಜನೆಯನ್ನು ಕೈಗೂಡಿಸುವುದರಲ್ಲಿದ್ದಾರೆ. ಅವರು ಕ್ಯಾಲಿಫೋರ್ನಿಯಾದ ಪಮೋನದಲ್ಲಿ ವಾಸಿಸುತ್ತಿರುವ ಶ್ರೀನಿವಾಸ ಮತ್ತು ಶಾರದಾ/ಸುಮಾ ಭಟ್ಟರ ಮನೆಯಲ್ಲಿ ಅಂಥದೊಂದು ಕಾರ್ಯಕ್ರಮದಲ್ಲಿ ಭಾಗವಹಿಸುವ ಅವಕಾಶ ಸಿಕ್ಕಿದುದು ನನ್ನ ಅದೃಷ್ಟ. ಅವರ ಬಗ್ಗೆಯ ಒಂದು ಗ್ರಂಥ, 'ಹರಿ'ಯ ಮರು ಬಿಡುಗಡೆಯೂ ನಡೆಯಿತು. ಅದರಲ್ಲಿ ಹರಿಯವರ ಬಗ್ಗೆ ಹಲವರು ತಮ್ಮ-ತಮ್ಮ ಅಭಿಪ್ರಾಯ, ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಅವರ ಕೃತಿಗಳ ಬಗ್ಗೆ ಸೇರಿದ ಹಲವರು ಮಾತಾಡಿದರು. ಅದೊಂದು ಹರಿಹರೇಶ್ವರರಿಗೆ ಸಲ್ಲುವ ವಿಶೇಷ ಶ್ರದ್ಧಾಂಜಲಿಯೂ ಹೌದು.

ನಾನು ಅವರ ಮೈಸೂರಿನ ಮನೆಗೊಮ್ಮೆ ಭೇಟಿಕೊಟ್ಟಾಗ, ಅವರೊಂದು ಗ್ರಂಥ ನನಗೆ ಕೊಟ್ಟಿದ್ದರು – ಡಾ. ಪಿ. ಕೆ. ರಾಜಶೇಖರ ಅವರ 'ಜನಪದ ಮಹಾಭಾರತ'.

ಅದರಲ್ಲೊಂದು ಸಾಲು ಹೀಗಿದೆ: **ಸತ್ಯವಂತ ಪಾಂಡವರು ಸತ್ತರೆಂದೆನಬ್ಯಾಡಿ/ ಸತ್ತರೆ ಲೋಕ ಉಳಿಯಾವು – ಪಾಂಡವರು/ ಬಿತ್ತಿ ಹೋಗವ್ರೆ ಅವರೆಯ**

(ಇಲ್ಲಿ 'ಅವರೆ' ಎಂಬ ಶಬ್ದ ಗಮನೀಯವಾದುದು. ಅವರೆ ಹಳ್ಳಿಯಲ್ಲಿ ಬೆಳೆಯುವ ಬೆಳೆ. ಇಲ್ಲಿ ಜಾನಪದದ ಗ್ರಂಥದಲ್ಲಿ ಆ ಶಬ್ದ ಪ್ರಯೋಗ significant. ಆ ಧಾನ್ಯದಲ್ಲಿ ಸುಮಾರಾಗಿ ಐದು ಅವರೆ ಕಾಳಿರುವುದೂ (ಪಂಚಪಾಂಡವರು) ಗಮನೀಯ.

ಹರಿಹರೇಶ್ವರರ ನಿಧನದ ವಾರ್ತೆ ಕೇಳಿದ ನನ್ನಲ್ಲಿ ಅದ್ಯಾಕೋ ಮೇಲಿನ ಕವನ ನೆನಪಾಯ್ತು. ನಾನು ಅದನ್ನು ಈ ಕೆಳಗಿನಂತೆ ಬದಲಿಸಿದ್ದೆ:

ಸತ್ಯವಂತ ಹರಿಯವರು ಸತ್ತರೆಂದೆನಬ್ಯಾಡಿ/ ಸತ್ತರೆ ಕನ್ನಡ ಉಳಿಯಾವು – ಅಮೆರಿಕದಲ್ಲಿ/ ಬಿತ್ತಿಹೋಗವ್ರೆ ಅವ್ರು ಕನ್ನಡವ

ಇಲ್ಲಿ ಹರಿಹರೇಶ್ವರರ ಕನ್ನಡ ಪ್ರೀತಿ, ಅಪ್ಪಟ ಸತ್ಯ! ಅವರು 'ಸತ್ತು'ಹೋದರು ಅಂತ ತಿಳಿಯದೆ, ಅವರು 'ಬಿತ್ತಿಹೋದ ಕನ್ನಡತನ'ವೆಂಬ ಬೆಳೆ ಅಳಿಯದೇ ಉಳಿದು, ಬೆಳೆದು ಬರಲಿ ಎಂಬ ಆಕಾಂಕ್ಷೆ ವ್ಯಕ್ತವಾಗಿದೆ. ಭೌತಿಕವಾಗಿ ಹರಿಹರೇಶ್ವರ ನಮ್ಮ ಮಧ್ಯೆ ಇಲ್ಲದಿದ್ದರೂ, ನಮ್ಮ ಸ್ಮರಣೆಯಲ್ಲಿ ಅವರು ಬಿತ್ತಿಹೋದ 'ಕನ್ನಡತನ'ದ ಮೂಲಕ ಇನ್ನೂ ಉಳಿದಿದ್ದಾರೆ! ಆ ಸ್ಮರಣೆಗೆ ಸಾವೆಂಬುದಿಲ್ಲ!

ಶ್ರೀನಿವಾಸ ಭಟ್ಟರ ನೇತೃತ್ವದಲ್ಲಿ, ಸುಮಾ ಭಟ್ಟರಿಂದ ಪ್ರಾರ್ಥನೆಯೊಂದಿಗೆ, ಹರಿಹರೇಶ್ವರರು ನಿಧನರಾದ ಪುಣ್ಯತಿಥಿಯಂದು, (ಜುಲೈ 22) ಹರಿಯವರ ಸಾಧನೆಗಳನ್ನು ಸ್ಮರಿಸಿ, ಅವರಿಗೆ ಶ್ರದ್ಧಾಂಜಲಿಯನ್ನು ಸಲ್ಲಿಸಲಾಯ್ತು. ಅದೇ ಸಮಯ ನಾಗಲಕ್ಷ್ಮೀ ಹರಿಹರೇಶ್ವರರು ಸಂಪಾದಿಸಿದ 'ಹರಿ' ಗ್ರಂಥವನ್ನೂ ಮರುಬಿಡುಗಡೆ ಮಾಡಲಾಯ್ತು.

ಬಿಡುಗಡೆ ಮಾಡಿ ಅಮೆರಿಕದಲ್ಲಿ ಕನ್ನಡ ಪ್ರಜ್ಞೆಯನ್ನು ಹೊಡೆದೆಬ್ಬಿಸಿದ ಹರಿಯವರ ಹಲವು ಸಾಧನೆಗಳನ್ನು ವಿವರಿಸಿದೆ. ಡಾ. ವಿಶ್ವೇಶ್ವರ ದೀಕ್ಷಿತರು ಮಾತನಾಡುತ್ತ, ತಮ್ಮ-ಹರಿಯವರೊಳಗಿನ ನಿಕಟ ಸಂಬಂಧಗಳನ್ನು ನೆನೆದರು. ಸಭೆಯಲ್ಲಿ ಉಪಸ್ಥಿತರಾದ ರಮೇಶ ಬಸವಪಟ್ಟಣರೂ ಹರಿಯವರು ಅಮೆರಿಕದಲ್ಲಿ ಕನ್ನಡ ಬೆಳವಣಿಗೆಗೆ ಮಾಡಿದ ಹಲವು ಕಾರ್ಯಗಳನ್ನು ಸ್ಮರಿಸಿದರು.

ನಾಗಲಕ್ಷ್ಮಿಯವರು ಮಾತನಾಡುತ್ತ, ಹರಿಯವರು ಕಂಪ್ಯೂಟರ್‌ನಲ್ಲಿ ಬರೆದಿಟ್ಟ ಹಲವಾರು ಗ್ರಂಥಗಳನ್ನು ಪರಿಷ್ಕರಿಸಿ, ಅವನ್ನೆಲ್ಲಾ (17 ಗ್ರಂಥಗಳು) ಪ್ರಕಟಿಸಿದ ವಿವರಗಳನ್ನು ತಿಳಿಸಿದರು. 'ಹರಿ' ಗ್ರಂಥಕ್ಕೆ ಲೇಖನ ಬರೆದುಕೊಟ್ಟ ಲೇಖಕರ ಸಹಾಯವನ್ನು ಸ್ಮರಿಸಿ, ಧನ್ಯವಾದಗಳನ್ನು ಸಲ್ಲಿಸಿದರು. ಕಾರ್ಯಕ್ರಮವನ್ನು ಶ್ರೀನಿವಾಸ ಭಟ್ಟರು ನಡೆಸಿಕೊಟ್ಟುದಲ್ಲದೆ, ಹರಿಹರೇಶ್ವರರು ರಚಿಸಿದ ಹಲವು ಸಂಸ್ಕೃತ ಶ್ಲೋಕಗಳನ್ನು ಉದ್ಧರಿಸಿದರು. ಸಭೆ ಹರಿಯವರ ಸ್ಮರಣೆಯಲ್ಲಿ ಮಿಂದೆದ್ದಿತು.

ಹರಿಹರೇಶ್ವರ ಸಂಸ್ಮರಣಾ ಕಾರ್ಯಕ್ರಮದಲ್ಲಿ ಮಾಡಿದ ಭಾಷಣದ ಬರಹರೂಪ



ತಮ್ಮ ರಾಧಾಕೃಷ್ಣ

– ನಾಗ ಐತಾಳ

ರಾಧಾಕೃಷ್ಣ ನನ್ನೊತ್ತಿನ ತಮ್ಮ ಅವನಿಗೂ ನನಗೂ ಎರಡು ವರ್ಷಗಳಿಗೂ ಹೆಚ್ಚಿನ ಅಂತರ. ಆದರೆ, ನನ್ನ – ಅವನ ಸಂಪರ್ಕ ವಿಶೇಷವೆಂದೇ ಹೇಳಬೇಕು. ಚಿಕ್ಕಂದಿನಲ್ಲಿ, ಹಿರಿಯನಾದ ನಾನು, ತಮ್ಮನ ಮೇಲೆ 'ಸವಾರಿ' ಮಾಡಿದ್ದುದರ ನೆನಪು. ರಾಧಾಕೃಷ್ಣ ಶಾಲೆಗೆ ಹೋಗುವಾಗ ಪ್ರತಿದಿನ ಅಳುತ್ತಿದ್ದ. ಅವನನ್ನು ಸಮಾಧಾನ ಮಾಡಿ, ಶಾಲೆಗೆ ಕರೆದುಕೊಂಡು ಹೋಗುವ ಜವಾಬುದಾರಿ ನನ್ನದಾಗಿತ್ತು. ಅಳುತ್ತಿದ್ದ ಅವನನ್ನು ಚಿವುಟಿ, ಮತ್ತಷ್ಟು ಅಳುವಂತೆ ಮಾಡುತ್ತಿದ್ದೆ. ಅವನೆಲ್ಲಾದರೂ ತಾಯಿಗೆ ದೂರು ಕೊಟ್ಟಲ್ಲಿ, ಅದು ಸುಳ್ಳೇ ಸುಳ್ಳೆಂದು ಸಾಧಿಸುತ್ತಿದ್ದೆ. ಒಂದು ದಿನ, ಅವನು ಎಂದಿನಂತೆ ಅಳದೇ ಶಾಲೆಗೆ ಹೊರಟಿದ್ದ. ಆಗಲೂ ದಾರಿಯಲ್ಲಿ ಅವನನ್ನು ಚಿವುಟಿ, ಅಳುವಂತೆ ಮಾಡಲು ಪ್ರಯತ್ನಿಸಿದ್ದೆ. ಆದರೆ, ಅದು ಸಫಲವಾಗದಿದ್ದುದು ನಿರಾಶೆಯಾಯಿತು. ಈಗ ಅದನ್ನು ನೆನೆದಾಗ, ನಾನೇಕೆ ಅಷ್ಟು ಕ್ರೂರವಾಗಿ ವರ್ತಿಸಿದೆ ಎಂಬ ಭಾವನೆ ಬರುತ್ತಿದೆ.

ರಾಧಾಕೃಷ್ಣ ಪ್ರಾಥಮಿಕ ಹಾಗೂ ಹೈಸ್ಕೂಲು ವಿದ್ಯಾಭ್ಯಾಸಗಳನ್ನು ಕೋಟದಲ್ಲಿಯೇ ಮಾಡಿದ್ದ. ಆದರೆ, ನಾನು ಪ್ರಾಥಮಿಕ ವಿದ್ಯಾಭ್ಯಾಸವನ್ನು ಗಿಳಿಯಾರು ಶಾಲೆಯಲ್ಲಿ ಮುಗಿಸಿದಾಗ, ಆಗಿನ್ನೂ ಕೋಟದಲ್ಲಿ ಹೈಸ್ಕೂಲು ಸ್ಥಾಪನೆಯಾಗಿರಲಿಲ್ಲ. ರಾಧಾಕೃಷ್ಣ

ಗಿಳಿಯಾರು ಶಾಲೆ ಮುಗಿಸಿದಾಗ ಕೋಟದಲ್ಲಿ ವಿವೇಕ ಹೈಸ್ಕೂಲು ಪ್ರಾರಂಭವಾಗಿತ್ತು. ಹಾಗಾಗಿ ಅವನು ಆ ಹೈಸ್ಕೂಲಿನ ಪ್ರಥಮ ಬ್ಯಾಚ್ ವಿದ್ಯಾರ್ಥಿ. ಅದು ಮುಗಿದ ಮೇಲೂ ಅವನು ಉಡುಪಿಯ ಎಂಜಿಎಂ ಕಾಲೇಜಿಗೆ ಇಂಟರ್ಮೀಡಿಯೆಟ್ ಮುಗಿಸಲು ಹೋಗಿದ್ದ. ಆಮೇಲೆ, ಬಿ.ಎ. ಮಾಡಲು (ನಾನು ಹೋದ, ಸೈಂಟ್ ಜೋಸೆಫ್ ಕಾಲೇಜಿನಲ್ಲಿ) ಬೆಂಗಳೂರಿಗೆ ಬಂದಿದ್ದ. ಆಗ ಅವನು, ಅಲಸೂರಿನಲ್ಲಿದ್ದ ನಮ್ಮ ಕಿರಿಯ ಮಾಫಿ ಮಾವಯ್ಯನ ಮನೆಯಲ್ಲಿದ್ದ. ನಾನು ಬನಾರಸ್‌ಗೆ ಹೆಚ್ಚಿನ ಓದಿಗಾಗಿ ಹೋಗುವ ಸಮಯ (ಅವನು ತನ್ನ ಕಾಲೇಜು ಸಮಯದಲ್ಲೇ, ನನ್ನನ್ನು ಬೀಳ್ಕೊಡಲು ಬೆಂಗಳೂರಿನ ರೈಲ್ವೇಸ್ಟೇಷನ್‌ಗೆ ಬಂದುದು ಕಣ್ಮುಂದೆ ಕಟ್ಟುತ್ತಿದೆ. ಅಂದು ರೈಲು ಬಿಡುವವರೆಗೂ ಕಾದಿದ್ದು, ಅದು ಬಿಟ್ಟಮೇಲೂ ರೈಲು ಕಣ್ಮರೆಯಾಗುವತನಕ ಇದ್ದು ಬೈ ಹೇಳಿದ್ದ ಆ ದೃಶ್ಯವನ್ನು ಮರೆಯಲಾರೆ! ಮುಂದೆ ಅವನು, ಬೆಂಗಳೂರಿನಲ್ಲೆ ಕಾಮರ್ಸ್ ಕಾಲೇಜಿನಲ್ಲಿ ಬಿ.ಕಾಂ. ಡಿಗ್ರಿ ಪಡೆದ ಮೇಲೆ, ಲಾ ಕಾಲೇಜು ಸೇರಿ, ಎಲ್‌ಎಲ್.ಬಿ. ಮುಗಿಸಿ, ಕೆನರಾ ಬ್ಯಾಂಕ್ ಸೇರಿದ. ಕೆಲಸ ನಿಮಿತ್ತ ದೆಹಲಿ, ಕಲ್ಕತ್ತಾ, ಮುಂತಾದ ಉತ್ತರ ಭಾರತದ ಪಟ್ಟಣಗಳಲ್ಲಿ ವಾಸಸ್ಥಾನ ಬದಲಾಯಿಸುತ್ತಿರಬೇಕಾಯ್ತು. ಹಾಗಾಗಿ ಅವನ ಹೆಸರಿಗೆ 'ಡೆಲ್ಲಿ' ಎಂಬ ಅಂಕಿತ ಸೇರಿತ್ತು. ನನ್ನ ಮಕ್ಕಳೂ, ಅಣ್ಣಯ್ಯನ ಮಕ್ಕಳೂ ಅವನನ್ನು 'ಡೆಲ್ಲಿ ಚಿಕ್ಕಪ್ಪ'ನೆಂದೂ, ಉಳಿದ ತಮ್ಮಂದಿರ ಮಕ್ಕಳು, 'ಡೆಲ್ಲಿ ದೊಡ್ಡಪ್ಪ' ಎಂದೂ ಕರೆಯುತ್ತಿದ್ದರು. ಡೆಲ್ಲಿ ಬಿಟ್ಟ ಮೇಲೂ, ಅವನು 'ಡೆಲ್ಲಿ ಚಿಕ್ಕಪ್ಪ/ ದೊಡ್ಡಪ್ಪ'ನಾಗಿಯೇ ಉಳಿದಿದ್ದ. ಅವನು, ಕೆನರಾ ಬ್ಯಾಂಕಿನಲ್ಲಿ ಹಲವು ವರ್ಷ ಕೆಲಸ ಮಾಡಿ, ಮುಂದೆ ಡಿವಿಷನಲ್ ಮ್ಯಾನೇಜರ್ ಆಗಿದ್ದಾಗ ನಿವೃತ್ತಿ ಪಡೆದ. ಅವನು ದೆಹಲಿಯಲ್ಲಿದ್ದಾಗ ಒಂದೆರಡು ಬಾರಿ, ಕಾನ್ಫರೆನ್ಸ್‌ನಲ್ಲಿ ಭಾಗವಹಿಸಲು ನಾನು ದೆಹಲಿಗೆ ಭೇಟಿ ಕೊಟ್ಟಿದ್ದೆ. ಅವನ ಜೊತೆಗೆ ನವದೆಹಲಿಯ ಸುತ್ತುಮುತ್ತಲಿನ ಪ್ರದೇಶಗಳಿಗೆ ಭೇಟಿ ಕೊಟ್ಟಿದ್ದಿದ್ದುದರ ನೆನಪು. ಯಾವುದೋ ಸಮಾರಂಭದ ಸಮಯ. ಆಗ ಭಾರತದ ಪ್ರಧಾನಮಂತ್ರಿಯಾಗಿದ್ದ ಶ್ರೀಮತಿ ಇಂದಿರಾಗಾಂಧಿಯವರ ಜೊತೆಗೆ ತೆಗೆಸಿಕೊಂಡ ಫೋಟೋವನ್ನು ಬಲು ಹೆಮ್ಮೆಯಿಂದ ತೋರಿಸಿದ್ದ. ಆ ಫೋಟೋ ಇನ್ನೂ ಅವನ ಬೆಂಗಳೂರಿನ ಮನೆಯಲ್ಲಿದ್ದು, ನನ್ನ ದೆಹಲ್ಲಿ ಭೇಟಿಯನ್ನು ನೆನಪಿಸುತ್ತದೆ. ಅವನು ದೆಹಲಿಯಲ್ಲಿ ಕೆಲಸ ಮಾಡುತ್ತಿದ್ದಾಗ, ಕುಸುಮಳ ಜೊತೆಗೆ ಲಗ್ನವಾಗಿತ್ತು. ಆಗ ನಮ್ಮ ತಂದೆಯವರು ನಿಧನರಾಗಾಗಿದ್ದರು. ನಮ್ಮ ಭಾವ ಆನಂದರಾಮ್ ಮದುವೆಯ ಮುಂದಾಳತ್ವವನ್ನು ವಹಿಸಿದ್ದರು. ಮುಂದೆ, ಅವರಿಬ್ಬರಿಗೂ ಕೃಷ್ಣ, ರಾಮಮೋಹನ ಮತ್ತು ಅನುಪಮರೆಂಬ ಮೂವರು ಮಕ್ಕಳು ಹುಟ್ಟಿದರು. ಅವರೆಲ್ಲರೂ ಮದುವೆಯಾಗಿ ಈಗ ಸುಖವಾಗಿದ್ದಾರೆ.

ಅಮೆರಿಕಕ್ಕೆ ಹೊರಟಾಗ ರಾಧಾಕೃಷ್ಣನಿಗೆ ಕಲ್ಕತ್ತಾಗೆ ವರ್ಗವಾಗಿತ್ತು. ನಾವು ಕಲ್ಕತ್ತದಿಂದಲೇ ವಿಮಾನ ಹತ್ತಿ ಭಾರತವನ್ನು ಬಿಟ್ಟುದರಿಂದ, ಅವನನ್ನು ಬೀಳ್ಕೊಳ್ಳುವ

ಅವಕಾಶ ನಮಗೆ ಸಿಕ್ಕಿತ್ತು. ಮುಂದೆ, ನಾವು 3–4 ವರ್ಷಗಳ ಮೇಲೆ ಪ್ರಥಮ ಬಾರಿ ಭಾರತಕ್ಕೆ ಭೇಟಿ ಕೊಟ್ಟಾಗ, ಅವನಿಗೆ ಪುನಃ ದೆಹಲಿಗೆ ವರ್ಗವಾಗಿತ್ತು. ಆಗ ನಾವು ದೆಹಲಿಯಲ್ಲೇ ಇಳಿದು, ಅವನ ಮನೆಯಲ್ಲಿ ಹಲವು ದಿನ ಕಳೆದಿದ್ದೆವು. ಅವನು ಸಂಭ್ರಮದಿಂದ ನಮ್ಮನ್ನು ಏರ್‌ಪೋರ್ಟಿನಲ್ಲಿ ಸ್ವಾಗತಿಸಿದಾಗ ನಮಗಾದ ಖುಷಿಯನ್ನು ವರ್ಣಿಸಲಸಾಧ್ಯ! ಅವನ ಜೊತೆಗೆ ಆಗ್ರಾ, ತಾಜ್‌ಮಹಲ್, ಫತ್ತೇಪುರ್ ಸಿಕ್ರಿ ಮುಂತಾದ ಪ್ರದೇಶಗಳಿಗೆ ಭೇಟಿ ಕೊಟ್ಟ ನೆನಪು. ಆಗಿನ್ನೂ ಚಿಕ್ಕ ವಯಸ್ಸಿನವನಾದ ರಾಧಾಕೃಷ್ಣ ಫೋಟೋ ತೆಗೆಸಿಕೊಳ್ಳಲು ಡ್ರೆಸ್ ಮಾಡಿಕೊಂಡುದರ ಜೊತೆಗೆ, ಮೈಗೆಲ್ಲ ಸುಗಂಧ ಲೇಪಿಸಿಕೊಂಡ ಪ್ರಸಂಗವನ್ನು ಎಣಿಸಿಕೊಂಡರೆ ನಗು ಬರುತ್ತದೆ. ಚಿಕ್ಕ ಮಕ್ಕಳ ಮುಗ್ಧ ಮನಸ್ಸು ಹೇಗೆ ವರ್ತಿಸುತ್ತದೆ ಎಂಬುದು ಇಲ್ಲಿ ವ್ಯಕ್ತವಾಗುವುದಲ್ಲವೇ?

ರಾಧಾಕೃಷ್ಣ ಅಮೆರಿಕಕ್ಕೆ ಎರಡು ಬಾರಿ ಭೇಟಿಕೊಟ್ಟಿದ್ದ. ಮೊದಲ ಬಾರಿ ಬಂದಾಗ ಅವನ ಜೊತೆಗೆ ಕುಸುಮಳೂ ಇದ್ದಳು. ಸುಮಾರು ಎರಡು ತಿಂಗಳಿಗೂ ಮಿಕ್ಕಿ, ಕನೆಕ್ಟಿಕಟ್‌ನಲ್ಲಿರುವ ಕೊನೆಯ ತಮ್ಮ ಕೇಶವನ ಜೊತೆಗೂ, ಶಿಕಾಗೋದಲ್ಲಿದ್ದ ನನ್ನ ಜೊತೆಗೂ ಇದ್ದು, ನಯಾಗರಾ, ನ್ಯೂ ಯಾರ್ಕ್, ವಾಷಿಂಗ್ಟನ್, ಫ್ಲೋರಿಡಾ ಎಂಬಂತೆ ಅಮೆರಿಕದ ಪೂರ್ವ ಮತ್ತು ಮಧ್ಯವಲಯದ ಹಲವು ಪ್ರದೇಶಗಳಿಗೆ ಭೇಟಿಕೊಟ್ಟು, ಸಂತೋಷಪಟ್ಟಿದ್ದ. ಆಗ ನಾವು ಶಿಕಾಗೊದಲ್ಲಿ ವಾಸವಾಗಿದ್ದೆವು. ಮುಂದೆ ಲಾಸ್ ಏಂಜಲಿಸ್‌ಗೆ ವಾಸಸ್ಥಳ ಬದಲಾಯಿಸಿದೆವು. ಆಗ ಬಂದಿದ್ದರೆ, ಅಮೆರಿಕದ ಪಶ್ಚಿಮ ಪ್ರದೇಶಗಳನ್ನೂ ನೋಡಬಹುದಾಗಿತ್ತು. ಆದರೆ, ಕೆಲವು ವರ್ಷಗಳ ಮೇಲೆ ಅವನ ಮಗಳು, ಅನುಪಮಾಳ (ಮುನ್ನಾ) ಗಂಡ ಸಂಜಯ್, ಪಶ್ಚಿಮ ವಲಯದ ಪೋರ್ಟ್‌ಲ್ಯಾಂಡಿನಲ್ಲಿ ಕೆಲಸ ಮಾಡುತ್ತಿದ್ದಾಗ, ಕುಸುಮ ಒಬ್ಬಳೇ ಮಗಳ ಮನೆಗೆ ಬಂದಿದ್ದಳು.

ಎರಡನೆಯ ಬಾರಿ ರಾಧಾಕೃಷ್ಣ ಅಮೆರಿಕಕ್ಕೆ ಒಬ್ಬನೇ ಬಂದಿದ್ದ. ಆಗ ನಮಗೆಲ್ಲಾ ತುಂಬಾ ಆತಂಕವಾಗಿತ್ತು; ಕಾರಣ, ಅವನು ಹೃದಯ ಶಸ್ತ್ರಚಿಕಿತ್ಸೆಗಾಗಿ ಬಂದುದು. ಅದು ನಮ್ಮನ್ನೆಲ್ಲಾ ತುಂಬ ಕಾತುರಕ್ಕೆ ಗುರಿಮಾಡಿತ್ತು. ಆಗ ಅವನ ಆರೋಗ್ಯ ತುಂಬಾ ಕೆಟ್ಟಿತ್ತು. ಅವನಿಗೆ ಡಯಾಬಿಟೀಸ್ ಎಂದು ತಿಳಿದುಬಂದಿತ್ತು. ಅದರಿಂದಲೇ ಅವನಿಗೆ ಹೃದಯ ಸಮಸ್ಯೆ ಇದೆಯೆಂದೂ ತಿಳಿಯಬಂತು. ಇಷ್ಟೆಲ್ಲ ಇದ್ದರೂ ಅವನೊಬ್ಬನೇ ಅಷ್ಟು ದೂರ ಪ್ರಯಾಣ ಮಾಡಿದ್ದುದು ತುಂಬಾ ಆತಂಕ ತಂದಿತ್ತು. ಇಲ್ಲಿ, ಹೃದ್ರೋಗದ ಬಗ್ಗೆ ಪ್ರಾಕ್ಟಿಸ್ ಮಾಡುತ್ತಿದ್ದ ನನ್ನ ತಮ್ಮ, ಕೇಶವ ಅವನನ್ನು ಹಲವು ಟೆಸ್ಟ್‌ಗಳಿಗೆ ಗುರಿಪಡಿಸಿದಾಗ, ತಕ್ಷಣವೇ ಸರ್ಜರಿ ಬೇಕಾಗಿಲ್ಲವೆಂದು ತಿಳಿಯಿತು. ಈ ವಾರ್ತೆಯ 3–4 ವರ್ಷಗಳಲ್ಲೇ ಬೆಂಗಳೂರಿನ ಮಣಿಪಾಲ್ ಆಸ್ಪತ್ರೆಯಲ್ಲಿ ಹೃದಯ ಶಸ್ತ್ರಚಿಕಿತ್ಸೆ ನಮಗೆ ತುಂಬಾ ರಿಲೀಫ್ ಕೊಟ್ಟಿತು. ಅವನು ಅದನ್ನು ಎದುರಿಸಿದ ಪರಿ, ನಿಜಕ್ಕೂ ಆಶ್ಚರ್ಯ ತರುವಂಥದೇ ಮುಂದೆ ನಾನು ಭಾರತಕ್ಕೆ ಭೇಟಿ ಕೊಟ್ಟಾಗ ಆರೋಗ್ಯದಲ್ಲಿ

ಬಹಳಷ್ಟು ಸುಧಾರಿಸಿಕೊಂಡ ಅವನನ್ನು ನೋಡಿ ಸಂತೋಷಪಟ್ಟಿದ್ದೆ.ಮುಂದೆ ಅವನ ಆರೋಗ್ಯ ಕೆಡುತ್ತಲೇ ಬಂತು. ಕಿಡ್ನಿ ಬಾಧೆಯನ್ನೂ ಅನುಭವಿಸಬೇಕಾಯ್ತು. ಅದಕ್ಕಾಗಿ ಡಯಾಲಿಸಿಸ್‌ಗಾಗಿ ವಾರಕ್ಕೊಮ್ಮೆ ಮೊದ-ಮೊದಲು ಆಸ್ಪತ್ರೆಗೆ ಹೋಗಬೇಕಾಗಿ ಬಂತು. ಆಮೇಲೆ, ವಾರಕ್ಕೆ 2-3 ಬಾರಿ ಡಯಾಲಿಸಿಸ್ ಮಾಡಿಸಿಕೊಳ್ಳಬೇಕಾಯ್ತು. ಅಷ್ಟೆಲ್ಲ ಕಷ್ಟಗಳನ್ನು ಅವನು ಹೇಗೆ ಸಹಿಸಿಕೊಂಡನೊ? ಅವನ ಮಡದಿ-ಮಕ್ಕಳು ಅವನನ್ನು ಹೂವಿನಂತೆ ನೋಡಿಕೊಂಡಿದ್ದರು. ಆದರೆ, ಮನೆಯವರ, ಡಾಕ್ಟರರ ಎಲ್ಲ ಪ್ರಯತ್ನಗಳನ್ನೂ ಮೀರಿ, ಅವನು ತನ್ನ 75ನೆಯ ವಯಸ್ಸಿನಲ್ಲಿ ಅಸುನೀಗಿದ. ಆಗ ನಾನು ಅಮೆರಿಕದಲ್ಲಿದ್ದೆ. ಅವನ ಅಂತಿಮ ಕಾರ್ಯಗಳಲ್ಲಿ ಭಾಗವಹಿಸಲೂ ನನ್ನಿಂದಾಗದೆ ಹೋಯ್ತು. ನನ್ನ ಆರೋಗ್ಯವೂ ಆ ಸಮಯ ಅಷ್ಟೊಂದು ಸರಿಯಿಲ್ಲದೆ, ಭಾರತಕ್ಕೆ ಆಗ ಹೋಗಲಾರದೇ ಹೋದೆ! (ಅದಕ್ಕಾಗಿ ಇಂದಿಗೂ ಪಶ್ಚಾತ್ತಾಪಪಡುತ್ತಿದ್ದೇನೆ) ನನ್ನ ಸಹೋದರರ ಪೈಕಿ, ರಾಧಾಕೃಷ್ಣ ಮತ್ತು ವಾಸುದೇವ - ಇವರಿಬ್ಬರೂ ನನಗೆ ಅತಿ ಆಪ್ತರಾದವರು. ಆದರೂ, ರಾಧಾಕೃಷ್ಣನ ಅಂತಿಮ ಕಾರ್ಯಗಳಲ್ಲಾದರೂ ಭಾಗವಹಿಸಲಾರದೇ ಹೋದೆ!

ರಾಧಾಕೃಷ್ಣನಿಗೆ ನಮ್ಮ ಐತಾಳ ಕುಟುಂಬದ ಮೇಲೆ ತುಂಬ ಗೌರವ ಹಾಗೂ ಪ್ರೀತಿ, ವಾಸುದೇವ ಜೀವಂತವಾಗಿದ್ದಾಗ ಅವನು ನಮ್ಮ ಕುಟುಂಬದ ವಿಲೇವಾರಿಯನ್ನು ನೋಡಿಕೊಂಡಿದ್ದಾಗ, ರಾಧಾಕೃಷ್ಣ, ವಾಸುದೇವನಿಗೆ ಹಲವಾರು ಸಲಹೆಗಳನ್ನು ಕೊಡುತ್ತಿದ್ದ. ಅವನು ಸಮಾಜದಲ್ಲಾಗುತ್ತಿರುವ ಬದಲಾವಣೆಯನ್ನು ಗಮನಿಸಿದ್ದ, ಅಣ್ಣ-ತಮ್ಮಂದಿರು ಬೇರೆ-ಬೇರೆ ಸಂಸಾರ ಹೂಡಿಯೇ, ಸೌಹಾರ್ದತೆಯನ್ನು ಸಾಧಿಸಬಹುದೆಂದು ಬಲವಾಗಿ ನಂಬಿದ್ದ. ಹಾಗೆಂದು, ಮಧುಸೂದನನಿಗೆ ಬೇರೆಯೇ ಮನೆ ಮಾಡುವಂತೆ ಪ್ರೋತ್ಸಾಹಿಸಿದ್ದ. ತನ್ನ ಮಕ್ಕಳಿಗೆ ಮೂಲ ಐತಾಳ ಕುಟುಂಬದ ಸಂಬಂಧವನ್ನು ಬೆಳೆಸಿಕೊಂಡು ಹೋಗುವಂತೆ, ಸಾಯುವ ಮೊದಲು ಪತ್ರವೊಂದನ್ನು ಬರೆದಿಟ್ಟಿದ್ದು, ಅದನ್ನು ಓದುವ ಅವಕಾಶ ನನಗೆ ಸಿಕ್ಕಿತ್ತು. ಅಪ್ಪಯ್ಯ ಕಟ್ಟಿಸಿದ ದೊಡ್ಡ ಮನೆಯ ವಿನ್ಯಾಸವನ್ನು ಶ್ರೀಧರ, ಅಜಿತರು ಬದಲಾಯಿಸಿದಾಗ, ಅದನ್ನು ನೋಡಬೇಕೆಂಬ ತವಕ ರಾಧಾಕೃಷ್ಣನಿಗಿದ್ದಿತ್ತು. ಆದರೆ, ಅವನ ಆ ಆಸೆ ತೀರದೇ ಹೋಯ್ತು. ಅಷ್ಟರಲ್ಲೇ ವಿಧಿ ಅವನನ್ನು ಕರೆಸಿಕೊಂಡಿತು! ಅವನು ಹಾಸನದಲ್ಲಿ ಕೆಲಸ ಮಾಡುತ್ತಿದ್ದಾಗ, ನಮ್ಮಿಬ್ಬರ ಅತ್ಯಂತ ಆಪ್ತಸ್ನೇಹಿತ ಸೂರ್ಯನೊಡನೆ ಬೇಲೂರು, ಹಳೆಬೀಡುಗಳನ್ನು ಭೇಟಿ ಮಾಡಿದ್ದೆವು. ಅಲ್ಲದೆ, ನಾವೆಲ್ಲ ಮಲ್ಪೆಗೆ ಹೋದ ಭೇಟಿಯ ನೆನಪೂ ಆಗುತ್ತಿದೆ. ನಾನೂ, ರಾಧಾಕೃಷ್ಣನೂ ಗಂಗೊಳ್ಳಿ, ಗುಜ್ಜಾಡಿ, ಕೊಲ್ಲೂರು, ಗೋಕರ್ಣವೆಂಬಂತೆ ಹಲವಾರು ತಿರುಗಾಟಗಳ ನೆನಪು ಆಗುತ್ತಿದೆ. ಈ ಎಲ್ಲ - ತಿರುಗಾಟಗಳ ಸವಿ ನೆನಪುಗಳನ್ನು, ರಾಧಾಕೃಷ್ಣ ನನಗೀಗ ಅನುಭವಿಸಲು ಬಿಟ್ಟುಹೋಗಿದ್ದಾನೆ! ಸಾವು ಯಾರಿಗೂ ತಪ್ಪಿದ್ದಲ್ಲ ಎಂಬ ಮಾತಿದ್ದರೂ, ಆತ್ಮೀಯರು ನಮ್ಮನ್ನಗಲಿದಾಗ ದುಃಖವಾಗುವುದು ಸಹಜವೇ! ಈಗ ಬೆಂಗಳೂರಿಗೆ ಹೋದಾಗ, ಅವನ ಮನೆಗೆ ಭೇಟಿ ಕೊಡುತ್ತಿರುತ್ತೇನೆ. ಆದರೆ, ರಾಧಾಕೃಷ್ಣನಿಲ್ಲದ ಆ ಮನೆ, ನನ್ನ ಹೃದಯದಲ್ಲಿ ಬರೀ ಬರಿದು!

*

ಅಮೆರಿಕದಲ್ಲಿ ಕನ್ನಡತನದ ಸ್ಥಾಪನೆ ಮತ್ತು ಬೆಳವಣಿಗೆ

– ನಾಗ ಐತಾಳ

ಭಾರತದಿಂದ ಮೊದಲ ಬಾರಿ ಬರುತ್ತ, ಪ್ರಯಾಣದ ಎರಡು ದಿನಗಳಲ್ಲಿ, ಕನ್ನಡ ನುಡಿ ಕೇಳದೆ, ಅದಕ್ಕಾಗಿ ಹಾತೊರೆದು ಲಾಸ್ ಎಂಜಲೀಸ್‌ಗೆ ಬಂದಾಗ ಬಲ್ಲಾಳ ದಂಪತಿಯ ಮನೆಯಲ್ಲಿ ಬಾಯ್ತುಂಬ ತಾಯ್ನುಡಿಯನ್ನಾಡಿ, ತೃಪ್ತಿಪಟ್ಟಿದ್ದೆ. ನಾವು ಬಂದ ದಿನಗಳಲ್ಲಿ, ಕರ್ನಾಟಕದಿಂದ ವಲಸೆ ಬಂದವರ ಸಂಖ್ಯೆ ಕಡಿಮೆಯಾಗಿತ್ತು. ನಾನಿರುವ ಪರಿಸರದಲ್ಲಂತೂ ಯಾರೂ ಕನ್ನಡ ಮಾತಾಡುವವರಿರಲಿಲ್ಲ. ದೂರದ ಪಶ್ಚಿಮ ಲಾಸ್ ಎಂಜಲೀಸ್‌ನಿಂದಲೂ, ಯೂನಿವರ್ಸಿಟಿ ಆಫ್ ಕ್ಯಾಲಿಫೋರ್ನಿಯಾ-ದಿಂದಲೂ, ಆಗೊಮ್ಮೆ, ಈಗೊಮ್ಮೆ ಕನ್ನಡ ಬಂಧುಗಳನ್ನು ಕಲೆ ಹಾಕಿ, ಮನಃತೃಪ್ತಿಯಾಗುವಷ್ಟು ಕನ್ನಡ ಮಾತಾಡಿ, ಕನ್ನಡ ಹಾಡುಗಳನ್ನು ಹಾಡಿ, ನಮ್ಮ ತೃಷೆಯನ್ನು ತಣಿಸಿಕೊಳ್ಳುತ್ತಿದ್ದೆವು. ಇಂತಹ ಕೂಟಗಳನ್ನು ಹಲವು ಬಾರಿ ನಮ್ಮ ಮನೆಯಲ್ಲಿ ಏರ್ಪಡಿಸಿದ್ದೆವು. ಕನ್ನಡದ ಮೇಲಿನ ಪ್ರೀತಿ, ಅಭಿಮಾನವನ್ನು ಈ ರೀತಿ ವ್ಯಕ್ತಪಡಿಸುತ್ತಿರುವಂತೆಯೇ, ನಾವು (ಅಂದರೆ ಅಮೆರಿಕಕ್ಕೆ ಬಂದ ಎಲ್ಲ ಅನಿವಾಸಿ ಕನ್ನಡಿಗರು) ಕನ್ನಡತನವನ್ನು ಉಳಿಸಿಕೊಳ್ಳಲು ಶಂಕುಸ್ಥಾಪನೆ ಮಾಡಿದ್ದೇವೆಂದರೆ, ತಪ್ಪಾಗಲಾರದು. ಒಮ್ಮೆ ನಮ್ಮ ಮನೆಯಲ್ಲಿ ಲಾಸ್ ಎಂಜಲೀಸ್‌ನಲ್ಲಿದ್ದ ಕೆಲವೇ ಕನ್ನಡಿಗರು ಸೇರಿದಾಗ, ಒಂದು ಕನ್ನಡ ಸಂಘವನ್ನು ಪ್ರಾರಂಭಿಸಲು ಪ್ರಸ್ತಾಪ ಮಾಡಿದ್ದೆ. ಆದರೆ, ನನ್ನ ಮಿತ್ರರಾದ ಕಂಠಿಯವರು, ಒಂದು ಸಂಘವನ್ನು ಸ್ಥಾಪಿಸಿ, ಮುಂದುವರಿಸಿಕೊಳ್ಳಲು

ಎದುರಿಸಬೇಕಾದ ಅಡಚಣೆಗಳನ್ನು ವಿವರಿಸಿ, ನನ್ನ ಸಲಹೆಗೆ ತಣ್ಣೀರೆರಚಿದ್ದರು. ಆದರೆ, ಇದೇ ಕಂಠಿಯವರು, ನಾನು ಲಾಸ್ ಎಂಜಲೀಸ್ ಬಿಟ್ಟ ೧-೨ ವರ್ಷಗಳಲ್ಲಿ, ಒಂದು ಕನ್ನಡ ಸಂಘವನ್ನು ಸ್ಥಾಪಿಸಲು ಸಹಕರಿಸಿ, ಅಲ್ಲಿಯ ಕನ್ನಡತನದ ಬೆಳೆವಣಿಗೆಗೆ ಕಾರಣರಾದವರಲ್ಲೊಬ್ಬರೆಂಬುದು ಒಂದು ಹೆಮ್ಮೆಯ ಸಂಗತಿ.

ಲಾಸ್ ಎಂಜಲೀಸ್ ಬಿಟ್ಟು, ಕೆನಡಾಗೆ ಪ್ರಯಾಣಿಸುತ್ತಿರುವ ಸಮಯ, ಅಮೆರಿಕದ ಕನ್ನಡಿಗರ ಒಡಲೊಳಗೇ ಕುದಿಯುತ್ತಿದ್ದ ಮಹತ್ವಾಕಾಂಕ್ಷೆ – ಕನ್ನಡತನದ ಸ್ಥಾಪನೆ – ಜಾಗೃತಗೊಂಡು, ಕಾರ್ಯಗತವಾಗುವ ಮುಹೂರ್ತ ಒದಗಿ ಬಂತು. ಡಿಟ್ರಾಯ್ಟ್ ಸಮೀಪದ, ಆನ್ ಆರ್ಬರ್‌ನಲ್ಲಿ, ಸುತ್ತು-ಮುತ್ತಲಿನ ಕನ್ನಡಿಗರೆಲ್ಲ ಸೇರಿ, ಅಮೆರಿಕದಾದ್ಯಂತ ನೆಲೆಸಿರುವ ಕನ್ನಡಿಗರ ವಿಳಾಸ ಪಟ್ಟಿಯನ್ನು ಸಾಕಷ್ಟು ಶ್ರಮವಹಿಸಿ ಕಲೆಹಾಕಿ, ಒಂದು ಸಂಘವನ್ನು ಪ್ರಥಮ ಬಾರಿಗೆ ಪ್ರಾರಂಭಿಸಿದರು. 'ಕನ್ನಡತನ'ದ ಚರಿತ್ರೆಯಲ್ಲಿ ಇದೊಂದು ಮೈಲಿಗಲ್ಲೆಂದೇ ಭಾವಿಸಬೇಕು. ೧೯೭೧ರಲ್ಲಿ ಸ್ಥಾಪನೆಯಾದ ಈ ಸಂಘಕ್ಕೆ 'ಕನ್ನಡ ಕೂಟ'ವೆಂಬ ನಾಮಕರಣ ಮಾಡಿ, ಅದು, ಅಮೆರಿಕದಾದ್ಯಂತ ನೆಲೆಸಿರುವ ಕನಡಿಗರ 'ಕೇಂದ್ರ ಸಂಘ'ವೆಂದು ಗುರುತಿಸುವಂತೆ ನಿರ್ಣಯಿಸಲಾಯ್ತು. ಅಮೆರಿಕದ ಬೇರೆ ಬೇರೆ ಪ್ರದೇಶಗಳಲ್ಲಿ, ಈ 'ಕನ್ನಡ ಕೂಟ'ದ ಶಾಖೆಗಳನ್ನು ಸ್ಥಾಪಿಸುವ ಪ್ರಯತ್ನ ನಡೆದಿದ್ದು, ಬಾಲ್ಟಿಮೋರ್, ಶಿಕಾಗೋ ನಗರಗಳಲ್ಲಿ ಮೊದಲಿಗೆ ನಿರ್ಮಿತವಾಗಿ, ಮುಂದೆ ಬೇರೆ ನಗರಗಳಲ್ಲೂ (ನಾರ್ತ್ ಕೆರೊಲಿನ, ಜೋರ್ಜಿಯಾ, ದಕ್ಷಿಣ ಮತ್ತು ಉತ್ತರ ಕ್ಯಾಲಿಫೋರ್ನಿಯ, ಹ್ಯೂಸ್ಟನ್ ಮೊದಲಾದವು) ಅದರ ಶಾಖೆಗಳು ಸ್ಥಾಪನೆಯಾದುವು. ಈ ರೀತಿ ಮಿಶಿಗನ್ ಕನ್ನಡಿಗರ ಉತ್ಸಾಹ ಮತ್ತು ಸಾಹಸಗಳಿಂದ ಉಗಮವಾದ ಕನ್ನಡ ಕೂಟ, ಈಗ ದೇಶದಾದ್ಯಂತ ಎಲ್ಲ ಕಡೆಗಳಲ್ಲೂ ಸ್ಥಾಪನೆಯಾಗಿದೆ. ಶಾಖೆಗಳನ್ನು ಸ್ಥಾಪಿಸುವಾಗ ಅವುಗಳನ್ನು ಕರ್ನಾಟಕದ 'ವಿಶಿಷ್ಟ' ಹೆಸರುಗಳಿಂದ ನಾಮಕರಣ ಮಾಡಿ, ಕನ್ನಡ ನಾಡಿನ ಮೇಲಿನ ಅತ್ಯಭಿಮಾನವನ್ನು ವ್ಯಕ್ತಪಡಿಸಿದ್ದರು. (ಉದಾಹರಣೆಗೆ: ಮಿಶಿಗನ್ ಕೂಟಕ್ಕೆ 'ಪಂಪ', ಜೋರ್ಜಿಯ ಕೂಟಕ್ಕೆ 'ನೃಪತುಂಗ', ಬಾಲ್ಟಿಮೋರ್ ಕೂಟಕ್ಕೆ 'ಕಾವೇರಿ', ಶಿಕಾಗೋ ಕೂಟಕ್ಕೆ 'ವಿದ್ಯಾರಣ್ಯ' ಇತ್ಯಾದಿ.) ನಾನು ೧೯೭೫ರಲ್ಲಿ ಶಿಕಾಗೋಗೆ ಬಂದಾಗ, ಇಲ್ಲಿ ವಿದ್ಯಾರಣ್ಯ ಶಾಖೆಯ ಚಟುವಟಿಕೆಗಳಲ್ಲಿ, ತುಂಬ ಉತ್ಸಾಹದಿಂದ ಭಾಗವಹಿಸಲು ಪ್ರಾರಂಭಿಸಿದೆ. ಹಾಗಾಗಿ, ವಿದ್ಯಾರಣ್ಯ ಶಾಖೆಗೆ ಸಂಬಂಧಪಟ್ಟ ವಿಚಾರಗಳೇ ಹೆಚ್ಚಿನದು ಎಂಬುದನ್ನು ಒಪ್ಪಿಕೊಳ್ಳುತ್ತೇನೆ.

ಮಿಶಿಗನ್‌ನಲ್ಲಿ ಸ್ಥಾಪನೆಯಾದ ಕನ್ನಡ ಕೂಟದ ಬಗ್ಗೆ ಇನ್ನೆರಡು ಮಾತುಗಳು. ಕೂಟದ ಸ್ಥಾಪನೆಗಾಗಿ, ಹುರುಪಿನಿಂದ ದುಡಿದ ಅನೇಕ ಕನ್ನಡಿಗರಿಗೆ ನಾವೆಲ್ಲ ಕನ್ನಡಿಗರೂ ಕೃತಜ್ಞರು! ನನಗೆ ತಿಳಿದಮಟ್ಟಿಗೆ, ಅತಿ ಶ್ರಮವಹಿಸಿದವರ ಪೈಕಿ ಶ್ರೀಯುತರುಗಳಾದ, ಶ್ರೀಪಾದರಾಜು, ಪ್ರಕಾಶ್, ಹನುಮಂತಯ್ಯ, ಕೃಷ್ಣಪ್ಪ, ನಾಗಮನೋಹರ್ ಮುಂತಾದವರು ಕೆಲವರು. ಇವರಲ್ಲದೇ, ಇತರರೂ ಉತ್ಸಾಹದಿಂದ ಕನ್ನಡ ಕೂಟದ ಸ್ಥಾಪನೆಗೆ

ದುಡಿದಿದ್ದಾರೆ. ಆದರೆ, ಅವರೆಲ್ಲರ ಹೆಸರುಗಳು ನನಗೆ ತಿಳಿಯದಿರುವುದರಿಂದ, ನನ್ನ ಪಾಲಿನ ಲೋಪದೋಷಗಳಿಗಾಗಿ ಕ್ಷಮೆ ಕೋರುತ್ತೇನೆ. ಕ್ರಮೇಣ, ಕೇಂದ್ರ–ಶಾಖೆಯೆಂಬ ಕಲ್ಪನೆಯು, ಕಾರ್ಯನಿರ್ಹಣೆಗೆ ಕೆಲವು ಅಡ್ಡಿ ಬರುವ ಸಮಸ್ಯೆಗಳನ್ನು ತಂದೊಡ್ಡಿತು. ಹಾಗಾಗಿ, ಈ ಕೇಂದ್ರ–ಶಾಖೆ ಎಂಬ ಕಲ್ಪನೆಯು, ಮಾಸತೊಡಗಿ, ಸ್ಥಾಪನೆಯಾದ ವಿವಿಧ ಶಾಖೆಗಳೇ ಸ್ವತಂತ್ರವಾಗಿ ಮುಂದುವರಿಯಲು ಪ್ರಾರಂಭವಾಯ್ತು. ಆದರೂ, ಅಂದು ಮೂಡಿ ಬಂದ ಕೇಂದ್ರ–ಶಾಖೆ ಎಂಬ ಭಾವನೆ, ಈಚೆಗೆ ಊರ್ಜಿತಗೊಂಡು, 'ಅಮೆರಿಕದ ಕನ್ನಡ ಕೂಟಗಳ ಆಗರ' (ಅಕ್ಕ) ಎಂಬ ಸಂಸ್ಥೆಯೊಂದು ಪ್ರಾರಂಭವಾಗಿದೆ.

ವಿದ್ಯಾರಣ್ಯ ಶಾಖೆಯು ಅಧಿಕೃತವಾಗಿ ಸ್ಥಾಪನೆಯಾದುದು ೧೯೭೩ರಲ್ಲಿ. ಆದರೆ ೧೯೭೨ರ ಮಾರ್ಚಿ ತಿಂಗಳಲ್ಲಿ, ಶಿಕಾಗೋ ಸಮೀಪದ, ಇಂಡಿಯಾನಾ ಪ್ರಾಂತದ ಹ್ಯಾಮಂಡ್‌ನಲ್ಲಿ ನಡೆದ 'ವಸಂತೋತ್ಸವ'ವೇ ವಿದ್ಯಾರಣ್ಯ ಶಾಖೆಯ ಸ್ಥಾಪನೆಗೆ ಬುನಾದಿಯೆಂದು ಹೇಳಬಹುದು. ಆಮೇಲೆ, ಶಿಕಾಗೋ ಯುನಿವರ್ಸಿಟಿಯ ಇಂಟರ್ ನ್ಯಾಷನಲ್ ಹೌಸ್‌ನಲ್ಲಿ ಸೇರಿದ ಸಭೆಯಲ್ಲಿ, ಅಧಿಕೃತವಾಗಿ, ನಾಗರಾಜರಾವ್‌ರು ಅಧ್ಯಕ್ಷರಾಗಿ ಚುನಾಯಿತರಾದರು. ಮುಂದೆ, ಕೂಟದ ಕಾರ್ಯಕ್ರಮಗಳು ಸಾಂಗವಾಗಿ ನಡೆದು ಬರುತ್ತಿದೆ. ನಾವು ಶಿಕಾಗೋಗೆ ಬಂದಾಗ ಕಂಠಿ ಎನ್ನುವವರು (ನಮ್ಮ ಲಾಸ್ ಎಂಜಲೀಸ್ ಸ್ನೇಹಿತರಲ್ಲ) ಅಧ್ಯಕ್ಷರಾಗಿದ್ದರು. ನಾನು ಶಿಕಾಗೋದಲ್ಲಿ ಪಾಲ್ಗೊಂಡ ಮೊದಲ ಕನ್ನಡ ಕೂಟದ ಕಾರ್ಯಕ್ರಮವೇ ದೀಪಾವಳಿ ದಿನಾಚರಣೆ. ಅಂದು 'ಸಂಧ್ಯಾರಾಗ'ವೆಂಬ ಚಲನ ಚಿತ್ರವನ್ನು ಪ್ರದರ್ಶಿಸಿದ್ದರು ಎಂಬುದು ಜ್ಞಾಪಕದಲ್ಲಿದೆ.

ಹಿಂದೆ ಕೆನಡಾದಲ್ಲಿದ್ದಾಗ, ಅಲ್ಲಿಯೂ ಸುತ್ತು–ಮುತ್ತಲಿನ ಕೆಲವು ಕನ್ನಡಿಗರು ಕಲೆತು, ನಮ್ಮ ಮನೆಯಲ್ಲಿ ಆಗಾಗ್ಗೆ ಸೇರುತ್ತಿದ್ದೆವು. ಕ್ರಮೇಣ ಕನ್ನಡ ಕೂಟದ ಉತ್ಸಾಹ ಕೆನಡಾಗೂ ಹಬ್ಬಿ, ಟೊರಾಂಟೋದಲ್ಲೊಂದು ಕನ್ನಡ ಸಂಘ ಸ್ಥಾಪನೆಯಾಯ್ತು. ಲಂಡನ್‌ನಿಂದ ೧೨೦ ಮೈಲಿ ದೂರವಿದ್ದರೂ ಅಲ್ಲಿ ನಡೆಯುವ ಕನ್ನಡ ಸಂಘದ ಕಾರ್ಯಕ್ರಮಗಳಲ್ಲಿ ನಾವು ಭಾಗಿಗಳಾಗುತ್ತಿದ್ದೆವು. ಮುಂದೆ ಗ್ವೆಲ್ಫ್‌ಗೆ ಬಂದಾಗ, ಟೊರಾಂಟೋಗೆ ಅಲ್ಲಿಂದ ಕೇವಲ ೫೦ ಮೈಲಿ ದೂರವಿದ್ದುದರಿಂದ ನಾವು ತಪ್ಪದೇ ಅಲ್ಲಿಯ ಎಲ್ಲ ಕಾರ್ಯಕ್ರಮಗಳಿಗೂ ಹಾಜರಾಗುತ್ತಾ, ನಮ್ಮ ಕನ್ನಡ ನುಡಿ, ಸಂಸ್ಕೃತಿಯ ಮೇಲಿನ ಅಭಿಮಾನವನ್ನು ಹೆಚ್ಚಿಸಿಕೊಳ್ಳುತ್ತಿದ್ದೆವು.

ಶಿಕಾಗೋಗೆ ನಾವು ಬಂದ ಕಾಲದಲ್ಲೇ ಬಹಳಷ್ಟು ಕನ್ನಡಿಗರಿದ್ದುದರಿಂದ ನಮ್ಮ ಉತ್ಸಾಹವು ಹೆಚ್ಚಿತ್ತು. ಮೊದಲು ಪಾಲ್ಗೊಂಡ ದೀಪಾವಳಿ ಕಾರ್ಯಕ್ರಮದಲ್ಲಿ ಪರಿಚಯವಾದವರು, ಮಾಧವರಾವ್ ಮತ್ತು ಅವರ ಧರ್ಮಪತ್ನಿ ವಿಜಯಾ. ಅವರಿಂದಾಗಿ, ಅವರ ಸ್ನೇತರಾದ (ದಿ) ಬಾಲಕೃಷ್ಣರಾವ್ ಮತ್ತು ಶ್ರೀಮತಿಯರ ಪರಿಚಯವಾಯ್ತು. ಕ್ರಮೇಣ ನಮ್ಮ ಸ್ನೇಹಿತ ಬಳಗ ಬೆಳೆಯುತ್ತ ಬಂದು, ಸಾಧಾರಣ ಶಿಕಾಗೋ ವಲಯದ ಎಲ್ಲ ಕನ್ನಡಿಗರ ಪರಿಚಯ ನಮಗಾಯ್ತೆಂದು ಹೇಳಬಹುದು. ನಮ್ಮ ಶಿಕಾಗೋ

ಕನ್ನಡ ಬಳಗವನ್ನು ಹೆಚ್ಚಿಸಿಕೊಳ್ಳಲು (ದಿ) ಮೈಸೂರು ಸುಂದರ ಎಂಬವರು ಬಹಳಷ್ಟು ಕಾರಣರಾಗಿದ್ದರು. ಮುಂದೆ ಅವರು ಕನ್ನಡ ಕೂಟದ ಅಧ್ಯಕ್ಷರಾದಾಗ ನಾನು ಸಾಕಷ್ಟು ಸಹಾಯ ಮಾಡಿದ್ದೆ.

ಮೊದಮೊದಲಿಗೆ, ವೈಯಕ್ತಿಕ ಭೋಜನಕೂಟದ ಸಮಾರಂಭಗಳಲ್ಲಿ ಕನ್ನಡಿಗರು ಸೇರಿ, ಉಭಯ ಕುಶಲೋಪರಿ ನಡೆಸಿ, ಸಂತೋಷದಿಂದ ಸಮಯ ಕಳೆಯುತ್ತಿದ್ದರು. ಕನ್ನಡ ಕೂಟವೆಂಬುದು ಪ್ರಾರಂಭವಾದ ಮೇಲೆ, ಕೂಟದ ಸದಸ್ಯರು ಸೇರಿ, ಉಭಯ ಕುಶಲೋಪರಿಯ ಜತೆಗೆ, ಕೆಲವು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಸೇರಿಸಿ, ಮನೆಯಿಂದ ಮಾಡಿಕೊಂಡು ಬಂದ ರುಚಿ–ರುಚಿ ಅಡುಗೆ – ಬಿಸಿಬೇಳೆಬಾತ್, ಪುಳಿಯೋಗರೆ, ಪಾಯಸ, ಲಾಡು ಇತ್ಯಾದಿ – ಊಟಮಾಡಿ 'ಕಾರ್ಯಕ್ರಮ'ಗಳನ್ನು ಮುಗಿಸುತ್ತಿದ್ದರು. ಇದೊಂದು ಮುಖ್ಯವಾದ ಹಂತವೆಂದು ತಿಳಿಯಬೇಕು. ಯಾಕೆಂದರೆ, ಈ ಸಾಂಸ್ಕೃತಿಕ ಕಾರ್ಯಕ್ರಮಗಳು, ನಮ್ಮೆಲ್ಲರಲ್ಲಿರುವ ಕನ್ನಡ ಸಂಸ್ಕೃತಿಯ ಅರಿವನ್ನು ಜಾಗೃತಗೊಳಿಸಿ, ಕನ್ನಡತನವನ್ನು ಸ್ಥಾಪಿಸಲು ಇದು ನಾಂದಿಯಾಯ್ತು. ಕರ್ನಾಟಕದ ಜನಪದ ಗೀತೆಗಳನ್ನೋ, ಭಾವಗೀತೆಗಳನ್ನೋ, ಭಜನೆಯ ಹಾಡುಗಳನ್ನೋ ಹಾಡಿ, ನಮ್ಮ 'ತೃಷೆ'ಯನ್ನು ತಣಿಸಿಕೊಳ್ಳುತ್ತಿದ್ದೆವು. ಕ್ರಮೇಣ, ನರ್ತನ, ಕರ್ನಾಟಕದ ಪ್ರಸಿದ್ಧ ನಾಟಕಕಾರರಿಂದ ರಚಿತವಾದ ನಾಟಕಗಳ ತುಣುಕುಗಳೂ ಈ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಕೂಡಿಕೊಂಡುವು. ಜೊತೆಗೆ, ಸಾಹಿತ್ಯಕ್ಕೆ ಸಂಬಂಧಪಟ್ಟ ಕಾರ್ಯಕ್ರಮಗಳನ್ನೂ ಬಳಸಿಕೊಳ್ಳಲು ಪ್ರಾರಂಭಿಸಿದೆವು. ಪರಿಣಾಮವಾಗಿ ಕನ್ನಡ ಪತ್ರಿಕೆಗಳೂ ಹುಟ್ಟಿಕೊಂಡವು. ಮುಂದೆ ನಮ್ಮ ಕನ್ನಡಾಭಿಮಾನವು ಬೆಳೆಯುತ್ತ ಬಂದಂತೆ, ಕನ್ನಡತನವನ್ನು ಸ್ಥಾಪಿಸಬೇಕೆಂಬ ಹಂಬಲವೂ ಜಾಸ್ತಿಯಾಗುತ್ತ ಬಂತು. ಇದಕ್ಕಾಗಿ ಯೋಜನೆ ಹಾಕಿ, ಅದನ್ನು ಕಾರ್ಯಗತ ಮಾಡಬೇಕೆಂಬ ಕರ್ತವ್ಯಗಳ ಒತ್ತಡವೂ ನಮ್ಮಲ್ಲೇ ಬೆಳೆಯುತ್ತ ಬಂತು. ಹೀಗೆ, ಅಮೆರಿಕದಲ್ಲಿ, ಕನ್ನಡತನದ ಬೆಳವಣಿಗೆ ಹಂತ ಹಂತವಾಗಿ ಸಾಗುತ್ತ ಬಂದಿದೆ.

ಸಂತೋಷ ಕೂಟಗಳಿಂದ ಪ್ರಾರಂಭವಾದ ಕನ್ನಡಿಗರ ಸಂಘಟನೆಯನ್ನು ನೆನೆದಾಗ, ಅದು, ನಾವು ಲಾಸ್ ಎಂಜಲೀಸ್‌ನಲ್ಲಿದ್ದಾಗ, ನಮ್ಮ ಮನೆಯಲ್ಲಿ ಸೇರಿದ್ದ ಕನ್ನಡಿಗರ ಕೂಟದ ಜ್ಞಾಪಕ ತರುತ್ತದೆ. ಆಗ ಭೋಜನಕ್ಕೆಂದು ಸೇರಿದ ನಾವು, ಬಾಯ್ತುಂಬ ಕನ್ನಡ ಮಾತಾಡಿ, ಕನ್ನಡ ಹಾಡುಗಳನ್ನು ಹಾಡಿದಾಗ ಅದು, ಒಂದು 'ಮಿನಿ' ಸಾಂಸ್ಕೃತಿಕ ಕಾರ್ಯಕ್ರಮಗಳಂತಾಗುತ್ತಿತ್ತು. ಅಥವಾ, ಕರ್ನಾಟಕದಲ್ಲಿ ನೋಡಿದ ವಿಶಿಷ್ಟತೆಯ ವಿಚಾರ ಮಾತಾಡಿದಾಗ – ಹಳೆಬೀಡು, ಬೇಲೂರು, ಸೋಮನಾಥಪುರ, ಐಹೊಳೆ ಮುಂತಾದ ಸ್ಥಳಗಳಿಗೆ ಭೇಟಿಕೊಟ್ಟುದು – ಅದು, 'ಮಿನಿ' ಸೆಮಿನಾರ್‌ನಂತಾಗುತ್ತಿತ್ತು. ಸಂಘವನ್ನು ಅಧಿಕೃತವಾಗಿ ಪ್ರಾರಂಭಿಸದೇ, ಇಂತಹ 'ಅಧಿವೇಶನ'ಗಳೂ, ಮುಂದೆ ಕನ್ನಡ ಕೂಟದ ಸ್ಥಾಪನೆಗೆ ಮುನ್ಸೂಚನೆ ಕೊಡುತ್ತಿತ್ತೋ ಏನೋ! ಅದೇನೇ ಇರಲಿ, ಈ ಸಂತೋಷ

ಕೂಟಗಳು, ನಮ್ಮಲೇ ಕುದಿಯುತ್ತಿದ್ದ ಸಂಘಟನೆಯ ಮನೋಭಾವವನ್ನು ವ್ಯಕ್ತಪಡಿಸುತ್ತಿತ್ತು. ನನಗಿನ್ನೂ ಜ್ಞಾಪಕವಿದೆ, ಲಾಸ್ ಎಂಜಲೀಸ್‌ಗೆ ಪ್ರಸಿದ್ಧ ಫೋಟೋಗ್ರಾಫರ್ ಟಿ. ಎಸ್. ಸತ್ಯನ್ ಭಾರತದಿಂದ ಬಂದಾಗ, ನಮ್ಮ ಮನೆಯಲ್ಲಿ ಕನ್ನಡಿಗರು ಭೋಜನಕ್ಕೆಂದು ಸೇರಿದಾಗ, ಅವರಿಂದ ಹಲವು ಫೋಟಾಗ್ರಫಿಯ ಕುಶಲತೆಯ ಬಗ್ಗೆ ಮಾಹಿತಿ ಪಡೆದಿದ್ದೆವು. ಆ ಕಾಲದಲ್ಲಿ ಅಷ್ಟು ಮಾತ್ರ ಸಾಧ್ಯವಾಗಿತ್ತು ನಮಗೆ. ಈ ವಿಷಯದಲ್ಲಿ, ಮಿಶಿಗನ್ ಕನ್ನಡ ಬಂಧುಗಳು ಮಾಡಿದ ಸಾಹಸವು ಶ್ಲಾಘನೀಯವಾದುದು.

ಸುಮಾರು ಮೂರು ದಶಕಗಳ ನನ್ನ–ಶಿಕಾಗೋ ಸಂಬಂಧದ ಪರಿಣಾಮವಾಗಿ,– ಸಂತೋಷಕೂಟಗಳಿಂದ ಜಾಗೃತವಾದ ಕನ್ನಡ ಅಭಿಮಾನ ಕ್ರಮೇಣ ನಮ್ಮ ಸಂಸ್ಕೃತಿಯ ಬಗ್ಗೆ ಆಸಕ್ತಿ ಹೆಚ್ಚಿಸಿತು. ಕನ್ನಡಿಗರ ಸಂಖ್ಯೆ ಜಾಸ್ತಿಯಾಗುತ್ತ ಬಂದಂತೆ, ಹೊಸ ಹೊಸ ಕನ್ನಡ ಕೂಟಗಳು ಹುಟ್ಟಿ, ಮೊದಲಿಗೆ, ಹಬ್ಬ–ಹರಿದಿನಗಳನ್ನು ಆಚರಿಸಲು ಈ ಕೂಟಗಳು ಸೇರಲು ಪ್ರಾರಂಭವಾಯ್ತು. ಇಲ್ಲಿ ಒಂದು ವಿಷಯ ಪ್ರಸ್ತಾಪಿಸಲು ಅಪೇಕ್ಷಿಸುತ್ತೇನೆ. ಇಲ್ಲಿಗೆ ವಲಸೆ ಬಂದ ಕನ್ನಡಿಗರು ಹೆಚ್ಚಾಗಿ ಹಿಂದೂಗಳಾಗಿದ್ದರಿಂದಲೋ ಏನೋ, ಅಥವಾ ನಾನು ಹಿಂದೂವಾಗಿದ್ದರಿಂದಲೋ, ನಾವು ಹೆಚ್ಚಾಗಿ, ಹಿಂದೂ ಹಬ್ಬಗಳನ್ನೇ ಆಚರಿಸಲು ಸೇರುತ್ತಿದ್ದೇವು (ಉದಾಹರಣೆಗೆ: ಯುಗಾದಿ, ಸಂಕ್ರಾಂತಿ, ಗಣೇಶ–ಗೌರಿ, ದೀಪಾವಳಿ ಇತ್ಯಾದಿ) ಆದರೆ, ಅಲ್ಪ ಸಂಖ್ಯಾತರಾದರೂ, ಬೇರೆ ಮತೀಯ ಕನ್ನಡಿಗರೂ – ಕ್ರಿಶ್ಚಿಯನ್, ಮುಸ್ಲಿಮ್ – ಇಲ್ಲಿ ಬಂದು ನೆಲೆಸಿದ್ದಾರೆಂಬುದನ್ನು ನಾವು ಮರೆಯಬಾರದು. ಹಾಗೆಂದು, ನಾವು ಅನ್ಯ ಮತೀಯ ಹಬ್ಬಗಳನ್ನು ಆಚರಿಸುತ್ತಿದ್ದಿಲ್ಲ. ನಮ್ಮ ಕನ್ನಡ ಕೂಟಗಳು ಧಾರ್ಮಿಕ ಸಂಸ್ಥೆಗಳಾಗಿ ಮಾರ್ಪಟ್ಟಿವೆಯೇ ಎಂದು ಅನುಮಾನ ಬರುತ್ತಿತ್ತು. ಹೆಚ್ಚಿನ ಮೆಂಬರುಗಳು ಹಿಂದೂಗಳಾಗಿದ್ದುದರಿಂದ ಇಂತಹ ಧಾರ್ಮಿಕ ದಿನಾಚರಣೆಗಳನ್ನು ಆಚರಿಸುವುದಕ್ಕೆ ಸಮರ್ಥನೆ ಕೊಡುವುದೋ ಏನೋ! ಹೀಗೆ ಹಬ್ಬಗಳ ದಿನಾಚರಣೆಗೆ ಸೇರಿದಾಗ, ಅದು, ಅಂತಹ ದಿನಗಳಲ್ಲಿ ಹೆಂಗಸರಿಗೆ ಜರತಾರೀ ಸೀರೆ ಉಟ್ಟು ಆಭರಣಗಳನ್ನು ತೊಡುವುದಕ್ಕೂ ಅವಕಾಶ ಒದಗಿಸಿತು. ಈ ಕೂಟಗಳಲ್ಲಿ, ಮೊದಲಿಗೆ, ದೇವರನಾಮಗಳನ್ನು ಹಾಡಿ, ಹೆಂಗಳೆಯರಿಗೆ ಅವರಲ್ಲಿ ಹುದುಗಿದ್ದ ಕಲಾಭಿವ್ಯಕ್ತಪಡಿಸಲು ಅವಕಾಶ ಕೊಟ್ಟಿತು. ಕ್ರಮೇಣ, ಭಾವಗೀತೆಗಳು, ಜಾನಪದ ಗೀತೆಗಳೂ ಇಂತಹ ಕಾರ್ಯಕ್ರಮಗಳನ್ನು ಸೇರಿಕೊಂಡುವು. ಮೊದಲಿಗೆ ಚಿಕ್ಕ ಸ್ಥಳಗಳಲ್ಲಿ ಸೇರುತ್ತಿದ್ದ ಈ ಕೂಟಗಳು, ಕನ್ನಡಿಗರ ಸಂಖ್ಯೆ ಹೆಚ್ಚಿದಂತೆ ದೊಡ್ಡ ಸ್ಥಳಗಳನ್ನು – ಉದಾ. ಶಾಲಾ ಆಡಿಟೋರಿಯಮ್ – ಬಳಸುವಂತಾಯ್ತು. ಸದಸ್ಯರು ಜಾಸ್ತಿಯಾದಂತೆ, ಕನ್ನಡ ಕೂಟಕ್ಕೆ ಒಂದು ನಿರ್ದಿಷ್ಟ ರೂಪರೇಷೆಗಳೂ ಸಿಗುವಂತಾಯ್ತು. ಸಾಂಸ್ಕೃತಿಕ ಕಾರ್ಯಕ್ರಮಗಳು ಕ್ರಮೇಣ ಹೆಚ್ಚಿನ ಸಂಖ್ಯೆಯಲ್ಲಿ ಕನ್ನಡ ಕೂಟದ ಕಾರ್ಯಕ್ರಮಗಳ ಅಂಗವಾಗತೊಡಗಿತು. ಭಾವಗೀತೆ, ಭಕ್ತಿಗೀತೆ, ಜಾನಪದ ಗೀತೆ, ಸಿನೆಮಾ ಹಾಡುಗಳ ಜತೆಗೆ, ಜಾನಪದ ನರ್ತನ, ಕೋಲಾಟ ಮುಂತಾದುವುಗಳ ಪ್ರದರ್ಶನಗಳೂ

ಸೇರಿಕೊಂಡುವು. ಮೊದಲಿಗೆ, ಕೆಲವೇ ಕನ್ನಡಿಗರು ಇಂತಹ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿದ್ದರೂ, ಬರು ಬರುತ್ತ ಜನರ ಆಸಕ್ತಿ ಹೆಚ್ಚುತ್ತ ಬಂದಂತೆ, ಹೆಚ್ಚು ಹೆಚ್ಚಾಗಿ ಇಂತಹ ಕಾರ್ಯಕ್ರಮಗಳು ಕೂಟದ ಅಂಗವಾಗತೊಡಗಿದವು. ಹಿಂದೊಮ್ಮೆ ಕೈಲಾಸಂರ 'ಅನುಕೂಲಕ್ಕೊಬ್ಬಣ್ಣ' ಎಂಬ ನಾಟಕವನ್ನು ನಾನೂ, ನನ್ನ ಗೆಳೆಯ ಮಂಜುನಾಥರೂ ಸೇರಿ ಶ್ರಮಪಟ್ಟು ಪ್ರಾಕ್ಟೀಸ್ ಮಾಡಿ ಆಡಿದ್ದೆವು. ಮುಂದೆ, ಇಂತಹ ಹಲವು ನಾಟಕಗಳನ್ನು ನಾವು ಪ್ರದರ್ಶಿಸಿದಾಗ, ಸಭಿಕರು ಹೆಚ್ಚಿನ ಆಸಕ್ತಿ ತೋರಿದ್ದರು. ಪರಿಣಾಮವಾಗಿ, ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿದ್ದವರ ಉತ್ಸಾಹವನ್ನೂ ಹೆಚ್ಚಿಸುತ್ತಿತ್ತು. ಆಸಕ್ತಿ ಹೆಚ್ಚಿದಂತೆ, ಕಾರ್ಯಕ್ರಮಗಳ ಗುಣಮಟ್ಟವೂ ಉತ್ತಮವಾಗುತ್ತಿತ್ತು. ಕನ್ನಡ ಕೂಟದ ಮುನ್ನಡೆಯಲ್ಲಿಯೂ, ಕನ್ನಡತನದ ಮೇಲೆ ನಮ್ಮ ಅಭಿಮಾನ ಹೆಚ್ಚಾಗಲು ಇದೊಂದು ಮುಖ್ಯವಾದ ಮಹತ್ವಪೂರ್ಣ ಹಂತವೆಂದು ಹೇಳಬೇಕು. ಉತ್ತಮ ಕಾರ್ಯಕ್ರಮಗಳನ್ನು ನೀಡಲೆಂದು, ಹೆಚ್ಚಿನ ತರಬೇತಿ ಪಡೆಯಲು ಕನ್ನಡ ಹವ್ಯಾಸಿ ಕಲಾವಿದರು ಮಾಡಿದ ಪ್ರಯತ್ನಗಳಿಂದಲೇ ಇಲ್ಲಿ 'ಕನ್ನಡತನ' ಬೇರೂರಲು ಸಾಧ್ಯವಾಯ್ತು. ಬೇರೆ ಬೇರೆ ಉದ್ಯೋಗದಲ್ಲಿದ್ದರೂ, ಉದ್ಯೋಗದ ಒತ್ತಡದ ಮಧ್ಯದಲ್ಲೇ, ಸಮಯ ಮಾಡಿಕೊಂಡು, ತಮ್ಮಲ್ಲಿ ಗುಪ್ತವಾಗಿ ಮನೆ ಮಾಡಿಕೊಂಡಿದ್ದ ಕಲಾಭಿಮಾನವನ್ನು ಹೊರಸೂಸಿದ್ದಾರೆ, ಈ ಕಲಾವಿದರು. ಭಾರತದಿಂದ ಬಂದ ಪ್ರವಾಸಿಗಳು, ನಮ್ಮ ಕನ್ನಡಾಭಿಮಾನವನ್ನು ಮೊದಲಿಗೆ ಅನುಮಾನಿಸಿದರೂ, ನಮ್ಮ ಪ್ರಯತ್ನಗಳನ್ನು ಈಗ ಗಮನಿಸಿದ್ದಾರೆ; ಮಾತ್ರವಲ್ಲ, ಆ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸುತ್ತಿರುವುದು ಇಲ್ಲಿ ನೆಲೆಸಿದ ಎಲ್ಲ ಕನ್ನಡಿಗರಿಗೂ ಹೆಮ್ಮೆ ತರುವಂಥ ವಿಷಯ.

ಇನ್ನೊಂದು ಮುಖ್ಯವಾದ ವಿಷಯವೆಂದರೆ, ನಮ್ಮ ಸಂಸ್ಕೃತಿಯನ್ನು ಉಳಿಸಿ, ಬೆಳೆಸಿಕೊಂಡು ಬರುವಲ್ಲಿ, ಎರಡನೆಯ ಪೀಳಿಗೆಯವರಾದ ನಮ್ಮ ಮಕ್ಕಳ ಪಾತ್ರ. ನಮ್ಮ ಸಂಸ್ಕೃತಿ ಇಲ್ಲಿ ಬೆಳೆಯಬೇಕಾದರೆ, ಯುವಕರ ಪಾತ್ರಕ್ಕೆ ಹೆಚ್ಚಿನ ಬೆಲೆ ನಾವು ಕೊಡಬೇಕು. ಕನ್ನಡ ಕೂಟದ ಹೆಚ್ಚಿನ ಕಾರ್ಯಕ್ರಮಗಳಲ್ಲಿ ಅವರು ಭಾಗವಹಿಸುವಂತೆ ಪ್ರೋತ್ಸಾಹಿಸ ಬೇಕು. ಅವರು ಸಭಾಂಗಣದಲ್ಲಿ ನಡೆಸಿಕೊಡುವ ಕಾರ್ಯಕ್ರಮಗಳನ್ನು ನಾವು ಮೆಚ್ಚಿ ಪ್ರೋತ್ಸಾಹಿಸದಿದ್ದರೆ, ಅವರ ಆಸಕ್ತಿಗೇ ತಣ್ಣೀರೆರಚಿದಂತಾಗುವುದು. ಅವರು ಹಾಡುವ ಹಾಡುಗಳನ್ನು ಕೇಳಿ, – 'ಅಯ್ಯೋ, ಈ ಹುಡುಗರು ಯಾಕಪ್ಪಾ ಹಾಡುತ್ತಾರೆ? ಹಾಡಿ ತಲೆ ನೋವು ತರಿಸುತ್ತಿದ್ದಾರೆ' – ಎಂಬ ಭಾವನೆಯನ್ನು ಖಂಡಿತ ತಳೆಯಬಾರದು. ನಡೆಯಲು ಪ್ರಯತ್ನಿಸುವ ಕೂಸಿಗೆ ಉತ್ತೇಜನ ಕೊಡುವಂತೆ, ನಾವು ಅವರನ್ನು ಮನಸಾರೆ ಉತ್ತೇಜಿಸಬೇಕು. ಇತ್ತೀಚೆಗೆ ಅದನ್ನು ಅರಿತು, ಹಲವಾರು ಕಾರ್ಯಕ್ರಮಗಳಲ್ಲಿ ಯುವಕರು ಭಾಗವಹಿಸುವಂತೆ ಪ್ರಯತ್ನಗಳು ನಡೆಯುತ್ತಿರುವುದು ಒಂದು ಶುಭ ಚಿಹ್ನೆಯಾಗಿದೆ. ಶಿಕಾಗೋ ಕನ್ನಡ ಕೂಟದಲ್ಲಂತೂ, ಯುವಕರಿಗಾಗಿ ಹಲವು ಕಾರ್ಯಕ್ರಮಗಳನ್ನು ಏರ್ಪಡಿಸಿ, ಅದಕ್ಕಾಗಿ ಅವರಿಗೆ ತಬೇತಿ ಕೊಟ್ಟು, ಯುವಕರ

ಆಸಕ್ತಿಯನ್ನು ಹೆಚ್ಚಿಸುವ ಪ್ರಯತ್ನ ನಡೆಯುತ್ತಲೇ ಇದೆ. ಇಂತಹ ಪ್ರಯೋಗಗಳು ಹೆಚ್ಚಾಗಬೇಕು. ಒಮ್ಮೆ, ವಿದ್ಯಾರಣ್ಯ ಶಾಖೆಯ ಕೂಟದಲ್ಲಿ ನಡೆದ 'ದಾಸ ದಿನಾಚರಣೆ'ಯನ್ನು ಯುವಕರೇ ನಡೆಸಿಕೊಟ್ಟಿದ್ದರು. ಹಿಂದೊಮ್ಮೆ ಕನ್ನಡ ಯುವತಿಯೊಬ್ಬಳು, 'ಕೊರವಂಜಿ' ನರ್ತನವನ್ನು ಪ್ರದರ್ಶಿಸಿ, ಸ್ಥಳೀಯರ ಮನಸ್ಸನ್ನು ಸೂರೆಗೊಂಡ ನೆನಪು ಬಂದಾಗಲೆಲ್ಲ, ನನಗೆ ಅಂತಹ ಯುವತಿಯರ ಮೇಲಿನ ಅಭಿಮಾನ ಜಾಸ್ತಿಯಾಗುವುದಲ್ಲದೇ, ಇಂಥವರೇ ನಮ್ಮ ಸಂಸ್ಕೃತಿಯು ಬೆಳೆಯಲು ಕಾರಣರಾಗುತ್ತಾರೆಂಬ ಭರವಸೆ ಮೂಡುತ್ತದೆ.

ದೇಶದಾದ್ಯಂತ ಸ್ಥಾಪಿತವಾದ ವಿವಿಧ ಕನ್ನಡ ಕೂಟಗಳು ತಮ್ಮದೇ ಆದ ಪತ್ರಿಕೆಗಳನ್ನು ಪ್ರಕಟಿಸುತ್ತಿದ್ದಾರೆ. ಮೊದಲಿಗೆ ಸ್ಥಳೀಯ ವಾರ್ತೆಗಳನ್ನು ತಿಳಿಸುತ್ತ, ಆಗೊಮ್ಮೆ–ಈಗೊಮ್ಮೆ ಪುಟ್ಟ ಕಥೆಗಳನ್ನು ಬರೆದು, ಭಾರತದಲ್ಲಿ ಪ್ರಕಟವಾದ ಕವನಗಳನ್ನು ಪುನರ್ಮುದ್ರಿಸಿಯೋ, ಕೈಯಲ್ಲೇ ಬರೆದೋ, ಇಂತಹ ಪತ್ರಿಕೆಗಳ ಪುಟ ತುಂಬುತ್ತಿದ್ದವು. ೬–೮ ಪುಟಗಳಿಂದ ಪ್ರಾರಂಭವಾದ ಈ ಕೈಬರಹ ಪತ್ರಿಕೆಗಳು ಮೊದಮೊದಲು ಕನ್ನಡಿಗರಲ್ಲಿ ಹೆಚ್ಚಿನ ಆಸಕ್ತಿಯನ್ನು ಹುಟ್ಟಿಸದಿದ್ದರೂ, ಮುಂದೆ ಕಂಪ್ಯೂಟರ್ ಯುಗದ ಅನುಕೂಲತೆಯಿಂದ, ಇಂತಹ ಪತ್ರಿಕೆಗಳಿಗೆ ಒಂದು ವಿಶೇಷ ರೂಪರೇಷೆಗಳು ಬರುವಂತಾಯ್ತು. ಅಲ್ಲದೆ, ಪತ್ರಿಕೆಗಳ ಪುಟಗಳ ಸಂಖ್ಯೆಗಳೂ ಹೆಚ್ಚಿ, ಬಹಳಷ್ಟು ಹೆಚ್ಚಿನ ಸಾಹಿತ್ಯಾಸಕ್ತರು ತಮ್ಮ ಲೇಖನಗಳನ್ನು ಅವುಗಳಲ್ಲಿ ಪ್ರಕಟಿಸಲು ಪ್ರಾಂಭಿಸಿದರು. ಉತ್ತಮ ಲೇಖನ ಬರೆಯುವುದಕ್ಕಾಗಿ, ಕನ್ನಡ ಸಾಹಿತ್ಯದ 'ಅಧ್ಯಯನ' ಮಾಡುವುದೂ ಹೆಚ್ಚಿತು. ಕನ್ನಡತನದ ಬೆಳೆಯುವಿಕೆಯಲ್ಲಿ ಇದು ಒಂದು ಗಮನಿಸಬೇಕಾದ ಹಂತ.

ಈ ಮಧ್ಯೆ, ಹರಿಹರೇಶ್ವರ–ನಾಗಲಕ್ಷ್ಮಿ ದಂಪತಿ ಅಮೆರಿಕದಲ್ಲಿ ಕನ್ನಡ ಸಾಹಿತ್ಯ ಬೆಳೆಯುವಲ್ಲಿ, ಒಂದು ಅತಿ ದಿಟ್ಟ ಹೆಜ್ಜೆ ಇಟ್ಟಿದ್ದರು. ಅಮೆರಿಕಾದ್ಯಂತ ಹರಡಿರುವ ಹಲವು ಸಾಹಿತ್ಯಾಭಿಮಾನಿಗಳನ್ನು ಗುರುತಿಸಿ, ಅವರಲ್ಲಿ ಹುದುಗಿರುವ ಸಾಹಿತ್ಯ ಶಕ್ತಿಯನ್ನು ಹೊಡೆದೆಬ್ಬಿಸಿ, ಅದು ಪ್ರಕಟಗೊಳ್ಳಲು ಈ ದಂಪತಿಗಳ ಪ್ರಯತ್ನ ದಾರಿ ಮಾಡಿಕೊಟ್ಟಿತು. ಕನ್ನಡಿಗರಿಂದ ಲೇಖನ ಬರೆಯಿಸಿ, 'ಅಮೆರಿಕನ್ನಡ'ವೆಂಬ ದ್ವೈಮಾಸಿಕ ಪತ್ರಿಕೆಯನ್ನು ಪ್ರಾರಂಭಿಸಿ, ಅದರಲ್ಲಿ ಈ ಲೇಖನಗಳನ್ನು ಪ್ರಕಟಿಸಿ, ಒಂದು ಮಹಾಸಾಧನೆಯನ್ನು ಸಿದ್ಧಿಸಿದ್ದಾರೆ. ಇದು, ಅಮೆರಿಕದಲ್ಲಿ ಕನ್ನಡತನ ಬೆಳೆಯುವಲ್ಲಿ ಒಂದು ಮಹತ್ವವಾದ ಘಟ್ಟ. ಇಲ್ಲಿ ನೆಲೆಸಿರುವ ಕನ್ನಡಿಗರೆಲ್ಲರೂ, ವೈದ್ಯಕೀಯ, ಇಂಜಿನಿಯರಿಂಗ್, ವೈಜ್ಞಾನಿಕ ಸಂಶೋಧನೆ, ಮುಂತಾದ ಉದ್ಯೋಗ ನಿರತರಾಗಿದ್ದರೂ, ಉದ್ಯೋಗದ ಮಧ್ಯೆಯೂ, ಬಿಡುವು ಮಾಡಿಕೊಂಡು, ಕನ್ನಡದಲ್ಲಿ ಲೇಖನ, ಕವನ ಮುಂತಾದುವುಗಳನ್ನು ಬರೆದಿರುವುದು ಅವರ ಭಾಷಾಭಿಮಾನವನ್ನ ಪ್ರಕಟಿಸುತ್ತದೆ. ಭಾರತದಲ್ಲಿದ್ದಿದ್ದರೆ, ಇಂಥವರಿಗೆ ತಮ್ಮ ಸಾಹಿತ್ಯಾಭಿಮಾನವನ್ನು ಪ್ರಕಟಿಸಲು ಅವಕಾಶ ದೊರೆಯುತ್ತಿತ್ತೋ ಇಲ್ಲವೋ. ಆದರೆ ತಾಯ್ನಾಡನ್ನು 'ಬಿಟ್ಟು' ಬಂದ ಕೊರಗು, 'ಪರಕೀಯ'ವಾದ ಈ ನಾಡಲ್ಲಿ ಭಾಷೆಯ ಮೇಲಿನ, ಸಾಹಿತ್ಯದ ಮೇಲಿನ, ಪರಂಪರೆಯ ಮೇಲಿನ, ಗೌರವ,

ಅಭಿಮಾನಗಳನ್ನು ಪ್ರಕಟಿಸಲು ಅವಕಾಶ ಮಾಡಿಕೊಟ್ಟಿತು. 'ಅಮೆರಿಕನ್ನಡ' ಪ್ರಾರಂಭವಾಗಿ, ಅಭಿವೃದ್ಧಿಗೊಂಡಿರುವುದನ್ನು ಕರ್ನಾಟಕದಲ್ಲಿ ಹಲವು ಸಾಹಿತಿಗಳು ಗಮನಿಸಿ, ಪ್ರಶಂಸಿಸಿದ್ದಾರೆ. ಇದು ಇಲ್ಲಿಯ ಕನ್ನಡಿಗರಿಗೆಲ್ಲರಿಗೂ ಅತಿ ಹೆಮ್ಮೆಯ ವಿಚಾರ. ಅಮೆರಿಕನ್ನಡ ಪ್ರಾರಂಭಿಸುವಲ್ಲಿಯೂ, ಪ್ರಕಟವಾದ ಮೊದಲ ದಿನಗಳಲ್ಲಿಯೂ, ನಾನು ಶ್ರಮವಹಿಸಿ ಕೆಲಸ ಮಾಡಿದ್ದೆ. ಶಿಕಾಗೋಗೆ ಹರಿಹರೇಶ್ವರರು ಬಂದು, ತಮ್ಮ ಯೋಜನೆಯನ್ನು ವಿವರಿಸಿ, ಪ್ರೋತ್ಸಾಹ ಪಡೆಯಲೆಂದು, ನಮ್ಮ ಮನೆಯಲ್ಲಿ ಒಂದು ಸಭೆ ಸೇರಿಸಿದ್ದೆ; ಮಾತ್ರವಲ್ಲ ಅದಕ್ಕೆ ಚಂದಾದಾರರಾಗುವುದಕ್ಕೆ ಇಲ್ಲಿನ ಕನ್ನಡಿಗರನ್ನು ಪ್ರೇರೇಪಿಸಿದ್ದೆ. ಅಲ್ಲದೆ, 'ಅಮೆರಿಕನ್ನಡ' ಬಿಡುಗಡೆ ಬೇರೆ ಬೇರೆ ನಗರಗಳಲ್ಲಿ ನಡೆದಿದ್ದು, ಶಿಕಾಗೋ ವಲಯದಲ್ಲಿ ಆ ಬಿಡುಗಡೆ ಸಮಾರಂಭವನ್ನು ವಿಜೃಂಭಣೆಯಿಂದ ಏರ್ಪಡಿಸಿದ್ದೆ. ಹೀಗೆ, ಹರಿಹರೇಶ್ವರ ದಂಪತಿಗಳ ಪ್ರಯತ್ನದಲ್ಲಿ, ಕಿಂಚಿತ್ತಾದರೂ, ನಾನೂ ಭಾಗವಹಿಸಿದ್ದೇನೆಂಬ ತೃಪ್ತಿ ನನಗಿದೆ.

ಶಿಕಾಗೋ ವಲಯದ ವಿದ್ಯಾರಣ್ಯ ಶಾಖೆಯ ಪತ್ರಿಕೆ ಪ್ರಾರಂಭವಾದುದು ೧೯೮೦ರಲ್ಲಿ ಶ್ರೀಮತಿ ಸುಧಾ ರಾವ್‌ರ ಅಧ್ಯಕ್ಷರಾಗಿದ್ದ ಕಾಲದಲ್ಲಿ. 'ಸಂಗಮ'ವೆಂಬ ಈ ಪತ್ರಿಕೆಯ ಮೊದಲ ಸಂಪಾದತ್ವದ ಜವಾಬ್ದಾರಿಯನ್ನು ಡಾ. ತೋನ್ಸೆ ಕೃಷ್ಣರಾಜುರವರು ವಹಿಸಿಕೊಂಡಿದ್ದರು. ಮೊದಲ ಸಂಚಿಕೆಯಲ್ಲಿ ಬಿ.ಎಂ.ಶ್ರೀ.ಯವರ ಕವವವೊಂದನ್ನು ಪ್ರಕಟಿಸಿದ್ದರು. ಆ ಕವನದ ತುಣುಕು ಈ ಕೆಳಗಿನಂತಿದೆ:

'...ಇವಳ ಸೊಬಗನವಳಿಗಿಟ್ಟು ನೋಡ ಬಯಸಿದೆ
ಅವಳ ತೊಡಿಗೆ ಇವಳಿಗಿಟ್ಟು ಹಾಡ ಬಯಸಿದೆ ..'

'ಸಂಗಮ'ವೆನ್ನುವ ಹೆಸರಿಗೆ ಈ ಕವನವು, ನಮ್ಮ ಸಂಸ್ಕೃತಿಯನ್ನು ಇಲ್ಲಿಯ ಜೀವನಕ್ಕೆ ಹೊಂದಿಕೊಳ್ಳುವ ಪ್ರಯತ್ನಗಳಿಗೆ ಒಂದು ವಿಶೇಷ ಅರ್ಥವನ್ನು ಕೊಟ್ಟಂತಿದೆ. ಮೇಲೆ ತಿಳಿಸಿದಂತೆ, 'ಸಂಗಮ'ವು ಕೈ ಬರಹದಿಂದ ಪ್ರಾರಂಭವಾಗಿ, ಕ್ರಮೇಣ ಕಂಪ್ಯೂಟರೈಸ್ ಆಗಿ, ಒಂದು ವಿಶೇಷ ರೂಪರೇಷೆ ಪಡೆಯಿತು. ಸಂಗಮದ ಪ್ರಗತಿಗೆ ಕಾರಣರಾದ– ಶ್ರೀಯುತರುಗಳಾದ, ಮಂಜುನಾಥ್, ಜಯಸ್ವಾಮಿ, ಅನ್ನಾಪುರ್ ಶಿವಕುಮಾರ್, ನರೇಂದ್ರ ರಾವ್, ಹೇಮಾವತಿ ಪ್ರಕಾಶ್, ಅರುಣ ಮೂರ್ತಿ, ಶಿವೂ ಪುರಾಣಿಕ, ಶಿರೂರ್ ರೆಡ್ಡಿ, ತಾವರೆಕೆರೆ ಶ್ರೀಕಂಠಯ್ಯ; ಶ್ರೀಮತಿಗಳಾದ ಸರೋಜ, ಭವಾನಿ ಪ್ರಸಾದ್, ನಳಿನಿ ಮೈಯ –ಇವರೆಲ್ಲರ ಮತ್ತು ಮುಂದೆ ನಾನು ಶಿಕಾಗೋ ಬಿಟ್ಟ ಮೇಲೆ ಇತರ ಉತ್ಸಾಹಿಗಳ ಶ್ರಮವು ಶ್ಲಾಘನೀಯವಾದುದು. ಈಗ 'ಸಂಗಮ'ವು ಸ್ಥಳೀಯ ಲೇಖಕರಲ್ಲದೆ, ಅಮೆರಿಕದ ವಿವಿಧ ಸಾಹಿತಿಗಳಿಂದಲೂ, ಭಾರತದ ಸಾಹಿತಿಗಳಿಂದಲೂ, ಲೇಖನ ಪಡೆದು, ಪ್ರಕಟಿಸಿ, ಒಂದು ಅಂತರರಾಷ್ಟ್ರೀಯ ಮಟ್ಟದ ಪತ್ರಿಕೆಯ ಸ್ಥಾನ ಪಡೆದಿದೆ ಎಂಬುದು ಹೆಮ್ಮೆಯ ವಿಷಯ. ಈ ಕಾರ್ಯದಲ್ಲಿ

ಶಿವಕುಮಾರ್‌ರು ಹೆಚ್ಚು ಶ್ರಮವಹಿಸಿದ್ದಾರೆ. ಈ ಪತ್ರಿಕೆಯಲ್ಲಿ ಪ್ರಕಟವಾದ ಲೇಖನಗಳನ್ನು ಜಾಲತಾಣದಲ್ಲೂ ಓದುವಂತೆ ದುಡಿದ ಅರುಣ ಮೂರ್ತಿಯವರ ಶ್ರಮವೂ ಮೆಚ್ಚುವಂಥದು. 'ಸಂಗಮ'ದಂತೆ ಇತರ ಕಡೆಗಳಿಂದಲೂ ಹಲವು ಪತ್ರಿಕೆಗಳು ಪ್ರಕಟವಾಗುತ್ತಿವೆ. ಸಂಗಮವು ವರ್ಷಕ್ಕೆರಡು ಬಾರಿ ಪ್ರಕಟವಾಗುತ್ತಿದ್ದರೆ (ಕೆಲವೊಮ್ಮೆ ಮೂರು ಬಾರಿಯೂ), ಇತರ ಪತ್ರಿಕೆಗಳಲ್ಲಿ ಹಲವು ವರ್ಷಕ್ಕೊಮ್ಮೆಯಾದರೂ ಪ್ರಕಟವಾಗುತ್ತಿವೆ. ಕೆಲವು ಪತ್ರಿಕೆಗಳು ಆಯಾ ಕನ್ನಡ ಕೂಟದ ವಿಶೇಷ ಸಂದರ್ಭಗಳಲ್ಲಿ, ವಿಶೇಷ ಸಂಚಿಕೆಯಾಗಿಯೂ ಪ್ರಕಟವಾಗುತ್ತಿವೆ. ಇತರ ಪತ್ರಿಕೆಗಳಲ್ಲಿ,– ಸೈಂಟ್ ಲೂಯೀಸ್‌ನ ಪತ್ರಿಕೆಗಳು (ಇದರ ಹೆಸರು ಆಗಾಗ ಬದಲಾಗುತ್ತಿದೆ. ಇತ್ತೀಚೆಗಿನದು 'ಸಂಭ್ರಮ'), ಅಟ್ಲಾಂಟಾದ: 'ಚಿಗುರು', ಡಿಟ್ರಾಯ್ಟ್‌ನ: 'ಸ್ಪಂದನ' (೨೫ನೆಯ ವಾರ್ಷಿಕ ವಿಶೇಷ ಸಂಚಿಕೆ, 'ರಜತ'), ಡೆಲ್ಲವೇರ್ ಕಣಿವೆಯ: 'ತ್ರಿವೇಣಿ ವಾಣಿ', ವಾಷಿಂಗ್‌ಟನ್‌ನ: 'ತೌರು, 'ಕವಲು', 'ಬೆಳ್ಳಿ ಬುಗ್ಗೆ', ಅರಿಝೋನದ: 'ಕನ್ನಡ ವಾಣಿ', ಉತ್ತರ ಕ್ಯಾಲಿಫೋರ್ನಿಯ ಕನ್ನಡ ಕೂಟದ ವಾರ್ಷಿಕ ಸಂಚಿಕೆ, 'ಸ್ವರ್ಣಸೇತು', ದಕ್ಷಿಣ ಕ್ಯಾಲಿಫೋರ್ನಿಯದ ಸಂಚಿಕೆ (ಅದರ ಹೆಸರೂ ಸಂಗಮ), – ಇವೇ ಮೊದಲಾದುವುಗಳು.

ಕನ್ನಡ ಕೂಟಗಳ ಸಮ್ಮೇಳನ ಜರಗುವುದರಲ್ಲಿ, ಬಹುಶಃ ಈಶಾನ್ಯ ವಲಯದವರು ನಾಂದಿ ಮಾಡಿದ್ದರು. ಮೊದಲಿಗೆ ನ್ಯೂಯಾರ್ಕ್ ಕೂಟದವರು ಕೈಕೊಂಡ ಪ್ರಯತ್ನಗಳ ಫಲವಾಗಿ, ೧೯೮೦ರಲ್ಲಿ ಜರಗಿದ ಸಮ್ಮೇಳನವು ಅದ್ದೂರಿಯಾಗಿ ನಡೆದಿತ್ತು. ಇದರಲ್ಲಿ, ನ್ಯೂಯಾರ್ಕ್, ಡೆಲ್ಲವೇರ್ ಕಣಿವೆಯ ತ್ರಿವೇಣಿ, ವಾಷಿಂಗ್‌ಟನ್‌ನ ಕಾವೇರಿ, ನ್ಯೂಇಂಗ್ಲೆಂಡ್‌ನ ಕೂಟದವರು ಭಾಗವಹಿಸಿದ್ದರು. ಈ ಸಂದರ್ಭದಲ್ಲಿ, ಎ. ಎನ್. ಮೂರ್ತಿರಾಯರ 'ಪೂರ್ವ ಸೂರಿಗಳೊಡನೆ' ಎಂಬ ಗ್ರಂಥವನ್ನು ಬಿಡುಗಡೆ ಮಾಡಲಾಯಿತು. ಮುಂದೆ ಎರಡು ವರ್ಷಕ್ಕೊಮ್ಮೆ ಈ ಕೂಟಗಳು ಒಟ್ಟಿಗೆ ಸೇರಿ ಸಮ್ಮೇಳವನ್ನು ಏರ್ಪಡಿಸುವ ಪ್ರಯತ್ನ ಮಾಡಿದ್ದರು. ೧೯೮೯ರಲ್ಲಿ ನಡೆದ ಸಮ್ಮೇಳನಕ್ಕೆ ಸಾಹಿತಿ ಶಿವರಾಮ ಕಾರಂತರನ್ನು ಆಹ್ವಾನಿಸಿದ್ದರು. ಅದೇ ಸಮಯ 'ವೈವಿಧ್ಯ' ಎಂಬ ವಿಶೇಷ ಸಂಚಿಕೆಯನ್ನೂ ಪ್ರಕಟಿಸಿದ್ದರು. ಅಂತೆಯೇ, ಮಧ್ಯವಲಯ ಸಮ್ಮೇಳನಗಳೂ ಜರಗಿರುತ್ತವೆ. ಶಿಕಾಗೋದಲ್ಲಿ, ೧೮೬೭ರಲ್ಲಿ, ಶ್ರೀಮತಿ ಶಾರದಾ ಬೈಯ್ಯಣ್ಣ ಅವರು ಅಧ್ಯಕ್ಷರಾಗಿದ್ದಾಗ, ಪ್ರಥಮ ಮಧ್ಯವಲಯ ಸಮ್ಮೇಳನ ಜರುಗಿತು. ಆಗ ಕರ್ನಾಟಕದ ಮುಖ್ಯಮಂತ್ರಿಯಾಗಿದ್ದ ರಾಮಕೃಷ್ಣ ಹೆಗಡೆಯವರು ಅದನ್ನು ಉದ್ಘಾಟಿಸಿದ್ದರು. ಎರಡನೆಯ ಮಧ್ಯವಲಯ ಸಮ್ಮೇಳನವು ಸೈಂಟ್ ಲೂಯೀಸ್‌ನಲ್ಲಿ ಜರಗಿತ್ತು. ಆದರೆ, ಮುಂದಿನ ವರ್ಷಗಳಲ್ಲಿ ಈ ರೀತಿಯ ವಿವಿಧ ವಲಯಗಳ ಸಮ್ಮೇಳನ ನಡೆಯದಿದ್ದುದು ಶೋಚನೀಯ. ಪಶ್ಚಿಮ ವಲಯದಲ್ಲೂ ಇಂತಹ ಸಮ್ಮೇಳನಗಳು ಸೇರಿದ್ದುವು. ೧೯೮೮ರಲ್ಲಿ ಶ್ರೀ ಸೀತಾರಾಮಯ್ಯನವರ ಮುಖಂಡತ್ವದಲ್ಲಿ, ಫಿನಿಕ್ಸ್‌ನಲ್ಲಿ ನಡೆದ ಒಂದು ಸಮ್ಮೇಳನವು ಮಹತ್ವವಾದುದು. ಪಶ್ಚಿಮವಲಯದ ಕೂಟಗಳಲ್ಲದೆ, ಅಮೆರಿಕದ ಹಲವಾರು

ಕೂಟಗಳೂ ಸಿಂಗಪುರ, ಕೆನಡಾ ಕೂಟಗಳೂ ಇದರಲ್ಲಿ ಭಾಗವಹಿಸಿದ್ದುವು. ಈ ಸಮ್ಮೇಳನದ ಉದ್ಘಾಟನೆಯನ್ನು ಪ್ರಸಿದ್ಧ ಕಾದಂಬರಿಕಾರ ಶ್ರೀ ಭೈರಪ್ಪನವರು ನಡೆಸಿದರು. ಹೆಸರಾಂತ ಕವಿ ಶಿವರುದ್ರಪ್ಪನವರೂ ಹಾಜರಿದ್ದರು. ಇದೇ ಸಮಯದಲ್ಲಿ 'ಅಕ್ಕ' ಎಂಬ ಸಂಸ್ಥೆ ಹುಟ್ಟಿಕೊಂಡು, ಅಮೆರಿಕದ ಎಲ್ಲ ಕನ್ನಡ ಕೂಟಗಳ ಆಗರವೆಂದು ತನ್ನನ್ನು ಗುರುತಿಸಿಕೊಂಡಿತು. ೨೦೦೦ದಲ್ಲಿ, ಹ್ಯೂಸ್ಟನ್‌ನಲ್ಲಿ, ಶ್ರೀ ಜಯರಾಮ ನಾಡಿಗರ ಮುಂದಾಳತ್ವದಲ್ಲಿ, ಮೊದಲ ಬಾರಿಗೆ ಇಲ್ಲಿ ವಿಶ್ವಕನ್ನಡ ಸಮ್ಮೇಳನ ನಡೆಯಿತು. ಕರ್ನಾಟಕದಿಂದ ಬಂದ ಹಲವು ಸಾಹಿತಿಗಳ ಪೈಕಿ, ಯು. ಆರ್. ಅನಂತಮೂರ್ತಿ, ಗಿರೀಶ್ ಕಾರ್ನಾಡ್, ಲಕ್ಷ್ಮೀನಾರಾಯಣ ಭಟ್ಟರು ಕೆಲವರು. ಮೂರುದಿನ ಹರಡಿದ ಈ ಸಮ್ಮೇಳನವು ಕನ್ನಡಿಗರ ಭಾಷಾಭಿಮಾನವನ್ನೂ, ಸಾಹಿತ್ಯಾಭಿಮಾನವನ್ನೂ ಕೆರಳಿಸಲು ಕಾರಣವಾಯ್ತು. ಇದೊಂದು ಕನ್ನಡತನ ಸ್ಥಾಪಿಸುವಲ್ಲಿ ಅತಿ ಪ್ರಾಮುಖ್ಯ ಘಟ್ಟವೆನ್ನುವುದರಲ್ಲಿ ಸಂದೇಹವೇ ಇಲ್ಲ. ಮುಂದೆ ಇಂತಹ ಸಮ್ಮೇಳನಗಳು ಎರಡು ವರ್ಷಗಳಿಗೊಮ್ಮೆ ನಡೆಯುತ್ತ ಬಂದಿದೆ. ಹ್ಯೂಸ್ಟನ್‌ನಲ್ಲಿ ನಡೆದ ಸಮ್ಮೇಳನವಂತೂ ಒಂದು ಹಬ್ಬದಂತಿದ್ದು, ಕನ್ನಡಿಗರಲ್ಲಿ, 'ನಾವೆಲ್ಲ ಒಂದೇ' ಎಂಬ ಭಾವನೆ ಹುಟ್ಟಿಸಿದುದಲ್ಲದೆ, 'ನಾವು ಕನ್ನಡಿಗರು' ಎಂದು ಹೇಳಿಕೊಳ್ಳುವ ಹೆಮ್ಮೆಯನ್ನು ಮೂಡಿಸಿತ್ತು. ಕರ್ನಾಟಕದಿಂದ ಬಂದ ಪ್ರತಿಯೊಬ್ಬರೂ, ಈ ಸಮ್ಮೇಳನವನ್ನು ಪ್ರಶಂಸಿಸಿದ್ದರು. ಈ ಸಂದರ್ಭದಲ್ಲಿ ಶ್ರೀ ಹರಿಹರೇಶ್ವರರ ಸಂಪಾದಕತ್ವದಲ್ಲಿ ಒಂದು ಸ್ಮರಣ ಸಂಚಿಕೆಯೂ, 'ದರ್ಶನ'ವೆಂಬ ಇನ್ನೊಂದು ವಿಶೇಷ ಸಂಚಿಕೆಯೂ ಪ್ರಕಟವಾಗಿತ್ತು. ಈ ವಿಚಾರದಲ್ಲಿ, ನಾಡಿಗ ಮತ್ತು ಅವರ ಅನೇಕ ಸಹಾಯಕರೂ (ಸುಬ್ಬೂ ಸುಬಿ, ವತ್ಸಕುಮಾರ ಇವರಲ್ಲಿ ಕೆಲವರು) ಪಟ್ಟ ಶ್ರಮಗಳನ್ನು ಎಷ್ಟು ಪ್ರಶಂಸಿಸಿದರೂ ಸಾಲದು.

ಇರಲಿ. ಸಂಸ್ಕೃತಿಯನ್ನು ಉಳಿಸಿಕೊಳ್ಳಬೇಕೆಂಬ ಹಂಬಲವು ಸಾಹಿತ್ಯದ ಕಡೆಗೂ ಹರಿಯಿತು. ಇದಕ್ಕೆ ಪೂರಕವಾಗುವಂತೆ, ಹಲವು ಸಾಹಿತಿಗಳೂ, ಕಲಾವಿದರೂ, ಅಮೆರಿಕವನ್ನು ಸಂದರ್ಶಿಸಿ ಅಂತಹ ಅವಕಾಶಗಳಿಗೆ ಉತ್ತೇಜನ ಕೊಟ್ಟರು. ತಮ್ಮ ಕೆಲಸದ ಮಧ್ಯದಲ್ಲೇ ಸಮಯ ಮಾಡಿಕೊಂಡು, ಇಲ್ಲಿ ನೆಲೆಸಿದ ಕನ್ನಡಿಗರು, ತಮ್ಮ ಸಾಹಿತ್ಯಾಭಿಮಾನವನ್ನೂ, ನಿಯಮಿತ ಪ್ರತಿಭೆಯನ್ನೂ ವ್ಯಕ್ತಪಡಿಸುವ ಪ್ರಯತ್ನ ಮಾಡಿದರು. ಮುಂದೆ ಹಲವು ಪ್ರಕಟಣೆಗಳೂ ಅಮೆರಿಕದ ಕನ್ನಡ ಸಾಹಿತ್ಯ ಪ್ರಪಂಚದಲ್ಲಿ ಮೂಡಿ ಬಂದುವು. ಕ್ಯಾಲಿಫ಼ೋರ್ನಿಯಾದಲ್ಲಿ ವಿಶ್ವೇಶ್ವರ ದೀಕ್ಷಿತರು, ವಿಶ್ವನಾಥ ಹುಲಿಕಲ್, ಅಲಮೇಲು ಅಯ್ಯಂಗಾರ್, ಹರಿಹರೇಶ್ವರ ದಂಪತಿ, ಫ಼್ಲೋರಿಡಾದಲ್ಲಿ ನಂಜುಂಡಸ್ವಾಮಿ, ಅಲಬಾಮಾದಲ್ಲಿ ವೈ. ಆರ್. ಮೋಹನ್, ಸೈಟ್ ಲೂಯೀಸ್‌ನಲ್ಲಿ ಅಶ್ವಥನಾರಾಯಣ, ಹೇಮಾ ಶ್ರೀಕಂಠ ಮುತಾದವರು, ಶಿಕಾಗೋದಲ್ಲಿ ಪ್ರಕಾಶ ಹೇಮಾವತಿ, ನಳಿನಿ ಮೈಯ, ಶಿವಕುಮಾರ್, ಜಯಸ್ವಾಮಿ, ಕು. ರಾ. ಸರೋಜ, ತೋನ್ಸೆ ಕೃಷ್ಣರಾಜು (ಈಗ ಬಾಲ್ಟಿಮೋರ್‌ನಲ್ಲಿ ನೆಲೆಸಿದ್ದಾರೆ), ತ್ರಿವೇಣಿ, ಮತ್ತಿತರರು, ನ್ಯೂಯಾರ್ಕ್‌ನಲ್ಲಿ

ಚಂದ್ರಶೇಖರ ದಂಪತಿಗಳು, ಪೆನ್ಸಿಲ್ವೇನಿಯಾದಲ್ಲಿ ರಾಜಗೋಪಾಲ್, ವಿಮಲಾ ಮತ್ತಿತರರು, ಮಿನಿಸೋಟಾದಲ್ಲಿ ಗುರುಪ್ರಸಾದ ಕಾಗಿನೆಲೆ, ಹೀಗೆ ಈ ಪಟ್ಟಿ ಬೆಳೆಯುತ್ತಲೇ ಹೋಗುತ್ತಿದೆ. ಇವರೆಲ್ಲರೂ ಕನ್ನಡದಲ್ಲಿ ಪುಸ್ತಕಗಳನ್ನೂ, ವಿವಿಧ ಪತ್ರಿಕೆಗಳಲ್ಲಿ ಲೇಖನಗಳನ್ನೂ ಪ್ರಕಟಿಸಿದ್ದಾರೆ. ವೈ. ಆರ್. ಮೋಹನರು ಬರೆದ 'ನೆನಪುಗಳು' ಎಂಬ ಗ್ರಂಥಕ್ಕೆ ಕರ್ನಾಟಕ ಸಾಹಿತ್ಯ ಅಕಾಡೆಮಿಯವರ ಪ್ರಶಸ್ತಿ ಬಂದಿರುವುದು ನಮ್ಮೆಲ್ಲ ಕನ್ನಡಿಗರಿಗೂ ಬಹಳ ಹೆಮ್ಮೆಯ ವಿಷಯ. ಹೀಗೆ, ಅಮೆರಿಕಾದ್ಯಂತ ಹರಡಿರುವ ಅನೇಕ ಕನ್ನಡಿಗರ ಸಾಹಿತ್ಯದ ಮೇಲಿನ ಆಸಕ್ತಿಯು ಇಲ್ಲಿ ಕನ್ನಡ ಮತ್ತು ಕನ್ನಡತನವನ್ನು ಬಿತ್ತರಿಸಲು ಸಹಾಯವಾಗಿದೆ. ಇವರೆಲ್ಲರೂ ತಮ್ಮ ಸೌಲಭ್ಯಗಳನ್ನು ಉತ್ತಮಗೊಳಿಸಿಕೊಳ್ಳುವುದರ ಜತೆಗೇ, ಕನ್ನಡ ಭಾಷೆ, ಸಂಸ್ಕೃತಿಗಳನ್ನೂ ಬೆಳೆಸಿಕೊಂಡು ಬಂದಿದ್ದಾರೆ. ಹಲವಾರು ಅಭಿಮಾನಿಗಳು, ಹೆಸರುಗಳಿಸುವ ಆಕಾಂಕ್ಷೆಯಿಲ್ಲದೆ ನಿಸ್ವಾರ್ಥದಿಂದ ತಮ್ಮ ಸೇವೆ ಸಲ್ಲಿಸಿರುವುದು ಗಮನೀಯವಾದುದು.

ಅಮೆರಿಕದ ಕನ್ನಡ ಬರಹಗಾರರು:

ಅಮೆರಿಕದಿಂದ ಹೆಚ್ಚಿನ ಸಂಖ್ಯೆಯಲ್ಲಿ ಕರ್ನಾಟಕದ ಸಾಹಿತಿಗಳ ಪ್ರೋತ್ಸಾಹದಿಂದ ಗ್ರಂಥಗಳು ಪ್ರಕಟಣೆಯಾಗುತ್ತಿರುವುದು, ಇಲ್ಲಿ ಕನ್ನಡ ಸಾಹಿತ್ಯ ಬೆಳವಣಿಗೆಗೊಂದು ನಿದರ್ಶನವಾಗಿದೆ. ಅಮೆರಿಕದಲ್ಲಿನ ಕನ್ನಡ ಬರಹಗಾರರನ್ನು ನೆನೆಸಿಕೊಂಡಾಗಲೆಲ್ಲ ನನ್ನ ಮನಸ್ಸಿಗೆ ತಕ್ಷಣ ಬರುವುದು ಏ. ಕೆ. ರಾಮಾನುಜನ್ ಅವರ ಹೆಸರು. ಶಿಕಾಗೊ ಯುನಿವರ್ಸಿಟಿಯಲ್ಲಿ South Asian Departmentನಲ್ಲಿ ಪ್ರಾಧ್ಯಾಪಕರಾಗಿದ್ದ ರಾಮಾನುಜನ್ ಅವರು ಪ್ರಾಯಶಃ ಅಮೆರಿಕದಲ್ಲಿ ಕನ್ನಡ ಸ್ಥಾಪನೆಗೆ ಅಡಿಕಲ್ಲು ಹಾಕಿದವರು ಎಂದು ಹೇಳಿದರೆ ತಪ್ಪಾಗಲಾರದು. ಎಲೆಮರೆಯಲ್ಲಿದ್ದೇ, ಅವರು ಕನ್ನಡ ಕೆಲಸ ಮಾಡುತ್ತಿದ್ದರು. ಆಗ್ನೇಯ ಏಷ್ಯಾ ಬೋಧನೆಯ ವಿಭಾಗದಲ್ಲಿ ಕೆಲವರಿಗೆ ಕನ್ನಡ ಭಾಷೆ ಮತ್ತು ಸಂಸ್ಕೃತಿಯ ಮೇಲೆ ಬೋಧನೆ ಮಾಡುತ್ತಿದ್ದರು. ಕರ್ನಾಟಕದಿಂದ ಹಲವು ಸಾಹಿತಿಗಳನ್ನು ತಮ್ಮ ಡಿಪಾರ್ಟ್‌ಮೆಂಟ್‌ದೆ ಕರೆಯಿಸಿಕೊಂಡು ಅಮೆರಿಕನ್ ವಿದ್ಯಾರ್ಥಿಗಳಿಗೆ ಕನ್ನಡ ಸಾಹಿತ್ಯ ಹಾಗೂ ಸಂಸ್ಕೃತಿಯ ಪರಿಚಯ ಮಾಡಿಸಲು ಕಾರಣರಾಗಿದ್ದರು. ಚಂದ್ರಶೇಖರ ಕಂಬಾರ, ಗಿರೀಶ್ ಕಾರ್ನಾಡ್, ರಾಮಚಂದ್ರ ಶರ್ಮ, ಅನಂತಮೂರ್ತಿ ಮುಂತಾದವರು ರಾಮಾನುಜನ್ ಆಮಂತ್ರಣದ ಮೇರೆಗೆ ಬಂದಂತಹ ಕೆಲವು ಸಾಹಿತಿಗಳು. ಪ್ರಾಯಶಃ ಅಮೆರಿಕದಲ್ಲಿ ನೆಲೆಸಿ, ಕನ್ನಡ ಗ್ರಂಥಗಳನ್ನು ಪ್ರಕಟಿಸಿದವರಲ್ಲಿ ಅವರೇ ಪ್ರಥಮರೆಂದು ಹೇಳಬಹುದು. ಕರ್ನಾಟಕದ ಅನೇಕ ಜಾನಪದ ಕತೆಗಳನ್ನು ಅವರು ಇಂಗ್ಲಿಷ್‌ಗೆ ಅನುವಾದಿಸಿದ್ದಾರೆ. ಅವರು ಅನುವಾದಿಸಿದ, ಅನಂತಮೂರ್ತಿಯವರ 'ಸಂಸ್ಕಾರ', ಮತ್ತು ಶಿವಶರಣರ ವಚನಗಳು (Speaking of Shiva) ಇಲ್ಲಿನ ಸಾಹಿತ್ಯವಲಯದಲ್ಲಿ ಜನಪ್ರಿಯತೆ ಗಳಿಸಿದುದಲ್ಲದೆ, ಕೆಲವು ಯುನಿವರ್ಸಿಟಿಗಳ ಸೌತ್ ಏಷ್ಯನ್ ಸ್ಟಡೀಸ್ ವಿಭಾಗಗಳಲ್ಲಿ ಆಕರ ಗ್ರಂಥಗಳಾಗಿ

ಬಳಸಿಕೊಂಡಿರುವುದು ಎಲ್ಲ ಕನ್ನಡಿಗರಿಗೆ ಹೆಮ್ಮೆಯ ಸಂಗತಿಯಾಗಿದೆ. ಗೋಪಾಲಕೃಷ್ಣ ಅಡಿಗರು ಮತ್ತು ರಾಮಚಂದ್ರ ಶರ್ಮರಿಂದ ಪ್ರಭಾವಿತರಾಗಿ ಕನ್ನಡದಲ್ಲಿ ಮೂರು ಕವನ ಸಂಕಲಗಳನ್ನು – 'ಹೊಕ್ಕುಳಲ್ಲಿ ಹೂವಿಲ್ಲ', 'ಮತ್ತು ಇತರ ಪದ್ಯಗಳು', ಮತ್ತು 'ಕುಂಟೆಬಿಲ್ಲೆ' – ಪ್ರಕಟಿಸಿದುದಲ್ಲದೆ, 'ಮತ್ತೊಬ್ಬನ ಆತ್ಮಚರಿತ್ರೆ' ಎಂಬ ಕಾದಂಬರಿಯನ್ನೂ, ಹಲವು ರೇಡಿಯೊ ನಾಟಕಗಳನ್ನೂ ಪ್ರಕಟಿಸಿದ್ದಾರೆ. ಅಂಥ ಪ್ರತಿಭಾವಂತ ಅಮೆರಿಕನ್ನಡಿಗನ ಅಕಾಲ ಮರಣ ಅಮೆರಿಕನ್ನಡಿಗರ ದೌರ್ಭಾಗ್ಯವೆಂದು ಹೇಳಬಹುದು.

ಇಲ್ಲಿ ನೆನೆಸಿಕೊಳ್ಳಬೇಕಾದ ಇನ್ನೊಬ್ಬ ವಲಸೆ ಬಂದ ಅಮೆರಿಕನ್ನಡ ಸಾಹಿತಿಯೆಂದರೆ, ಪಿ. ಶ್ರೀನಿವಾಸರಾವ್. ಅವರು, 'ಪ್ರಣಯ ಮತ್ತು ಪ್ರಯಾಣ' ಎಂಬ ಕಥಾಸಂಕಲನವನ್ನೂ, 'ಪ್ರಸ್ತಾಪ' ಎಂಬ ವಿಮರ್ಶಾಲೇಖನಗಳನ್ನೂ ಪ್ರಕಟಿಸಿದ್ದಾರೆ. ಅಲ್ಲದೆ, Meenakshi`s Private Tutor (ಮೂಲ : ಕುವೆಂಪು), Buddha Smile and other Poems (ಮೂಲ: ಕೆ.ಎಸ್.ನ.) ಎಂಬೆರಡು ಅನುವಾದ ಗ್ರಂಥಗಳನ್ನು ಪ್ರಕಟಿಸಿದುದಲ್ಲದೆ, ಅನಂತಮೂರ್ತಿಯವರ 'ಭಾರತೀಪುರ' ಕಾದಂಬರಿಯನ್ನೂ ಅನುವಾದಿಸಿದ್ದಾರೆ. ರಾಮಾನುಜನ್‌ರಂತೆ, ಅವರ ಅಕಾಲ ಮರಣವೂ ಅಮೆರಿಕನ್ನಡಿಗರ ದುರಂತ ಎಂದು ಹೇಳಬಹುದು. ಹಾಸನ ರಾಜಾರಾಯರು ಇಲ್ಲಿಗೆ ವಲಸೆಬಂದ ಇನ್ನೊಬ್ಬ ಕನ್ನಡ ಸಾಹಿತಿ. ಅವರು ಪ್ರಕಟಿಸಿದ ಅನೇಕ ಇಂಗ್ಲಿಷ್ ಗ್ರಂಥಗಳು ಜನಪ್ರಿಯವಾಗಿರುವುದು ಎಲ್ಲರಿಗೂ ತಿಳಿದ ಸಂಗತಿ. ಇತ್ತೀಚೆಗೆ ಅವರು ಬರೆದ ಒಂದು ಇಂಗ್ಲಿಷ್ ಕಾದಂಬರಿಯನ್ನು 'ನಾರೀಗೀತ'ವೆಂಬ ಶೀರ್ಷಿಕೆಯಲ್ಲಿ, ಮೈಸೂರಿನ ಧ್ವನ್ಯಾಲೋಕದ ಸಹಕಾರದೊಂದಿಗೆ, ಹ್ಯೂಸ್ಟನ್ ಕನ್ನಡ ವೃಂದ, ಕನ್ನಡ ಸಾಹಿತ್ಯ ರಂಗದ ಸಮ್ಮೇಳನದಲ್ಲಿ ಲೋಕಾರ್ಪಣೆ ಮಾಡಿ, ರಾಜಾರಾಯರಿಗೆ ಶ್ರದ್ಧಾಂಜಲಿ ಅರ್ಪಿಸಿ, ಅವರ ಸಾಹಿತ್ಯ ಕೊಡುಗೆಯನ್ನು ನೆನೆಸಿಕೊಂಡಿದೆ.

ಯುನಿವರ್ಸಿಟಿಯಲ್ಲಿ ಅಧ್ಯಾಪಕರಾಗಿದ್ದು, ಕನ್ನಡ ಸೇವೆ ಮಾಡುತ್ತಿರುವವರನ್ನು ನೆನೆದಾಗ, ಎಸ್. ಎನ್. ಶ್ರೀಧರ ಮತ್ತು ನಾರಾಯಣ ಹೆಗಡೆ, ಮಹಾಬಲಗಿರಿ ಎನ್. ಹೆಗಡೆ (ಗಿರಿ) – ಇವರ ಹೆಸರು ಜ್ಞಾಪಕಕ್ಕೆ ಬರುತ್ತದೆ. ಶ್ರೀಧರ ಮತ್ತು ನಾರಾಯಣ ಹೆಗಡೆ ಇವರಿಬ್ಬರೂ, SUNY (State University of New York)ಯಲ್ಲಿ ಅಧ್ಯಾಪಕರಾಗಿದ್ದಾರೆ. ಶ್ರೀಧರ ಅವರು Stoneybrook Campusನಲ್ಲಿ ಭಾರತೀಯ ಬೋಧನೆ ವಿಭಾಗದಲ್ಲಿ ಮುಖ್ಯಸ್ಥರಾಗಿದ್ದರೆ, ನಾರಾಯಣ ಹೆಗಡೆಯವರು SUNY, Westburyಯಲ್ಲಿ ಇಂಗ್ಲಿಷ್ ಮತ್ತು ತೌಲನಿಕ ಸಾಹಿತ್ಯದಲ್ಲಿ ಪ್ರಾಧ್ಯಾಪಕರಾಗಿದ್ದಾರೆ. ಶ್ರೀಧರ ಅವರು ಭಾಷಾವಿಜ್ಞಾನಕ್ಕೆ ಸಂಬಂಧಪಟ್ಟಂತೆ, Kannada (Descriptive Grammar), 'ಇಂದಿನ ಕನ್ನಡ – ರಚನೆ ಮತ್ತು ಬಳಕೆ', ಮತ್ತಿತರ ಗ್ರಂಥಗಳನ್ನು ಪ್ರಕಟಿಸಿದ್ದಾರೆ. ಸ್ಟೋನಿಬ್ರೂಕ್‌ಗೆ ಕರ್ನಾಟಕದ ಅನೇಕ ಸಾಹಿತಿಗಳನ್ನು ಕರೆಯಿಸಿಕೊಂಡು, ಅವರಿಂದ ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿಯ ಮೇಲೆ ಭಾಷಣಗಳನ್ನು ಏರ್ಪಡಿಸುತ್ತ, ಕನ್ನಡ

ಸೇವೆಯನ್ನು ಮಾಡುತ್ತಿದ್ದಾರೆ. ಹೆಗಡೆಯವರ ಕಾರ್ಯದಲ್ಲಿ, ಅವರು ಇಂಗ್ಲಿಷ್‌ಗೆ ಅನುವಾದಿಸಿದ, ಅನಂತಮೂರ್ತಿಯವರ 'ಸೂರ್ಯನ ಕುದುರೆ ಮತ್ತು ಇತರ ಕತೆಗಳು' ಜನಪ್ರಿಯವಾಗಿದೆ. ಇತ್ತೀಚೆಗೆ ಅವರು, ೧೮೮೭ರಲ್ಲೇ ಪ್ರಕಟವಾದ, ಶ್ರೀ ವೆಂಕಟರಮಣ ಶಾಸ್ತ್ರಿಯವರ 'ಇಗ್ಗಪ್ಪ ಹೆಗಡೆ ವಿವಾಹ ಪ್ರಹಸನ' ಎಂಬ ಸಾಮಾಜಿಕ ನಾಟಕವನ್ನು ಇಂಗ್ಲಿಷ್‌ಗೆ ಅನುವಾದ ಮಾಡಿದ್ದಾರೆ (ಸಾಹಿತ್ಯ ಅಕಾಡೆಮಿ). ಈ ನಾಟಕದಲ್ಲಿನ ಸಂಭಾಷಣೆ ಅನನ್ಯವಾಗಿದ್ದು, ಅದು ಕನ್ನಡ ಸಾಹಿತ್ಯದ ಅತಿ ಹಳೆಯ ಸಾಮಾಜಿಕ ನಾಟಕವೆನ್ನಲಾಗಿದೆ. California State University at Fresno, Speech Therapy ವಿಭಾಗದಲ್ಲಿ ಅಧ್ಯಾಪಕರಾಗಿದ್ದ ಗಿರಿಯವರು ಇತ್ತೀಚೆಗೆ ನಿವೃತ್ತರಾಗಿದ್ದಾರೆ. ಅವರ ಮೊದಲನೆಯ ಕಾದಂಬರಿ, 'ಗತಿ, ಸ್ಥಿತಿ', ಆಧುನಿಕ ಸಾಹಿತ್ಯವಲಯದಲ್ಲಿ ಪ್ರಶಂಸೆಗಳಿಸಿದೆ. 'ಕಂಡದ್ದು, ಕಾಣದ್ದು', ಅವರ ಎರಡನೆಯ ಕಾದಂಬರಿ. ಅಲ್ಲದೆ, ಫ್ರಾಂಜ್ ಕಾಫ್ಕಾ ಅವರ Metamorphosis ಎಂಬ ಕೃತಿಯನ್ನು 'ರೂಪಾಂತರ' ಎಂಬ ಶೀರ್ಷಿಕೆಯಲ್ಲಿ ಕನ್ನಡಕ್ಕೆ ಅನುವಾದಿಸಿದುದಲ್ಲದೆ, ಕನ್ನಡದಲ್ಲಿ ಅನೇಕ ಕತೆಗಳನ್ನೂ ಬರೆದಿದ್ದಾರೆ. ಇವುಗಳಲ್ಲದೆ, ತಮ್ಮ ವೃತ್ತಿಗೆ ಸಂಬಂಧಿಸಿದ ಹಲವಾರು ವೈಜ್ಞಾನಿಕ ಗ್ರಂಥಗಳನ್ನೂ ಪ್ರಕಟಿಸಿದ್ದಾರೆ. ಅವರ ಸಮಗ್ರ ಬರೆಹಗಳು (ಕಾದಂಬರಿ ಮತ್ತು ಕತೆಗಳು) ಈಚೆಗೆ ಬಿಡುಗಡೆಯಾಗಿದೆ. ಅನುವಾದ ಸಾಹಿತ್ಯ ವಿಚಾರ ಎಣಿಸಿದಾಗ, ಟೆಕ್ಸಸ್ ಯುನಿವರ್ಸಿಟಿಯಲ್ಲಿ ಅಧ್ಯಾಪಕರಾಗಿರುವ ಜುಡಿತ್ ಕ್ರೋಲ್ ಅವರು ಇಂಗ್ಲಿಷ್‌ಗೆ ಅನುವಾದಿಸಿದ ಅನಂತಮೂರ್ತಿಯವರ 'ಭವ' ಕಾದಂಬರಿ ಗಮನಾರ್ಹ.

ಅಮೆರಿಕದ ಇತ್ತೀಚಿನ ಬರಹಗಾರರ ಪಟ್ಟಿ ಬಲು ದೊಡ್ಡದು. ಮೈ. ಶ್ರೀ. ನಟರಾಜ, ಗುರುಪ್ರಸಾದ ಕಾಗಿನೆಲೆ, ಅಲಮೇಲು ಅಯ್ಯಂಗಾರ್, ಸಂಧ್ಯಾ ರವೀಂದ್ರನಾಥ್, ಶಶಿಕಲಾ ಚಂದ್ರಶೇಖರ್, ಎಚ್. ಕೆ. ನಂಜುಂಡಸ್ವಾಮಿ, ರಾಜಗೋಪಾಲ ದಂಪತಿಗಳು, ಎಚ್. ವಿ. ರಂಗಾಚಾರ್, ವೈ. ಆರ್. ಮೋಹನ್, ಎಚ್. ಕೆ. ಚಂದ್ರಶೇಖರ್, ಆಹಿತಾನಲ, ವೈಶಾಲಿ ಹೆಗಡೆ, ಎಚ್. ಕೆ. ಕೃಷ್ಣಪ್ರಿಯ, ಎಚ್. ಕೆ. ರಾಮಪ್ರಿಯ, ಶ್ರೀವತ್ಸ ಜೋಶಿ, ತ್ರಿವೇಣಿ ಶ್ರೀನಿವಾಸರಾವ್, ನಳಿನಿ ಮೈಯ, ಸುಬ್ರಾಯ ಮೈಯ, ಹೇಮಾ ಶ್ರೀಕಂಠ, ಮೀರಾ ರಾಜಗೋಪಾಲ್, ಜಯರಾಮ ಉಡುಪ, ಗುಂಡುಶಂಕರ ದಂಪತಿಗಳು, ತಾವರೆಕೆರೆ ಶ್ರೀಕಂಠಯ್ಯ, ಪ್ರಕಾಶ ನಾಯಕ್, ವಿಶ್ವನಾಥ ಹುಲಿಕಲ್, ಶಾಂತಲಾ ಭಂಡಿ, ಶಶಿಕಲಾ ನಿಂಬಾಳ್, ಮಧು ಕೃಷ್ಣಮೂರ್ತಿ, ಪ್ರಕಾಶ್ ಹೇಮಾವತಿ, ವಲ್ಲೀಶ ಶಾಸ್ತ್ರಿ, ಮಾಲಾ ರಾವ್, ಶ್ರೀನಾಥ ಭಲ್ಲೆ, ಕುಂಬಾಶಿ ಶ್ರೀನಿವಾಸ ಭಟ್ಟ, ಶ್ರೀಕಾಂತ ಬಾಬು, (ದಿ) ವಿಮಲಾ ಚೆನ್ನಬಸಪ್ಪ, ತೋನ್ಸೆ ಕೃಷ್ಣರಾಜು, ಪ್ರಕಾಶ್ ಹೇಮಾವತಿ, ಲಕ್ಷ್ಮೀನಾರಾಯಣ ಗಣಪತಿ, ಅನಿಲ್ ದೇಸಾಯಿ, ಅನಿಲ್ ತಾಳಿಕೋಟೆ, ದತ್ತಾತ್ರಿ ರಾಮಣ್ಣ, ಸುಕುಮಾರ್ ರಘುರಾಮ್, ಸುಪ್ತದಿಪ್ತಿ.... ಹೀಗೆ ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ. ಇವರೆಲ್ಲರೂ ವಿವಿಧ ಕನ್ನಡ ಪತ್ರಿಕೆಗಳಲ್ಲಿ ತಮ್ಮ ಲೇಖನಗಳನ್ನು

ಪ್ರಕಟಿಸಿದ್ದಾರೆ. ಇಲ್ಲಿ ನನಗೆ ತಿಳಿದ ಇತ್ತೀಚಿನ ಕೆಲವು ಗ್ರಂಥಗಳನ್ನು ಸಂಕ್ಷೇಪವಾಗಿ ಪಟ್ಟಿ ಮಾಡುತ್ತಿದ್ದೇನೆ. ಇನ್ನೂ ಹೆಚ್ಚಿನ ಮಾಹಿತಿ ಕೊಡುವ ಸಂಪಾದಿತ ಗ್ರಂಥವೊಂದು ಇತ್ತೀಚೆಗೆ ('ಅಮೆರಿಕನ್ನಡ ಬರಹಗಾರರು') ಪ್ರಕಟವಾಗಿದೆ. (ಇದು ಸಮಗ್ರ ಪಟ್ಟಿಯಲ್ಲವೆಂದು ಒತ್ತಿ ಹೇಳುತ್ತಿದ್ದೇನೆ.) ಈ ಪಟ್ಟಿ ಅಮೆರಿಕದಲ್ಲಿ ಸಾಹಿತ್ಯ ಬೆಳವಣಿಗೆಗೆ ಸಮರ್ಥನೆ ಕೊಟ್ಟೀತೆಂದು ನನ್ನ ಆಶಯ. ಪ್ರಮಾದದಿಂದ ಉಲ್ಲೇಖಿಸದಿರುವ ಗ್ರಂಥಗಳೇನಾದರೂ ಇದ್ದಲ್ಲಿ ಕ್ಷಮೆ ಇರಲಿ:

ಅಮೆರಿಕದಿಂದ ಪ್ರಕಟವಾದ ಗ್ರಂಥಗಳು:

೧. 'ನಾನೂ ಅಮೆರಿಕನ್ ಆಗಿಬಿಟ್ಟೆ' (ಕವನ ಸಂಕಲನ), 'ಮಧುಚಂದ್ರ ಸಿರಿಕೇಂದ್ರ' (ಕವನ ಸಂಕಲನ), 'ಜಾಲತರಂಗ' (ಅಂಕಣ ಬರಹ), 'ಜಾಲತರಂಗಿಣಿ' (ಅಂಕಣ ಬರಹಗಳು), 'ಭಾಷೆಯಿಂದ ಭಾಷೆಗೆ' (ಇಂಗ್ಲಿಷ್‌ನಿಂದ ಕನ್ನಡಕ್ಕೆ ಕೆಲವು ಕವನಗಳ ಅನುವಾದ), Beyond Words, The Void and the Womb (ಕನ್ನಡದಿಂದ ಇಂಗ್ಲಿಷ್‌ಗೆ ಅನುವಾದ), 'ಮಾಯಾವಿ ಸರೋವರ' (ಹಿಂದಿಯಿಂದ ಅನುವಾದ), 'ಸಿರಿಗನ್ನಡ ಗೀತರಾಮಾಯಣ' ಮತ್ತು ಇನ್ನೂ ಹಲವು – ಮೈ. ಶ್ರೀ. ನಟರಾಜ.

೨. 'ವೈದ್ಯ ಮತ್ತೊಬ್ಬ', 'ನಿರ್ಗುಣ' (ಕಥಾಸಂಕಲನ), 'ಶಾಕುಂತಲಾ' (ಕಥಾಸಂಗ್ರಹ), 'ಬಿಳಿಯ ಚಾದರ' (ಕಾದಂಬರಿ), 'ಗುಣ' (ಕಾದಂಬರಿ) – ಗುರುಪ್ರಸಾದ ಕಾಗಿನೆಲೆ.

೩. 'ಕಲಸು ಮೇಲೋಗರ', 'ನಿಶ್ಶಬ್ದ ಶಬ್ದ', 'ಕಾನನದ ಮಲ್ಲಿಗೆ', 'ಶುಶ್ರುತ ನಡೆದ ಹಾದಿಯಲ್ಲಿ', ಇತ್ಯಾದಿ – ಎಚ್. ಕೆ. ನಂಜುಂಡಸ್ವಾಮಿ.

೪. 'ಹೈಟೆಕ್ ಹಯವದನ' (ನಾಟಕಗಳ ಸಂಗ್ರಹ), ಇತ್ಯಾದಿ – ಅಲಮೇಲು ಅಯ್ಯಂಗಾರ್.

೫. 'ಅಲೆಮಾರಿ ಕನಸುಗಳು' (ಕವನ ಸಂಕಲನ), 'ಪೂರ್ವ ಪಶ್ಚಿಮ' (ಅಂಕಣ ಬರಹ), 'ದ್ವೀಪವ ಬಯಸಿ' (ಕಾದಂಬರಿ), ಮತ್ತಿತರ – ಎಮ್. ಆರ್. ದತ್ತಾತ್ರಿ

೬ 'ಪಯಣ' (ಆತ್ಮಕಥನ) – ಶಾರದಾ ಬೈಯಣ್ಣ.

೭ 'ಮರೀಚಿಕೆ ಮತ್ತು ಇತರ ಕತೆಗಳು' – ನಳಿನಿ ಮೈಯ.

೮. 'ಭಾವ ತರಂಗ' (ಕವನ ಸಂಕಲನ) – ನಾಗಭೂಷಣ ಮೂಲ್ಕಿ.

೯. 'ಮರಳಿ ಬರುವೆ ನಾ' (ಕಥಾಸಂಕಲನ) – ಸಂಧ್ಯಾ ರವೀಂದ್ರನಾಥ್.

೧೦. 'ಶ್ರೀಮದ್ ಭಗವತ್ ಕಂನುಡಿ' (ಭಗವದ್ಗೀತೆಯ ಸರಳ ಕನ್ನಡ ಅನುವಾದ) – ವಿಶ್ವೇಶ್ವರ ದೀಕ್ಷಿತ್.

೧೧. 'ಭಾರತದ ಬೃಹತ್ ಬೇಲಿ' (ಅನನ್ಯ ಚಾರಿತ್ರಿಕ ಗಂಥ) – ಎಚ್. ಕೆ. ಚಂದ್ರಶೇಖರ್.

೧೨. 'ಒದ್ದೆ ಹಿಮ.. ಉಪ್ಪುಗಾಳಿ' (ಪ್ರಬಂಧ ಸಂಕಲನ) – ವೈಶಾಲಿ ಹೆಗಡೆ.

೧೩. 'ತುಳಸಿ ವನ' (ಅಂಕಣ ಬರಹಗಳು), 'ತಿಳಿ ನೀಲಿ ಪೆನ್ನು' (ಕಥಾಸಂಕಲನ) – ತ್ರಿವೇಣಿ ಶ್ರೀನಿವಾಸರಾವ್.

೧೪. 'ದೀಪವು ನಿನ್ನದೆ, ಗಾಳಿಯು ನಿನ್ನದೆ' (ಕಥಾಸಂಕಲನ) – ಶಶಿಕಲಾ ಚಂದ್ರಶೇಖರ್.

೧೫. 'ಬೇತಾಳರಾಯ ಮತ್ತು ಇತರ ಕತೆಗಳು' (ಕಥಾಸಂಕಲನ), 'ಪಶ್ಚಿಮಾಯಣ' (ಕಾದಂಬರಿ), 'ಸಾವಿರ ಪಕ್ಷಿಗಳು' (ಅನುವಾದ), Poema and Novella (ಎ. ಕೆ. ರಾಮಾನುಜನ್ ಅವರ ಸಾಹಿತ್ಯದ ಅನುವಾದ, ಇಂಗ್ಲಿಷ್‌ಗೆ), Nobel Chronicle (ನೊಬೆಲ್ ಪಾರಿತೋಷಕ ಪಡೆದವರ ಸಂಕ್ಷಿಪ್ತ ಪರಿಚಯ), ಇತ್ಯಾದಿ – ತೋನ್ಸೆ ಕೃಷ್ಣರಾಜು.

೧೬. 'ಗಾಂಧೀ ಯುಗಕ್ಕೆ ಕನ್ನಡಿ' (ಪ್ರಬಂಧ ಸಂಕಲನ); ಸೃಷ್ಟಿ – ನಾಲ್ಕು ಜಗತ್ತುಗಳು – ಎಚ್ .ವೈ. ರಾಜಗೋಪಾಲ್.

೧೭. 'ಅಮೆರಿಕನ್ನಡಿಗನೊಬ್ಬನ ದಿನಚರಿಯಿಂದ' (ಅನುಭವ ಕಥನ), ಕಾದೇ ಇರುವಳು ರಾಧೆ' (ಕಿರುಕಾದಂಬರಿ), 'ಕಲಬೆರಕೆ' (ಪ್ರಬಂಧ ಸಂಕಲನ), 'ಒಂದಾನೊಂದು ಕಾಲದಲ್ಲಿ' (ಕಟ್ಟು ಕತೆಗಳು), 'ದೂರತೀರದಿಂದ ಹರಿದು ಬಂದ ಕತೆಗಳು' (ಕಥಾಸಂಕಲನ), 'ಜೀವನ ರಹಸ್ಯ' (ವೈಜ್ಞಾನಿಕ ಗ್ರಂಥ), 'ತಲೆಮಾರ ಸೆಲೆ' (ಕಾದಂಬರಿ) – ಆಹಿತಾನಲ.

೧೮. 'ವಿಚಿತ್ರಾನ್ನ' (ಈ ಹೆಸರಿನಲ್ಲಿ ಇನ್ನೂ ಎರಡು ಅಂಕಣ ಗ್ರಂಥಗಳು), 'ಒಲವಿನ ಟಚ್' (ಇನ್ನೂ ನಾಲ್ಕು 'ಟಚ್' ಅಂಕಣ ಬರಹಗಳ ಗ್ರಂಥಗಳು) – ಶ್ರೀವತ್ಸ ಜೋಶಿ.

೧೯. 'ನೆನಪುಗಳು', 'ಪಾರ್ಕಿನ್ಸನ್ ಕಾಯಿಲೆಯಿಂದ ನಾನೇನು ಕಲಿತೆ?', 'ಅಮೆರಿಕಾಯಣ', ಇತ್ಯಾದಿ – ವೈ. ಆರ್. ಮೋಹನ್.

೨೦. 'ನೆಲದ ಕರೆ' (ಕವನ ಸಂಕಲನ), 'ಹಿರೋದೋತನ ಸಮರ ಕತೆಗಳು' (ಕಥಾಸಂಗ್ರಹ), 'ತರಗೆಲೆಯ ಹಾರಾಟ' (ಪ್ರಬಂಧ ಸಂಕಲನ), The Hill Temple (ಪು.ತಿ.ನ. ಅವರ 'ಮಲೆದೇಗುಲ' ದ ಇಂಗ್ಲಿಷ್ ಅನುವಾದ) – ಎಚ್. ವಿ. ರಂಗಾಚಾರ್.

೨೧. 'ಮೋಡ ಕರಗಿದ ಮೇಲೆ' (ಕಥಾಸಂಕಲನ), Detour to Happine (ಕಥಾಸಂಕಲನ) – ಅಶ್ವಥ್ ನಾ. ರಾವ್.

೨೨. ‘ಹೃದಯ’ (ಕಥಾಸಂಕಲನ), ‘ಸೌರಭ’ (ಕಥಾಸಂಕಲನ), ‘ಮಂಥನ’ (ಅನುವಾದ), ‘ಅಮೆರಿಕ ಮತ್ತು ಅಮೆರಿಕನ್ನರು’ (ಅನುವಾದ), ‘ಆತ ಮಂಗಳ ಲೋಕದಿಂದ, ಈಕೆ ಶುಕ್ರ ಲೋಕದಿಂದ’ (ಅನುವಾದ), ‘ನಾಗರಿಕತೆಯ ಕಥೆ’ (ಅನುವಾದ), Dots and Lines, ಇತ್ಯಾದಿ – ವಿಶ್ವನಾಥ ಹುಲಿಕಲ್.

೨೩. ‘ಜಿಜ್ಞಾಸೆ, ಗಂಗೆಯ ದಡದ ಕಾಲ್ದಾರಿಯಲ್ಲಿ’ – ರವಿ ಕೃಷ್ಣ ರೆಡ್ಡಿ.

೨೪. ‘ಕಾಡಿದೆ ತವರಿನ ನೆನಪು’ (ಕವನ ಸಂಕಲನ) – ಮಾಯಾ ಹರಪನಹಳ್ಳಿ.

೨೫. ‘ನುಡಿ ಎನ್ನ ವೀಣೆ’ (ಕವನ ಸಂಕಲನ) – (ದಿ) ವಿಮಲಾ ಚೆನ್ನಬಸಪ್ಪ.

೨೬. ‘ಗಾನ ಸುಂದರಿ’ (ಕವನ ಸಂಕಲನ), ‘ಸ್ವರ್ಣಯುಗ’ (ಕವನ ಸಂಕಲನ) – ವೆಂಕಟಪ್ಪ ಐತಾಂಡಹಳ್ಳಿ.

೨೭. ‘ಭಾವಲಹರಿ’ (ಕವನ ಸಂಕಲನ), ‘ಭಾವಗಾನ’ (ಕವನ ಸಂಕಲನ) ‘ಭಾವಬಿಂಬ’ (ಕವನ ಸಂಕಲನ), ‘ಭಾವಲೋಕ’ (ಕವನ ಸಂಕಲನ), ‘ಭಾವಯಾನ’ (ಕಥೆ–ಹರಟೆ ಸಂಕಲನ) – ಸುಪ್ತದೀಪ್ತಿ.

೨೮. ‘ಬೊಗಸೆಯಲ್ಲಿ ಬೆಳದಿಂಗಳು’ (ಕವನ ಸಂಕಲನ), ‘ಬೆಳದಿಂಗಳ ಬೇರು’ (ಕಥಾಸಂಕಲನ), ಇತ್ಯಾದಿ – ಶಾಂತಲಾ ಭಂಡಿ.

ಸಂಪಾದಿತ ಕೃತಿಗಳು:

ಈ ಕೆಳಗೆ ಅಮೆರಿಕದಲ್ಲಿ ಪ್ರಕಟವಾದ ಕೆಲವು ಕೃತಿಗಳ ಪಟ್ಟಿ ಮಾಡಿದ್ದೇನೆ:

೧. ‘ಕಾರಂತ ಚಿಂತನ – ಕಡಲಾಚೆಯ ಕನ್ನಡಿಗರಿಂದ’ (೨೦೦೦) – ಸಂ. ಆಹಿತಾನಲ.

೨. ‘ಕುವೆಂಪು ಸಾಹಿತ್ಯ ಸಮೀಕ್ಷೆ’ (೨೦೦೪) – ಸಂ. ಆಹಿತಾನಲ. *

೩. ‘ಆಚೀಚೆಯ ಕತೆಗಳು’ (೨೦೦೫) – ಸಂ. ಗುರುಪ್ರಸಾದ ಕಾಗಿನೆಲೆ. *

೪. ‘ಯದುಗಿರಿಯ ಬೆಳಕು’ (೨೦೦೫) – ಸಂ. ಆಹಿತಾನಲ.

೫. ‘ನಗೆಗನ್ನಡಂ ಗೆಲ್ಗೆ’ (೨೦೦೭) – ಸಂ. ಎಚ್.ಕೆ. ನಂಜುಂಡಸ್ವಾಮಿ ಮತ್ತು ಎಚ್.ವೈ. ರಾಜಗೋಪಾಲ್. *

೬ ‘ಕನ್ನಡದಮರಚೇತನ’ (೨೦೦೭) – ಸಂ. ಆಹಿತಾನಲ ಮತ್ತು ಹ. ಕಂ. ಕೃಷ್ಣಪ್ರಿಯ.

೭ ‘ಗೆಲುವಿನ ಚಿಲುಮೆ ರಾಜರತ್ನಂ’ (೨೦೦೮) – ಸಂ. ಆಹಿತಾನಲ.

೮. ‘ಕಾದಂಬರಿ ಲೋಕದಲ್ಲಿ ಹೀಗೆ ಹಲವು’ (೨೦೦೯)–ಸಂ. ಮೈ. ಶ್ರೀ. ನಟರಾಜ.*

೯. 'ಅನಂತಮುಖದಮೂರ್ತಿ' (೨೦೦೯) – ಸಂ. ಆಹಿತಾನಲ.

೧೦. 'ಮಥಿಸಿದಷ್ಟೂ ಮಾತು' (೨೦೧೧) – ಸಂ. ತ್ರಿವೇಣಿ ಶ್ರೀನಿವಾಸ ರಾವ್ ಮತ್ತು ಎಮ್. ಆರ್. ದತ್ತಾತ್ರಿ. *

೧೧. 'ಬೇರು ಸೂರು' (೨೦೧೩) – ಸಂ. ಗುರುಪ್ರಸಾದ ಕಾಗಿನೆಲೆ, ತ್ರಿವೇಣಿ ಶ್ರೀನಿವಾಸ ರಾವ್ ಮತ್ತು ಜ್ಯೋತಿ ಮಹದೇವ್. *

೧೨. 'ಅನುವಾದ ಸಂವಾದ' (೨೦೧೫) – ಪ್ರಧಾನ ಸಂಪಾದಕ: ಶ್ರೀಕಾಂತ ಬಾಬು.

೧೩. 'A Little taste of Kannada in English' (೨೦೧೫) ಸಂ. ಶ್ರೀಕಾಂತ ಬಾಬು.

೧೪ 'ಅಮೆರಿಕನ್ನಡ ಬರಹಗಾರರು' (೨೦೧೫) ಸಂ. ಆಹಿತಾನಲ ಮತ್ತು ಸುಪ್ತದೀಪ್ತಿ

೧೫. 'ಬೇಂದ್ರೆ ಅಂದ್ರೆ...' (೨೦೧೫) ಸಂ. ಆಹಿತಾನಲ ಮತ್ತು ನಳಿನಿ ಮೈಯ.

ಈ ಎಲ್ಲ ಗ್ರಂಥಗಳಿಗೂ ಕರ್ನಾಟಕದ ಹೆಸರಾಂತ ಸಾಹಿತಿಗಳು ಮೆಚ್ಚುಗೆಯ ಮುನ್ನುಡಿಗಳನ್ನು ಬರೆದು, ಅಮೆರಿಕದ ಸಾಹಿತ್ಯ ಬೆಳವಣಿಗೆಗೆ ಪ್ರೋತ್ಸಾಹ ನೀಡಿದ್ದಾರೆಂಬುದು ಅತಿ ಅಭಿಮಾನದ ಸಂಗತಿ. ಹೀಗೆ ಅಮೆರಿಕ ಮತ್ತು ಕರ್ನಾಟಕಗಳ ನಡುವೆ ಸಾಹಿತ್ಯ ಸಂಪರ್ಕ ಬೆಳೆಯುತ್ತ ಬಂದು, ಅಮೆರಿಕದಲ್ಲಿ ಕನ್ನಡ ಭುವನೇಶ್ವರಿಯ ಸೇವೆ ನಡೆಯುತ್ತಿರಲೆಂದು ಹಾರೈಸೋಣ.

ಇಲ್ಲಿ ವೈಯಕ್ತಿಕವಾಗಿ ನಾನು ನಡೆಸಿಕೊಟ್ಟ ಕೆಲವು ಕಾರ್ಯಕ್ರಮಗಳ ಪ್ರಸ್ತಾಪ ಅನುಚಿತವಾಗಲಾರದೆಂದು ಭಾವಿಸಿದ್ದೇನೆ. ನಮ್ಮ ಮನೆಯಲ್ಲಿಯೇ ಹಲವು ಸಾಹಿತ್ಯ ಗೋಷ್ಠಿಗಳನ್ನು ಏರ್ಪಡಿಸಿ, ತೃಪ್ತಿಪಟ್ಟಿದ್ದೇನೆ. ಯು. ಆರ್. ಅನಂತಮೂರ್ತಿ, ಜಿ. ಎಸ್. ಶಿವರುದ್ರಪ್ಪ, ಎನ್. ಎಸ್. ಲಕ್ಷ್ಮೀನಾರಾಯಣ ಭಟ್ಟ, ವೈದೇಹಿ, ಬರಗೂರು ರಾಮಚಂದ್ರಪ್ಪ, ಚಂದ್ರಶೇಖರ ಕಂಬಾರ ಮುಂತಾದವರ ಭಾಷಣಗಳನ್ನು ಏರ್ಪಡಿಸಿದ್ದೇನೆ. ಹೆಸರಾಂತ ಸಾಹಿತಿ ಶಿವರಾಮ ಕಾರಂತರು ಕಾಲವಾದಾಗ, 'ಕಾರಂತರ ಕೃತಿಗಳು' ಎಂಬ ವಿಷಯದ ಮೇಲೆ ವಿಚಾರ ಗೋಷ್ಠಿಯನ್ನು ನಡೆಸಿದ್ದೇನೆ. ಇದರ ಪರಿಣಾಮವಾಗಿ, ಅಮೆರಿಕದಲ್ಲಿ ನೆಲೆಸಿದ ಹಲವು ಕನ್ನಡಿಗರಿಂದ ಕಾರಂತರ ಮೇಲಿನ ಲೇಖನವನ್ನು ಕಲೆತು, 'ಕಾರಂತ ಚಿಂತನ – ಕಡಲಾಚೆಯ ಕನ್ನಡಿಗರಿಂದ' ಎಂಬ ಗ್ರಂಥವನ್ನು ಸಂಪಾದಿಸಿ, ಪ್ರಕಟಿಸಿದ್ದೇನೆ. ಈ ಗ್ರಂಥಕ್ಕೆ ಸಾಹಿತಿ, ಅನಂತಮೂರ್ತಿಯವರು ಮುನ್ನುಡಿ ಬರೆದಿದ್ದು, ಹ್ಯೂಸ್ಟನ್‌ನಲ್ಲಿ ನಡೆದ ವಿಶ್ವಕನ್ನಡ ಸಮ್ಮೇಳನದಲ್ಲಿ, ಗಿರೀಶ್ ಕಾರ್ನಾಡರು ಬಿಡುಗಡೆ ಮಾಡಿದ್ದಾರೆ. ಇತ್ತೀಚೆಗೆ, ಶಿಕಾಗೋ ವಲಯದ ಹಲವು ಸಾಹಿತ್ಯಾಭಿಮಾನಿಗಳನ್ನು ಕೂಡಿ, 'ಮಂಥನ'ವೆಂಬ ಸಾಹಿತ್ಯ ಕೂಟವನ್ನೂ, ಲಾಸ್ ಎಂಜಲಿಸ್ ವಲಯದಲ್ಲಿ 'ಸಾಹಿತ್ಯಾಂಜಲಿ' ಪ್ರಾರಂಭವಾಗಲು ಸಹಾಯ ಒದಗಿಸಿದ್ದೇನೆ. ಇಂತಹ ಹಲವು ಸಾಹಿತ್ಯ ಕೂಟಗಳು, ನ್ಯೂಜೆರ್ಸಿ ವಲಯದಲ್ಲಿ ಪ್ರಸ್ತಾಪ, ಸಾನ್‌ಫ್ರಾನ್ಸಿಸ್ಕೊ

ಬೇ ವಲಯದಲ್ಲಿ ಸಾಹಿತ್ಯ ಗೋಷ್ಠಿ, ನಾರ್ತ್ ಕೆರೊಲಿನದ ಹರಟೆ ಕಟ್ಟೆ, ವಾಷಿಂಗ್‌ಟನ್ ವಲಯದ ಭೂಮಿಕಾ, ಲಾಸ್ ಎಂಜಲಿಸ್ ವಲಯದ ಸಾಹಿತ್ಯಾಂಜಲಿ ಮತ್ತು ಅಸೀಮಾ, ಶಿಕಾಗೋ ವಲಯದ ಕನ್ನಡ ಕೂಟದ ಆಶ್ರಯದಲ್ಲಿ ನಡೆಯುವ ಸಾಹಿತ್ಯ ಗೋಷ್ಠಿ – ಎಂಬಂತೆ ಹಲವಾರು ಕೂಟಗಳು ಅಮೆರಿಕದಾದ್ಯಂತ ಹರಡಿಕೊಂಡು, ಕನ್ನಡಿಗರಲ್ಲಿ ಸಾಹಿತ್ಯಾಭಿರುಚಿಯನ್ನು ಹೆಚ್ಚಿಸಿದೆ.

ಸಂಸ್ಕೃತಿ ಮತ್ತು ಸಾಹಿತ್ಯದ ಮೇಲಿನ ಅಭಿಲಾಶೆಯನ್ನು ವ್ಯಕ್ತಪಡಿಸುತ್ತಿದ್ದಂತೆ, ಕನ್ನಡ ಭಾಷೆಯನ್ನೂ ಸ್ಥಾಪಿಸಬೇಕೆನ್ನುವ ಹಂಬಲವೂ ಕನ್ನಡಿಗರಲ್ಲಿ ಬೆಳೆಯುತ್ತಿದೆ. ಆ ಬಗ್ಗೆ ಸಾಕಷ್ಟು ಪ್ರಯತ್ನಗಳೂ ನಡೆಯುತ್ತಿವೆ. ಇದಕ್ಕೆ ಮುಖ್ಯವಾದ ಪ್ರೇರಣೆಯೆಂದರೆ, ಇಲ್ಲಿ ಹುಟ್ಟಿ ಬೆಳೆದ ನಮ್ಮ ಮಕ್ಕಳಿಗೆ ನಮ್ಮ ಮಾತೃಭಾಷೆಯ ಪರಿಚಯ ಮಾಡಿಕೊಟ್ಟು, ಅವರು ತಮ್ಮ ತಾಯ್ನುಡಿಯನ್ನು ಮರೆಯಬಾರದೆಂಬ ಹೆತ್ತವರ ಹಿರಿಯ ಆಕಾಂಕ್ಷೆ. ಮಮತೆಗೆ ಸಂಪರ್ಕವೇ ಮುಖ್ಯ. ಮನೆಯಲ್ಲಿ ಅವರೊಡನೆ ಕನ್ನಡದಲ್ಲಿ ಸಂಪರ್ಕವಿಟ್ಟು–ಕೊಂಡಲ್ಲಿ, ಈ ನಮ್ಮ ಆಸೆ ಕೈಗೂಡುವುದೋ ಏನೋ! ಆ ಬಗ್ಗೆ ಇಲ್ಲಿ ನೆಲೆಸಿದ ಕನ್ನಡಿಗರು ಪ್ರಯತ್ನ ನಡೆಸುತ್ತಲಿದ್ದಾರೆಂಬುದು ನಿಜ. ಆದರೆ, ಇಂತಹ ಪ್ರಯತ್ನದ ಪ್ರತಿಫಲಗಳು ಎಣಿಸಿದಷ್ಟು ಪ್ರಮಾಣದಲ್ಲಿರದಿರುವುದೂ ನಿಜ. ಇದೊಂದು ಜಟಿಲವಾದ ಸಮಸ್ಯೆ. ನಮ್ಮ ಮಕ್ಕಳಿಗೆ ಒಡ್ಡುವ ಒತ್ತಾಯ ಈ ನಮ್ಮ ಪ್ರಯತ್ನಗಳು ಅಷ್ಟೊಂದು ಸಫಲವಾಗದಿರಲು ಕಾರಣವಿರಬಹುದೆಂದು ಕೆಲವರು ಅಭಿಪ್ರಾಯಪಡುತ್ತಾರೆ. ಒತ್ತಡವು ಕೆಲವೊಮ್ಮೆ ಪ್ರತಿಕೂಲದಲ್ಲಿ ಪರಿಣಮಿಸುತ್ತದೆ. ಆದರೂ, ಸೀಮಿತ ಒತ್ತಾಯದ ಜತೆಯಲ್ಲೇ ಬಹಳಷ್ಟು ಪ್ರೋತ್ಸಾಹ ಕೊಟ್ಟು, ಹುಡುಗರಲ್ಲಿ ಭಾಷೆಯ ಮೇಲೆ ಆಸಕ್ತಿ ಹುಟ್ಟುವ ಕ್ರಮವನ್ನು ನಾವು ಅನುಸರಿಸಬೇಕಾಗಿದೆ. ಇದು ಹೇಳಿದಷ್ಟು ಸುಲಭವಲ್ಲ. ಆ ಬಗ್ಗೆ ನಾವು ಅನುಭವಸ್ಥರಿಂದ ಸಲಹೆ ಪಡೆದು, ನಮ್ಮ–ನಮ್ಮಲ್ಲಿಯೇ ಚರ್ಚಿಸಿ, ನಮ್ಮ ಸಮಸ್ಯೆಗಳಿಗೆ ಪರಿಹಾರ ಸಿಗುವಂತೆ ನಾವು ಪ್ರಯತ್ನಪಡಬೇಕಾಗಿದೆ. ಇಂತಹ ಪ್ರಯತ್ನಗಳು ದೇಶದಾದ್ಯಂತ ನಡೆಯಬೇಕು.

ಈ ಹಿಂದೆ, ನಮ್ಮ ಮಕ್ಕಳಿಗೆ ಕನ್ನಡ ಅಭ್ಯಾಸ ಮಾಡುವಲ್ಲಿ, ನನ್ನವಳು ಪಟ್ಟ ಶ್ರಮ ಹೇಳತೀರದು(ವಿವರಗಳಿಗೆ ನೋಡಿ ಅಮೆರಿಕದಲ್ಲಿ ಕಂಡ ಕನಸು ಕಟ್ಟಿದ ನೆನಪು) ಈಗ ನಮ್ಮ ಹುಡುಗರು ದೊಡ್ಡವರಾಗಿ, ಕನ್ನಡ ಭಾಷೆಯ ಪ್ರಾಮುಖ್ಯತೆಯನ್ನು ಸ್ವಲ್ಪವಾದರೂ ಅರಿತಿದ್ದಾರೆ. ಈ ವಿಷಯದಲ್ಲಿ ನಾವು ನಮ್ಮ ಗುಜರಾತಿ ಬಂಧುಗಳಿಂದ ಸಲಹೆ ಪಡೆಯಬೇಕು. ಅವರು ತಮ್ಮ ಸಂಪ್ರದಾಯ ಮತ್ತು ಭಾಷೆಯನ್ನು ಕಾಪಾಡಿಕೊಂಡು ಬರುವುದರಲ್ಲಿ ಬಹಳಷ್ಟು ಸಫಲರಾಗಿದ್ದಾರೆ. ಅಮೆರಿಕದ ನಾಗರಿಕರೇ ಆದ ಯಹೂದಿಗಳು ತಮ್ಮ ಭಾಷೆ ಮತ್ತು ಸಂಸ್ಕೃತಿಯನ್ನು ಕಾಪಾಡಿಕೊಂಡು ಬಂದ ರೀತಿಯು ನಮಗೆ ಮಾದರಿಯಾಗಬಹುದೇನೋ! ಹಿಂದೊಮ್ಮೆ ಹಿರಿಯ ಸಾಹಿತಿಯೊಬ್ಬರು ನಮ್ಮನ್ನು ಸಂದರ್ಶಿಸಿದಾಗ, 'ಕನ್ನಡಿಗರು ಕನ್ನಡ ಭಾಷೆಯ ಮೇಲಿನ ಅಭಿಮಾನವನ್ನು

ಹೆಚ್ಚಿಸಿಕೊಳ್ಳಬೇಕು. ಹಣ ಸಂಪಾದನೆ ಮಾಡುವ ಯೋಚನೆಯಲ್ಲಿ ನೀವು ಮಕ್ಕಳಿಗೆ ಕನ್ನಡ ಹೇಳಿಕೊಡುವುದನ್ನು ಅಸಡ್ಡೆ ಮಾಡಿದ್ದೀರ' ಎಂದು ಹೇಳಿದಾಗ ನಾವು ನೊಂದಿದ್ದೆವು. ಆ ಸಾಹಿತಿಗಳು ನಮ್ಮ ಪ್ರಯತ್ನಗಳನ್ನು ಮನಗಾಣದೇ ಹೋದರಲ್ಲಾ ಎಂಬ ನೋವೂ ನಮ್ಮನ್ನು ಕಾಡಿತ್ತು. ಮನೆಯಲ್ಲಿ ಕನ್ನಡ ಹೊರಗೆ ಹೋದಾಗ ಇಂಗ್ಲಿಷ್ ಮಾತಾಡಬೇಕಾಗಿ ಬಂದ ಅವರ ಕಷ್ಟವನ್ನೂ ನಾವು ಅರಿತುಕೊಳ್ಳಬೇಕಾಗಿದೆ. ಭಾಷೆ ಬೋಧಿಸುವ ಮೊದಲು, ನಮ್ಮ ಸಂಸ್ಕೃತಿ, ಪರಂಪರೆಗಳಲ್ಲಿ ಹೆಚ್ಚಿನ ಅಭಿಮಾನ ಹುಟ್ಟುವಂತೆ ಮಾಡಬೇಕು. ಇದಕ್ಕೆ ಮುಖ್ಯವಾದ ಸಾಧನ ಸಂಪರ್ಕ. ನಮ್ಮ ಎಲ್ಲ ಪ್ರಯತ್ನಗಳ ಫಲಾಫಲಗಳು ಈ ಮುಖ್ಯ ವಿಷಯದ ಮೇಲೆ ಆಧಾರವಾಗಿದೆ.

ವೈಯಕ್ತಿಕವಾಗಿ ಮನೆಯಲ್ಲಿಯೇ ಕನ್ನಡ ಭಾಷೆಯನ್ನು ಕಲಿಸುವ ಪ್ರಯತ್ನಗಳ ಜತೆಗೆ, ಸಾಮೂಹಿಕವಾಗಿಯೂ ಕನ್ನಡ ಬೋಧಿಸುವ ಪ್ರಯತ್ನಗಳೂ ನಡೆದಿವೆ. ಶಿಕಾಗೋ ವಲಯದಲ್ಲಿ ಈ ಹಿಂದೆ, ಸುಧಾ ರಾವ್‌ರು ಕನ್ನಡ ಶಾಲೆಯೊಂದನ್ನು ಪ್ರಾರಂಭಿಸಿದ್ದರು. ಕ್ರಮೇಣ ಆ ಪ್ರಯತ್ನವು ಹೆಚ್ಚಿನ ಫಲದಾಯಕವಾಗದಿದ್ದುದರಿಂದ ಈ ಶಾಲೆಯು ಮುಂದುವರಿಯದೇ ಹೋಯಿತು. ಮುಂದೆ ಸೋಮಶೇಖರ–ಸರೋಜ ದಂಪತಿಗಳು ತಮ್ಮ ಮನೆಯ ಬೇಸ್‌ಮೆಂಟ್‌ನಲ್ಲಿ 'ಜ್ಞಾನ ಭಾರತಿ' ಎಂಬ ಕನ್ನಡ ಶಾಲೆಯನ್ನು ಪ್ರಾರಂಭಿಸಿದರು. ಈ ಶಾಲೆ ಜಯಸ್ವಾಮಿ, ಇಂದುಶೇಖರ್‌ರಂಥ ಸಮರ್ಥ ಮುಂದಾಳತ್ವದಲ್ಲಿ, ಇಂದಿಗೂ ಯಶಸ್ವಿಯಾಗಿ ನಡೆದುಕೊಂಡು ಬರುತ್ತಿದೆ ಎಂದು ಕೇಳಿದ್ದೇನೆ. ಇದರ ಅಧ್ಯಾಪಕರಾಗಿ ಹುಡುಗರ ತಂದೆ–ತಾಯಿಯರು ತಮ್ಮ ನಿಸ್ವಾರ್ಥ ಸೇವೆಯನ್ನು ಸಲ್ಲಿಸುತ್ತಿದ್ದಾರೆ. ಜ್ಞಾನ ಭಾರತಿಯಂತೆ ಹಲವು ಶಾಲೆಗಳು ದೇಶದಾದ್ಯಂತ ಹರಡಿಕೊಂಡಿವೆ. ಲಾಸ್ ಎಂಜಲಿಸ್ ವಲಯದಲ್ಲಿ, ಶ್ರೀ ವಿಶ್ವೇಶ್ವರ ದೀಕ್ಷಿತರ ಮುಂದಾಳತ್ವದಲ್ಲಿ ಹಲವು ಕಡೆ ಇಂತಹ ಶಾಲೆಗಳು ನಡೆಯುತ್ತಿವೆ. ಬೇ ಏರಿಯದಲ್ಲೂ, ಶ್ರೀಮತಿ ಸಂಧ್ಯಾ ರವೀಂದ್ರನಾಥ್‌ರ ಮುಂದಾಳತ್ವದಲ್ಲಿ 'ಕನ್ನಡ ಕಲಿ' ಶಾಲೆಗಳು ನಡೆಯುತ್ತಿವೆ. ಇವುಗಳಲ್ಲದೆ, ದೇಶದ ಎಲ್ಲ ಕನ್ನಡ ಕೂಟಗಳೂ, ಕನ್ನಡ ಕಲಿ ಕಾರ್ಯಕ್ರಮಮನ್ನು ನಡೆಸಿಕೊಂಡು ಬರುತ್ತಿದ್ದಾರೆ. ಪರಿಣಾಮವಾಗಿ, ಎಲ್ಲ ಕನ್ನಡಿಗರಲ್ಲಿಯೂ ಮುಂದಿನ ಪೀಳಿಗೆಯವರಿಗೆ ಕನ್ನಡ ಭಾಷೆ, ಸಂಸ್ಕೃತಿಯ ಪರಿಚಯ ಮಾಡಿಕೊಡಬೇಕೆಂಬ ಅರಿವಾಗಿ, ಆ ಬಗ್ಗೆ ಪ್ರಯತ್ನಗಳು ನಡೆಯುತ್ತಿರುವುದು ಒಂದು ಆಶಾದಾಯಕ ಸಂಗತಿ. ಆದರೆ, ಇಂತಹ ಪ್ರಯತ್ನಗಳ ತೀವ್ರತೆ ಇನ್ನೂ ಹೆಚ್ಚಬೇಕಾಗಿದೆ. ಇಂತಹ ಶಾಲೆಗಳು ಮುಂದುವರಿಯುತ್ತ ಬಂದು, ಮುಂದೆ ಸರಕಾರದಿಂದ ಗ್ರಾಂಟ್ ರೂಪದಲ್ಲಿ ಧನಸಹಾಯ ಪಡೆಯ ಬಹುದಾಗಿದೆ. ಇಂತಹ ಖಾಸಗಿ ಶಾಲೆಗಳನ್ನು ನಡೆಸುತ್ತಿರುವವರೆಲ್ಲರೂ ಈ ಬಗ್ಗೆ ಆಲೋಚಿಸ ಬೇಕಾಗಿದೆ.

ಭಾರತದಿಂದ ವಲಸೆ ಬಂದ ನಾವು, ಭಾಷೆ ಅಭಿವೃದ್ಧಿಪಡಿಸಿಕೊಳ್ಳುವುದಲ್ಲದೆ, ಇನ್ನೂ ಹೆಚ್ಚಿನ ಕರ್ತವ್ಯಬದ್ಧರಾಗಿದ್ದೇವೆ. ನಾವು ನೆಲೆಸಿದ ನಾಡು, ಅಮೆರಿಕ, 'ಅನೇಕ

ಸಂಸ್ಕೃತಿಗಳ ಆಗರ'. ಇಲ್ಲಿಗೆ ವಲಸೆ ಬಂದ ನಾವು ನಮ್ಮ ಸಂಸ್ಕೃತಿಯನ್ನು ಇಲ್ಲಿದರ ಜತೆಗೆ ಹೊಂದಿಸಿಕೊಳ್ಳಬೇಕಾದ ಕರ್ತವ್ಯವನ್ನೂ ಹೊತ್ತೇ ತಂದಿರುತ್ತೇವೆ. ಕನ್ನಡಿಗರ ಸಂಖ್ಯೆ ಹೆಚ್ಚುತ್ತ ಬರುತ್ತಿದ್ದಂತೆ, ಈ ಕರ್ತವ್ಯವೂ ಹೆಚ್ಚುತ್ತಿದ್ದು, ಅದನ್ನು ಪೂರೈಸುವ ಸಮಯವೂ ಬಂದಿರುತ್ತದೆ. ನಾವು ನಮ್ಮ ಕನ್ನಡ ಸಂಸ್ಕೃತಿ, ಸಾಹಿತ್ಯಗಳನ್ನು ಇಲ್ಲಿನ ಜನರಿಗೆ ಪರಿಚಯ ಮಾಡಿಕೊಡಲು, ನಮ್ಮ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಹೆಚ್ಚಿನ ಸಂಖ್ಯೆಯಲ್ಲಿ ನಮ್ಮ ಅಮೆರಿಕನ್ ಬಂಧುಗಳನ್ನು ಆಮಂತ್ರಿಸುವ ಪ್ರಯತ್ನ ಮಾಡಬೇಕು. ಅದಕ್ಕಾಗಿ ನಮ್ಮ ಕಾರ್ಯಕ್ರಮಗಳನ್ನು ಬದಲಿಸಬೇಕಾಗಿಯೂ ಬರಬಹುದು. ಆ ಕಾರ್ಯಕ್ರಮಗಳು, ಚುಟುಕಾಗಿಯೂ, ಚುರುಕಾಗಿಯೂ ಇರಬೇಕಾಗಿರುತ್ತದೆ. ಸಮಯಕ್ಕೆ ಸರಿಯಾಗಿ ಪ್ರಾರಂಭಿಸಿ, ವ್ಯವಸ್ಥಿತ ಕಾರ್ಯಕ್ರಮಗಳನ್ನು ಸಮಯಕ್ಕೆ ಸರಿಯಾಗಿ ಅಂತ್ಯಗೊಳಿಸಬೇಕು. ನಮ್ಮ ಯುವಕರು, ಅಮೆರಿಕನ್‌ರಲ್ಲಿ ನಮ್ಮ ಸಂಸ್ಕೃತಿಯ ಮೇಲೆ ಆಸಕ್ತಿ ಹುಟ್ಟುವಂತೆ ಮಾಡುವುದು ಅಷ್ಟೇನೂ ಕಷ್ಟವಾಗಲಾರದು. ಆದರೆ, ಅದಕ್ಕೂ ಮೊದಲು ಯುವಕರೇ ಅವುಗಳಲ್ಲಿ ಆಸಕ್ತರಾಗಿರಬೇಕು. ಆಗ, ತಮ್ಮ ಸ್ನೇಹಿತರನ್ನೂ, ನಮ್ಮ ಕಾರ್ಯಕ್ರಮಗಳಿಗೆ ಆಹ್ವಾನಿಸಿ, ನಮ್ಮ ಸಂಸ್ಕೃತಿಯಲ್ಲಿ ಕುತೂಹಲರಾಗುವಂತೆ ಮಾಡಬಹುದು. ಇವೆಲ್ಲವೂ ದೂರ ದೃಷ್ಟಿಯ ಗುರಿಯಾಗಿದ್ದು, ಕ್ರಮೇಣ ಅವುಗಳನ್ನು ಸಾಧಿಸುವ ಕ್ರಮಗಳನ್ನು ಅನುಸರಿಸಬೇಕಾಗಿದೆ.

ನಮ್ಮ ಕನ್ನಡತನವನ್ನು ಇಲ್ಲಿ ಸ್ಥಾಪನೆ ಮಾಡಲು ಇನ್ನೊಂದು ದಿಟ್ಟ ಹೆಜ್ಜೆಯನ್ನಿಡ–ಬೇಕಾಗಿದೆ. ಇಲ್ಲಿಯ ಉನ್ನತ ವಿದ್ಯಾ ಸಂಸ್ಥೆಗಳಲ್ಲಿ ಕನ್ನಡ ಸಂಸ್ಕೃತಿ, ಸಾಹಿತ್ಯಗಳನ್ನು ಬೋಧಿಸುವಂತೆ ನಾವು ಸೂಕ್ತ ಕ್ರಮಗಳನ್ನು ಕೈ ಕೊಳ್ಳ ಬೇಕಾಗಿದೆ. ಹೀಗೆ ಹೇಳುತ್ತಿರುವಾಗ, ನನಗೆ ಶ್ರೀಮತಿ ವಿಮಲಾ ರಾಜಗೋಪಾಲ್‌ರ ಪ್ರಯತ್ನದ ನೆನಪಾಗುತ್ತಿದೆ. ಶ್ರೀ ಎಲ್. ಗುಂಡಪ್ಪನವರ ಪುತ್ರಿಯಾದ ಅವರು, ಬಹುಮುಖ ಕಲಾವಿದೆ. ಜನಪದ ಗೀತೆಗಳನ್ನು ಹಾಡಿ, ಅವರು ಇಲ್ಲಿಯವರಿಗೆ ಅದರ ಹಿರಿಮೆಯನ್ನು ತೋರಿಸಿಕೊಟ್ಟಿದ್ದಾರೆ. ಈ ಹಿಂದೆ Peace Corp.ನ ಸ್ವಯಂಸೇವಕರಿಗೆ ಕನ್ನಡ ಬೋಧನೆಯ ಕೋರ್ಸ್‌ಗಳನ್ನು ಕಾರ್ಯಗತ ಮಾಡಿದ್ದಾರೆ. ಪೆನ್ಸಿಲ್ವೇನಿಯ ಯುನಿವರ್ಸಿಟಿ(UPENN)ಯ ಸೌತ್ ಏಷ್ಯನ್ ಡಿಪಾರ್ಟ್‌ಮೆಂಟ್‌ನ ಭಾಷಾ ವಿಭಾಗದಲ್ಲಿ, ಬಂಗಾಳಿ, ತೆಲುಗು. ತಮಿಳು ಮುಂತಾದ ಭಾರತೀಯ ಭಾಷೆಗಳ ಬೋಧೆ ನಡೆಯುತ್ತಿದ್ದರೂ, ಕನ್ನಡಕ್ಕೆ ಪ್ರೋತ್ಸಾಹ ಸಿಗದಿದ್ದುದನ್ನು ಗಮನಿಸಿ, ವಿಮಲಾರು, ಹೆರಿಟೇಜ್ ಮೂಲಕ ಭಾಷೆಯ ಪರಿಚಯ ಮಾಡಿಕೊಡುವುದರಲ್ಲಿ ಸಾಕಷ್ಟು ಯಶಸ್ವಿಯಾಗಿದ್ದಾರೆ. ಕಾಲೇಜಿನಲ್ಲಿ ಓದುತ್ತಿರುವ ಕನ್ನಡ ಯುವಕ–ಯುವತಿಯರಿಗೆ, ತಮ್ಮ ತಾಯ್ನುಡಿಯನ್ನು ಅಭಿವೃದ್ಧಿಪಡಿಸಿಕೊಳ್ಳಲು, ಇವರು ಅನುಕೂಲತೆಯನ್ನು ಒದಗಿಸಿದ್ದಾರೆ. ಇವರು ಕೈಗೊಂಡ ಕ್ರಮವೂ ವಿಶಿಷ್ಟವಾದುದು. ವಿದ್ಯಾರ್ಥಿಗಳಿಂದಲೇ, ಅವರಿಗೆ ಆಸಕ್ತಿಯುಳ್ಳ ವಿಷಯಗಳಲ್ಲಿ, ಕನ್ನಡ ಶಬ್ದ ಸಂಗ್ರಹ ಮಾಡಲು ಹೇಳಿ, ಅವರ ಭಾಷೆಯ ಮೇಲಿನ ಕುತೂಹಲವನ್ನು ಕೆರಳುವಂತೆ ಮಾಡಿದ್ದಾರೆ.

ದಾಸ–ಕೃತಿಯ ಮೂಲಕ, ಭಾಷೆಯ ಪ್ರಚಾರ ಮಾಡುವುದರಲ್ಲಿಯೂ ಯಶಸ್ಸು ಪಡೆದಿದ್ದಾರೆ. ಇಂಗ್ಲಿಷ್ ಅಲ್ಲದೆ ಬೇರೆ ಭಾಷೆಗಳ ಅಭ್ಯಾಸ ನಡೆಸಿ, ಅದರಲ್ಲಿ ಸರ್ಟಿಫಿಕೇಟ್ ಪಡೆದಲ್ಲಿ, ಕೆಲವು ಉದ್ಯೋಗ ಸಂಸ್ಥೆಗಳು ಬಡ್ತಿ ಕೊಡುವ ಪದ್ಧತಿಯನ್ನು ಗಮನಿಸಿ, ಕನ್ನಡದಲ್ಲಿ ಸರ್ಟಿಫಿಕೇಟ್ ಬರುವಂತಹ ಕೋರ್ಸ್‌ಗಳನ್ನು ಇವರು ನಡೆಸಿಕೊಂಡು ಬಂದಿದ್ದಾರೆ. ಇವರ ಈ ಪ್ರಯತ್ನಗಳು ಇಲ್ಲಿ ಕನ್ನಡತನವನ್ನು ಸ್ಥಾಪಿಸಲು ಉತ್ತೇಜನ ಕೊಡುತ್ತಿದೆ. ವಿಮಲಾರಂತೆ ಬೇರೆ ಕಡೆಗಳಲ್ಲಿ ಇತರರೂ ಅಂತಹ ಪ್ರಯತ್ನಗಳನ್ನು ನಡೆಸುತ್ತಿರಬಹುದು. ವಿಮಲಾರ ಪರಿಚಯವಿದ್ದುದರಿಂದ ನಾನಿಲ್ಲಿ ಅವರ ಸಾಧನೆಗಳನ್ನು ವಿವರಿಸಿದ್ದೇನೆ ಅಷ್ಟೆ.

ಶಿಕಾಗೋ ಯುನಿವರ್ಸಿಟಿಯಲ್ಲಿ, ಕನ್ನಡಿಗರೇ ಆದ ಎ. ಕೆ. ರಾಮನುಜವ್‌ರವರು, ಆಗಾಗ್ಗೆ ಕನ್ನಡ ಸಂಸ್ಕೃತಿ ಮತ್ತು ಭಾಷೆಯ ಮೇಲೆ ಬೋಧನೆ ಮಾಡುತಿದ್ದುದನ್ನು ನಾನಿಲ್ಲಿ ನೆನೆಸಿಕೊಳ್ಳುತ್ತಿದ್ದೇನೆ. ಆದರೆ, ಇಲ್ಲಿಯೂ ಕನ್ನಡ ವಿಭಾಗವೆಂಬುದು ಬೇರೆ ಇಲ್ಲ. ಆಗೊಮ್ಮೆ ಈಗೊಮ್ಮೆ ಕನ್ನಡದ ಮೇಲಿನ ಕೂತೂಹಲದಿಂದಲೋ ಏನೋ, ಒಬ್ಬಿಬ್ಬರು ವಿದ್ಯಾರ್ಥಿಗಳಿಗೆ ಆ ಬಗ್ಗೆ ನಿರ್ದೇಶನ ಮಾಡುತ್ತಿದ್ದರು. ಅವರಲ್ಲಿ ತರಬೇತಿಯಾದ ಡಾ ಶಿಫ್‌ಮನ್ ಎಂಬವರು, ಈಗ ಪೆನ್ಸಿಲ್ವೇನಿಯ ಯುನಿವರ್ಸಿಟಿಯಲ್ಲಿ ಚಿಕ್ಕ ಪ್ರಮಾಣದಲ್ಲಿ ಕನ್ನಡ ಭಾಷೆಯನ್ನು ಬೋಧಿಸುತಿದ್ದಾರೆಂದು ತಿಳಿದುಬಂದಿದೆ. ಅಲ್ಲದೆ, ರಾಮಾನುಜನ್‌ರ ಬಳಿ ತರಬೇತಿ ಹೊಂದಿದ ನನ್ನೊಬ್ಬ ಸ್ನೇಹಿತರು, ಡಾ. ರಾಲ್ಫ್ ಸ್ಟ್ರೋಲ್, ಕನ್ನಡ ಜೈನ ಸಾಹಿತ್ಯದ ಮೇಲೆ ಸಾಕಷ್ಟು ಅಧ್ಯಯನ ಮಾಡಿರುತ್ತಾರೆ. ಅವರು ನನ್ನ ಇನ್ನೊಬ್ಬ ಸ್ನೇಹಿತೆಯರಾದ ಮೃನಾಳಿನಿ ರಾವ್ ಎಂಬವರನ್ನು ಮದುವೆಯಾಗಿದ್ದಾರೆ. ಡಾ. ಶಿಫ್‌ಮನ್‌ರು ಕನ್ನಡ ವ್ಯಾಕರಣದ ಮೇಲೆ ಒಂದು ಪುಸ್ತಕ ಪ್ರಕಟಿಸಿದ್ದರೂ, ಅವರು ಹೆಚ್ಚಾಗಿ ತಮಿಳು ಸಾಹಿತ್ಯದ ಮೇಲೆ ಆಸಕ್ತಿ ಉಳ್ಳವರಾಗಿದ್ದಾರೆ. ಇವರಲ್ಲದೆ, ಒಕ್ಲೊಹೋಮದಲ್ಲಿ ಆಂಡ್ರ್ಯೂ ಕೋಹೆನ್ ಎಂಬವರು, ಕನ್ನಡ ಸಂಸ್ಕೃತಿ ಮತ್ತು ವಾಸ್ತುಶಿಲ್ಪದ ಮೇಲೆ ತಮ್ಮ ನಿಯಮಿತ ಆಸಕ್ತಿಯನ್ನು ವ್ಯಕ್ತಪಡಿಸುತಿದ್ದಾರೆ. ಬೇರೆ ಯುನಿವರ್ಸಿಟಿಗಳಲ್ಲೂ, ಇದೇ ರೀತಿ ಕರ್ನಾಟಕದ ಮೇಲೆ ನಿಯಮಿತ ಆಸಕ್ತಿ ಇದ್ದು, ಒಮ್ಮೊಮ್ಮೆ, ಆ ಬಗ್ಗೆ ಸಂಶೋಧನೆ ಮತ್ತು ಬೋಧನೆ ನಡೆಯುತ್ತಿರಬಹುದು.

ಎಸ್. ಎನ್. ಶ್ರೀಧರ ಮತ್ತು ನಾರಾಯಣ ಹೆಗಡೆ ಕನ್ನಡ ಭಾಷೆಯ ಬಗ್ಗೆ ತಮ್ಮದೇ ವಿಶಿಷ್ಟ ಸೇವೆಯನ್ನು ಸಲ್ಲಿಸುತ್ತಿದ್ದಾರೆ. ಭಾಷಾತಜ್ಞರಾದ ಶ್ರೀಧರರಿಗೆ, ಕನ್ನಡ ನುಡಿ ಮತ್ತು ಸಂಸ್ಕೃತಿ ಬೋಧಿಸುವ ವಿಭಾಗವನ್ನು SUNYಯಲ್ಲಿ ತೆರೆಯುವ ಅಧಿಕವಾದ ಅಭಿಲಾಷೆ ಇದೆ. ಅವರ ಈ ಅಭಿಲಾಷೆಯು ಕಾರ್ಯಗತ ವಾಗಲೆಂದು ಹಾರೈಸೋಣ. ಅದಕ್ಕಾಗಿ ಎಲ್ಲ ಕನ್ನಡಿಗರೂ ನೈತಿಕ ಬಲವಲ್ಲದೆ ಹೇರಳ ಧನ ಸಹಾಯ ಮಾಡಬೇಕಾಗಿದೆ. SUNY, Westburyಯಲ್ಲಿ ಇಂಗ್ಲಿಷ್ ಮತ್ತು ತೌಲನಿಕ ಸಾಹಿತ್ಯದ ಪ್ರಾಧ್ಯಾಪಕರಾಗಿರುವ ನಾರಾಯಣ ಹೆಗಡೆಯವರು ಹಲವು ಕನ್ನಡ ಗ್ರಂಥಗಳನ್ನು ಇಂಗ್ಲಿಷ್‌ಗೆ

ಭಾಷಾಂತರಿಸಿದ್ದಾರೆ. ಇವರುಗಳಲ್ಲದೆ, ಫ್ರೆಸ್ನೋದಲ್ಲಿ State University of Caliporniaದಲ್ಲಿ ಅಧ್ಯಾಪಕರಾಗಿದ್ದ ಗಿರಿಯವರ ಸಾಹಿತ್ಯ ಕೊಡುಗೆಯನ್ನೂ ನೆನಪಿಸಿಕೊಳ್ಳುತ್ತಿದ್ದೇನೆ.

ಶಿಕಾಗೋ ಯುನಿವರ್ಸಿಟಿಯ ರಾಮಾನುಜನ್‌ರು ಕನ್ನಡತನ ಬೆಳೆಯಲು ಮಾಡಿದ ಶ್ರಮಗಳ ವಿಚಾರ ಕೆಲವು ಮಾತುಗಳನ್ನು ಹೇಳಬಯಸುತ್ತೇನೆ. ಯಾರ ಹೆಚ್ಚಿನ ಗಮನಕ್ಕೂ ಬೀಳದೇ, ತೆರೆಯ ಮರೆಯಲ್ಲಿ ಸೇವೆ ಮಾಡುವುದರಲ್ಲಿ ಇವರೊಬ್ಬರು. ಇವರ ಮನೆಯ ಮಾತು ತಮಿಳು. ಮೈಸೂರಿವರಾದ ಇವರಿಗೆ ಕನ್ನಡದ ಮೇಲೆ ಅಪಾರ ಅಭಿಮಾನ. ಶಿಕಾಗೋ ಯುನಿವರ್ಸಿಟಿಯ ಆಗ್ನೇಯ ಏಶಿಯಾ ಬೋಧನೆಯ ವಿಭಾಗದಲ್ಲಿ ಪ್ರಾಧ್ಯಾಪಕರಾಗಿದ್ದ ರಾಮಾನುಜನ್, ಆಗಾಗ್ಗೆ, ಕನ್ನಡ ಕಲಿಯುವ ಇಚ್ಛೆಯುಳ್ಳ ಕೆಲವು ವಿದ್ಯಾರ್ಥಿಗಳಿಗೆ ಕನ್ನಡ ಸಂಸ್ಕೃತಿ ಮತ್ತು ಭಾಷೆಗಳನ್ನು ಬೋಧಿಸುತ್ತಿದ್ದರು. ಇದಕ್ಕೆ ಅನುಕೂಲವಾಗುವಂತೆ, ಕರ್ನಾಟಕದ ಹಲವು ಸಾಹಿತಿಗಳನ್ನು ಆಹ್ವಾನಿತ-ಪ್ರಾಧ್ಯಾಪಕರನ್ನಾಗಿ ಕರೆಯಿಸಿಕೊಂಡು, ಅವರಿಂದ ಈ ಕಾರ್ಯಕ್ರಮಗಳನ್ನು ನೆರವೇರಿಸಲು ಸಹಾಯ ಪಡೆಯುತ್ತಿದ್ದರು. ೭೦ರ ದಶಕದಲ್ಲಿ ಹೆಸರಾಂತ ಜಾನಪದ ಸಾಹಿತಿ ಚಂದ್ರಶೇಖರ ಕಂಬಾರರರು ಇಲ್ಲಿಗೆ ಆಹ್ವಾನಿತರಾಗಿದ್ದು, ಸುಮಾರು ಒಂದು ವರ್ಷ ಶಿಕಾಗೋ ಯುನಿವರ್ಸಿಟಿಯಲ್ಲಿ ಬೋಧಿಸಿದ್ದರು. ೮೦ರ ದಶಕದಲ್ಲಿ, ಹೆಸರಾಂತ ನಾಟಕ ಮತ್ತು ಸಿನೆಮಾ ನಿರ್ಮಾಪಕ ಗಿರೀಶ್ ಕಾರ್ನಾಡರು ಶಿಕಾಗೋ ಯುನಿವರ್ಸಿಟಿಯಲ್ಲಿ ಕನ್ನಡ ನಾಟಕಗಳ ಬಗ್ಗೆ ಒಂದು ವರ್ಷ ಬೋಧಿಸಿದ್ದರು. ಅನಂತಮೂರ್ತಿಯವರು ಅಯೋವಾದಲ್ಲಿದ್ದಾಗ, ಅವರನ್ನು ಹಲವು ಬಾರಿ ಇಲ್ಲಿಗೆ ಆಹ್ವಾನಿಸಿ ಅವರಿಂದ ಉಪನ್ಯಾಸಗಳನ್ನು ಏರ್ಪಡಿಸಿದ್ದರು. ಇವರುಗಳಲ್ಲದೆ, ಹಲವು ಸಾಹಿತಿಗಳನ್ನೂ ಬರಮಾಡಿಸಿಕೊಂಡು, ಇಲ್ಲಿಯವರಿಗೆ ಕನ್ನಡ ಸಂಸ್ಕೃತಿ ಮತ್ತು ಭಾಷೆಗಳನ್ನು ಪರಿಚಯ ಮಾಡಿ ಕೊಡುವಲ್ಲಿ ರಾಮಾನುಜನ್‌ರು ತುಂಬ ಶ್ರಮಪಟ್ಟಿರುತ್ತಾರೆ. ಅವರ ಅಕಾಲ ಮರಣವು ಕನ್ನಡ ಸಾಹಿತ್ಯ ಬೆಳವಣಿಗೆಗೆ ಅಪಾರ ನಷ್ಟವಾಗಿದೆ.

ಕನ್ನಡ ಸಂಸ್ಕೃತಿಯನ್ನು ಹರಡುವುದರಲ್ಲಿ, ಭಾಷಾಂತರವೂ ಒಂದು ಮುಖ್ಯ ಪಾತ್ರ ವಹಿಸುತ್ತದೆ. ಅಮೆರಿಕದಲ್ಲಿ ಈ ಬಗ್ಗೆ ತಮ್ಮ ಸೇವೆ ಸಲ್ಲಿಸಿದವರು ಹಲವರಿದ್ದಾರೆ. ಶಿಕಾಗೋದಲ್ಲಿ ರಾಮಾನುಜನ್‌ರು ಹಲವು ಕನ್ನಡ ಗ್ರಂಥಗಳನ್ನು ಇಂಗ್ಲಿಷ್‌ಗೆ ಅನುವಾದ ಮಾಡಿ ಕನ್ನಡದ ಕಂಪನ್ನು ಇಲ್ಲಿ ಬಿತ್ತಿಸಿದ್ದಾರೆ. ಇವರು ಭಾಷಂತರಿಸಿದ 'ಸಂಸ್ಕಾರ' (ಯು. ಆರ್. ಅನಂತಮೂರ್ತಿಯವರ ಅದೇ ಹೆಸರಿನ ಕಾದಂಬರಿ) ಮತ್ತು 'Speakings of Shiva' (ಬಸವಣ್ಣನವರ ವಚನ) ಎಂಬ ಎರಡು ಗ್ರಂಥಗಳು ಅಮೆರಿಕ ಸಾಹಿತಿಗಳ ಗಮನ ಸೆಳೆದಿದೆ. ಅವುಗಳು ಅಮೆರಿಕದಲ್ಲಿ ಹಲವು ವಿಶ್ವವಿದ್ಯಾಲಯಗಳಲ್ಲಿ ಸೌತ್ ಏಷ್ಯನ್ ಸ್ಟಡೀಸ್ ವಿಭಾಗಗಳಲ್ಲಿ ಆಕರ (ರೆಫ಼ೆರೆನ್ಸ್) ಪಠ್ಯ ಪುಸ್ತಕವಾಗಿ ಬಳಸುತ್ತಿದ್ದುದು ಕನ್ನಡಿಗರಿಗೆ ಒಂದು ಹೆಮ್ಮೆಯ ವಿಚಾರ. ಅವರು ಹಲವು ಕವನಗಳನ್ನು ಅದರಲ್ಲೂ ಅಡಿಗರ ಕವನಗಳನ್ನು ಇಂಗ್ಲಿಷ್‌ಗೆ ಅನುವಾದ

ಮಾಡಿದ್ದಾರೆ. ಅವರ ಕವನಗಳ ಸ್ವಾರಸ್ಯತೆಗಳೆಂದರೆ ಒಂದು ಕವನವು ಹಲವು ಭಾವನೆಗಳನ್ನು ವ್ಯಕ್ತಪಡಿಸುವುದು. ಇಂಗ್ಲಿಷ್‌ಗೆ ಒಂದೇ ಭಾಷಾಂತರದಲ್ಲಿ ಅವೆಲ್ಲವನ್ನೂ ಹೊರಗೆಡುವುದು ಅಸಾಧ್ಯದ ಕೆಲಸವೇ! ರಾಮಾನುಜನ್ ಭಾಷಾಂತರಿಸಿದ ಹಲವು ಜಾನಪದ ಸಣ್ಣ ಕತೆಗಳು ಅಮೆರಿಕ ಸಾಹಿತ್ಯ ರಂಗದಲ್ಲಿ ಮೆಚ್ಚುಗೆ ಪಡೆದಿದೆ. ಕಾರ್ನಾಡರು ಶಿಕಾಗೋ ಯುನಿವರ್ಸಿಟಿಗೆ ಬಂದಾಗ, ಅವರ ಒತ್ತಾಯದಿಂದಲೇ ಕನ್ನಡ ಜಾನಪದ ಕತೆಯೊಂದನ್ನು ಬಳಸಿ, 'ನಾಗಮಂಡಲ'ವೆಂಬ ನಾಟಕವನ್ನು ನಿರ್ಮಿಸಿದ್ದರು. ಆ ನಾಟಕದಲ್ಲಿ ಅನೇಕ ಅಮೆರಿಕನ್‌ರು ಪಾತ್ರವಹಿಸಿದ್ದರು. ಶಿಕಾಗೋದಲ್ಲಿ ಕಿಕ್ಕಿರಿದ ಸಭಿಕರ ಮುಂದೆ ಪ್ರದರ್ಶಿಸಿದ ಈ ನಾಟಕದ ಮೂರು ಪ್ರದರ್ಶನಗಳು ಜನರ ಅಪಾರ ಮೆಚ್ಚುಗೆಯನ್ನು ಪಡೆದಿತ್ತು. ಅಮೆರಿಕದ ಇತರ ಪ್ರದೇಶಗಳಲ್ಲೂ 'ನಾಗಮಂಡಲ' ಪ್ರದರ್ಶನವಾಗಿ ಜನಪ್ರಿಯವಾಗಿತ್ತು. ರಾಮಾನುಜನ್‌ರು ಪ್ರಾಯಶಃ, ಅಮೆರಿಕದಿಂದ ಪ್ರಕಟಿಸಿದ ಕನ್ನಡ ಸಾಹಿತಿಗಳಲ್ಲಿ ಅವರೇ ಪ್ರಥಮರೆಂದು ಹೇಳಬಹುದು. ಶಿಕಾಗೋ ವಲಯದ ಕನ್ನಡ ಕೂಟದಲ್ಲಿ ಏರ್ಪಡಿಸಿದ 'ಕವಿ ಸಮ್ಮೇಳನ'ವೊಂದರಲ್ಲಿ ಅವರು ಭಾಗವಹಿಸಿ, ತಮ್ಮ 'ಕುಂಟೋ ಬಿಲ್ಲೆ' ಕವನ ಸಂಗ್ರಹದಿಂದ ಹಲವು ಕವನಗಳನ್ನು ಓದಿ, ಕನ್ನಡಿಗರ ಮನರಂಜಿಸಿದ್ದನ್ನು ಜ್ಞಾಪಿಸಿಕೊಳ್ಳುತ್ತಿದ್ದೇನೆ. ನ್ಯೂಜೆರ್ಸಿಯಲ್ಲಿ ರಂಗಾಚಾರರು ಹೆಸರಾಂತ ಹಿರಿಯ ಕವಿ (ದಿ) ಪು.ತಿ.ನ.ರವರ 'ಮಲೆ ದೇಗುಲ'ದ ಅನುವಾದ ಮಾಡಿರುತ್ತಾರೆ. ಶಿಕಾಗೋ ಯುನಿವರ್ಸಿಟಿಯಲ್ಲಿದ್ದ ಶೆಲ್ಡನ್ ಪೋಲಕರು (ಹಿಂದೆ ಇವರು ಅಯೋವಾ ಯುನಿವರ್ಸಿಟಿಯಲ್ಲಿದ್ದರು, ಈಗ ಕೊಲಂಬಿಯಾ ಯುನಿವರ್ಸಿಟಿಯಲ್ಲಿದ್ದಾರೆ), 'ಕವಿರಾಜ ಮಾರ್ಗ'ವನ್ನು ಕನ್ನಡಕ್ಕೆ ಅನುವಾದ ಮಾಡಿದ್ದಾರೆ. ಇವರಲ್ಲದೆ ಬೇರೆ ಮಹನೀಯರೂ ಭಾಷಾಂತರಿಸಿದ ಹಲವು ಪ್ರಕಟಣೆಗಳೂ ಇವೆ. ಇವರಲ್ಲಿ ಇತ್ತೀಚೆಗೆ ವಿಶ್ವನಾಥ ಹುಲಿಕಲ್ ಮತ್ತು ಮೈಸೂರು ನಟರಾಜ – ಇವರುಗಳು ಮಾಡಿದ ಅನುವಾದಗಳೂ ಉಲ್ಲೇಖಾರ್ಹ.

ಶಿಕಾಗೋ ಯುನಿವರ್ಸಿಟಿಯಲ್ಲಿ ರಾಮಾನುಜನ್‌ರು ಕರ್ನಾಟಕ ಸಾಹಿತಿಗಳನ್ನು ಕರೆಸಿಕೊಂಡಂತೆ, ಬೇರೆ ಯುನಿವರ್ಸಿಟಿಗಳಲ್ಲೂ ಅಂತಹ ಪ್ರಯತ್ನಗಳು ನಡೆದಿದೆ. ಅಯೋವಾ ಯುನಿವರ್ಸಿಟಿಯವರು, ಪ್ರಸಿದ್ಧ ಸಾಹಿತಿ ಅನಂತಮೂರ್ತಿಯವರನ್ನು ಹಲವು ಬಾರಿ ಕರೆಯಿಸಿಕೊಂಡಿದ್ದರು. ೮೦ರ ದಶಕದಲ್ಲಿ ಫುಲ್‌ಬ್ರೈಟ್ ಪ್ರೊಫೆಸರ್ ಆಗಿ ಬಂದಾಗ, ಅಲ್ಲಿ ಅವರು ಭಾರತೀಯ ಮತ್ತು ಕನ್ನಡ ಸಂಸ್ಕೃತಿಗಳ ಮೇಲೆ ಉಪನ್ಯಾಸ ಮಾಲೆಗಳನ್ನು ನೀಡಿದ್ದರು. ಆಮೇಲೆ ೨೦೦೦ನೇ ವರ್ಷದಲ್ಲಿ ಪೆನ್ಸಿಲ್ವೇನಿಯ ಯುನಿವರ್ಸಿಟಿಗೆ ಬಂದಿದ್ದರು. ಪ್ರತಿ ಬಾರಿ ಅಮೆರಿಕವನ್ನು ಸಂದರ್ಶಿಸಿದಾಗಲೂ, ತಮ್ಮ ಉಪನ್ಯಾಸಗಳ ಮಾಲೆಗಳ ಮೂಲಕ ಕರ್ನಾಟಕದ ಹಲವು ಸಾಹಿತ್ಯ, ಪರಂಪರೆಗಳ ವಿಷಯ ಅಮೆರಿಕನ್‌ರಿಗೆ ಪರಿಚಯ ಮಾಡಿ ಕೊಟ್ಟಿರುತ್ತಾರೆ. ೯೦ರ ದಶಕದಲ್ಲಿ ಕರ್ನಾಟಕದ ಪ್ರಖ್ಯಾತ ಯುವಕ ವಿಮರ್ಶಕ, ಡಿ. ಆರ್. ನಾಗರಾಜರು ಶಿಕಾಗೋ ಯುನಿವರ್ಸಿಟಿಯ

ಆಹ್ವಾನಿತ ಪ್ರಾಧ್ಯಾಪಕರಾಗಿ ಸಂದರ್ಶಿಸಿ, ಕರ್ನಾಟಕ ಸಂಸ್ಕೃತಿಯ ಬಗ್ಗೆ ಹಲವಾರು ಉಪನ್ಯಾಸಗಳನ್ನು ಕೊಟ್ಟಿದ್ದರು.

ಅಮೆರಿಕದಲ್ಲೊಂದು ಕನ್ನಡ ಅಧ್ಯಯನ ಕೇಂದ್ರ ಸ್ಥಾಪನೆ:

ಭಾರತದಿಂದ ಅಮೆರಿಕಕ್ಕೆ ವಲಸೆ ಬಂದು, ಅಮೆರಿಕದ ಸಂಸ್ಕೃತಿಯೊಡನೆ ಹೊಂದಿಕೊಳ್ಳುವ ಪ್ರಯತ್ನದ ಜೊತೆಯಲ್ಲೆ ನಾವು ಇನ್ನೊಂದು ಕರ್ತವ್ಯ ಬದ್ಧರಾಗಿದ್ದೇವೆಂದು ನಂಬಿದವರಲ್ಲಿ ನಾನೊಬ್ಬ. ಅದೇನೆಂದರೆ, ಅಮೆರಿಕದವರಿಗೆ ನಮ್ಮ ಸಂಸ್ಕೃತಿಯ ಪರಿಚಯ ಮಾಡಿಕೊಡುವುದು. ನಾನಿಲ್ಲಿ ನಮ್ಮ ಶ್ರೀಮಂತ ಕನ್ನಡ ಸಾಹಿತ್ಯದ ಅರಿವನ್ನು ಪಾಶ್ಚಾತ್ಯರಿಗೆ ಮಾಡಿಕೊಡುವ ಕರ್ತವ್ಯದ ವಿಚಾರ ಹೇಳಬಯಸುತ್ತಿದ್ದೇನೆ. ಸಾಹಿತ್ಯ ಒಂದು ಜನಾಂಗದ ಮುಖವಾಡ. ಕನ್ನಡ ಸಾಹಿತ್ಯದ ಪರಿಚಯ ಪಾಶ್ಚಾತ್ಯರಿಗೆ ಇತ್ತೀಚೆಗೆ ಆಗುತ್ತಿದ್ದರೂ, ಆ ನಿಟ್ಟಿನಲ್ಲಿ ಇನ್ನೂ ಹೆಚ್ಚಿನ ಪ್ರಯತ್ನವಾಗಬೇಕಾಗಿದೆ. ಅದಕ್ಕಾಗಿ ಅಮೆರಿಕದಲ್ಲೊಂದು ಕನ್ನಡ ಅಧ್ಯಯನ ಕೇಂದ್ರ ಸ್ಥಾಪನೆಯಾಗಬೇಕೆಂದು ನಾನು ಬಲವಾಗಿ ನಂಬಿರುತ್ತೇನೆ. ಆ ಬಗ್ಗೆ ಪ್ರಯತ್ನಗಳನ್ನು ಇನ್ನಷ್ಟು ಚುರುಕುಗಳಿಸಬೇಕೆಂಬುದು ನನ್ನ ಅನಿಸಿಕೆ. ಹಿಂದೆ ಅಯೊವಾ ಯುನಿವರ್ಸಿಟಿ-ಯಲ್ಲೊಂದು ಕನ್ನಡ ಪೀಠ ಸ್ಥಾಪಿಸಬೇಕೆಂಬ ಪ್ರಯತ್ನ ನಡೆದಿದ್ದು, ಅದು ವಿಫಲವಾದುದರ ಬಗ್ಗೆ ಒಂದೆರಡು ಮಾತುಗಳು:

ಯು. ಆರ್. ಅನಂತಮೂರ್ತಿಯವರು ೮೦ರ ದಶಕದ ಕೊನೆಯಲ್ಲಿ ಅಯೋವಾಗೆ ಬಂದಾಗ, ಅಲ್ಲಿಯ ಯುನಿವರ್ಸಿಟಿಯ ಹಲವು ಪ್ರಾಧ್ಯಾಪಕರ ಸಹಕಾರದಿಂದ, ಆ ಯುನಿವರ್ಸಿಟಿಯಲ್ಲಿ ಒಂದು ಕನ್ನಡ ಪೀಠವನ್ನು ರಚಿಸಲೆಂದು, ಒಂದು ಯೋಜನೆಯನ್ನು ತಯಾರಿಸಿದ್ದರು. ಆ ಬಗ್ಗೆ ಅವರು ವಾಷಿಂಗ್‌ಟನ್‌ಗೆ ಭೇಟಿ ಕೊಟ್ಟಾಗ, ಅಲ್ಲಿಯ ಕನ್ನಡ ಬಂಧುಗಳ ಮುಂದೆ ತಮ್ಮ ಯೋಜನೆಯನ್ನು ವಿವರಿಸಿದರು. ಅಕಸ್ಮಾತ್ ನಾನೂ ಆ ಸಭೆಯಲ್ಲಿ ಹಾಜರಿದ್ದೆ. ಅವರ ಯೋಜನೆಯಿಂದ ಸ್ಫೂರ್ತಿಗೊಂಡ ಕನ್ನಡಿಗರು, ಪೀಠ ಸ್ಥಾಪನೆಗೆ ಹಣ ಕೂಡಲು, ಒಂದು ಸಮಿತಿಯನ್ನು ರಚಿಸಿದರು. ಆ ಸಮಿತಿಯ ಅಧ್ಯಕ್ಷರಾಗಿ ವಾಷಿಂಗ್‌ಟನ್ ವಲಯದ ಸಿದ್ದಲಿಂಗಯ್ಯನವರನ್ನು ಆರಿಸಲಾಯ್ತು. ಆ ಸಮಿತಿಗೆ ನಾನೂ ಒಬ್ಬ ಸದಸ್ಯನಾಗಿ ಆರಿಸಲ್ಪಟ್ಟೆ. ಯೋಜನೆಯನ್ನು ಕಾರ್ಯಗತ ಮಾಡಲು ಬೇಕಾದ ಒಂದೂ ಕಾಲು ಮಿಲಿಯ ಡಾಲರುಗಳನ್ನು ಎತ್ತುವುದು ಕಷ್ಟವೆಂದು ತೋರಿದರೂ, ಸಾಧಿಸಬಹುದೆಂಬ ಉತ್ಸುಕತೆಯಿಂದ ಸಮಿತಿಯವರು ಹುರುಪಿನಿಂದ ಹಣದ ವಂತಿಗೆಗೆ ಪ್ರಯತ್ನ ನಡೆಸಿದರು. ದೇಶದಾದ್ಯಂತ ಮತ್ತು ಕೆನಡಾದಲ್ಲೂ ನೆಲೆಸಿದ ಹಲವು ಕನ್ನಡಾಭಿಮಾನಿಗಳನ್ನು ಈ ಸಮಿತಿಯಲ್ಲಿ ಸೇರಿಸಿಕೊಳ್ಳಲಾಯ್ತು. ಇದು ಕನ್ನಡತನ ಇಲ್ಲಿ ಬೇರೂರಿ ಬೆಳೆಯುವಂತೆ ಮಾಡಿದ ಪ್ರಯತ್ನದಲ್ಲಿ ಒಂದು ಚಾರಿತ್ರಿಕ ಘಟನೆಯೆಂದು ಹೇಳಬಹುದು.

೧೯೮೭ರಲ್ಲಿ, ಅಂದಿನ ಕರ್ನಾಟಕ ಮುಖ್ಯ ಮಂತ್ರಿ ರಾಮಕೃಷ್ಣ ಹೆಗಡೆಯವರು ಅಮೆರಿಕ ಸಂದರ್ಶಿಸಿದ್ದು, ಅಯೋವ ಯುನಿವರ್ಸಿಟಿಯ ಪ್ರಾಧ್ಯಾಪಕರಾದ ಶೆಲ್ಡನ್ ಪೋಲಕ್, ಪಾಲ್ ಗ್ರೀನೊ, ಮುಂತಾದವರನ್ನು ಭೇಟಿಯಾಗಲು ಶಿಕಾಗೋವನ್ನು ಸಂದರ್ಶಿಸಿದ್ದರು. ಕನ್ನಡ ಪೀಠ ಸ್ಥಾಪಿಸುವ ಯೋಜನೆಯನ್ನು ಸಮರ್ಥಿಸುವ ಹೆಗಡೆಯವರು, ಈ ಬಗ್ಗೆ ಕರ್ನಾಟಕ ಸರಕಾರದದಿಂದ ಹಣ ಸಹಾಯ ದೊರಕಿಸುವ ಭರವಸೆಯನ್ನು ಕೊಟ್ಟಿದ್ದರು. ಈ ಸಂದರ್ಭದಲ್ಲಿ ಅವರ ಪ್ರಯತ್ನದಿಂದಾಗಿ, ಕಾಶೀ ಹಿಂದೂ ವಿಶ್ವವಿದ್ಯಾಲಯದಲ್ಲಿ, ಕನ್ನಡ ಬೋಧನೆಗೆ ಸರಕಾರದ ನೆರವು ನೀಡಿದುದನ್ನು ಜ್ಞಾಪಿಸಿಕೊಳ್ಳಬಹುದು. ಅಂಥದೇ ಯೋಜನೆ ಸರಕಾರದ ಆಶ್ರಯದಲ್ಲಿ, ದೇಶದ ಹೊರಗೆ, ಅಮೆರಿಕದಲ್ಲಿ, ಕಾರ್ಯಗತವಾಗುವಲ್ಲಿ, ಹೆಗಡೆಯವರು ಬೆಂಬಲವಿತ್ತಿದ್ದರು. ಸಾಕಷ್ಟು ಧನ ಸಹಾಯ ಕರ್ನಾಟಕ ಸರಕಾರ ಮಾಡುವುದೆಂದೂ, ಕಡಿಮೆ ಬಿದ್ದ ಹಣವನ್ನು ಅಮೆರಿಕದ ಕನ್ನಡಿಗರು ವಂತಿಗೆ ಎತ್ತಬೇಕೆಂದೂ ನಿಶ್ಚಯವಾಗಿತ್ತು. ಈ ಮೀಟಿಂಗಿನಲ್ಲಿ, ವಾಷಿಂಗ್‌ಟನ್‌ನಿಂದ ಸಿದ್ದಲಿಂಗಯ್ಯನವರೂ, ಶಿಕಾಗೋ ಯುನಿವರ್ಸಿಟಿಯಿಂದ ರಾಮಾನುಜನ್, ಅಯೋವಾದಿಂದ ಪೋಲಕ್, ಗ್ರೀನೋ, ಫಿಲಿಪ್ ಲಟ್ಗಂಡಾರ್ಫ್, ಮತ್ತು ಮೈಕಲ್ ನ್ಯೂ ಮುಂತಾದವರು ಹಾಜರಿದ್ದರು. ಈ ಮೀಟಿಂಗ್ ನಡೆಸಲು ನಾನು ಇಲ್ಲಿಯ ಕಾನ್ಸುಲೇಟ್ ಆಫೀಸಿನವರನ್ನು ಸಂಪರ್ಕಿಸಿ, ಎಲ್ಲ ಏರ್ಪಾಡನ್ನು ಮಾಡಿದ್ದೆ. ನಾನೂ ಆ ಮೀಟಿಂಗಿನಲ್ಲಿ ಹಾಜರಿದ್ದೆನೆನ್ನಿ!

ಆದರೆ, ಹೆಗಡೆಯವರು ಭಾರತಕ್ಕೆ ಮರಳಿದ ಮೇಲೆ, ಕಾರಣಾಂತರದಿಂದ ಆ ಯೋಜನೆ ಅಂದರೆ, ಕರ್ನಾಟಕ ಸರಕಾರದಿಂದ ಹಣ ಸಹಾಯ ಸಿಗುವುದು ಕಷ್ಟವಾಯ್ತು. ಭಾರತ ಸರಕಾರದವರೂ ಆ ಬಗ್ಗೆ ಸಹಾನುಭೂತಿಯನ್ನು ವ್ಯಕ್ತಪಡಿಸದೇ, ತಡೆ ಹಾಕಿದರು. ಹಾಗಾಗಿ ಒಂದೂಕಾಲು ಮಿಲಿಯ ಡಾಲರನ್ನು ಕೂಡುವ ಜವಾಬ್ದಾರಿ ಎಲ್ಲವೂ ಅಮೆರಿಕದ ಕನ್ನಡಿಗರ ಮೇಲೆ ಬಿದ್ದಿತು. ಮನಸ್ಸು ಬಿಚ್ಚಿದಲ್ಲಿ, ಇದೇನೂ ನಡೆಸಲಾಗದ ಕೆಲಸವೇನೂ ಅಲ್ಲ. ದೇವಸ್ಥಾನಗಳ ಸ್ಥಾಪನೆಗೆ, ಕನ್ನಡಿಗರು ಉದಾರ ಧನಸಹಾಯ ಮಾಡಿದ್ದಾರೆ. ಹಾಗೆಯೇ ಪೀಠದ ಸ್ಥಾಪನೆಯಲ್ಲೂ, ಅಮೆರಿಕದಲ್ಲಿ ಕನ್ನಡತನ ಬೆಳೆಸುವುದಕ್ಕೂ, ಅಂತಹದೇ ಉದಾರತ್ವ ಫಲಿಸಬಹುದಾಗಿತ್ತು. ಆದರೆ, ಹಾಗಾಗದಿದ್ದುದು ಶೋಚನೀಯ. ಕನ್ನಡ ಪೀಠದ ಸ್ಥಾಪನೆಯ ಮಹತ್ವವನ್ನು ಕನ್ನಡಿಗರು ಅರಿಯದೇ ಹೋದರು. ಈ ಮಧ್ಯೆ, ಅಯೋವಾ ಒಂದು ಕೇಂದ್ರ ಸ್ಥಾನವಲ್ಲ; ಅದಕ್ಕಿಂತಲೂ ನ್ಯೂಯಾರ್ಕ್‌ನ ಕೊಲಂಬಿಯಾ, ಸ್ಯಾನ್‌ಫ್ರಾಸಿಸ್ಕೋ, ಶಿಕಾಗೋದಂತಹ ಕಡೆಗಳಲ್ಲಿ ಸಾಕಷ್ಟು ಸೌತ್ ಏಷ್ಯನ್ ಸ್ಟಡೀಸ್ ಬಗ್ಗೆ ಅಧ್ಯಯನಗಳು ನಡೆಯುತ್ತಿದ್ದುದರಿಂದ, ಅಲ್ಲಿಯ ಯುನಿವರ್ಸಿಟಿಗಳೊಂದರಲ್ಲಿ ಪೀಠ ಸ್ಥಾಪನೆಯಾಗಬೇಕೆಂಬ ಕೂಗೂ ಕೇಳಿಬರುತ್ತಿತ್ತು. ಅಲ್ಲದೆ, ಒಂದೂ ಕಾಲು ಮಿಲಿಯ ಡಾಲರಿಗಿಂತಲೂ ಕಡಿಮೆ ಹಣ ಬಳಸುವ ಯೋಜನೆಯನ್ನೂ, ಅಂತಹ ಯುನಿವರ್ಸಿಟಿಯನ್ನೂ ಆರಿಸಬೇಕೆಂಬ

ಕೋರಿಕೆಯೂ ಕೇಳಿಬಂತು. ಸಮಿತಿಯ ಸದಸ್ಯರಲ್ಲಿ ಅನೇಕರು ಉದಾಸೀನ ಭಾವನೆಯನ್ನು ತಾಳಿದುದೂ ವಿಷಾದಕರ. ಅಲ್ಲದೆ, ದೇಶದ ಎಲ್ಲ ಕಡೆಗಳಲ್ಲೂ ಸಾಕಷ್ಟು ಪ್ರಚಾರವಾಗದೇ (ಸಮಿತಿಯಲ್ಲಿ ಎಲ್ಲ ಪ್ರದೇಶಗಳನ್ನು ಪ್ರತಿನಿಧಿಸುವ ಮೆಂಬರುಗಳಿದ್ದರೂ), ಕೆಲವು ಪ್ರದೇಶದವರು ಉತ್ಸಾಹ ತೋರಿಸದಿದ್ದುದರಿಂದ, ಪೀಠದ ಯೋಜನೆಗೆ ಅಡ್ಡಿ ಬಂದಿತು. ಈ ಎಲ್ಲ ಕಾರಣಗಳಿಂದಾಗಿ, ಬೇಕಾದ ಒಂದೂ ಕಾಲು ಮಿಲಿಯ ಡಾಲರುಗಳನ್ನು ಎತ್ತುವುದು ತೀರ ಅಸಂಭವವೆಂದೆನಿಸಿತು. ಆದರೂ, ಕೆಲವು ಕನ್ನಡಿಗರು ಉದಾರತ್ವವನ್ನು ಪ್ರದರ್ಶಿಸಿ, ಪ್ರಾಯಶಃ ಸುಮಾರು ೧,೪೦,೦೦೦ – ೧,೪೫,೦೦೦ ಡಾಲರ್ ವಂತಿಗೆ ಎತ್ತಲು ಸಾಧ್ಯವಾಯ್ತೆಂದು ನನ್ನ ನಂಬಿಕೆ. ಅಯೋವಾದವರು, ೧೦ ವರ್ಷದ ಅವಧಿಗೆ, ಬೇಕಾಗುವ ಹಣ ವಂತಿಗೆ ಎತ್ತುವುದಕ್ಕಾಗಿ ಕೊಟ್ಟಿದ್ದರು. ಆದರೆ, ಕನ್ನಡಿಗರ ನಿರುತ್ಸಾಹವನ್ನು ಗಮನಿಸಿ, ಪೀಠ ಸ್ಥಾಪನೆಯ ಯೋಜನೆಯ ಕೈ ಬಿಡಬೇಕಾಗಿ ಬಂತು.

ಆದರೆ, ವಂತಿಗೆಯಾದ ಹಣದಿಂದ, 'ಪೀಠ'ವೆಂಬ ನಾಮಕರಣವನ್ನು ತೆಗೆದು, 'U. R. Ananathamurthy Fund for Kannada Culture' ಎಂದು ಬದಲಾಯಿಸಿ, ಕಡಿಮೆ ಪ್ರಮಾಣದಲ್ಲಿ ಕನ್ನಡ ಸಂಸ್ಕೃತಿಯ ಬಗ್ಗೆ ಕೆಲಸ ನಡೆಯುವ ಏರ್ಪಾಡಾಗಿದೆ. ಈ ರೀತಿ ಹೆಸರು ಬದಲಾಯಿಸುವ ಮೊದಲು, ಧನ ಸಹಾಯ ಮಾಡಿದ ಕನ್ನಡಿಗರೊಂದಿಗೆ ಈ ವಿಷಯವನ್ನು ಅಯೋವಾದವರು ಹಂಚಿಕೊಂಡಿರಲಿಲ್ಲದುದು ವಿಷಾದಕರ ಸಂಗತಿ. ಆ ಬಗ್ಗೆ ಕೆಲವರು ಅನಂತಮೂರ್ತಿಯವರನ್ನು ದೂರಿಯೂ ಇದ್ದರು, ಇದರಲ್ಲಿ (ಹೆಸರು ಬದಲಾವಣೆಯಲ್ಲಿ) ಅವರ ಕೈವಾಡವಿದ್ದಿತ್ತೆಂದು. ಆದರೆ, ನಿಜಕ್ಕೂ, ಅನಂತಮೂರ್ತಿಯವರಿಗೆ ಈ ವಿಚಾರ ತಿಳಿದುದು ಎಷ್ಟೋ ದಿನಗಳ ಮೇಲೆ. ಅಂದರೆ, ಅವರಿಗೂ, ಅಯೋವಾದವರು ಮುಂದಾಗಿ ಸೂಚನೆ ಕೊಟ್ಟದ್ದೂ ಇಲ್ಲ. ಹೆಸರು ಬದಲಾವಣೆಯಾದುದರ ಬಗ್ಗೆ ಕೆಲವು ಅಮೆರಿಕನ್ನಡ 'ಮುಖಂಡರು' (ಧನಸಹಾಯ ಮಾಡದಿದ್ದವರೂ), ಬಹಳಷ್ಟು ತಕರಾರು ಮಾಡಿದ್ದರು.

ಇನ್ನು ಕೆಲವು ವಲಯದಲ್ಲಿ, ಪೀಠದ ಅವಶ್ಯಕತೆಯ ಬಗ್ಗೆ ವಿವಾದವೂ ಕೇಳಿ ಬರುತ್ತಿದೆ. 'ಕನ್ನಡತನ ಅಮೆರಿಕದಲ್ಲಿ ಬೆಳೆಯಬೇಕಾದರೆ, ಇಲ್ಲಿ ಹುಟ್ಟಿ, ಬೆಳೆದ ಕನ್ನಡಿಗ ಮಕ್ಕಳಿಗೆ ಕನ್ನಡ ಬೋಧನೆಯಿಂದ ಪ್ರಾರಂಭವಾಗಬೇಕು. ಆಮೇಲೆಯೇ, ವಿಶ್ವವಿದ್ಯಾಲಯ ಮಟ್ಟದಲ್ಲಿ ಅದು ಸ್ಥಾಪನೆಯಾಗಬೇಕು. ಪೀಠದ ಯೋಜನೆ, 'ಬುಡವನ್ನು ಬಲ ಮಾಡಿಕೊಳ್ಳುವ ಮೊದಲೇ ಅರಮನೆಯನ್ನು ಕಲ್ಪಿಸಿಕೊಂಡಂತೆ' ಎಂಬುದು ಹಲವರ ವಾದ. ಇದರಲ್ಲಿ ತಿರುಳಿಲ್ಲವೆಂದಲ್ಲ. ಆದರೆ ಈ ಎರಡು ಯೋಜನೆಗಳಲ್ಲಿ ಕಂಡು ಬರುವ ವ್ಯತ್ಯಾಸವನ್ನು ಗಮನಿಸಬೇಕು. ಮೊದಲನೆಯ ಯೋಜನೆ – ಕನ್ನಡಿಗ ಮಕ್ಕಳಿಗೆ ಕನ್ನಡ ಬೋಧನೆ – ನಮ್ಮಲ್ಲಿಯೇ ಕನ್ನಡ ಭಾಷೆ ಉಳಿಸಿಕೊಳ್ಳುವ ಯೋಜನೆ. ಆದರೆ, ಕನ್ನಡ ಪೀಠ ಸ್ಥಾಪನೆ ಇಲ್ಲಿ ಕನ್ನಡ ಸಂಸ್ಕೃತಿ ಮತ್ತು ಕನ್ನಡ ಭಾಷೆಯ

ಕಂಪನ್ನು ಹರಡುವ ಯೋಜನೆ. ಅದರಿಂದ, ನಮ್ಮ ಕನ್ನಡ ಸಾಹಿತ್ಯವನ್ನು ಪಾಶ್ಚಾತ್ಯರ ಗಮನಕ್ಕೆ ಭಾಷಾಂತರದ ಮೂಲಕ ತಂದು ಕೊಡಬಹುದು. ನಮ್ಮ ಸಾಹಿತ್ಯದ ಹಿರಿಮೆ ಅಮೆರಿಕದಲ್ಲಿ ಹಬ್ಬುವುದು ಎಂಬ ಒಂದು ಹೆಮ್ಮೆಯ ಯೋಜನೆ ಇದು. ಅಯೋವಾದಲ್ಲಿ ಸಮರ್ಥ ಭಾಷಾಂತರ ವಿಭಾಗವೇ ಇದ್ದುದರಿಂದ ಈ ಯೋಜನೆಗೆ ಅನುಕೂಲವಾಗುತ್ತಿತ್ತು. ಇದನ್ನು ಗಮನಿಸಿ, ಅನಂತಮೂರ್ತಿಯವರು ಅಯೋವಾದಲ್ಲಿ ಪೀಠ ಸ್ಥಾಪನೆಗೆ ಬೆಂಬಲವಿತ್ತುದು. ಇಂಗ್ಲಿಷ್ ಸಾಹಿತ್ಯದಲ್ಲಿ, ಶೇಕ್ಸ್‌ಪಿಯರ್, ಟೆನಿಸನ್, ವರ್ಡ್ಸ್‌ವರ್ತ್, ಏಟ್ಸ್, ಕೀಟ್ಸ್, ಮಿಲ್ಟನ್, ಕೂಲ್‌ರಿಜ್ ಮುಂತಾದವರು ಇದ್ದಂತೆಯೇ, ಕನ್ನಡದಲ್ಲಿಯೂ ಪಂಪ, ರನ್ನ ಜನ್ನ, ಕುಮಾರವ್ಯಾಸ ಮೊದಲಾದ ಹಲವು ದಿಗ್ಗಜರೂ ಇದ್ದಾರೆ. ಅವರ ಸಾಹಿತ್ಯವೂ ಇಂಗ್ಲಿಷ್ ಸಾಹಿತ್ಯಕ್ಕೇನೂ ಕಮ್ಮಿ ಇಲ್ಲ. ನಾನು ಹಿಂದೆ ಓದಿದ ಜನ್ನನ 'ಯಶೋಧರ ಚರಿತೆ'ಯ ನೆನಪಾದಾಗಲೆಲ್ಲ, ಕೂಲ್‌ರಿಜ್ ಬರೆದ 'Rhyme of the Ancient Mariner' ಎಂಬ ಕಾವ್ಯದ ಜ್ಞಾಪಕ ಬರುತ್ತಿದೆ. ಅದೃಷ್ಟವಶಾತ್, ಇವೆರಡನ್ನೂ ನಾನು ನನ್ನ ಡಿಗ್ರಿ ಕ್ಲಾಸಿನಲ್ಲಿ ಓದುವ ಅವಕಾಶ ದೊರಕಿತ್ತು. ಹಾಗಾಗಿ ಇವೆರಡನ್ನೂ ಹೋಲಿಸುವ ಅವಕಾಶ ಸಿಕ್ಕಿತ್ತೆನ್ನಿ. ಯಶೋಧರ ಚರಿತೆಯಂತೆ, ಕೋಲ್ರಿಜ್ ಬರೆದ ಕಾವ್ಯದಲ್ಲೂ ಪಾಪಕ್ಕೆ ತಕ್ಕ ಪ್ರಾಯಶ್ಚಿತ್ತ ಪಡೆಯುವ ಸನ್ನಿವೇಶಗಳಿವೆ. ಇಲ್ಲಿ ನನ್ನ ಸ್ಮರಣೆಯಲ್ಲುಳಿದ ಒಂದೇ ಒಂದು ಉದಾಹರಣೆಯನ್ನು ಕೊಟ್ಟಿದ್ದೇನೆ. ಇದರಂತೆ, ಹಲವಾರು ಕನ್ನಡ ಕಾವ್ಯಗಳನ್ನು ಇಂಗ್ಲಿಷ್ ಕಾವ್ಯಗಳೊಡನೆ ಹೋಲಿಸಬಹುದೇನೋ! ಇಲ್ಲಿ ನಾನು ಹೇಳ ಬಯಸುತ್ತಿರುವುದೇನೆಂದರೆ: ಜನ್ನನ 'ಯಶೋಧರ ಚರಿತೆ'ಯಂತಹ ಮಹಾಕಾವ್ಯಗಳನ್ನು, ಇಂಗ್ಲಿಷ್‌ಗೆ ಅನುವಾದಿಸಿದಾಗ, ಭಾರತೀಯ ಸಂಸ್ಕೃತಿಯ ಅರಿವು ಮಾಡಿಕೊಡುವುದರ ಜತೆಗೆ, ಕನ್ನಡ ಕವಿವರ್ಯರ ಅದ್ಭುತ ಸಾಹಿತ್ಯ ಶಕ್ತಿಯನ್ನೂ ವಿದೇಶಿಯರಿಗೆ ಪರಿಚಯ ಮಾಡಿಕೊಟ್ಟಂತಾಗುವುದು. ಈ ಸಂದರ್ಭದಲ್ಲಿ, ಕನ್ನಡದ 'ನವೋದಯ' ಸಾಹಿತ್ಯಕ್ಕೆ ಬುನಾದಿ ಹಾಕಿದ ಬಿಎಂಶ್ರೀಯವರನ್ನು ನೆನೆಯಬಹುದು. ಅವರು ಇಂಗ್ಲಿಷ್‌ನ ಹಲವು ಕವನಗಳನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ಈಗ ಅದರ 'ಉಲ್ಟಾ' ಪ್ರಯತ್ನ ನಡೆಯಬೇಕಾಗಿದೆ. ಈ ಕಾರ್ಯದಲ್ಲಿ ವಿಶ್ವವಿದ್ಯಾಲಯಮಟ್ಟದಲ್ಲಿ ಕೆಲಸ ನಡೆದಲ್ಲಿ, ಅಂತಹ ಪ್ರಯತ್ನಗಳು ಫಲಿಸುವ ಸಾಧ್ಯತೆ ಜಾಸ್ತಿ ಎಂದೇ ನಾನು ನಂಬಿರುತ್ತೇನೆ. ಅದಕ್ಕೆಂದೇ, ಅಮೆರಿಕದ ಯಾವುದಾದರೊಂದು ಯುನಿವರ್ಸಿಟಿಯಲ್ಲಿ ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿಯ ಮೇಲಣ ಅಧ್ಯಯನದ ವಿಭಾಗವನ್ನು ಪ್ರಾರಂಭಿಸುವ ಅಗತ್ಯವಿದೆ. ನ್ಯೂಯಾರ್ಕ್‌ನಲ್ಲಿ ಕನ್ನಡಿಗರೇ ಆದ ಶ್ರೀಧರರು, SUNYಯ ಸೆಂಟರ್ ಫಾರ್ ಇಂಡಿಯನ್ ಸ್ಟಡೀಸ್ ವಿಭಾಗದ ನಿರ್ದೇಶಕರಾಗಿದ್ದು, ಅವರೂ ಇಂತಹ ಯೋಜನೆಯ ಬಗ್ಗೆ ಬಹಳಷ್ಟು ಆಸಕ್ತಿ ವ್ಯಕ್ತಪಡಿಸಿದ್ದಾರೆ. ಕನ್ನಡ ಅಧ್ಯಯನ ಕೇಂದ್ರ ಸ್ಥಾಪನೆಯಾಗುವ ಈ ಯೋಜನೆ ಫಲಿಸಿದಲ್ಲಿ, ನಾವಿಲ್ಲಿಗೆ ವಲಸೆ ಬಂದುದಕ್ಕೆ ಅಮೆರಿಕಕ್ಕೆ ಕೊಡುವ ಒಂದು ಉತ್ತಮ ಕೊಡುಗೆಯಾದೀತೆಂದು ನಂಬಿದ್ದೇನೆ. ಹೇಗಾದರೂ,

ಅಮೆರಿಕದ ಒಂದು ಯುನಿವರ್ಸಿಟಿಯಲ್ಲಿ ಅಧ್ಯಯನ ಕೇಂದ್ರವೊಂದು ಸ್ಥಾಪನೆಯಾಗುವ ಕನ್ನಡಿಗರ ಆಸೆ ಕಾರ್ಯಗತವಾಗಲಿ ಎಂದು ಹಾರೈಸೋಣ!

ಕನ್ನಡ ಕೂಟಗಳನ್ನು ನಮ್ಮ ಮಾನಸಿಕ ನೆಮ್ಮದಿಗೆಂದು ಪ್ರಾರಂಭಿಸಿದ್ದೇವೆ. ಅದು ಬೆಳೆಯಬೇಕಾದಲ್ಲಿ, ಇಲ್ಲಿ ಹುಟ್ಟಿ, ಬೆಳೆದ ನಮ್ಮ ಮಕ್ಕಳ ಆಸಕ್ತಿ ಬಹಳ ಮುಖ್ಯ. ಊರಿದ ಬೀಜ, ಗಿಡವಾಗಿ, ಮರವಾಗಿ, ಹೂಬಿಟ್ಟು ಫಲ ಕೊಟ್ಟಾಗಲೇ ಅದಕ್ಕಾಗಿ ಪಟ್ಟ ಶ್ರಮಕ್ಕೊಂದು ಸಾರ್ಥಕ್ಯ. ಈ ಫಲವನ್ನು ಅನುಭವಿಸಬೇಕಾದವರು, ಇಲ್ಲಿ ಬೆಳೆಯುತ್ತಿರುವ ಎರಡನೆಯ, ಮೂರನೆಯ ಪೀಳಿಗೆಯವರು. ಅವರಿಗೆ ನಮ್ಮ ಸಂಸ್ಕೃತಿಯಲ್ಲಿ ಆಸಕ್ತಿ ಹುಟ್ಟುವಂತೆ ಮಾಡುವುದೂ, ಕನ್ನಡ ಸಂಸ್ಕೃತಿಯ ಸ್ಥಾಪನೆಯಷ್ಟೇ ಮಹತ್ವದ ಕೆಲಸ. ಕೆಲವೊಮ್ಮೆ, ಯುವಕರ ಗಮನವನ್ನು ಈ ಬಗ್ಗೆ ಸೆಳೆಯುವುದು ಕಷ್ಟವಾಗಿ ಕಂಡುಬರಬಹುದು. ಅದಕ್ಕಾಗಿಯೂ ಯುನಿವರ್ಸಿಟಿಯಲ್ಲಿ ಕನ್ನಡ ಅಧ್ಯಯನ ಪ್ರಾರಂಭಿಸುವುದು ಹಿತಕರ. ಯುವಕರ ಮನಸ್ಸಿನಲ್ಲಿ ತಮ್ಮ ಸಂಸ್ಕೃತಿ ಮತ್ತು ಭಾಷೆಯ ಮೇಲೆ ಅಭಿಮಾನ ಬರುವಂತೆ ಮಾಡಲು ಇಂತಹ ಯೋಜನೆಗಳು ಸಹಾಯ-ವಾಗಬಹುದೇನೋ! ಈ ವಿಷಯದಲ್ಲಿ ಹೆತ್ತವರ ಕರ್ತವ್ಯವೂ ಬಹಳ ಮುಖ್ಯವಾದುದು. ಮನೆಯಲ್ಲಿಯೇ ಮಕ್ಕಳಿಗೆ ತಮ್ಮ ಸಂಸ್ಕೃತಿಯ ಬಗ್ಗೆ ಅನುಭವ ಕೊಡುವುದು ಹಿರಿಯರ ಒಂದು ಮಹತ್ವ ಕರ್ತವ್ಯ. ನಾನು ಹಿಂದೆ ಹೇಳಿದಂತೆ, ಸಂಪರ್ಕವೇ ಈ ವಿಷಯದಲ್ಲಿ ಪ್ರಾಮುಖ್ಯತೆಯನ್ನು ಪಡೆಯುತ್ತದೆ. ಈ ಸಂಪರ್ಕವು ತೀವ್ರವಾದಷ್ಟೂ, ನಮ್ಮ ಪ್ರಯತ್ನಗಳ ಸಫಲತೆ ಹೆಚ್ಚುತ್ತದೆ. ಅವರ ಮನಸ್ಸಿನಲ್ಲಿ ನಮ್ಮ ಸಾಂಸ್ಕೃತಿಕ, ಧಾರ್ಮಿಕ ಹಿನ್ನೆಲೆಯನ್ನು ನಾವು ಕಲ್ಪಿಸಿ ಕೊಡಬೇಕು. ಭಾರತಕ್ಕೆ ಭೇಟಿ ಕೊಟ್ಟಾಗಲೆಲ್ಲ, ಚಾರಿತ್ರಿಕ ಸ್ಥಳಗಳನ್ನು ಭೇಟಿ ಮಾಡಿ, ಅವುಗಳ ಹಿನ್ನೆಲೆಯಾದ ನಮ್ಮ ಸಮೃದ್ಧ ಸಂಸ್ಕೃತಿಯನ್ನೂ ಅವರಿಗೆ ಅರಿವು ಮಾಡ ಕೊಡಬೇಕು. ಅಜ್ಜಿ-ತಾತಂದಿರ ಸಂಪರ್ಕ ಬೆಳೆಯುವಂತೆ ಮಾಡಬೇಕು.

ನಮ್ಮ ಸಾಹಿತ್ಯದ ಭಾಷಾನುವಾದ ಮಾಡುವಲ್ಲೂ ಕಿರಿಯರಿಗೆ ನಾವು ಸ್ಥಾನ ಕೊಡಬೇಕು. ಇಲ್ಲಿಯೇ ಬೆಳೆದ ಅವರಿಗೆ ಇಲ್ಲಿಯ 'ನುಡಿಕಟ್ಟು', 'ಆಡು ನುಡಿ'ಗಳ ಜ್ಞಾನವಿದೆ. ಭಾಷಾನುವಾದದಲ್ಲಿ ಇದು ಮುಖ್ಯವಾದುದು. ಅನುವಾದ ಮಾಡುವವರು, ನಮ್ಮ ಸಾಹಿತ್ಯದಲ್ಲಿ ಮೂಡಿ ಬಂದ ಭಾವವನ್ನು ಕಿರಿಯರಿಗೆ ವಿವರಿಸಿದಾಗ, ಭಾರತೀಯ ಸಂಸ್ಕೃತಿಯಲ್ಲಿ ಸ್ವಲ್ಪವಾದರೂ ಅನುಭವವಿರುವ ಕಿರಿಯರು ಸಮರ್ಥ ರೀತಿಯಲ್ಲಿ ಭಾಷಾನುವಾದದ ಜತೆಗೇ ಭಾವಾನುವಾದವನ್ನೂ ಮಾಡಲು ಶಕ್ತರಾಗಿರುತ್ತಾರೆ. ಆ ಬಗ್ಗೆ ನಾವು ನಮ್ಮ 'ಅಹಂ'ನ್ನು ನುಂಗಿಕೊಂಡು ನಮ್ಮ ಕಿರಿಯಯರ ಸಹಾಯ ತೆಗೆದುಕೊಳ್ಳ ಬೇಕಾಗಿದೆ. ಹೀಗೆ ಭಾಷಾನುವಾದ/ಭಾವಾನುವಾದ ಕೃತಿಗಳು ಪಾಶ್ಚಾತ್ಯರ ಗಮನ ಸೆಳೆಯುವುದಲ್ಲದೇ, ಕನ್ನಡ ಯುವಕರ ಗಮನವನ್ನೂ ನಮ್ಮ ಸಂಸ್ಕೃತಿಯ ಕಡೆ ಎಳೆದು, ಅವರ ಆಸಕ್ತಿಯನ್ನು ಕೆರಳುವುದಕ್ಕೂ ಸಹಾಯವಾಗುವುದು.

ಹಿಂದಿನ ಪುಟದಲ್ಲಿ 'ಅಕ್ಕ' ಸಂಸ್ಥೆಯ ಬಗ್ಗೆ ನನ್ನ ಅನಿಸಿಕೆಯನ್ನು ವ್ಯಕ್ತ ಪಡಿಸುವೆನೆಂದಿದ್ದೆ. ಡಿಟ್ರಾಯ್ಟ್ ಕನ್ನಡಿಗರು ಕೂಟವನ್ನು ಸ್ಥಾಪಿಸುವಾಗಲೇ ಮೂಡಿ ಬಂದ 'ಕೇಂದ್ರ-ಶಾಖೆ'ಗಳೆಂಬ ಕಲ್ಪನೆ ಕಾರ್ಯಗತವಾಗದಿದ್ದುದು ವಿಷಾದವೇ. ಕೂಟದ ಸ್ಥಾಪನೆಯಾದಾಗ ಕೇಂದ್ರದ ನಿಯೋಜಿತ ಪಾತ್ರವೇನು ಎಂಬುದು ನಿರ್ದಿಷ್ಟವಾದಂತಿರಲಿಲ್ಲ. ಕನ್ನಡ ಕೂಟಗಳು ಬೇರೆ ಬೇರೆ ನಗರಗಳಲ್ಲಿ ಸ್ಥಾಪಿತವಾದಂತೆಲ್ಲ, ಕೇಂದ್ರ-ಶಾಖೆಗಳ ಮಧ್ಯದ ನಿರ್ದಿಷ್ಟ ಸಂಬಂಧಗಳು ನಿಶ್ಚಯವಾಗದೇ, ಈ ಕೇಂದ್ರ-ಶಾಖೆಗಳೆಂಬ ಕಲ್ಪನೆ ಮುಂದುವರಿಯಲಾಗದೇ ಹೋಯ್ತು. ಇದೇನೂ ಹೊಸದಲ್ಲ. ನಾನು, AIA, ಇಲಿನಾಯ್ ಶಾಖೆಯಯ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿದ್ದಾಗ, ಕೇಂದ್ರ AIAನ ಅಧಿಕಾರಯುತ ನಿರ್ದೇಶನವು ಕೇಂದ್ರ-ಶಾಖೆಯೊಳಗೆ ತಿಕ್ಕಾಟಕ್ಕೆ ಕಾರಣವಾಗಿತ್ತು. ಹಿಂದೊಮ್ಮೆ, ನಾನೂ ಹರಿಹರೇಶ್ವರ ಮತ್ತು ಕೆಲವು ಗೆಳೆಯರು ಸೇರಿದಾಗ, ದೇಶದ ಎಲ್ಲ 'ಕನ್ನಡ ಕೂಟಗಳ ಒಕ್ಕೂಟ' ವೆಂಬ ಕಲ್ಪನೆಯನ್ನು ಕಾರ್ಯಗತಗೊಳಿಸಬೇಕೆಂಬುದರ ಬಗ್ಗೆ ಚರ್ಚಿಸಿದ್ದೆವು. ಆದರೆ, ವ್ಯವಹಾರಿಕ ಅಡಚಣೆಯನ್ನು ನಿರೀಕ್ಷಿಸಿ, ಆ ಬಗ್ಗೆ ಗಮನ ಕೊಡಲು ಸಾಧ್ಯವಾಗಿರಲಿಲ್ಲ. ೧೯೯೮ರಲ್ಲಿ ಫಿನಿಕ್ಸ್‌ನಲ್ಲಿ ಸೇರಿದ ಅಮೆರಿಕ ಕೂಟಗಳ ಒಂದು ಸಮ್ಮೇಳನದಲ್ಲಿ, 'ಅಕ್ಕ' (ಅಮೆರಿಕದ ಕನ್ನಡ ಕೂಟಗಳ ಆಗರ, AKKA) ಎಂಬ ಸಂಸ್ಥೆಯೊಂದು ಅಸ್ತಿತ್ವಕ್ಕೆ ಬಂತು. ಕಾರ್ಯಕಾರ್ಯ ಸಮಿತಿ ಮೊದಲಿಗೆ ನೇಮಕಗೊಂಡು, ಕ್ರಮೇಣ, ಚುನಾವಣೆಯ ಮೂಲಕ ಈ ಸಮಿತಿಗಳು ಸ್ಥಾಪಿತವಾದುವು. ೨೦೦೦ರಲ್ಲಿ ನಡೆದ ವಿಶ್ವಕನ್ನಡ ಸಮ್ಮೇಳನವು ಅಕ್ಕನ ಆಶ್ರಯದಲ್ಲಿ ನಡೆದಿದೆ ಎಂಬ ನಂಬಿಕೆಯೂ ಇದೆ. ಆದರೆ, ಈ ಸಮ್ಮೇಳನ ಮುಗಿದ ಮೇಲೆ ತಲೆದೋರಿದ ವಿವಾದಗಳು ಕನ್ನಡ ಸಂಘಟನೆಗೇ ಕಳಂಕಪ್ರಾಯವಾದುದು. ಡಿಟ್ರಾಯ್ಟ್‌ನಲ್ಲಿ ೨೦೦೨ರಲ್ಲಿ ನಡೆದ ಎರಡನೆಯ 'ಅಕ್ಕ' ಸಮ್ಮೇಳನದ ಸಂಭ್ರಮ ಮೊದಲ ಸಮ್ಮೇಳನದಷ್ಟಿರಲಿಲ್ಲ. ಫ್ಲೋರಿಡಾದಲ್ಲಿ ನಡೆದ ಸಮ್ಮೇಳನ, ಅಲ್ಲಿಯ ಚಂಡಮಾರುತ ದಿಂದಾದ ಅಡಚಣೆಯಾದರೂ, ಚೊಕ್ಕದಾಗಿ ನಡೆದಿತ್ತು. ಅಲ್ಲಿಯ ವೈಶಿಷ್ಟ್ಯವೆಂದರೆ, ಶ್ರೀ ಎಚ್. ಕೆ. ನಂಜುಂಡಸ್ವಾಮಿಯವರ ನೇತೃತ್ವದಲ್ಲಿ ನಡೆದ ಯಶಸ್ವಿ ಸಾಹಿತ್ಯ ಸಮ್ಮೇಳನ. ಮುಂದೆ ಎರಡು ವರ್ಷಕ್ಕೊಮ್ಮೆ ನಡೆದ ಎಲ್ಲ ಸಮ್ಮೇಳನಗಳೂ, ಕನ್ನಡಿಗರನ್ನು ಒಟ್ಟಿಗೆ ಸೇರಿಸುವ ಕೂಟವಾಯ್ತೆಂಬ ಅನಿಸಿಕೆ ನನ್ನದು. ಭಾರತದಿಂದ ಹಲವು ಕಲಾವಿದರನ್ನೂ, ಸಾಹಿತಿಗಳನ್ನೂ, ನಟ-ನಟಿಯರನ್ನೂ ಕರೆಸಿಕೊಂಡಿದ್ದರೂ, ಅಂಥವರ ವಿಶಿಷ್ಟ ಮಾಹಿತಿಗಳನ್ನು ಸಂಪೂರ್ಣ ಉಪಯೋಗಿಸಿಕೊಳ್ಳದೆ, ಅವುಗಳು ಬರಿಯ ಸಂಭ್ರಮದ 'ಮೇಳ'ಗಳಂತೆ ನಡೆಯಿತು.

'ಅಕ್ಕ'ದಂತಹ ದೊಡ್ಡ ಸಂಸ್ಥೆಯನ್ನು ನಡೆಸಿಕೊಂಡು ಹೋಗುವುದು ಸುಲಭದ ಕೆಲಸವೇನಲ್ಲ. ಆದರೆ, ಕನ್ನಡಿಗರಲ್ಲಿ ಒಗ್ಗಟ್ಟೆಂಬ ಗ್ರಹಿಕೆ ಇನ್ನೂ ಹೆಚ್ಚಾಗಬೇಕೆಂಬ ಅಭಿಪ್ರಾಯ ನನ್ನದು. ಅಲ್ಲಿನ ಪದಾಧಿಕಾರಿಗಳು, ಅಧಿಕಾರಕ್ಕಾಗಿ ಆ ಸಂಸ್ಥೆಯನ್ನು ಅಂಟಿಕೊಂಡಿದ್ದಾರೆಂಬ ಗ್ರಹಿಕೆ ಹಲವು ಕನ್ನಡಿಗರಲ್ಲಿದೆ. ಅಲ್ಲದೆ, ಆ ಪದಾಧಿಕಾರಿಗಳ

ಸ್ಥಾನಕ್ಕಾಗಿ ಪೈಪೋಟಿಗಳು ಉದ್ಭವವಾಗುತ್ತಿದೆ. ಯಾಕೋ ಹಲವರ ಮನಸ್ಸಿನಲ್ಲಿ, ಸಮ್ಮೇಳನಕ್ಕೆ ಆಮಂತ್ರಿತರಾದ ಮಂತ್ರಿ, ಕಲಾವಿದರೊಡನೆ ತಮ್ಮನ್ನು ಗುರುತಿಸಿಕೊಂಡು, ತಮ್ಮ ಸ್ವಾರ್ಥವನ್ನು ಈಡೇರಿಸಿಕೊಳ್ಳುವ ಉದ್ದೇಶ ಇಂತಹ ಪದಾಧಿಕಾರಿಗಳದ್ದು – ಎಂಬ ಕಲ್ಪನೆ ಮೂಡಿದೆ. ಡಿಟ್ರಾಯ್ಟ್ ಸಮ್ಮೇಳನದ ಸಮಯ ಹಲವು ರೀತಿಯ 'ಕಚ್ಚಾಟ' ಪ್ರಾರಂಭವಾಗಿದ್ದು, ಪರಿಣಾಮವಾಗಿ 'ಈ ಕವಿ' ಎಂಬ ಸಂಸ್ಥೆಯೊಂದು ಸ್ಥಾಪನೆಯಾಗಲು ಕಾರಣವಾಯ್ತು. ಆದರೆ, ಅಮೆರಿಕದಲ್ಲಿ ಇದರ ಚಟುವಟಿಕೆಗಳು ಸೀಮಿತವಾಗಿದ್ದು, ಭಾರತದಲ್ಲಿ ಇದರ ಹಲವು ಶಾಖೆಗಳು ಕಾರ್ಯ ಮಾಡುತ್ತಿವೆ ಎಂದು ಕೇಳಿದ್ದೇನೆ. ಇತ್ತೀಚೆಗೆ ೨೦೧೦ರಲ್ಲಿ, 'ನಾವಿಕ' ಎಂಬ ಸಂಸ್ಥೆಯೊಂದು ಇದೇ ಕಾರಣಕ್ಕಾಗಿ ಅಸ್ತಿತ್ವಕ್ಕೆ ಬರಲು ಕಾರಣವಾಯ್ತು. 'ಸಂಘಟನೆ' ಎಂಬ ಪವಿತ್ರ ಕಾನ್ಸೆಪ್ಟ್‌ಗೇ ಇಂಥ ವಿಭಜನೆ ಅವಮಾನಕರವಾದುದು! ಆದರೆ, ನಾವಿಕ ಸಂಸ್ಥೆಯೂ ಕನ್ನಡ ಸಂಸ್ಕೃತಿಯ ಬೆಳೆವಣಿಗೆಗೆ ಬಹಳಷ್ಟು ಪ್ರಯತ್ನಪಡುತ್ತಿದೆಯೆಂಬುದಂತೂ ನಿಜ! ಅಮೆರಿಕದ 'ಅಕ್ಕ' ಮತ್ತು 'ನಾವಿಕ' ಸಂಸ್ಥೆಗಳು ಒಂದನ್ನೊಂದು ಸಹಕರಿಸಿ, ಕನ್ನಡದ ಕೆಲಸವನ್ನು ಮುಂದುವರಿಸಬೇಕಾಗಿದೆ. 'ಒಗ್ಗಟ್ಟಿನಲ್ಲಿ ಬಲವಿದೆ' ಎಂಬುದು ಎಲ್ಲರಿಗೂ ತಿಳಿದ ವಿಚಾರ! ಕನ್ನಡ ಅಧ್ಯಯನ ಕೇಂದ್ರ ಸ್ಥಾಪಿಸುವುದರಲ್ಲಂತೂ ಈ ಎರಡು ಸಂಸ್ಥೆಗಳು ಒಮ್ಮತದಿಂದ ಕೆಲಸ ಮಾಡಬೇಕಾಗಿದೆ.

ನನ್ನ ಮನಸ್ಸಿನಲ್ಲಿ ಆಗಾಗ್ಗೆ ಏಳುತ್ತಿರುವ ಪ್ರಶ್ನೆ ಇದು: ಅಮೆರಿಕದಲ್ಲಿ ಕನ್ನಡತನ ಸ್ಥಾಪಿಸಿ, ಬೆಳೆಸಿಕೊಂಡು ಬರುವ ನಮ್ಮ ಪ್ರಯತ್ನಗಳು, ನಮ್ಮ 'ಸ್ವಾರ್ಥತೆ'ಯನ್ನು ಪೂರೈಸಿಕೊಳ್ಳಲೆಂದೇ? – ಎಂದು. ಈ ಬಗ್ಗೆ ನನ್ನಲ್ಲೇ ತಳ–ಮಳವಾಗುತ್ತಿದೆ. ಈ ತಳಮಳಕ್ಕೆ, ಪ್ರಾಯಶಃ, ಮುಖ್ಯ ಕಾರಣ, ನಾವು, ಮೊದಲಿನ ಪೀಳಿಗೆಯವವರು, ನಮ್ಮ ಕನಸುಗಳನ್ನು ನನಸಾಗುವಲ್ಲಿ ಮಾಡುವ ಪ್ರಯತ್ನಗಳಲ್ಲಿ ನಮ್ಮ ಮಕ್ಕಳ (ಎರಡನೆಯ ಮತ್ತು ಮೂರನೆಯ ಪೀಳಿಗೆ) ಕನಸುಗಳನ್ನು ಗಮನ ತಂದುಕೊಳ್ಳುತ್ತಿದ್ದೇವೆಯೇ? – ಎಂಬ ಪ್ರಶ್ನೆ ನನ್ನನ್ನು ಕಾಡುತ್ತಿದೆ. ನಮ್ಮ ಉದ್ದಿಶ್ಯ ಎಷ್ಟೇ ಆದರ್ಶವಾಗಿರಲಿ, ನಾವು ಬಳಸುವ ದಾರಿಯೂ ಅಷ್ಟೇ ಆದರ್ಶವಾಗಿಯೂ, ಚೆಲುವಾಗಿಯೂ, ಚೊಕ್ಕವಾಗಿಯೂ, ಎಲ್ಲರ ಅಭಿಪ್ರಾಯಗಳನ್ನೂ ಕೂಡಿಸಿಕೊಂಡೂ ಇರಬೇಕು. ಆಂಗ್ಲ ಕವಿ, ರಾಬರ್ಟ್ ಫ್ರಾಸ್ಟ್ ಹೇಳಿದಂತೆ, '...I have Promises to keep; Miles to go before I sleep; And miles to go before I sleep' ಸಮಯವೇನೋ ಅದರಷ್ಟಕ್ಕೆ ಜಾರುತ್ತಲೇ ಇದೆ; ಆಗಬೇಕಾದ ಕೆಲಸ ಬೆಟ್ಟದಷ್ಟಿವೆ. ಆ ಬಗ್ಗೆ ನಮ್ಮ ಗಮನವನ್ನು ತೀವ್ರತೆಗೊಳಿಸಬೇಕಾಗಿದೆ.

ಕನ್ನಡ ಸಾಹಿತ್ಯ ರಂಗ

ಇದುವರೆಗೆ ನಾವು ನೆಲಸಿದ ನಾಡಿನಲ್ಲಿ ಕನ್ನಡತನ ಸ್ಥಾಪಿಸಲು, ನಮ್ಮೆಲ್ಲರ ಕರ್ತವ್ಯ ಮತ್ತು ಸಾಧನೆಗಳ ವಿಚಾರವಾಗಿ ಸಾಕಷ್ಟು ವಿವರಗಳನ್ನು ವ್ಯಕ್ತಪಡಿಸಿದ್ದೇನೆ.

ಇಲ್ಲಿ, ಸಾಹಿತ್ಯಕ್ಕೆಂದೇ ಮೀಸಲಾಗಿಟ್ಟ 'ಕನ್ನಡ ಸಾಹಿತ್ಯ ರಂಗ'ದ ವಿಚಾರ ಸ್ವಲ್ಪ ಹೇಳಬಯಸುತ್ತೇನೆ. 'ಕನ್ನಡತನ' ಎಂದಾಗ ಸಾಹಿತ್ಯವೂ ಅದರಲ್ಲಿ ಸೇರಿಕೊಂಡಿದೆ ಎಂಬುದಂತೂ ನಿಜ. ಆದರೆ, 'ಕನ್ನಡ ಸಾಹಿತ್ಯ ರಂಗ' ಒಂದು ವಿಶಿಷ್ಟ ಸಂಘಟನೆಯಾದುದರಿಂದ, ಇಲ್ಲಿ ಅದನ್ನು ಪ್ರತ್ಯೇಕವಾಗಿ ಪ್ರಸ್ತಾಪಿಸಿದುದಕ್ಕೆ ಒಂದು ವಿಶೇಷ ಕಾರಣವಿದೆ. ಬೇರೆ ಎಲ್ಲ ಕನ್ನಡ ಸಂಘಟನೆಗಳಲ್ಲಿ – ಉದಾಹರಣೆಗೆ, ಅಕ್ಕ ಮತ್ತು ನಾವಿಕ ಸಮ್ಮೇಳನಗಳು, ಹಾಗೂ ವಿವಿಧ ಪ್ರಾದೇಶಿಕ ಕನ್ನಡ ಕೂಟಗಳು ಆಚರಿಸುವ ಸಮಾರಂಭಗಳು – ಸಾಂಸ್ಕೃತಿಕ ಕಾರ್ಯಕ್ರಮಗಳಿಗೇ ಪ್ರಾಮುಖ್ಯ ಸ್ಥಾನ. ಫ್ಲೋರಿಡಾದಲ್ಲಿ ನಡೆದ ಅಕ್ಕ ಮೂರನೆಯ ಸಮ್ಮೇಳನದಲ್ಲಿ ನಂಜುಂಡಸ್ವಾಮಿಯವರು ಮಾಡಿದ ಪ್ರಯತ್ನಗಳ ಬಗ್ಗೆ ಈ ಹಿಂದೆ ಪ್ರಸ್ತಾಪಿಸಿದ್ದೇನೆ. ಆದರೆ, ಅದಕ್ಕೂ ಹಿಂದೆ, ಅಂದರೆ, ೨೦೦೪ರ ಮೇ ತಿಂಗಳಲ್ಲಿ ಫಿಲಡೆಲ್ಫಿಯ ಸಮೀಪ ಜರುಗಿದ, ಕನ್ನಡ ಸಾಹಿತ್ಯ ರಂಗದ ಮೊದಲನೆಯ 'ವಸಂತೋತ್ಸವ'ದ ವಿವಿಧ ಸಾಹಿತ್ಯಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ ನಂಜುಂಡಸ್ವಾಮಿ ಅವರಿಗೆ, ಪ್ರಾಯಶಃ ಅಕ್ಕ ಸಮ್ಮೇಳನದಲ್ಲಿ ಸಾಹಿತ್ಯದ ಕುರಿತು ವಿಚಾರ ಸಂಕಿರಣಗಳನ್ನು ಏರ್ಪಡಿಸಲು ಉತ್ತೇಜನ ದೊರಕಿರಬಹುದೆಂದು ನಾನಿಲ್ಲಿ ಊಹಿಸುತ್ತಿದ್ದೇನೆ. ಪರಿಣಾಮವಾಗಿ, ಮುಂದೆ ನಡೆದ ಬೇರೆ ಅಕ್ಕ ಸಮ್ಮೇಳನಗಳಲ್ಲಿ ಸಾಹಿತ್ಯಕ್ಕೂ ಸಾಕಷ್ಟು ಪ್ರಾಶಸ್ತ್ಯ ದೊರಕಿತು.

೨೦೦೩ರ ಮಧ್ಯೆ, ಅಮೆರಿಕದಲ್ಲಿ ನೆಲೆಸಿದ ಕೆಲವು ಸಾಹಿತ್ಯಾಸಕ್ತರು ಸೇರಿ ಸಾಹಿತ್ಯಕ್ಕಾಗಿಯೇ ಮೀಸಲಾದ ಒಂದು ಸಂಘಟನೆಯನ್ನು ಸ್ಥಾಪಿಸಬೇಕೆಂಬ ಉದ್ದೇಶವನ್ನು ಕಾರ್ಯಗತ ಮಾಡಿದುದರ ಪರಿಣಾಮವಾಗಿ, 'ಕನ್ನಡ ಸಾಹಿತ್ಯ ರಂಗ' ಅಸ್ತಿತ್ವಕ್ಕೆ ಬಂತು. ಹಿಂದೆ ನಾನು, ಅಮೆರಿಕದಲ್ಲೊಂದು ಕನ್ನಡ 'ಬರಹಗಾರರ ಸಂಘ' ವನ್ನು ಸ್ಥಾಪಿಸಬೇಕೆಂಬ ಅಭಿಲಾಶೆಯನ್ನು ಹಲವು ಸಾಹಿತ್ಯಾಸಕ್ತರಲ್ಲಿ ಹಂಚಿಕೊಂಡಿದ್ದೆ. ಆದರೆ ಅದೇಕೋ ನನ್ನ ಕೋರಿಕೆಗೆ ಹೆಚ್ಚಿನ ಬೆಂಬಲ ಆಗ ಸಿಕ್ಕಿರಲಿಲ್ಲ. ಆದರೆ ಮುಂದೆ, ಡಿಟ್ರಾಯ್ಟ್‌ನಲ್ಲಿ ನಡೆದ, ಅಕ್ಕ ಎರಡನೆಯ ಸಮ್ಮೇಳನದಲ್ಲಿ ಶ್ರೀ ಎಚ್. ವೈ. ರಾಜಗೋಪಾಲ್ ಅವರು ಒಂದು ಹಸ್ತಪತ್ರಿಕೆಯನ್ನು ಹಂಚಿ, ಅದರಲ್ಲಿ ಸಾಹಿತ್ಯ ಸಂಘಟನೆಯ ಮಹತ್ವವನ್ನು ಪ್ರಸ್ತಾಪಿಸಿದ್ದರು. ನನ್ನ ಅಭಿಲಾಶೆಗೆ ಇದು ಪ್ರೋತ್ಸಾಹ ಪೂರಕವಾಗಿದ್ದು, ಪರಿಣಾಮವಾಗಿ ನಾವು ನಾಲ್ಕು ಕುಟುಂಬದವರು – ರಾಜಗೋಪಾಲ್–ವಿಮಲಾ, ಎಚ್. ಕೆ. ಚಂದ್ರಶೇಖರ್–ಶ್ರೀದೇವಿ, ನಾನು–ನನ್ನ ಧರ್ಮಪತ್ನಿ ಲಕ್ಷ್ಮಿ ಮತ್ತು ಎಚ್. ವಿ. ರಂಗಾಚಾರ್–ಪದ್ಮಾ – ನ್ಯೂಜೆರ್ಸಿಯಲ್ಲಿರುವ ಶ್ರೀ ರಂಗಾಚಾರ್–ಪದ್ಮಾರ ಮನೆಯಲ್ಲಿ ೨೦೦೩ರ, ಸುಮಾರು ಜೂನ್–ಜುಲೈ ಸಮಯ ಸೇರಿ, 'ಕನ್ನಡ ಸಾಹಿತ್ಯ ರಂಗ'ವೆಂಬ ಸಂಸ್ಥೆಗೆ ಬುನಾದಿ ಹಾಕಿದೆವು. ಅಂದು, ಶ್ರೀ ರಾಜಗೋಪಾಲ್ ಅವರನ್ನು ಅಧ್ಯಕ್ಷ ಸ್ಥಾನಕ್ಕೆ ಆರಿಸಿಕೊಂಡೆವು. ಅದೇ ಸಮಯ, ಮೂಲಧನವಾಗಿ ತಲಾ ೧೦೦೦ ಡಾಲರುಗಳನ್ನು ನಾವು ನಾಲ್ಕು ಕುಟುಂಬದವರೂ ಮುಡಿಪಾಗಿಟ್ಟೆವು. ಮುಂದೆ, ಒಂದು

ಕಾರ್ಯಕಾರೀ ಸಮಿತಿಯೂ ರಚಿಸಲ್ಪಟ್ಟಿತು. ಚಂದ್ರಶೇಖರ್ ಮತ್ತು ನಾನು ಉಪಾಧ್ಯಕ್ಷರುಗಳಾಗಿಯೂ, ಗೋಪಾಲ್ ಕುಕ್ಕೆಯವರು ಕಾರ್ಯದರ್ಶಿಯಾಗಿಯೂ, ಟಿ. ಎನ್. ರಾಜಶೇಖರ್ ಖಜಾಂಚಿಯಾಗಿಯೂ ನೇಮಕವಾದರು. ಇದು ಕನ್ನಡ ಸಾಹಿತ್ಯ ರಂಗದ ಮೊದಲ ಕಾರ್ಯಕಾರೀ ಸಮಿತಿ. ಮುಂದೆ, ಶಿಕಾಗೋದ ಸಾಹಿತ್ಯಾಸಕ್ತರಾದ, ಶ್ರೀಮತಿ ನಳಿನಿ ಮೈಯರು Board of Trusteeಯ ಅಧ್ಯಕ್ಷರಾಗಿ ನೇಮಕವಾದರು. ಇಷ್ಟೆಲ್ಲ ವಿವರಗಳನ್ನು ಇಲ್ಲಿ ತಿಳಿಸಿದುದರ ಉದ್ದೇಶ ಕನ್ನಡ ಸಾಹಿತ್ಯ ರಂಗದ ಉಗಮವನ್ನು ದಾಖಲುಪಡಿಸುವ ಒಂದು ಆರ್ಕೈವ್ ಇರಲೆಂದು.

ರಂಗದ ಉದ್ದೇಶಗಳನ್ನು ಪ್ರಚಾರಪಡಿಸಲು ೨೦೦೪ರಲ್ಲೊಂದು ಸಮ್ಮೇಳನವನ್ನು ನೆರವೇರಿಸಲು ನಿಶ್ಚಯ ಕೈಗೊಳ್ಳಲಾಯ್ತು. ಪರಿಣಾಮವಾಗಿ, ೨೦೦೪ರ ಮೇ ತಿಂಗಳ ಕೊನೆಯಲ್ಲಿಯ 'ಮೆಮೋರಿಯಲ್ ಡೇ' ವಾರಾಂತ್ಯದಲ್ಲಿ ಪ್ರಥಮ 'ವಸಂತೋತ್ಸವ' ಫಿಲಡೆಲ್ಫಿಯ ಸಮೀಪದ ವಿಲನೋವ ವಿಶ್ವವಿದ್ಯಾಲಯದ ಸೈಂಟ್ ಮೇರಿ ಸಭಾಂಗಣದಲ್ಲಿ ಆಚರಿಸಲ್ಪಟ್ಟಿತು. ಎಲ್ಲ ದೃಷ್ಟಿಯಿಂದಲೂ ಅದೊಂದು ಮಹತ್ವದ, ಯಶಸ್ವಿ ಸಮ್ಮೇಳನವಾಗಿತ್ತು. ಸುಮಾರು ೧೫೦ ಮಂದಿ ಸಾಹಿತ್ಯಾಸಕ್ತರು ಕ್ಯಾಲಿಫೋರ್ನಿಯ, ನ್ಯೂಯಾರ್ಕ್, ಫ್ಲೋರಿಡಾ, ನ್ಯೂಜೆರ್ಸಿ, ವಾಷಿಂಗ್‌ಟನ್, ಶಿಕಾಗೋ, ಮುಂತಾದ ದೇಶದ ವಿವಿಧ ಕಡೆಗಳಿಂದ ಬಂದಿದ್ದು, ಅಂದು ಬೆಳಿಗ್ಗೆ ೯:೦೦ ರಿಂದ ರಾತ್ರಿ ೧೦:೩೦ವರೆಗೂ ಬಹಳ ಆಸಕ್ತಿಯಿಂದ, ಸಮ್ಮೇಳನದ ಎಲ್ಲ ಕಾರ್ಯಕ್ರಮಗಳಲ್ಲೂ ಭಾಗವಹಿಸಿದ್ದರು. ಮುಖ್ಯ ಅತಿಥಿಯಾಗಿ ಮೈಸೂರಿನಿಂದ ಪ್ರಭುಶಂಕರ ಅವರು ಆಹ್ವಾನಿಸಲ್ಪಟ್ಟಿದ್ದರು. 'ಕನ್ನಡ ಸಾಹಿತ್ಯ – ಒಂದು ಮಿಂಚು ನೋಟ'ವೆಂಬ ವಿಷಯದ ಮೇಲೆ ಅವರು ಮಾಡಿದ ಭಾಷಣ, ನಿಜಕ್ಕೂ ನಮ್ಮಲ್ಲಿ ಸಾಹಿತ್ಯಾಸಕ್ತತೆಯ ಮಿಂಚು ಹರಿಸಿತ್ತು. ನಾಡಿನ ಶ್ರೇಷ್ಠ ಸಾಹಿತಿ, ಕುವೆಂಪು ಅವರ ಜನ್ಮ ಶತಾಬ್ದಿಯೂ ಅದೇ ಸಮಯ ಒದಗಿ ಬಂದಿದ್ದು, ಅಮೆರಿಕದಲ್ಲೂ ಆ ಸುಸಂದರ್ಭವನ್ನು ಸದುಪಯೋಗಪಡಿಸಿಕೊಳ್ಳುವ ಸುಯೋಗ ನಮಗೆ ಸಿಕ್ಕಿತ್ತು. ಆ ಸಾಹಿತ್ಯ ದಿಗ್ಗಜನಿಗೆ ಗೌರವ ಸೂಚಿಸಲು, 'ಕುವೆಂಪು ಸಾಹಿತ್ಯ ಸಮೀಕ್ಷೆ' ಎಂಬ ಒಂದು ಸ್ಮರಣ ಗ್ರಂಥವನ್ನೂ ಅದೇ ಸಮಯ ಪ್ರಕಟಿಸಲಾಯ್ತು. ಆ ಗ್ರಂಥದ ಮುಖ್ಯ ಸಂಪಾದಕನಾಗಿ ಸೇವೆ ಸಲ್ಲಿಸುವ ಅವಕಾಶ ನನಗೆ ಸಿಕ್ಕಿತು. ವಾಷಿಂಗ್‌ಟನ್‌ನ 'ನಾಟ್ಯ ಭಾರತಿ' ಸಂಸ್ಥೆಯವರು, ಕನ್ನಡಿಗರಾದ ಶ್ರೀ ಶ್ರೀಕಂಠಯ್ಯನವರ ನೇತೃತ್ವದಲ್ಲಿ (ಅವರು ಅರವತ್ತು ಮತ್ತು ಎಪ್ಪತ್ತರ ದಶಕದಲ್ಲಿ, ನಾನು ಲಾಸ್ ಏಂಜಲಿಸ್‌ನಲ್ಲಿದ್ದಾಗ ನನ್ನ ಹಳೆಯ ಸ್ನೇಹಿತರೂ ಹೌದು) ಕುವೆಂಪುರವರ 'ಬೆರಳ್ಗೆ ಕೊರಳ್' ನಾಟಕವನ್ನಾಡಿ, ಸಭಿಕರ ಮನ ತಣಿಸಿದ್ದರು. (ಅದು ನನ್ನ ಡಿಗ್ರಿ ಕ್ಲಾಸಿನಲ್ಲಿ ಪಠ್ಯ ಪುಸ್ತಕವಾಗಿದ್ದುದನ್ನು ನಾನಿಲ್ಲಿ ನೆನಪಿಗೆ ತಂದುಕೊಳ್ಳುತ್ತಿದ್ದೇನೆ.)

ಹೀಗೆ ಉತ್ಸಾಹ ತುಂಬಿದ ವೈಭವದಿಂದ ಪ್ರಾರಂಭವಾದ ಈ ಸಾಹಿತ್ಯ ರಂಗ ಮುಂದೆ ಎರಡು ವರ್ಷಗಳಿಗೊಮ್ಮೆ ದೇಶದ ಬೇರೆ–ಬೇರೆ ಕಡೆಗಳಲ್ಲಿ ವಸಂತೋತ್ಸವವನ್ನು ನಡೆಸಿಕೊಂಡು ಬರುತ್ತಿದೆ. ಇದುವರೆಗೆ, ಫಿಲಡೆಲ್ಫಿಯ ಅಲ್ಲದೆ, ಲಾಸ್ ಎಂಜಲಿಸ್, ಶಿಕಾಗೋ, ಬಾಲ್ಟಿಮೋರ್, ಮತ್ತು ಸ್ಯಾನ್ ಫ್ರಾನ್ಸಿಸ್ಕೊ, ಎಂಬಂತೆ ಐದು ಸಮ್ಮೇಳನಗಳನ್ನು ಆಚರಿಸಿಕೊಂಡು ಬಂದಿದ್ದು, ೨೦೧೩ರಲ್ಲಿ ಹ್ಯೂಸ್ಟನ್ ನಗರದಲ್ಲಿ ಆರನೆಯ ಸಮ್ಮೇಳನ, ೨೦೧೫ರಲ್ಲಿ ಏಳನೆಯ ಸಮ್ಮೇಳನ ನಡೆದಿದೆ. ನಡೆದ ಈ ಸಮ್ಮೇಳನಗಳಿಗೆ, ಪ್ರಭುಶಂಕರ, ಬರಗೂರು ರಾಮಚಂದ್ರಪ್ಪ, ಅ. ರಾ. ಮಿತ್ರ, ಎಚ್. ಎಸ್. ರಾಘವೇಂದ್ರ ರಾವ್, ವೀಣಾ ಶಾಂತೇಶ್ವರ್, ವೈದೇಹಿ, ಶ್ರೀಪತಿ ತಂತ್ರಿ, ಪ್ರಧಾನ ಗುರುದತ್, ಸುಮತೀಂದ್ರ ನಾಡಿಗ್, ಭುವನೇಶ್ವರಿ ಹೆಗಡೆ, – ಎಂಬಂತೆ ಕರ್ನಾಟಕದಿಂದ ಹಲವಾರು ಸಾಹಿತಿಗಳು ಆಮಂತ್ರಿತರಾಗಿರುತ್ತಾರೆ. ಇವರೆಲ್ಲರೂ ಬೇರೆ ಬೇರೆ ವಿಷಯಗಳ ಮೇಲೆ ಭಾಷಣಗಳನ್ನೂ ಮಾಡಿದ್ದಾರೆ. ಈ ಸಮ್ಮೇಳನಗಳ ಸಮಯ, ಮೇಲೆ ತಿಳಿಸಿದ ಕುವೆಂಪು ಸಾಹಿತ್ಯ ಸಮೀಕ್ಷೆ ಎಂಬ ಗ್ರಂಥವಲ್ಲದೆ, ಆಚೀಚೆಯ ಕತೆಗಳು (ಸಂ. ಗುರುಪ್ರಸಾದ್ ಕಾಗಿನೆಲೆ), ನಗೆಗನ್ನಡಂ ಗೆಲ್ಗೆ (ಸಂ. ಎಚ್. ವೈ. ರಾಜಗೋಪಾಲ್ ಮತ್ತು ಎಚ್. ಕೆ. ನಂಜುಂಡಸ್ವಾಮಿ), ಕನ್ನಡ ಕಾದಂಬರಿ ಲೋಕದಲ್ಲಿ... ಹೀಗೆ ಹಲವು (ಸಂ. ಮೈ. ಶ್ರೀ. ನಟರಾಜ), ಮಥಿಸಿದಷ್ಟೂ ಮಾತು (ಸಂ. ತ್ರಿವೇಣಿ ಶ್ರೀನಿವಾಸರಾವ್ ಮತ್ತು ಎಮ್. ಆರ್. ದತ್ತಾತ್ರಿ) ಬೇರು ಸೂರು (ಸಂ. ಗುರುಪ್ರಸಾದ ಕಾಗಿನೆಲೆ, ತ್ರಿವೇಣಿ ಶ್ರೀನಿವಾಸರಾವ್, ಜ್ಯೋತಿ ಮಹದೇವ್), ಅನುವಾದ ಸಂವಾದ (ಮುಖ್ಯ ಸಂ. ಶ್ರೀಕಾಂಥ ಬಾಬು), A Little taste of Kannada in English (ಪ್ರಧಾನ ಸಂ. ಶ್ರೀಕಾಂತ ಬಾಬು) – ಎಂಬಂತೆ ಎಂಟು ಗ್ರಂಥಗಳನ್ನು ರಂಗ ಪ್ರಕಟಿಸಿದುದು ಒಂದು ಹೆಮ್ಮೆಯ ಸಂಗತಿ. ಪ್ರತೀ ಸಮ್ಮೇಳನದಲ್ಲೂ ಆಹ್ವಾನಿತ ಮುಖ್ಯ ಅತಿಥಿಗಳ ಭಾಷಣಗಳನ್ನೂ ಕಿರು ಹೊತ್ತಿಗೆಯ ರೂಪದಲ್ಲಿ ರಂಗ ಪ್ರಕಟಿಸಿದೆ. ಇವುಗಳು ಈ ರೀತಿ ಇವೆ: ಪ್ರಭುಶಂಕರ (೨೦೦೪): 'ಕನ್ನಡ ಸಾಹಿತ್ಯ – ಒಂದು ಮಿಂಚು ನೋಟ', ಬರಗೂರು ರಾಮಚಂದ್ರಪ್ಪ (೨೦೦೫): ಕನ್ನಡಸಾಹಿತ್ಯ ಮತ್ತು ಸೃಜನಶೀಲ ಸ್ವಾತಂತ್ರ್ಯ, ಅ. ರಾ. ಮಿತ್ರ (೨೦೦೭); ಕನ್ನಡ ಸಾಹಿತ್ಯದಲ್ಲಿ ಹಾಸ್ಯಶೀಲತೆ, ವೀಣಾ ಶಾಂತೇಶ್ವರ (೨೦೦೯): ಕನ್ನಡ ಕಾದಂಬರಿ ಕಳೆದ ಕಾಲು ಶತಮಾನದಲ್ಲಿ, ಸುಮತೀಂದ್ರ ನಾಡಿಗ (೨೦೧೧): ಕನ್ನಡ ಸಾಹಿತ್ಯದಲ್ಲಿ ಪ್ರಬಂಧ ಪ್ರಕಾರ; ಕೆ. ವಿ. ತಿರುಮಲೇಶ (೨೦೧೩): ಕನ್ನಡದ ಮುನ್ನಡೆ – ಸವಾಲುಗಳು ಮತ್ತು ಅವಕಾಶಗಳು, ಪ್ರಧಾನ ಗುರುದತ್ತ (೨೦೧೫): 'ಅನುವಾದ – ಆಗುಹೋಗುಗಳು. ಇವುಗಳಲ್ಲದೆ, ನಾನು ಕ್ಯಾಲಿಫೋರ್ನಿಯದ ಸಾಹಿತ್ಯಾಂಜಲಿ ಆಶ್ರಯದಲ್ಲಿ ಮುಖ್ಯ ಸಂಪಾದಕನಾಗಿ ಪ್ರಕಟಿಸಿದ, 'ಕನ್ನಡದಮರಚೇತನ'ವೆಂಬ ಮಾಸ್ತಿಯವರ ಮೇಲಿನ ಗ್ರಂಥಕ್ಕೆ, ಕನ್ನಡ ಸಾಹಿತ್ಯ ರಂಗ ಧನಸಹಾಯ ಮಾಡಿ, ಆ ಪ್ರಕಟನೆಯಲ್ಲಿ ಭಾಗವಹಿಸಿದೆ. ರಂಗದ ಮತ್ತೊಂದು ಮಹತ್ವ ಸಾಧನೆ ಎಂದರೆ, ಅಮೆರಿಕಾದ್ಯಂತ ಒಂಬತ್ತು ನಗರಗಳಲ್ಲಿ

ಕನ್ನಡ ಸಾಹಿತ್ಯದ ಚರಿತ್ರೆಯ ಮೇಲೆ ಶಿಬಿರ ನಡೆಸಿದುದು. ಈ ಶಿಬಿರವನ್ನು ಹೆಸರಾಂತ ಕವಿ ಡಾ. ಎನ್. ಎಸ್. ಲಕ್ಷ್ಮೀನಾರಾಯಣ ಭಟ್ಟರು ನಡೆಸಿಕೊಟ್ಟರು. ಶಿಲಾ ಶಾಸನದಿಂದ ಮೊದಲ್ಗೊಂಡ ನಮ್ಮ ಕನ್ನಡ ಸಾಹಿತ್ಯ, ನವೋದಯ ಮತ್ತು ಅದಕ್ಕೂ ಮುಂದೆ ಗಳಿಸಿದ ಪ್ರಗತಿಯನ್ನು ಶ್ರೀ ಭಟ್ಟರು, ನಮ್ಮಲ್ಲಿ ಬಹಳ ಆಸಕ್ತಿ ಹುಟ್ಟುವಂತೆ ವಿವರಿಸಿದ್ದರು. 'ಕನ್ನಡ ಸಾಹಿತ್ಯ ರಂಗ'ದ ಇಂತಹ ಚಟುವಟಿಕೆಗಳು ತನ್ನ ಉದ್ದೇಶ ಸಾಧಿಸುವಲ್ಲಿ ಹೆಚ್ಚಿನ ಯಶಸ್ಸು ಪಡೆದಿದೆ ಎಂದೇ ಹೇಳಬೇಕು! ರಂಗದ ಚಟುವಟಿಕೆಗಳಲ್ಲಿ ಅಮೆರಿಕದ ಸಾಹಿತ್ಯಾಸಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುತ್ತಿರುವುದು ಒಂದು ಶುಭಸೂಚನೆ! ಸಾಹಿತ್ಯ ರಂಗ ಪ್ರಕಟಿಸಿದ ಎಲ್ಲ ಗ್ರಂಥಗಳಲ್ಲೂ ಅಮೆರಿಕದ ಹಲವು ಹವ್ಯಾಸೀ ಲೇಖಕರು (ಕೆಲವರಂತೂ ಪ್ರಥಮ ಬಾರಿಗೆ) ಲೇಖನ ಬರೆದಿದ್ದುದು, ಇಲ್ಲಿನ ಸಾಹಿತ್ಯಾಸಕ್ತ ಲೇಖಕರಿಗೆ ರಂಗ ಪ್ರೋತ್ಸಾಹ ನೀಡುತ್ತಿರುವುದಕ್ಕೆ ಸಾಕ್ಷಿಯಾಗಿದೆ. ಎಲ್ಲ ಸಮ್ಮೇಳನಗಳಲ್ಲೂ ಇಲ್ಲಿನ ಬರಹಗಾರರನ್ನು ಗುರುತಿಸಿ, ಅವರಿಗೆ ಇನ್ನಷ್ಟು ಪ್ರೋತ್ಸಾಹ ನೀಡುತ್ತಿದೆ, ನಮ್ಮ ಕನ್ನಡ ಸಾಹಿತ್ಯ ರಂಗ. ತನ್ನ ಹತ್ತು ವರ್ಷಗಳ ಅಸ್ತಿತ್ವದಲ್ಲಿ, ರಂಗ ಹೆಚ್ಚಿನ ಸಾಧನೆಗಳನ್ನೇ ಸಾಧಿಸಿದೆ. ರಂಗದ ಕಾರ್ಯಕ್ರಮಗಳನ್ನು ಗುರುತಿಸಿ, ಕರ್ನಾಟಕ ಸರಕಾರ ಅಂದಿನ ಅಧ್ಯಕ್ಷರಾದ ರಾಜಗೋಪಾಲ್ ಅವರಿಗೆ ರಾಜ್ಯೋತ್ಸವ ಪ್ರಶಸ್ತಿ ನೀಡಿದುದು ನಮ್ಮ ಸಂಸ್ಥೆಗೆ ಹೆಮ್ಮೆ ತಂದುಕೊಟ್ಟಿದೆ. ಇದೀಗ ಮೈ. ಶ್ರೀ ನಟರಾಜ ಅವರ ನಿರ್ದೇನದಲ್ಲಿ (ರಾಜಗೋಪಾಲ್ ನಿವೃತ್ತರಾದ ಮೇಲೆ) ರಂಗ ಇನ್ನಷ್ಟು ಯಶಸ್ವಿ ಕಾರ್ಯಕ್ರಮಗಳನ್ನು ನಡೆಸಿಕೊಡುವುದರಲ್ಲಿ ಸಂಶಯವಿಲ್ಲ.

(ಅಮೆರಿಕದಲ್ಲಿ ಕಂಡ ಕನಸು ಕಟ್ಟಿದ ನೆನಪು ಪುಸ್ತಕದಿಂದ ೨೦೧೫)

ನಾಗ ಐತಾಳ ಜೀವನ ವಿವರ

ಹುಟ್ಟೂರು: ಕೋಟ, ಉಡುಪಿ ಜಿಲ್ಲೆ, ಕರ್ನಾಟಕ

ವಿದ್ಯಾಭ್ಯಾಸ:

ಪ್ರಾಥಮಿಕ: ಗಿಳಿಯಾರು ಶಾಲೆ, ಕೋಟ, ಉಡುಪಿ ಜಿಲ್ಲೆ, ಕರ್ನಾಟಕ.

ಹೈಸ್ಕೂಲು: ಆರ್ಯವಿದ್ಯಾ ಶಾಲೆ, ಬೆಂಗಳೂರು

ಕಾಲೇಜು: ಸಂತ ಜೋಸೆಫ್ ಕಾಲೇಜು (ಅಂದಿನ ಮೈಸೂರು ಯೂನಿವರ್ಸಿಟಿ) B.Sc (1953)

ಹೆಚ್ಚಿನ ವಿದ್ಯಾಭ್ಯಾಸ: ಬನಾರಸ್ ಹಿಂದೂ ಯೂನಿವರ್ಸಿಟಿ (B.H.U.) B. Pharm (1957)

ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಸಯನ್ಸ್ (I. I. Sc) : M.Sc. (1961)

ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಸಯನ್ಸ್ : Ph.D. (Biochemistry) (1968)

ಡಾಕ್ಟರೇಟ್ ನಂತರದ ತರಬೇತಿ: ಡಾಕ್ಟರೇಟ್ (I.I.Sc.) ಪಡೆದ ನಂತರ ಒಂದು ವರ್ಷ I.I.Sc.ಯಲ್ಲಿ ಪೋಸ್ಟ್ ಗ್ರ್ಯಾಜುಏಟ್ ತರಬೇತಿ

ಉದ್ಯೋಗ: ಭಾರತದಲ್ಲಿ I.I.Sc.ಯಿಂದ M.Sc. ಪಡೆದ ಮೇಲೆ ಕಸ್ತೂರಿಬಾ ಮೆಡಿಕಲ್ ಕಾಲೇಜು, ಮಣಿಪಾಲದ ಬಯೋಕೆಮಿಸ್ಟ್ರಿ ಮತ್ತು ಫಾರ್ಮಕಾಲಜಿ ವಿಭಾಗದಲ್ಲಿ ಉಪನ್ಯಾಸಕ (1962 – 1964)

1969ರಲ್ಲಿ ಅಮೆರಿಕಕ್ಕೆ ಪ್ರಯಾಣ– ಅಮೆರಿಕದಲ್ಲಿ ಉದ್ಯೋಗ:

ಮೊದಲಿಗೆ USC School of Medicine, Los Angeles, California (Reasearch Associate) 1969 - 1972.

1972ರಲ್ಲಿ ಕೆನಡಾಗೆ ಪ್ರಯಾಣ

ಕೆನಡಾದಲ್ಲಿ 1. University of Western Ontario, London, (1972 -'74) Research Associate

2. University of Guelph, Guelph, ಕೆನಡಾದಲ್ಲಿ Teaching Research Assistant (1974 - 75)

1975ರಲ್ಲಿ ಅಮೆರಿಕಕ್ಕೆ ಮರು ಪ್ರಯಾಣ

ಶಿಕಾಗೊ ಯೂನಿವರ್ಸಿಟಿ, ಸಂಶೋಧಕ ಪ್ರಾಧ್ಯಾಪಕ (Senior Associate) 1975 –2001.

ಶಿಕಾಗೊ ಯೂನಿವರ್ಸಿಟಿಯಿಂದ 2001ರಲ್ಲಿ ನಿವೃತ್ತಿ.

2002– 2022ರವರೆವಿಗೆ ಲಾಸ್ ಎಂಜಲಿಸ್ ಸಮೀಪದ ಆರ್ಕೇಡಿಯದಲ್ಲಿ ಮಡದಿ ಲಕ್ಷ್ಮಿಯ ಜೊತೆ ನಿವೃತ್ತ ಜೀವನ

29.10.2022 ನಿಧನ.

ಪ್ರಕಟಣೆಗಳು:

1. ವೈಜ್ಞಾನಿಕ: 40ಕ್ಕೂ ಹೆಚ್ಚು ವೈಜ್ಞಾನಿಕ–ಸಂಶೋಧನಾ ಪ್ರಬಂಧಗಳು ವಿವಿಧ ನಿಯತಕಾಲಿಕೆಗಳಲ್ಲಿ ಪ್ರಕಟ.

2. ಕನ್ನಡ: ಹಲವು ಲೇಖನಗಳು ಕನ್ನಡ ಕೂಟಗಳು ಪ್ರಕಟಿಸಿದ ಸಂಚಿಕೆಗಳಲ್ಲೂ, ದಟ್ಸ್ ಕನ್ನಡ, ಕೆಂಡಸಂಪಿಗೆ ಜಾಲತಾಣಗಳಲ್ಲೂ, ಕರ್ನಾಟಕ ಪ್ರಾದೇಶಿಕ ಪತ್ರಿಕೆಗಳಲ್ಲೂ ಪ್ರಕಟ.

ಪ್ರಕಟಿತ ಗ್ರಂಥಗಳು:

1. **ಅಮೆರಿಕನ್ನಡಿಗನೊಬ್ಬನ ದಿನಚರಿಯಿಂದ** (ಅನುಭವ ಕಥನ) ಪ್ರ: ವಸಂತ ಪ್ರಕಾಶನ, ಬೆಂಗಳೂರು, 2002. ಅಮೆರಿಕಕ್ಕೆ ವಲಸೆ ಬಂದಮೇಲೆ ಪಡೆದ ಅನುಭವಗಳ ದಾಖಲೆ. ಶ್ರೀಮತಿ ನಳಿನಿ ಮೈಯ ಮುನ್ನುಡಿ ಬರೆದಿದ್ದಾರೆ. ಲಕ್ಷ್ಮೀನಾರಾಯಣ ಭಟ್ಟರ ಬೆನ್ನುಡಿ.

2. **ಕಾದೇ ಇರುವಳು ರಾಧೆ** (ಕಿರು ಕಾದಂಬರಿ) ಪ್ರ: ಸಾಹಿತ್ಯಾಂಜಲಿ, ಕ್ಯಾಲಿಫೋರ್ನಿಯ ಮತ್ತು ಅಭಿನವ ಬೆಂಗಳೂರು, 2007. ರಾಧಾ–ಕೃಷ್ಣರ ಪ್ರೇಮದ ಮೇಲಿನ ಒಂದು ಕಾಲ್ಪನಿಕ ಕಥೆ. ಪ್ರಭುಶಂಕರ ಮುನ್ನುಡಿ ಬರೆದಿದ್ದಾರೆ.

3. **ಒಂದಾನೊಂದು ಕಾಲದಲ್ಲಿ** (ಕಟ್ಟು ಕತೆಗಳು) (ಪ್ರ: ಸಾಹಿತ್ಯಾಂಜಲಿ, ಕ್ಯಾಲಿಫೋರ್ನಿಯ ಮತ್ತು ಅಭಿನವ ಬೆಂಗಳೂರು, 2007) ವಿವಿಧ ಮೂಲಗಳಿಂದ ಪಡೆದ ಕಟ್ಟು ಕತೆಗಳ ಸಂಗ್ರಹ. ಪತ್ರಕರ್ತ ವಿಶ್ವೇಶ್ವರ ಭಟ್ಟರ ಮುನ್ನುಡಿ.

4. **ಕಲಬೆರಕೆ** (ಪ್ರಬಂಧ ಸಂಕಲನ) ಪ್ರ:ಮನೋಹರ ಗ್ರಂಥಮಾಲೆ, ಧಾರವಾಡ, 2008. ಎಚ್. ವೈ. ರಾಜಗೋಪಾಲರ ಮುನ್ನುಡಿ. ಬೇರೆ–ಬೇರೆ ವಿಷಯವನ್ನೊಳಗೊಂಡ 13 ಪ್ರಬಂಧಗಳ ಸಂಕಲನ.

5. **'ದೂರ ತೀರದಿಂದ ಹರಿದು ಬಂದ ಕತೆಗಳು'** (ಕಥಾಸಂಕಲನ) ಪ್ರ: ಸಾಹಿತ್ಯಾಂಜಲಿ, ಕ್ಯಾಲಿಫೋರ್ನಿಯ ಮತ್ತು ಅಭಿನವ, ಬೆಂಗಳೂರು, 2010. ಒಂಬತ್ತು ಕತೆಗಳ ಕಥಾಸಂಕಲನ. ಮುನ್ನುಡಿ ವಿವೇಕ ಶಾನುಭಾಗ.

6. **ಜೀವನ ರಹಸ್ಯ** (ವೈಜ್ಞಾನಿಕ ಕೃತಿ) ಪ್ರ: ಸಾಹಿತ್ಯಾಂಜಲಿ, ಕ್ಯಾಲಿಫೋರ್ನಿಯ ಮತ್ತು ಅಭಿನವ ಬೆಂಗಳೂರು, 2010. ಜೀವರಸಾಯನಿಕ, ಅಣು ಜೀವವಿಜ್ಞಾನ, ತಳಿ ವಿಜ್ಞಾನ ಮತ್ತಿತರ ವೈಜ್ಞಾನಕ ವಿಷಯಗಳ ಮೇಲೆ ಪ್ರಾಥಮಿಕ ಹಾಗೂ ಪ್ರೌಢ ಮಾಹಿತಿ ನೀಡುವ ಗ್ರಂಥ. ಇದಕ್ಕೆ National Institute of Health, Bethesda, Marylandನಲ್ಲಿ ಕೆಲಸ ಮಾಡುತ್ತಿರುವ ವಿಜ್ಞಾನಿ, ಡಾ. ಚಂದ್ರಶೇಖರಪ್ಪ ಅವರ ಮುನ್ನುಡಿ.

7. **ತಲೆಮಾರ ಸೆಲೆ** (ಕಾದಂಬರಿ) ಪ್ರ: ಸಾಹಿತ್ಯಾಂಜಲಿ, ಕ್ಯಾಲಿಫೋರ್ನಿಯ, 2011. 442 ಪುಟಗಳ ಕಾದಂಬರಿ. ಈ ಕಾದಂಬರಿಯಲ್ಲಿ ಯಶಸ್ವಿ ಜೀವನ ನಡೆಸಿದ ಒಂದು ಮಧ್ಯಮ ವರ್ಗದ ಮೂಲ ಬೇರಿರುವುದು ಕರ್ನಾಟಕದ ಚಿತ್ರಪಾಡಿ, ಉಳ್ತೂರು, ಕೊಕ್ಕೋಡು ಎಂಬ ಹಳ್ಳಿಗಳಲ್ಲಿ. ಕಾದಂಬರಿಯಲ್ಲಿ ವರ್ಣಿತವಾಗಿರುವ ಸುಮಾರು ನಾಲ್ಕು ತಲೆಮಾರಿನ ಕತೆ ಕೊಕ್ಕೋಡು, ಚಿತ್ರಪಾಡಿಯಿಂದ ಪ್ರಾರಂಭವಾಗಿ, ಅಮೆರಿಕದಲ್ಲಿ ಬೆಳೆದು ಮರಳಿ ಮೂಲದ ಊರಿನ ಕಡೆಗೇ ಮುಖ ಮಾಡುತ್ತದೆ. ಜೀವವಿಜ್ಞಾನದಲ್ಲಿ ನುರಿತ ವಿಜ್ಞಾನಿಯೊಬ್ಬ ತನ್ನ ವೈಜ್ಞಾನಿಕ ಕುಶಲತೆಯನ್ನು ಉತ್ತಮಗೊಳಿಸಲು ಹೆಂಡತಿ, ಸುಮತಿಯೊಡನೆ ಅಮೆರಿಕಕ್ಕೆ ವಲಸೆ ಬರುತ್ತಾನೆ. ಪರಿಣಾಮವಾಗಿ, ಭಾರತದಲ್ಲಿ ಕಾಲೇಜು ವಿದ್ಯಾಭ್ಯಾಸದಿಂದ ವಂಚಿತಳಾದ ಸುಮತಿ, ಲಾಸ್ ಎಂಜಲಿಸ್‌ನಲ್ಲಿ ಹೆಚ್ಚಿನ ವಿದ್ಯಾಭ್ಯಾಸ ಪಡೆದು, ಒಬ್ಬಳು ಉತ್ತಮ ಲೇಖಕಿಯಾಗಿ ಅರಳಿ, ಅಮೆರಿಕವೆಂಬ ಪರಕೀಯ ಪರಿಸರದಲ್ಲಿ ಅವಳು ಎದುರಿಸಿದ ಹಲವಾರು ಸಮಸ್ಯೆಗಳನ್ನು ನಿಭಾಯಿಸಿ, ಅವಳ ಬದುಕು ವಿಕಾಸಗೊಳ್ಳುವುದನ್ನು ಕಾಣಬಹುದು. ಅವಳ ಮಗ ಅನ್ಯ ಮತೀಯಳನ್ನು ಮದುವೆಯಾಗಿ, ಪರಿಣಮಿಸಿದ ಸಾಂಸ್ಕೃತಿಕ ತಿಕ್ಕಾಟಗಳ ವಿವರಗಳೂ

ವರ್ಣಿತವಾಗಿವೆ. ಸುಮತಿಯ ಮೂರನೆಯ ಪೀಳಿಗೆಯ ಮೊಮ್ಮೊಗ ತನ್ನ ಭಾರತೀಯ ಮೂಲವನ್ನು ಹುಡುಕುತ್ತ ಹೋಗಿ, ಹತ್ತಾರು ತಲೆಮಾರಿನ ವಂಶವೃಕ್ಷವನ್ನು ರಚಿಸಿ ತನ್ನ ಭಾರತೀಯ ಪರಂಪರೆಯ ಮಾಹಿತಿ ಪಡೆದು, ತೃಪ್ತಿಗೊಳ್ಳುವುದು ಈ ಕಾದಂಬರಿಯ ಒಂದು ವೈಶಿಷ್ಟ್ಯ. ಡಾ. ಗುರುಪ್ರಸಾದ್ ಕಾಗಿನೆಲೆ ಮುನ್ನುಡಿ.

8. ಸಾಹಿತ್ಯ ಸ್ಪಂದನ (ವಿಮರ್ಶೆ) 22 ವಿಮರ್ಶಾ ಲೇಖನಗಳ ಸಂಕಲನ ಮೈ. ಶ್ರೀ ನಟರಾಜ ಅವರ ಮುನ್ನುಡಿ ಪ್ರ: ಸಾಹಿತ್ಯಾಂಜಲಿ ಕ್ಯಾಲಿಫೋರ್ನಿಯಾ ಮತ್ತು ಅಭಿನವ ಬೆಂಗಳೂರು. 2015

9. ಅಮೆರಿಕದಲ್ಲಿ ಕಂಡ ಕನಸು ಕಟ್ಟಿದ ನೆನಪು(ಆತ್ಮಕಥೆ): 412 ಪುಟಗಳ ಬೃಹತ್ ಪುಸ್ತಕ ಲೇಖಕರ ಬಾಲ್ಯ ಕಾಲದ ನೆನಪಿನಿಂದ ಅಮೆರಿಕದಲ್ಲಿ ನೆಲೆಗೊಳ್ಳುವವರೆಗಿನ ನೆನಪುಗಳ ಸಂಪುಟ. ಪ್ರ: ಅಭಿನವ ಬೆಂಗಳೂರು. 2015.

10. ಸ್ಮರಣೆ ಸಾಲದೆ (ಕೆಲವು ನೆನಪುಗಳು): ಬಾಲ್ಯಕಾಲದ ಅಚ್ಚಳಿಯದ ನೆನಪುಗಳು. ಪ್ರ: ಸಾಹಿತ್ಯಾಂಜಲಿ ಮತ್ತು ಅಭಿನವ ಬೆಂಗಳೂರು. 2017. ನರಹಳ್ಳಿ ಬಾಲಸುಬ್ರಹ್ಮಣ್ಯ ಅವರ ಮುನ್ನುಡಿ.

11. **ಕಾಲ ಉರುಳಿ ಉಳಿದುದು ನೆನಪಾಗಿ** (ನಡೆದು ಬಂದ ಹೆಜ್ಜೆಯ ಜಾಡನ್ನರಸುತ್ತಾ): ಊರು ಜನ ಭಾಷೆ ಕುರಿತ ನೆನಪುಗಳ ಬರಹ ಪ್ರ: ಸಾಹಿತ್ಯಾಂಜಲಿ ಮತ್ತು ಅಭಿನವ ಬೆಂಗಳೂರು. 2019. ವೈದೇಹಿ ಅವರ ಮುನ್ನುಡಿ.

12. **ನಾನು ಬರೆದ ಕವನ** (ಕವನ ಸಂಕಲನ) ಪ್ರ: ಸಾಹಿತ್ಯಾಂಜಲಿ ಕ್ಯಾಲಿಫೋರ್ನಿಯಾ ಮತ್ತು ಅಭಿನವ ಬೆಂಗಳೂರು 2017. ಪಿ. ಚಂದ್ರಿಕಾ ಅವರ ಮುನ್ನುಡಿ.

ಪ್ರಧಾನ ಸಂಪಾದಕನಾಗಿ:

1. ಕಾರಂತ ಚಿಂತನ:(ವಿಮರ್ಶೆ) ಕಡಲಾಚೆಯ ಕನ್ನಡಿಗರಿಂದ ಪ್ರ. ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ, 2000. ಶಿವರಾಮ ಕಾರಂತರ ಸಾಹಿತ್ಯ ಮತ್ತು ದರ್ಶನ. ಯು. ಆರ್. ಅನಂತಮೂರ್ತಿ ಮುನ್ನುಡಿ.

2. **ಕುವೆಂಪು ಸಾಹಿತ್ಯ ಸಮೀಕ್ಷೆ** ಪ್ರ. ವಸಂತ ಪ್ರಕಾಶನ, ಬೆಂಗಳೂರು, 2003. ಕೆ. ವಿ. ಪುಟ್ಟಪ್ಪನವರ ಜನ್ಮಶತಾಬ್ಧಿ ಸಮಾರಂಭದ ಅಂಗವಾಗಿ, ಅಮೆರಿಕದ ಕನ್ನಡ ಸಾಹಿತ್ಯ ರಂಗದ ಸಹಕಾರದೊಂದಿಗೆ ಪ್ರಕಟಿಸಿದ ವಿಮರ್ಶಾ ಕೃತಿ. ಡಾ. ಜಿ.ಎಸ್. ಶಿವರುದ್ರಪ್ಪನವರ ಮುನ್ನುಡಿ.

3. **ಯದುಗಿರಿಯ ಬೆಳಕು** ಪ್ರ.:ಸಾಹಿತ್ಯಾಂಜಲಿ, ಕ್ಯಾಲಿಫೋರ್ನಿಯ ಮತ್ತು ಅಭಿನವ ಬೆಂಗಳೂರು, 2006. ಪು. ತಿ. ನರಸಿಂಹಾಚಾರ್ ಕುರಿತು ಸ್ಮರಣಾ ಗ್ರಂಥ. ಎಚ್.ಎಸ್.ವೆಂಕಟೇಶ ಮೂರ್ತಿಯವರ ಮುನ್ನುಡಿ

4. **ಕನ್ನಡದಮರಚೇತನ** ಪ್ರ.: ಸಾಹಿತ್ಯಾಂಜಲಿ, ಕ್ಯಾಲಿಫೋರ್ನಿಯ ಮತ್ತು ಅಭಿನವ ಬೆಂಗಳೂರು, 2007. ಮಾಸ್ತಿ ವೆಂಕಟೇಶ ಐಯ್ಯಂಗಾರ್ ಅವರ ಕುರಿತು ಅನನ್ಯ ಗ್ರಂಥ. ಅಮೆರಿಕದ ಬರಹಗಾರರಲ್ಲದೆ, ಹಲವು ಕರ್ನಾಟಕದ ಲೇಖಕರ ಲೇಖನಗಳೂ ಇವೆ. ಎಲ್. ಎಸ್ ಶೇಷಗಿರಿ ರಾವ್ ಮುನ್ನುಡಿ.

5. **ಗೆಲುವಿನ ಚಿಲುಮೆ– ರಾಜರತ್ನಂ** ಪ್ರ.: ಸಾಹಿತ್ಯಾಂಜಲಿ, ಕ್ಯಾಲಿಫೋರ್ನಿಯ ಮತ್ತು ಅಭಿನವ ಬೆಂಗಳೂರು, 2008. ಜಿ. ಪಿ. ರಾಜರತ್ನಂ ಅವರ ಸಾಹಿತ್ಯ ಸಾಧನೆಯನ್ನು ವಿವರಿಸುವ ಕೃತಿ. ಯು. ಆರ್. ಅನಂತ ಮೂರ್ತಿ ಅವರ ಮುನ್ನುಡಿ.

6. **ಅನಂತಮುಖದಮೂರ್ತಿ** ಪ್ರ.: ಸಾಹಿತ್ಯಾಂಜಲಿ, ಕ್ಯಾಲಿಫೋರ್ನಿಯ ಮತ್ತು ಅಭಿನವ ಬೆಂಗಳೂರು, 2009. ಯು. ಆರ್. ಅನಂತಮೂರ್ತಿಯವರ ವ್ಯಕ್ತಿತ್ವ, ಸಣ್ಣಕತೆಗಳು, ಕಾದಂಬರಿ, ವೈಚಾರಿಕತೆ ಮುಂತಾದುವುಗಳ ಮೇಲೆ ಅಮೆರಿಕದ ಹಾಗೂ ಕರ್ನಾಟಕದ ಲೇಖಕರು ಬರೆದ ಲೇಖನಗಳ ಸಂಗ್ರಹ.

7. **ಬೇಂದ್ರೆ ಅಂದ್ರೆ** : ಅಭಿನವ, ಬೆಂಗಳೂರು, 2014. ದ. ರಾ. ಬೇಂದ್ರೆಯವರ ಕಾವ್ಯ ಕುರಿತಂತೆ ಅಮೆರಿಕದ ಬರಹಗಾರರೂ, ಕರ್ನಾಟಕದ ಸಾಹಿತಿಗಳೂ ಲೇಖನ ಬರೆದಿದ್ದಾರೆ.

8. **ಅಮೆರಿಕನ್ನಡ ಬರಹಗಾರರು:** ಪ್ರ: ಸಾಹಿತ್ಯಾಂಜಲಿ, ಕ್ಯಾಲಿಫೋರ್ನಿಯ, ಕನ್ನಡ ಸಾಹಿತ್ಯ ರಂಗದ ಸಹಕಾರದೊಂದಿಗೆ. ಯು ಎಸ್. ಎ. ಮತ್ತು ಅಭಿನವ ಬೆಂಗಳೂರು.2017

9. **ನೆನಪಿನ ಓಣಿಯೊಳಗೆ ಮಿನುಗುತಾವ ದೀಪ:** ಜಿ. ಎಸ್. ಶಿವರುದ್ರಪ್ಪನವರನ್ನು ಜೀವನ ಸಾಹಿತ್ಯ ಕುರಿತ ಬರಹಗಳು. ಪ್ರ: ಸಾಹಿತ್ಯಾಂಜಲಿ ಮತ್ತು ಅಭಿನವ, ಬೆಂಗಳೂರು 2017.

ಕನ್ನಡ ಸಾಹಿತ್ಯ ರಂಗ ಪ್ರಕಟಿಸಿದ ಕೃತಿಗಳ ಸಂಪಾದಕ ಮಂಡಳಿಯಲ್ಲಿದ್ದಾಗ ಪ್ರಕಟಿಸಿದ ಕೃತಿಗಳು.

1. **ಆಚೀಚೆಯ ಕತೆಗಳು** ಪ್ರ.: ಕನ್ನಡ ಸಾಹಿತ್ಯ ರಂಗ ಮತ್ತು ಅಭಿನವ ಬೆಂಗಳೂರು, 2006.

2. **ನಗೆಗನ್ನಡಂ ಗೆಲ್ಗೆ** ಪ್ರ.: ಕನ್ನಡ ಸಾಹಿತ್ಯ ರಂಗ ಮತ್ತು ಅಭಿನವ ಬೆಂಗಳೂರು, 2007.

3. **ಕಾದಂಬರಿ ಲೋಕದಲ್ಲಿ ಹೀಗೆ ಹಲವು:** ಪ್ರ.: ಕನ್ನಡ ಸಾಹಿತ್ಯ ರಂಗ ಮತ್ತು ಅಭಿನವ ಬೆಂಗಳೂರು, 2009.

4. **'ಅಲೆವಾಣಿ'** : ನಾವಿಕ ವಿಶ್ವಕನ್ನಡ ಸಮ್ಮೇಳನ, ಲಾಸ್ ಎಂಜಲಿಸ್, 2010

5. **'ಮಥಿಸಿದಷ್ಟೂ ಮಾತು'** : ಪ್ರ: ಕನ್ನಡ ಸಾಹಿತ್ಯ ರಂಗ ಮತ್ತು ಅಭಿನವ ಬೆಂಗಳೂರು, 2011.

6. **'ಬೇರು–ಸೂರು'** : ಪ್ರ. ವಸಂತ ಪ್ರಕಾಶನ, ಬೆಂಗಳೂರು, 2013.

7. **ಅನುವಾದ ಸಂವಾದ:** ಪ್ರ: ಕನ್ನಡ ಸಾಹಿತ್ಯ ರಂಗ, ಯು ಎಸ್. ಎ. ಮತ್ತು ಅಭಿನವ ಬೆಂಗಳೂರು. 2015.

8. **ರಂಗತರಂಗ.** ಪ್ರ: ಕನ್ನಡ ಸಾಹಿತ್ಯರಂಗ, ಯು. ಎಸ್. ಎ. 2016.

9. **ಅವರವರ ಭಕುತಿಗೆ** ಪ್ರ: ಪ್ರ: ಕನ್ನಡ ಸಾಹಿತ್ಯ ರಂಗ, ಯು. ಎಸ್. ಎ 2017.

10. **ಬದಲಾವಣೆಯ ಬೆನ್ನಟ್ಟಿ.** ಪ್ರ: ಕನ್ನಡ ಸಾಹಿತ್ಯ ರಂಗ, ಯು. ಎಸ್. ಎ. 2019.

11. **ಅಮೆರಿಕನ್ ಜನಪದ ಕನ್ನಡದ ಕಂಗಳಿಗೆ ಕಂಡಂತೆ:** ಪ್ರ: ಕನ್ನಡ ಸಾಹಿತ್ಯ ರಂಗ, ಯು ಎಸ್. ಎ. 2022.

ಇತರ ಚಟುವಟಿಕೆಗಳು:

1. ಶಿಕಾಗೊ ಕನ್ನಡ ಕೂಟ, ವಿದ್ಯಾರಣ್ಯ ಶಾಖೆಯ ಕಾರ್ಯಕಾರೀ ಸಮಿತಿಯ ಸದಸ್ಯ, ಉಪಾಧ್ಯಕ್ಷರಾಗಿ ಸೇವೆ. ಕನ್ನಡ ಕೂಟದ ಚಟುವಟಿಕೆಯಲ್ಲಿ ಸಕ್ರಿಯ ಭಾಗ. ಕನ್ನಡ ಸಾಹಿತ್ಯಾಭಿವೃದ್ಧಿಗಾಗಿ 'ಮಂಥನ' ಎಂಬ ಸಾಹಿತ್ಯ ಕೂಟ ಸ್ಥಾಪನೆ. ಕರ್ನಾಟಕದಿಂದ ಬಂದ ಸಾಹಿತಿಗಳಿಂದ (ಜಿ. ಎಸ್. ಶಿವರುದ್ರಪ್ಪ, ಲಕ್ಷ್ಮೀನಾರಾಯಣ ಭಟ್ಟ, ಚಂದ್ರಶೇಖರ ಕಂಬಾರ, ಗಿರೀಶ್ ಕಾರ್ನಾಡ್, ಯು. ಆರ್. ಅನಂತಮೂರ್ತಿ, ಡಿ. ಆರ್. ನಾಗರಾಜ, ನಾಗರಾಜ ರಾವ್, ಲಕ್ಷ್ಮೀಶ ತೋಳ್ಪಾಡಿ ಮುಂತಾದವರು) ಭಾಷಣಗಳನ್ನು ಏರ್ಪಡಿಸಿದ್ದಾರೆ. ಶಿಕಾಗೋ ಕನ್ನಡ ಕೂಟ, ವಿದ್ಯಾರಣ್ಯ ಶಾಖೆ ಇವರ ಸೇವೆಯನ್ನು ಗುರುತಿಸಿ, ಸತ್ಕರಿಸಿದೆ.

2. ಅಮೆರಿಕದಲ್ಲಿ ಕನ್ನಡ ಭಾಷೆ ಮತ್ತು ಸಂಸ್ಕೃತಿಯನ್ನು ಸ್ಥಾಪಿಸುವ ಉದ್ದೇಶದಿಂದ, ಅಮೆರಿಕದ ಅಯೋವಾ ಯೂನಿವರ್ಸಿಟಿಯಲ್ಲಿ ಒಂದು ಕನ್ನಡ ಅಧ್ಯಯನ ಪೀಠವನ್ನು ಸ್ಥಾಪಿಸುವ ಪ್ರಯತ್ನದಲ್ಲಿ ಪರಿಶ್ರಮ. ಆ ಬಗ್ಗೆ ಅಮೆರಿಕದಲ್ಲಿರುವ ಉದಾರೀ ಕನ್ನಡಿಗರಿಂದ ಒಂದು ಮಿಲಿಯ ಡಾಲರು ಒಟ್ಟುಗೂಡಿಸುವ ಯೋಜನಾ ಸಮಿತಿಯ ಸದಸ್ಯರಾಗಿ, ದೇಶದ ವಿವಿಧ ನಗರಗಳಲ್ಲಿ ಅದಕ್ಕಾಗಿ ಪ್ರಚಾರ ಮಾಡುವ ಕಾರ್ಯದಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರು. (ಅಮೆರಿಕನ್ನಡಿಗರ ಕೊಡುಗೆಯ ಕೈ ಮೋಟುಕಾಗಿದ್ದು, ಅಂಥ ಒಂದು ಉದಾತ್ತ ಯೋಜನೆ ಫಲಕಾರಿಯಾಗದಿದ್ದುದು ಒಂದು ವಿಷಾದದ ಸಂಗತಿ). ಆದರೂ ಆ ಯೂನಿವರ್ಸಿಟಿ ಆಗಾಗ್ಗೆ ಕರ್ನಾಟಕದಿಂದ ಸಾಹಿತಿಗಳನ್ನು ಬರಮಾಡಿಕೊಂಡು, ಕನ್ನಡ ಸಂಸ್ಕೃತಿಯ ಪ್ರಚಾರವಾಗಲು ನೆರವಾಗಿದೆ.

3. ಅಮೆರಿಕದಾದ್ಯಂತ ಕನ್ನಡ ಸಾಹಿತ್ಯಾಸಕ್ತಿಯನ್ನು ಹೆಚ್ಚಿಸುವ ಸಲುವಾಗಿ 'ಕನ್ನಡ ಸಾಹಿತ್ಯ ರಂಗ' ವೆಂಬ ಸಾಹಿತ್ಯ ಸಂಘಟನೆಯುನ್ನು ಸ್ಥಾಪಿಸಲು ಕಾರಣಕರ್ತರಾದವರಲ್ಲೊಬ್ಬರು ಇವರು. ಅದರ ಉಪಾಧ್ಯಕ್ಷರಾಗಿಯೂ, ಆಡಳಿತಾ ಮಂಡಳಿಯ ಸದಸ್ಯರಾಗಿಯೂ ಸೇವೆ. ಇದು ಎರಡು ವರ್ಷಗಳಳಿಗೊಂದು 'ವಸಂತ ಸಾಹಿತ್ಯೋತ್ಸವ'ವೆಂಬ ಹೆಸರಿನಲ್ಲಿ ಸಾಹಿತ್ಯ ಸಮ್ಮೇಳನವನ್ನು ಏರ್ಪಡಿಸುತ್ತದೆ. ಅದರಲ್ಲಿ ಸಕ್ರಿಯ ಪಾತ್ರ. ಸಂಪಾದಕ ಮಂಡಳಿಯ ಮುಖ್ಯ ಸಂಪಾದಕರಾಗಿಯೂ, (ಮೊದಲ ವಸಂತೋತ್ಸವ, 2004) ಮುಂದೆ ಸದಸ್ಯಾರಾಗಿಯೂ ಕೆಲಸ. 'ಕನ್ನಡ ಸಾಹಿತ್ಯ ರಂಗ' ದ ಆಡಳಿತ ಮಂಡಲಿಯ ಅಧ್ಯಕ್ಷರಾಗಿಯೂ ಸೇವೆ.

4. ಫಿಲಡೆಲ್ಫಿಯದಲ್ಲಿ ನಡೆದ ಮೊದಲನೆಯ ಸಮ್ಮೇಳನದಲ್ಲಿ ಡಾ. ಪ್ರಭುಶಂಕರರಿಂದ ಬಿಡುಗಡೆಯಾದ 'ಕುವೆಂಪು ಸಾಹಿತ್ಯ ಸಮೀಕ್ಷೆ'ಯ ಪ್ರಧಾನ ಸಂಪಾದಕರಾಗಿದ್ದಾರೆ. ಲಾಸ್ ಏಂಜಲಿಸ್‌ನಲ್ಲಿ ನಡೆದ ಎರಡನೆಯ ಸಮ್ಮೇಳನದ ಮುಖ್ಯ ಸಂಚಾಲಕರಾಗಿಯೂ ಕೆಲಸ ಮಾಡಿದ್ದಾರೆ. ಕನ್ನಡ ಸಾಹಿತ್ಯ ರಂಗ ದ ಆಶ್ರಯದಲ್ಲಿ ಪ್ರೊ. ಎನ್. ಎಸ್. ಲಕ್ಷ್ಮೀನಾರಾಯಣ ಭಟ್ಟರಿಂದ ಏರ್ಪಡಿಸಿದ 'ಕನ್ನಡ ಸಾಹಿತ್ಯದ ಚರಿತ್ರೆ'ಯ ಮೇಲಿನ ಕಾರ್ಯಗಾರದ ಅಂಗವಾಗಿ ಲಾಸ್ ಎಂಜಲಿಸ್‌ನಲ್ಲಿ ಏರ್ಪಡಿಸಿದ ಕಾರ್ಯಗಾರದ ಮುಖ್ಯ ಸಂಚಾಲಕರಾಗಿ ನಿರ್ವಹಣೆ. ಈ ಕಾರ್ಯಗಾರ ದೇಶದ ಒಂಬತ್ತು ನಗರಗಳಲ್ಲಿ ಯಶಸ್ವಿಯಾಗಿ ನಡೆಯಿತು.

5 ಲಾಸ್ ಎಂಜಲಿಸ್ ಕನ್ನಡ ಕೂಟದಲ್ಲಿ ಸಕ್ರಿಯವಾಗಿ ಕೆಲಸ ಮಾಡುತ್ತಿದ್ದಾರೆ. ಆ ಪ್ರದೇಶದಲ್ಲಿ 'ಸಾಹಿತ್ಯಾಂಜಲಿ ' ಎಂಬ ಸಾಹಿತ್ಯ ಕೂಟವನ್ನೂ ಸ್ಥಾಪಿಸಿದ್ದಾರೆ. ಅದರ ಆಶ್ರಯದಲ್ಲಿ ಅನಿಯಮಿತ ಕಾಲಗಳಲ್ಲಿ ಕರ್ನಾಟಕದಿಂದ ಬಂದ ಸಾಹಿತಿಗಳಿಂದ (ಅ. ರಾ. ಮಿತ್ರ, ಕೃಷ್ಣೇಗೌಡ, ಲಕ್ಷ್ಮೀನಾರಾಯಣ ಭಟ್ಟ, ಬರಗೂರು ರಾಮಚಂದ್ರಪ್ಪ, ವೈದೇಹಿ, ಚಂದ್ರಶೇಖರ ಕಂಬಾರ, ಎಚ್. ಎಸ್ ವೆಂಕಟೇಶಮೂರ್ತಿ ಮುಂತಾದವರ ಭಾಷಣಗಳನ್ನು ಏರ್ಪಡಿಸಿದ್ದಾರೆ. ಅಮೆರಿಕದ ಬರಹಗಾರರ ಗ್ರಂಥಗಳನ್ನು 'ಸಾಹಿತ್ಯಾಂಜಲಿ' ಅಭಿನವದ ಜತೆ ಪ್ರಕಟಿಸಿದೆ.

6. ಅಮೆರಿಕದಲ್ಲಿ ಸ್ಥಾಪಿತವಾದ Association of Indians in America (AIA) ಸದಸ್ಯ, ಕಾರ್ಯಕಾರೀ ಮಂಡಲಿಯ ಸದಸ್ಯ, ಅದರ ಉಪಾಧ್ಯಕ್ಷ ಹಾಗೂ ಅಧ್ಯಕ್ಷರಾಗಿಯೂ ದುಡಿದಿದ್ದಾರೆ. ಆ ಸಂದರ್ಭದಲ್ಲಿ, ಕಳೆದ ಶತಮಾನದ 80ರ ದಶಕದಲ್ಲಿ Immigration Law ಭಾರತೀಯರಿಗೆ ಅನಾನುಕೂಲವಾಗುತ್ತಿದ್ದುದನ್ನು ಮನಗಂಡು, ಅಮೆರಿಕದ ವಿಧಾನ ಸಭೆಯ ಸದಸ್ಯರನ್ನು ಭೇಟಿಯಾಗುವ delegationನಲ್ಲಿ ಭಾಗವಹಿಸಿದ್ದರು. ಭಾರತೀಯರ ಸಮಸ್ಯೆಗಳ ಬಗ್ಗೆ ಜಾಗ್ರತೆಗೊಳ್ಳಲು ವಿವಿಧ ವಿಚಾರ ಸಂಕಿರಣಗಳನ್ನೂ ಏರ್ಪಡಿಸಲು ಸಹಾಯವಾಗಿದ್ದಾರೆ. AIA ದ ಆಶ್ರಯದಲ್ಲಿ ನಡೆದ ವಿವಿಧ ಕಾರ್ಯಕ್ರಮಗಳಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ.

7. ಅಮೆರಿಕದಲ್ಲಿ ಸ್ಥಾಪನೆಯಾದ ವಿಜ್ಞಾನಿಗಳ ಸಂಘ, Association of Scientits of Indian Originನ ಕಾರ್ಯಕಾರೀ ಸಮಿತಿಯ ಸದಸ್ಯನಾಗಿಯೂ, ಮುಂದೆ Chicago Chapterನ ಅಧ್ಯಕ್ಷನಾಗಿಯೂ ಸೇವೆ ಸಲ್ಲಿಸಿದ್ದಾರೆ. ಈ ವಿಜ್ಞಾನಿ ಸಂಘದ ಆಶ್ರಯದಲ್ಲಿ ಭಾರತದಿಂದ ಬಂದ ಹಲವು ವಿಜ್ಞಾನಿಗಳಿಂದ ವಿವಿಧ ವಿಷಯಗಳ ಮೇಲೆ ಭಾಷಣಗಳನ್ನು ಏರ್ಪಡಿಸಿದ್ದಾರೆ. ಅಲ್ಲದೆ, ವಿಜ್ಞಾನದ ಹಲವು ವಿಷಯಗಳ ಮೇಲೆ, ಅಮೆರಿಕದಲ್ಲಿ ನೆಲೆಸಿದ ವಿಜ್ಞಾನಿಗಳನ್ನು ಸೇರಿಸಿ, ಹಲವು ವಿಚಾರ ಸಂಕೀರ್ಣಗಳನ್ನೂ ಏರ್ಪಡಿಸಿದ್ದಾರೆ. 80ರ ದಶಕದಲ್ಲಿ ಶಿಕಾಗೊದಲ್ಲಿ ನಡೆದ Festival of Indiaದ ಅಂಗವಾಗಿ ನಡೆದ exhibition ಸಮಿತಿಯ ಸದಸ್ಯರಾಗಿ ಸಕ್ರಿಯವಾಗಿ ಕೆಲಸ ಮಾಡಿದ್ದಾರೆ. ಆ ಸಂದರ್ಭದಲ್ಲಿ ನಡೆದ ಮೂರು ವಿಚಾರ ಸಂಕಿರಣದ ಯಶಸ್ಸಿಗೆ ಕಾರಣರಾದವರಲ್ಲಿ ಇವರೂಬ್ಬರು.

8. ಭಾರತದಿಂದ ಅದರಲ್ಲೂ ಕರ್ನಾಟಕದಿಂದ ಆಗಮಿಸಿದ ವಿವಿಧ ಸಂಗೀತಗಾರರು, ಕಲಾವಿದರುಗಳಿಗೆ ಪ್ರೋತ್ಸಾಹ (ಎಮ್. ಎಸ್ ಸತ್ಯು, ರತ್ನಮಾಲಾ ಪ್ರಕಾಶ್, ಸಂಗೀತಾ ಕಟ್ಟಿ, ಸಿ. ಅಶ್ವಥ್, ಶಿವಮೊಗ್ಗ ಸುಬ್ಬಣ್ಣ, ಕದ್ರಿ ಗೋಪಾಲನಾಥ್, ಶತಾವಧಾನಿ ಗಣೇಶ್, ಮುಂತಾದವರಿಗೆ)

ಗೌರವ/ಸನ್ಮಾನಗಳುಗಳು:

1. ಸಾಹಿತ್ಯ ಮತ್ತು ಸಮಾಜ ಸೇವೆಯನ್ನು ಗುರುತಿಸಿ 'ಅಕ್ಕ' ಸಂಸ್ಥೆಯ ಪುರಸ್ಕಾರ (2010).

2.ಶಿಕಾಗೋ ವಲಯದ Asian Human Societyಯವರ ಗೌರವ ಸನ್ಮಾನ (1987).

3. ಶಿಕಾಗೋ ವಲಯದ ಕನ್ನಡ ಕೂಟದವರಿಂದ ಸನ್ಮಾನ (2002).

4. ಲಾಸ್ ಎಂಜಲಿಸ್ ವಲಯದ ಕನ್ನಡ ಕೂಟದವರ ಗೌರವ(2009).

5. ಉಡುಪಿಯ ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ. (2017)

6. ಅಮೆರಿಕದ ಕನ್ನಡ ಸಾಹಿತ್ಯ ರಂಗ ಮತ್ತು ಬೆಂಗಳೂರಿನ ಅಭಿನವ ಜತೆಯಾಗಿ ಮಾಡಿದ ಗೌರವ (2019).

ಅಭಿನವ

17/18-2, ಮೊದಲನೆಯ ಮುಖ್ಯರಸ್ತೆ, ಮಾರೇನಹಳ್ಳಿ, ವಿಜಯನಗರ. ಬೆಂಗಳೂರು-40 ದೂ. 9448804905,6366802919

ನಮ್ಮ ಕೆಲವು ಪ್ರಕಟಣೆಗಳು

ಗಾಳಿಯಲ್ಲಿ ಹಾರಿಬಂದ ಹೂಗಳು(ಅನುವಾದಿತ ಕವಿತೆಗಳು – ಮೈ.ಶ್ರೀ. ನಟರಾಜ	150/-
ಸ್ವಾತಂತ್ರ್ಯದೇವಿಯ ಕರುಣೆಯ ಕಗ್ಗ(ಕವನ ಸಂಕಲನ)ಮೈ.ಶ್ರೀ.ನಟರಾಜ	150/-
ಅವಳು-ಸ್ತ್ರೀ ಸಂವೇದಿ ಮಾತು ಕತೆಗಳು ಸಂ:ಮೀರಾ ಪಿ.ಆರ್.	500/-
ಪ್ರತಿಭೆ ಪರಿಶ್ರಮ ಪರಿಣತಿ(ಅನಿಲ್ ಗೋಕಾಕ್ ಅಭಿನಂದನೆ– ಭಾರತದ ಹತ್ತು ಐ ಎ ಎಸ್ ಅಧಿಕಾರಿಗಳ ಜೀವನ ಪರಿಚಯ– ವೈ.ಜಿ.ಮುರಳಿಧರ	250/-
ರಾಪದಿಬ್ಬ(ಮಕ್ಕಳಿಗಾಗಿ) ನಾಗರಾಜ ಹುಡೇದ	25/-
ಸಾತಪ್ಪಟೋಪಣ್ಣವರ(ಚಲಿಜಾವ್ ಚಳವಳಿಯಲ್ಲಿ ಪ್ರಾಣಾರ್ಪಣೆ ಮಾಡಿದ ಮೊದಲ ಕನ್ನಡಿಗ)–ರಾಜಶೇಖರ ಬಿರಾದಾರ	50/-
ಕಾಮನಬಿಲ್ಲು (ಮಕ್ಕಳಿಗಾಗಿ)–ಅಕ್ಷಯ ನಾಗ್ರೇಶಿ	25/-
ಅಶೋಕನ ಮಸ್ಕಿ ಶಾಸನ(ಮಕ್ಕಳಿಗಾಗಿ–ಗುಂಡೂರಾವ್ ದೇಸಾಯಿ	25/-
ಹರದ್ವಾರ ಅಂಗಡಿ(ಮಕ್ಕಳಿಗಾಗಿ)– ಅನು: ಆನಂದ ಪಾಟೀಲ	25/-
ಶತಮಾನದ ಕನ್ನಡ ಸಾಹಿತ್ಯ ಭಾಗ 1–ಸಂಜಿ.ಎಚ್.ನಾಯಕ	650/-
ಶತಮಾನದ ಕನ್ನಡ ಸಾಹಿತ್ಯ ಭಾಗ 2–ಸಂಜಿ.ಎಚ್.ನಾಯಕ	650/-
ಮಕ್ಕಳೇ ದೇವರು(ಎನ್ ಆರ್ ನಾಯಕರ ಮಕ್ಕಳ ಪದ್ಯಗಳು) ಸಂ. ಆನಂದಪಾಟೀಲ	50/-
ಮೈಯೇ ಸೂರು ಮನವೇ ಮಾತು– ಬಸವರಾಜ ಕಲ್ಗುಡಿ	500/-
ಅನುಸಂಧಾನ– ನರಹಳ್ಳಿ ಬಾಲಸುಬ್ರಹ್ಮಣ್ಯ	100/-
ಹಸುರಿನ ಕಟ್ಟು–ತಮ್ಮಣ್ಣ ಬೀಗಾರ	75/-
ಅಪರೂಪದ ಮಕ್ಕಳ ಕವಿ ಎನ್. ಶ್ರೀನಿವಾಸ ಉಡುಪ– ಆನಂದ ಪಾಟೀಲ	100/-
ಅವಳಿ(ಮಕ್ಕಳ ಕಾದಂಬರಿ) ಅನು: ಶಿವಲಿಂಗಪ್ಪ ಹಂದಿಹಾಳು	100/-
ಕನಾಟಕದ ಇತಿಹಾಸ–ಬಾ.ರಾ.ಗೋಪಾಲ್	500/-
ಹಾಲಕ್ಕಿ ಹಾಡುಕೋಗಿಲೆ ಸುಕ್ರಿಬೊಮ್ಮಗೌಡ–ಅಕ್ಷತಾ ಕೃಷ್ಣಮೂರ್ತಿ	50/-
ಅರ್ಪಣ ದೃಷ್ಟಿ– ಅನಿಲ್ ಗೋಕಾಕ್	75/-
ನಿಜತಿಲಕ(ಎಚ್ ಆರ್ ತಿಮ್ಮೇಗೌಡ ಅಭಿನಂದನೆ) ಸಂ. ಪಿ ಕೆ ರಾಜಶೇಕರ	1000/
ಆಡಳಿತದಲ್ಲಿ ನೈತಿಕತೆ– ವೈ ಜಿ ಮುರಳೀಧರನ್	150/-
ಹಲ್ಮಿಡಿ ಶಾಸನ ಸಮಗ್ರ ಅಧ್ಯಯನ–ಸಂ:ಷ.ಶೆಟ್ಟರ್	250/-
ಅಪ್ರಮೇಯ(ಕವನಸಂಕಲನ) ಕೆ. ವಿ. ತಿರುಮಲೇಶ್	300/-
ಚೆಕ್ ಮೇಟ್– ಅನುವಾದಿತ ಮಕ್ಕಳ ಕಾದಂಬರಿ – ಅನು: ಅರವಿಂದ ಪಟೇಲ್ ಮೂಲ: ರಾಮೇಂದ್ರಕುಮಾರ್	150/-
ಪುನರ್ನವ– ಕಾದಂಬರಿ– ಸಿ. ಪಿ. ರವಿಕುಮಾರ್	500/-
ನಿರಂತರ– ಕಾದಂಬರಿ– ಟಿ. ಎಸ್. ರಮಾನಂದ	350/-
ಜನವಾಣಿ–ಜೀಯು ಭಟ್ ಅಂಕಣ ಬರಹ–ಸಂ.ಕೃಷ್ಣಮೂರ್ತಿ ಹೆಬ್ಬಾರ	200/-
ಸಾಹಿತ್ಯ ಮತ್ತು ವಾಗ್ವಾದಗಳು–ರಹಮತ್ ತರೀಕೆರೆ	250/-
ರಾಶೊಮಾನ್ ಅಕ್ ತಗವ ಕಥೆಗಳು ಅನು:ಕೆ. ಪುಟ್ಟಸ್ವಾಮಿ	200/-
ಕೋಲ್ಜೇನು– ಮಕ್ಕಳ ಅನುಭವ ಲೋಕ– ತಮ್ಮಣ್ಣ ಬೀಗಾರ	100/-
ನೇಪಥ್ಯದ ನಿಲುವುಗನ್ನಡಿ(ಕವನ ಸಂಕಲನ) ವಸುಂಧರ ಕೆ. ಎಮ್.	100/-
ಯಕ್ಷಕವಿ ಕೆಂಪಣ್ಣಗೌಡ(ಸಮಗ್ರಸಾಹಿತ್ಯ ಶೋಧ)ನರಹಳ್ಳಿ ಬಾಲಸುಬ್ರಹ್ಮಣ್ಯ	100/-
ನಾನು ಪಯಣಿಗ(ವಿ.ಕೃ.ಗೋಕಾಕರ ಕೆಲವು ಕವಿತೆಗಳು)ಸಂ.ನರಹಳ್ಳಿ ಬಾಲಸುಬ್ರಹ್ಮಣ್ಯ,ಪಿ.ಚಂದ್ರಿಕಾ	100/-
ಮಗಳು ಹೋಗಿದ್ದಾಳೆ ಶಾಲೆಗೆ(ಕವನ)ಸುಕನ್ಯಾ ಕಳಸ	75/-
ಕನ್ನಡ ಭಾಷೆ:ರಚನೆ ಮತ್ತು ಬಳಕೆ– ಕೆ. ಪಿ. ಭಟ್	200/-
ಗೋಕಾಕರ ನಾಟಕಗಳು–ವಿ.ಕೃ.ಗೋಕಾಕ್	350/-
ಸಾಹಿತ್ಯ ಮತ್ತು ಸಿದ್ಧಾಂತಗಳು–ರಾಜೇಂದ್ರ ಚೆನ್ನಿ	100/-
ಮಲ್ಲಿಗೆ ಹುಡುಗ(ಮಕ್ಕ ಕಥನ ಕವನ) ಆನಂದ ಪಾಟೀಲ	25/-
ಎದ್ದು ನಿಂತ ಬಾಲ(ಮಕ್ಕಳಿಗಾಗಿ ಮೋಜಿನ ಕತೆ) ಆನಂದ ಪಾಟೀಲ	25/-
ಸ್ಟ್ರೈಕು ಟ್ರಕ್ಕು ಹುಡಗೂರು (ಮಕ್ಕಳ ಕಥನ ಕವನ) ಆನಂದ ಪಾಟೀಲ	25/-
ವಿನ್ನಿ ಪೂಹಾ (ಮಕ್ಕಳ ಅಪರೂಪದ್ದೊಂದು ಲೋಕ) ಅನು: ಆನಂದ ಪಾಟೀಲ	75/-

ನನ್ನ ಪ್ರಿಯವು ಈ ಪುಟ್ಟರ ಹಾಡುಗಳು (ಮಕ್ಕಳ ಕವಿತೆಗಳು) ಅನು: ಆನಂದ ಪಾಟೀಲ		75/–
ಅರಿವಿನ ಬಂಡಾಯ– ಕೈದೀವಿಗೆಯ ಬೆಳಕು– ನರಹಳ್ಳಿ ಬಾಲಸುಬ್ರಹ್ಮಣ್ಯ		200/–
ಹೀಗಿದ್ದರು ಪ್ರಭುಶಂಕರ(ನೆನಪಿನಹೊತ್ತಿಗೆ)–ಸಂ.ನ.ರವಿಕುಮಾರ,ಅಸಿತಾ ಪ್ರಭುಶಂಕರ		500/–
ಆದಿಕಾವ್ಯ1–ಚಿಕ್ಕಣಿರಾಜ(ಮಕ್ಕಳಕವನಸಂಕಲನ)–ಕೆ.ವಿ.ತಿರುಮಲೇಶ್		100/–
ಆದಿಕಾವ್ಯ2–ಓಡೋಪುಟ್ಟ ಓಡೋ(ಮಕ್ಕಳ ಕವನ ಸಂಕಲನ) –ಕೆ. ವಿ. ತಿರುಮಲೇಶ್		100/–
ಆದಿಕಾವ್ಯ3–ಬೀಸಿದರೆಉದುರಬೇಕು(ಮಕ್ಕಳಕವನಸಂಕಲನ)–ಕೆ. ವಿ. ತಿರುಮಲೇಶ್		150/–
ಆದಿಕಾವ್ಯ4–ನಂಬಿಕೆಟ್ಟವರಿಲ್ಲ ಪುಟ್ಟನ(ಮಕ್ಕಳ ಕವನ ಸಂಕಲನ)–ಕೆ. ವಿ.ತಿರುಮಲೇಶ್		150/–
ಆದಿಕಾವ್ಯ5–ನಾನಿದ್ದೀನಲ್ಲ ಅಂತಾನ್ ಪುಟ್ಟ(ಮಕ್ಕಳ ಕವನ ಸಂಕಲನ)–ಕೆ. ವಿ.ತಿರುಮಲೇಶ್		150/–
ಆದಿಕಾವ್ಯ6–ನೆನೆ ಪುಟ್ಟನೆನೆ(ಮಕ್ಕಳ ಕವನ ಸಂಕಲನ)–ಕೆ. ವಿ.ತಿರುಮಲೇಶ್		150/–
ಆದಿಕಾವ್ಯ7–ಅಟ್ಟದಲ್ಲೇನಿದೆಯೊ ಪುಟ್ಟನಿಗೇ ಗೊತ್ತು(ಮಕ್ಕಳ ಕವನ ಸಂಕಲನ) –ಕೆ. ವಿ.ತಿರುಮಲೇಶ್		150/–
ಆದಿಕಾವ್ಯ8–ಇಂತಪ್ಪಪುಟ್ಟ ಈಗೆಲ್ಲಪುಟ್ಟ(ಮಕ್ಕಳ ಕವನ ಸಂಕಲನ)–ಕೆ. ವಿ.ತಿರುಮಲೇಶ್		150/–
ಆದಿಕಾವ್ಯ9–ಮೆಟ್ರೋದಲ್ಲಿ ಇಲಿ(ಮಕ್ಕಳ ಕವನ ಸಂಕಲನ) –ಕೆ ವಿ ತಿರುಮಲೇಶ್		150/–
ಆದಿಕಾವ್ಯ10 ಓ ಲಲಾ(ಮಕ್ಕಳ ಕವನ ಸಂಕಲನ) –ಕೆ ವಿ ತಿರುಮಲೇಶ್		150/–
ಶೈಶವ(ಧರೆಯ ಮೇಲಣ ತರೆಗಳು) ಮೂಲ:ಎಮಿಲಿ ರಾಲ್ಫ್ ಗ್ರೋಶೋಲ್ಸ್ ಅನು: ಮೈ. ಶ್ರೀ ನಟರಾಜ		100/–
ಮಣ್ಣೆ(ಪರಿಚಯಾತ್ಮಕ ಅಧ್ಯಯನ)– ಎಚ್. ಎಸ್. ಗೋಪಾಲರಾವ್		250/–
ಅವಧ(ಸಾಹಿತ್ಯಅಕಾಡೆಮಿ ಪ್ರಶಸ್ತಿಪುರಸ್ಕೃತಕವನಸಂಕಲನ)–ಕೆ.ವಿ. ತಿರುಮಲೇಶ್		250/–
ಪಶ್ಚಿಮಾಯನ(ವಸಾಹತು ಹಿಸ್ಟರಿ ಮತ್ತು ಕನ್ನಡ ಜಗತ್ತು)–ರಾಜಾರಾಮ ಹೆಗಡೆ		250/–
ನನ್ನ ಡ್ರೈವಿಂಗ್ ಡೈರಿ–ರಾಜೇಶ್ವರಿ ತೇಜಸ್ವಿ		150/–
ನನ್ನ ಕಾದಂಬರಿ ಮೀಮಾಂಸೆ– ವಿ.ಕೃ.ಗೋಕಾಕ್		75/–
ಆಧುನಿಕೋತ್ತರವಾದ– ರಾಜೇಂದ್ರ ಚೆನ್ನಿ		100/–
ಎಸಳು(ಗೋಕಾಕರ ಮುನ್ನುಡಿಗಳು)–ಸಂ.ದೇವು ಪತ್ತಾರ		250/–
ಉರಿ ಚಮ್ಮಾಳಿಗೆ ಭಾರತದ ದಲಿತ ಚಳವಳಿಯ ಅಧ್ಯಯನ– ಡಿ. ಆರ್. ನಾಗರಾಜ್ – ಅನು: ಎಂ ಎಸ್ ಆಶಾದೇವಿ		100/–
ನೆನಪಿನ ರಂಗಸ್ಥಳ (ಕೆರೆಮನೆ ಶಿವರಾಮ ಹೆಗಡೆ ಆತ್ಮಕಥನ) ನಿ: ಜಿ. ಎಸ್. ಭಟ್ ಸಾಗರ		200/–
ತೌಲನಿಕಅಧ್ಯಯನ(ತಾತ್ತ್ವಿಕಮತ್ತುಆನ್ವಯಿಕತೆ)	ಸಿ. ಎನ್. ರಾಮಚಂದ್ರನ್	100/–
ಯಕ್ಷಗಾನಲೀಲಾವಳಿ(ಲೀಲಾವತಿಬೈಪಾಡಿತ್ತಾಯಆತ್ಮಕಥನ)	ನಿರೂಪಣೆ: ವಿದ್ಯಾರಶ್ಮಿ ಪೆಲತ್ತಡ್ಕ	150/–
ಯುದ್ಧ ಮತ್ತು ಶಾಂತಿ– ಒಂದು ಪುಟ್ಟಕೈಪಿಡಿ	ಓ. ಎಲ್. ನಾಗಭೂಷಣಸ್ವಾಮಿ	50/–
ಪ್ರಜ್ಞಾಪ್ರವಾಹ ತಂತ್ರ	ಓ. ಎಲ್. ನಾಗಭೂಷಣಸ್ವಾಮಿ	75/–
ಸಮನ್ವಯ(ಭಾರತೀಯಪರಂಪರೆಒಂದುಪ್ರವೇಶ)	ಸಂ.ನರಹಳ್ಳಿಬಾಲಸುಬ್ರಹ್ಮಣ್ಯ	400/–
ಭಾರತೀಯ ಪುರುಷಾರ್ಥ ಚಿಂತನೆ	ಮೂಲ: ಎಂ. ಹಿರಿಯಣ್ಣ ಅನು: ಸ್ವಾಮಿ ಅಚಲಾನಂದ	500/–
ಬಾಳು –ಸಾವು ಒಡ್ಡುತ್ತಿರುವ ಆಮಿಷ!(ಉಪನಿಷತ್ತಿಗೊಂದು ಮರುಪ್ರವೇಶ)	ಲಕ್ಷ್ಮೀಶ ತೋಳ್ಪಾಡಿ	75/–
ನವಿಲುಗರಿ ಮರಿ ಹಾಕಿದೆ(ಪ್ರಬಂಧಗಳು)	ವಿನಾಯಕ ಅರಳಸುರಳಿ	100/–
ಸೆಪ್ಟೆಂಬರ್ 5(ಡಾ.ಸರ್ವೇಪಲ್ಲಿರಾಧಾಕೃಷ್ಣನ್ ಜೀವನಚರಿತ್ರೆ)	ಡಾ.ಶೀಲಾಕಾಂತಪತ್ತಾರ	100/–
ನೆಲ ಸಂಸ್ಕೃತಿ(ಸಾಹಿತ್ಯವಿಮರ್ಶೆ)	ನರಹಳ್ಳಿಬಾಲಸುಬ್ರಹ್ಮಣ್ಯ	300/–
ದಿ ರೇಲ್ವೆ ಚಿಲ್ಡ್ರನ್ (ಮಕ್ಕಳಕಾದಂಬರಿ)	ಡಾ. ಅರವಿಂದ ಪಟೇಲ್	200/–
ಹುಲಿ ಸೀರೆ(ಕವನಗಳು)	ಕೆ.ವೈ.ನಾರಾಯಣಸ್ವಾಮಿ	150/–
ದೇಸಾಯಿಕಥನ(ಶಾಂತಿನಾಥದೇಸಾಯಿಸಮಗ್ರಸಾಹಿತ್ಯಅಧ್ಯಯನ)	ಟಿ.ಪಿ.ಅಶೋಕ	125/–
ಅಕ್ಷರಲೋಕದಅಂಚಿನಲ್ಲಿ(ಮರೆತಮಾತುಮರೆಯಾಗದನೆನಪು)	ಕೆ.ವಿ.ತಿತುಮಲೇಶ್	500/–
ಸೂತ್ರದಗೊಂಬೆ ಮತ್ತು ನೀಲಕಿನ್ನರಿ(ಪಿನಾಕಿಯೊ)	ಅನು: ರಜನಿ ನರಹಳ್ಳಿ	150/–
ಸ್ಥಪತಿ(ರೂವಾರಿಗಳಜತೆಪಯಣ)	ಷ. ಶೆಟ್ಟರ್ /ಅನು: ಶಾಂತಿನಾಥ ದಿಬ್ಬದ	350/–
ಸ್ವಾಯತ್ತಪ್ರಜ್ಞೆ(ಸಮಕಾಲೀನಸಮಾಜಕ್ಕೊಂದುಸಾಹಿತ್ಯಕಸ್ಪಂದನೆ)	ನರಹಳ್ಳಿ ಬಾಲಸುಬ್ರಹ್ಮಣ್ಯ	200/–
ಪಥ್ಯದಭವಾವಳಿ(ಸಾಹಿತ್ಯ–ಸಂಸ್ಕೃತಿ:ಸಮಕಾಲೀನಪ್ರತಿಸ್ಪಂದನೆ)	ವಿಕ್ರಮ ವಿಸಾಜಿ	500/–
ಸಣ್ಣಬೆಂಕಿ(ಕವಿತೆಗಳು)	ನಾಗರಾಜ ಹೆಗಡೆ ಅಪಗಾಲ	150/–
ಮುಸುಗು(ಕಾದಂಬರಿ)	ಕೆ.ವಿ.ತಿರುಮಲೇಶ್	250/–
ಬಿಟ್ಟಸ್ಥಳ (ಕಥಾಸಂಕಲನ)	ಪ್ರಜ್ಞಾಮತ್ತಿಹಳ್ಳಿ	200/–
ಮೊಕಾಶಿಕಥನ(ಶಂಕರಮೊಕಾಶಿಪುಣೇಕರಸಮಗ್ರಸಾಹಿತ್ಯಅಧ್ಯಯನ)	ಟಿ.ಪಿ. ಅಶೋಕ	100/–
ಅಮರೊ(ಮಕ್ಕಳಿಗಾಗಿಕಾದಂಬರಿ)ಮೂಲ:ಸುಕೀರ್ತಿಭಟ್ನಾಗರ್	ಅನು: ಯಲ್ಲಪ್ಪ ಹಂದ್ರಾಳ	150/–
ಪದಸೋಪಾನ(ವರ್ತಮಾನದ ತಲ್ಲಣ ನಿರಂತರ ಧ್ಯಾನ)	ನರಹಳ್ಳಿ ಬಾಲಸುಬ್ರಹ್ಮಣ್ಯ	400/–
ನನ್ನೊಳಗಿನ ಅಪ್ಪ (ಆತ್ಮಕತೆ)	ಆತ್ಮಾನಂದ	175/–
ಬೆಳದಿಂಗಳು (ಮಕ್ಕಳಕಾದಂಬರಿ)	ಆನಂದ ಪಾಟೀಲ	50/–
ಡಂಡಂಊರಿಗೆಡಿಂಡಿಂಗಾಡಿ(ಮಕ್ಕಳಕಾದಂಬರಿ)	ಆನಂದ ಪಾಟೀಲ	50/–

ಪುಟ್ಟಾರಿಆನೆಪುಟ್‌ಪುಟ್!(ಮಕ್ಕಳಿಗಾಗಿಕಾದಂಬರಿ)	ಆನಂದ ಪಾಟೀಲ	500/–
ವೈಷ್ಣವದಿಂದಶ್ರೀವೈಷ್ಣವಕ್ಕೆ(ಪೂರ್ವ–ರಾಮಾನುಜಯುಗದಲ್ಲಿಕರ್ನಾಟಕದಶ್ರೀವೈಷ್ಣವಅಗ್ರಹಾರಗಳು)	ಷ.ಶೆಟ್ಟರ್	100/–
ಕಪ್ಪೆಅರಭಟ್ಟನಶಾಸನ(ಸಮಗ್ರಅಧ್ಯಯನ)	ಷ.ಶೆಟ್ಟರ್	150/–*
ನಾಟ್ಯಶಾಸ್ತ್ರಪರಂಪರೆಮತ್ತುಪ್ರಾಸಂಗಿಕತೆ(ಹಿಂಮೂಲ:ರಾಧಾವಲ್ಲಭತ್ರಿಪಾಟಿ)	ಅನು:ಅತ್ತಿಮುರುಡುವಿಶ್ವೇಶ್ವರ	75/–
ಎಪಿಕ್‌ರಂಗಭೂಮಿ(ಬರ್ಟೋಲ್ಟ್‌ಬ್ರೆಖ್ಟ್‌ಮತ್ತುಆತನನಾಟಕ,ರಂಗಭೂಮಿಮತ್ತುಸಿದ್ಧಾಂತಗಳಪರಿಚಯ)	ಅಕ್ಷರಕೆ.ವಿ.	100/–
ಹಗಲಲ್ಲಿತೊಗಲಬಾವುಲಿ(ಕತೆಗಳು)	ವಿ.ಕೃ.ಗೋಕಾಕ್	75/–
ಹಣತೆಯಹಾಡು(ಜಿ.ಎಸ್.ಶಿವರುದ್ರಪ್ಪನವಸಮಸ್ತಸಾಹಿತ್ಯಶೋಧ)	ನರಹಳ್ಳಿಬಾಲಸುಬ್ರಹ್ಮಣ್ಯ	250/–*
ಆರೋಹಣ(ಮಕ್ಕಳಿಗಾಗಿವೈಜ್ಞಾನಿಕಕಾದಂಬರಿ)	ಹ.ಶಿ.ಭೈರನಹಟ್ಟಿ	75/–*
ಕೆಂಪುಮುಡಿಯಹೆಣ್ಣು(ಒರ್ಹಾನ್‌ಪಮುಕ್‌ಕಾದಂಬರಿ)	ಅನು:ಓ.ಎಲ್.ನಾಗಭೂಷಣಸ್ವಾಮಿ	250/–
ಮುದ್ದುರಾಮನಅರಿವು(999ಚೌಪದಿಗಳಸಂಕಲನ)	ಕೆ.ಸಿ.ಶಿವಪ್ಪ	200/–
ಮುದ್ದುರಾಮನನಲಿವು(900ಚೌಪದಿಗಳಸಂಕಲನ)	ಕೆ.ಸಿ.ಶಿವಪ್ಪ	200/–
ಕುಮಾರವ್ಯಾಸಕಥಾಂತರ(ಕರ್ಣಪರ್ವ,ಶಲ್ಯಪರ್ವ,ಗದಾಪರ್ವ)	ಎಚ್.ಎಸ್.ವೆಂಕಟೇಶಮೂರ್ತಿ	400/–*
ಬಾಡಿಗೆಮನೆಗಳರಾಜಚರಿತ್ರೆ(ಆತ್ಮವೃತ್ತಾಂತದನಾಲ್ಕನೇಭಾಗ)	ಕೆ.ಸತ್ಯನಾರಾಯಣ	350/–
ಸ್ವಯಂದೀಪಕತೆ(ಅಡಿಗರವ್ಯಕ್ತಿತ್ವಮತ್ತುಕಾವ್ಯ)	ಎಸ್.ದಿವಾಕರ್	50/–
ಸಿಂದಾಬಾದನ ಆತ್ಮಕಥೆ(ಕವನ ಸಂಕಲನ)	ಎಚ್.ಎಸ್.ವೆಂಕಟೇಶಮೂರ್ತಿ	50/–*
ಹರಿಗೋಲು(ಕವನಸಂಕಲನ)	ಎಚ್.ಎಸ್.ವೆಂಕಟೇಶಮೂರ್ತಿ	75/–*
ಕೃಷ್ಣಕಥನ(ಶ್ರೀಕೃಷ್ಣಆಲನಹಳ್ಳಿಸಮಗ್ರಸಾಹಿತ್ಯಅಧ್ಯಯನ)	ಟಿ.ಪಿ.ಅಶೋಕ	80/–*
ದೇವನೂರುಕಥನ(ದೇವನೂರುಮಹಾದೇವಸಮಗ್ರಸಾಹಿತ್ಯಅಧ್ಯಯನ)	ಟಿ.ಪಿ.ಅಶೋಕ	75/–
ನ್ಯಾಯನಿಷ್ಠುರಿಗಳಜತೆಯಲ್ಲಿ(15ಮಾತುಕತೆಗಳು)	ರಹಮತ್‌ತರೀಕೆರೆ	300/–
ಶಾಸನಅಧ್ಯಯನ(ಕೆಲಹೆಜ್ಜೆಗುರುತುಗಳು)	ಎಚ್.ಎಸ್.ಗೋಪಾಲರಾವ್	250/–
ಮೃಗಶಿರ(ಕಾದಂಬರಿ)	ಶ್ರೀಧರಬಳಗಾರ	150/–*
ಕಾಲಉರುಳಿಉಳಿದುದುನೆನಪಷ್ಟೇ!	ನಾಗಐತಾಳ(ಆಹಿತಾನಲ)	250/–*
ಅಸ್ಮಿತೆ(ಕತೆಗಳು)	ಕೃಷ್ಣಮೂರ್ತಿ ಚಂದರ್	150/–
ವಿಸರ್ಜನೆ(ಕವನ ಸಂಕಲನ)	ಅರವಿಂದ	125/–*
ದ್ಯಾವಾಪೃಥಿವೀ (ಕವನಸಂಕಲನ)	ವಿ.ಕೃ.ಗೋಕಾಕ್	75/–
ಸಿಗ್ಮಂಡ್‌ಫ್ರಾಯ್ಡ್(ಜೀವನಮತ್ತುಸಿದ್ಧಾಂತಗಳು)	ಎಂ.ಬಸವಣ್ಣ	150/–
ಸಮುದ್ರದೀಚೆಯಿಂದ(ಪ್ರವಾಸಕಥನ)	ವಿ.ಕೃ.ಗೋಕಾಕ್	100/–
ಆನೆಕಥೆ	ನಾಗರಾಜ್‌ನವೀಮನೆ	50/–*
ಯಕ್ಷಗಾನಜ್ವಾಲಾಪ್ರತಾಪ	ಹೊಸ್ತೋಟಮಂಜುನಾಥಭಾಗವತ	50/–*
ಯಕ್ಷಗಾನಲೀಲಾವತಿಪರಿಣಯ	ಮೂಲಕತೆ:ಮಹಾದೇವಯಂಕಹಳ್ಳೇರ್ ಯಕ್ಷರೂಪ:ಹೊ.ಮಂಜುನಾಥಭಾಗವತ	50/–*
ಬಾಕುವೆಂಪುದರ್ಶನಕೆ(ಕುವೆಂಪುಸಮಸ್ತಸಾಹಿತ್ಯಶೋಧ)	ನರಹಳ್ಳಿಬಾಲಸುಬ್ರಹ್ಮಣ್ಯ	750/–
ಮೋದಾಳಿ (ನಾಟಕ)	ಪಿ.ಚಂದ್ರಿಕಾ	75/–
ಆನಂದಾವಲೋಕನ(ಮಕ್ಕಳಸಾಹಿತ್ಯಕೆಲನುಡಿಚಿತ್ರಗಳು)	ಸಂ:ಕೆ.ಶಿವಲಿಂಗಪ್ಪಹಂದಿಹಾಳು	375/–
ಸುತ್ತುವಗ್ರಹಗಳಿಂದಚಲಿಸುವವಿಗ್ರಹಗಳವರೆಗೆ(ವಿಜ್ಞಾನ–ಸಾಹಿತ್ಯಅಂತರ್‌ಶಿಸ್ತೀಯತೆ)	ಸಂ.ನರಹಳ್ಳಿಬಲಸುಬ್ರಹ್ಮಣ್ಯ	200/–*
ಮಾತುತಲೆಎತ್ತಿದಬಗೆ(ಭಾರತೀಯಸಮಾಜಕ್ಕೆಪ್ರತಿಸ್ಪಂದನೆ)	ಸಂ:ನ.ರವಿಕುಮಾರ	125/–
ನನ್ನದೊಂದುಕನಸಿದೆ(ಮಾತುಗಳಲ್ಲಿಮಿಡಿದಮಾನವೀಯತೆವಿಶ್ವಾತ್ಮಕನೋಟ)	ಸಂ:ನ.ರವಿಕುಮಾರ	75/–*
ಹೊ.ಮಂಜುನಾಥಭಾಗವತರಚಿತ್ರಪಟರಾಮಾಯಣ	ಸಂ:ಪೃಥ್ವಿರಾಜಕವತ್ತಾರು	100/–*
ಕಲೆಯ ನೆಲೆ	ವಿ.ಕೃ.ಗೋಕಾಕ್	75/–
ಸೌಂದರ್ಯಮೀಮಾಂಸೆ	ವಿ.ಕೃ.ಗೋಕಾಕ್	75/–
ಸಾಹಿತ್ಯದಲ್ಲಿಪ್ರಗತಿ	ವಿ.ಕೃ.ಗೋಕಾಕ್	100/–*
ಲೈಂಗಿಕಜಾತಕ(ಕಾದಂಬರಿ)	ಕೆ.ಸತ್ಯನಾರಾಯಣ	150/–

ಮಹಾಸತಿಆಚರಣೆ(ಒಂದುಅಧ್ಯಯನ)	ಬಸವರಾಜಕಲ್ಗುಡಿ	500/-*
ಮುಗ್ಧ-ಪ್ರಬುದ್ಧ(ಕಾದಂಬರಿಓದುವಾಗ,ಬರೆಯುವಾಗನಮಗೇನಾಗುತ್ತದೆ)	ಮೂಲ:ಒರ್ಹಾನ್‌ಪಮುಕ್, ಅನು:ಓ.ಎಲ್.ನಾಗಭೂಷಣಸ್ವಾಮಿ	150/-
ಹಿತ್ತಲಜಗತ್ತು(ಲಲಿತಪ್ರಬಂಧಗಳು)	ರಹಮತ್‌ತರೀಕೆರೆ	200/-
ನವ್ಯತೆ	ವಿ.ಕೃ.ಗೋಕಾಕ್	175/-*
ಸಮುದ್ರದಾಚೆಯಿಂದ(ಪ್ರವಾಸಕಥನ)	ವಿ.ಕೃ.ಗೋಕಾಕ್	200/-
ಜನ್ನನಯಶೋಧರಚರಿತೆ(ತಿಳಿಗನ್ನಡಅವತರಣ)	ಎಚ್.ಎಸ್.ವೆಂಕಟೇಶಮೂರ್ತಿ	150/-
ಅವ್ಯಯಕಾವ್ಯ	ಕೆ.ವಿ.ತಿರುಮಲೇಶ್	275/-*
ಕುವೆಂಪುದರ್ಶನಮೀಮಾಂಸೆ	ನರಹಳ್ಳಿಬಾಲಸುಬ್ರಹ್ಮಣ್ಯ	100/-
ಇಹದಪರಿಮಳದಹಾದಿ(ಕೆ.ಎಸ್.ನ.ಜೀವನಮತ್ತುಸಾಹಿತ್ಯಕುರಿತಮಹಾಪ್ರಬಂಧ)	ನರಹಳ್ಳಿಬಾಲಸುಬ್ರಹ್ಮಣ್ಯ	300/-
ರೂವಾರಿ(ಕನ್ನಡನಾಡಿನವಾಸ್ತು-ಶಿಲ್ಪಿಗಳಚಾರಿತ್ರಿಕಹಿನ್ನೆಲೆ)	ಷ.ಶೆಟ್ಟರ್	350/-
ಕರಗಿಸುವಕಡಾಯಿ...ಕೋಸುಂಬರಿಕುಕ್ಕೆ(ಪ್ರಬಂಧಗಳು)	ಮೈ.ಶ್ರೀ.ನಟರಾಜ	350/-
ಪ್ರಗತಿಶೀಲತೆ	ಎಚ್.ಎಸ್.ರಾಘವೇಂದ್ರರಾವ್	150/-
ದೇಹದನಂಟಿನತುದಿಯಪ್ರೇಮದಹೂ	ಪಿ.ಚಂದ್ರಿಕಾ,ಡಿ.ಸಿ.ಗೀತಾ	20/-
ಸಿನಿಮಾಯಾನ(ಕನ್ನಡಚಿತ್ರರಂಗ75:ಒಂದುಫ್ಲಾಷ್‌ಬ್ಯಾಕ್)	ಕೆ.ಪುಟ್ಟಸ್ವಾಮಿ	375/-
ಮರುಕಳಿಸಿದಮಾರ್ದವತೆ(ಎಂ.ಗೋಪಾಲಕೃಷ್ಣಅಡಿಗ-ಕೆಲವುಸಂವೇದನೆಗಳು)	ಕೆ.ಸತ್ಯನಾರಾಯಣ	50/-*
ಕರ್ನಾಟಕ-ಬಹುತ್ವದಆಯಾಮಗಳು	ಷ.ಶೆಟ್ಟರ್	75/-
ಅನುರೂಪ(ಲೇಖನಗಳು)	ಶ್ರೀಧರಹೆಗಡೆಭದ್ರನ್	200/-
ಸಾಹಿತ್ಯಚಳುವಳಿಗಳು(ಆಯ್ದಲೇಖನಗಳು)	ಸಂ:ಶ್ರೀಧರಹೆಗಡೆಭದ್ರನ್	100/-
ದಿಯಂಗ್‌ಸೈಂಟಿಸ್ಟ್(ಮಕ್ಕಳಿಗಾಗಿಕಾದಂಬರಿ)	ಅನು:ಕೆ.ಶಿವಲಿಂಗಪ್ಪಹಂದಿಹಾಳು	50/-*
ಓಡಿಹೋದಹುಡುಗ(ಮಕ್ಕಳಿಗಾಗಿಕಾದಂಬರಿ)	ಬಸು ಬೇವಿನಗಿಡದ	150/-
ವಚನಸೂಕ್ತಿಸಂಚಯ	ಕೆ.ಸಿ.ಶಿವಪ್ಪ	600/-
ಇಂದಿನಕನ್ನಡಕಾವ್ಯದಗೊತ್ತುಗುರಿಗಳು	ವಿ.ಕೃ.ಗೋಕಾಕ	150/-
ಅದರನಂತರ(ಕವಿತೆಗಳು)	ಎಚ್.ಆರ್.ರಮೇಶ	100/-*
ನೀರೊಳಗೆಮಾಯದಜೋಳಿಗೆ(ಕವಿತೆಗಳು)	ರಾಜೇಂದ್ರಪ್ರಸಾದ್	100/-*
ಮಾತಿಗೆಮುನ್ನ(ಗೋಪಾಲಕೃಷ್ಣಅಡಿಗರಕಾವ್ಯದಸುತ್ತಮುತ್ತ)	ಲಕ್ಷ್ಮೀಶತೋಳ್ಪಾಡಿ	100/-*
ಬೆಟ್ಟಮಹಮದನಬಳಿಗೆಬಾರದಿದ್ದರೆ	ಲಕ್ಷ್ಮೀಶತೋಳ್ಪಾಡಿ	150/-
ಪಾ.ವೆಂ.ಹೇಳಿದಕತೆ	ರವಿಬೆಳಗೆರೆ	150/-
ಆಪ್ತಗೀತೆ(ಭಗವದ್ಗೀತೆಯತಿಳಿಗನ್ನಡಅವತರಣ)	ಎಚ್.ಎಸ್.ವೆಂಕಟೇಶಮೂರ್ತಿ	275/-
ಸ್ಕೂಲುಬಿಡುವಸಮಯ(ಪ್ರಬಂಧಗಳು)	ಕೆ.ಸತ್ಯನಾರಾಯಣ	250/-*
ದಾಸ್ಯದಿಂದಆಚೆಗೆ(ಬೂಕರ್‌ಟಿ.ವಾಸಿಂಗ್ಟನ್‌ಆತ್ಮಕತೆ)	ಕನ್ನಡಕ್ಕೆ:ಕೆ.ಪುಟ್ಟಸ್ವಾಮಿ	200/-*
ಸ್ತ್ರೀವಾದ(ಪದವಿವರಣಕೋಶ)	ಎಚ್.ಎಸ್.ಶ್ರೀಮತಿ	500/-*
ಭಾರತಯಾತ್ರೆ(ಮಹಾಭಾರತಅನುಸಂಧಾನ)	ಲಕ್ಷ್ಮೀಶತೋಳ್ಪಾಡಿ	200/-
ಸಂರಚನಾವಾದ	ಕಿಕ್ಕೇರಿನಾರಾಯಣ	100/-*
ಅನಕೃಮತ್ತುಕನ್ನಡಸಂಸ್ಕೃತಿ	ನರಹಳ್ಳಿಬಾಲಸುಬ್ರಹ್ಮಣ್ಯ	100/-*
ವೈದೇಹಿ(ಜೀವನಮತ್ತುಕೃತಿಗಳಶೋಧ)	ಸಂ:ಮುರಳೀಧರಉಪಾಧ್ಯಹಿರಿಯಡಕ	500/-*
ಸಂಜೀವನ(ಯಕ್ಷಗಾನಗುರುಬನ್ನಂಜೆಸಂಜೀವಸುವರ್ಣರಅಪೂರ್ಣಆತ್ಮಕಥನ)	ನಿರೂಪಣೆ:ಪೃಥ್ವಿರಾಜಕವತ್ತಾರು	200/-*
ಪ್ರಾಕೃತಜಗದ್ವಲಯ(ಪ್ರಾಕೃತ-ಕನ್ನಡ-ಸಂಸ್ಕೃತಭಾಷೆಗಳಅನುಸಂಧಾನ)	ಷ.ಶೆಟ್ಟರ್	250/-
ಅಪರೂಪದಕತೆಗಳು	ಕೆ.ವಿ.ತಿರುಮಲೇಶ್	300/-*
ಕುಮಾರವ್ಯಾಸಕಥಾಂತರ(ಉದ್ಯೋಗಪರ್ವ,ಭೀಷ್ಮಪರ್ವ,ದ್ರೋಣಪರ್ವ)	ಎಚ್.ಎಸ್.ವೆಂಕಟೇಶಮೂರ್ತಿ	300/-*
ಕಾವ್ಯಸೃಷ್ಟಿಯಸ್ವರೂಪ	ಪ್ರಭುಶಂಕರ	50/-*
ಐಸಿರಿ(ಸಿರಿಧಾನ್ಯಗಳಕುರಿತಉಪನ್ಯಾಸಗಳಸಂಕ್ಷಿಪ್ತರೂಪ)	ಡಾ.ಖಾದರ್,ನಿರೂಪಣೆ:ಪಿ.ಚಂದ್ರಿಕಾ	75/-
ಚೆಲುವಿನ ನಿಲುವು	ವಿ.ಕೃ.ಗೋಕಾಕ	100/-

ಕವನಗಳಲ್ಲಿಸಂಕೀರ್ಣತೆ	ವಿ.ಕೃ.ಗೋಕಾಕ	50/-*
ಆಂಗ್ಲಸಾಹಿತ್ಯನೀಡಿದಸ್ಫೂರ್ತಿ	ವಿ.ಕೃ.ಗೋಕಾಕ	35/-*
ಎಲ್ಲಕತೆ,ಕಾದಂಬರಿಗಳು(ಸಮಗ್ರ)	ದೇವನೂರಮಹಾದೇವ	150/-
ನೆತ್ತರಸೂತಕ(ಧರ್ಮ,ರಾಜಕಾರಣ,ಸಂಸ್ಕೃತಿ,ಸಾಹಿತ್ಯ)	ರಹಮತ್‌ತರೀಕೆರೆ	250/-
ನಕ್ಷೆ-ನಕ್ಷತ್ರ(ಸಾಹಿತ್ಯ,ಇತಿಹಾಸಮತ್ತುಸಂಸ್ಕೃತಿ)	ಬಸವರಾಜಕಲ್ಗುಡಿ	200/-
ವಾಚನಶಾಲೆ(ಸಾಹಿತ್ಯ,ಸಂಸ್ಕೃತಿ,ವಿಚಾರ)	ಕೆ.ವಿ.ತಿರುಮಲೇಶ್	300/-
ಜೀವದಾಯಿನಿ(ಪ್ರಬಂಧಗಳು)	ನರಹಳ್ಳಿಬಾಲಸುಬ್ರಹ್ಮಣ್ಯ	200/-*
ಕರ್ನಾಟಕದಲ್ಲಿತುರ್ತುಪರಿಸ್ಥಿತಿ(ಪ್ರಭಾವಮತ್ತುಪರಿಣಾಮಗಳು)	ರಶ್ಮಿ.ಎಸ್.	500/-*
ಆಚಾರ್ಯಸಂಪಾದಕಶ್ರೀನಾರಾಯಣದತ್ತ	ವಿಜಯದತ್ತಶ್ರೀಧರ,ಜಿ.ಭಾಸ್ಕರಮಯ್ಯ	250/-*
ಭಕ್ತಿಯ ನೆಪದಲ್ಲಿ	ಲಕ್ಷ್ಮೀಶತೋಳ್ಪಾಡಿ	100/-
ಬಾವಲಿಗುಹೆ(ಮಕ್ಕಳಿಗಾಗಿಕಾದಂಬರಿ)	ತಮ್ಮಣ್ಣಬೀಗಾರ	75/-
ತೊಟ್ಟಿಲಗೊಂಬೆ(ಮಕ್ಕಳಿಗಾಗಿಕಾದಂಬರಿ)	ಮಾದುಪ್ರಸಾದಹುಣಸೂರು	70/-*
ನೆನಪಿನ ಓಣಿಯೊಳಗಮಿನುಗುತಾವದೀಪ(ಜಿ.ಎಸ್.ಎಸ್.ವ್ಯಕ್ತಿ:ಶಕ್ತಿಕೆಲನೋಟಗಳು)	ಸಂ:ನಾಗಐತಾಳ,ನಳಿನಿಮೈಯ	150/-*
ಸ್ಮರಣೆಸಾಲದೆ...(ಕೆಲವುನೆನಪುಗಳು)	ನಾಗಐತಾಳ	150/-*
ಪೂರ್ವಿ(ಮಕ್ಕಳಿಗಾಗಿಕಾದಂಬರಿ)	ಗಣೇಶಪಿ.ನಾಡೋರ	70/-*
ಅಂಶು,ಅನುಮತ್ತುರೋಬೋ(ಮಕ್ಕಳಿಗಾಗಿಕಾದಂಬರಿ)	ಮತ್ತೂರುಸುಬ್ಬಣ್ಣ	100/-
ಸೈಕಲಾಜಿಕಲ್‌ಕಾಂಪ್ಲೆಕ್ಸ್‌ಗಳು(ಮನೋವೈಜ್ಞಾನಿಕವಿವರಣೆ)	ಎಂ.ಬಸವಣ್ಣ	175/-
ವರ್ಧಮಾನ(ಕವಿತೆಗಳು)	ಎಂ.ಗೋಪಾಲಕೃಷ್ಣಅಡಿಗ	35/-
ಬಂದೀತು ಆ ದಿನ (ಪ್ರಬಂಧಗಳು)	ನಳಿನಿ ಮೈಯ	100/-*
ಭಕ್ತಿಯ ಬೆರಗು(ಸಾಹಿತ್ಯದಲ್ಲಿ ಭಕ್ತಿ)	ಸಂ: ಪಿ.ಚಂದ್ರಿಕಾ	275/-
ಸಾವಿನ ದಶಾವತಾರ(ಕಾದಂಬರಿ)	ಕೆ.ಸತ್ಯನಾರಾಯಣ	150/-
ಮಹಾಯುದ್ಧಕ್ಕೆಮುನ್ನ...(ಭಗವದ್ಗೀತೆ:ಕೆಲವು ವಿಚಾರಗಳು)	ಲಕ್ಷ್ಮೀಶ ತೋಳ್ಪಾಡಿ	25/-
ಗೆರೆಮಿರಿವಚಿನ್ನದದಿರು(ಗೋಪಾಲಕೃಷ್ಣಅಡಿಗ-ಒಂದುಪ್ರವೇಶ)	ನರಹಳ್ಳಿಬಾಲಸುಬ್ರಹ್ಮಣ್ಯ	15/-
ಶೈಲಿಶಾಸ್ತ್ರ	ಕೆ.ವಿ.ನಾರಾಯಣ	75/-
ಪುಣ್ಯಕೋಟಿಯಕಥೆಯಹೇಳಲೇನು?(ಹಸುವಿನಪಯಣಅಲ್ಲಿಂದಇಲ್ಲಿಯವರೆಗೆ)	ಡಾ.ಟಿ.ಎಸ್.ರಮಾನಂದ್	150/-
ವಾಸ್ತವತಾವಾದ	ಟಿ.ಪಿ.ಅಶೋಕ	100/-
ಕನಸ ಬೆನ್ನತ್ತಿನಡಿಗೆ (ಕವನಸಂಕಲನ)	ಸಿದ್ದುಸತ್ಯಣ್ಣವರ	100/-*
ಬ್ರೇಕಿಂಗ್ ನ್ಯೂಸ್ (ಕವನಸಂಕಲನ)	ಸಿ.ಪಿ.ರವಿಕುಮಾರ್	100/-*
ಡೊಂಕುಸೇತುವೆ(ಮಕ್ಕಳಿಗಾಗಿಕಾದಂಬರಿ)	ಹಿಂದಿಮೂಲ:ಡಾ.ನಾಗೇಶಪಾಂಡೇಯ	75/-
ಸೂರಕ್ಕಿಗೇಟ್(ಮಕ್ಕಳಿಗಾಗಿಕಾದಂಬರಿ)	ವಿಜಯಶ್ರೀಹಾಲಾಡಿ	50/-*
ಬಂಡಾಯ-ದಲಿತಚಳುವಳಿಮತ್ತುಸಾಹಿತ್ಯ	ಪುರುಷೋತ್ತಮಬಿಳಿಮಲೆ	175/-
ಬಿನ್ನಪ (ಕನ್‌ಫೇಶನ್)	ಅನು:ಓ.ಎಲ್.ನಾಗಭೂಷಣಸ್ವಾಮಿ ಮೂಲ: ಕೌಂಟ್‌ಲಿಯೋಟಾಲ್‌ಸ್ಟಾಯ್	100/-
ಸದ್ಗುರು ನಾನಕ್ ದೇವ್(ಜೀವನಮತ್ತುದರ್ಶನ)	ಎಸ್.ಸೀತಾರಾಮು	270/-*
ವೃತ್ತಿವಿಲಾಸ(ಆತ್ಮವೃತ್ತಾಂತದ ಮೂರನೇ ಭಾಗ)	ಕೆ.ಸತ್ಯನಾರಾಯಣ	300/-*
ಋಗ್ವೇದಸ್ಫುರಣ(ಆಯ್ದಋಕ್ಕುಗಳತಿಳಿಗನ್ನಡಅವತರಣ)	ಎಚ್.ಎಸ್.ವೆಂಕಟೇಶಮೂರ್ತಿ	200/-*
ನನ್ನ ಅಜ್ಜಿಯ ಜಗತ್ತು (ನೆನಪುಗಳು)	ರಜನಿನರಹಳ್ಳಿ	200/-
ವಚನ ದರ್ಶನ (ಹೊಸಕಾಲದ ಪರಿವೇಶದಲ್ಲಿ)	ಕೆ.ಸಿ.ಶಿವಪ್ಪ	600/-
ಕಿರುವೆರಳಸಟೆ (ಭರತೇಶವೈಭವದ ಆಯ್ದ ಭಾಗ)	ಶ್ರೀಧರಹೆಗಡೆಭದ್ರನ್	75/-
ಸಾಹಿತ್ಯಅಧ್ಯಯನದನೆಲೆಗಳು	ಪಿ.ಚಂದ್ರಿಕಾ	300/-
ಹಳಗನ್ನಡ (ಭಾಷೆ, ಭಾಷಾ ವಿಕಾಸ, ಭಾಷಾ ಬಾಂಧವ್ಯ)	ಸಂ:ಷ. ಶೆಟ್ಟರ್	600/-
ಹೊಸಗನ್ನಡಕವಿತೆ	ಸಂ:ಜಿ. ಎಚ್. ನಾಯಕ	500/-

ದೂರಸಾಗರ (ಅಂಕಣಬರಹ ಮತ್ತಿತರ ಲೇಖನಗಳ ಸಂಕಲನ)	ಮೀರಾ ಪಿ. ಆರ್.	120/-*
ಸಾಂಸ್ಕೃತಿಕಅಧ್ಯಯನ (ವಿಮರ್ಶೆ)	ರಹಮತ್ ತರೀಕೆರೆ	200/-
ನವ್ಯತೆ (ವಿಮರ್ಶೆ)	ನರಹಳ್ಳಿ ಬಾಲಸುಬ್ರಹ್ಮಣ್ಯ	60/-
ದೇಶೀವಾದ (ವಿಮರ್ಶೆ)	ರಾಜೇಂದ್ರ ಚನ್ನಿ	100/-
ದಾಸಭಾರತ	ರಾಮದಾಸ	375/-*
ಝೀರೋಮತ್ತು ಒಂದು (ಕಥೆಗಳು)	ವಿಕ್ರಮ ಹತ್ವಾರ	150/-
ಹಕ್ಕಿಗಳ ಸ್ವಾತಂತ್ರ್ಯೋತ್ಸವ (ಮಕ್ಕಳಿಗಾಗಿ ಕಥನ ಕವನಗಳು)	ವಿಜಯಕಾಂತಪಾಟೀಲ	75/-*
ಸಕ್ರೆಮೂಟೆಯಾರಿಗ್ಬೇಕೂ (ಮಕ್ಕಳಿಗಾಗಿಕವನಗಳು)	ನಿರ್ಮಲ ಸೂರತ್ಕಲ್	75/-*
ಚುಕ್ಕಿಹೂಗಳಗೆಳತಿ (ಕವಿತೆಗಳು)	ರವಿ ಹಿರೇಮಠ	50/-*
ಹೀಗೆಯೇಒಂದಷ್ಟು (ಲೇಖನಗಳು)	ಶೂದ್ರ ಶ್ರೀನಿವಾಸ	150/-
ಆ ದಿನ (ಕಾದಂಬರಿ)	ಶೂದ್ರ ಶ್ರೀನಿವಾಸ	150/-
ನಾಟಕರತ್ನಗಳು	ಎಲ್. ಎಸ್. ಶೇಷಗಿರಿ ರಾವ್	150/-*
ಭೀಷ್ಮ ಪ್ರಜ್ಞೆ (ಉಳಿದ ಲೇಖನಗಳು)	ಯು. ಆರ್. ಅನಂತಮೂರ್ತಿ	100/-
ಅವರವರ ಭಕುತಿಗೆ (ಭಕ್ತಿಕುರಿತ ನುಡಿಚಿಂತನೆಗಳು)	ಸಂ: ನಳಿನಿಮೈಯ	400/-
ಸಣ್ಣಮುಟ್ಟಆಸೆಗಳಆತ್ಮಚರಿತ್ರೆ (ಆತ್ಮವೃತ್ತಾಂತದಎರಡನೇಭಾಗ)	ಕೆ.ಸತ್ಯನಾರಾಯಣ	150/-
ಟೈಬೀರಿಯಸ್ (ನಾಟಕ)	ಕೆ. ವಿ. ತಿರುಮಲೇಶ್	150/-*
ಕಲಿಗುಲ (ನಾಟಕ)	ಕೆ. ವಿ. ತಿರುಮಲೇಶ್	100/-*
ಕುವೆಂಪು ಕಥನ ಕೌತುಕ (ವಿಮರ್ಶೆ)	ನರಹಳ್ಳಿ ಬಾಲಸುಬ್ರಹ್ಮಣ್ಯ	100/-*
ಶ್ರೀರಾಮಚಾರಣ (ಮಹಾಕಾವ್ಯ)	ಎಚ್.ಎಸ್.ವೆಂಕಟೇಶಮೂರ್ತಿ	250/-*
ಜ್ಞಾನ ವಿಜ್ಞಾನ ತತ್ವಜ್ಞಾನ	ಕೆ. ವಿ. ತಿರುಮಲೇಶ್	300/-
ಮುದ್ದುರಾಮನ ಮನಸು	ಕೆ. ಸಿ. ಶಿವಪ್ಪ	200/-
ಮುದ್ದು ರಾಮನ ಬದುಕು-ಬೆಳಕು	ಕೆ. ಸಿ. ಶಿವಪ್ಪ	200/-
ಚಿಂತನೆಯ ಪಾಡು (ಸಾಹಿತ್ಯವಿಮರ್ಶೆ)	ರಹಮತ್ ತರೀಕೆರೆ	200/-
ನಮ್ಮ ಮನೆಗೂ ಬಂದರು ಗಾಂಧೀಜಿ (ಕೆಲವುನೆನಪುಗಳು)	ರಾಜೇಶ್ವರಿತೇಜಸ್ವಿ	150/-
ಹಲವುಮಕ್ಕಳ ತಾಯಿ	ಸಂ: ಹೆಚ್. ವೈ. ರಾಜಗೋಪಾಲ್	
(ಮೈಸೂರು ಮಕ್ಕಳ ಕೂಟದ ಶ್ರೀಮತಿ ಎಚ್.ವೈ. ಸರಸ್ವತಮ್ಮನವರ ಜೀವನ – ಸಾಧನೆ–ದರ್ಶನ)		900/-*
ಅನುವಾದ ಸಂವಾದ (ವಿವಿಧಭಾಷಾಸಾಹಿತ್ಯದ ಅನುವಾದ ಸಂಕಲನ)	ಸಂ: ಶ್ರೀಕಾಂತಬಾಬು	400/-*
ಸಾಹಿತ್ಯ ಸ್ಪಂದನ (ವಿಮರ್ಶಾ ಲೇಖನಗಳು)	ನಾಗ ಐತಾಳ	250/-*
ಅಮೆರಿಕದಲ್ಲಿ ಕಂಡ ಕನಸು ಕಟ್ಟಿದ ನೆನಪು (ಆತ್ಮಕಥೆ)	ನಾಗ ಐತಾಳ	400/-*
ಕಥೆಯಂ ಕೇಳೆಲೊ ಕಂದ	ಮೈ. ಶ್ರೀ. ನಟರಾಜ	100/-*
ಪ್ರೇಮಭಿಕ್ಷು (ಕಾದಂಬರಿ)	ಪ್ರಭುಶಂಕರ	75/-
ಅಕ್ಷಯಕಾವ್ಯ (ಕೇಂದ್ರಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಕೃತಿ)	ಕೆ. ವಿ. ತಿರುಮಲೇಶ್	350/-
ಬಹುವಚನ ಭಾರತ (ವಿಮರ್ಶೆ)	ಜಿ.ರಾಜಶೇಖರ	200/-
ಕುಮಾರವ್ಯಾಸ ಕಥಾಂತರ-2	ಎಚ್. ಎಸ್. ವೆಂಕಟೇಶಮೂರ್ತಿ	300/-
ಹಾಡೆ ಸುವ್ವಿ (ಮಕ್ಕಳಕವಿತೆಗಳು)	ಬಿಳಿಗೆರೆಕೃಷ್ಣಮೂರ್ತಿ	75/-*
ಖರ್ಚಾಗದಪದ್ಯಗಳು...(ಕವಿತೆಗಳು)	ರಮೇಶಹೆಗಡೆ	50/-*
ಅಕ್ಕನುಡಿಯುತ್ತಾಳೆ (ಕವಿತೆಗಳು)	ಮೂಲ: ಕೆ. ಸಚ್ಚಿದಾನಂದನ್ ಅನು: ಮೋಳಿ ವರ್ಗೀಸ್	50/-
ವಾರ್ಸಾದಲೊಬ್ಬಭಗವಂತ	ಮೂಲ: ಕಾರ್ಲೋಸ್ ಅನುವಾದ: ಜಯಲಲಿತಾ	350/-
ಅರಬ್ಬಿ (ಕವಿತೆಗಳು)	ಕೆ. ವಿ. ತಿರುಮಲೇಶ್	500/-*
ಪತ್ರಸಂವಾದ	ವಿಜಯನಾಥ ಶೆಣೈ	100/-*
ಕನ್ನಡರಾಷ್ಟ್ರೀಯತೆ (ಸಾಮಾಜಿಕ, ಸಾಂಸ್ಕೃತಿಕ ಬೇರುಗಳ ರಾಜಕೀಯಾರ್ಥಿಕ ಅಧ್ಯಯನ)	ಬಂಜಗೆರೆ ಜಯಪ್ರಕಾಶ್	400/-
ತಲೆಮಾರು (ರೂಟ್ಸ್ ಕಾದಂಬರಿಯ ಅನುವಾದ)	ಬಂಜಗೆರೆ ಜಯಪ್ರಕಾಶ್	250/-
ಏನು ಜನ! ಎಂಥ ಗಾನ!	ಮೂಲ: ಅರವಿಂದ ಗಜೇಂದ್ರಗಡ್ಕರ್ ಅನು: ದಮಯಂತಿ ನರೇಗಲ್ಲ	100/-
ಅನುಶ್ರೇಣೀ: ಯಾಜಮಾನಿಕೆ	ಕೆ.ಜಿ. ನಾಗರಾಜಪ್ಪ	200/-
ಆಯ್ದ ವಿಮರ್ಶೆ	ನ. ರವಿಕುಮಾರ	100/-
ವಾಗರ್ಥ ವಿಲಾಸ (ಅಂಕಣ ಬರಹಗಳು)*	ಕೆ. ವಿ. ತಿರುಮಲೇಶ್	200/-*
ತೆರೆದ ಮನ (ಪ್ರಬಂಧಗಳು)	ಎಚ್. ನರಸಿಂಹಯ್ಯ	200/-
ಹೋರಾಟದ ಹಾದಿ (ಆತ್ಮ ಕಥೆ)	ಎಚ್. ನರಸಿಂಹಯ್ಯ	500/-
ದಕ್ಷಿಣ ಭಾರತದ ಜನಪದ ಕಾವ್ಯ ಪ್ರಕಾರಗಳು	ಜಿ. ಶಂ. ಪರಮಶಿವಯ್ಯ	600/-
ಅಮ್ಮಮ್ಮ ಹೇಳಿದ ಕತೆಗಳು*	ರಜನಿ ನರಹಳ್ಳಿ	150/-*
ಗಂಟೆಗೋಪುರ (ಅನುವಾದಿತ ಕತೆಗಳು)*	ಮೂಲ:ಹರ್ಮನ್‌ಮೆಲ್ವಿಲ್ ಅನು:ಕೆ.ವಿ.ತಿರುಮಲೇಶ್	150/*
ಗ್ರಾಹಕಸಂರಕ್ಷಣೆ (ಹೊಸ ಆವಿಷ್ಕಾರಗಳು)*	ವೈ.ಜಿ.ಮುರಳೀಧರನ್	150/-*
ಅಮೆರಿಕನ್ನಡಬರಹಗಾರರು (ಸಂಕ್ಷಿಪ್ತ ಮಾಹಿತಿಕೋಶ)*	ಸಂ:ನಾಗಐತಾಳ,ಜ್ಯೋತಿಮಹದೇವ	100/-*
ಅನುಕ್ರಮ (ವಿಮರ್ಶೆ)*	ಶ್ರೀಧರಹೆಗಡೆಭದ್ರನ್	100/-*

ರಂಗ ಕಿನ್ನರಿ(ರಂಗಭೂಮಿ ಕುರಿತ ಬರಹಗಳು)	ಜಿ.ಎನ್. ಮೋಹನ್	50/–
ಥರ್ಡ್‌ಬೆಲ್ (ರಂಗಭೂಮಿ ಕುರಿತಬರಹಗಳು)	ಜಿ.ಎನ್. ಮೋಹನ್	75/–
ಕಾಫಿಕಪ್ಪಿನೊಳಗೆಕೊಲಂಬಸ್ (ಅಂಕಣಬರಹಗಳು)*	ಜಿ.ಎನ್. ಮೋಹನ್	100/–*
ಜಾತಿ ಮೀಮಾಂಸೆ(ವಿಮರ್ಶೆ)*	ಮೊಗಳ್ಳಿಗಣೇಶ್	300/–
ಲೂಸಿಫರ್ ಎಫೆಕ್ಟ್(ಮನೋವೈಜ್ಞಾನಿಕ ಲೇಖನಗಳು)	ಎಂ.ಬಸವಣ್ಣ	200/–
ಚಿತ್ರಗುಪ್ತನಕತೆಗಳು	ಕೆ.ಸತ್ಯನಾರಾಯಣ	100/–*
ವಿಗಡವಿಕ್ರಮರಾಯ(ನಾಟಕ)	ಸಂಸ	50/–
ಅಮೀರ್‌ಬಾಯಿ ಕರ್ನಾಟಕಿ (ಹಾಡುನಟಿಯ ಜೀವನಕಥನ)	ರಹಮತ್‌ತರೀಕೆರೆ	500/–
ನಿಜದನಿ (ಸಾಹಿತ್ಯವಿಮರ್ಶೆ)	ಜಿ.ಹೆಚ್.ನಾಯಕ	200/–
ಸ್ತ್ರೀವಾದಿಸಾಹಿತ್ಯ ವಿಮರ್ಶೆ	ಸಂ. ತೇಜಸ್ವಿನಿನಿರಂಜನ,ಸೀಮಂತಿನಿನಿರಂಜನ	250/–
ತ್ರಕ್ಕೀ ಎಂದಿತು ವೃಕ್ಷ...!(ಕವನ)*	ವಿಕ್ರಮಹತ್ವಾರ	75/–*
ಹಸೆಬಿ (ಕವನ)	ವಿನಯಾ	90/–*
ಏನೇನ್‌ತುಂಬಿ(ಮಕ್ಕಳಪದ್ಯ)	ಕೆ.ವಿ.ತಿರುಮಲೇಶ್	50/–*
ಪ್ರೀತಿಸುವುದೆಂದರೆ(ಮೂಲ:ಎರಿಕ್‌ಫ್ರಾಂ)	ಅನು: ಎಚ್.ಎಸ್.ರಾಘವೇಂದ್ರರಾವ್, ಕೆ.ವಿ.ನಾರಾಯಣ	100/–
ಸಂಪತ್ತಿನೊಳಗೊಬ್ಬಸಂತ (ಎಮ್.ವೈ.ಘೋರ್ಪಡೆ ಜೀವನ ಚಿತ್ರ)	ಸಂ:ಶ್ರೀಧರಹೆಗಡೆಭದ್ರನ್	200/–
ಅಭಿನವರಂತಿದೇವ (ಸುರೇಂದ್ರನಾಥ ಕೌಲಗಿಜೀವನ–ಸಾಧನೆ)	ಸಂ:ಸುಮನಾವಿಶ್ವನಾಥ	40/–*
ಎಪ್ಪತ್ತರದಶಕದ ಕತೆ	ಯು.ಆರ್.ಅನಂತಮೂರ್ತಿ	75/–
ಹಿಂದುತ್ವಅಥವಾಹಿಂದ್‌ಸ್ವರಾಜ್?	ಯು.ಆರ್.ಅನಂತಮೂರ್ತಿ	100/–
ಬೇಂದ್ರೆನಾದ,ನಾಡು,ಒಲವು	ಜಿ.ಎಚ್.ನಾಯಕ್	50/–*
ಬೇಂದ್ರೆಯವರಕಾವ್ಯಸೃಷ್ಟಿಯಸ್ವರೂಪ	ಜಿ.ಎಸ್.ಶಿವರುದ್ರಪ್ಪ	50/–*
ಬೇಂದ್ರೆಯವರ ಕಾವ್ಯ ಮತ್ತು ವ್ಯಕ್ತಿತ್ವ	ವಿ.ಕೃ.ಗೋಕಾಕ್	50/–
ಸಿರಿಗನ್ನಡಗೀತರಾಮಾಯಣ*	ಮೈ.ಶ್ರೀನಟರಾಜ	100/–*
ಚಿಟ್ಟೆ ಮತ್ತು ಜೀವಯಾನ (ಕವಿತೆಗಳು)	ಯಲ್ಲಪ್ಪ ಟಿ.	75/–*
ಸಮಸ್ತ ಕಥೆಗಳು	ಹೆಚ್.ವಿ.ಸಾವಿತ್ರಮ್ಮ	500/–
ಗುಲಾಬಿ ಟಾಕೀಸ್ (ಕಥೆಯಿಂದಕಥೆಗೆ)	ಸಂ: ಪಿ.ಚಂದ್ರಿಕಾ	85/–*
ವಿಮುಕ್ತ (ತೆಲುಗುಕಥಾ ಜಗತ್ತಿನಜೊತೆಗೊಂದುಮಾತುಕಥೆ)	ಅನು: ಜಿ. ವೀರಭದ್ರಗೌಡ	125/–*
ಜಾರ್ಜ್‌ಲೂಯಿಬೊರ್ಹೆಸ್	ಸಂ: ಪ್ರೊ ಕಾರ್ಲೋಸ್	75/–*
ಭಾವನ್ನ (ಕವನ ಸಂಕಲನ)	ಆನಂದ ಝುಂಝುರವಾಡ	75/–*
ಶಾವ್ರೋಲಿನ್(ಅನುವಾದಿತ ಮಕ್ಕಳ ಕಥೆಗಳು)ವ*	ಅನು: ಶಿವಲಿಂಗಪ್ಪ ಕೆ. ಹಂದಿಹಾಳು	60/–*
ಓತಿಕ್ಯಾತ ತಲೆಕುಣ್ಸೆ (ಮಕ್ಕಳಕವಿತೆ)	ವಿಜಯಶ್ರೀ ಹಾಲಾಡಿ	50/–
ಕಲಾಚೇತನ (ದಿ ಆರ್ಟ್ ಸ್ಪಿರಿಟ್)	ಮೂಲ: ರಾಬರ್ಟ್ ಹೆನ್ರಿ, ಅನು: ಕೆ.ವಿ. ತಿರುಮಲೇಶ್	150/–*
ಕನಸಿನ ಕತೆ (ಒಂದು ಮನೋವೈಜ್ಞಾನಿಕ ವಿವರಣೆ)	ಎಂ. ಬಸವಣ್ಣ	75/–
ನನ್ನ ಸಾಹಿತ್ಯದ ಐದು ದಶಕಗಳು	ಮೂಲ: ಯು ಆರ್ ಅನಂತಮೂರ್ತಿ ಅನು: ಬಿ.ಎಸ್ ಜಯಪ್ರಕಾಶ ನಾರಾಯಣ	50/–
ಬಾದಾಮಿ ಚಾಳುಕ್ಯರ ಶಾಸನ ಸಾಹಿತ್ಯ	ಷ.ಶೆಟ್ಟರ್	150/–
ಹೇರಾಮ್(ಗಾಂಧಿ–ಗೋಡ್ಸೆಸಂಘರ್ಷ...)*	ಅನಂತ ಚಿನಿವಾರ್	60/–*
ಬರ ಅಂದ್ರೆ ಎಲ್ಲರಿಗೂ ಇಷ್ಟ (ಭಾರತದ ಹತ್ತು ಬಡ ಜಿಲ್ಲೆಗಳಕಥನ)	ಮೂಲ:ಪಿ.ಸಾಯಿನಾಥ್,ಅನು:ಜಿ.ಎನ್.ಮೋಹನ್	400/–
ಮಹತಿ (ಪಾಶ್ಚಾತ್ಯಸಾಹಿತ್ಯಸಂಸ್ಕೃತಿಗಳ ತೌಲನಿಕಚಿಂತನೆ) ಭಾಗ–1	ಶಂಕರಮೊಕಾಶಿ ಪುಣೇಕರ, ಸಂ:ಜಿ.ಬಿ.ಹರೀಶ್	250/–*
ವಸ್ತುವಿನ್ಯಾಸ (ಕನ್ನಡಸಾಹಿತ್ಯ–ಸಂಸ್ಕೃತಿಗಳಸಾಂಸ್ಕೃತಿಕಓದು) ಭಾಗ–2	ಶಂಕರಮೊಕಾಶಿ ಪುಣೇಕರ, ಸಂ:ಜಿ.ಬಿ.ಹರೀಶ್	350/–*
ಸುಸಂಧಿ (ಕಥೆ,ಕವಿತೆ,ನಾಟಕ) ಭಾಗ–3	ಶಂಕರಮೊಕಾಶಿ ಪುಣೇಕರ, ಸಂ:ಜಿ.ಬಿ.ಹರೀಶ್	200/–*
ತ್ರಿವಳಿ ಕಾದಂಬರಿಗಳು (ನಟ ನಾರಯಣಿ, ಗಂಗವ್ವಗಂಗಾಮಾಯಿ, ಅವಧೇಶ್ವರಿ)	ಭಾಗ–4 ಶಂಕರಮೊಕಾಶಿ ಪುಣೇಕರ, ಸಂ: ಜಿ.ಬಿ.ಹರೀಶ್	400–*
ಒಂಬತ್ತುನಾಟಕಗಳು	ಬಿ.ಸುರೇಶ	250/–*
ಯಾವಮಾಹಿತಿ?ಯಾರಹಕ್ಕು?	ವೈ.ಜಿ.ಮುರಳೀಧರ	125/–*
ಆಳ–ನಿರಾಳ:೪(ಅಂಕಣಬರಹ)	ಕೆ.ವಿ.ತಿರುಮಲೇಶ್	೧೭೫/–*
ಅಪ್ಪನಪ್ರೇಯಸಿ(ಕಾದಂಬರಿ)	ವಿ.ಆರ್.ಕಾರ್ಪೆಂಟರ್	75/–*
ದ್ವೀಪಸಮೂಹದಕತೆ (ಪ್ರವಾಸಕಥನ)	ಜಿ.ಎನ್. ಅಶೋಕವರ್ಧನ	75/–*
ಇನ್ನಷ್ಟುಕನ್ನಡ (ಭಾಷೆಮತ್ತುಭಾಷಾಶಾಸ್ತ್ರಕುರಿತಲೇಖನಗಳು)	ಕೆ.ವಿ.ತಿರುಮಲೇಶ್	125/–*
ಕಾಪಿರೈಟ್ (ಕೃತಿಸ್ವಾಮ್ಯಕಾಯ್ದೆ)	ವೈ.ಜಿ.ಮುರಳೀಧರ್	60/–*
ಬೆಳಕುನೆರಳು (ಛಾಯಾಗ್ರಾಹಕನೊಬ್ಬನಸೂಕ್ಷ್ಮದಾಟ)	ಮೂಲ:ಎಂ.ವೈ.ಘೋರ್ಪಡೆ ಅನು:ಶ್ರೀಮತಿಶಾಂತಾನಾಗರಾಜ್,ಪಿ.ಎಸ್.ಗೀತಾ	1000/–
ಕೊಂಕಣಿ ತದ್ಭವ ಕೋಶ (ಪ್ರಾಕೃತ,ಸಂಸ್ಕೃತ,ಪಾಲೀ,ದೇಶೀನಾಮಮಾಲೀ,ಕನ್ನಡ)	ಎಂ. ಮಾಧವ ಪೈ	100/–*
ಲೋಕವಿರೋಧಿಗಳಜತೆಯಲ್ಲಿ(ಸಂದರ್ಶನಗಳು)	ರಹಮತ್‌ತರೀಕೆರೆ	200/–
ಬೆತ್ತಲೆಫಕೀರ(ಉರ್ದುಕವಿತೆಗಳು)	ಮೂಲ:ಅಲಿಸರ್ದಾರ್‌ಜಾಫ್ರೀ,ಅನು:ಜ.ನ.ತೇಜಶ್ರೀ	100/–*

ಝುಳಕ್ಕೆಮುಖಬೆಳಗುತ್ತದೆ(ಕವಿತೆಗಳು)	ಸಂಧ್ಯಾದೇವಿ	60/-*
ನಮ್ಮಕಥೆ(ಮನುಷ್ಯನಪೂರ್ವೋತ್ತರಇತಿಹಾಸ)	ನೀಲತ್ತಳ್ಳಿಕಸ್ತೂರಿ	60/-*
ಆಚೀಚೆ(ಈಚಿನ ಮಾತು, ಬರಹಗಳು)	ಯು.ಆರ್.ಅನಂತಮೂರ್ತಿ	100/-
ಪಚ್ಚೆರೆಸಾರ್ಟ್(ಈಚಿನಕತೆ,ಕವಿತೆಗಳು)	ಯು.ಆರ್.ಅನಂತಮೂರ್ತಿ	60/-
ಕಂಚಿಯಪರಮಾಚಾರ್ಯರು (ಒಂದುಆಧ್ಯಾತ್ಮಿಕಮತ್ತುಮಾನವೀಯಸಂಬಂಧ)	ಮೂಲ:ಎಂ.ವೈ.ಘೋರ್ಪಡೆ, ಅನು:ಎಸ್.ಆರ್.ರೋಹಿಡೇಕರ್	250/-
ಕಾರ್ಲ್‌ಯೂಂಗ್(ಮನೋವೈಜ್ಞಾನಿಕಸಿದ್ಧಾಂತಗಳು)	ಎಂ.ಬಸವಣ್ಣ	75/-
ಜುಗ್ನು (ಮಕ್ಕಳ ಕಥಾ ಸಂಕಲನ)	ಗಿರೀಶಜಕಾಪುರೆ	75/-*
ಗಾಂಧೀಯುಗಕ್ಕೆಕನ್ನಡಿ (ಲೇಖನಗಳು)	ಹೆಚ್.ವೈ.ರಾಜಗೋಪಾಲ	100/-*
ವಿಶ್ವಕಂಡದ್ವಿತೀಯಗಾಂಧಿ...ಅಣ್ಣಾಹಜಾರೆ	ಗಿರೀಶ್‌ಲೋಕಾಪುರೆ	100/-*
ಹೊಸಜಗತ್ತು (ಅಪ್ರಕಟಿತಕಥಾಸಂಕಲನ)	ಹೆಚ್.ವಿ.ಸಾವಿತ್ರಮ್ಮ	100/-*
ಸಾಹಸದಒಂದುಸೀಮಾರೇಖೆ (18ನೇಶತಮಾನದಡೆಕ್ಕನ್)	ಎಂ.ವೈ.ಗೋರ್ಪಡೆ ಸಾದಾಪ್ರತಿ	125/-*
ಆಡುಕನ್ನಡಹಾಡುಕನ್ನಡಮಾತಾಡು(ಕವಿತೆಗಳು)	ಕೆ.ವಿ.ತಿರುಮಲೇಶ್	150/-*
ಜೀವನರಹಸ್ಯ(ಅಣುವಿಜ್ಞಾನದಒಂದುಸ್ಥೂಲಪರಿಚಯ)*	ನಾಗಐತಾಳ	300/-*
ಕರ್ನಾಟಕದಸೂಫಿಗಳು	ರಹಮತ್‌ತರೀಕರೆ	250/-
ವಸಾಹತುಪ್ರಜ್ಞೆಮತ್ತುಸಾಂಸ್ಕೃತಿಕಅಧ್ಯಯನ	ಮೂಲ: ಗೂಗಿವಾತಿಯಾಂಗೊಅನು:ರಹಮತ್‌ತರೀಕರೆ	50/-
ಎಲೆಮರೆಯಅಲರು(ಉಳಿದನೆನಪುಗಳು)	ಬೆಳಗೆರೆಕೃಷ್ಣಶಾಸ್ತ್ರೀ	60/-
ಸಾಹಿತಿಗಳಸ್ಮೃತಿ(ನೆನಪುಗಳು)	ಬೆಳಗೆರೆಕೃಷ್ಣಶಾಸ್ತ್ರಿ	100/-*
ಮರೆಯಲಾದೀತೆ?(ನೆನಪುಗಳು)	ಬೆಳಗೆರೆಕೃಷ್ಣಶಾಸ್ತ್ರಿ	450/-
ಹೊರಲಾರದಗಾಳಿಬಾರದಲ್ಲಿ(ಮಿಲನ್‌ಕುಂದೇರಾ)	ಅನು:ಸುಕನ್ಯಾಕನಾರಳ್ಳಿ	200/-
ಹದತಪ್ಪಿದಬಾಲ್ಯಬದುಕು(ಬಾಲಪರಾಧಿಗಳುಮತ್ತುಮಹಿಳೆಯರಸತ್ಯಕಥೆಗಳು)	ಶಾಂತಾನಾಗರಾಜ್	75/-*
ಆಳ–ನಿರಾಳ:3(ಅಂಕಣಬರಹ)	ಕೆ.ವಿ.ತಿರುಮಲೇಶ್	175/-*
ಮರೆಯಲಾಗದಮಹಾನುಭಾವರು(ನೆನಪುಗಳು)	ಹೊಸಬಾಳೆಸೀತಾರಾಮರಾವ್	125/-*
ಕತ್ತಿಯಂಚಿನದಾರಿ(ಸಾಹಿತ್ಯ–ಸಂಸ್ಕೃತಿಚಿಂತನೆ)2010ನೇಸಾಲಿನಕೇಂದ್ರಸಾಹಿತ್ಯಪ್ರಶಸ್ತಿಪಡೆದಕೃತಿ	ರಹಮತ್‌ತರೀಕೆರೆ	250/-
ಕಾಸ್ಮಿಕ್‌ಡಿಟೆಕ್ಟೀವ್(ನಮ್ಮವಿಶ್ವದನಿಗೂಢಗಳಅನ್ವೇಷಣೆ)	ಮೂಲ:ಮಣಿಭೌಮಿಕ್,ಅನು:ಕೆ.ಪುಟ್ಟಸ್ವಾಮಿ	100/-
ಮರೆಯಲಾಗದಸಾಮ್ರಾಜ್ಯ(ಮೂಲ:ಎಂ.ವೈ.ಘೋರ್ಪಡೆ)	ಅನು:ಭಾರತೀಕಾಸರಗೋಡು	65/-*
ಮುಕ್ತಿಯರಹಸ್ಯ(ಕಥೆಗಳು)(ಮೂಲ:ಎಂ.ವೈ.ಘೋರ್ಪಡೆ)	ಅನು:ಭಾರತೀಕಾಸರಗೋಡು	75/-*
ಬೆಳದಿಂಗಳು (ಮಕ್ಕಳಕಾದಂಬರಿ)	ಆನಂದ ವಿ. ಪಾಟೀಲ	50/-
ದಿಟನಾಗರಕಂಡರೆ(ಹಾವುಗಳಜಗತ್ತಿಗೊಂದುಪಯಣ)*	ಡಾ. ಟಿ.ಎಸ್.ರಮಾನಂದ	100/-*
ಝೆಲ್ಲನ್ನದಿ(ಕವಿತೆಗಳು)	ಹೆಚ್.ಆರ್.ರಮೇಶ್	50/-*
ಅಂಟಿದನಂಟು(ಅಸಮಗ್ರಲೇಖನಗಳು)	ಪಂ.ತಾರಾನಾಥ	600/-
ತಾರಾಸ್ಮರಣೆ (ಪಂ.ತಾರಾನಾಥರನ್ನುಕುರಿತಲೇಖನಗಳು)*	ಸಂ:ಎಂ.ಧ್ರುವನಾರಾಯಣ	150/-*
ಪರಿಮಳದಬೀಜ(ಕವನಸಂಕಲನ)	ಗೀತಾವಸಂತ	50/-*
ಸಾಹಿತ್ಯದಸಪ್ತಧಾತುಗಳು(ಪ್ರಬಂಧಸಂಕಲನ)	ಯಶವಂತ್‌ಚಿತ್ತಾಲ	75/-
ಕೆಲವುಕಥಾನಕಗಳು(ಕಥಾಸಂಕಲನ)*	ಕೆ.ವಿ.ತಿರುಮಲೇಶ್	100/-
ವಿಶ್ಲೇಷಣೆ (ವಿಮರ್ಶಾಲೇಖನಗಳು)*	ಹೆಚ್.ಎಸ್.ರಾಘವೇಂದ್ರರಾವ್	100/-
ಶಂಗಂತಮಿಳಗಂಮತ್ತುಕನ್ನಡನಾಡು–ನುಡಿ	ಪ್ರೊ.ಷ.ಶೆಟ್ಟರ್	250/-
ನಾಬಂದಹಾದಿಯಲ್ಲಿ(ಅನುಭವಕಥನ)	ಕೆ.ವಿ.ಘನಶ್ಯಾಮ	200/-*
ದೂರತೀರದಿಂದಹರಿದುಬಂದಕತೆಗಳು	ನಾಗಐತಾಳ(ಆಹಿತಾನಲ)	150/-*
ಅಕ್ಷಯಕಾವ್ಯ	ಕೆ.ವಿ.ತಿರುಮಲೇಶ್	250/-
ಗಂಗಾವತರಣ (ಗಂಗೂಬಾಯಿಹಾನಗಲ್‌ರವರ ಜೀವನಚಿತ್ರ)	ದಮಯಂತಿನರೇಗಲ್ಲ	75/-
ಮಳೆಬಿದ್ದನೆಲದಲ್ಲಿ (ಕವನಸಂಕಲನ)	ಹೆಚ್.ಎಸ್.ಶಿವಪ್ರಕಾಶ್	50/-*
ದೇವರುಎಂಬಸಂಕೇತನಾಮ (ಆತ್ಮಕಥೆ)	ಮೂಲ:ಮಣಿಭೌಮಿಕ್,ಅನು:ಕೆ.ಪುಟ್ಟಸ್ವಾಮಿ	100/-
ಕಣ್ಣಂಚಿನಕಡಲು(ಕವನಸಂಕಲನ)	ನಾಗರಾಜ್‌ಹೆಗಡೆಅಪಗಾಲ	50/-
ವಿಸ್ಮರಣೆ (ಲೇಖನಗಳು)	ಶ್ರೀಧರಹೆಗಡೆಭದ್ರನ್	100/-
ಎಲ್ಲಿದೆಶಿವಾಪುರ?(ಕವನಸಂಕಲನ)	ಚಂದ್ರಶೇಖರಕಂಬಾರ	100/-
ಅಭಿವೃದ್ಧಿ,ಆಳಿಕೆಮತ್ತುಮಾನವೀಯಮೌಲ್ಯಗಳು	ಅನು.ಡಾ.ಪಿ.ಎಸ್.ಗೀತಾ, ಶಾಂತಾನಾಗರಾಜ್	30/-
ಅನಂತಮುಖದ ಮೂರ್ತಿ (ಅನಂತಮೂರ್ತಿಕುರಿತು)	ಸಂ:ನಾಗಐತಾಳ	100/-*
ಆಳ–ನಿರಾಳ:1(ಅಂಕಣಬರಹ)*	ಕೆ.ವಿ.ತಿರುಮಲೇಶ್	175/-*
ಆಳ–ನಿರಾಳ:2 (ಅಂಕಣಬರಹ)*	ಕೆ.ವಿ.ತಿರುಮಲೇಶ್	175/-*
ಕಾಲಮಾನ (ಲೇಖನಗಳಸಂಕಲನ)	ಯು.ಆರ್.ಅನಂತಮೂರ್ತಿ	75/-
ನೆನಪಿನಚಿತ್ರಗಳು(ಆತ್ಮಕಥೆ)	ಎಂ.ವೈ. ಘೋರ್ಪಡೆ	100/-

ಸಾಸುವೆಹೂವಚರಿತ (ಕವನಸಂಕಲನ)	ಹೆಚ್.ಆರ್.ರಮೇಶ್	40/-*
ಸ್ನೇಹಾದರೂ ಬೇಡವೇ ಸ್ವಾಮಿ ನಮಗೆ (ಕವನಸಂಕಲನ)	ಕೆ.ಎಸ್.ಶ್ರೀನಿವಾಸ್‌ಮೂರ್ತಿ	25/-*
ಲೆಕ್ಕಕ್ಕೆಸಿಗದವರು(ಕವನಸಂಕಲನ)	ರಶ್ಮಿಹೆಗಡೆ	40/-*
ಸಮಕ್ಷಮ(ಲೇಖನಗಳು)	ಯು.ಆರ್.ಅನಂತಮೂರ್ತಿ	100/-
ಸನ್ನಿವೇಶ(ವಿಮರ್ಶೆ)	ಯು.ಆರ್.ಅನಂತಮೂರ್ತಿ	50/-
ಅಂಕಿತಪ್ಪಿದಆರ್ಥುರ್‌ರೋಲೂಯಿ	ಅನು:ಕೆ.ವಿ.ನಾರಾಯಣ	50/-
ಚಲ್‌ಮೇರಿಲೂನಾ(ಪ್ರಬಂಧಗಳು)	ಆರ್.ನಿರ್ಮಲಾ	75/-
ಬೇಂದ್ರೆಕಾವ್ಯ(ವಿಮರ್ಶೆ)	ರಂ.ಶ್ರೀ.ಮುಗಳಿ	75/-*
ಹತುಹತುಇಪ್ಪತು	ಆನಂದ ವಿ. ಪಾಟೀಲ	100/-*
ಧ್ವನ್ಯಾಲೋಕದ ಓದು	ಕೆ.ವಿ.ನಾರಾಯಣ	150/-*
ಅಮೆರಿಕಾಗಾಂಧಿ	ದೇ.ಜ.ಗೌ	75/-*
ಯುಗಪಲ್ಲಟ(ಸಂಸ್ಕೃತಿಚಿಂತನೆ)	ಯು.ಆರ್.ಅನಂತಮೂರ್ತಿ	75/-
ಬೆಂಕಿಯನೆನಪು(ಪರ್ಯಾಯಚರಿತ್ರೆ)	ಎಡುವರ್ಡೊಗೆಲಿಯಾನೊ/ಕೆ.ಪಿ.ಸುರೇಶ	75/-
ಶತಮಾನದಕವಿರಿಲ್ಕೆ	ಯು.ಆರ್.ಅನಂತಮೂರ್ತಿ	50/-
ಅಭಾವ(ಕವನ)	ಯು.ಆರ್.ಅನಂತಮೂರ್ತಿ	50/-*
ಇಂದಿನಕನ್ನಡ:ರಚನೆಮತ್ತುಬಳಕೆ	ಎಸ್.ಎನ್.ಶ್ರೀಧರ್	75/-*
ಪರಿಶ್ರಮ (ಹೋರಾಟದ ಬದುಕು ಬರಹ)	ಎಸ್. ವೆಂಕಟರಾಮ್	250/-*
ಜಾಲತರಂಗಿಣಿ (ಅಂಕಣ ಬರಹ)	ಮೈ.ಶ್ರೀ.ನಟರಾಜ	175/-*
ಆಗಾಗ (ಪರಿಚಾರಿಕೆಯ ನಡುವಿನ ಮಾತು – ಬರಹ)	ಚಿ.ಶ್ರೀನಿವಾಸರಾಜು	300/-*
ನಾನು ಒಲಿದಂತೆಹಾಡುವೆ(ಪ್ರಬಂಧಗಳು)	ಚಂದ್ರಶೇಖರಆಲೂರು	75/-
ಬರುವನಾಳೆಗಳಿಗೆರಾತ್ರಿಗಳೇಇರುವುದಿಲ್ಲ	ಸಿದ್ಧದೇವರಮನಿ	50/-*
ಒಂದುಮುಷ್ಟಿನಕ್ಷತ್ರ (ಕಥೆಗಳು)	ಕೋಡಿಬೆಟ್ಟುರಾಜಲಕ್ಷ್ಮಿ	50/-*
ಪ್ರತಿಸಂಸ್ಕೃತಿ (ವಿಮರ್ಶೆ)	ರಹಮತ್‌ತರೀಕೆರೆ	100/-
ಆಕ್ಷಣದಸತ್ಯ (ಪ್ರಬಂಧಗಳು)	ಚಂದ್ರಶೇಖರಆಲೂರು	75/-
ನನ್ನರಸಯಾತ್ರೆ (ಆತ್ಮಕಥೆ)	ಮಲ್ಲಿಕಾರ್ಜುನಮನ್ಸೂರ್	50/-
ಮಬ್ಬಿನಹಾಗೆಕಣಿವೆಯಾಸಿ	ಎಚ್.ಎಸ್.ಶಿವಪ್ರಕಾಶ	50/-
ಶತಮಾನದಕವಿಯೇಟ್ಸ್	ಯು.ಆರ್.ಅನಂತಮೂರ್ತಿ	75/-
ಯುವಕವಿಗೆಬರೆದಪತ್ರಗಳು(ರಿಲ್ಕೆ)	ಅನು:ಓ.ಎಲ್.ನಾಗಭೂಷಣಸ್ವಾಮಿ	50/-
ಗೆಲುವಿನಚಿಲುಮೆರಾಜರತ್ನಂ	ಸಂ:ಆಹಿತಾನಲ	150/-*
ಬಟವಾಡೆಯಾಗದರಸೀತಿ	ಲಕ್ಕೂರು ಆನಂದ	40/-
ಅಗ್ನಿದಿವ್ಯ (ಕಾವ್ಯ)	ಸಂಧ್ಯಾದೇವಿ	30/-*
ಕೊಸಿಮೊ(ಕಾದಂಬರಿ)ಇಟಾಲೊಕಾಲ್ವಿನೊ.	ಅನು:ಕೆ.ಪಿ.ಸುರೇಶ	100/-*
ಬಳ್ಳೇಕೆರೆಹಳ್ಳಿಥೇಟರ್(ಗ್ರಾಮೀಣ ರಂಗಭೂಮಿಯ ಆತ್ಮಕಥೆ)	ಪ್ರಸಾದ್‌ರಕ್ಷಿದಿ	100/-*
ಸೋಮನಾಥಪುರ–ಷ.ಶೆಟ್ಟರ್	(ಇಂಗ್ಲಿಷ್/ಕನ್ನಡ ಭಾಷೆಗಳಲ್ಲಿ)	450/–ಸಾದಾ100/-
ಗಿರಿಜಾಕಲ್ಯಾಣ– (ನಾಟಕ)	ಬಿ.ಸುರೇಶ	50/-*
ನನಗೆದೇವರಗೊಡವೆಕೂಡಬೇಡ(ಮಿರ್ಜಾಗಾಲಿಬ್ ಜೀವನ–ಕೃತಿಗಳು)		50/-
ನಿಮ್ಮ ಸಿಮ್ಮ3(ಅಂಕಣಬರಹ)	ಸಿ.ಆರ್.ಸಿಂಹ	100/-*
ಕನ್ನಡದ ಗರಡಿಯಾಳು (ಜಿ.ಪಿ.ರಾಜರತ್ನಂ ಕುರಿತ ನೆನಪುಗಳು)	ವಿವಿಧ ಲೇಖಕರು	100/-*
ಮಾಲ್ಟಲೌರಿಡ್ಸ್‌ಬ್ರಿಗ್ಗನ ಟಿಪ್ಪಣಿ ಪುಸ್ತಕ–ರಿಲ್ಕೆ(ಕಾದಂಬರಿ)	ಅನು: – ಕೆ.ವಿ. ತಿರುಮಲೇಶ್	100/-*
ಮದುವೆಯ ಆಟಗಳು (ನಾಟಕ)	ಎಚ್.ಎಸ್.ಶಿವಪ್ರಕಾಶ್	75/-*
ಕರುಳಬಳ್ಳಿಯ ಸೊಲ್ಲು (ಬೇಂದ್ರೆಕಾವ್ಯವಿಮರ್ಶೆ)	ರಾಜೇಂದ್ರ ಚೆನ್ನಿ	50/-
ಆಧುನಿಕಕನ್ನಡಮಹಾಕಾವ್ಯಗಳು (ರಾಮಾಯಣದವಿಷಯಕ್ಕೆಸಂಬಂಧಿಸಿದಂತೆ)	ಶ್ರೀಧರಹೆಗಡೆಭದ್ರನ್	200/-*
ಒಂದಾನೊಂದು ಕಾಲದಲ್ಲಿ(ಕಟ್ಟುಕಥೆಗಳು)	ಸಂ.ಆಹಿತಾನಲ(ನಾಗಐತಾಳ)	150/-*
ಕಾದೇ ಇರುವಳು ರಾಧೆ (ಕಾದಂಬರಿ)	ಆಹಿತಾನಲ (ನಾಗಐತಾಳ)	50/-*
ಶೂನ್ಯಸಂಪಾದನೆಯ ಪರಾಮರ್ಶೆ	ಸಂ.ಶಿ. ಭೂಸನೂರಮಠ	610/-
ಬಲ್ಲವರು ಬಹಳಿಲ್ಲ(ಆಯ ಲೇಖನಗಳು)	ಎಚ್.ವೈ. ಶಾರದಾಪ್ರಸಾದ್	75/-*
ಕುಸುಮಬಾಲೆ– (ಲಯಾಕಾರ ವಿನ್ಯಾಸ: ಎಲ್. ಬಸವರಾಜು)	ದೇವನೂರ ಮಹಾದೇವ	150/-
ಹಿಂಸೆಯ ಎಡ–ಬಲ	ಯು.ಆರ್. ಅನಂತಮೂರ್ತಿ	10/-
ಮಳೆತೊಳೆದ ಕಲ್ಲುಗಳು (ಕವಿತೆ)	ಡಿ.ಆರ್. ಚಂದ್ರ ಮಾಗಡಿ	35/-*
ಜೀವಾಳ (ಕಥೆಗಳು)	ಬಸವರಾಜು ಕುಕ್ಕರಹಳ್ಳಿ	50/-*
ಈಡಿಪಸ್ ಕಾಂಪ್ಲೆಕ್ಸ್ (ಮನೋವೈಜ್ಞಾನಿಕ ಲೇಖನಗಳು)	ಎಂ. ಬಸವಣ್ಣ	150/-
ಪೊರೆ ಕಳಚಿದ ಮೇಲೆ (ಕವನ)	ಸಿಬಂತಿ ಪದ್ಮನಾಭ	40/-*
ಎಲ್ಲಿಹಳು ನನ್ನ ಛಾಯಾ? (ಕವನ)	ಆರತಿ ಪಟ್ರಮೆ	35/-*
ಮಾತುಸೋತಭಾರತ (ವಿಮರ್ಶೆ)	ಯು.ಆರ್. ಅನಂತಮೂರ್ತಿ	150/-
ಪ್ರಶ್ನೆಗಳಿರುವುದು ಶೇಕ್ಸ್‌ಪಿಯರನಿಗೆ(ಕವನ)	ಜೆ.ಎನ್. ಮೋಹನ್	50/-*
ಉಲ್ಲೇಖ (ವಿಮರ್ಶೆ)	ಕೆ.ವಿ.ತಿರುಮಲೇಶ್	100/-*
ಕಾಲಿದಾಸ (ವಿಮರ್ಶೆ)	ಶ್ರೀರಂಗ	200/-
ಸಪ್ತಪದಿ (ಕವನ)	ಬಿ.ಸಿ.ರಾಮಚಂದ್ರಶರ್ಮ	40/-*
ಬಕುಲದ ಹೂವುಗಳು (ಕವನ)	ಸು.ರಂ.ಎಕ್ಕುಂಡಿ	75/-*
ದೇಸಿನಗು (ಲೇಖನಗಳು)	ಎಂ.ಎಸ್. ಮೂರ್ತಿ	75/-*

ಬಾಗಿಲು–ಈತನಕದ ತಮಿಳು ಕತೆಗಳು	ಜಯಲಲಿತ	75/–
ಹೀಗೆಹಾಳೆಯ ಮೇಲೆಹಾಡು(ಕವನ)	ಮಮತಾಜಿ.ಸಾಗರ	25/–*
ನಿಮ್ಮ 2ಸಿಮ್ಮ (ಅಂಕಣ ಬರಹ)	ಸಿ.ಆರ್.ಸಿಂಹ	100/–*
ಪ್ರಶ್ನೆ ಮತ್ತು ದೇವರು (ಕವನ)	ಚೀಮನಹಳ್ಳಿ ರಮೇಶಬಾಬು	50/–*
ನಗೆಗನ್ನಡಂ ಗೆಲ್ಗೆ!–ಸಂ.ಎಚ್. ಕೆ. ನಂಜುಂಡಸ್ವಾಮಿ,	ಎಚ್.ವೈ.ರಾಜಗೋಪಾಲ್	250/–*
ಅರ್ಥಶಾಸ್ತ್ರ ಪರಿಭಾಷೆ	ಸಿ.ಕೆ.ರೇಣುಕಾರ್ಯ	75/–*
ಜೀವ ಸಂಪಿಗೆ (ಕವನ)	ದು.ಸರಸ್ವತಿ	45/–*
ಬಾಪು ಕುಟೀ (ಗಾಂಧಿ ನಂತರದ ಗಾಂಧೀ ಚಿಂತನೆಗಳು)	ರಜನಿಭಕ್ಷೀ ಅನು:ವೆಂಕಟರಾಜು	150/–
ಕನ್ನಡದಮರಚೇತನ (ಮಾಸಿವೆಂಕಟೇಶಅಯ್ಯಂಗಾರ್ ಸಾಹಿತ್ಯಸಮೀಕ್ಷೆ)	ಸಂ:ಆಹಿತಾನಲ	175/–*
ವಾಲ್ಮೀಕಿಯ ನೆವದಲ್ಲಿ (ಸಂಸ್ಕೃತಿ ಚಿಂತನೆ)	ಯು.ಆರ್. ಅನಂತಮೂರ್ತಿ	300/–
ಆರದೆ ದೀಪ (ಜಿ.ಪಿ. ರಾಜರತ್ನರ ಜೀವನ ಚಿತ್ರ)	ನೀಲತಹಳ್ಳಿ ಕಸ್ತೂರಿ	75/–*
ಕಸೂತಿ (ಕಾದಂಬರಿ)	ಸ.ಉಷಾ	100/–
ಚೂರುಪಾರುರೇಷಿಮೆ (ಕವನ)	ಕಮಲಾಕರ ಕಡವೆ	75/–*
ನಿಲ್ಲಿಸಬೇಡ ಕಾಯುವುದನ್ನು (ಕವನ)	ಭಾರತೀದೇವಿ	40/–*
ಗುಬ್ಬಿಯ ಸ್ವರ್ಗ (ಮಕ್ಕಳ ಪದ್ಯಗಳು)	ಭಾಗೀರಥಿ ಹೆಗಡೆ	30/–
ಹೂ ಅಂದ್ರೆ ಹೂ (ಪುಟಾಣಿಗಳಿಗಾಗಿ ಪುಟಾಣಿ ಪದ್ಯಗಳು)	ಆನಂದ ಪಾಟೀಲ	40/–
ಜೀವಜಾಲ (ಪರಿಸರ ವಿಜ್ಞಾನ)	ಕೆ.ಪುಟ್ಟಸ್ವಾಮಿ, ಕೃಪಾಕರ–ಸೇನಾನಿ	250/–
ಎಲ್ಲಬಲ್ಲವರಿಲ್ಲ (ಆಯ್ದ ಲೇಖನಗಳು)	ಎಚ್.ವೈ. ಶಾರದಾಪ್ರಸಾದ್	75/–*
ಆಕಾಶದೆಗಲ ನೆಗು ಏನೆ ಅವಧೂತ	(ಬೆಳಗೆರೆ ಕೃಷ್ಣಶಾಸ್ತ್ರೀ ಅವರನ್ನು ಕುರಿತು)	50/–*
ಟಿಬೆಟ್ (ಜಗತ್ತು ಕೇಳಿಸಿಕೊಳ್ಳಬೇಕಾದ ಆರ್ತಮೊರೆ)	ಮಂಗ್ಳೂರ ವಿಜಯ	375/–*
ಡಂಡಂ ಊರಿಗೆ ಡಿಂಡಿಂ ಗಾಡಿ (ಮಕ್ಕಳಿಗಾಗಿ)	ಆನಂದ ಪಾಟೀಲ	50/–
ನಮ್ಮ ಕನ್ನಡ(ಕನ್ನಡ ಚಿಂತನೆ)	ಕೆ.ವಿ.ತಿರುಮಲೇಶ್	60/–*
ಅಮೇರಿಕಾಯಣ	ವೈ.ಆರ್. ಮೋಹನ್	650/–*
ಮಂದಹಾಸ ಮೀಮಾಂಸೆ (ಸಮಗ್ರಲಲಿತಪ್ರಬಂಧ)	ಪ್ರಭುಶಂಕರ	150/–*
ಖಲೀಲ್ ಗಿಬ್ರಾನ್ (ಜೀವನ ದರ್ಶನ)	ಪ್ರಭುಶಂಕರ	100/–
ಆಂಟೋನಿಯೊ ಗ್ರಾಮ್ಷಿ (ಶತಮಾನ ಚಿಂತನೆ)	ಕೆ.ಫಣಿರಾಜ್	75/–
ಮನುಕುಲದ ಮಾತುಗಾರ (ಚಾಮ್‌ಸ್ಕಿ ಚಿಂತನೆ/ದರ್ಶನ)	ವಿವಿಧ ಲೇಖಕರು	250/–



ನಾಗ ಐತಾಳ ಮತ್ತು ಲಕ್ಷ್ಮೀ ಐತಾಳರಿಗೆ ಸಾಹಿತ್ಯೋತ್ಸವ ಸಂದರ್ಭದ
ಜೀವಮಾನ ಸಾಧನೆಯ ಕನ್ನಡ ಸಾಹಿತ್ಯ ರಂಗದ ಗೌರವ



ನಾಗ ಐತಾಳ ಮತ್ತು ಲಕ್ಷ್ಮೀ ದಂಪತಿಯ ಅಪರೂಪದ ಕ್ಷಣ



ನಾಗ ಐತಾಳರ ಕುಟುಂಬ ಮಕ್ಕಳಾದ ಅರವಿಂದ್ ಮತ್ತು ಅನುರಾಧ ಅವರ ಜತೆ.



'ಕನ್ನಡ ಸಾಹಿತ್ಯ ರಂಗ'ದ ವಸಂತೋತ್ಸವದಲ್ಲಿ.



'ತಲೆಮಾರ ಸೆಲೆ' ಪುಸ್ತಕ ಬಿಡುಗಡೆ ಸಂದರ್ಭದಲ್ಲಿ



ನಾಗ ಐತಾಳ ಮತ್ತು ಲಕ್ಷ್ಮೀ ಐತಾಳರಿಗೆ ಗೌರವಸಲ್ಲಿಸಿದ
ಚಂದ್ರಶೇಖರ ಕಂಬಾರ ಮತ್ತು ಮಂಗಳಾ ಪ್ರಿಯದರ್ಶಿನಿ.



ಪುಸ್ತಕ ಬಂಧು ಅಭಿನವ ರವಿಕುಮಾರ ಅವರ ಕುಟುಂಬದ ಜತೆಗೆ ನಾಗ ಐತಾಳ ದಂಪತಿ



ಕೊನೆಯ ಕೃತಿ 'ನಾನೂ ಕವನ ಬರೆದೆ' ಬಿಡುಗಡೆಯ ಸಂದರ್ಭ
ಎಚ್. ಎಸ್. ವೆಂಕಟೇಶ ಮೂರ್ತಿ ಅವರೊಂದಿಗೆ ರವಿಕುಮಾರ್, ಚಂದ್ರಿಕಾ ಜತೆಯಲ್ಲಿ



'ಸ್ಮರಣೆ ಸಾಲದೆ' ಪುಸ್ತಕ ಬಿಡುಗಡೆಯ ಸಮಾರಂಭದಲ್ಲಿ ನರಹಳ್ಳಿ ಬಾಲಸುಬ್ರಹ್ಮಣ್ಯ, ಲಕ್ಷ್ಮೀಶ ತೋಳ್ಪಾಡಿ, ನಳಿನಿ ಮೈಯ, ಮೈ. ಶ್ರೀ. ನಟರಾಜ, ವಿಕ್ರಮ್ ಹತ್ವಾರ್ ಅವರ ಜತೆಗೆ.



'ಸಾಹಿತ್ಯ ಸ್ಪಂದನ' ಪುಸ್ತಕ ಬಿಡುಗಡೆ ಸಮಾರಂಭದಲ್ಲಿ ಗಿರಡ್ಡಿ ಗೋವಿಂದರಾಜ, ಮಹೇಶ್ ಹರವೆ, ನಳಿನಿ ಮೈಯ, ಜ್ಯೋತಿ ಮಹಾದೇವ್ ಮುಂತಾದವರೊಂದಿಗೆ.



ಗಿರಡ್ಡಿ ಗೋವಿಂದ ರಾಜ ಮತ್ತು ಜೋಗಿ ಅವರೊಂದಿಗೆ.



'ಒಂದಾನೊಂದು ಕಾಲದಲ್ಲಿ' ಪುಸ್ತಕ ಬಿಡುಗಡೆಯ ಸಂದರ್ಭ ನ.ರವಿಕುಮಾರ್, ಜಿ. ಪಿ. ಬಸವರಾಜು, ಎಲ್. ಎಸ್. ಶೇಷಗಿರಿರಾವ್, ಜಿ. ವೆಂಕಟಸುಬ್ಬಯ್ಯ ಅವರ ಜತೆಗೆ.



ಮೈ. ಶ್ರೀ. ನಟರಾಜ ಅವರ ಜತೆಗೆ ಕನ್ನಡ ಸಾಹಿತ್ಯದ ರೂವಾರಿ.



ವಸಂತ ಸಾಹಿತ್ಯೋತ್ಸವದಲ್ಲಿ ಗುರುಪ್ರಸಾದ್ ಕಾಗಿನೆಲೆ, ಮೈ. ಶ್ರೀ. ನಟರಾಜ, ನಳಿನಿಮೈಯ, ತ್ರಿವೇಣಿ ಶ್ರೀನಿವಾಸರಾವ್ ಮುಂತಾದವರೊಂದಿಗೆ.





ರಾಷ್ಟ್ರಕವಿ ಜಿ. ಎಸ್. ಶಿವರುದ್ರಪ್ಪ ಅವರಿಂದ 'ಗೆಲುವಿನ ಚಿಲುಮೆ ರಾಜರತ್ನಂ' ಕೃತಿ ಬಿಡುಗಡೆ.
ಓ. ಎಲ್. ನಾಗಭೂಷಣಸ್ವಾಮಿ, ಅ. ರಾ ಮಿತ್ರ ಅವರ ಜತೆಗೆ.



'ಅನಂತಮುಖದ ಮೂರ್ತಿ' ಪುಸ್ತಕ ಬಿಡುಗಡೆ ಸಮಾರಂಭದಲ್ಲಿ ಷ. ಶೆಟ್ಟರ್, ಬಸವರಾಜ ಕಲ್ಗುಡಿ,
ಯು ಆರ್ ಅನಂತಮೂರ್ತಿ ಮುಂತಾದವರೊಡನೆ.



ಇಂತಿ ನಮಸ್ಕಾರಗಳು

...ಕಡಲೆಂದರೆ ಹತ್ತು ಮಕ್ಕಳ ತಾಯಿಯಲ್ಲವೆ! ಹೌದು. ನಾಗೈತಾಳರ ಕೋಟದಲ್ಲಿ 'ಹತ್ತು ಮಕ್ಕಳ ತಾಯಿ' ಎಂಬ ಹೆಸರಿನ ದೇವಸ್ಥಾನವಿದೆ. ಐತಾಳರ ಕುಟುಂಬದ ಎಲ್ಲರೂ ಈ ತಾಯಿಗೆ ನಡೆದುಕೊಳ್ಳುವರು. ಈ ತಾಯಿಯ ಎಲ್ಲ ಮಕ್ಕಳು ಸೇರಬಯಸುವ ದಡವೆಂದರೆ ಅದು ಅಮೆರಿಕಾ! ಐತಾಳರೂ ಸೇರಿಕೊಂಡರು ಈ ದಡವನ್ನು. ಪಡುಗಡಲೇ ಹಿಂದೆತ್ತಿ ಬಿಸುಟಂತೆ ಪಶ್ಚಿಮದ ಈ ದಡಕ್ಕೆ ಈ ಮಗುವನ್ನು – ಏನು ಹೇಳಲಿ ನಾನು, ಪಶ್ಚಿಮದ ಭೋರ್ಗರೆತ! ಎಲ್ಲ ಹೆದ್ದೆರೆಗಳೇ ಇಲ್ಲಿ. ವಿದ್ಯೆ, ವಿಜ್ಞಾನ, ಸಂಪತ್ತು, ಸಾಹಸ, ಸಂಬಂಧಗಳ ಹೊಸ ಹಾಸು, ಹೊಸ ಹೊಕ್ಕು, ಹೊಸ ಜಾಲ, ಹೊಸ ವ್ಯೂಹ, ಹೊಸ ಸುಳಿ! ಹೊಸ ಝಣತ್ಕಾರ! ಎಲ್ಲ ನಿಜ, ಎಲ್ಲ ವಸ್ತುಸ್ಥಿತಿ, ವಸ್ತುಸ್ತುತಿ! ಆದರೆ ಐತಾರಳರ ಒಳಗೊಂದು ಎಳೆಜೀವ ನೆನೆಯುತ್ತಲೇ ಇತ್ತು ಹತ್ತು ಮಕ್ಕಳ ತಾಯಿಯನ್ನು! ನೆನೆದಂತೆ ತಬ್ಬಲಿಯಾಗಿ ತಟಸ್ಥವಾಗುತ್ತಿತ್ತು! ಅವರು ಕನ್ನಡಕ್ಕಾಗಿ ಮಾಡಿದ ಎಲ್ಲ ಕೈಂಕರ್ಯವೂ ಕೋಟದ ಕಡಲ ಮೊರೆತ ಮರಳಿ ಕೇಳುವ ಹಂಬಲದಿಂದ ಮಾಡಿದವು. ನಮ್ಮನ್ನು ಅಮೆರಿಕೆಗೆ ಬರುವಂತೆ ಗದರಿಸಿ ಕರೆಸಿಕೊಂಡರು! 'ಬದುಕೆಂಬ ಮರ ಸಾವೆಂಬ ಹಣ್ಣು' ಎಂಬ ನನ್ನೊಂದು ಸಾಲನ್ನು ಹೊತ್ತಗೆಯಿಂದ ಉದ್ಧರಿಸಿ, ಈಗ ತಮಗೆ ಸಾವಿನ ಅಂಜಿಕೆ ಕಳಚಿಬಿತ್ತೆಂದು ನುಡಿದು ನನ್ನ ಕರಗಿಸಿದರು– ಈ ಜೀವಶಾಸ್ತ್ರದ ಆಚಾರ್ಯ! ಇರಲಿ, ಕಡಲಿಂದ ದಡಕ್ಕೆ ಬಂದ ಜೀವ ಮರಳಿ ಕಡಲಿಗೆ ಸೇರಲೇಬೇಕು. ಅದು ದಡದ ಜೀವವಲ್ಲ, ಕಡಲ ಜೀವ. ಕಡಲ ಅಲೆಗಳಲ್ಲಿ ಅವರನ್ನು ಮರಳಿ ಕಾಣುವ ಹೊತ್ತು ದೂರವಿಲ್ಲವೆಂದು ನನಗೆ ಅನಿಸುತ್ತಿರುವ ಈ ಹೊತ್ತಿನಲ್ಲಿ ನಾವಿಬ್ಬರೂ ಐತಾಳರನ್ನೂ ಪುಟ್ಟಕ್ಕನನ್ನೂ ನೆನೆಯುವೆವು. ಐತಾಳರ ಜೊತೆಗೆ ಒಂದು ಹೊಳೆಯಂತೆ ಇದ್ದರು ಪುಟ್ಟಕ್ಕ. ನೆನೆಯುವೆವು ಅವರ ಆತಿಥ್ಯ, ವಾತ್ಸಲ್ಯ, ಹಾಸ್ಯ, ಪ್ರೇಮಗೀತೆಯ ಹಾಡು, ಪಾಡು, ಮುಪ್ಪಿನಪ್ರೇಮ ಹಾಗೆ ಅಕ್ಕರೆಯನ್ನು.

– ಲಕ್ಷ್ಮೀಶ ತೋಳ್ಪಾಡಿ

(ಒಳಗಿನ ಪುಟಗಳಿಂದ)



ಅಭಿನವ